ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯಾ—೫೧

ನರಸಿಂಹ ಪುರಾಣಮ್

(ಕನ್ನಡ ಅನುವಾದ ಸಹಿತ)

ಸಂಪುಟ ೧

ಅನುವಾದಕರು:

ಆಸ್ಥಾನ ವಿದ್ವಾನ್,

ನಾ. ಮಾ. ಪದ್ಮನಾಭಾಚಾರ್ಯರು,

ಸಾಹಿತ್ಯ, ವೇದಾನ್ತ ವಿದ್ವಾಂಸರು ಮತ್ತು ಕನ್ನಡ ಪಂಡಿತರು,

ಅಧ್ಯಾಪಕರು,

ಸರ್ಕಾರದ ಶಿಕ್ಷಣ ಮಹಾ ಪಾಠಶಾಲಾ, ಮೈಸೂರು.

ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್,

ಮೈಸೂರು.

೧೯೫೪

ಬಿನ್ನಹ

ಶ್ರೀ ನೃಸಿಂಹಪುರಾಣದ ಕರ್ತೃವು ಶ್ರೀ ಮಹಾವಿಷ್ಣುವಿನ ಜ್ಞಾನಾವತಾರನಾದ ಶ್ರೀ ಕೃಷ್ಣದ್ವೈಪಾಯನ ವ್ಯಾಸಮುನಿಯು. ಸಾತ್ವಿಕಗಳಾದ ಉಪಪುರಾಣಗಳಲ್ಲೊಂದಾದ ಈ ಪುರಾಣವು ಸೂತಭಾರದ್ವಾಜಾದಿಗಳ ಸಂವಾದರೂಪವಾಗಿದೆ.

ಈ ಗ್ರಂಥದಲ್ಲಿ ಒಟ್ಟು ಅರುವತ್ತೆಂಟು (೬೮) ಅಧ್ಯಾಯಗಳಿವೆ. ಇವನ್ನು ಸ್ಥೂಲವಾಗಿ ; ಇಂತು ವಿಭಾಗಿಸಬಹುದು.

೧.	ಸೃಷ್ಟಿಕಾಂಡ	೧	ರಿಂದ	೨೧	ಅಧ್ಯಾಯಗಳು
೨.	ವಂಶ, ಮನ್ವಂತರ, ವಂಶಾನುಚರಿತ	೨೨	,,	೨೯	,,
೩.	ಭೂಗೋಲಕಥನ	೩೦	,,	೩೧	,,
೪.	ಹರ್ಯವತಾರಾದಿ ನಿರೂಪಣೆ	೩೨	,,	೫೬	,,
೫.	ವರ್ಣಾಶ್ರಮಧರ್ಮಾದಿ ನಿರೂಪಣೆ	೫೭	,,	೬೨	,,
೬.	ಮಂತ್ರತೀರ್ಥಮಹಿಮಾದಿಗಳು ಮತ್ತು ಉಪಸಂಹಾರ	೬೩	,,	೬೮	,,

ಇದು ಒಂದು ಉಪಪುರಾಣವಾದುದರಿಂದ ಪುರಾಣದ ಲಕ್ಷಣವಾದ ಸರ್ಗ ವಿಸರ್ಗ, ವಂಶ, ಮನ್ವಂತರ, ವಂಶಾನುಚರಿತಗಳು ಸಂಗ್ರಹವಾಗಿ ವರ್ಣಿತಗಳಾಗಿವೆ. ಸೃಷ್ಟಿಯಲ್ಲಿ ಸಾಕ್ಷಾತ್ಪರಬ್ರಹ್ಮಸೃಷ್ಟಿಯೂ ಸಂಕ್ಷೇಪದಿಂದ ನಿರೂಪಿತವಾಗಿದೆ.

ಈ ಗ್ರಂಥದ ಪ್ರತಿಯೊಂದು ಭಾಗದಲ್ಲಿಯೂ ಶ್ರೀ ನೃಸಿಂಹಾತ್ಮಕನಾದ ಶ್ರೀ ಮಹಾವಿಷ್ಣುವಿನ ನಿರತಿಶಯವೂ, ಅಪ್ರಾಕೃತವೂ ಆದ ಅಚಿಂತ್ಯಾದ್ಭುತಶಕ್ತಿಯು ಅನುಸ್ಯೂತವಾಗಿ ಹೇಳಿರುವುದರಿಂದ, ಇದು ಮುಮುಕ್ಷುಗಳಿಗೆ ಆದರದಿಂದ ಶ್ರವಣ ಪಠನಾರ್ಹವಾಗಿದೆ.

ಈ ಗ್ರಂಥದಲ್ಲಿ ಯಮೀ-ಯಮಸಂವಾದ, ಬ್ರಹ್ಮಚಾರಿ-ಪತಿವ್ರತಾಸಂವಾದ, ಪುಂಡರೀಕ-ನಾರದಸಂವಾದ ಇವೇ ಮೊದಲಾದ ಹಲವು ಚಿಕ್ಕ ಸಂವಾದಗಳೂ, ಮಾರ್ಕಂಡೇಯ ಸಹಸ್ರಾನೀಕಸಂವಾದವೆಂಬ ಮಹಾಸಂವಾದವೂ ಬಂದಿವೆ. ಆ ರೀತಿಯ ಸಂವಾದಗಳಲ್ಲಿ ಮಾನವನು ಕಾಮವಶವಾಗದ ದೃಢಮನದಿಂದ ದೇವತೆಯಾಗುವುದು, ಸ್ವಲ್ಪ ತಪಃಸಿದ್ಧಿ ಪಡೆದವನು ತನಗಿಂತಲೂ ಅಧಿಕಸಿದ್ಧಿ ಪಡೆದಿರುವವರಿರುವರೆಂದರಿದು, ಗರ್ವದಿಂದ ತನಗಿರುವ ಅಲ್ಪ ತಪಃಶಕ್ತಿಯನ್ನು ದುರುಪಯೋಗಪಡಿಸದೆ, ಅದನ್ನು ಇನ್ನೂ ಹೆಚ್ಚಿಸಿಕೊಂಡು, ಪರಮ ಶ್ರೇಯಸ್ಸನ್ನು ಪಡೆಯುವುದು ; ನಾರಾಯಣಾಷ್ಟಾಕ್ಷರ ಮಂತ್ರದ ಮಹಿಮೆ ಇವೇ ಮುಂತಾದ ಮಾನವನ ಮೋಕ್ಷಕ್ಕೆ ಸಾಧಕಗಳಾದ ತತ್ತ್ವಗಳು ಓದುಗರ ಮತ್ತು ಕೇಳುವವರ ಮನಮುಟ್ಟುವಂತೆ ವಿವರಿಸಲಾಗಿವೆ. ಮಾರ್ಕಂಡೇಯ-ಸಹಸ್ರಾನೀಕ ಮಹಾಸಂವಾದವು ಭಗವದರ್ಚಾ ಪ್ರಭಾವವನ್ನು ನಿರೂಪಿಸ ತೊಡಗಿ, ದಶಾವತಾರ ಚರಿತ್ರೆಯನ್ನೂ ತಿಳಿಸುವುದಾಗಿದೆ. ಇದರಲ್ಲಿ ಶ್ರೀ ನೃಸಿಂಹಪ್ರಾದುರ್ಭಾವವೂ, ಶ್ರೀರಾಮಕೃಷ್ಣಪ್ರಾದುರ್ಭಾವವೂ, ಸ್ವಲ್ಪ ವಿಸ್ತರದಿಂದ ನಿರೂಪಿತವಾಗಿವೆ ಶ್ರೀ ರಘುರಾಮ ಪ್ರಾದುರ್ಭಾವ ಚರಿತ್ರೆಯು ದೊಡ್ಡದಾಗಿ ಆರು (೬) ಅಧ್ಯಾಯಗಳಿಂದ ಕಥಿತವಾಗಿದೆ. ಉಳಿದ ಪ್ರಾದುರ್ಭಾವಗಳ ನಿರೂಪಣೆಯು ತೀರ ಚಿಕ್ಕವು.

ಈ ಗ್ರಂಥದಲ್ಲಿ ವರ್ಣಾಶ್ರಮಧರ್ಮಗಳು ಸಂಗ್ರಹದಿಂದ ಹೇಳಲ್ಪಟ್ಟಿವೆ. ಆರುವತ್ತಾರನೆಯ ಅಧ್ಯಾಯದಲ್ಲಿ ಭರತವರ್ಷದ ತೀರ್ಥಗಳ ಮಹಿಮೆಗಳನ್ನು ಹೆಚ್ಚಾಗಿ ಬಣ್ಣಿಸಿ, ಎಲ್ಲದಕ್ಕಿಂತಲೂ ಶ್ರೇಷ್ಠವಾದುದು ಶ್ರೀ ಮಹಾವಿಷ್ಣುವಿನ ಪಾದತೀರ್ಥಸೇವೆಯೆಂದು ಶ್ರೀ ಭಗವತ್ಸೇವಾ ಪಾರಮ್ಯವು ಹೇಳಿರುತ್ತದೆ.

ಕಲಿಯುಗದ ಧರ್ಮವನ್ನು ಬಿತ್ತರದಿಂದ ಹೇಳಿ, ಕೃತಯುಗದಲ್ಲಿ ಧ್ಯಾನದಿಂದ ಲಭಿಸುವ ಫಲವೂ, ತ್ರೇತಾಯುಗದಲ್ಲಿ ಯಾಗಾನುಷ್ಠಾನದಿಂದ ಲಭಿಸುವ ಫಲವೂ, ದ್ವಾಪರಯುಗದಲ್ಲಿ ಶ್ರೀ ನರಹರಿಯ ಅರ್ಚನೆಯಿಂದ ಲಭಿಸುವ ಫಲವೂ, ಕಲಿಯುಗದಲ್ಲಿ ಶ್ರೀ ಹರಿನಾಮಸಂಕೀರ್ತನೆಯಿಂದ ಒಂದು ದಿನದಲ್ಲಿಯೇ ಅಧಿಕಾರಿಗೆ ಲಭಿಸುವುದೆಂದು ಹೇಳಿ, ಶ್ರೀ ಹರಿನಾಮಸಂಕೀರ್ತನದ ಹಿರಿಮೆಯನ್ನು ಕೊಂಡಾಡಿದೆ. ಅಲ್ಲವೇ ಅಲ್ಲಲ್ಲಿಯೇ ಉತ್ತಮವಾದ ಸ್ತೋತ್ರಗಳೂ ಫಲಶ್ರುತಿಗಳೊಡನೆ ಹೇಳಲಾಗಿವೆ.

ಈ ಪ್ರಥಮ ಸಂಪುಟದಲ್ಲಿ ಸೃಷ್ಟಿ ಮೊದಲು ಭೂಗೋಲಕಥನಾಂತವಾದ ವಿಷಯಗಳು ನಿರೂಪಿತವಾಗಿರುವುವು. ದ್ವಿತೀಯ ತೃತೀಯ ಸಂಪುಟಗಳಲ್ಲಿ ಹಗ್ರ್ಯವತಾರ ಮೊದಲು ಮಂತ್ರ ತೀರ್ಥಮಹಿಮಾದಿಗಳು ಮತ್ತು ಉಪಸಂಹಾರವು ಕೊನೆಯಾಗಿರುವ ವಿಷಯಗಳು ಪ್ರತಿಪಾದಿಸಲ್ಪಡುವುವು.

ಅಧಿಕಾರಿಯು ಈ ಪುರಾಣದ ತತ್ತ್ವವನ್ನು ಶ್ರವಣಪಠನಗಳಿಂದರಿತು, ತನಗೆ ಗೊತ್ತಾದ ಧರ್ಮವನ್ನು ನಿಷ್ಕಾಮನೆಯಿಂದನುಷ್ಠಿಸಿ, ಶ್ರೀ ಪರಮಾತ್ಮನ ಸ್ವರೂಪವನ್ನು ಶಾಸ್ತ್ರಶ್ರವಣಾದಿಗಳಿಂದ ಯಥಾಯೋಗ್ಯವಾಗಿ ತಿಳಿದು, ನಿದಿಧ್ಯಾಸನದಿಂದ ಅಪರೋಕ್ಷಜ್ಞಾನವನ್ನು ಪಡೆದು ಭಗವಂತನ ಅತ್ಯರ್ಥಪ್ರಸಾದದ್ವಾರಾ ಮುಕ್ತನಾಗುವನೆಂದು ಈ ಗ್ರಂಥದಲ್ಲಿ ನಿರೂಪಿತವಾಗಿದೆ.

ಇಂತಹ ಉತ್ಕೃಷ್ಟಗ್ರಂಥದ ಅಭಿಪ್ರಾಯವನ್ನು ತಮ್ಮ ದೇಶದ ಪ್ರಜೆಗಳು ಗ್ರಹಿಸಿ, ಧರ್ಮಾಚರಣೆಯಲ್ಲಿ ಆಸಕ್ತರಾಗಿ, ಫಲವನ್ನು ಪಡೆಯಲೆಂಬ ಅಭಿಪ್ರಾಯದಿಂದ ನಮ್ಮನ್ನಾಳುವ ಪ್ರಜಾವತ್ಸಲರೂ, ಆತ್ಮತತ್ತ್ವವಿಚಾರಾಸಕ್ತರೂ, ಧರ್ಮಕಾರ್ಯತತ್ಪರರೂ, ಆದ **ಶ್ರೀ ಜಯಚಾಮರಾಜೇಂದ್ರಒಡೆಯರ್ ಬಹದ್ದೂರ್** ಜಿ. ಸಿ. ಬಿ., ಜಿ. ಸಿ. ಎಸ್. ಐ., ಮಹಾಪ್ರಭುಗಳವರು ಕನ್ನಡಭಾಷೆಯಲ್ಲಿ ಪ್ರಕಾಶಪಡಿಸಲು ಆಜ್ಞೆಯಿತ್ತುದರಿಂದ, ಮೂಲಶ್ಲೋಕದೊಡನೆ ಶ್ಲೋಕಾಭಿಪ್ರಾಯವನ್ನು ತಿಳಿಗನ್ನಡದಲ್ಲಿ ಅನುವಾದ ಮಾಡಲಾಗಿದೆ. ಈ ಮಹಾಕಾರ್ಯವನ್ನು ನೆರವೇರಿಸಲು ಸಕಲವಿಧದಲ್ಲಿಯೂ ಪ್ರೋತ್ಸಾಹವನ್ನಿತ್ತ ಮಹಾಸ್ವಾಮಿಗಳವರಿಗೆ ಪರಮಾತ್ಮನು ಸುಖಸಂತೋಷಗಳನ್ನು ಶಾಶ್ವತವಾಗಿ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು,
ತಾ|| ೧೯—೧—೧೯೪೯.
ಸರ್ವಧಾರಿ ಪುಷ್ಯ ಬಹುಳ ಪಂಚಮೀ.

ನಾ. ವಾ. ಪದ್ಮನಾಭಾಚಾರ್ಯ,
ಆಸ್ಥಾನ ವಿದ್ವಾನ್, ಪಂಡಿತ,
ಸರ್ಕಾರದ ಶಿಕ್ಷಣ ಮಹಾ ಪಾಠಶಾಲಾ,
ಮೈಸೂರು.

॥ ಶ್ರೀರಸ್ತು ॥

ಶ್ರೀ ನರಸಿಂಹಪುರಾಣ : ಸಂಪುಟ ೧

ವಿಷಯಾನುಕ್ರಮಣಿಕೆ

೧. ಸೃಷ್ಟಿಕಾಂಡ

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೧೭	**ಶ್ರೀಮಹಾವಿಷ್ಣುವಿನ ಸ್ತವರಾಜ:—** ಶುಕನು ತನ್ನ ತಂದೆಯನ್ನು ಅನಾದಿಸಂಸಾರಪಾಶವಿಮೋಚಕವಾವುದೆಂದು ಕೇಳುವುದು; ನಾರಕಿಗಳ ದುಃಸ್ಥಿತಿಯನ್ನು ಹೋಗಲಾಡಿಸಲು ದಾರಿಯಾವುದೆಂದು ಕೇಳಿದ ನಾರದ ಮುನಿಗೆ ರುದ್ರದೇವನು ಉಪದೇಶಿಸಿದ ಶ್ರೀಮನ್ನಾರಾಯಣನ ಸ್ವರೂಪಮಹಿಮಾದಿಗಳನ್ನು ನಿರೂಪಿಸಿ, ಮಾನವನು ಆ ತತ್ತ್ವವನ್ನರಿತು ಭಗವಂತನ ಧ್ಯಾನಾದಿಗಳಿಂದ ಸದ್ಗತಿಪಡೆವುದೆಂದು ಶ್ರೀ ವ್ಯಾಸನು ಹೇಳಿದುದು.	೨೦೪
೧೮	**ಅಷ್ಟಾಕ್ಷರಮಂತ್ರ ಮಾಹಾತ್ಮ್ಯ:—** ವ್ಯಾಸನು ಅಷ್ಟಾಕ್ಷರಮಂತ್ರದ ಪ್ರಭಾವವನ್ನು ಶುಕನಿಗೆ ಹೇಳಿದುದು; ಆ ಮಂತ್ರ ಜಪವೇ ಸಂಸಾರದಿಂದ ಮುಕ್ತನಾಗಲು ಮುಖ್ಯ ಸಾಧನವು; ಆ ಮಂತ್ರವೇ ಮಂತ್ರಗಳಲ್ಲಿ ಉತ್ತಮವಾದುದು; ಶ್ರೀನಾರಾಯಣನೇ ದೇವರಲ್ಲಿ ಪರದೇವನು, ಎಂದು ಶಪಥಪೂರ್ವಕವಾಗಿ ತಿಳಿಸಿದುದು.	೨೧೫
೧೯	**ಅಶ್ವಿನೀದೇವತೆಗಳ ಉತ್ಪತ್ತಿ ನಿರೂಪಣೆಯು:—** ಭರದ್ವಾಜಮುನಿಯು ಸೂತರನ್ನು ಕುರಿತು ಅಶ್ವಿನೀದೇವತೆಗಳು ಮತ್ತು ಮರುತ್ತುಗಳು–ಇವರ ಉತ್ಪತ್ತಿಯನ್ನು ಹೇಳಬೇಕೆಂದು ಪ್ರಾರ್ಥಿಸುವುದು; ಸೂತರು ಅದನ್ನು ಹೇಳಲು ತೊಡಗುವುದು; ಆದಿತ್ಯಸಂಜ್ಞೆಯರ ಜನನ ಮತ್ತು ವಿವಾಹ–ಇವುಗಳ ನಿರೂಪಣೆ: ಸಂಜ್ಞೆಯು ಕ್ಲೇಶ; ಪತ್ನೀಧರ್ಮವನ್ನು ಸಂಜ್ಞೆಗೆ ತ್ವಷ್ಟೃವು ಉಪದೇಶಿಸುವುದು; ಆದಿತ್ಯನಿಂದ ಸಂಜ್ಞೆಯಲ್ಲಿ ಮನು ಯಮೀಯಮರು ಜನಿಸಿದುದು; ಅನಂತರ ಸಂಜ್ಞೆಯು	೨೩೦

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

೨. ವಂಶಾನುಚರಿತ

೫. ಭೂಗೋಲಕಥನ

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
	ವರು ; ಉತ್ತಾನಪಾದರಾಯ ಮತ್ತು ಅವನ ಮಡದಿಯರು ಸುನೀತಿ ಸುರುಚಿಯರು ; ಅವರಲ್ಲಿ ಧ್ರುವ ಮತ್ತು ಉತ್ತಮ ಇವರು ಜನಿಸಿದುದು ; ಉತ್ತಾನಪಾದನ ಸಭೆ ; ಧ್ರುವನು ಅಲ್ಲಿಗೆ ಹೋಗಿ ಉತ್ತಮನಂತೆ ರಾಯನ ತೊಡೆಯಮೇಲೆ ಕುಳಿತು ಕೊಳ್ಳಲು ಹೋಗುವುದು ; ಸುರುಚಿಯು ಅವನನ್ನು ಮಂದಭಾಗ್ಯನೆಂದು ಹಳಿದು ತಿರಸ್ಕರಿಸಿದುದು ; ಧ್ರುವನು ತಿರಸ್ಕೃತನಾಗಿ ಮಾತೆಯ ಬಳಿಗೆ ಬಂದು, ತನ್ನ ದುಃಖವನ್ನು ತೋಗಿಕೊಂಡು, ಉತ್ತಮ ಪದಪ್ರಾಪ್ತ್ಯುಪಾಯವಾವುದೆಂದು ತಾಯನ್ನು ಬೇಡುವುದು ; ಅವಳು ಶ್ರೀ ಹರಿಯ ಪ್ರಸಾದದಿಂದ ಆ ಪದಪ್ರಾಪ್ತಿಯಾಗುವುದೆಂದು ಹೇಳುವಳು ; ಧ್ರುವನು ಅಂತೆಯೇ ಶ್ರೀ ಹರಿಯನ್ನು ಕಂಡು, ಪ್ರಸನ್ನೀಕರಿಸಿ ಕೊಳ್ಳಲು ತಪಕ್ಕಾಗಿ ವನಕ್ಕೆ ತೆರಳಿದುದು ; ಮಾತೆಯ ಆಶೀರ್ವಾದ ; ಕಾಡಿನಲ್ಲಿ ಬಾಲಕನನ್ನು ಕಂಡ ಸಪ್ತರ್ಷಿಗಳು ಅವನ ವೈರಾಗ್ಯ ಕಾರಣವನ್ನು ಕೇಳಿ, ಅಚ್ಚರಿಪಟ್ಟು, ದ್ವಾದಶಾಕ್ಷರ ಮಂತ್ರೋಪದೇಶಮಾಡುವುದು ; ಧ್ರುವನ ತಪಸ್ಸು ; ಶ್ರೀ ವಿಷ್ಣು ಪ್ರತ್ಯಕ್ಷನಾಗಿ ವರವನ್ನು ಬೇಡು, ಎನ್ನಲು, ಆ ಬಾಲಕನು ಅವನನ್ನು ಸ್ತುತಿಸಲು ಜ್ಞಾನವನ್ನು-ಕೊಡಬೇಕೆಂದು ಕೇಳುವುದು ; ಶ್ರೀ ಹರಿಯು ತದನುಗುಣವಾಗಿ ಕೆನ್ನೆಗೆ ಶಂಖಸ್ಪರ್ಶದಿಂದನುಗ್ರಹಿಸಿದುದು, ಭಗವಂತನ ತಿರೋಧಾನ ; ಪ್ರಹ್ಲಾದ ಕೃತ ಶ್ರೀ	

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಶ್ರೀ ವೇದವ್ಯಾಸಾಯ ನಮಃ

ಯೇನ ಪ್ರಾದುರಭಾವಿ ಭೂಮಿವಲಯೇ ವ್ಯಸ್ತಾರಿಗೋಸಂತತಿಃ

ಪ್ರಾಬೋಧಿ ಶ್ರುತಿಪಂಕಜಂ ಕರುಣಯಾ ಪ್ರಾಕಾಶಿ ತತ್ವಂ ಪರಮ್ ।

ಧ್ವಾಂತಂ ಧ್ವಂಸಮನಾಯಿ ಸಾಧುನಿಕರಶ್ಚಾಕಾರಿ ಸನ್ಮಾರ್ಗಗ-

-ಸ್ತೇನ ವ್ಯಾಸದಿವಾಕರೇಣ ಸತತಂ ಮಾತ್ಯಾಜಿ ಮೇ ಮಾನಸಮ್ ॥

ಶ್ರೀಃ

ಶ್ರೀ ಲಕ್ಷ್ಮೀನರಸಿಂಹನಿಗೆ ನಮಸ್ಕಾರವು

ಶ್ರೀ ನರಸಿಂಹಪುರಾಣವು

ಶ್ರೀ ವೇದವ್ಯಾಸರಿಗೆ ನಮಸ್ಕಾರವು

ಭೂಮಂಡಲದಲ್ಲಿ ನುಡಿಯೆಂಬ ಕಿರಣಗಳ ಪರಂಪರೆಯು ಕಾಣಿಸಿ ಹರಹುವಂತೆ ಮಾಡಿ, ಪಳವಾತುಗಳೆಂಬ ತಾವರೆಗಳನ್ನರಳಿಸಿ, ಪರತತ್ವವನ್ನು ಬೆಳಕಿಗೆ ತಂದು, ಅಜ್ಞಾನವೆಂಬ ಇರುಳಿಗೆ ಅಳಿವನ್ನುಂಟುಮಾಡಿ, ಸಾದುತಂಡವು ಒಳ್ಳೆಯ ಹಾದಿಯಲ್ಲಿರುವಂತೆಸಗಿದ ಶ್ರೀ ವೇದವ್ಯಾಸನೆಂಬ ಸೂರ್ಯನು ಯಾವಾಗಲೂ ನನ್ನ ಮನಸ್ಸನ್ನಗಲದಿರಲಿ. (ಶ್ರೀ ವೇದವ್ಯಾಸನನ್ನು ಧ್ಯಾನಿಸುವೆನು.)

ಸೃಷ್ಟಿಕಾಂಡಮ್

ಪ್ರಥಮೋಽಧ್ಯಾಯಃ

ಸರ್ಗಕಥನಮ್

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಗ್ರಂಥಮುದೀರಯೇತ್ ॥ ೧ ॥

ಸೃಷ್ಟಿಕಾಂಡವು

ಮೊದಲನೆಯ ಅಧ್ಯಾಯವು

ಸರ್ಗಕಥನವು

೧. ಗ್ರಂಥಕರ್ತರು ಗ್ರಂಥದಲ್ಲಿ ಹೇಳುವ ವಿಶಿಷ್ಟೇಷ್ಟದೇವತಾದಿಗಳಿಗೆರಗಿ, ಗ್ರಂಥಪಠನವನ್ನು ಮಾಡುವುದೆಂದು ತಿಳಿಸುತ್ತಾರೆ :—

ಶ್ರೀ ನರಸಿಂಹಪುರಾಣಪ್ರತಿಪಾದ್ಯನೂ, ಅಪ್ರಾಕೃತವಾದ ಅನಂತ ಕಲ್ಯಾಣಗುಣ ಪರಿಪೂರ್ಣನೂ, ಶ್ರೀ ನರಸಿಂಹನೂ ಆದ ನಾರಾಯಣನನ್ನೂ, ಮನಕೆ ಅಭಿಮಾನಿಯೂ, ಉಪಸಾಧಕನೂ ಆದ ಶೇಷನನ್ನೂ, ಪರಬ್ರಹ್ಮವನ್ನೈದಲುಸಾಧಕನಾದ ವಾಯುದೇವನನ್ನೂ, ಸಕಲಭಾಗ್ಯಸ್ವರೂಪಳೂ, ವಾಕ್ಕಿಗೆ ಮುಖ್ಯ ಅಭಿಮಾನಿನಿಯೂ ಆದ ಮಹಾಲಕ್ಷ್ಮೀದೇವಿಯನ್ನೂ, ವಾಗಭಿಮಾನಿನಿಯಾದ ಸರಸ್ವತೀ ದೇವಿಯನ್ನೂ ಭಾರತಪುರಾಣಾದಿಕರ್ತನೂ, ನಾರಾಯಣಾವತಾರಿಯೂ ಆದ ವೇದವ್ಯಾಸನನ್ನೂ ವಂದಿಸಿ, ಬಳಿಕ ಈ ನರಸಿಂಹ ಪುರಾಣಗ್ರಂಥವನ್ನು ಪಠಿಸುವುದು.

ತಪ್ತಹಾಟಕಕೇಶಾಂತಜ್ವಲತ್ಪಾವಕ ಲೋಚನ ।
ವಜ್ರಾಧಿಕನಖಸ್ಪರ್ಶ ದಿವ್ಯಸಿಂಹ ನಮೋಽಸ್ತು ತೇ ॥ ೨ ॥

ಪಾಂತು ವೋ ನರಸಿಂಹಸ್ಯ ನಖಲಾಂಗಲ ಕೋಟಯಃ ।
ಹಿರಣ್ಯಕಶಿಪೋರ್ವಕ್ಷಃ ಕ್ಷೇತ್ರಾಸೃಕ್ಕರ್ದಮಾರುಣಾಃ ॥ ೩ ॥

ಹಿಮವದ್ವಾಸಿನಃ ಸರ್ವೇ ಮುನಯೋ ವೇದಪಾರಗಾಃ ।
ತ್ರಿಕಾಲಜ್ಞಾ ಮಹಾತ್ಮಾನೋ ನೈಮಿಷಾರಣ್ಯವಾಸಿನಃ ॥ ೪ ॥

ಯೇಽರ್ಬುದಾರಣ್ಯನಿರತಾಃ ಪುಷ್ಕರಾರಣ್ಯ ವಾಸಿನಃ ।
ಮಹೇಂದ್ರಾದ್ರಿರತಾ ಯೇ ಚ ಯೇ ಚ ವಿಂಧ್ಯನಿವಾಸಿನಃ ॥ ೫ ॥

ಧರ್ಮಾರಣ್ಯರತಾ ಯೇ ಚ ದಂಡಕಾರಣ್ಯವಾಸಿನಃ ।
ಶ್ರೀಶೈಲನಿರತಾ ಯೇ ಚ ಕುರುಕ್ಷೇತ್ರನಿವಾಸಿನಃ ॥ ೬ ॥

---

೨. ಗ್ರಂಥಮುಖ್ಯ ಪ್ರತಿಪಾದ್ಯನಾದ ನರಸಿಂಹನಿಗೆ ವಂದನೆಯನ್ನು ಮಾಡುತ್ತಾರೆ :—

ಪುಟವಿಟ್ಟ ಮಿಸುನಿಯಂತೆ ಹೊಂಬಣ್ಣದ ಕೇಸರದೊಳಗೆ ಉರಿಯುವ ಕೆಂಡದಂತೆ ಕಣ್ಣುಳ್ಳವನೂ, ವಜ್ರಕ್ಕಿಂತಲೂ ಹೆಚ್ಚು ಕಠಿನವಾದ ಉಗುರುಗಳ ಸ್ಪರ್ಶವುಳ್ಳವನೂ ಆದ ಅಪ್ರಾಕೃತನೃಸಿಂಹನೇ! ನಿನಗೆ ನಮಸ್ಕಾರವು.

೩. ಹಿರಣ್ಯಕಶಿಪುವಿನ ಎದೆಯೆಡೆಯ ಕೆನ್ನೀರಕೆಸರಿಂದ ಕೆಂಪಗಿರುವ ಶ್ರೀ ನರಸಿಂಹನ ನೇಗಿಲಂತಿರುವ ಉಗುರುಗಳ ಕೊನೆಗಳು ನಿಮ್ಮನ್ನು ಕಾಪಾಡಲಿ.

೪–೧೧. ಹಿಮವತ್ಪರ್ವತದಲ್ಲಿ ವಾಸಮಾಡುವ ವೇದಪಾರಂಗತರಾದ ಮುನಿಗಳೆಲ್ಲರೂ, ನೈಮಿಷಾರಣ್ಯವಾಸಿಗಳಾದ ಭೂತಭವಿಷ್ಯದ್ವರ್ತಮಾನ ಕಾಲ ಜ್ಞಾನವುಳ್ಳ ಮಹಾತ್ಮರೂ, ಅರ್ಬುದಾರಣ್ಯದಲ್ಲಿ ವಾಸಿಸುವವರೂ, ಪುಷ್ಕರಾರಣ್ಯದಲ್ಲಿರುವವರೂ, ಮಹೇಂದ್ರಪರ್ವತದಲ್ಲಿರುವವರೂ, ವಿಂಧ್ಯಪರ್ವತನಿವಾಸಿಗಳೂ, ಧರ್ಮಾ

ಕೌಮಾರಪರ್ವತೇ ಯೇ ಚ ಯೇ ಚ ಪಂಪಾನಿವಾಸಿನಃ ।
ಏತೇ ಚಾನ್ಯೇ ಚ ಬಹವಃ ಸಶಿಷ್ಯಾ ಮುನಯೋತ್ತಮಾಃ ॥ ೭ ॥

ಮಾಘಮಾಸೇ ಪ್ರಯಾಗಂ ತು ಸ್ನಾತುಂ ತೀರ್ಥಂ ಸಮಾಗತಾಃ ।
ತತ್ರ ಸ್ನಾತ್ವಾ ಯಥಾನ್ಯಾಯಂ ಕೃತ್ವಾ ಕರ್ಮ ಜಪಾದಿಕಮ್ ॥ ೮ ॥

ನತ್ವಾ ತು ಮಾಧವಂ ದೇವಂ ಕೃತ್ವಾ ಚ ಪಿತೃತರ್ಪಣಮ್ ।
ದೃಷ್ಟ್ವಾ ತತ್ರ ಭರದ್ವಾಜಂ ಪುಣ್ಯತೀರ್ಥನಿವಾಸಿನಂ ॥ ೯ ॥

ತಂ ಪೂಜಯಿತ್ವಾ ವಿಧಿವತ್ತೇನೈವ ಚ ಸುಪೂಜಿತಾಃ ।
ಆಸನೇಷು ವಿಚಿತ್ರೇಷು ಬ್ರಸ್ಯಾದಿಷು ಯಥಾಕ್ರಮಮ್ ॥ ೧೦ ॥

ರಣ್ಯದಲ್ಲಿರುವವರೂ, ದಂಡಕಾರಣ್ಯವಾಸಿಗಳೂ, ಶ್ರೀಶೈಲದಲ್ಲಿ ವಾಸಿಸುವವರೂ, ಕುರುಕ್ಷೇತ್ರನಿವಾಸಿಗಳೂ, ಕೌಮಾರಪರ್ವತವರ್ತಿಗಳೂ, ಪಂಪಾಕ್ಷೇತ್ರವಾಸಿಗಳೂ- ಇವರೂ, ಇನ್ನೂ ಇತರರೂ, ಪುಣ್ಯಶಾಲಿಗಳೂ, ಶುದ್ಧರೂ, ಶಿಷ್ಯರಿಂದ ಕೂಡಿದವರೂ ಆದ ಅನೇಕಮಂದಿ ಮುನಿಗಳು ಮಾಘಮಾಸದಲ್ಲಿ ತೀರ್ಥಸ್ನಾನಕ್ಕಾಗಿ ಪ್ರಯಾಗ ಕ್ಷೇತ್ರಕ್ಕೆ ಬಂದರು. ಅಲ್ಲಿ ವಿಧ್ಯುಕ್ತರೀತಿಯಿಂದ ಸ್ನಾನಮಾಡಿ ಜಪವೇ ಮೊದಲಾಗಿ ಉಳ್ಳ ಕರ್ಮಗಳನ್ನೆಸಗಿದಮೇಲೆ, ಪುಣ್ಯತೀರ್ಥವಾಸಿಯಾದ ಭರದ್ವಾಜಮುನಿಯನ್ನು ಕಂಡು, ಅವನನ್ನು ವಿಧ್ಯನುಸಾರವಾಗಿ ಪೂಜಿಸಿ, ತಾವೂ ಆತನಿಂದ ಸತ್ಕೃತರಾಗಿ, ಆ ಭರದ್ವಾಜನು ಕೊಟ್ಟ ಅನೇಕ ವಿಧವಾದ ಬ್ರಸೀ ಮೊದಲಾದ ಪೀಠಗಳಲ್ಲಿ ("ವ್ರತಿನಾಂ ಆಸನಂ ಬ್ರಸೀ" ತ್ಯಮರಃ ; ವ್ರತಸ್ಥರಾದವರು ಕುಳಿತುಕೊಳ್ಳುವ ದರ್ಭಾದಿಗಳಿಂದ ಮಾಡಿರುವ ಆಸನವು 'ಬ್ರಸೀ' ಎನ್ನಿಸಿಕೊಳ್ಳುವುದು. "ಬ್ರುವಂತೋಽಸ್ಯಾಂ ಸೀದಂತೀತಿ" ಎಂಬ ಯೋಗಾರ್ಥದಿಂದ ಓದುತ್ತಲಿದರಲ್ಲಿ ಕೂಡುವರು ಎಂದರ್ಥವಾಗುವುದು. ಈ ಸ್ತ್ರೀ 'ಬ್ರೂಞ್‌ವ್ಯಕ್ತಾಯಾಂ ವಾಚಿ

ಭರದ್ವಾಜೇನ ದತ್ತೇಷು ಆಸೀನಾಸ್ತೇ ತಪೋಧನಾಃ ।
ಕೃಷ್ಣಾಶ್ರಿತಾಃ ಕಥಾಃ ಸರ್ವೇ ಪರಸ್ಪರಮಥಾಬ್ರುವನ್ ॥ ೧೧ ॥

ಕಥಾನ್ತೇಷು ತತಸ್ತೇಷಾಂ ಮುನೀನಾಂ ಭಾವಿತಾತ್ಮನಾಮ್ ।
ಆಜಗಾಮ ಮಹಾತೇಜಾಸ್ತತ್ರ ಸೂತೋ ಮಹಾಮುನಿಃ ॥ ೧೨ ॥

ವ್ಯಾಸಶಿಷ್ಯಃ ಪುರಾಣಜ್ಞೋ ಲೋಮಹರ್ಷಣಸಂಜ್ಞಕಃ ।
ತಾನ್ ಪ್ರಣಮ್ಯ ಯಥಾನ್ಯಾಯಂ ಸ ಚ ತೈಶ್ಚಾಪಿ ಪೂಜಿತಃ ॥ ೧೩ ॥

ಉಪವಿಷ್ಟೋ ಯಥಾಯೋಗ್ಯಂ ಭರದ್ವಾಜಮತೇನ ಸಃ ।
ವ್ಯಾಸಶಿಷ್ಯಂ ಸುಖಾಸೀನಂ ತತಸ್ತೇ ಲೋಮಹರ್ಷಣಮ್ ॥ ೧೪ ॥

'ಷದಲ್ ವಿಶರಣಗತ್ಯವಸಾದನೇಷು ') ಯೋಗ್ಯತಾಕ್ರಮವನ್ನು ಮೀರದೇ ಆ ತಪೋಧನರು ಕುಳಿತುಕೊಂಡು, ಬಳಿಕ ಎಲ್ಲರೂ ಒಬ್ಬರೊಡನೊಬ್ಬರು ಶ್ರೀಕೃಷ್ಣನ ವಿಷಯಕಗಳಾದ ಕಥೆಗಳನ್ನು ಹೇಳಿದರು.

೧೨. ಎಲ್ಲೆಡೆಗಳಲ್ಲಿ ವ್ಯಾಪ್ತನಾದ ನಾರಾಯಣನಲ್ಲಿ ಭಕ್ತಿಯುಳ್ಳ ಆ ಮುನಿಗಳು ಪರಸ್ಪರ ಹೇಳುತ್ತಲಿದ್ದ ಶ್ರೀ ಕೃಷ್ಣನ ಕಥೆಯು ಮುಗಿಯುವ ಹೊತ್ತಿಗೆ ಅಲ್ಲಿಗೆ ಅತ್ಯಂತ ತೇಜಸ್ವಿಯೂ, ಮಹಾಜ್ಞಾನಿಯೂ ಆದ ಸೂತನು ಬಂದನು.

೧೩-೧೪. ಶ್ರೀ ವೇದವ್ಯಾಸರ ಶಿಷ್ಯನೂ, ಸಕಲಪುರಾಣಗಳನ್ನರಿತವನೂ, ಆದ ಲೋಮಹರ್ಷಣನೆಂಬ ಹೆಸರಿನ ಸೂತನು ಮರ್ಯಾದಾಕ್ರಮವನ್ನನುಸರಿಸಿ, ಆ ಮುನಿಗಳಿಗೆರಗಿ, ತಾನೂ ಅವರಿಂದ ಸತ್ಕೃತನಾಗಿ, ಭರದ್ವಾಜರ ಅಭಿಪ್ರಾಯದಂತೆ ಯಥೋಚಿತವಾದೆಡೆಯಲ್ಲಿ ಕುಳಿತುಕೊಂಡನು. ಬಳಿಕ ಭರದ್ವಾಜಮುನಿಯು ಸಂತೋಷದಿಂದ ಕುಳಿತಿರುವ ವ್ಯಾಸ ಶಿಷ್ಯನಾದ ಆ ಲೋಮಹರ್ಷಣನನ್ನು ಆಗ ಆ ಮುನಿಗಳ ಸಮಕ್ಷಮದಲ್ಲಿ ಇಂತು ಕೇಳಿದನು.

ತಂ ಪಪ್ರಚ್ಛ ಭರದ್ವಾಜೋ ಮುನೀನಾಮಗ್ರತಸ್ತದಾ ।

॥ ಭರದ್ವಾಜ ಉವಾಚ ॥

ಶೌನಕಸ್ಯ ಮಹಾಸತ್ರೇ ವಾರಾಹಾಖ್ಯಾ ತು ಸಂಹಿತಾ ।
ತ್ವತ್ತಃ ಶ್ರುತಾ ಪುರಾ ಸೂತ ಏತೈರಸ್ಮಾಭಿರೇವ ಚ ॥ ೧೫ ॥

ಸಾಂಪ್ರತಂ ನಾರಸಿಂಹಾಖ್ಯಂ ತ್ವತ್ತಃ ಪೌರಾಣಸಂಹಿತಾಮ್ ।
ಶ್ರೋತುಮಿಚ್ಛಾಮ್ಯಹಂ ಸೂತ ಶ್ರೋತುಕಾಮಾ ಇಮೇ ಸ್ಥಿತಾಃ ॥ ೧೬ ॥

ಅತಸ್ತ್ವಾಂ ಪರಿಪೃಚ್ಛಾಮಿ ಪ್ರಶ್ನಮೇಕಂ ಮಹಾಮುನೇ ।
ಋಷೀಣಾಮಗ್ರತಃ ಸೂತ ಪ್ರಾತರ್ಹ್ಯೇಷಾಂ ಮಹಾತ್ಮನಾಮ್ ॥ ೧೭ ॥

ಕುತ ಏತತ್ಸಮುತ್ಪನ್ನಂ ಕೇನ ವಾ ಪರಿಪಾಲ್ಯತೇ ।
ಕಸ್ಮಿನ್ವಾ ಲಯಮಭ್ಯೇತಿ ಜಗದೇತಚ್ಚರಾಚರಮ್ ॥ ೧೮ ॥

ಕಿಂ ಪ್ರಮಾಣಂ ಚ ವೈ ಭೂಮೇರ್ನೃಸಿಂಹಃ ಕೇನ ತುಷ್ಯತಿ ।
ಕರ್ಮಣಾ ತು ಮಹಾಭಾಗ ತನ್ಮೇ ಬ್ರೂಹಿ ಮಹಾಮತೇ ॥ ೧೯ ॥

ಭರದ್ವಾಜನು ಹೇಳುತ್ತಾನೆ :—

೧೫–೧೯. ಎಲೈ ಸೂತನೇ! ಪೂರ್ವದಲ್ಲಿ ಈ ನಾವೆಲ್ಲರೂ ಶೌನಕನ ಮಹಾಸತ್ರಯಾಗ ಸಂದರ್ಭದಲ್ಲಿ ವಾರಾಹವೆಂಬ ಸಂಹಿತೆಯನ್ನು ನಿಮ್ಮಿಂದ ಕೇಳಿದೆವು. ಅಯ್ಯಾ ಸೂತಮುನಿಯೆ! ಈಗ ನಿನ್ನಿಂದ ನಾರಸಿಂಹವೆಂಬ ಪುರಾಣದ ಸಂಹಿತೆಯನ್ನು ಕೇಳಲು ಈ ಮುನಿಗಳೂ ನಾನೂ ಅಪೇಕ್ಷೆಯುಳ್ಳವರಾಗಿದ್ದೇವೆ. ಓ ಮಹಾಮುನಿಯೆ! ಆದುದರಿಂದ ಹೊತ್ತಾರೆ ಮಹಾತ್ಮರಾದ ಈ ಋಷಿಗಳಿದಿರಿನಲ್ಲಿ ನಿನ್ನನ್ನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ಚರಾಚರಾತ್ಮಕವಾದ ಜಗತ್ತು ಯಾವನಿಂದ ಹುಟ್ಟಿತು? ಯಾವನಿಂದ ರಕ್ಷಿತವಾಗುತ್ತದೆ? ಕೊನೆಗೆ ಯಾವನಲ್ಲಿ ಅಡಗುವುದು? ಭೂಮಂಡಲದ ಅಳತೆಯಷ್ಟು? ಯಾವ ಕರ್ಮಾಚರಣೆಯಿಂದ ನೃಸಿಂಹನು ಸಂತೋಷಗೊಳ್ಳುವನು? ಎಲೈ ಪೂಜ್ಯನಾದ ಮಹಾಜ್ಞಾನಿಯೆ! ಅವೆಲ್ಲವನ್ನೂ ನನಗೆ ತಿಳಿಸು.

ಕಥಂ ಚ ಸೃಷ್ಟೇರಾದಿಃ ಸ್ಯಾದವಸಾನಂ ಕಥಂ ಭವೇತ್ ।
ಕಥಂ ಯುಗಸ್ಯ ಗಣನಾ ಕಿಂ ವಾ ಸ್ಯಾತ್ತು ಚತುರ್ಯುಗಮ್ ॥ ೨೦ ॥

ಕೋ ವಾ ವಿಶೇಷಸ್ತೇಷ್ವತ್ರ ಕಾ ವಾಽವಸ್ಥಾ ಕಲೌ ಯುಗೇ ।
ಕಥಮಾರಾಧ್ಯತೇ ದೇವೋ ನರಸಿಂಹೋಽಸ್ಯಮಾನುಷ್ಯೈಃ ॥ ೨೦ ॥

ಕ್ಷೇತ್ರಾಣಿ ಕಾನಿ ಪುಣ್ಯಾನಿ ಕೇ ಚ ಪುಣ್ಯಾಃ ಶಿಲೋಚ್ಚಯಾಃ ।
ನದ್ಯಶ್ಚ ಕಾಃ ಪರಾಃ ಪುಣ್ಯಾ ನೃಣಾಂ ಪಾಪಹರಾಃ ಶುಭಾಃ ॥ ೨೨ ॥

ದೇವಾದೀನಾಂ ಕಥಂ ಸೃಷ್ಟಿರ್ಮನೋರ್ಮನ್ವಂತರಸ್ಯ ತು ।
ತಥಾ ವಿದ್ಯಾಧರಾದೀನಾಂ ಸೃಷ್ಟಿರಾದೌ ಕಥಂ ಭವೇತ್ ॥ ೨೩ ॥

ಯಜ್ವಾನಃ ಕೇ ಚ ರಾಜಾನಃ ಕೇ ಚ ಸಿದ್ಧಿಂ ಪರಾಂ ಗತಾಃ ।
ಏತತ್ಸರ್ವಂ ಮಹಾಭಾಗ ಕಥಯಸ್ವ ಯಥಾಕ್ರಮಮ್ ॥ ೨೪ ॥

೨೦–೨೪. ಪ್ರಪಂಚಸೃಷ್ಟಿಯು ಮೊದಲು ಆಗುವುದು ಹೇಗೆ? ಕೊನೆಯಾಗುವುದೆಂತು? ಯುಗದ ಲೆಕ್ಕವು ಹೇಗೆ? ಕೃತ-ತ್ರೇತ ದ್ವಾಪರ ಕಲಿಗಳೆಂಬ ನಾಲ್ಕು ಯುಗಗಳು ಹೇಗಾಗುವುವು? ಅವುಗಳಲ್ಲಿ ವಿಶೇಷವೇನು? ಈ ಕಲಿಯುಗದ ಅವಸ್ಥೆಯೇನು? ಭಗವಂತನಾದ ನರಸಿಂಹನು ಮನುಷ್ಯೇತರರಿಂದ ಪೂಜಿಸಲ್ಪಡುವುದು ಹೇಗೆ? ಪುಣ್ಯಕ್ಷೇತ್ರಗಳಾವುವು? ಪುಣ್ಯಪರ್ವತಗಳಾವುವು? ಮಾನವರ ಪಾಪಗಳನ್ನು ಕಳೆಯುವ ಮಂಗಳಕರಗಳೂ, ಶ್ರೇಷ್ಠಗಳೂ ಆದ ಪುಣ್ಯನದಿಗಳಾವುವು? ದೇವತೆಗಳೇ ಮೊದಲಾದವರ, ಮನುವಿನ ಮತ್ತು ಮನ್ವಂತರದ ಸೃಷ್ಟಿಯಾಗುವುದು ಹೇಗೆ? ಹಾಗೆಯೇ ವಿದ್ಯಾಧರರೇ ಮೊದಲಾದವರ ಸೃಷ್ಟಿಯು ಮೊದಲಲ್ಲಿ ಹೇಗಾಗುವುದು? ಎಲೈ ಪೂಜ್ಯನೇ! ವೇದೋಕ್ತಗಳಾದ ಯಜ್ಞಗಳನ್ನು ವಿಧ್ಯನುಸಾರವಾಗಿ ಆಚರಿಸಿದ ಯಜ್ವರಲ್ಲಿಯೂ, ರಾಯರಲ್ಲಿಯೂ, ಪರಮಫಲವಾದ ಮೋಕ್ಷವನ್ನು ಯಾರು ಯಾರು ಪಡೆದರು? ಇವೆಲ್ಲವನ್ನೂ ನಮಗೆ ಕ್ರಮವನ್ನು ಬಿಡದೇ ತಿಳಿಸಬೇಕೆಂದು ಭರದ್ವಾಜನು ಸೂತಮಹಾಮುನಿಯನ್ನು ಪ್ರಾರ್ಥನೆಮಾಡಿದನು.

॥ ಸೂತ ಉವಾಚ ॥

ವ್ಯಾಸಪ್ರಸಾದಾಜ್ಜಾನಾಮಿ ಪುರಾಣಾನಿ ತಪೋಧನಾಃ ।
ತಂ ಪ್ರಣಮ್ಯ ಪ್ರವಕ್ಷ್ಯಾಮಿ ಪುರಾಣಂ ನಾರಸಿಂಹಕಮ್ ॥ ೨೫ ॥

ಪಾರಾಶರ್ಯಂ ಪರಮಪುರುಷಂ ವಿಶ್ವದೇವೈಕಯೋನಿಂ
ವಿದ್ಯಾವಂತಂ ವಿಪುಲಮತಿದಂ ವೇದವೇದಾಂಗವೇದ್ಯಮ್ ।
ಶಶ್ವಚ್ಛಾಂತಂ ಶಮಿತವಿಷಯಂ ಶುದ್ಧತೇಜೋವಿಶಾಲಂ
ವೇದವ್ಯಾಸಂ ವಿಗತಶಮಲಂ ಸರ್ವದಾsಹಂ ನಮಾಮಿ ॥ ೨೬ ॥

ನಮೋ ಭಗವತೇ ತಸ್ಮೈ ವ್ಯಾಸಾಯಾಮಿತತೇಜಸೇ ।
ಯಸ್ಯ ಪ್ರಸಾದಾದ್ವಕ್ಷ್ಯಾಮಿ ವಾಸುದೇವಕಥಾಮಿಮಾಮ್ ॥ ೨೭ ॥

---

೨೫. ಸೂತಮುನಿಯು ಹೇಳುತ್ತಾನೆ—ಎಲೈ ತಪೋಧನರೆ! ನಾನು ಶ್ರೀ ವೇದವ್ಯಾಸರ ಅನುಗ್ರಹದಿಂದ ಪುರಾಣಗಳನ್ನರಿತಿರುವೆನು. ಆ ವೇದವ್ಯಾಸರಿಗೆ ವಂದಿಸಿ ನೀವು ಕೇಳಬಯಸಿದ ನಾರಸಿಂಹಪುರಾಣವನ್ನು ನಿಮಗೆ ಹೇಳುವೆನು.

೨೬. ಪರಾಶರರ ಮಗನೂ, ಪುರುಷೋತ್ತಮನೂ, ಸಕಲಪ್ರಪಂಚ ಮತ್ತು ದೇವತೆಗಳು–ಇವರಿಗೆ ಮುಖ್ಯೋತ್ಪತ್ತಿಕಾರಣನೂ, ಸರ್ವಜ್ಞನೂ, ಲೋಕಕ್ಕೆ ಜ್ಞಾನೋಪದೇಶಕನೂ, ಋಗಾದಿವೇದಗಳು ಮತ್ತು ಶಿಕ್ಷಾದಿ ವೇದಾಂಗಗಳು. ಇವೆಲ್ಲವನ್ನೂ ಸಾಕಲ್ಯವಾಗಿ ತಿಳಿದಿರುವವನೂ, ಯಾವಾಗಲೂ ಶಾಂತಸ್ವಭಾವದವನೂ, ಪ್ರಾಕೃತಗಳಾದ ವಿಷಯಗಳ ಆಸಕ್ತಿರಹಿತನೂ, ಅಪ್ರಾಕೃತವಾದ ಅಪಾರ ತೇಜೋಮೂರ್ತಿಯೂ, ಚಿಂತಾಸಂತಾಪಾದಿ ಸಕಲ ದೋಷಶೂನ್ಯನೂ, ವೇದ ವಿಭಾಜಕನೂ ಆದ ನಾರಾಯಣಾವತಾರಿಯಾದ ವೇದವ್ಯಾಸನನ್ನು ನಾನು ಯಾವಾಗಲೂ ವಂದಿಸುತ್ತೇನೆ.

೨೭. ಭಗವಂತನೂ, ಅಪಾರ ತೇಜೋಮೂರ್ತಿಯೂ ಆದ ವೇದವ್ಯಾಸನಿಗೆ ನಮಸ್ಕಾರವು. ಯಾವ ಈ ವೇದವ್ಯಾಸರ ಅನುಗ್ರಹದಿಂದ ನಿಮಗೆ ವಾಸುದೇವನಾದ ಶ್ರೀ ನರಸಿಂಹನ ಈ ಕಥೆಯನ್ನು ಹೇಳುವೆನು.

ಸುನಿರ್ಣೀತೋ ಮಹಾನ್ ಪ್ರಶ್ನಸ್ತ್ವಯಾ ಯಃ ಪರಿಕೀರ್ತಿತಃ ।
ವಿಷ್ಣುಪ್ರಸಾದೇನ ವಿನಾ ವಕ್ತುಂ ಕೇನಾಪಿ ಶಕ್ಯತೇ ॥ ೨೮ ॥

ತಥಾಪಿ ನರಸಿಂಹಸ್ಯ ಪ್ರಸಾದಾದೇವ ತೇಽಧುನಾ ।
ಪ್ರವಕ್ಷ್ಯಾಮಿ ಮಹಾಪುಣ್ಯಂ ಭರದ್ವಾಜ ಶೃಣುಷ್ವ ಮೇ ॥ ೨೯ ॥

ಶೃಣ್ವಂತು ಮುನಯಃ ಸರ್ವೇ ಸಶಿಷ್ಯಾಸ್ತ್ವತ್ರ ಯೇ ಸ್ಥಿತಾಃ ।
ಪುರಾಣಂ ನರಸಿಂಹಸ್ಯ ಪ್ರವಕ್ಷ್ಯಾಮಿ ಯಥಾ ತಥಾ ॥ ೩೦ ॥

ನಾರಾಯಣಾದಿದಂ ಸರ್ವಂ ಸಮುತ್ಪನ್ನಂ ಚರಾಚರಮ್ ।
ತೇನೈವ ಪಾಲ್ಯತೇ ಸರ್ವಂ ನರಸಿಂಹಾದಿಮೂರ್ತಿಭಿಃ ॥ ೩೧ ॥

---

೨೮. ಎಲೈ ಭರದ್ವಾಜನೇ! ನೀನು ಕೇಳಿರುವ ಪ್ರಶ್ನೆಯು ಹಿರಿದಾದುದೂ, ನಿರ್ಣೀತವಾದುದೂ ಆಗಿರುವುದು. ಇದಕ್ಕೆ ಉತ್ತರವನ್ನು ಶ್ರೀಮಹಾವಿಷ್ಣುವಿನ ಅನುಗ್ರಹವಿಲ್ಲದೇ ಯಾವನೂ ಹೇಳಲಾಗುವುದಿಲ್ಲವು.

೨೯. ಆದರೂ ಎಲೈ ಭರಧ್ವಾಜನೇ! ಈ ಶ್ರೀ ನರಸಿಂಹನ ಅನುಗ್ರಹದಿಂದಲೇ ನಿನಗೆ ಮಹಾಪುಣ್ಯಪ್ರದವಾದ ಶ್ರೀ ನರಸಿಂಹನ ಚರಿತೆಯನ್ನು ನಾನು ಹೇಳುವೆನು; ಶ್ರದ್ಧಾದರಗಳಿಂದ ಕೇಳು.

೩೦. ಇಲ್ಲಿ ಶಿಷ್ಯರೊಡಗೂಡಿ ಯಾವ ಮುನಿಗಳಿರುವರೋ ಅವರೆಲ್ಲರೂ ಸ್ವಲ್ಪವೂ ವ್ಯತ್ಯಾಸವಿಲ್ಲದೇ, ಇದ್ದದ್ದು ಇದ್ದಹಾಗೆಯೇ ನಾನು ಹೇಳುವ ಶ್ರೀ ನರಸಿಂಹಸ್ವಾಮಿಯ ಪುರಾಣವನ್ನು ಶ್ರದ್ಧಾದರಗಳಿಂದ ಕೇಳಲಿ.

೩೧. ಈ ಸ್ಥಾವರ ಜಂಗಮಾತ್ಮಕವಾದ ಜಗತ್ತೆಲ್ಲವೂ ಶ್ರೀಮನ್ನಾರಾಯಣನಿಂದಲೇ ಸೃಷ್ಟಿಸಲ್ಪಟ್ಟಿತು. ಇಂತು ಸೃಷ್ಟವಾದ ಜಗತ್ತೆಲ್ಲವೂ ನರಸಿಂಹಾದಿರೂಪಗಳನ್ನು ಧರಿಸಿರುವ ಆ ನಾರಾಯಣನಿಂದಲೇ ರಕ್ಷಿಸಲ್ಪಡುತ್ತವೆ.

ತತ್ರೈವ ಲೀಯತೇ ಚಾಂತೇ ಹರೌ ಜ್ಯೋತಿಃಸ್ವರೂಪಿಣಿ ।
ಯಥೈವ ದೇವಃ ಸೃಜತಿ ತಥಾ ವಕ್ಷ್ಯಾಮಿ ತಚ್ಛೃಣು ॥ ೩೨ ॥

ಪುರಾಣಾನಾಂ ಹಿ ಸರ್ವೇಷಾಂ ನಾಯಂ ಸಾಧಾರಣಃ ಸ್ಮೃತಃ ।
ಶ್ಲೋಕೋಽಯಂ ತ್ವಂ ಮುನೇಃ ಶ್ರುತ್ವಾ ನಿಃಶೇಷಂ ತೇ ಮುನೇ ಶೃಣು

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೈವ ವಕ್ಷ್ಯಾಮ್ಯನು ಸಮಾಸತಃ ॥ ೩೪ ॥

ಆದಿಸರ್ಗೋ ಮಹಾಂಸ್ತಾವತ್ಕಥಯಿಷ್ಯಾಮಿ ವೈ ದ್ವಿಜಾಃ ।
ಯಸ್ಮಾದಾರಭ್ಯ ದೇವಾನಾಂ ರಾಜ್ಞಾಂ ಚರಿತಮೇವ ಚ ॥ ೩೫ ॥

---

೩೨. ಹಾಗೆಯೇ ತೇಜೋಮೂರ್ತಿಯಾದ ಶ್ರೀಹರಿಯಲ್ಲಿಯೇ ಪ್ರಳಯ ಕಾಲದಲ್ಲಿ ಈ ಜಗತ್ತೆಲ್ಲವೂ ಅಡಗುತ್ತದೆ. ಕ್ರೀಡಾದಿ ಗುಣವಿಶಿಷ್ಟನಾದ ಶ್ರೀಮನ್ನಾರಾಯಣನು ಯಾವ ತೆರನಾಗಿ ಸೃಷ್ಟಿಸುತ್ತಾನೆಯೋ ಆ ಬಗೆಯನ್ನು ನಿನಗೆ ಅರುಹುವೆನು. ಅದನ್ನು ಸಡ್ಡೆಯಿಂದ ಕೇಳು.

೩೩. ಈ ನರಸಿಂಹಪುರಾಣವು ಪುರಾಣಗಳಲ್ಲೆಲ್ಲಾ ಶ್ರೇಷ್ಠವಾದುದು. ಎಲೈ ಭರದ್ವಾಜನೇ! ವೇದವ್ಯಾಸರಿಂದ ರಚಿತವಾದ ಈ ನಾರಸಿಂಹಚರಿತೆಯನ್ನು ಮೊದಲು ಸಂಗ್ರಹವಾಗಿ ಕೇಳಿ, ಅನಂತರ ವಿಸ್ತಾರವಾಗಿ ಹೇಳುವುದನ್ನು ನೀನು ಸಡ್ಡೆಯಿಂದ ಕೇಳು.

೩೪. ಸೃಷ್ಟಿ, ಪ್ರತಿಸೃಷ್ಟಿ, ವಂಶ, ಮನ್ವಂತರಗಳು ಮತ್ತು ಅನುವಂಶಗಳ ಚರಿತೆ- ಇವುಗಳನ್ನು ಕ್ರಮವಾಗಿ ಸಂಗ್ರಹಿಸಿ ಹೇಳುವೆನು.

೩೫. ಎಲೈ ಬ್ರಾಹ್ಮಣರೇ! ಕೇಳಿ; ಎಲ್ಲಿಂದ ದೇವತೆಗಳ ಮತ್ತು ರಾಜರುಗಳ ಚರಿತೆ ಮೊದಲಾಗುವುದೋ ಆ ಆದಿಸೃಷ್ಟಿಯು ಹಿರಿದು. ಅದನ್ನು ಹೇಳುವೆನು.

ಜ್ಞಾಯತೇ ಸರಹಸ್ಯಂ ಚ ಪರಮಾತ್ಮಾ ಸನಾತನಃ ।
ಪ್ರಾಕ್ಸೃಷ್ಟೇಃ ಪ್ರಲಯಾದೂರ್ಧ್ವಂ ನಾಸೀತ್ಕಿಂಚಿದ್ದ್ವಿಜೋತ್ತಮ ॥ ೩೬ ॥

ಬ್ರಹ್ಮಸಂಜ್ಞಮಭೂದೇಕಂ ಜ್ಯೋತಿಷ್ಮತ್ಸರ್ವಕಾರಣಮ್ ।
ನಿತ್ಯಂ ನಿರಂಜನಂ ಶಾಂತಂ ನಿರ್ಗುಣಂ ನಿತ್ಯನಿರ್ಮಲಮ್ ॥ ೩೭ ॥

ಆನಂದಸಾಗರಂ ಸ್ವಚ್ಛಂ ಯಂ ಕಾಂಕ್ಷಂತಿ ಮುಮುಕ್ಷವಃ ।
ಸರ್ವಜ್ಞಂ ಜ್ಞಾನರೂಪತ್ವಾದನಂತಮಜಮವ್ಯಯಮ್ ॥ ೩೮ ॥

---

೩೬. ಎಲೈ ಬ್ರಾಹ್ಮಣಶ್ರೇಷ್ಠನಾದ ಭರದ್ವಾಜನೆ! ಜಗತ್ಪ್ರಲಯವಾದ ಮೇಲೆ ಸೃಷ್ಟಿಗೆ ಮೊದಲು ಯಾವಾಗಲೂ ಏಕಪ್ರಕಾರನಾಗಿರುವ ಪರಮಾತ್ಮನಾದ ಶ್ರೀಮನ್ನಾರಾಯಣನನ್ನು ಹೊರತು ಬೇರೆ ಯಾವ ವಸ್ತುವೂ ಇರಲಿಲ್ಲವೆಂಬ ತತ್ವವು ತಿಳಿದುಬರುತ್ತದೆ.

೩೭. ಸೃಷ್ಟಿಗೆ ಮೊದಲು ತೇಜಃ ಪ್ರಚುರವೂ, ಸಕಲ ಪ್ರಪಂಚಕ್ಕೂ ಕಾರಣವೂ, ನಾಶಶೂನ್ಯವೂ, ಅಶೇಷದೋಷರಹಿತವೂ, ಶಾಂತಸ್ವರೂಪವುಳ್ಳದೂ, ಪ್ರಾಕೃತಗುಣ ರಹಿತವಾದುದೂ, ಯಾವಾಗಲೂ ಶುದ್ಧವಾದುದೂ, ಅಪ್ರಾಕೃತಗಳಾದ ಅನಂತ ಕಲ್ಯಾಣಗುಣಗಳಿಂದ ಪೂರ್ಣವಾದುದರಿಂದ ಬ್ರಹ್ಮನೆಂದು ಹೆಸರುಳ್ಳದೂ ಆದ ಅದ್ವಿತೀಯವಾದ ಒಂದು ವಸ್ತುವು ಇದ್ದಿತು.

೩೮. ಜ್ಞಾನರೂಪನಾಗಿರುವುದರಿಂದ ಸರ್ವಜ್ಞನೂ, ನಾಶರಹಿತನೂ, ಉತ್ಪತ್ತಿ ಶೂನ್ಯನೂ, ವಿಕಾರರಹಿತನೂ, ಶುದ್ಧನೂ ಆದ ಯಾವ ಪೂರ್ಣಾನಂದನಾದ ಬ್ರಹ್ಮನನ್ನು ಮೋಕ್ಷಾರ್ಥಿಗಳು ಹೊಂದಲಪೇಕ್ಷಿಸುತ್ತಾರೆಯೋ, ಅವನೊಬ್ಬನೇ ಜಗದಾದಿಯಲ್ಲಿ ಇದ್ದನು.

ಅವಿನಾಶಿ ಸದಾ ಸ್ವಚ್ಛಮಚ್ಯುತಂ ಪಾವಕಂ ಮಹತ್ ।
ಸರ್ಗಕಾಲೇ ತು ಸಂಪ್ರಾಪ್ತೇ ಜ್ಞಾತ್ವಾ ತು ಜ್ಞಾತೃನಾಯಕಃ ॥ ೩೯ ॥

ಅಂತರ್ಲೀನ ವಿಕಾರಂ ಚ ತತ್ಸ್ರಷ್ಟುಮುಪಚಕ್ರಮೇ ।
ತಸ್ಮಾತ್ಪ್ರಧಾನಮುದ್ಭೂತಂ ತತಶ್ಚಾಪಿ ಮಹಾನಭೂತ್ ॥
ಸಾತ್ವಿಕೋ ರಾಜಸಶ್ಚೈವ ತಾಮಸಶ್ಚ ತ್ರಿಧಾ ಮಹಾನ್ ॥ ೪೦ ॥

ವೈಕಾರಿಕಸ್ತೈಜಸಶ್ಚ ಭೂತಾದಿಶ್ಚೈವ ತಾಮಸಃ ।
ತ್ರಿವಿಧೋಽಯಮಹಂಕಾರೋ ಮಹತ್ತತ್ವಾದಜಾಯತ ॥ ೪೧ ॥

ಯಥಾ ಪ್ರಧಾನೇನ ಮಹಾನ್ಮಹತಾ ಸ ತಥಾ ವೃತಃ ।
ಭೂತಾದಿಷು ವಿಕುರ್ವಾಣಃ ಶಬ್ದತನ್ಮಾತ್ರಕಂ ತತಃ ॥ ೪೨ ॥

---

೩೯. ನಾಶರಹಿತನೂ, ಯಾವಾಗಲೂ ದೋಷದೂರನೂ, ಅಚ್ಯುತನೂ, ಮಹಾತೇಜೋಮೂರ್ತಿಯೂ, ಸರ್ವಜ್ಞನೂ ಆದ ನಾರಾಯಣನು ಸೃಷ್ಟಿಕಾಲವು ಬರಲು ಸೂಕ್ಷ್ಮರೂಪದಿಂದಿರುವುದರಿಂದ ಅಡಗಿದ, ವಿಕಾರವುಳ್ಳ ಜಗತ್ತನ್ನು ವಾಸುದೇವಾದಿ ರೂಪದಿಂದ ಸೃಷ್ಟಿಮಾಡಲು ತೊಡಗಿದನು.

೪೦. ಪ್ರದ್ಯುಮ್ನನಿಂದ ಕೃತಿಯಲ್ಲಿ ತ್ರಿಗುಣಾತ್ಮಕವಾದ ಪ್ರಧಾನವು ಸೃಷ್ಟವಾಯಿತು. ಪ್ರಧಾನದಿಂದ ಮಹತ್ತತ್ತ್ವವು ಹುಟ್ಟಿತು. ಆ ಮಹತ್ತತ್ತ್ವವು ಸಾತ್ವಿಕ, ರಾಜಸ, ತಾಮಸಗಳೆಂಬ ಮೂರು ಭಾಗವುಳ್ಳದಾಗಿರುವುದು.

೪೧ ಈ ಮಹತ್ತತ್ತ್ವದಿಂದ ವೈಕಾರಿಕಾಹಂಕಾರ, ತೈಜಸಾಹಂಕಾರ, ಭೂತಾದಿಯೆಂಬ ತಾಮಸಾಹಂಕಾರ ಇಂತು ಮೂರು ಬಗೆಯಾದ ಈ ಅಹಂಕಾರ ತತ್ವವು ಹುಟ್ಟಿತು.

೪೨. ಹೇಗೆ ಮಹತ್ತತ್ವವು ಪ್ರಧಾನದಿಂದ ವ್ಯಾಪ್ತವಾಯಿತೋ ಹಾಗೆಯೇ ಅಹಂಕಾರತತ್ವವೂ ಮಹತ್ತತ್ವದಿಂದ ವ್ಯಾಪ್ತವಾಯಿತು. ಆ ಅಹಂಕಾರತತ್ವದಿಂದ ತಾಮಸಾಹಂಕಾರವೆಂಬ ವಿಕಾರವು ಭೂತಾದಿಯಲ್ಲಿ ಉಂಟಾಗಿ ಶಬ್ದವೆಂಬ ತನ್ಮಾತ್ರವು ಸೃಷ್ಟವಾಯಿತು.

ಸಸರ್ಜ ಶಬ್ದತನ್ಮಾತ್ರಾದಾಕಾಶಂ ಶಬ್ದಲಕ್ಷಣಮ್ ।
ಶಬ್ದಮಾತ್ರಂ ತಥಾಕಾಶಂ ಭೂತಾದೀಂಶ್ಚ ಸಮಾವೃಣೋತ್ ॥ ೪೩ ॥

ಬಲವಾನಭವದ್ವಾಯುಸ್ತಸ್ಯ ಸ್ಪರ್ಶಗುಣೋ ಮತಃ ।
ಆಕಾಶಂ ಶಬ್ದತನ್ಮಾತ್ರಂ ಸ್ಪರ್ಶಮಾತ್ರಂ ತಥಾವೃಣೋತ್ ॥ ೪೪ ॥

ತತೋ ವಾಯುರ್ವಿಕುರ್ವಾಣೋ ರೂಪಮಾತ್ರಂ ಸಸರ್ಜ ಹ ।
ಜ್ಯೋತೀ ರೂಪ್ರೋದ್ಯತೋ ವಾಯೋಸ್ತದ್ರೂಪಗುಣಮುಚ್ಯತೇ ॥ ೪೫ ॥

ಸ್ಪರ್ಶಮಾತ್ರಸ್ತು ವೈ ವಾಯೂ ರೂಪಮಾತ್ರಂ ಸಮಾವೃಣೋತ್ ।
ಸಂಭವಂತಿ ತತೋಽಂಭಾಂಸಿ ರಸಾಧಾರಾಣಿ ತಾನಿ ತು ॥ ೪೬ ॥

---

೪೩. ಆ ಶಬ್ದತನ್ಮಾತ್ರದಿಂದ ಶಬ್ದವೇ ಗುಣವಾಗಿ ಉಳ್ಳ ಆಕಾಶವನ್ನು ಸೃಷ್ಟಿಸಿದನು. ಆ ಶಬ್ದವೆಂಬ ತನ್ಮಾತ್ರವೂ ಹಾಗೆಯೇ ಆಕಾಶವನ್ನೂ, ಭೂತಾದಿಗಳನ್ನೂ ಆವರಿಸಿ ವ್ಯಾಪ್ತವಾಯಿತು.

೪೪. ಆಕಾಶದಿಂದ ಸ್ಪರ್ಶತನ್ಮಾತ್ರವೂ, ಅದರಿಂದ ಸಮರ್ಥವಾದ ವಾಯುಭೂತವೂ ಹುಟ್ಟಿದುವು. ಆ ವಾಯುವಿನ ಗುಣವು ಸ್ಪರ್ಶವೆಂದು ಜ್ಞಾನಿಗಳಿಗೆ ಸಮ್ಮತವು. ಶಬ್ದತನ್ಮಾತ್ರವೂ, ಆಕಾಶವೂ, ಸ್ಪರ್ಶತನ್ಮಾತ್ರವೂ ಹಾಗೆಯೇ ಸ್ಪರ್ಶಗುಣವಾದ ವಾಯುವನ್ನು ಆವರಿಸಿ ವ್ಯಾಪ್ತಗಳಾದವು.

೪೫. ಅನಂತರ ವಾಯುಭೂತವು ವಿಕಾರಗೊಂಡು ರೂಪತನ್ಮಾತ್ರವನ್ನು ಸೃಷ್ಟಿಮಾಡಿತು. ರೂಪವೇ ಗುಣವಾಗಿರುವ ವಾಯುವಿನಿಂದ ಹುಟ್ಟಿದ ಭೂತವು ಅಗ್ನಿರೂಪವಾದುದೆಂದು ಹೇಳಿಸಿಕೊಳ್ಳುತ್ತದೆ

೪೬. ಸ್ಪರ್ಶತನ್ಮಾತ್ರದಿಂದ ವಾಯುವೂ, ಆ ವಾಯುವಿನಿಂದ ರೂಪತನ್ಮಾತ್ರವೂ ಆವೃತವಾಗಿ ವ್ಯಾಪ್ತಗಳಾಗಿರುವುವು. ಆ ಅಗ್ನಿಭೂತದಿಂದ ರೂಪತನ್ಮಾತ್ರವೂ, ಅದರಿಂದ ಉತ್ತಮವಾದ ಜಲಭೂತವೂ ಹುಟ್ಟಿದುವು.

ರಸಮಾತ್ರಾಣಿ ಚಾಂಭಾಂಸಿ ರೂಪಮಾತ್ರಂ ಸಮಾವೃಣೋತ್ ।
ವಿಕುರ್ವಾಣಾನಿ ಚಾಂಭಾಂಸಿ ಗಂಧಮಾತ್ರಂ ಸಸರ್ಜಿರೇ ॥ ೪೭ ॥

ತಸ್ಮಾಜ್ಜಾತಾ ಮಹೀ ಚೇಯಂ ಸರ್ವಭೂತಗುಣಾಧಿಕಾ ।
ಸಂಘಾತೋ ಜಾಯತೇ ತಸ್ಮಾತ್ತಸ್ಯ ಗಂಧಗುಣೋ ಮತಃ ॥ ೪೮ ॥

ತಸ್ಮಿಂಸ್ತಸ್ಮಿಂಸ್ತು ತನ್ಮಾತ್ರಾ ತೇನ ತನ್ಮಾತ್ರತಾ ಸ್ಮೃತಾ ।
ತನ್ಮಾತ್ರಾಣ್ಯವಿಶೇಷಾಣಿ ವಿಶೇಷಾಃ ಕ್ರಮಶೋಽಪರಾಃ ॥ ೪೯ ॥

ಭೂತತನ್ಮಾತ್ರಸರ್ಗೋಽಯಮಹಂಕಾರಾತ್ತು ತಾಮಸಾತ್ ।
ಕೀರ್ತಿತಸ್ತೇ ಸಮಾಸೇನ ಭರದ್ವಾಜ ಮಯಾ ತವ ॥ ೫೦ ॥

---

೪೭. ರೂಪತನ್ಮಾತ್ರವೂ, ಅಗ್ನಿಭೂತವೂ, ರಸತನ್ಮಾತ್ರವೂ; ಜಲಭೂತವನ್ನಾವರಿಸಿ ವ್ಯಾಪ್ತವಾದುವು. ಈ ಅಬ್ಭೂತವು ವಿಕಾರಗೊಂಡು ಗಂಧತನ್ಮಾತ್ರವನ್ನು ಸೃಷ್ಟಿಸಿತು.

೪೮. ಆ ಗಂಧತನ್ಮಾತ್ರದಿಂದ ಆಕಾಶ, ವಾಯು, ತೇಜ, ಜಲ- ಈ ಭೂತಗಳ ಶಬ್ದ, ಸ್ಪರ್ಶ, ರೂಪ, ರಸಗುಣಗಳಿಂದ ಕೂಡಿರುವ ಉತ್ತಮವಾದ ಈ ಪೃಥಿವೀಭೂತವು ಹುಟ್ಟಿತು. ಆದರಿಂದ ಪಂಚಭೂತಾತ್ಮಕಗಳಾದ ವಸ್ತುಗಳುಂಟಾಗುತ್ತವೆ ಈ ಪೃಥಿವೀಭೂತದ ಗುಣವು ಗಂಧವು ಎಂದು ತತ್ವಜ್ಞರ ಮತವು.

೪೯. ಆಯಾ ಭೂತಗಳಲ್ಲಿಯೇ ವಿಶೇಷವಾಗಿರುವುದರಿಂದ ಶಬ್ದಾದಿಗಳಿಗೆ ತನ್ಮಾತ್ರಗಳೆಂದು ಹೆಸರು. ಮುಂದಣ ಭೂತಗಳಲ್ಲಿ ತನ್ಮಾತ್ರಗಳು ವ್ಯಾಪ್ತಗಳಾಗಿ ಸಾಮಾನ್ಯಗಳಾದರೂ ಸೃಷ್ಟಿಕ್ರಮದಿಂದ ಅವು ವಿಶೇಷಗಳೆನಿಸಿ ಬೇರೆಯಾಗಿವೆ.

೫೦. ಎಲೈ ಭರದ್ವಾಜನೇ! ತಾಮಸಾಹಂಕಾರತತ್ವದಿಂದ ಈ ಭೂತಗಳ ಮತ್ತು ತನ್ಮಾತ್ರಗಳ, ಸೃಷ್ಟಿಯೂ ಉಂಟಾದುವು. ಈ ಸೃಷ್ಟಿಯನ್ನು ಸಂಗ್ರಹವಾಗಿ ನಿನಗೆ ನಾನು ಹೇಳಿವೆನು.

ತೈಜಸಾನೀಂದ್ರಿಯಾಣ್ಯಾಹುರ್ದೇವಾ ವೈಕಾರಿಕಾ ದಶ ।
ಏಕಾದಶಂ ಮನಶ್ಚಾತ್ರ ಕೀರ್ತಿತಂ ತತ್ರ ಚಿಂತಕೈಃ ॥ ೫೧ ॥

ಬುದ್ಧೀಂದ್ರಿಯಾಣಿ ಪಂಚಾತ್ರ ಪಂಚ ಕರ್ಮೇಂದ್ರಿಯಾಣಿ ಚ ।
ತಾನಿ ವಕ್ಷ್ಯಾಮಿ ತೇಷಾಂ ಚ ಕರ್ಮಾಣಿ ಕುಲಪಾವನ ॥ ೫೨ ॥

ಶ್ರವಣೇ ಚ ದೃಶೌ ಜಿಹ್ವಾ ನಾಸಿಕಾ ಚೈವ ಪಂಚಮೀ ।
ಶಬ್ದಾದಿಜ್ಞಾನಸಿದ್ಧ್ಯರ್ಥಂ ಬುದ್ಧಿಯುಕ್ತಾನಿ ಪಂಚ ವೈ ॥ ೫೩ ॥

---

೫೧. ತೈಜಸಾಹಂಕಾರತತ್ವದಿಂದ ಚಕ್ಷುರಾದಿ ಪಂಚ ಜ್ಞಾನೇಂದ್ರಿಯಗಳೂ, ವಾಗಾದಿ ಪಂಚ ಕರ್ಮೇಂದ್ರಿಯಗಳೂ ಸೃಷ್ಟವಾದವು. ವೈಕಾರಿಕಾಹಂಕಾರತತ್ವದಿಂದ ಆ ಇಂದ್ರಿಯಾಭಿಮಾನಿಗಳಾದ ದಶ ದೇವತೆಗಳೂ, ಹನ್ನೊಂದನೆಯ ಇಂದ್ರಿಯವಾದ ಮನಸ್ಸೂ, ಅದರ ಅಭಿಮಾನ ದೇವತೆಗಳೂ ಸೃಷ್ಟರಾದರೆಂದು ಸೃಷ್ಟಿಚಿಂತಕರು ಹೇಳಿರುತ್ತಾರೆ.

೫೨. ಎಲೈ ಕುಲಪಾವನನಾದ ಭರದ್ವಾಜನೇ! ಕೇಳು : ಇವುಗಳಲ್ಲಿ ಜ್ಞಾನೇಂದ್ರಿಯಗಳು:- ಕಣ್ಣು, ಕಿವಿ, ಮೂಗು, ನಾಲಿಗೆ, ಮತ್ತು ಚರ್ಮ, ಎಂಬ ಇವೈದು ; ಕರ್ಮೇಂದ್ರಿಯಗಳು :- ವಾಕ್ಪಾದ, ಪಾಣಿ, ಪಾಯೂಪಸ್ಥಗಳೆಂಬ ಐದು : ಅವುಗಳನ್ನೂ, ಅವುಗಳ ಕೆಲಸಗಳನ್ನೂ ಹೇಳುವೆನು.

೫೩. ಎರಡು ಕಿವಿಗಳು, ಎರಡು ಕಣ್ಣುಗಳು, ನಾಲಿಗೆ, ಮೂಗು, ಮತ್ತು ಐದನೆಯದಾದ ಚರ್ಮ- ಇವೈದೂ, ಶಬ್ದ, ರೂಪ, ರಸ, ಗಂಧ, ಮತ್ತು ಸ್ಪರ್ಶ- ಈ ಐದು ವಿಷಯಗಳ ಅರಿವನ್ನುಂಟುಮಾಡಲು ಬುದ್ಧಿಯಿಂದ ಕೂಡಿವೆ.

ಪಾಯೂಪಸ್ಥೌ ಹಸ್ತಪಾದೌ ವಾಗ್ಭರದ್ವಾಜ ಪಂಚಮೀ ।
ವಿಸರ್ಗಾನಂದ ಶಿಲ್ಪೀ ಚ ಗತ್ಯುಕ್ತೀ ಕರ್ಮ ತತ್ಸ್ಮೃತಮ್ ॥ ೨೪ ॥

ಆಕಾಶವಾಯುತೇಜಾಂಸಿ ಸಲಿಲಂ ಪೃಥಿವೀ ತಥಾ ।
ಶಬ್ದಾದಿಭಿರ್ಗುಣೈರ್ವಿಪ್ರ ಸಂಯುಕ್ತಾನ್ಯುತ್ತರೋತ್ತರೈಃ ॥ ೨೫ ॥

ನಾನಾವೀರ್ಯಾಃ ಪೃಥಗ್ಭೂತಾಸ್ತತಸ್ತೇ ಸಂಹತಿಂ ವಿನಾ ।
ನಾಶಕ್ನುವನ್ಪ್ರಜಾಂ ಸ್ರಷ್ಟುಂ ಸಮಾಗಮ್ಯ ಚ ಕೃತ್ಸ್ನಶಃ ॥ ೨೬ ॥

ಸಮೇತ್ಯಾನ್ಯೋನ್ಯಸಂಯೋಗಂ ಪರಸ್ಪರಸಮಾಶ್ರಯಾತ್ ।
ಏಕಸಂಘಾತಲಕ್ಷಾಶ್ಚ ಸಂಪ್ರಾಪ್ಯೈಕ್ಯಮಶೇಷತಃ ॥ ೨೭ ॥

---

೨೪. ಎಲೈ ಭರದ್ವಾಜನೇ! ಕೇಳು ಪಾಯು, ಉಪಸ್ಥ, ಕೈ, ಕಾಲುಗಳು, ವಾಕ್ ಎಂಬ ಐದನೆಯದು, ಇವು ಮಲವನ್ನು ಹೊರಹಾಕುವುದು, ಸುಖವನ್ನುಂಟು ಮಾಡುವುದು, ಶಿಲ್ಪವನ್ನೆಸಗುವುದು, ಸಂಚರಿಸುವುದು ಮತ್ತು ಇವ್ವೈದೂ ಹಿಂದೆ ಪಾಯೂಪಸ್ಥಾದಿಗಳ ವ್ಯಾಪಾರಗಳೆಂದು ಹೇಳಿದೆ.

೨೫. ಎಲೈ ಬ್ರಾಹ್ಮಣನೇ! ಆಕಾಶ, ವಾಯು, ತೇಜಸ್ಸು, ನೀರು, ಮತ್ತು ಭೂಮಿ- ಇವು ಶಬ್ದ, ಸ್ಪರ್ಶ, ರೂಪ, ರಸ, ಮತ್ತು ಗಂಧ- ಈ ಮುಂದಣ ಗುಣಗಳಿಂದ ಕೂಡಿರುತ್ತವೆ. (ಎಂದರೆ ಆಕಾಶದಲ್ಲಿ ಶಬ್ದ, ವಾಯುವಿನಲ್ಲಿ ಶಬ್ದಸ್ಪರ್ಶಗಳು, ತೇಜಸ್ಸಿನಲ್ಲಿ ಶಬ್ದಸ್ಪರ್ಶರೂಪಗಳು, ಜಲದಲ್ಲಿ ಶಬ್ದಸ್ಪರ್ಶರೂಪ ರಸಗಳು ಮತ್ತು ಭೂಮಿಯಲ್ಲಿ ಶಬ್ದಸ್ಪರ್ಶರೂಪರಸ ಗಂಧಗಳು, ಇರುತ್ತವೆಂದು ತಿಳಿದುಕೊಳ್ಳಬೇಕು.)

೨೬–೨೮. ಅನಂತರ ಅನೇಕ ವಿಧಗಳಾದ ಸಾಮರ್ಥ್ಯವುಳ್ಳ ಬೇರೆಬೇರೆಯಾಗಿರುವ ಮಹದಾದಿಗಳು ಒಟ್ಟುಗೂಡಿದ ಹೊರತು ತಾವು ತಾವೇ ಪ್ರಜಾಸೃಷ್ಟಿ ಮಾಡಲಾಗುವುದಿಲ್ಲ. ಅವೆಲ್ಲವೂ ಬಂದು ಸೇರಿ, ಒಂದನ್ನೊಂದು ಸಂಬಂಧಪಡೆದು ಆಶ್ರಯಿಸಿ, ಒಂದು ಸಮುದಾಯದಂತಹುವು ಲಕ್ಷ ಸಂಖ್ಯೆಗಳುಳ್ಳವುಗಳಾಗಿ ಒಟ್ಟಿನಿಂದ

ಪುರುಷಾಧಿಷ್ಠಿತತ್ವಾಚ್ಚ ಪ್ರಕೃತ್ಯಾನುಗ್ರಹೇಣ ಚ ।
ಮಹದಾದಯೋ ವಿಶೇಷಾಂತಾಸ್ತ್ವಂಡಮುತ್ಪಾದಯಂತಿ ತೇ ॥ ೫೮ ॥

ತತ್ಕ್ರಮೇಣ ವಿವೃದ್ಧಂ ತು ಜಲಬುದ್ಬುದವತ್ಸ್ಥಿತಮ್ ।
ಭೂತೇಭ್ಯೋಽಂಡಂ ಮಹಾಬುದ್ಧೇ ಬೃಹತ್ತದುದಕೇಶಯಮ್ ॥ ೫೯ ॥

ಪ್ರಾಕೃತಂ ಬ್ರಹ್ಮರೂಪಸ್ಯ ವಿಷ್ಣೋಃ ಸ್ಥಾನಮನುತ್ತಮಮ್ ।
ತತ್ರಾವ್ಯಕ್ತಸ್ವರೂಪೋಽಸೌ ವಿಷ್ಣುರ್ವಿಶ್ವೇಶ್ವರಃ ಪ್ರಭುಃ ॥ ೬೦ ॥

ಒಂದಾಗಿಯೂ ಪುರುಷನೆಂಬ ವಿರಿಂಚನನ್ನು ಆಶ್ರಯಿಸುವುದರಿಂದಲೂ, ಪ್ರಕೃತಿಯಾದ ಪ್ರಧಾನದ ಅನುಗ್ರಹದಿಂದಲೂ, ಮಹತ್ತತ್ವ ಮೊದಲು ಪೃಥಿವ್ಯಂತವಾದುವೆಲ್ಲವೂ ಪ್ರಜಾಸೃಷ್ಟಿಯಲ್ಲಿ ಅಶಕ್ತವಾದುವು ; ಆಗ ಈ ದೇವತೆಗಳೆಲ್ಲರೂ ಬ್ರಹ್ಮಾಂಡಸೃಷ್ಟಿಯಲ್ಲಿ ಅಶಕ್ತರಾಗಿ ಶ್ರೀ ಹರಿಯನ್ನು ಹೊಂದಲು, ಶ್ರೀ ದೇವಿಯು ಜಲಮಧ್ಯದಲ್ಲಿ ಅಧೋಕ್ಷಜನ ವೀರ್ಯವಾದ ಹಿರಣ್ಯಾತ್ಮಕವಾದ ಬ್ರಹ್ಮಾಂಡವನ್ನು ಪಡೆದಳು.

೫೯. ಎಲೈ ಮಹಾಜ್ಞಾನಿಯಾದ ಭರದ್ವಾಜನೇ! ಕೇಳು ನೀರಿನಲ್ಲಿದ್ದ ಅಧೋಕ್ಷಜನ ಹಿರಣ್ಯಾತ್ಮಕವಾದ ವೀರ್ಯವು ನೀರಿನ ನೊರೆಯಂತಿದ್ದುದು ಕ್ರಮದಿಂದ ಪಂಚಭೂತಗಳಿಂದ ದೊಡ್ಡ ಅಂಡವಾಗಿ ಬೆಳೆಯಿತು.

೬೦. ಈ ಬ್ರಹ್ಮಾಂಡವು ಸಕಲ ಅಪ್ರಾಕೃತಾನಂತ ಕಲ್ಯಾಣಗುಣಗಳಿಂದ ಪೂರ್ಣನಾದುದರಿಂದ ಬ್ರಹ್ಮರೂಪನಾದ, ಎಲ್ಲೆಡೆಗಳಲ್ಲಿಯೂ ವ್ಯಾಪ್ತನಾಗಿರುವ ಶ್ರೀ ವಿಷ್ಣುವಿಗೆ ಶ್ರೇಷ್ಠವಾದ ಪ್ರಕೃತಿಜನ್ಯವಾದ ಆವಾಸಸ್ಥಾನವು. ಸಮಸ್ತ ಚರಾಚರಾತ್ಮಕವಾದ ಜಗತ್ತಿಗೆ ಒಡೆಯನೂ, ಸರ್ವಶಕ್ತನೂ, ಅವ್ಯಕ್ತಸ್ವರೂಪವುಳ್ಳವನೂ ಆದ ಆ ಮಹಾವಿಷ್ಣುವು ಆ ಬ್ರಹ್ಮಾಂಡದಲ್ಲಿ ಪ್ರಭುವಾಗಿರುತ್ತಾನೆ.

ಬ್ರಹ್ಮಸ್ವರೂಪಮಾಸ್ಥಾಯ ಸ್ವಯಮೇವ ವ್ಯವಸ್ಥಿತಃ ।
ಗರ್ಭೋದಕಂ ಸಮುದ್ರಾಶ್ಚ ತಸ್ಯಾಭೂವನ್ಮಹಾತ್ಮನಃ ॥ ೬೧ ॥

ಅದ್ರಿದ್ವೀಪ ಸಮುದ್ರಾಶ್ಚ ಸಜ್ಯೋತಿರ್ಲೋಕಸಂಗ್ರಹಃ ।
ತಸ್ಮಿನ್ನಂಡೇಽಭವತ್ಸರ್ವಂ ಸದೇವಾಸುರಮಾನುಷಮ್ ॥ ೬೨ ॥

ರಜೋಗುಣಯುತೋ ದೇವಃ ಸ್ವಯಮೇವ ಹರಿಃ ಪರಃ ।
ಬ್ರಹ್ಮರೂಪಂ ಸಮಾಸ್ಥಾಯ ಜಗತ್ಸೃಷ್ಟೌ ಪ್ರವರ್ತತೇ ॥ ೬೩ ॥

ಸೃಷ್ಟಂ ಚ ಪಾತ್ಯನುಯುಗಂ ಯಾವತ್ಕಲ್ಪವಿಕಲ್ಪನಾ ।
ನರಸಿಂಹಾದಿರೂಪೇಣ ರುದ್ರರೂಪೇಣ ಸಂಹರೇತ್ ॥ ೬೪ ॥

---

೬೧. ಬ್ರಹ್ಮಾಂಡಸೃಷ್ಟಿಗೆ ಮೊದಲು ಸ್ವತಂತ್ರನಾಗಿ, ಪರಬಹ್ಮಾತ್ಮಕನಾಗಿದ್ದನು. ಗರ್ಭೋದಕವೂ, ಸಮುದ್ರಗಳೂ, ಮಹಾತ್ಮನಾದ ಆ ನಾರಾಯಣನಿಗೆ ಆವಾಸದೆಡೆಯಾಗಿದ್ದುವು.

೬೨. ಆ ಬ್ರಹ್ಮಾಂಡವು ಸೃಷ್ಟವಾದ ಮೇಲೆ ಅದರಲ್ಲಿ ಸೂರ್ಯಾದಿಜ್ಯೋತಿರೂಪಗಳಿಂದ ಕೂಡಿದ ದೇವತೆಗಳು, ಅಸುರರು ಮತ್ತು ಮನುಜರು ಇವರಿಂದ ಯುಕ್ತವಾದ ಬೆಟ್ಟ, ದ್ವೀಪ, ಸಮುದ್ರಗಳು ಇವೇ ಮೊದಲಾದುವುಗಳೆಲ್ಲವೂ ಸೃಷ್ಟವಾದುವು.

೬೩. ಸರ್ವೋತ್ತಮನೂ, ಕ್ರೀಡಾದಿಗುಣಗಳಿಂದ ಕೂಡಿದವನೂ ಆದ ಶ್ರೀಹರಿಯು ಸ್ವೇಚ್ಛೆಯಿಂದ ತಾನೇ ರಜೋಗುಣಗಳಿಂದ ಕೂಡಿ ಚತುರ್ಮುಖ ಬ್ರಹ್ಮರೂಪದಲ್ಲಿ ಸನ್ನಿಹಿತನಾಗಿದ್ದು ಜಗತ್ಸೃಷ್ಟಿಕಾರ್ಯದಲ್ಲಿ ತೊಡಗುತ್ತಾನೆ.

೬೪. ಬ್ರಹ್ಮಕಲ್ಪಾನುಕಲ್ಪಗಳಿರುವವರೆಗೂ ಪ್ರತಿಯುಗದಲ್ಲಿ ಇಂತು ಸೃಷ್ಟವಾದ ಚೇತನಾಚೇತನಾತ್ಮಕವಾದ ಪ್ರಪಂಚವನ್ನು ವಿಷ್ಣುವು ಸ್ವಾಭಿನ್ನವಾದ ನರಸಿಂಹಾದ್ಯವತಾರರೂಪಗಳಿಂದ ರಕ್ಷಿಸುತ್ತಾನೆ ; ರುದ್ರರೂಪದಲ್ಲಿ ಸನ್ನಿಹಿತನಾಗಿದ್ದು ಪ್ರಳಯಕಾಲದಲ್ಲಿ ಆ ರುದ್ರರೂಪದಿಂದ ಜಗತ್ತನ್ನು ಲಯಮಾಡುತ್ತಾನೆ.

ಬ್ರಾಹ್ಮೇಣ ರೂಪೇಣ ಸೃಜತ್ಯನಂತೋ
ಜಗತ್ಸಮಸ್ತಂ ಪರಿಪಾತುಮಿಚ್ಛನ್ ।
ರಾಮಾದಿರೂಪಂ ಸ ತು ಪ್ರಾಪ್ಯ ಪಾತಿ
ಭೂತ್ವಾಽಥ ರುದ್ರಃ ಪ್ರಕರೋತಿ ನಾಶಮ್ ॥ ೬೫ ॥

---

೬೫. ನಾಶರಹಿತನೂ, ನಿತ್ಯನೂ ಆದ ಶ್ರೀಮನ್ನಾರಾಯಣನು ತಾನು ಚತುರ್ಮುಖಬ್ರಹ್ಮರೂಪದಲ್ಲಿದ್ದು, ಆ ಬ್ರಹ್ಮರೂಪದಿಂದ ಚರಾಚರಾತ್ಮಕವಾದ ಜಗತ್ತೆಲ್ಲವನ್ನೂ ಸೃಷ್ಟಿಸುತ್ತಾನೆ; ಇಂತು ಸೃಷ್ಟವಾದ ಜಗತ್ತನ್ನು ಕಾಪಾಡಲು ಅಪೇಕ್ಷಿಸಿ, ನಿತ್ಯವಾದ ಸ್ವರೂಪಾಂಶವಾದ ರಾಮಾದ್ಯವತಾರವನ್ನು ಅಭಿವ್ಯಂಜನ ಮಾಡಿ ರಕ್ಷಿಸುತ್ತಾನೆ; ಇಂತು ರಕ್ಷಿತವಾದ ಜಗತ್ತನ್ನು ಪ್ರಳಯಕಾಲದಲ್ಲಿ ರುದ್ರರೂಪದಲ್ಲಿ ಸನ್ನಿಹಿತನಾಗಿ ರುದ್ರನಾಗಿ ಲಯವನ್ನೆಸಗುತ್ತಾನೆ.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಸೃಷ್ಟಿಕಥನದಲ್ಲಿ

ಮೊದಲನೆಯ ಅಧ್ಯಾಯವು

ಮುಗಿದುದು

ಮೊದಲನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಮೊದಲನೆಯ ಅಧ್ಯಾಯದಲ್ಲಿ, ಮೊದಲು ಗ್ರಂಥವು ನಿರ್ವಿಘ್ನವಾಗಿ ಮುಗಿಯಲು ಮಂಗಳವನ್ನಾಚರಿಸಿ, ಅನಂತರ ಹಿಮವತ್ಪರ್ವತವೇ ಮೊದಲಾದ ಅನೇಕ ಪುಣ್ಯಸ್ಥಾನಗಳಲ್ಲಿದ್ದ ಮಹಾಜ್ಞಾನಿಗಳಾದ ಅನೇಕ ಮುನಿವೃಂದವು ಒಮ್ಮೆ ಮಾಘ ಮಾಸದಲ್ಲಿ ತೀರ್ಥಸ್ನಾನಕ್ಕಾಗಿ ಪ್ರಯಾಗ ಕ್ಷೇತ್ರಕ್ಕೆ ಬಂದು, ಅಲ್ಲಿ ಸ್ನಾನ ಜಪತಪಗಳನ್ನೆಸಗಿ, ಆ ತೀರ್ಥನಿವಾಸಿಯಾದ ಭರದ್ವಾಜಮುನಿಗೆರಗಿ ಅವರಿಂದ ತಾವೂ ಸತ್ಕೃತರಾಗಿ ಪರಸ್ಪರ ಶ್ರೀ ಕೃಷ್ಣಕಥಾಪ್ರಸಂಗ ಮಾಡುತ್ತಿದ್ದರು.

ಆ ಹೊತ್ತಿಗೆ ಅಲ್ಲಿಗೆ ಬಂದ ಮಹಾಜ್ಞಾನಿಗಳೂ, ವ್ಯಾಸಶಿಷ್ಯರೂ ಆದ ಸೂತರಾದ ಲೋಮಹರ್ಷಣರನ್ನು ವಂದಿಸಿ ಅವರಿಂದ ತಾವೂ ಸತ್ಕೃತರಾಗಿ ಭರದ್ವಾಜನ ಇಷ್ಟದಂತೆ ಯಥೋಚಿತನಾಗಿ ಕುಳಿತಿರುವಾಗ, ಭರದ್ವಾಜನು ರೋಮಹರ್ಷಣಿಯನ್ನು ಕುರಿತು ಸಕಲ ಮುನಿಗಳ ಪರವಾಗಿಯೂ ಇಂತು ಹೇಳುತ್ತಾನೆ.

ಹಿಂದೆ ಸೂತನಿಂದ ಶೌನಕನ ಸತ್ರಯಾಗದಲ್ಲಿ ವಾರಾಹಸಂಹಿತೆಯನ್ನು ಕೇಳಿದುದಾಯಿತು. ಈಗ ನಾವೆಲ್ಲರೂ ನರಸಿಂಹ ಪುರಾಣವನ್ನು ಕೇಳಲು ಕುತೂಹಲಿಗಳಾಗಿರುವೆವೆಂದು ಹೇಳಿ, ಈ ಚರಾಚರಾತ್ಮಕವಾದ ಪ್ರಪಂಚದ ಸೃಷ್ಟಿ, ಸ್ಥಿತಿ ಲಯಗಳಾಗುವುದೆಂತು? ಭೂಮಂಡಲದ ಪರಿಮಾಣವೇನು? ಶ್ರೀ ನರಸಿಂಹನನ್ನು ಪ್ರಸನ್ನೀಕರಿಸಿಕೊಳ್ಳಲು ಯಾವ ಕರ್ಮವನ್ನೆಸಗಬೇಕು? ಯುಗದ ಲೆಕ್ಕವು ಹೇಗೆ? ಯುಗಗಳ ವಿಶೇಷಗಳೇನು? ಈ ಕಲಿಯುಗದ ಅವಸ್ಥೆಯೇನು? ಮನುಷ್ಯೇತರರಾದ ದೇವತೆಗಳು ಶ್ರೀ ನರಸಿಂಹನನ್ನು ಹೇಗೆ ಪೂಜಿಸುವರು? ಪುಣ್ಯಕ್ಷೇತ್ರಗಳಾವುವು? ಮನುಷ್ಯರ ಪಾಪಪರಿಹಾರ ಮಾಡುವ ನದಿಗಳಾವುವು? ಪರ್ವತಾದಿಗಳಾವುವು? ಮನ್ವಂತರ ಸೃಷ್ಟಿಯ ಬಗೆಯೇನು? ಯಾವ ಯಜ್ವರು ಮತ್ತು ರಾಯರು ಭಗವಂತನನ್ನು ಸೇವಿಸಿ ಮುಕ್ತಿಯನ್ನು ಪಡೆದಿದ್ದಾರೆ? ಇವೆಲ್ಲವನ್ನೂ ತಿಳಿಸಬೇಕೆಂದು ಕೇಳಿಕೊಳ್ಳಲು, ಸೂತರು ಎಲ್ಲವನ್ನೂ ತಾನು ವ್ಯಾಸರ ಅನುಗ್ರಹದಿಂದ ತಿಳಿದಿರುವುದಾಗಿ ಹೇಳಿ, ಅನಂತರ ಬ್ರಹ್ಮಾಂಡದ ಒಳಗಣ ಸೃಷ್ಟಿಯನ್ನು ಸಂಕ್ಷೇಪವಾಗಿ ತಿಳಿಸಿ, ಭಗವಂತನು ಬ್ರಹ್ಮರೂಪದಿಂದ ಜಗತ್ತನ್ನು ಸೃಷ್ಟಿಸುವನು, ನರಸಿಂಹಾದಿ ರೂಪಗಳಿಂದ ರಕ್ಷಿಸುವನು, ರುದ್ರರೂಪದಿಂದ ಲಯ ಮಾಡುವನೆಂದು ಸಂಕ್ಷೇಪವಾಗಿ ಹೇಳಿದುದು ನಿರೂಪಿತವಾಗಿದೆ.

ಇಂತು ಮೊದಲನೆಯ ಅಧ್ಯಾಯದ ವಿಷಯ ಸಂಗ್ರಹವು

॥ ಶ್ರೀಃ ॥

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ದ್ವಿತೀಯೋಽಧ್ಯಾಯಃ

ಸರ್ಗರಚನಾ

॥ ಸೂತ ಉವಾಚ ॥

ಬ್ರಹ್ಮಾ ಭೂತ್ವಾ ಜಗತ್ಸೃಷ್ಟೌ ನರಸಿಂಹಃ ಪ್ರವರ್ತತೇ ।
ಯಥಾ ತೇ ಕಥಯಿಷ್ಯಾಮಿ ಭರದ್ವಾಜ ನಿಬೋಧ ಮೇ ॥ ೧ ॥

ನಾರಾಯಣಾಖ್ಯೋ ಭಗವಾನ್ ಬ್ರಹ್ಮಾ ಲೋಕಪಿತಾಮಹಃ ।
ಉತ್ಪನ್ನಃ ಪ್ರೋಚ್ಯತೇ ವಿದ್ವನ್ನಿತ್ಯೋಽಸಾವುಪಚಾರತಃ ॥ ೨ ॥

ಸೃಷ್ಟಿಕಾಂಡ ; ಎರಡನೆಯ ಅಧ್ಯಾಯವು

ಸರ್ಗರಚನೆಯು

ಸೂತರು ಭರದ್ವಾಜನಿಗೆ ಇಂತು ಹೇಳುತ್ತಾರೆ :—

೧. ಎಲೈ ಭರದ್ವಾಜನೇ! ಕೇಳು ; ಶ್ರೀ ನರಸಿಂಹನು ಚತುರ್ಮುಖಬ್ರಹ್ಮನಲ್ಲಿ ಬ್ರಹ್ಮರೂಪದಿಂದಿದ್ದು, ಜಗತ್ಸೃಷ್ಟಿಯಲ್ಲಿ ಹೇಗೆ ತೊಡಗುತ್ತಾನೆಂಬುದನ್ನು ನಿನಗೆ ಹೇಳುತ್ತೇನೆ.

೨. ಎಲೈ ವಿದ್ವಾಂಸನೇ! ಕೇಳು ; ನಿತ್ಯನೂ, ಭಗವಂತನೂ ಆದ ಈ ನಾರಾಯಣನೆಂಬುವನು ಲೋಕಪಿತಾಮಹನಾದ ಚತುರ್ಮುಖ ಬ್ರಹ್ಮರೂಪದಿಂದ ಹುಟ್ಟಿದನೆಂದು ಗೌಣವಾಗಿ ಹೇಳಲ್ಪಡುತ್ತಾನೆ, ಎಂದರೆ ನಾರಾಯಣನು ಚತುರ್ಮುಖ ಬ್ರಹ್ಮನಲ್ಲಿ ಬ್ರಹ್ಮರೂಪದಿಂದ ಸನ್ನಿಹಿತನಾಗಿರುತ್ತಾನೆಂಬ ಅಭಿಪ್ರಾಯವು.

ನಿಜೇನ ತಸ್ಯ ಮಾನೇನ ಆಯುರ್ವರ್ಷಶತಂ ಸ್ಮೃತಮ್ ।
ಕಾಲಶ್ಚ ವಿಪ್ರಜಸ್ತೇನ ತಸ್ಯಾಯುಃ ಪರಿಣಮ್ಯತೇ ॥ ೩ ॥

ಅನ್ಯೇಷಾಂ ಚೈವ ಭೂತಾನಾಂ ಚರಾಣಾಮಚರಾಶ್ಚ ಯೇ ।
ಭೂಭೂಭೃತ್ಸಾಗರಾದೀನಾಮಶೇಷಾಣಾಂ ಚ ಸತ್ತಮ ॥ ೪ ॥

ಸಂಖ್ಯಾ ಜ್ಞಾನಂ ಚ ತೇ ವಚ್ಮಿ ಮನುಷ್ಯಾಣಾಂ ನಿಬೋಧ ಮೇ ।
ಅಷ್ಟಾದಶನಿಮೇಷಾಸ್ತು ಕಾಷ್ಠೈಕಾ ಪರಿಕೀರ್ತಿತಾ ॥ ೫ ॥

ಕಾಷ್ಠಾಸ್ತ್ರಿಂಶತ್ಕಲಾ ಜ್ಞೇಯಾ ಕಲಾಸ್ತ್ರಿಂಶನ್ಮುಹೂರ್ತಕಮ್ ॥ ೬ ॥

---

೩. ಬ್ರಹ್ಮಮಾನದಿಂದ ಬ್ರಹ್ಮನಿಗೆ ನೂರು ವರ್ಷ ಆಯುಸ್ಸು ಇರುವುದು. ಪ್ರಜಾಶೂನ್ಯವಾದ ಪ್ರಳಯ ಕಾಲವು ಬ್ರಹ್ಮನ ಆಯುಸ್ಸಾಗಿ ಪರಿಣಾಮವನ್ನು ಹೊಂದುತ್ತದೆ. (ಶ್ರೀ ನರಸಿಂಹನು ಜಡಕಾಲಾಂತರ್ಯಾಮಿಯೂ, ಅದರ ನಿಯಾಮಕನೂ ಆಗಿರುವುದರಿಂದ ಕಾಲಶಬ್ದವಾಚ್ಯನಾಗಿರುವನು.)

೪–೫. ಶ್ರೇಷ್ಠನಾದ ಸತ್ಪುರುಷನೆನಿಸಿದ ಭರದ್ವಾಜನೇ! ಕೇಳು ; ಜಂಗಮಾತ್ಮಕವಾದ ಇತರ ಪ್ರಾಣಿಗಳ, ಸ್ಥಾವರಗಳಾಗಿರುವ ಸಕಲ ಭೂಮಿ, ಪರ್ವತ, ಸಾಗರ ಇವೇ ಮೊದಲಾದುವುಗಳ ಮತ್ತು ಮಾನವರ ಎಣಿಕೆಯ ಅರಿವನ್ನು ನಾನು ನಿನಗೆ ಈಗ ಹೇಳುತ್ತೇನೆ. ಇವನ್ನು ಶ್ರದ್ಧೆಯಿಂದ ಕೇಳು ; ಹದಿನೆಂಟು ಸಲ ರೆಪ್ಪೆ ಬಡಿಯುವಷ್ಟು ಕಾಲವು ಒಂದು ಕಾಷ್ಠವೆನಿಸುವುದು.

೬. ಮೂವತ್ತು ಕಾಷ್ಠಗಳು ಒಂದು ಕಲೆಯೆಂದು ತಿಳಿಯುವುದು. ಮೂವತ್ತು ಕಲೆಗಳು ಒಂದು ಮುಹೂರ್ತವು.

ತ್ರಿಂಶತ್ಸಂಖ್ಯೈರಹೋರಾತ್ರಂ ಮುಹೂರ್ತೈರ್ಮಾನುಷಂ ಸ್ಮೃತಮ್ ।
ಅಹೋರಾತ್ರಾಣಿ ತಾವಂತಿ ಮಾಸಃ ಪಕ್ಷದ್ವಯಾತ್ಮಕಃ ॥ ೭ ॥

ತೈಃ ಷಡ್ಭಿರಯನಂ ಮಾಸೈರ್ದ್ವೇಽಯನೇ ದಕ್ಷಿಣೋತ್ತರೇ ।
ಅಯನಂ ದಕ್ಷಿಣಂ ರಾತ್ರಿರ್ದೇವಾನಾಮುತ್ತರಂ ದಿನಮ್ ॥ ೮ ॥

ಅಯನದ್ವಿತಯಂ ವರ್ಷಂ ಮರ್ತ್ಯಾನಾಮಿಹ ಕೀರ್ತಿತಮ್ ।
ನೃಣಾಂ ಮಾಸಃ ಪಿತೄಣಾಂ ತು ಅಹೋರಾತ್ರಮುದಾಹೃತಮ್ ॥ ೯ ॥

ವಸ್ವಾದೀನಾಮಹೋರಾತ್ರಂ ಮಾನುಷೋ ವತ್ಸರಃ ಸ್ಮೃತಃ ।
ದಿವ್ಯೈರ್ವರ್ಷಸಹಸ್ರೈಸ್ತು ಯುಗಂ ತ್ರೇತಾದಿ ಸಂಜ್ಞಿತಮ್ ॥ ೧೦ ॥

---

೭. ಮೂವತ್ತು ಸಂಖ್ಯೆಯ ಮುಹೂರ್ತಗಳಿಂದ ಮಾನವರ ಒಂದು ಹಗಲು ಮತ್ತು ರಾತ್ರಿಯೆನಿಸುವುದು. ಮೂವತ್ತು ಹಗಲಿರುಳೂ ಶುಕ್ಲ ಕೃಷ್ಣಪಕ್ಷಗಳೆಂದು ಎರಡು ಪಕ್ಷಾತ್ಮಕವಾದ ಒಂದು ತಿಂಗಳೆನಿಸುವುದು. (ಒಂದು ಪಕ್ಷಕ್ಕೆ ಹದಿನೈದು ದಿವಸಗಳೆಂದು ತಿಳಿಯಬೇಕು.)

೮. ಆ ಆರು ತಿಂಗಳಿಂದ ಒಂದು ಅಯನವು. ಆ ಅಯನಗಳು ದಕ್ಷಿಣಾಯನ ಮತ್ತು ಉತ್ತರಾಯಣ ಎಂದು ಎರಡು. ದೇವತೆಗಳಿಗೆ ದಕ್ಷಿಣಾಯನವು ಒಂದು ಇರುಳು, ಉತ್ತರಾಯಣವು ಒಂದು ಹಗಲು ಎನಿಸುವುದು.

೯. ಈ ಪೊಡವಿಯಲ್ಲಿ ದಕ್ಷಿಣಾಯನೋತ್ತರಾಯಣಗಳೆರಡೂ ಸೇರಿ ಮರ್ತ್ಯರ ಒಂದು ವರ್ಷವೆನಿಸುವುದು. ನರರ ಒಂದು ತಿಂಗಳು ಪಿತೃಗಳಿಗೆ ಒಂದು ಹಗಲಿರುಳೆನಿಸುವುದು.

೧೦. ದೇವತೆಗಳಿಗೆ ದಕ್ಷಿಣಾಯನವೇ ರಾತ್ರಿಯು, ಉತ್ತರಾಯಣವೇ ಹಗಲು. ಮಾನವರ ಒಂದು ವತ್ಸರವು ವಸ್ವಾದಿದೇವತೆಗಳಿಗೆ ಒಂದು ಹಗಲಿರುಳೆನಿಸುವುದು. (ಇಂತಹ ಮುನ್ನೂರ ಅರುವತ್ತು ಅಹೋರಾತ್ರಗಳಿಂದ ದೇವತೆಗಳಿಗೆ ಒಂದು ವರ್ಷವಾಗುವುದೆಂದು ತಿಳಿಯಬೇಕು.) ಅಂತಹ ದಿವ್ಯವರ್ಷಗಳ ಅನೇಕ ಸಾವಿರ ವರ್ಷಗಳಿಗೆ ಕೃತತ್ರೇತಾದಿ ಸಂಜ್ಞಕವಾದ ಚತುರ್ಯುಗವೆಂದು ಹೆಸರು.

ಚತುರ್ಯುಗಂ ದ್ವಾದಶಭಿಸ್ತದ್ವಿಭಾಗಂ ನಿಬೋಧ ಮೇ ।
ಚತ್ವಾರಿ ತ್ರೀಣಿ ದ್ವೇ ಚೈಕಂ ಕೃತಾದಿಷು ಯಥಾಕ್ರಮಮ್ ॥ ೧೧ ॥

ದಿವ್ಯಾಬ್ದಾನಾಂ ಸಹಸ್ರಾಣಿ ಯುಗೇಷ್ವಾಹುಃ ಪುರಾವಿದಃ ।
ತತ್ಪ್ರಮಾಣೈಃ ಶತೈಃ ಸಂಧ್ಯಾ ಪೂರ್ವಾ ತತ್ರ ವಿಧೀಯತೇ ॥ ೧೨ ॥

ಸಂಧ್ಯಾಂಶಕಶ್ಚ ತತ್ತುಲ್ಯೋ ಯುಗಃ ಸ್ಯಾತ್ತತ್ರ ಭೋ ದ್ವಿಜ ।
ಸಂಧ್ಯಾಸಂಧ್ಯಾಂಶಯೋರ್ಮಧ್ಯೇ ಯಃ ಕಾಲೋ ವರ್ತತೇ ದ್ವಿಜ ॥ ೧೩ ॥

ಯುಗಾಖ್ಯಃ ಸ ತು ವಿಜ್ಞೇಯಃ ಕೃತತ್ರೇತಾದಿಸಂಜ್ಞಕಃ ।
ಕೃತಂ ತ್ರೇತಾ ದ್ವಾಪರಶ್ಚ ಕಲಿಶ್ಚೇತಿ ಚತುರ್ಯುಗಮ್ ॥ ೧೪ ॥

೧೧–೧೪. ಅಂತಹ ದೇವಮಾನದ ಹನ್ನೆರಡುಸಾವಿರ ವರ್ಷಗಳಿಂದ ಒಂದು ಬಾರಿ ಚತುರ್ಯುಗಗಳಾಗುವುವು. ಆ ಚತುರ್ಯುಗಗಳ ಪ್ರಕಾರವನ್ನು ಕೇಳು ; ಕೃತಯುಗಕ್ಕೆ ದಿವ್ಯವರ್ಷಗಳಲ್ಲಿ ನಾಲ್ಕು ಸಾವಿರವೂ, ತ್ರೇತಾಯುಗಕ್ಕೆ ಮೂರು ಸಾವಿರವೂ, ದ್ವಾಪರಯುಗಕ್ಕೆ ಎರಡುಸಾವಿರವೂ, ಕಲಿಯುಗಕ್ಕೆ ಒಂದುಸಾವಿರವೂ ಆದ ವರ್ಷಗಳು ಪ್ರಮಾಣವೆಂದು ಪೂರ್ವಿಕರು ಹೇಳುತ್ತಾರೆ. ಇದೂ ಅಲ್ಲದೆ ಕೃತಯುಗದ ಪೂರ್ವಸಂಧ್ಯೆ ನಾಲ್ನೂರು ವರ್ಷ ; ಉತ್ತರಸಂಧ್ಯೆ ನಾಲ್ನೂರು ವರ್ಷ ; ತ್ರೇತಾಯುಗಕ್ಕೆ ಪೂರ್ವಸಂಧ್ಯೆ ಮುನ್ನೂರು ವರ್ಷ ; ಅಪರಸಂಧ್ಯೆ ಮುನ್ನೂರು ವರ್ಷ ; ದ್ವಾಪರಯುಗಕ್ಕೆ ಮೊದಲಸಂಧ್ಯೆ ಇನ್ನೂರು ವರ್ಷ ; ಮುಂದಣಸಂಧ್ಯೆ ಇನ್ನೂರು ವರ್ಷ ; ಕಲಿಯುಗಕ್ಕೆ ಪ್ರಾತಃಸಂಧ್ಯೆ ನೂರು ವರ್ಷ ; ಸಾಯಂಸಂಧ್ಯೆ ನೂರುವರ್ಷ ; ಇಂತು ನಾಲ್ಕು, ಮೂರು, ಎರಡು, ಒಂದು, ಆದ ನೂರು ವರ್ಷಗಳಿಂದ ಆ ಯುಗಗಳ ಪೂರ್ವಸಂಧ್ಯೆಯುಂಟಾಗುತ್ತದೆ. ಅಷ್ಟೇ ಸಂಧ್ಯಾಂಶವುಳ್ಳದು ಅಪರಸಂಧ್ಯೆಯ ಕಾಲವು. ಎಲೈ ದ್ವಿಜನಾದ ಭರದ್ವಾಜನೇ! ಈ ಪೂರ್ವೋತ್ತರ ಸಂಧ್ಯೆಗಳ ಮಧ್ಯದ ಕಾಲವು ಯಾವುದೋ ಅದೇ ಕೃತ, ತ್ರೇತಾ ಮೊದಲಾದ ಹೆಸರುಳ್ಳ ಯುಗಕಾಲವು ಎಂದು ತಿಳಿಯಬೇಕು. ಕೃತ, ತ್ರೇತ, ದ್ವಾಪರ ಮತ್ತು ಕಲಿ ಎಂದು ಆ ಯುಗಗಳು ನಾಲ್ಕು.

ಪ್ರೋಚ್ಯತೇ ತತ್ಸಹಸ್ರಂ ತು ಬ್ರಹ್ಮಣೋ ದಿವಸಂ ದ್ವಿಜ ।
ಬ್ರಹ್ಮಣೋ ದಿವಸೇ ಬ್ರಹ್ಮನ್ಮನವಸ್ತು ಚತುರ್ದಶ ॥ ೧೫ ॥

ಭವಂತಿ ಪರಿಮಾಣಂ ಚ ತೇಷಾಂ ಕಾಲಕೃತಂ ಶೃಣು ।
ಸಪ್ತರ್ಷಯಸ್ತು ಶಕ್ರೋಽಥ ಮನುಸ್ತತ್ಸೂನವೋಽಪಿ ಯೇ ॥ ೧೬ ॥

ಏಕಕಾಲಂ ಹಿ ಸೃಜ್ಯಂತೇ ಸಂಹ್ರಿಯಂತೇ ಚ ಪೂರ್ವವತ್ ।
ಚತುರ್ಯುಗಾನಾಂ ಸಂಖ್ಯಾತಾ ಸಾಧಿಕಾ ಹ್ಯೇಕಸಪ್ತತಿಃ ॥ ೧೭ ॥

ಮನ್ವಂತರಂ ಮನೋಃ ಕಾಲಃ ಶಕ್ರಾದೀನಾಮಪಿ ದ್ವಿಜ ।
ಅಷ್ಟೌ ಶತಸಹಸ್ರಾಣಿ ದಿವ್ಯಯಾ ಸಂಖ್ಯಯಾ ಸ್ಮೃತಃ ॥ ೧೮ ॥

---

೧೫ ಈ ಸಂಧ್ಯಾಂಶಸಹಿತವಾದ ನಾಲ್ಕು ಯುಗಗಳು ಸಾವಿರ ಬಾರಿ ತಿರುಗಿ ಬಂದರೆ ಬ್ರಹ್ಮದೇವನಿಗೆ ಅದು ಒಂದು ಹಗಲು. ಆ ಬ್ರಹ್ಮದೇವನ ಒಂದು ಹಗಲಲ್ಲಿ ಹದಿನಾಲ್ಕು ಜನ ಮನುಗಳಾಗುವರು.

೧೬–೧೮. ಆ ಮನ್ವಂತರಗಳ ಕಾಲದಿಂದುಂಟಾದ ಪರಿಮಾಣವನ್ನು ಹೇಳುತ್ತೇನೆ, ಕೇಳು ; ಕಶ್ಯಪಾದಿ ಏಳು ಜನ ಋಷಿಗಳು, ಒಬ್ಬ ಇಂದ್ರ, ಒಬ್ಬ ಮನು ಆ ಮನುವಿನ ಮಕ್ಕಳು ಯಾರೋ ಅವರೆಲ್ಲರೂ ಏಕಕಾಲದಲ್ಲಿ ಎಂದರೆ ಒಂದು ಮನ್ವಂತರಕಾಲದಲ್ಲಿ ಸೃಷ್ಟಿಸಲ್ಪಟ್ಟು ಮೊದಲಿನಂತೆಯೇ ಸಂಹರಿಸಲ್ಪಡುತ್ತಾರೆ. ಕೃತಾದಿ ನಾಲ್ಕು ಯುಗಗಳು ಸ್ವಲ್ಪ ಹೆಚ್ಚಾದ ಎಪ್ಪತ್ತೊಂದು ಸಲ ತಿರುಗಿದರೆ, ಆಗ ಅದು ಒಂದು ಮನ್ವಂತರ ಕಾಲವಾಗುವುದು. (ದಿವ್ಯವರ್ಷಗಳಲ್ಲಿ ಐದು ಸಾವಿರದ ನೂರ ನಲವತ್ತೆರಡೂ, ಹತ್ತು ಮಾಸವೂ, ಎಂಟು ದಿವಸವೂ, ನಾಲ್ಕು ಯಾಮವೂ, ಎರಡು ಮುಹೂರ್ತಗಳೂ, ಎಂಟು ಕಲೆಯೂ, ಎಂಟು ನಿಮೇಷವೂ, ನಿಮೇಷದಲ್ಲಿ ಸಪ್ತಮಾಂಶವೂ ಆಗಿರುವುದು.) ಈ ಕಾಲವು ಶಕ್ರಾದಿದೇವತೆಗಳಿಗೂ ಸಮವು. ಎಲೈ ದ್ವಿಜನೇ ! ಕೇಳು ; ದೇವಮಾನದ ಎಣಿಕೆಯಿಂದ ಎಂಟುನೂರು ಸಾವಿರ ವರುಷಗಳೆಂದು ಹೇಳಿದೆ.

ದ್ವಿಪಂಚಾಶತ್ತಥಾಽನ್ಯಾನಿ ಸಪ್ತಚಾನ್ಯಾನಿ ವೈ ಮುನೇ ।
ವಿಂಶತಿಶ್ಚ ಸಹಸ್ರಾಣಿ ಕಾಲೋಽಯಂ ಸಾಧಿಕಃ ಸ್ಮೃತಃ ॥ ೧೯ ॥

ಬ್ರಾಹ್ಮಮೇಕಮಹರ್ಜ್ಞೇಯಮೇತದೇವಾನು ಕೀರ್ತಿತಮ್ ।
ವಿಶ್ವಸ್ಯಾದೌ ಸುಮನಸಾ ಸೃಷ್ಟ್ವಾ ದೇವಾಂಸ್ತಥಾ ಪಿತೄನ್ ॥ ೨೦ ॥

ಗಂಧರ್ವಾನ್ರಾಕ್ಷಸಾನ್ಯಕ್ಷಾನ್ಪಿಶಾಚಾನ್ಗುಹ್ಯಕಾಂಸ್ತಥಾ ।
ಋಷೀನ್ವಿದ್ಯಾಧರಾಂಶ್ಚೈವ ಮನುಷ್ಯಾಂಶ್ಚ ಪಶೂಂಸ್ತಥಾ ॥ ೨೧ ॥

ಪಕ್ಷಿಣಃ ಸ್ಥಾವರಾಂಶ್ಚೈವ ಪಿಪೀಲಿಕಭುಜಂಗಮಾನ್ ।
ಚಾತುರ್ವರ್ಣ್ಯಂ ತಥಾ ಸೃಷ್ಟ್ವಾ ನಿಯುಜ್ಯಾಧ್ವರಕರ್ಮಣಿ ॥ ೨೨ ॥

೧೯–೨೦. ಎಲೈ ಮುನಿಯೇ! ಕೇಳು; ಎಪ್ಪತ್ತೊಂಬತ್ತು ಸಾವಿರ ವರುಷಗಳಿಂದ ಸ್ವಲ್ಪ ಹೆಚ್ಚಾದ ಈ ಕಾಲವು ವಿರಂಚನ ಒಂದು ಹಗಲು, ಎಂದು ತಿಳಿಯುವುದು. ಈ ವಿಷಯವೇ ಹಿಂದೆ ನಿರೂಪಿಸಿರುವುದು. ಈ ವಿರಂಚನು ದೈನಂದಿನ ಸೃಷ್ಟಿಯಲ್ಲಿ ಸಂತಸದಿಂದ ಮೊದಲು ದೇವತೆಗಳನ್ನೂ, ಹಾಗೆಯೇ ಪಿತೃಗಳನ್ನೂ ಸೃಷ್ಟಿಸುತ್ತಾನೆ.

೨೧–೨೩. ತರುವಾಯ ಗಂಧರ್ವರನ್ನೂ, ರಾಕ್ಷಸರನ್ನೂ, ಯಕ್ಷರನ್ನೂ, ಪಿಶಾಚರನ್ನೂ, ಹಾಗೆಯೇ ಗುಹ್ಯಕರನ್ನೂ, ಋಷಿಗಳನ್ನೂ, ವಿದ್ಯಾಧರರನ್ನೂ, ಮನುಷ್ಯರನ್ನೂ, ಹಾಗೆಯೇ ಪಶುಗಳನ್ನೂ, ಪಕ್ಷಿಗಳನ್ನೂ, ಮರವೇ ಮುಂತಾದ ಸ್ಥಾವರಪ್ರಾಣಿಗಳನ್ನೂ, ಇರುವೆ ಮುಂತಾದ ಕೀಟಗಳನ್ನೂ, ಹಾವುಗಳನ್ನೂ ಹಾಗೆಯೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ವರು ಜಾತಿಯವರನ್ನೂ ಸೃಷ್ಟಿಮಾಡಿ ಅವರಿಗೆ ಉಚಿತಗಳಾದ ಕೆಲಸಗಳಲ್ಲಿ ತೊಡಗುವಂತೆ ಮಾಡಿ, ಪುನಃ

ಪುನರ್ದಿನಾಂತೇ ತ್ರೈಲೋಕ್ಯಮುಪಸಂಹೃತ್ಯ ಸ ಪ್ರಭುಃ ।
ಶೇಶೇ ಚಾನಂತಶಯನೇ ತಾವತೀಂ ರಾತ್ರಿಮವ್ಯಯಃ ॥ ೨೩ ॥

ತಸ್ಯಾಂತೇಽಭೂನ್ಮಹಾಕಲ್ಪೋ ಬ್ರಾಹ್ಮ ಇತ್ಯಭಿವಿಶ್ರುತಃ ।
ಯಸ್ಮಿನ್ಮತ್ಸ್ಯಾವತಾರೋಽಭೂನ್ಮಥನಂ ಚ ಮಹೋದಧೇಃ ॥ ೨೪ ॥

ತದ್ವದ್ವರಾಹಕಲ್ಪಶ್ಚ ತೃತೀಯಃ ಪರಿಕಲ್ಪಿತಃ ।
ಯತ್ರ ವಿಷ್ಣುಃ ಸ್ವಯಂ ಪ್ರೀತ್ಯಾ ವಾರಾಹಂ ವಪುರಾಶ್ರಿತಃ ॥ ೨೫ ॥

ಉದ್ಧರ್ತುಂ ವಸುಧಾಂ ದೇವೀಂ ಸ್ತೂಯಮಾನೋ ಮಹರ್ಷಿಭಿಃ ॥ ೨೬ ॥

ಹಗಲಿನ ಕೊನೆಯಲ್ಲಿ, ಸಮರ್ಥನೂ, ನಾಶರಹಿತನೂ ಆದ ಭಗವಂತನು ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕಗಳನ್ನೂ ತನ್ನಲ್ಲಿಯೇ ಅಡಗಿಸಿಕೊಂಡು ಶೇಷಶಯನದಲ್ಲಿ ರಾತ್ರಿಯೆಲ್ಲಾ ಯೋಗನಿದ್ರಾಸಕ್ತನಾಗಿರುತ್ತಾನೆ.

೨೪. ಆ ರಾತ್ರಿಯು ಕೊನೆಯಾಗಲು ಬ್ರಾಹ್ಮವೆಂಬ ಮಹಾಕಲ್ಪವು ಆಯಿತೆಂದು ಪ್ರಸಿದ್ಧವಾಗಿದೆ. ಯಾವ ಈ ಬ್ರಹ್ಮಕಲ್ಪದಲ್ಲಿ ಮತ್ಸ್ಯಾವತಾರವೂ, ಸಮುದ್ರಮಥನವೂ ಉಂಟಾದುವು.

೨೫-೨೬. ಬ್ರಾಹ್ಮಕಲ್ಪದಂತೆಯೇ ಮೂರನೆಯದಾಗಿ ವಾರಾಹಕಲ್ಪವೆಂದೆಣಿಸಿದೆ. ಈ ವಾರಾಹಕಲ್ಪದಲ್ಲಿ ಶ್ರೀ ಮಹಾವಿಷ್ಣುವು ಮಹರ್ಷಿಗಳಿಂದ ಹೊಗಳಿಸಿ ಕೊಳ್ಳುತ್ತಾ ಭೂದೇವಿಯನ್ನು ಉದ್ಧರಿಸಲು ವರಾಹಾವತಾರವನ್ನು ತಾಳಿದನು.

ಸೃಷ್ಟ್ವಾ ಜಗದ್ಯೋಮಧರಾತಂಮೇವಂ
ಪ್ರಜಾಶ್ಚ ಸೃಷ್ಟ್ವಾ ಸಕಲಾಸ್ತಥೇಶಃ ।
ನೈಮಿತ್ತಿಕಾಖ್ಯೇ ಪ್ರಲಯೇ ಸಮಸ್ತಂ
ಸಂಹೃತ್ಯ ಶೇತೇ ಹರಿರಾದಿದೇವಃ ॥ ೨೭ ॥

ಇತಿ ಶ್ರೀ ನರಸಿಂಹಪುರಾಣೇ ಸರ್ಗರಚನಾಯಾಂ ದ್ವಿತೀಯೋಽಧ್ಯಾಯಃ

---

೨೭. ಚೇತನರಿಂದ ಸಾಕಾಲ್ಯೇನ ತಿಳಿಯಲಾಗದ, ಆದಿದೇವನೂ, ಸರ್ವ ಲೋಕಸ್ವಾಮಿಯೂ ಆದ ಶ್ರೀ ಹರಿಯು ದೈಂನದಿನ ಸೃಷ್ಟಿಯಲ್ಲಿ ಜಗತ್ತು, ಆಕಾಶ ಮತ್ತು ಪೃಥಿವ್ಯಂತವಾದುವುಗಳನ್ನು ಸೃಷ್ಟಿಮಾಡಿ, ಹಾಗೆಯೇ ಸಕಲ ಪ್ರಜೆಗಳನ್ನೂ, ಸ್ಥೂಲದೇಹ ಪ್ರದಾನದ್ವಾರಾ ಸೃಷ್ಟಿಸಿ, ನೈಮಿತ್ತಿಕ ಪ್ರಳಯದಲ್ಲಿ ಎಲ್ಲವನ್ನೂ ತನ್ನಲ್ಲಿ ಅಡಗಿಸಿಕೊಂಡು ಅನಂತಶಯನದಲ್ಲಿ ಯೋಗನಿದ್ರಾಸಕ್ತನಾಗುತ್ತಾನೆ

ಇಂತು ನರಸಿಂಹಪುರಾಣದಲ್ಲಿ ಸೃಷ್ಟಿಪ್ರಕರಣದಲ್ಲಿ
ಎರಡನೆಯ ಅಧ್ಯಾಯವು
ಮುಗಿದುದು

ಎರಡನೆಯ ಅಧ್ಯಾಯದ ವಿಷಯಸಂಗ್ರಹವು

ಈ ಅಧ್ಯಾಯದಲ್ಲಿ ಶ್ರೀಮನ್ನಾರಾಯಣನು ಚತುರ್ಮುಖಬ್ರಹ್ಮನಲ್ಲಿ ಬ್ರಹ್ಮರೂಪದಿಂದಿದ್ದು ಜಗತ್ಸರ್ಜನವ್ಯಾಪಾರದಲ್ಲಿ ತೊಡಗುವನೆಂದು ಹೇಳಿ, ನಿಮೇಷ ಮೊದಲು ಬ್ರಾಹ್ಮಕಲ್ಪಾಂತಗಳಾದ ಕಾಲಪರಿಮಾಣಗಳನ್ನು ನಿರೂಪಿಸಿ, ಬ್ರಾಹ್ಮಕಲ್ಪದಲ್ಲಿ ಮತ್ಸ್ಯಾವತಾರವೂ, ಸಮುದ್ರಮಥನವೂ ನಡೆಯಿತು ; ವರಾಹಕಲ್ಪದಲ್ಲಿ ಶ್ರೀಮನ್ನಾರಯಣನು ಮುನಿಗಳ ಪ್ರಾರ್ಥನೆಯಂತೆ ಭೂದೇವಿಯನ್ನು ಉದ್ಧಾರ ಮಾಡಲು, ವರಾಹಾವತಾರವನ್ನು ಎತ್ತುವನು. ದೈನಂದಿನ ಸೃಷ್ಟಿ ಮತ್ತು ಪ್ರಳಯವನ್ನು ಶ್ರೀ ಹರಿಯೇ ಮಾಡುವನು, ಎಂದು ನಿರೂಪಿತವಾಗಿದೆ.

ಇಂತು ಎರಡನೆಯ ಅಧ್ಯಾಯದ ವಿಷಯಸಂಗ್ರಹವು

॥ ಶ್ರೀಃ ॥

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ತೃತೀಯೋಧ್ಯಾಯಃ

ಸೃಷ್ಟಿರಚನಾಪ್ರಕಾರಃ

॥ ಸೂತ ಉವಾಚ ॥

ತತ್ರ ಸುಪ್ತಸ್ಯ ದೇವಸ್ಯ ನಾಭೌ ಪದ್ಮಮಭೂನ್ಮಹತ್ ।
ತಸ್ಮಿನ್ಪದ್ಮೇ ಮಹಾಭಾಗ ವೇದವೇದಾಂಗ ಪಾರಗಃ ॥ ೧ ॥

ಬ್ರಹ್ಮೋತ್ಪನ್ನಃ ಸ ತೇನೋಕ್ತಃ ಪ್ರಜಾಂ ಸೃಜ ಮಹಾಮತೇ ।
ಏವಮುಕ್ತ್ವಾ ತಿರೋಭಾವಂ ಗತೋ ನಾರಾಯಣಃ ಪ್ರಭುಃ ॥ ೨ ॥

ಮೂರನೆಯ ಅಧ್ಯಾಯವು

ಸೃಷ್ಟಿರಚನೆಯ ಬಗೆಯು

ಸೂತರು ಭರದ್ವಾಜರಿಗೆ ಇಂತು ಹೇಳುತ್ತಾರೆ:—

೧–೨. ಆದಿ ಶೇಷನ ಮೇಲೆ ಮಲಗಿರುವ ಕ್ರೀಡಾದಿಗುಣವಿಶಿಷ್ಟನಾದ ನಾರಾಯಣನ ಹೊಕ್ಕಳಲ್ಲಿ ಒಂದು ದೊಡ್ಡ ಕಮಲವುಂಟಾಯಿತು. ಎಲೈ ಪುಣ್ಯಶಾಲಿಯಾದ ಭರದ್ವಾಜನೇ! ಆ ತಾವರೆಯಲ್ಲಿ ಋಗಾದಿ ಚತುರ್ವೇದಗಳು ಮತ್ತು ಶಿಕ್ಷಾದಿ ವೇದಾಂಗಗಳು ಇವುಗಳನ್ನು ಪೂರ್ಣವಾಗಿ ತಿಳಿದಿರುವ ಚತುರ್ಮುಖ ಬ್ರಹ್ಮನು ಹುಟ್ಟಿದನು. ಆ ಅನಂತಪದ್ಮನಾಭನು ಚತುರ್ಮುಖನನ್ನು ಕುರಿತು, ಎಲೈ ಮಹಾಮತಿಯಾದ ಚತುರ್ಮುಖನೇ! ಪ್ರಜೆಗಳನ್ನು ಸೃಷ್ಟಿಮಾಡು, ಎಂದು ಹೇಳಿ ಸರ್ವಶಕ್ತನಾದ ಶ್ರೀಮನ್ನಾರಾಯಣನು ಕಣ್ಮರೆಯಾದನು.

ತಥೇತ್ಯುಕ್ತ್ವಾ ಸ ತಂ ದೇವಂ ವಿಷ್ಣುಂ ಬ್ರಹ್ಮಾಽಥ ಚಿಂತಯನ್ ।
ಅಸ್ತೇ ಕಿಂಚಿಜ್ಜಗದ್ಬೀಜಂ ನಾಧ್ಯಗಚ್ಛತ ಕಿಂ ಚನ ॥ ೩ ॥

ತಾವತ್ತಸ್ಯ ಮಹಾನ್ರೋಷೋ ಬ್ರಹ್ಮಣೋಽಭೂನ್ಮಹಾತ್ಮನಃ ।
ತತೋ ಬಾಲಸ್ಸಮುತ್ಪನ್ನಸ್ತಸ್ಯಾಂಕೇ ರೋಷಸಂಭವಃ ॥ ೪ ॥

ಸ ರುದನ್ವಾರಿತಸ್ತೇನ ಬ್ರಹ್ಮಣಾ ವ್ಯಕ್ತಮೂರ್ತಿನಾ ।
ನಾಮ ಮೇ ದೇಹಿ ಚೇತ್ಯುಕ್ತಸ್ತಸ್ಯ ರುದ್ರೇತ್ಯಸೌ ದದೌ ॥ ೫ ॥

ಸೋಽಪಿ ತೇನ ಸೃಜಸ್ವೇತಿ ಪ್ರೋಕ್ತೋ ಲೋಕಮಿಮಂ ಪುನಃ ।
ಅಶಕ್ತಸ್ತತ್ರ ಸಲಿಲೇ ಮಮಜ್ಜ ತಪಸಾ ವೃತಃ ॥ ೬ ॥

---

೩. ಆ ಚತುರ್ಮುಖನೂ ಕಾಂತಿವಿಶಿಷ್ಟನಾದ ಆ ವಿಷ್ಣುವಿಗೆ "ಹಾಗೆಯೇ ಆಗಲಿ" ಎಂದು ಹೇಳಿ, ಆಲೋಚಿಸಲು ತೊಡಗಿ, ಜಗತ್ತಿಗೆ ಬೀಜಭೂತವಾವುದನ್ನೂ ತಿಳಿಯಲಿಲ್ಲವು

೪. ಅಷ್ಟು ಹೊತ್ತಿಗೆ ಮಹಾತ್ಮನಾದ ಚತುರ್ಮುಖನಿಗೆ ಹೆಚ್ಚು ಮುನಿಸುಂಟಾಯಿತು. ಬಳಿಕ ಅವನ ತೊಡೆಯ ಮೇಲೆ ರೋಷದಿಂದ ಜನಿಸಿದ ಬಾಲಕನೊಬ್ಬನುಂಟಾದನು.

೫. ಪ್ರಕಾಶಿತವಾದ ಸ್ವರೂಪವುಳ್ಳ ಆ ಚತುರ್ಮುಖ ಬ್ರಹ್ಮನು ಭಯದಿಂದ ಅಳುತ್ತಿದ್ದ ಆ ಬಾಲಕನ ರೋದನವನ್ನು ತಡೆದನು. ಆಗ ಆ ಬಾಲಕನು ನನಗೆ ಹೆಸರನ್ನು ಕೊಡೆಂದು ಕೇಳಲು, ಈ ಚತುರ್ಮುಖನು ಅವನಿಗೆ ರುದ್ರನೆಂಬ ಹೆಸರನ್ನಿತ್ತನು.

೬. ಪುನಃ ಬ್ರಹ್ಮನು ಆವನಿಗೆ "ನೀನು ಈ ಲೋಕವನ್ನು ಸೃಷ್ಟಿಸು ಎಂದು ಹೇಳಲು ಹಾಗೆ ಈ ಲೋಕವನ್ನು ಸೃಷ್ಟಿಸಲಾರದೆ, ತಪಸ್ಸಿನಲ್ಲಿ ಮನವು ತೊಡಗಿ, ಆ ನೀರಿನಲ್ಲಿಯೇ ತಪಸ್ಸಿಗಾಗಿ ಮುಳುಗಿದನು.

ತಸ್ಮಿನ್ಸಲಿಲಮಗ್ನೇ ತು ಪುನರನ್ಯಂ ಪ್ರಜಾಪತಿಃ ।
ಬ್ರಹ್ಮಾ ಸಸರ್ಜ ಭೂತೇಶೋ ದಕ್ಷಿಣಾಂಗುಷ್ಠತೋಽಪರಮ್ ॥ ೭ ॥

ದಕ್ಷಂ ವಾಮೇ ತತೋಽಂಗುಷ್ಠೇ ತಸ್ಯ ಪತ್ನೀ ವ್ಯಜಾಯತ ।
ಸ ತಸ್ಯಾಂ ಜನಯಾಮಾಸ ಮನುಂ ಸ್ವಾಯಂಭುವಂ ಪ್ರಭುಃ ॥ ೮ ॥

ತಸ್ಮಾತ್ಸಂಭಾವಿತಾ ಸೃಷ್ಟಿಃ ಪ್ರಜಾನಾಂ ಬ್ರಹ್ಮಣಾ ತದಾ ।
ಇತ್ಯೇವಂ ಕಥಿತಾ ಸೃಷ್ಟಿರ್ಮಯಾ ತೇ ಮುನಿಸತ್ತಮ ।
ಸೃಜತೋ ಜಗತೀಂ ತಸ್ಯ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೯ ॥

॥ ಭಾರದ್ವಾಜ ಉವಾಚ ॥

ಸಂಕ್ಷೇಪೇಣ ತದಾಖ್ಯಾತಂ ತ್ವಯಾ ನೋ ಲೋಮಹರ್ಷಣ ।
ವಿಸ್ತರೇಣ ಪುನರ್ಬ್ರೂಹಿ ಆದಿಸರ್ಗಂ ಮಹಾಮತೇ ॥ ೧೦ ॥

---

೭. ಆ ರುದ್ರನು ತಪಸ್ಸನ್ನು ಅನುಷ್ಠಿಸಲು ನೀರಿನಲ್ಲಿ ಮುಳುಗಿರಲು, ಪ್ರಜಾಪತಿಯೂ, ಸಕಲ ಪ್ರಾಣಿಗಳಿಗೂ ಒಡೆಯನೂ ಆದ ಆ ಬ್ರಹ್ಮನು ಮತ್ತೆ ಬಲದ ಹೆಬ್ಬೆರಲಿಂದ ಮತ್ತೋರ್ವ ದಕ್ಷನೆಂಬುವನನ್ನು ಸೃಷ್ಟಿಸಿದನು.

೮. ತರುವಾಯ ಎಡದ ಹೆಬ್ಬೆರಲಿಂದ ಅವನ ಪತ್ನಿಯು ಜನಿಸಿದಳು. ಸಮರ್ಥನಾದ ಆ ದಕ್ಷನು ಅವಳಲ್ಲಿ ಸ್ವಾಯಂಭುವನೆಂಬ ಮನುವನ್ನು ಪಡೆದನು.

೯. ಆಗ ಚತುರ್ಮುಖನಿಂದ ಪ್ರಜಾಸೃಷ್ಟಿಯು ಆ ಮನುವಿನಿಂದ ಮಾಡಿಸುವುದಾಯಿತು. ಎಲೈ ಮುನಿಶ್ರೇಷ್ಠನಾದ ಭರದ್ವಾಜನೇ! ನಿನಗೆ ನಾನು ಇಂತು ಪ್ರಜಾಸೃಷ್ಟಿಯನ್ನು ನಿರೂಪಿಸಿದೆನು. ಜಗತ್ತನ್ನು ಸೃಷ್ಟಿಸಲು ತೊಡಗಿದ ಆ ಬ್ರಹ್ಮನ ಮತ್ತಾವ ವಿಷಯವನ್ನು ಮತ್ತೂ ಕೇಳಲು ಬಯಸುತ್ತೀಯೆ?

೧೦. ಎಂದು ಸೂತರು ಕೇಳಲು ಭಾರದ್ವಾಜನು ಹೇಳುತ್ತಾನೆ:— ಎಲೈ ಮಹಾಮೇಧಾವಿಯಾದ ಲೋಮಹರ್ಷಣರೇ! ಆದಿಸೃಷ್ಟಿಯನ್ನು ನೀವು ಸಂಗ್ರಹವಾಗಿ ನನಗೆ ತಿಳಿಸಿದಿರಿ. ಅದನ್ನೇ ಮತ್ತೂ ವಿಸ್ತರಿಸಿ ಹೇಳಿರಿ, ಎಂದು ಭಾರದ್ವಾಜನು ಕೇಳಲು; ಆಗ ಸೂತರು ಹೇಳುತ್ತಾರೆ:—

॥ ಸೂತ ಉವಾಚ ॥

ತಥೈವ ಕಲ್ಪಾವಸಾನೇ ನಿಶಾ ಸುಪ್ತೋತ್ಥಿತಃ ಪ್ರಭುಃ ।
ಸತ್ವೋದ್ರಿಕ್ತಸ್ತದಾ ಬ್ರಹ್ಮಾ ಶೂನ್ಯಂ ಲೋಕಮನ್ವೈಕ್ಷತ ॥ ೧೧ ॥

ನಾರಾಯಣಃ ಪರೋಽಚಿಂತ್ಯಃ ಪೂರ್ವೇಷಾಮಪಿ ಪೂರ್ವಜಃ ।
ಬ್ರಹ್ಮಸ್ವರೂಪೀ ಭಗವಾನನಾದಿಃ ಸರ್ವಸಂಭವಃ ॥ ೧೨ ॥

ಇಮಂ ಚೋದಾಹರಂತ್ಯತ್ರ ಶ್ಲೋಕಂ ನಾರಾಯಣಂ ಪ್ರತಿ ।
ಬ್ರಹ್ಮಸ್ವರೂಪಿಣಂ ದೇವಂ ಜಗತಃ ಪ್ರಭವಾತ್ಮಕಮ್ ॥ ೧೩ ॥

---

೧೧. ಹಾಗೆಯೇ ಕಲ್ಪಕಾಲವು ಕಳೆಯಲು, ಸರ್ವಶಕ್ತನಾದ ಶ್ರೀಮದನಂತ ಪದ್ಮನಾಭನು ರಾತ್ರಿಯ ಯೋಗನಿದ್ರೆಯಿಂದೆದ್ದನು. ಆಗ ಗುಣಪೂರ್ಣನಾದ ಆ ನಾರಾಯಣನು ಸತ್ವಗುಣದಿಂದ ಕೂಡಿ ಜಗತ್ತು ಶೂನ್ಯವಾಗಿರುವುದನ್ನು ಕಂಡನು

೧೨. ಸರ್ವೋತ್ತಮನೂ, ಸಾಕಲ್ಯವಾಗಿ ಯಾರಿಂದಲೂ ಚಿಂತಿಸಲಾಗದವನೂ, ಪೂರ್ವಿಕರಾದ ಚತುರ್ಮುಖಾದಿಗಳಿಗೂ ಮೊದಲಿದ್ದವನೂ, ಅನಂತಕಲ್ಯಾಣ ಗುಣ ಪರಿಪೂರ್ಣವಾದ ಸ್ವರೂಪವುಳ್ಳವನೂ, ಅವ್ಯಾಹತಷಡ್ಗುಣೈಶ್ವರ್ಯಪೂರ್ಣನೂ ಉತ್ಪತ್ತಿರಹಿತನೂ, ಸರ್ವಸೃಷ್ಟಿಕರ್ತೃವೂ ಆದವನು ಕ್ಷೀರಾಬ್ಧಿಶಾಯಿಯಾದ ಶ್ರೀಮನ್ ನಾರಾಯಣನು.

೧೩. ಬ್ರಹ್ಮಸ್ವರೂಪಿಯೂ, ಕ್ರೀಡಾದಿಗುಣವಿಶಿಷ್ಟನೂ, ಲೋಕಗಳ ಸೃಷ್ಟಿ ಕರ್ತೃವೂ, ಆದ ಶ್ರೀಮನ್ನಾರಾಯಣನ ವಿಷಯದಲ್ಲಿ ಜ್ಞಾನಿಗಳು ಈ ಶ್ಲೋಕವನ್ನು ಹೇಳುತ್ತಾರೆ.

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣಃ ಸ್ಮೃತಃ ॥ ೧೪ ॥

ಸೃಷ್ಟಿಂ ಚಿಂತಯತಸ್ತಸ್ಯ ಕಲ್ಪಾದಿಷು ಯಥಾ ಪುರಾ ।
ಅಬುದ್ಧಿಪೂರ್ವಕಂ ತಸ್ಯ ಪ್ರಾದುರ್ಭೂತಂ ತಮಸ್ತದಾ ॥ ೧೫ ॥

ತಮೋ ಮೋಹೋ ಮಹಾಮೋಹಸ್ತಾಮಿಸ್ರೋಹ್ಯಂಧಸಂಜ್ಞಿಕಃ ।
ಅವಿದ್ಯಾ ಪಂಚಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಃ ॥ ೧೬ ॥

ಪಂಚಧಾ ವೇಷ್ಟಿತಃ ಸರ್ಗೋ ಧ್ಯಾಯತಃ ಪ್ರತಿಬೋಧವಾನ್ ।
ಮುಖ್ಯಸರ್ಗಃ ಸ ವಿಜ್ಞೇಯಃ ಸರ್ಗಸಿದ್ಧಿವಿಚಕ್ಷಣೈಃ ॥ ೧೭ ॥

---

೧೪. ನಾಶರಹಿತನಾದ ನರನೆಂಬ ಹೆಸರಿನ ಪರಮಾತ್ಮನಿಂದ ಹುಟ್ಟಿದುದರಿಂದ ನೀರು 'ನಾರಾ' ಎನಿಸಿಕೊಳ್ಳುತ್ತದೆ. ಜಗತ್ಸೃಷ್ಟಿಗೆ ಮುಂಚೆ ತಾನು ಸೃಷ್ಟಿಸಿದ ಆ ನೀರಿನಲ್ಲಿ ಸಾವಿರ ವರ್ಷಗಳನ್ನು ವಾಸಮಾಡಿದನು. ಆದುದರಿಂದ ಆ ನೀರೇ ವಾಸಸ್ಥಾನವಾಗಿರುವವನು ನಾರಾಯಣನು ಎಂದು ಕರೆಸಿಕೊಳ್ಳುತ್ತಾನೆ.

೧೫. ಪೂರ್ವಸೃಷ್ಟಿಯಲ್ಲಿ ಹೇಗೋ ಹಾಗೆ ಸೃಷ್ಟಿಕರ್ಮವನ್ನು ಧ್ಯಾನಿಸುತ್ತಿದ್ದ ಆ ಬ್ರಹ್ಮದೇವನ ದೆಸೆಯಿಂದ ತಮಃ ಪ್ರಚುರವಾದ ಸೃಷ್ಟಿಯು ಶ್ರೀ ಹರಿಬುದ್ಧಿ ಪೂರ್ವಕವಾಗಿಯೇ ಉಂಟಾಯಿತು.

೧೬. ಮಹಾತ್ಮನಾದ ಚತುರ್ಮುಖನಿಂದ ತಮಸ್ಸು, (ಶಾರ್ವರ) ವ್ಯತ್ಯಾಸವಾದ ತಿಳುವಳಿಕೆಯೆಂಬ ಮೋಹವು, ಅದರಲ್ಲಿ ಆಗ್ರಹವೆಂಬ ಮಹಾಮೋಹವು, ಕ್ರೋಧವೆಂಬ ತಾಮಿಸ್ರವು, ಮತ್ತು ಮರಣವೆಂಬ ಅಂಧ ತಾಮಿಸ್ರವು ಈ ಐದು ಪ್ರಕಾರವಾದ ಅವಿದ್ಯೆಯು ಉತ್ಪನ್ನವಾಯಿತು.

೧೭. ಆ ಸಮಯದಲ್ಲಿ ಧ್ಯಾನಮಾಡುತ್ತಲಿದ್ದ ಬ್ರಹ್ಮದೇವನ ದೆಸೆಯಿಂದ ಮರ, ಪೊದೆ, ಬಳ್ಳಿ, ಗಿಡ, ಹುಲ್ಲು ಎಂದು ಐದು ಬಗೆಯಾದ ಸ್ಥಾವರಗಳ ಸ್ವರೂಪ ಸೃಷ್ಟಿಯಾಯಿತು. ಸೃಷ್ಟಿಕಾರ್ಯವನ್ನು ತಿಳಿದವರು ಅದು ಮುಖ್ಯಸರ್ಗವೆಂದು ತಿಳಿಯುವರು.

ಯತ್ಪುನರ್ಧ್ಯಾಯತಸ್ತಸ್ಯ ಬ್ರಹ್ಮಣಃ ಸಮಪದ್ಯತ ।
ತಿರ್ಯಕ್ಸ್ರೋತಸ್ತತಸ್ತಸ್ಮಾತ್ತಿರ್ಯಗ್ಯೋನಿಸ್ತತಃ ಸ್ಮೃತಃ ॥ ೧೮ ॥

ಪಶ್ವಾದಯಸ್ತೇ ವಿಖ್ಯಾತಾ ಉತ್ಪಥಗ್ರಾಹಿಣಶ್ಚ ಯೇ ।
ತಮಪ್ಯಸಾಧಕಂ ಮತ್ವಾ ತಿರ್ಯಗ್ಯೋನ್ಯಂ ಚತುರ್ಮುಖಃ ॥ ೧೯ ॥

ಊರ್ಧ್ವಂ ಸ್ರೋತಸ್ತೃತೀಯಸ್ತು ಸಾತ್ವಿಕಃ ಸಮವರ್ತತ ।
ತದಾ ತುಷ್ಟೋऽನ್ಯಸರ್ಗಂ ಚ ಚಿಂತಯಾಮಾಸ ವೈ ಪ್ರಭುಃ ॥ ೨೦ ॥

---

೧೮. ಪುನಃ ಧ್ಯಾನಾಸಕ್ತನಾದ ಬ್ರಹ್ಮನು ತಿರ್ಯಕ್ಸ್ರೋತಸ್ಸುಗಳೆಂಬುದನ್ನು ಸೃಷ್ಟಿಸಿದನು. ಇದಕ್ಕೆ ತಿರ್ಯಕ್ಪ್ರವೃತ್ತಿಯುಂಟಾದುದರಿಂದ ತಿರ್ಯಕ್ಸ್ರೋತಸ್ಸೆಂದು ಹೆಸರಾಯಿತು.

೧೯–೨೦. ಆ ತಿರ್ಯಕ್ಸ್ರೋತಸ್ಸುಗಳು ಪಶುಪಕ್ಷ್ಯಾದಿಗಳೆಂದು ಪ್ರಸಿದ್ಧವಾಗಿವೆ. ಅವು ಅಜ್ಞಾನ ಪ್ರಚುರವಾದುವು. ಆಹಾರ ನಿದ್ರಾದಿಗಳಿಂದ ಬೇರೆಯಾದ ವಿಷಯ ಗಳಲ್ಲಿ ಜ್ಞಾನವಿಲ್ಲದುವು ; ಮಾತೃಗಮನಾದಿ ಮಾರ್ಗಗಳಲ್ಲಿ ತೊಡಗುವುವು ; ಅಯಥಾರ್ಥಜ್ಞಾನವನ್ನು ಯಥಾರ್ಥಜ್ಞಾನವೆಂದು ಭಾವಿಸುವುವು. ಚತುರ್ಮುಖನು ಪುರುಷಾರ್ಥಕ್ಕೆ ತಿರ್ಯಕ್ಸ್ರೋತಸ್ಸುಗಳು ಅನುಪಯುಕ್ತಗಳೆಂದು ತಿಳಿದು, ಮೂರನೆ ಯದಾದ ಸತ್ವಗುಣಪ್ರಚುರವಾದ ಊರ್ಧ್ವಸ್ರೋತಸ್ಸುಗಳೆಂಬುದನ್ನು ಸೃಷ್ಟಿಸಿದನು. (ಈ ಮೂರನೆಯ ಸೃಷ್ಟಿಯು ದೇವಸೃಷ್ಟಿಯು) ಅದರಿಂದ ಬ್ರಹ್ಮನು ಸಂತೋಷಗೊಂಡು ಮತ್ತೊಂದರ ಸೃಷ್ಟಿಯನ್ನು ಚಿಂತಿಸಿದನು.

ತತಶ್ಚಿಂತಯತಸ್ತಸ್ಯ ಸರ್ಗವೃದ್ಧಿಂ ಪ್ರಜಾಪತೇಃ ।
ಅಸಾಧುಕಾಂಸ್ತಥಾ ಮತ್ವಾ ಮುಖ್ಯಸರ್ಗಸಮುದ್ಭವಾನ್ ।
ತತಃ ಶ್ರುತಿಮಯಂ ವಿಪ್ರ ಅರ್ವಾಕ್ಸ್ರೋತಸ್ತು ಸ ಸ್ಮೃತಃ ।
ಅರ್ವಾಕ್ಸ್ರೋತಸ್ಸಮುತ್ಪನ್ನಾ ಮನುಷ್ಯಾಃ ಸಾಧಕಾ ಮತಾಃ ॥ ೨೧ ॥

ತೇ ಚ ಪ್ರಕಾಶಬಹುಲಾಸ್ತಮೋಯುಕ್ತಾ ರಜೋಽಧಿಕಾಃ ।
ತಸ್ಮಾತ್ತೇ ದುಃಖಬಹುಲಾ ಭೂಯೋ ಭೂಯಶ್ಚ ಕಾರಿಣಃ ॥ ೨೨ ॥

---

೨೧. ಜಗತ್ಸೃಷ್ಟಿಯ ಬೆಳವಣಿಗೆಯನ್ನು ಚಿಂತಿಸುತ್ತಲಿದ್ದ ಪ್ರಜಾಪತಿಯಾದ ಚತುರ್ಮುಖನಿಂದ (ಅವ್ಯಕ್ತರೂಪವಾದ ಪ್ರಕೃತಿಯಿಂದ) ಪುರುಷಾರ್ಥದಲ್ಲಿ ಸಾಧಕವಾದ ಅರ್ವಾಕ್ಸ್ರೋತಸ್ಸೆಂಬ ಮಾನವ ಸೃಷ್ಟಿಯುಂಟಾಯಿತು. ಎಲೈ ದ್ವಿಜನೇ! ಬ್ರಹ್ಮನು ಮುಖ್ಯ ಸೃಷ್ಟಿಯಲ್ಲಿ ಹುಟ್ಟಿದ ಅವನ್ನು ಅಂತು ಸಾಧಕಗಳಲ್ಲ ವೆಂದು ತಿಳಿದುದರಿಂದ ಅವಕ್ಕೆ ಅರ್ವಾಕ್ಸ್ರೋತಗಳೆಂದು ಹೆಸರು.

೨೨. ಮನುಷ್ಯರು ಧರ್ಮಾದಿ ಪುರುಷಾರ್ಥಗಳಿಗೆ ಕಾರಣವಾದ ಪ್ರಯತ್ನ ಗಳಿಲ್ಲದೇ ಪ್ರಾಯಃ ಅಧೋಗತಿಯುಳ್ಳವರಾದುದರಿಂದ ಅವರಿಗೆ ಅರ್ವಾಕ್ಸ್ರೋತಸ ರೆಂಬ ಹೆಸರು ಅನ್ವರ್ಥವಾಗಿದೆ. ಅವರು ಸತ್ವಗುಣೋದ್ರಿಕ್ತರಾಗಿ ಜ್ಞಾನಾಧಿಕರೆಂಬು ದಾಗಿಯೂ, ತಪೋದ್ರಿಕ್ತರಾಗಿ ತಾಮಸ ಕಾರ್ಯಾಸಕ್ತರೆಂಬುದಾಗಿಯೂ, ರಜದ ಉದ್ರೇಕದಿಂದ ರಜೋನಿಷ್ಠರೆಂಬುದಾಗಿಯೂ, ಮೂರು ವಿಧವಾಗಿದ್ದಾರೆ. ಆದುದ ರಿಂದ ಸಾತ್ವಿಕರು ಬಹಿರಂತರ್ವಿಷಯಗಳಲ್ಲಿ ವಿಶೇಷವಾಗಿ ಜ್ಞಾನವುಳ್ಳವರಾಗಿಯೂ, ರಾಜಸರು ಅಡಿಗಡಿಗೆ ಕರ್ಮಪರರಾಗಿಯೂ, ತಾಮಸರು ಪ್ರಚುರವಾಗಿ ದುಃಖ ವುಳ್ಳವರಾಗಿಯೂ- ಈ ಮೂರು ತೆರನಾದ ಮನುಷ್ಯರೂ ತಂತಮ್ಮ ಗತಿಸಾಧಕ ರಾಗಿರುತ್ತಾರೆ.

ಏತತ್ತೇ ಕಥಿತಾಃ ಸರ್ಗಾ ಬಹವೋ ಮುನಿಸತ್ತಮ ।
ಪ್ರಥಮಂ ಮಹತಃ ಸರ್ಗಸ್ತನ್ಮಾತ್ರಾಣಾಂ ದ್ವಿತೀಯಕಃ ॥ ೨೩ ॥

ವೈಕಾರಿಕಸ್ತೃತೀಯಸ್ತು ಸರ್ಗ ಐಂದ್ರಿಯಕಃ ಸ್ಮೃತಃ ।
ಮುಖ್ಯ ಸರ್ಗಶ್ಚತುರ್ಥಸ್ತು ಮುಖ್ಯಾ ವೈ ಸ್ಥಾವರಾಃ ಸ್ಮೃತಾಃ ॥ ೨೪ ॥

ತಿರ್ಯಕ್ಸ್ರೋತಸ್ಸ ಯಃ ಪ್ರೋಕ್ತಸ್ತಿರ್ಯಗ್ಯೋನಿಃ ಸ ಉಚ್ಯತೇ ।
ತತೋರ್ಧ್ವಸ್ರೋತಸಃ ಷಷ್ಠೋ ದೇವಸರ್ಗಸ್ತು ಸ ಸ್ಮೃತಃ ॥ ೨೫ ॥

ತತೋಽರ್ವಾಕ್ಸ್ರೋತಸಃ ಸರ್ಗಃ ಸಪ್ತಮೋ ಮಾನುಷಃ ಸ್ಮೃತಃ ।
ಅಷ್ಟಮೋಽನುಗ್ರಹಃ ಸರ್ಗಃ ಸಾತ್ವಿಕೋಽಯಮುದಾಹೃತಃ ॥ ೨೬ ॥

---

೨೩. ಎಲೈ ಭಾರದ್ವಾಜನೆ! ನಿನಗೆ ಆ ರೀತಿಯ ಅನೇಕವಾದ ಸೃಷ್ಟಿಗಳನ್ನು ನಿರೂಪಿಸಿದುದಾಯಿತು. ಮೊದಲನೆಯುದು ಮಹತ್ತತ್ವಸೃಷ್ಟಿಯು. (ಚತುರ್ಮುಖನ ಶರೀರವು) ಎರಡನೆಯುದು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ತನ್ಮಾತ್ರಗಳ ಸೃಷ್ಟಿಯು (ಅದೇ ಭೂತಸರ್ಗವೆಂಬುದು.)

೨೪. ಇಂದ್ರಿಯಗಳು ಮತ್ತು ಇಂದ್ರಿಯಾಭಿಮಾನಿದೇವತೆಗಳು- ಇವರ ಸೃಷ್ಟಿಯು ಮೂರನೆಯುದಾದ ವೈಕಾರಿಕಾಹಂಕಾರ ಸೃಷ್ಟಿಯು. ಮುಖ್ಯಸರ್ಗವೆಂಬ ನಾಲ್ಕನೆಯುದಾದ ಸ್ಥಾವರ ಸೃಷ್ಟಿಯು ಮುಖ್ಯಸೃಷ್ಟಿಯೆಂದು ಹೇಳಿಸಿಕೊಳ್ಳುತ್ತದೆ.

೨೫. ತಿರ್ಯಕ್ಪ್ರಾಣಿಗಳ ಉತ್ಪತ್ತಿರೂಪವಾದ ತಿರ್ಯಕ್ಸ್ರೋತಸ್ಸೆಂಬ ಸೃಷ್ಟಿಯು ತಿರ್ಯಗ್ಯೋನಿಯೆನಿಸಿಕೊಳ್ಳುತ್ತದೆ. ಆರನೆಯುದಾದ ಊರ್ಧ್ವಸ್ರೋತಸವೆಂಬ ಸೃಷ್ಟಿಯು ದೇವಸೃಷ್ಟಿಯೆನಿಸಿಕೊಳ್ಳುತ್ತದೆ.

೨೬. ಅನಂತರದಲ್ಲಿ ಅರ್ವಾಕ್ಸ್ರೋತಸವೆಂಬ ಸೃಷ್ಟಿಯು ಏಳನೆಯುದಾದ ಮಾನವಸೃಷ್ಟಿಯು. ಯಾವುದು ಸಾತ್ವಿಕವೆಂದು ಹಿಂದೆ ಹೇಳಿತೋ ಆ ಅನುಗ್ರಹ ಸೃಷ್ಟಿಯು ಎಂಟನೆಯುದು.

ನವಮೋ ರುದ್ರಸರ್ಗಸ್ತು ನವಸರ್ಗಾಃ ಪ್ರಜಾಪತೇಃ ।
ಪ್ರಾಕೃತಾ ವೈಕೃತಾಶ್ಚೈವ ಜಗತೋ ಮೂಲಹೇತವಃ ।
ಸೃಜತೋ ಬ್ರಹ್ಮಣಃ ಸೃಷ್ಟಿಮುತ್ಪನ್ನಾ ಯೇ ಮಯೇರಿತಾಃ ॥ ೨೭ ॥

ತಂ ತಂ ವಿಕಾರಂ ಚ ಪರಂ ಪರೇಶೋ
ಮಾಯಾಮಧಿಷ್ಠಾಯ ಸೃಜತ್ಯನಂತಃ ।
ಅವ್ಯಕ್ತರೂಪೀ ಪರಮಾತ್ಮಸಂಜ್ಞಃ
ಸಂಪ್ರೇರ್ಯಮಾಣೋ ನಿಖಿಲಾತ್ಮವಿದ್ಯಃ ॥ ೨೮ ॥

ಇತಿ ಶ್ರೀ ನರಸಿಂಹಪುರಾಣೇ ಸೃಷ್ಟಿರಚನಾಪ್ರಕಾರೋ ನಾಮ
ತೃತೀಯೋಽಧ್ಯಾಯಃ

---

೨೭. ಒಂಬತ್ತನೆಯದು ರುದ್ರಸರ್ಗವು. ಇಂತು ಪ್ರಜಾಪತಿಯಾದ ಚತುರ್ಮುಖನು ಮಾಡಿದ ಸೃಷ್ಟಿಯು ಒಂಬತ್ತು ತೆರನಾಗಿರುವುದು. ಅವುಗಳಲ್ಲಿ ಐದು ವೈಕೃತಸೃಷ್ಟಿಗಳು. ಮೂರು ಪ್ರಾಕೃತಸೃಷ್ಟಿಗಳು ಎನಿಸಿಕೊಳ್ಳುತ್ತವೆ. ಒಂಬತ್ತನೆಯದು ಕೌಮಾರವು.

೨೮. ಪ್ರಾಕೃತರಾದ ದೇವತೆಗಳ ಸೃಷ್ಟಿಯು ವಿಕೃತವಾದ ಬ್ರಹ್ಮಾಂಡದ ಒಳಗಣ ಭಾಗದಲ್ಲಿ ಜನಿಸಿದುದರಿಂದ ಪ್ರಾಕೃತವೂ, ವೈಕೃತವೂ ಆಗಿದೆ. ಜಗತ್ತನ್ನು ಸೃಷ್ಟಿಮಾಡುವ ಪರಬ್ರಹ್ಮನು ಜಗತ್ತಿಗೆ ಮೂಲಕಾರಣಗಳಾಗಿ ಮಾಡಿದ ಸೃಷ್ಟಿಯನ್ನು ನಿನಗೆ ಈಗ ನಾನು ನಿರೂಪಿಸಿದೆನು.

ಸ್ವತಃ ಅವ್ಯಕ್ತಸ್ವರೂಪನೂ (ಅಚಿಂತ್ಯಾದ್ಭುತಶಕ್ತಿಯಿಂದ ಭಕ್ತರಿಗೆ ಅಭಿವ್ಯಕ್ತಸ್ವರೂಪನೂ) ಪರಮಾತ್ಮನೆಂದು ಹೆಸರುಳ್ಳವನೂ, ಸಕಲ ಜಗತ್ತಿಗೆ ಪ್ರೇರಕನೂ, ಪೂರ್ಣಜ್ಞಾನನೂ ಎಂದರೆ ಸರ್ವಜ್ಞನೂ, ಸರ್ವೋತ್ತಮನಾದ ಒಡೆಯನೂ ಆದ ನಾಶರಹಿತನೆನಿಸಿದ ಭಗವಂತನು ಸ್ವಾಧೀನವಾದ ಪ್ರಕೃತಿಯನ್ನು ಹೊಂದಿ, ಸ್ವೇಚ್ಛೆಯಿಂದ ಬೇರೆಬೇರೆಯಾದ ಆಯಾ ವಿಕಾರಗಳನ್ನುಂಟುಮಾಡಿ ಸೃಷ್ಟಿಸುತ್ತಾನೆ.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಸೃಷ್ಟಿರಚನೆಯ ಬಗೆಯೆಂಬ
ಮೂರನೆಯ ಅಧ್ಯಾಯವು ಮುಗಿಯಿತು.

ಮೂರನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ ಪಂಚಪರ್ವಗಳಾಗಿರುವ ಅವಿದ್ಯೆಗಳ ಸೃಷ್ಟಿಯನ್ನು ಹೇಳಿ. ಪ್ರಾಕೃತವೈಕೃತಗಳೇ ಮೊದಲಾದ ಒಂಬತ್ತು ತೆರನಾದ ಸೃಷ್ಟಿಯನ್ನು ನಿರೂಪಿಸಿ, ದೇವಾಸುರ ಪಿತೃ ಮನುಷ್ಯ ಸರೀಸೃಪ ಪಶುಗಳೇ ಮೊದಲಾದುವುಗಳ ಸೃಷ್ಟಿಯನ್ನು ಸಂಕ್ಷೇಪವಾಗಿ ಕಥನಮಾಡಿ, ಭಗವಂತನೇ ತನ್ನ ಸ್ವಾಧೀನವಾದ ಮಾಯೆಯನ್ನಾಶ್ರಯಿಸಿ ಈ ಸೃಷ್ಟಿಯನ್ನೆಸಗುವನೆಂದು ನಿರೂಪಿತವಾಗಿದೆ.

ಇಂತು ಮೂರನೆಯ ಅಧ್ಯಾಯದ ವಿಷಯ ಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಚತುರ್ಥೋಽಧ್ಯಾಯಃ

ನವಧಾಸೃಷ್ಟಿ: ವೃದ್ಧಿಶ್ಚ

॥ ಭಾರದ್ವಾಜ ಉವಾಚ ॥

ನವಧಾ ಸೃಷ್ಟಿರುತ್ಪನ್ನಾ ಬ್ರಹ್ಮಣೋಽವ್ಯಕ್ತಜನ್ಮನಃ ।
ಕಥಂ ಸಾ ವವೃಧೇ ಸೂತ ಏತತ್ಕಥಯ ಮೇಽಧುನಾ ॥ ೧ ॥

ಸೃಷ್ಟಿ ಕಾಂಡ ; ನಾಲ್ಕನೆಯ ಅಧ್ಯಾಯವು

ಒಂಬತ್ತು ಬಗೆಯ ಸೃಷ್ಟಿ ಮತ್ತು ಅದರ ಬೆಳವಣಿಗೆ.

ಭಾರದ್ವಾಜನು ಸೂತರನ್ನು ಪ್ರಶ್ನೆ ಮಾಡುತ್ತಾನೆ :—

೧. ಎಲೈ ಸೂತರೇ ! ಸ್ವತಃ ಅವ್ಯಕ್ತನಾದ ಭಗವಂತನಿಂದ ಜನಿಸಿದ ಚತುರ್ಮುಖಬ್ರಹ್ಮನು ಮಾಡಿದ ಒಂಬತ್ತು ತೆರನಾದ ಸೃಷ್ಟಿಯು ಹೇಗೆ ಬೆಳೆಯಿತೆಂಬುದನ್ನು ಈಗ ನನಗೆ ದಯವಿಟ್ಟು ಹೇಳಿರಿ, ಎಂದು ಕೇಳಿಕೊಳ್ಳಲು, ಆಗ ಸೂತರು ಹೇಳುತ್ತಾರೆ :—

॥ ಸೂತ ಉವಾಚ ॥

ಪ್ರಥಮಂ ಬ್ರಹ್ಮಣಾ ಸೃಷ್ಟಾ ಮರೀಚ್ಯಾದಯ ಏವ ಚ ।
ಮರೀಚಿರತ್ರಿಶ್ಚ ತಥಾಽಂಗಿರಾಃ ಪುಲಹಃ ಕ್ರತುಃ ॥ ೧ ॥

ಪುಲಸ್ತ್ಯಶ್ಚ ಮಹಾತೇಜಾಃ ಪ್ರಚೇತಾ ಭೃಗುರೇವ ಚ ।
ನಾರದೋ ದಶಮಶ್ಚೈವ ವಸಿಷ್ಠಶ್ಚ ಮಹಾಮತಿಃ ॥ ೨ ॥

ಸನಕಾದಯೋ ನಿವೃತ್ತಾಖ್ಯೇ ತೇ ಚ ಧರ್ಮ್ಯೇ ನಿಯೋಜಿತಾಃ ।
ಪ್ರವೃತ್ತಾಖ್ಯೇ ಮರೀಚ್ಯಾದ್ಯಾ ಮುಕ್ತ್ವೈಕಂ ನಾರದಂ ಮುನಿಮ್ ॥ ೪ ॥

ಯೋಽಸೌ ಪ್ರಜಾಪತಿಸ್ತ್ವನ್ಯೋ ದಕ್ಷನಾಮಾಂಗಸಂಭವಃ ।
ತಸ್ಯ ದೌಹಿತ್ರವಂಶೇನ ಜಗದೇತಚ್ಚರಾಚರಮ್ ॥ ೫ ॥

೧-೩ ಚತುರ್ಮುಖನು ಮರೀಚಿ ಮೊದಲಾದವರನ್ನು ಮೊದಲು ಸೃಷ್ಟಿಸಿದನು ಅವರಾರೆಂದರೆ :- ಮರೀಚಿ, ಅತ್ರಿ, ಅಂಗಿರಸ್ಸು, ಪುಲಹ, ಕ್ರತು, ಪುಲಸ್ತ್ಯ, ಮಹಾತೇಜಸ್ವಿಯಾದ ಪ್ರಚೇತಸ, ಭೃಗು, ನಾರದ, ಮತ್ತು ಹತ್ತನೆಯವನು ಮಹಾಮತಿಯಾದ ವಸಿಷ್ಠನು— ಇವರು.

೪. ಅನಂತರ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತರು ಜನಿಸಿದವರು ನಿವೃತ್ತಿಕರ್ಮದಲ್ಲಿ ತೊಡಗಿದರು. ನಾರದನನ್ನುಳಿದು ಮರೀಚಿಯೇ ಮೊದಲಾದ ಒಂಬಯ್ವರು ಪ್ರವೃತ್ತಿಕರ್ಮದಲ್ಲಿ ತೊಡಗಿದವರಾದರು.

೫. ಚತುರ್ಮುಖನ ದೇಹದಿಂದ ಹುಟ್ಟಿದ ಯಾವ ದಕ್ಷನೆಂಬ ಮತ್ತೊರ್ವ ಪ್ರಜಾಪತಿಯೋ, ಅವನ ಹೆಣ್ಣುಮಕ್ಕಳ ವಂಶದಿಂದ ಚರಾಚರಾತ್ಮಕವಾದ ಈ ಜಗತ್ತು ವ್ಯಾಪ್ತವಾಯಿತು.

ದೇವಾಶ್ಚ ದಾನವಾಶ್ಚೈವ ಗಂಧರ್ವೋರಗಪಕ್ಷಿಣಃ ।
ಸರ್ವೇ ದಕ್ಷಸ್ಯ ಕನ್ಯಾಸು ಜಾತಾಃ ಪರಮಧಾರ್ಮಿಕಾಃ ॥ ೬ ॥

ಚತುರ್ವಿಧಾನಿ ಭೂತಾನಿ ಅಚರಾಣಿ ಚರಾಣಿ ಚ ।
ವೃದ್ಧಿಂ ಗತಾನಿ ತಾನ್ಯೇವಮನುಸರ್ಗೋದ್ಭವಾನಿ ತು ॥ ೭ ॥

ಅನುಸರ್ಗಸ್ಯ ಕರ್ತಾರೋ ಮರೀಚ್ಯಾದ್ಯಾ ಮಹರ್ಷಯಃ ।
ವಸಿಷ್ಠಾಂತಾ ಮಹಾಭಾಗಾ ಬ್ರಹ್ಮಣೋ ಮಾನಸೋದ್ಭವಾಃ ॥ ೮ ॥

ಸರ್ಗೇ ತು ಭೂತಾನಿ ಧಿಯಶ್ಚ ಖಾನಿ
ಖ್ಯಾತಾನಿ ಸರ್ವಂ ಸೃಜತೇ ಮಹಾತ್ಮಾ ।

---

೬. ದೇವತೆಗಳೂ, ದಾನವರೂ, ಗಂಧರ್ವರೂ, ಸರ್ಪಗಳೂ, ಪಕ್ಷಿಗಳೂ ಪರಮಧಾರ್ಮಿಕರಾದ ಇವರೆಲ್ಲರೂ ದಕ್ಷಪ್ರಜಾಪತಿಯ ಕನ್ಯೆಯರಲ್ಲಿ ಜನಿಸಿದರು.

೭. ನಾಲ್ಕು ತೆರನಾದ ಚರಾಚರಾತ್ಮಕಗಳಾದ ಪ್ರಾಣಿಗಳೂ ಅನುಸರ್ಗಗಳಲ್ಲಿ ಸೃಷ್ಟವಾದುವುಗಳಾಗಿ ಅಭಿವೃದ್ಧಿಯನ್ನು ಹೊಂದಿದುವು.

೮. ಎಲೈ ಪುಣ್ಯಶಾಲಿಯಾದ ಭಾರದ್ವಾಜನೇ! ಚತುರ್ಮುಖನ ಮನಸ್ಸಿನಿಂದ ಹುಟ್ಟಿದ ಮರೀಚಿ ಮೊದಲು ವಸಿಷ್ಠನೇ ಕೊನೆಯಾದ ಮಹರ್ಷಿಗಳೇ ಅನುಸೃಷ್ಟಿಯನ್ನೆಸಗುವವರು.

೯. ನಾಶರಹಿತನೂ, ಅಚಿಂತ್ಯಾದ್ಭುತಶಕ್ತನೂ ಆದ ಶ್ರೀಮನ್ನಾರಾಯಣನು ಚತುರ್ಮುಖಬ್ರಹ್ಮನಲ್ಲಿ ಬ್ರಹ್ಮರೂಪದಿಂದ ಸನ್ನಿಹಿತನಾಗಿದ್ದು, ಮರೀಚ್ಯಾದಿ

ಸ ಏವ ಪಶ್ಚಾಚ್ಚತುರಾಸ್ಯರೂಪೀ
ಮುನಿಸ್ವರೂಪೀ ಚ ಸೃಜತ್ಯನಂತಃ ॥ ೯ ॥

ಇತಿ ಶ್ರೀ ನರಸಿಂಹಪುರಾಣೇ ನವಧಾಸೃಷ್ಟಿಃ, ತದ್ವೃದ್ಧಿರ್ನಾಮ ಚತುರ್ಥೋऽಧ್ಯಾಯಃ

ಗಳಲ್ಲಿಯೂ ತನ್ನ ವಿಭೂತಿರೂಪದಿಂದ ಇದ್ದು, ಸೃಷ್ಟಿಕಾಲದಲ್ಲಿ ಪಂಚಭೂತಗಳನ್ನೂ, ಪ್ರಾಣಿಗಳನ್ನೂ, ಮನಸ್ಸನ್ನೂ, ಪ್ರಸಿದ್ಧಗಳಾದ ಇಂದ್ರಿಯಗಳನ್ನೂ- ಈ ರೀತಿ ಎಲ್ಲವನ್ನೂ ಸೃಷ್ಟಿಸುತ್ತಾನೆ.

ಇಂತು ಶ್ರೀ ನರಸಿಂಹಪುರಾಣದಲ್ಲಿ ಒಂಬತ್ತು ತೆರನಾದ ಸೃಷ್ಟಿ ಮತ್ತು ಅದರ ಬೆಳವಳಿಗೆಯೆಂಬ ನಾಲ್ಕನೆಯ ಅಧ್ಯಾಯವು ಮುಗಿಯಿತು.

ನಾಲ್ಕನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ಚತುರ್ಮುಖನಿಂದ ಸನಕಾದಿಗಳೂ, ಮರೀಚ್ಯಾದಿಗಳೂ ಹುಟ್ಟಿ, ಸನಕಾದಿಗಳು ನಿವೃತ್ತಿಮಾರ್ಗದಲ್ಲಿಯೂ, ನಾರದನನ್ನುಳಿದ ಮರೀಚ್ಯಾದಿಗಳು ಪ್ರವೃತ್ತಿಮಾರ್ಗದಲ್ಲಿಯೂ ತೊಡಗಿ, ಭಗವಂತನಿಂದ ಸನ್ನಿಹಿತರಾಗಿದ್ದು ಜಗತ್ಸೃಷ್ಟಿಯನ್ನು ಬೆಳೆಸಿದರು. ಎಲ್ಲದರಲ್ಲಿ ಶ್ರೀಮನ್ನಾರಾಯಣನೇ ಸನ್ನಿಹಿತನಾಗಿ ಆಯಾ ಸಾಮರ್ಥ್ಯವನ್ನು ಕೊಟ್ಟು, ಸೃಷ್ಟಿ, ಅನುಸೃಷ್ಟಿ- ಈ ಕಾರ್ಯಗಳನ್ನು ಮಾಡಿಸುತ್ತಾನೆ, ಎಂದು ನಿರೂಪಿಸಿದೆ.

ಇಂತು ನಾಲ್ಕನೆಯ ಅಧ್ಯಾಯದ ವಿಷಯಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಪಂಚಮೋಽಧ್ಯಾಯಃ

ರುದ್ರಸೃಷ್ಟಿಃ, ಮರೀಚ್ಯಾದೀನಾಂ ಸೃಷ್ಟಿಶ್ಚ.

॥ ಭಾರದ್ವಾಜ ಉವಾಚ ॥

ರುದ್ರಸರ್ಗಂ ತು ಮೇ ಬ್ರೂಹಿ ವಿಸ್ತರೇಣ ಮಹಾಮತೇ ।
ಪುನಃ ಸರ್ವೇ ಮರೀಚ್ಯಾದ್ಯಾಃ ಸಸೃಜುಸ್ತೇ ಕಥಂ ಪುನಃ ॥ ೧ ॥

ಮಿತ್ರಾವರುಣ ಪುತ್ರತ್ವಂ ವಸಿಷ್ಠಸ್ಯ ಕಥಂ ಭವೇತ್ ।
ಬ್ರಹ್ಮಣೋ ಮನಸಃ ಪೂರ್ವಮುತ್ಪನ್ನಸ್ಯ ಮಹಾಮತೇ ॥ ೨ ॥

ಸೃಷ್ಟಿಕಾಂಡ ; ಐದನೆಯ ಅಧ್ಯಾಯವು

ರುದ್ರಸೃಷ್ಟಿ ಮತ್ತು ಮರೀಚ್ಯಾದಿಗಳ ಸೃಷ್ಟಿ

ಭಾರದ್ವಾಜನು ಸೂತರನ್ನು ಕುರಿತು ಇಂತು ಹೇಳುತ್ತಾನೆ:-

೧-೨. ಎಲೈ ಮಹಾಮತಿಯಾದ ಸೂತರೇ! ನನಗೆ ದಯವಿಟ್ಟು ರುದ್ರ ಸೃಷ್ಟಿಯನ್ನು ವಿಸ್ತರದಿಂದ ತಿಳಿಸಬೇಕು. ಮರೀಚಿಯೇ ಮೊದಲಾದವರೆಲ್ಲರೂ ಪುನಃ ಹೇಗೆ ಸೃಷ್ಟಿಸಿದರು? ಚತುರ್ಮುಖನ ಮನಸ್ಸಿನಿಂದ ಮೊದಲು ಹುಟ್ಟಿದ ವಸಿಷ್ಠನು ಹೇಗೆ ಮಿತ್ರಾವರುಣರ ಮಗನಾಗಿ ಜನಿಸಿದನು?. ಇವೆಲ್ಲವನ್ನೂ ದಯ ಮಾಡಿ ಹೇಳುವುದು ; ಎಂದು ಕೇಳಲು ;

॥ ಸೂತ ಉವಾಚ ॥

ರುದ್ರಸೃಷ್ಟಿಂ ಪ್ರವಕ್ಷ್ಯಾಮಿ ತತ್ಸರ್ಗಾಶ್ಚೈವ ಸತ್ತಮ ।
ಪ್ರತಿಸರ್ಗಂ ಮುನೀನಾಂ ತು ವಿಸ್ತರಾದ್ವದತಃ ಶೃಣು ॥ ೩ ॥

ಕಲ್ಪಾದಾವಾತ್ಮನಸ್ತುಲ್ಯಂ ಸುತಂ ಪ್ರಧ್ಯಾಯತಸ್ತತಃ ।
ಪ್ರಾದುರಾಸೀತ್ಪ್ರಭೋರಂಕೇ ಕುಮಾರೋ ನೀಲಲೋಹಿತಃ ॥ ೪ ॥

ಅರ್ಧನಾರೀನರವಪುಃ ಪ್ರಚಂಡೋಽತಿಶರೀರವಾನ್ ।
ತೇಜಸಾ ಭಾಸಯನ್ಸರ್ವಾ ದಿಶಶ್ಚ ಪ್ರದಿಶಶ್ಚ ಸಃ ॥ ೫ ॥

ತಂ ದೃಷ್ಟ್ವಾ ತೇಜಸಾ ದೀಪ್ತಂ ಪ್ರತ್ಯುವಾಚ ಪ್ರಜಾಪತಿಃ ।
ವಿಭಜಾತ್ಮಾನಮದ್ಯ ತ್ವಂ ಮಮ ವಾಕ್ಯಾನ್ಮಹಾಮತೇ ॥ ೬ ॥

ಆಗ ಸೂತರು ಇಂತು ಹೇಳುತಾರೆ:-

೩. ಎಲೈ ಶ್ರೇಷ್ಠನಾದ ಭರದ್ವಾಜನೇ! ರುದ್ರ ಸೃಷ್ಟಿಯನ್ನೂ, ಮರೀಚ್ಯಾದಿಗಳ ಸೃಷ್ಟಿಯನ್ನೂ, ಮುನಿಗಳ ಪ್ರತಿಸೃಷ್ಟಿಯನ್ನೂ ಬಿತ್ತರಿಸಿ ಹೇಳುವೆನು; ಸಡ್ಡೆಯಿಂದ ಕೇಳು.

೪. ಕಲ್ಪಾದಿಯಲ್ಲಿ ಚತುರ್ಮುಖನು ತನಗೆ ಸಮನಾದ ಮಗನು ಹುಟ್ಟಬೇಕೆಂದು ಯೋಚಿಸಲು, ಆ ಪ್ರಭುವಾದ ಚತುರ್ಮುಖನ ತೊಡೆಯಮೇಲೆ ನೀಲಲೋಹಿತವರ್ಣನಾದ ಕುವರನು ಪ್ರಾದುರ್ಭವಿಸಿದನು.

೫. ಅರೆಯೊಡಲು ಹೆಣ್ಣೂ, ಅರೆಯೊಡಲು ಗಂಡೂ ಆಗಿ, ಕೋಪದಿಂದ ಅತ್ಯುಗ್ರನೂ, ಭಯಂಕರರೂಪನೂ ಆದ ಬಾಲಕನು ತನ್ನ ತೇಜಸ್ಸಿನಿಂದ ಎಲ್ಲಾ ದಿಕ್ಕುಗಳನ್ನೂ ಪ್ರಕಾಶಪಡಿಸುತ್ತಿದ್ದನು.

೬. ಪ್ರಜಾಪತಿಯು ತೇಜಸ್ಸಿನಿಂದ ಬೆಳಗುತ್ತಿದ್ದ ಅವನನ್ನು ಕಂಡು, ಎಲೈ ಮಹಾಮತಿಯೇ! ಈಗ ನೀನು ನನ್ನ ಮಾತಿನಿಂದ ಸ್ತ್ರೀತ್ವ, ಪುಂಸ್ತ್ವಗಳೆಂಬ ಭೇದದಿಂದ ನಿನ್ನನ್ನು ಹಂಚಿಕೊಳ್ಳುವನಾಗು, ಎಂದು ಹೇಳಿದನು

ಇತ್ಯುಕ್ತೋ ಬ್ರಹ್ಮಣಾ ವಿಪ್ರ ರುದ್ರಸ್ತೇನ ಪ್ರತಾಪವಾನ್ ।
ಸ್ತ್ರೀಭಾವಂ ಪುರುಷತ್ವಂ ಚ ಪೃಥಕ್ಪೃಥಗಥಾಕರೋತ್ ॥ ೭ ॥

ಬಿಭೇದ ಪುರುಷತ್ವಂ ಚ ದಶಧಾ ಚೈಕಧಾ ಚ ಸಃ ।
ತೇಷಾಂ ನಾಮಾನಿ ವಕ್ಷ್ಯಾಮಿ ಶೃಣು ಮೇ ದ್ವಿಜಸತ್ತಮ ॥ ೮ ॥

ಅಜೈಕಪಾದಹಿರ್ಬುಧ್ನ್ಯಃ ಕಪಾಲೀ ರುದ್ರ ಏವ ಚ ।
ಹರಶ್ಚ ಬಹುರೂಪಶ್ಚ ತ್ರ್ಯಂಬಕಶ್ಚಾಪರಾಜಿತಃ ॥ ೯ ॥

ವೃಷಾಕಪಿಶ್ಚ ಶಂಭುಶ್ಚ ಕಪರ್ದೀ ರೈವತಸ್ತಥಾ ।
ಏಕಾದಶೈತೇ ಕಥಿತಾ ರುದ್ರಾಸ್ತ್ರಿಭುವನೇಶ್ವರಾಃ ॥ ೧೦ ॥

ಸ್ತ್ರೀತ್ವಂ ಚೈವಂ ತಥಾ ರುದ್ರೋ ಬಿಭೇದ ದಶಧೈಕಧಾ ।
ಉಮೈವ ಬಹುರೂಪೇಣ ಪತ್ನೀತ್ವೇನ ವ್ಯವಸ್ಥಿತಾ ॥ ೧೧ ॥

---

೭. ಎಲೈ ವಿಪ್ರನಾದ ಭರದ್ವಾಜನೇ! ಕೇಳು; ಆ ಬ್ರಹ್ಮನು ಇಂತು ಹೇಳಲು, ಪ್ರತಾಪಶಾಲಿಯಾದ ರುದ್ರನು ಸ್ತ್ರೀಭಾವವನ್ನೂ, ಪುರುಷತ್ವವನ್ನೂ ಬೇರೆ ಬೇರೆಯಾಗಿ ಹಂಚಿದನು.

೮. ಆ ರುದ್ರನು ಪುರುಷತ್ವವನ್ನು ಹನ್ನೊಂದು ತೆರನಾಗಿ ಹಂಚಿದನು. ಎಲೈ ದ್ವಿಜಶ್ರೇಷ್ಠನೇ! ಅವುಗಳ ಹೆಸರನ್ನು ಹೇಳುವೆನು; ಕೇಳು.

೯–೧೦ ಅಜೈಕಪಾದನು, ಅಹಿರ್ಬುಧ್ನ್ಯನು, ಕಪಾಲಿಯು, ರುದ್ರನು, ಹರನು, ಬಹುರೂಪನು, ತ್ರ್ಯಂಬಕನು, ಅಪರಾಜಿತನು, ವೃಷಾಕಪಿಯು, ಶಂಭುವು ಮತ್ತು ರೈವತಕಪರ್ದಿಯು. ಈ ಹನ್ನೊಂದು ರುದ್ರಾದಿ ಭುವನೇಶ್ವರರನ್ನು ಹೇಳಿದುದಾಯಿತು.

೧೧. ಹಾಗೆಯೇ ರುದ್ರನು ಸ್ತ್ರೀತ್ವವನ್ನೂ ಹನ್ನೊಂದು ತೆರನಾಗಿ ಹಂಚಿದನು ಪತ್ನಿಯಾದ ಆ ಉಮಾದೇವಿಯೇ ಬಹುರೂಪದಿಂದ ಕೂಡಿದವಳಾದಳು.

ತಪಃ ಕೃತ್ವಾ ಜಲೇ ಘೋರಮುತ್ತೀರ್ಣಃ ಸ ಯದಾ ಪುರಾ ।
ತದಾ ಸ ಸೃಷ್ಟವಾನ್ದೇವೋ ರುದ್ರಸ್ತತ್ರ ಪ್ರತಾಪವಾನ್ ॥ ೧೨ ॥

ತಪೋಬಲೇನ ವಿಪ್ರೇಂದ್ರ ಭೂತಾನಿ ವಿವಿಧಾನಿ ಚ ।
ಪಿಶಾಚವದನಾಂಶ್ಚೈವ ಸಿಂಹೋಷ್ಟ್ರಮಕರಾನನಾನ್ ॥ ೧೩ ॥

ವೇತಾಲಪ್ರಮುಖಾನ್ಭೂತಾನನ್ಯಾಂಶ್ಚೈವ ಸಹಸ್ರಶಃ ।
ವಿನಾಯಕಾನಾಮುಗ್ರಾಣಾಂ ತ್ರಿಂಶತ್ಕೋಟ್ಯೋರ್ಧಮೇವ ಚ ॥ ೧೪ ॥

ಅನ್ಯಕಾರ್ಯಂ ಸಮುದ್ದಿಶ್ಯ ಸೃಷ್ಟವಾನ್ ಸ್ಕಂದಮೇವ ಚ ।
ಏವಂ ಪ್ರಕಾರೋ ರುದ್ರೋಽಸೌ ಮಯಾ ತೇ ಕೀರ್ತಿತಃ ಪ್ರಭುಃ ॥ ೧೫ ॥

ಅನುಸರ್ಗಂ ಮರೀಚ್ಯಾದೇಃ ಕಥಯಾಮಿ ನಿಬೋಧ ಮೇ ।
ದೇವಾದಿಸ್ಥಾವರಾಂತಾಶ್ಚ ಪ್ರಜಾಃ ಸೃಷ್ಟ್ವಾಃ ಸ್ವಯಂಭುವಾ ॥ ೧೬ ॥

೧೨-೧೪. ಪೂರ್ವದಲ್ಲಿ ಯಾವಾಗ ರುದ್ರನು ನೀರಿನಲ್ಲಿ ಮುಳುಗಿದ್ದು, ಕಠಿನವಾದ ತಪವನ್ನೆಸಗಿ ಪೂರೈಸಿದನೋ, ಆಗ ಅಲ್ಲಿ ಪ್ರತಾಪಶಾಲಿಯಾದ ಆ ರುದ್ರದೇವನು ತನ್ನ ತಪಃಶಕ್ತಿಯಿಂದ, ಎಲೈ ವಿಪ್ರೇಂದ್ರನೇ! ಅನೇಕ ವಿಧಗಳಾದ ಪ್ರಾಣಿಗಳನ್ನೂ ಪಿಶಾಚದಂತೆ ಮುಖವುಳ್ಳವನ್ನೂ, ಇನ್ನೂ ಇತರ ಸಾವಿರಾರು ಕೋಟಿ ಪ್ರಮಥ ಗಣಗಳನ್ನೂ ಸೃಷ್ಟಿಸಿದನು.

೧೫. ಕುಮಾರಸ್ವಾಮಿಯನ್ನು ತಾರಕಾಸುರ ಸಂಹಾರ ರೂಪವಾದ ಬೇರೊಂದು ಕಾರ್ಯವನ್ನುದ್ದೇಶಿಸಿ ಸೃಷ್ಟಿಮಾಡಿದನು. ಈ ರುದ್ರನು ಈ ತೆರನಾಗಿ ಬಹುಸಮರ್ಥನೆಂಬುದನ್ನು ನಾನು ನಿನಗೆ ಹೇಳಿದೆನು.

೧೬. ಮರೀಚಿಯೇ ಮುಂತಾದವರ ಅನುಸರ್ಗವನ್ನು ನಿನಗೆ ಹೇಳುತ್ತೇನೆ; ತಿಳಿಯುವವನಾಗು. ಬ್ರಹ್ಮನು ದೇವತೆಗಳು ಮೊದಲು ಸ್ಥಾವರ ಪ್ರಾಣಿಗಳಾದ ವೃಕ್ಷಗಳೇ ಕೊನೆಯಾದ ಪ್ರಜೆಗಳನ್ನು ಸೃಷ್ಟಿಸಿದನು.

ಯದಾಸ್ಯ ಚ ಪ್ರಜಾಃ ಸರ್ವಾ ನ ವ್ಯವರ್ಧಂತ ಧೀಮತಃ ।
ತದಾ ಮಾನಸಪುತ್ರಾನ್ಸಃ ಸದೃಶಾನಾತ್ಮನೋಽಸೃಜತ್ ॥ ೧೭ ॥

ಮರೀಚಿಮತ್ರ್ಯಂಗಿರಸಂ ಪುಲಸ್ತ್ಯಂ ಪುಲಹಂ ಕ್ರತುಮ್ ।
ಪ್ರಚೇತಸಂ ವಸಿಷ್ಠಂ ಚ ಭೃಗುಂ ಚೈವ ಮಹಾಮತಿಃ ॥ ೧೮ ॥

ನವ ಬ್ರಹ್ಮಾಣ ಇತ್ಯೇತೇ ಪುರಾಣೇ ನಿಶ್ಚಯಂ ಗತಾಃ ।
ಅಗ್ನಿಶ್ಚ ಪಿತರಶ್ಚೈವ ಬ್ರಹ್ಮಪುತ್ರೌ ತು ಮಾನಸೌ ॥ ೧೯ ॥

ಸೃಷ್ಟಿಕಾಲೇ ಮಹಾಭಾಗೌ ಬ್ರಹ್ಮಣಃ ಸ್ವಾಯಂಭುವೋದ್ಗತೌ ।
ಶತರೂಪಾಂ ಚ ಸೃಷ್ಟ್ವಾ ತು ಕನ್ಯಾಂ ಸ ಮನವೇ ದದೌ ॥ ೨೦ ॥

ತಸ್ಮಾಚ್ಚ ಪುರುಷಾದ್ದೇವೀ ಶತರೂಪಾ ವ್ಯಜಾಯತ ।
ಪ್ರಿಯವ್ರತೋತ್ತಾನಪಾದೌ ಪ್ರಸೂತಿಂ ಚೈವ ಕನ್ಯಕಾಮ್ ॥ ೨೧ ॥

---

೧೭. ಧೀಮಂತನಾದ ಈ ಬ್ರಹ್ಮನ ಪ್ರಜೆಗಳು ಯಾವಾಗ ವೃದ್ಧಿಯನ್ನು ಹೊಂದಲಿಲ್ಲವೋ, ಆಗ ಅವನು ತನಗೆ ಸದೃಶರಾದ ಮಾನಸಪುತ್ರರನ್ನು ಸೃಷ್ಟಿ ಮಾಡಿದನು.

೧೮-೧೯. ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಪ್ರಚೇತಸ, ವಸಿಷ್ಠ, ಭೃಗು, ಎಂಬ ಈ ಒಂಬತ್ತು ಪ್ರಜಾಪತಿಗಳನ್ನು ಸೃಷ್ಟಿಸಿದನು. ಇವರು ನವಬ್ರಹ್ಮರೆಂದು ಪುರಾಣಗಳಲ್ಲಿ ಗೊತ್ತಾಗಿರುತ್ತಾರೆ. ಅದೇ ರೀತಿಯಾಗಿ ಅಗ್ನಿಯು, ಪಿತರರು, ಇವರೂ ಬ್ರಹ್ಮಮಾನಸಪುತ್ರರು.

೨೦. ಬ್ರಹ್ಮಮಾನಸಪುತ್ರರಾದ ಮಹಾಪುಣ್ಯಶಾಲಿಗಳೆನಿಸಿದ ಈ ಅಗ್ನಿ ಪಿತರರು, ಸೃಷ್ಟಿಕಾಲದಲ್ಲಿ ಶತರೂಪಾ ಎಂಬ ಕನ್ಯೆಯನ್ನು ಸೃಷ್ಟಿಸಿ, ಸ್ವಾಯಂಭುವನೆಂಬ ಮನುವಿಗೆ ಮದುವೆ ಮಾಡಿದರು.

೨೧. ಆ ಸ್ವಾಯಂಭುವ ಮನುವೆಂಬ ಪುರುಷನಿಂದ ಶತರೂಪಾದೇವಿಯು, ಪ್ರಿಯವ್ರತ ಮತ್ತು ಉತ್ತಾನಪಾದ, ಎಂಬ ಇಬ್ಬರು ಗಂಡುಮಕ್ಕಳನ್ನೂ, ಪ್ರತಿಸೂತಿಯೆಂಬ ಕನ್ಯೆಯನ್ನೂ ಪಡೆದಳು.

ದದೌ ಪ್ರಸೂತಿಂ ದಕ್ಷಾಯ ಮನುಃ ಸ್ವಾಯಂಭುವಃ ಸುತಾಮ್ ।
ಪ್ರಸೂತ್ಯಾಂ ಚ ತದಾ ದಕ್ಷಶ್ಚತುರ್ವಿಂಶತಿಕಂ ತಥಾ ॥ ೨೨ ॥

ಸಸರ್ಜ ಕನ್ಯಕಾಸ್ತಾಸಾಂ ಶೃಣು ನಾಮಾನಿ ಮೇಽಧುನಾ ।
ಶ್ರದ್ಧಾ ಪ್ರೀತಿರ್ಧೃತಿಸ್ತುಷ್ಟಿಃ ಪುಷ್ಟಿರ್ಮೇಧಾ ತಥಾ ಕ್ರಿಯಾ ॥ ೨೩ ॥

ಬುದ್ಧಿರ್ಲಜ್ಜಾ ವಪುಃ ಶಾಂತಿಃ ಸಿದ್ಧಿಃ ಕೀರ್ತಿಸ್ತ್ರಯೋದಶೀ ।
ಅಪತ್ಯಾರ್ಥಂ ಪ್ರಜಗ್ರಾಹ ಧರ್ಮೋ ದಾಕ್ಷಾಯಣೀಃ ಪ್ರಭುಃ ॥ ೨೪ ॥

ಶ್ರದ್ಧಾದೀನಾಂ ತು ಪತ್ನೀನಾಂ ಜಾತಾಃ ಕಾಮಾದಯಃ ಸುತಾಃ ।
ಧರ್ಮಸ್ಯ ಪುತ್ರಪೌತ್ರಾದ್ಯೈರ್ಧರ್ಮವಂಶೋ ವಿವರ್ಧಿತಃ ॥ ೨೫ ॥

---

೨೨. ಸ್ವಾಯಂಭುವಮನುವು ತನ್ನ ಮಗಳಾದ ಪ್ರಸೂತಿಯನ್ನು ದಕ್ಷನೆಂಬವನಿಗೆ ಮದುವೆ ಮಾಡಿಕೊಟ್ಟನು. ದಕ್ಷನೂ ಆಗ ಹಾಗೆಯೇ ಅವಳಲ್ಲಿ (ಪ್ರಸೂತಿಯಲ್ಲಿ) ಇಪ್ಪತ್ತನಾಲ್ಕು ಕನ್ಯೆಕೆಯರನ್ನು ಸೃಷ್ಟಿಮಾಡಿದನು.

೨೩-೨೪. ಭರದ್ವಾಜನೇ! ಈಗ ಅವರ ಹೆಸರನ್ನು ಹೇಳುವೆನು; ಕೇಳು. ಶ್ರದ್ಧಾ, ಪ್ರೀತಿ, ಧೃತಿ, ತುಷ್ಟಿ, ಪುಷ್ಟಿ, ಮೇಧಾ, ಕ್ರಿಯಾ, ಬುದ್ಧಿ, ಲಜ್ಜಾ, ವಪು, ಶಾಂತಿ, ಸಿದ್ಧಿ, ಕೀರ್ತಿ, (ಇವಳು ಹದಿಮೂರನೆಯವಳು.) ಈ ಹದಿಮೂರು ದಕ್ಷ ಕನ್ಯೆಯರನ್ನೂ ಧರ್ಮನೆಂಬ ಬ್ರಹ್ಮಮಾನಸಪುತ್ರನು ಸಂತಾನಾರ್ಥವಾಗಿ ವಿವಾಹ ಮಾಡಿಕೊಂಡನು.

೨೫. ಶ್ರದ್ಧೆಯೇ ಮೊದಲಾದ ಪೆಂಡಿರಿಗೆ ಕಾಮನೇ ಮೊದಲಾದ ಮಕ್ಕಳು ಹುಟ್ಟಿದರು. ಈ ಧರ್ಮನ ಮಕ್ಕಳು ಮತ್ತು ಮೊಮ್ಮಕ್ಕಳು- ಇವರಿಂದ ಧರ್ಮವಂಶವು ಬಹುವಾಗಿ ಬೆಳೆಯಿತು.

ತಾಭ್ಯಶ್ಶಿಷ್ಟಾ ಯವೀಯಸ್ಯಸ್ತಾಸಾಂ ನಾಮಾನಿ ಕೀರ್ತಯೇ ।
ಸಂಭೂತಿಶ್ಚಾನಸೂಯಾ ಚ ಸ್ಮೃತಿಃ ಪ್ರೀತಿಃ ಕ್ಷಮಾ ತಥಾ ॥ ೨೬ ॥

ಸನ್ನತಿಶ್ಚಾಥ ಸತ್ಯಾ ಚ ತುರ್ಯಾ ಖ್ಯಾತಿರ್ದ್ವಿಜೋತ್ತಮ ।
ಅನುಸರ್ಗಂ ಮರೀಚ್ಯಾದೇಃ ಕಥಯಾಮಿ ನಿಬೋಧ ಮೇ ।
ತದ್ವತ್ಪುತ್ರೌ ಮಹಾಭಾಗ ಮಾತರಿಶ್ವಾಽಥ ಸತ್ಯವಾನ್ ॥ ೨೭ ॥

ಸ್ವಾಹಾಽಥ ದಶಮೀ ಜ್ಞೇಯಾ ಸ್ವಧಾ ಚೈಕಾದಶೀ ಸ್ಮೃತಾ ।
ಏತಾಶ್ಚ ದತ್ತಾ ದಕ್ಷೇಣ ಋಷೀಣಾಂ ಭಾವಿತಾತ್ಮನಾಮ್ ॥ ೨೮ ॥

ಮರೀಚ್ಯಾದೀನಾಂ ತು ಯೇ ಪುತ್ರಾಸ್ತಾನಹಂ ಕಥಯಾಮಿ ತೇ ।
ಪತ್ನೀ ಮರೀಚೇಃ ಸಂಭೂತಿರ್ಜಜ್ಞೇ ಸಾ ಕಶ್ಯಪಂ ಮುನಿಮ್ ॥ ೨೯ ॥

೨೬-೨೮. ಉಳಿದವರು ಅವರಿಗಿಂತ ಕಿರಿಯವರು. ಅವರ ಹೆಸರನ್ನು ಹೇಳುತ್ತೇನೆ; ಕೇಳು. ಸಂಭೂತಿ, ಅನಸೂಯೆ, ಸ್ಮೃತಿ, ಪ್ರೀತಿ, ಕ್ಷಮಾ, ಸನ್ನತಿ, ಸತ್ಯಾ, ತುರ್ಯಾ ಖ್ಯಾತಿ ಈ ಒಂಬತ್ತು ಕನ್ಯೆಯರೂ, ಹಾಗೆಯೇ ಎಲೈ ಪುಣ್ಯಶಾಲಿ ಯಾದ ಬ್ರಾಹ್ಮಣನೇ! ಕೇಳು; ಮರೀಚಾದಿಗಳ ಅನುಸೃಷ್ಟಿಯಲ್ಲಿ ಮಾತರಿಶ್ವನು, ಸತ್ಯವಂತನು, ಎಂಬ ಇಬ್ಬರು ಪುತ್ರರು, ಹತ್ತನೆಯುವಳು ಸ್ವಾಹಾ, ಹನ್ನೊಂದನೆ ಯುವಳು ಸ್ವಧಾ- ಇವರು ಜನಿಸಿದರು. ದಕ್ಷನು ಈ ಹನ್ನೊಂದು ಹೆಣ್ಣುಮಕ್ಕಳನ್ನೂ ಪರಮಾತ್ಮನನ್ನು ಧ್ಯಾನಿಸುವ ಋಷಿಗಳಿಗೆ ಮದುವೆಮಾಡಿಕೊಟ್ಟನು

೨೯. ಮರೀಚಿಯೇ ಮುಂತಾದ ಮುನಿಗಳಿಗೆ ಯಾರು ಮಕ್ಕಳಾಗಿ ಹುಟ್ಟಿ ದರೋ ಅವರನ್ನು ನಿನಗೆ ಹೇಳುತ್ತೇನೆ. ಮರೀಚಿಯ ಹೆಂಡತಿಯಾದ ಸಂಭೂತಿಯು ಕಶ್ಯಪನೆಂಬ ಮುನಿಯನ್ನು ಪಡೆದಳು.

ಸ್ಮೃತಿಶ್ಚಾಂಗಿರಸಃ ಪತ್ನೀ ಪ್ರಸೂತಾ ಕನ್ಯಕಾಸ್ತಥಾ ।
ಸಿನೀವಾಲೀ ಕುಹೂಶ್ಚೈವ ರಾಕಾ ಚಾನುಮತಿಸ್ತಥಾ ॥ ೩೦ ॥

ಅನಸೂಯಾ ತಥಾ ಚಾತ್ರೇರ್ಜಜ್ಞೇ ಪುತ್ರಾನಕಲ್ಮಷಾನ್ ।
ಸೋಮಂ ದುರ್ವಾಸಸಂ ಚೈವ ದತ್ತಾತ್ರೇಯಂ ಚ ಯೋಗಿನಂ ॥ ೩೧ ॥

ಯೋಽಸಾವಗ್ನಿರಭೀಮಾನೀ ಬ್ರಹ್ಮಣಸ್ತನಯೋಽಗ್ರಜಃ ।
ತಸ್ಮಾತ್ಸ್ವಾಹಾ ಸುತಾನ್ಲೇಭೇ ತ್ರೀನುದಾರೌಜಸೋ ನೃಪ ॥ ೩೨ ॥

ಪಾವಕಂ ಪವಮಾನಂ ಚ ಶುಚಿಂ ಚಾಪಿ ಜಲಾಶಯಂ ।
ತೇಷಾಂ ತು ಸಂತತಾವನ್ಯೇ ಚತ್ವಾರಿಂಶಚ್ಚ ಪಂಚ ಚ ॥ ೩೩ ॥

---

೩೦. ಅಂಗಿರಸನ ಪತ್ನಿಯಾದ ಸ್ಮೃತಿಯು ಸಿನೀವಾಲೀ, ಕುಹೂ, ರಾಕಾ ಅನುಮತಿಯರೆಂಬ ಕನ್ನೆಯರನ್ನು ಹಡೆದಳು.

೩೧. ಅನುಸೂಯೆಯು ಅತ್ರಿಮುನಿಯಿಂದ ಪರಿಶುದ್ಧರಾದ ಸೋಮ ದುರ್ವಾಸ– ಮತ್ತು ಯೋಗಿಯಾದ ದತ್ತಾತ್ರೇಯ ಈ ಮೂರು ಮಂದಿ ಮಕ್ಕಳನ್ನು ಪಡೆದಳು.

೩೨. ಬ್ರಹ್ಮನ ಮಾನಸ ಪುತ್ರರಲ್ಲಿ ಹಿರಿಯನಾದ ಅಗ್ನಿಯೆಂಬುವನು ಯಾವನೋ, ಅವನಿಂದ ಸ್ವಾಹೆಯು ವಿಶೇಷ ಸಾಮರ್ಥ್ಯವುಳ್ಳ ಮೂವರು ಮಕ್ಕಳನ್ನು ಹಡೆದಳು.

೩೩. ಪಾವಕ, ಪವಮಾನ ಮತ್ತು ನೀರಿನಲ್ಲಿ ವಾಸಿಸುವ ಶುಚಿ ಎಂಬಿವರು ಮೂವರು ಸ್ವಾಹಾದೇವಿಯ ಮಕ್ಕಳು. ಅವರ ಸಂತತಿಯಲ್ಲಿ ಇತರ ನಲವತ್ತೈದು ವಹ್ನಿಗಳು ಹುಟ್ಟಿದರು.

ಕಥ್ಯಂತೇ ವಹ್ನಯಶ್ಚೈತೇ ಪಿತಾ ಪುತ್ರತ್ರಯಂ ಚ ಯತ್ ।
ಏವಮೇಕೋನ ಪಂಚಾಶದ್ವಹ್ನಯಃ ಪರಿಕೀರ್ತಿತಾಃ ॥ ೩೪ ॥

ಪಿತರೋ ಬ್ರಹ್ಮಣಾ ಸೃಷ್ಟಾ ವ್ಯಾಖ್ಯಾತಾ ಯೇ ಮಯಾ ತವ ।
ತೇಭ್ಯಃ ಸ್ವಧಾ ಸುತೇ ಜಜ್ಞೇ ಮೇಧಾಂ ವೈ ಧಾರಿಣೀಂ ತಥಾ ॥ ೩೫ ॥

ಪ್ರಜಾಃ ಸೃಜೇತಿ ವ್ಯಾದಿಷ್ಟಃ ಪೂರ್ವಂ ದಕ್ಷಃ ಸ್ವಯಂಭುವಾ ।
ಯಥಾ ಸಸರ್ಜ ಭೂತಾನಿ ತಥಾ ಮೇ ಶೃಣು ಸತ್ತಮ ॥ ೩೬ ॥

ಮನಸೈವ ಹಿ ಭೂತಾನಿ ಪೂರ್ವಂ ದಕ್ಷೋಽಸೃಜನ್ಮುನಿಃ ।
ದೇವಾನೃಷೀಂಶ್ಚ ಗಂಧರ್ವಾನಸುರಾನ್ಪನ್ನಗಾಂಸ್ತಥಾ ॥ ೩೭ ॥

---

೩೪. ಈ ನಲವತ್ತೈದು ವಹ್ನಿಗಳೂ, ಬ್ರಹ್ಮಮಾನಸಪುತ್ರನಾದ ಪಿತೃವೆನಿಸಿದ ವಹ್ನಿ, ಪಾವಕಾದಿ ಮೂವರು ಮಕ್ಕಳು, ಇವರೆಲ್ಲರೂ ವಹ್ನಿಗಳೆಂದೇ ಹೇಳಿಸಿಕೊಳ್ಳುತ್ತಾರೆ. ಇಂತು ವಹ್ನಿಗಳು ಒಟ್ಟು ನಲವತ್ತೊಂಬತ್ತೆಂದು ಹೇಳಿರುತ್ತದೆ.

೩೫. ಎಲೈ ಭರದ್ವಾಜನೇ! ಬ್ರಹ್ಮನು ತನ್ನ ಮನಸ್ಸಿನಿಂದ ಯಾವ ಪಿತರರನ್ನು ಸೃಷ್ಟಿಸಿದನೆಂದು ನಿನಗೆ ನಾನು ಹಿಂದೆ ಹೇಳಿದೆನೋ ಆ ಪಿತರರಿಂದ ಸ್ವಧೆಯು ಮೇಧಾ, ಧಾರಿಣಿ ಎಂಬ ಇಬ್ಬರು ಹೆಣ್ಣುಮಕ್ಕಳನ್ನು ಹಡೆದಳು.

೩೬. ಎಲೈ ಶ್ರೇಷ್ಠನಾದ ಭರದ್ವಾಜನೇ! ಹಿಂದೆ ಬ್ರಹ್ಮನಿಂದ ಪ್ರಜೆಗಳನ್ನು ಸೃಷ್ಟಿಸೆಂದು ಅಣತಿಗೊಂಡ ದಕ್ಷನು ಹೇಗೆ ಪ್ರಾಣಿಗಳನ್ನು ಸೃಷ್ಟಿಮಾಡಿದನು ಎಂಬುದನ್ನು ಹೇಳುತ್ತೇನೆ, ಕೇಳು ;

೩೭. ದಕ್ಷಮುನಿಯು ಮೊದಲು ದೇವತೆಗಳನ್ನೂ, ಋಷಿಗಳನ್ನೂ, ಗಂಧರ್ವರನ್ನೂ, ಸರ್ಪಗಳನ್ನೂ, ಪ್ರಾಣಿಗಳನ್ನೂ ಮನಸ್ಸಿನಿಂದಲೇ ಸೃಷ್ಟಿಮಾಡಿದನು.

ಯದಾಸ್ಯ ಮನಸಾ ಜಾತಾ ನಾಭ್ಯವರ್ಧಂತ ತೈಃ ದ್ವಿಜ ।
ತದಾ ಸಂಚಿಂತ್ಯ ಸ ಮುನಿಃ ಸೃಷ್ಟಿಹೇತೋಃ ಪ್ರಜಾಪತಿಃ ॥ ೩೮ ॥

ಮೈಥುನೇನೈವ ಧರ್ಮೇಣ ಸಿಸೃಕ್ಷುರ್ವಿವಿಧಾಃ ಪ್ರಜಾಃ ।
ಅಸಿಕ್ನೀಮುದ್ವಹನ್ಕನ್ಯಾಂ ವೀರಣಸ್ಯ ಪ್ರಜಾಪತೇಃ ॥ ೩೯ ॥

ಷಷ್ಟಿಂ ದಕ್ಷೋಽಸೃಜತ್ಕನ್ಯಾಂ ವೀರಣ್ಯಾಮಿತಿ ನಃ ಶ್ರುತಂ ।
ದದೌ ಸ ದಶ ಧರ್ಮಾಯ ಕಶ್ಯಪಾಯ ತ್ರಯೋದಶ ॥ ೪೦ ॥

ಸಪ್ತವಿಂಶತಿ ಸೋಮಾಯ ಚತಸ್ರೋಽರಿಷ್ಟನೇಮಿನೇ ।
ದ್ವೇ ಚೈವ ಬಹುಪುತ್ರಾಯ ದ್ವೇ ಚೈವಾಂಗಿರಸೇ ತಥಾ ॥ ೪೧ ॥

ದ್ವೇ ಕೃಶಾಶ್ವಾಯ ವಿದುಷೇ ತದಪತ್ಯಾನಿ ಮೇ ಶೃಣು ।
ವಿಶ್ವೇದೇವಾಂಸ್ತು ವಿಶ್ವಾ ಯಾ ಸಾಧ್ಯಾ ಸಾಧ್ಯಾನಸೂಯತ ॥ ೪೨ ॥

೩೮–೩೯. ಎಲೈ ದ್ವಿಜನೇ! ಯಾವಾಗ ಇವನ ಮನಸ್ಸಿನಿಂದ ಹುಟ್ಟಿದ ಆ ಪ್ರಾಣಿಗಳು ವೃದ್ಧಿಯನ್ನು ಹೊಂದಲಿಲ್ಲವೋ ಆಗ ಆ ದಕ್ಷಮುನಿಯೆಂಬ ಪ್ರಜಾಪತಿಯು ಸೃಷ್ಟಿಯ ಕಾರಣವನ್ನು ಯೋಚಿಸಿ, ಸ್ತ್ರೀ ಪುರುಷರ ಮಿಥುನ ಸಂಬಂಧದಿಂದಲೇ ನಾನಾ ವಿಧಗಳಾದ ಪ್ರಜೆಗಳನ್ನು ಸೃಷ್ಟಿಸಲು ಬಯಸಿ, ವೀರಣನೆಂಬ ಪ್ರಜಾಪತಿಯ ಮಗಳಾದ ಅಸಿಕ್ನಿಯೆಂಬ ಕನ್ನೆಯನ್ನು ವಿವಾಹ ಮಾಡಿಕೊಂಡನು.

೪೦–೪೨. ದಕ್ಷಪ್ರಜಾಪತಿಯು ವೀರಣನ ಮಗಳಾದ ಅಸಿಕ್ನಿಯಲ್ಲಿ ಅರುವತ್ತು ಕನ್ಯೆಯರನ್ನು ಹುಟ್ಟಿಸಿದನೆಂದು ನಾವು ಕೇಳಿದ್ದೇವೆ. ಆ ಅರುವತ್ತು ಕನ್ಯೆಯರಲ್ಲಿ ಹತ್ತು ಕನ್ಯೆಯರನ್ನು ಧರ್ಮನಿಗೂ, ಹದಿಮೂರು ಕನ್ನೆಯರನ್ನು ಕಶ್ಯಪನಿಗೂ, ಇಪ್ಪತ್ತೇಳು ಕನ್ಯೆಯರನ್ನು ಚಂದ್ರನಿಗೂ, ನಾಲ್ವರು ಕನ್ನೆಯರನ್ನು ಅರಿಷ್ಟನೇಮಿಯೆಂಬುವನಿಗೂ, ಇಬ್ಬರು ಕನ್ನೆಯರನ್ನು ಬಹುಪುತ್ರನಿಗೂ, ಇಬ್ಬರು ಕನ್ನೆಯರನ್ನು ಅಂಗಿರಸನಿಗೂ, ಉಳಿದ ಇಬ್ಬರು ಕನ್ನೆಯರನ್ನು ಜ್ಞಾನಿಯಾದ ಕೃಶಾಶ್ವನಿಗೂ ಮದುವೆ ಮಾಡಿಕೊಟ್ಟನು. ಅವರ ಮಕ್ಕಳಾರೆಂಬುದನ್ನು ಹೇಳುತ್ತೇನೆ ; ಸಡ್ಡೆಯಿಂದ ಕೇಳು. ಯಾವಳು ವಿಶ್ವಾ ಎಂಬುವಳೋ ಅವಳು ವಿಶ್ವೇದೇವತೆಗಳನ್ನೂ, ಸಾಧ್ಯಾ ಎಂಬುವಳು ಸಾಧ್ಯರನ್ನೂ ಹಡೆದರು.

ಮರುತ್ವತ್ಯಾಂ ಮರುತ್ವಂತೋ ವಸೋಽಸ್ತು ವಸವಃ ಸ್ಮೃತಾಃ ।
ಭಾನೋಽಸ್ತು ಭಾನವೋ ದೇವಾ ಮುಹೂರ್ತಾಯಾಂ ಮುಹೂರ್ತಜಾಃ

ಲಂಬಾಯಾಶ್ಚೈವ ಘೋಷಾಖ್ಯೋ ನಾಗವೀಥಿಶ್ಚ ಜಾಮಿಜಃ ।
ಪೃಥಿವೀ ವಿಷಯಂ ಸರ್ವಂ ಮರುತ್ವತ್ಯಾಮಜಾಯತ ॥ ೪೪ ॥

ಸಂಕಲ್ಪಯಾ ಚ ಸಂಕಲ್ಪಃ ಪುತ್ರೋ ಜಜ್ಞೇ ಮಹಾಮತೇ ।
ಯೇ ತ್ವನೇಕವಸುಪ್ರಾಣಾ ದೇವಾ ಜ್ಯೋತಿಃಪುರೋಗಮಾಃ ॥ ೪೫ ॥

ವಸವೋಽಷ್ಟೌ ಸಮಾಖ್ಯಾತಾಸ್ತೇಷಾಂ ನಾಮಾನಿ ಮೇ ಶೃಣು ।
ಆಪೋ ಧ್ರುವಶ್ಚ ಸೋಮಶ್ಚ ಧರ್ಮಶ್ಚೈವಾನಿಲೋಽನಲಃ ॥ ೪೬ ॥

ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋಽಷ್ಟೌ ಪ್ರಕೀರ್ತಿತಾಃ ।
ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಶತಶೋಽಥ ಸಹಸ್ರಶಃ ॥ ೪೭ ॥

೪೩–೪೪. ಮರುತ್ವತಿಯಲ್ಲಿ ಮರುತ್ವಂತನೂ, ವಸುವಿನಿಂದ ವಸುಗಳೂ, ಜನಿಸಿದರು. ಭಾನುವಿನಿಂದ ಭಾನುಗಳೆಂಬ ದೇವತೆಗಳೂ, ಮುಹೂರ್ತೆಯಲ್ಲಿ ಮುಹೂರ್ತೆಯರೂ, ಲಂಬೆಯಿಂದ ಘೋಷನೆಂಬುವನೂ, ಜಾಮಿಜನಿಂದ ನಾಗವೀಥಿಯೂ ಹುಟ್ಟಿದರು. ಮರುತ್ವತಿಯಲ್ಲಿ ಪಾರ್ಥಿವ ವಿಷಯಗಳೆಲ್ಲವೂ ಹುಟ್ಟಿದುವು.

೪೫. ಎಲೈ ಮಹಾಮತಿಯಾದ ಭರದ್ವಾಜನೇ! ಸಂಕಲ್ಪೆಯೆಂಬುವಳಿಂದ ಸಂಕಲ್ಪನೆಂಬ ಮಗನು ಹುಟ್ಟಿದನು. ಯಾರು ಅನೇಕಗಳಾದ ಐಶ್ವರ್ಯ ರೂಪವಾದ ವಸುಗಳಿಗೆ ಪ್ರಾಣಭೂತರೋ ಆ ಜ್ಯೋತಿಯೇ ಮುಂತಾದ ದೇವತೆಗಳೂ ಜನಿಸಿದರು.

೪೬-೪೭. ಅಷ್ಟವಸುಗಳೆಂದು ಹೇಳಲ್ಪಟ್ಟಿರಲ್ಲಾ! ಅವರ ಹೆಸರನ್ನು ಹೇಳುತ್ತೇನೆ, ಕೇಳು. ಆಪ, ಧ್ರುವ, ಸೋಮ, ಧರ್ಮ, ಅನಿಲ, ಅನಲ, ಪ್ರತ್ಯೂಷ ಮತ್ತು ಪ್ರಭಾಸ-ಇವರೇ ಅಷ್ಟವಸುಗಳೆಂದು ಹೇಳಿಸಿಕೊಂಡಿರುತ್ತಾರೆ. ಅವರ ಪುತ್ರರು, ಪೌತ್ರರು ನೂರಾರು ಮತ್ತು ಸಾವಿರಾರು ಸಂಖ್ಯಾಕರಾಗಿರುತ್ತಾರೆ.

ಸಾಧ್ಯಾಶ್ಚ ಬಹವಃ ಪ್ರೋಕ್ತಾಸ್ತತ್ಪುತ್ರಾಶ್ಚ ಸಹಸ್ರಶಃ ।
ಅದಿತಿರ್ದಿತಿರ್ದನುಶ್ಚೈವ ಅರಿಷ್ಟಾ ಸುರಸಾ ಸ್ವಸಾ ॥ ೪೮ ॥

ಸುರಭಿರ್ವಿನತಾ ಚೈವ ತಥಾ ಕ್ರೋಧಾ ವಶಾ ಇರಾ ।
ಕದ್ರೂರ್ಮುನಿಶ್ಚ ಧರ್ಮಜ್ಞ ತದಪತ್ಯಾನಿ ಮೇ ಶೃಣು ॥ ೪೯ ॥

ಅದಿತ್ಯಾಂ ಕಶ್ಯಪಾಜ್ಜಾತಾಃ ಪುತ್ರಾ ದ್ವಾದಶ ಶೋಭನಾಃ ।
ತಾನಹಂ ನಾಮತೋ ವಕ್ಷ್ಯೇ ಶೃಣುಷ್ವ ಗದತೋ ಮಮ ॥ ೫೦ ॥

ಭಗೋಽಂಶುಶ್ಚಾರ್ಯಮಾ ಚೈವ ಮಿತ್ರೋಽಥ ವರುಣಸ್ತಥಾ ।
ಸವಿತಾ ಚೈವ ಧಾತಾ ಚ ವಿವಸ್ವಾಂಶ್ಚ ಮಹಾಮತೇ ॥ ೫೧ ॥

ತ್ವಷ್ಟಾ ಪೂಷಾ ತಥಾ ಚೇಂದ್ರೋ ದ್ವಾದಶೋ ವಿಷ್ಣುರುಚ್ಯತೇ ।
ದಿತ್ಯಾಃ ಪುತ್ರದ್ವಯಂ ಜಜ್ಞೇ ಕಶ್ಯಪಾದಿತಿ ನಃ ಶ್ರುತಮ್ ॥ ೫೨ ॥

೪೮–೪೯. ಸಾಧ್ಯರೂ ಬಹುಸಂಖ್ಯಾಕರಾಗಿರುತ್ತಾರೆ. ಅವರ ಮಕ್ಕಳೂ ಸಾವಿರಾರು ಸಂಖ್ಯೆಯಿಂದಿರುತ್ತಾರೆ. ಅದಿತಿ, ದಿತಿ, ದನು, ಅರಿಷ್ಟೆ, ಸುರಸ, ಸ್ವಸ, ಸುರಭಿ, ವಿನತೆ, ಕ್ರೋಧ, ವಶಾ, ಇರಾ, ಕದ್ರು ಮತ್ತು ಮುನಿ ಈ ಹದಿಮೂರು ಮಂದಿ ಕಶ್ಯಪನ ಪತ್ನಿಯರು. ಎಲೈ ಧರ್ಮಜ್ಞನೇ ಅವರ ಮಕ್ಕಳನ್ನು ಹೇಳುತ್ತೇನೆ ಕೇಳು.

೫೦. ಅದಿತಿಯಲ್ಲಿ ಕಶ್ಯಪರಿಂದ ಮಂಗಳಕರರಾದ ಹನ್ನೆರಡು ಮಂದಿ ಪುತ್ರರು ಹುಟ್ಟಿದರು. ಅವರ ಹೆಸರನ್ನು ಹೇಳುವೆನು ಕೇಳು.

೫೧-೫೨. ಎಲೈ ಮಹಾಮತಿಯಾದ ಭರದ್ವಾಜನೇ! ಕೇಳು ; ಭಗ, ಅಂಶು, ಅರ್ಯಮಾ, ಮಿತ್ರ, ವರುಣ, ಸವಿತೃ, ಧಾತೃ, ವಿವಸ್ವಂತ, ತ್ವಷ್ಟೃ, ಪೂಷಾ ಇಂದ್ರ ಮತ್ತು ಹನ್ನೆರಡನೆಯವನು ವಿಷ್ಣು, ಇವರು ದ್ವಾದಶಾದಿತ್ಯರು. ದಿತಿಕಶ್ಯಪರಿಂದ ಇಬ್ಬರು ಮಕ್ಕಳು ಹುಟ್ಟಿದರೆಂದು ನಾವು ಕೇಳಿದ್ದೇವೆ.

ಹಿರಣ್ಯಾಕ್ಷೋ ಮಹಾಕಾಯೋ ವಾರಾಹೇಣ ತು ಯೋ ಹತಃ ।
ಹಿರಣ್ಯಕಶಿಪುಶ್ಚೈವ ನರಸಿಂಹೇಣ ಯೋ ಹತಃ ॥ ೫೩ ॥

ಅನ್ಯೇ ಚ ಬಹವೋ ದೈತ್ಯಾ ದಿತಿಪುತ್ರಾಶ್ಚ ದಾನವಾಃ ।
ಅರಿಷ್ಟಾಯಾಂ ತು ಗಂಧರ್ವಾ ಜಜ್ಞಿರೇ ಕಶ್ಯಪಾತ್ತಥಾ ॥ ೫೪ ॥

ಸುರಸಾಯಾಮಥೋತ್ಪನ್ನೋ ವಿದ್ಯಾಧರಗಣೋ ಬಹುಃ ।
ಗಾಸ್ತು ವೈ ಜನಯಾಮಾಸ ಸುರಭ್ಯಾಂ ಕಶ್ಯಪೋ ಮುನಿಃ ॥ ೫೫ ॥

ವಿನತಾಯಾಂ ತು ದ್ವೌ ಪುತ್ರೌ ಪ್ರಖ್ಯಾತೌ ಗರುಡಾರುಣೌ ।
ಗುರುಡೋ ದೇವದೇವಸ್ಯ ವಿಷ್ಣೋರಮಿತತೇಜಸಃ ॥ ೫೬ ॥

ವಾಹನತ್ವಮಿಯಾತ್ಪ್ರೀತ್ಯಾ ಅರುಣಃ ಸೂರ್ಯಸಾರಥಿಃ ।
ತಾಮ್ರಾಯಾಂ ಕಶ್ಯಪಾಜ್ಜಾತಾಃ ಷಟ್ಪುತ್ರಾಸ್ತಾನ್ನಿಬೋಧ ಮೇ ॥ ೫೭ ॥

---

೫೩. ಅವರಾರೆಂದರೆ ವರಾಹರೂಪನಾದ ಶ್ರೀಮನ್ನಾರಾಯಣನಿಂದ ಸಂಹೃತನಾದ ಹಿರಣ್ಯಾಕ್ಷನೆಂಬುವನೊಬ್ಬನು ; ಶ್ರೀ ನರಸಿಂಹನಿಂದ ಸಂಹೃತನಾದ ಹಿರಣ್ಯಕಶಿಪುವು ಮತ್ತೊಬ್ಬನು.

೫೪. ಬಹುಸಂಖ್ಯಾಕರಾದ ದಿತಿಪುತ್ರರಾದ ಇತರ ದೈತ್ಯರೂ, ದಾನವರೂ ಇರುತ್ತಾರೆ. ಅರಿಷ್ಟೆಯಲ್ಲಿ ಕಶ್ಯಪನಿಂದ ಗಂಧರ್ವರು ಹುಟ್ಟಿದರು.

೫೫. ಬಳಿಕ ಸುರಸೆಯಲ್ಲಿ ಬಹುವಾದ ವಿದ್ಯಾಧರಗಣಗಳು ಹುಟ್ಟಿದುವು. ಕಶ್ಯಪಮುನಿಯು ಸುರಭಿಯಲ್ಲಿ ಗೋವುಗಳನ್ನು ಪಡೆದನು.

೫೬–೫೭. ವಿನತೆಯಲ್ಲಿ ಪ್ರಸಿದ್ಧರಾದ ಗರುಡ ಮತ್ತು ಅರುಣ ಇವರೀರ್ವರು ಮಕ್ಕಳು ಹುಟ್ಟಿದರು. ಗರುಡನು ಪ್ರೀತಿಯಿಂದ ದೇವೋತ್ತಮನಾದ ಪೂರ್ಣ ತೇಜಸ್ವಿಯಾದ ಶ್ರೀ ಮಹಾ ವಿಷ್ಣುವಿನ ವಾಹನನಾದನು. ಅರುಣನು ಸೂರ್ಯನ ಸಾರಥಿಯಾದನು. ತಾಮ್ರೆಯಲ್ಲಿ ಕಶ್ಯಪನಿಂದ ಹುಟ್ಟಿದ ಆರುವರು ಪುತ್ರರನ್ನು ಹೇಳುತ್ತೇನೆ, ಕೇಳು.

ಅಶ್ವಾ ಉಷ್ಟ್ರಾ ಗರ್ದಭಾಶ್ಚ ಹಸ್ತಿನೋ ಗವಯಾ ಮೃಗಾಃ ।
ಕ್ರೋಧಾಯಾಂ ಜಜ್ಞಿರೇ ತದ್ವದ್ಯೇ ಭೂಮ್ಯಾಂ ದುಷ್ಟಜಾತಯಃ ॥ ೫೮ ॥

ಇರಾ ವೃಕ್ಷಲತಾವಲ್ಲೀ ಶಣಜಾತೀಶ್ಚ ಜಜ್ಞಿರೇ ।
ಸ್ವಸಾ ತು ಯಕ್ಷರಕ್ಷಾಂಸಿ ಮುನಿರಪ್ಸರಸಸ್ತಥಾ ॥ ೫೯ ॥

ಕದ್ರೂಪುತ್ರಾ ಮಹಾನಾಗಾ ದಂದಶೂಕಾ ವಿಷೋಲ್ಬಣಾಃ ।
ಸಪ್ತವಿಂಶತಿ ಯಾಃ ಪ್ರೋಕ್ತಾಃ ಸೋಮಪತ್ನ್ಯೋಽಥ ಸುವ್ರತಾಃ ॥ ೬೦ ॥

ತಾಸಾಂ ಪುತ್ರಾ ಮಹಾಸತ್ವಾ ಬುಧಾದ್ಯಾಸ್ತ್ವಭವನ್ದ್ವಿಜ ।
ಅರಿಷ್ಟನೇಮಿಪತ್ನೀನಾಮಪತ್ಯಾನೀಹ ಷೋಡಶ ॥ ೬೧ ॥

---

೫೮. ಕುದುರೆಗಳು, ಒಂಟೆಗಳು, ಕತ್ತೆಗಳು, ಆನೆಗಳು, ಗವಯಗಳು ಮತ್ತು ಮೃಗಗಳು ತಾಮ್ರೆಯ ಮಕ್ಕಳು. ಪೊಡವಿಯಲ್ಲಿ ಯಾವುವು ದುಷ್ಟ ಜಾತಿಯವೋ ಅಂತಹವು ಕ್ರೋಧೆಯೆಂಬುವಳಲ್ಲಿ ಹುಟ್ಟಿದುವು.

೫೯. ಇರೆಯು ಮರ, ಹಂಬು, ಬಳ್ಳಿ ಮತ್ತು ಸಣಬುಜಾತಿಗಳು ಇವನ್ನು ಹಡೆದಳು. ಸ್ವಸೆಯು ಯಕ್ಷರಾಕ್ಷಸರನ್ನೂ, ಹಾಗೆಯೇ ಮುನಿಯು ಅಪ್ಸರಸರನ್ನೂ ಹಡೆದರು.

೬೦–೬೧. ವಿಷಗಳಿಂದ ಭಯಂಕರಗಳಾದ ಕೋರೆಹಲ್ಲುಗಳುಳ್ಳ ದೊಡ್ಡ ಹಾವುಗಳು ಕದ್ರುವಿನ ಪುತ್ರರು; ಎಲೈ ದ್ವಿಜನೇ! ಕೇಳು ಬಳಿಕ ಒಳ್ಳೆಯ ನಿಯಮವುಳ್ಳ ಇಪ್ಪತ್ತೇಳು ಮಂದಿ ಯಾವ ಚಂದ್ರನ ಮಡದಿಯರೋ, ಅವರಿಗೆ ವಿಶೇಷ ಸಾಮರ್ಥ್ಯವುಳ್ಳ ಬುಧನೇ ಮೊದಲಾದ ಪುತ್ರರು ಹುಟ್ಟಿದರು. ಅರಿಷ್ಟನೇಮಿಯ ಪತ್ನಿಯರಿಗೆ ಹದಿನಾರು ಮಂದಿ ಮಕ್ಕಳು ಆದರು.

ಬಹುಪುತ್ರಸ್ಯ ವಿದುಷಶ್ಚತ್ವಾರೋ ವಿದ್ಯುದಾದಯಃ ।
ಪ್ರತ್ಯಂಗಿರಸುತಾಃ ಶ್ರೇಷ್ಠಾಃ ಋಷಯಶ್ಚರ್ಷಿಸಂಸ್ಕೃತಾಃ ॥ ೬೨ ॥

ಕೃಶಾಶ್ವಸ್ಯ ತು ದೇವರ್ಷೇರ್ದೇವಾಶ್ಚ ಋಷಯಃ ಸುತಾಃ ।
ಏತೇ ಯುಗಸಹಸ್ರಾಂತೇ ಜಾಯಂತೇ ಪುನರೇವ ಹಿ ॥ ೬೩ ॥

ಏತೇ ಕಶ್ಯಪದಾಯಾದಾಃ ಕೀರ್ತಿತಾಃ ಸ್ಥಾಣುಜಂಗಮಾಃ ।
ಸ್ಥಿತೌ ಸ್ಥಿತಸ್ಯ ದೇವಸ್ಯ ನರಸಿಂಹಸ್ಯ ಧರ್ಮತಃ ॥ ೬೪ ॥

ಏತಾ ವಿಭೂತಯೋ ವಿಪ್ರ ಮಯಾ ತೇ ಪರಿಕೀರ್ತಿತಾಃ ।
ಕಥಿತಾ ದಕ್ಷ ಕನ್ಯಾನಾಂ ಮಯಾ ತೇಽಪತ್ಯಸಂತತಿಃ ॥ ೬೫ ॥

---

೬೨. ಜ್ಞಾನಿಯಾದ ಬಹುಪುತ್ರನಿಗೆ ವಿದ್ಯುದಾದಿ ನಾಲ್ವರು ಮಕ್ಕಳು. ಪ್ರತ್ಯಂಗಿರನ ಮಕ್ಕಳು ಋಷಿಸಂಸ್ಕಾರವುಳ್ಳ ಶ್ರೇಷ್ಠರಾದ ಋಷಿಗಳಾಗಿ ಜನಿಸಿದರು.

೬೩. ದೇವರ್ಷಿಯಾದ ಕೃಶಾಶ್ವನಿಗೆ ದೇವತೆಗಳೂ, ಋಷಿಗಳೂ ಮಕ್ಕಳಾಗಿ ಹುಟ್ಟಿದರು. ಇವರೆಲ್ಲರೂ ಚತುರ್ಯುಗಗಳು ನಾಲ್ಕು ಸಾರಿ ಕಳೆಯಲು ಮತ್ತೆ ಹುಟ್ಟುತ್ತಾರೆ.

೬೪–೬೫. ಕಶ್ಯಪನ ಮಕ್ಕಳಾದ ಸ್ಥಾವರ, ಜಂಗಮವಾದ ಈ ಪ್ರಾಣಿಗಳನ್ನು ನಾನು ನಿನಗೆ ಹೇಳಿದ್ದೇನೆ. ಲೋಕವನ್ನು ಧಾರಣಮಾಡತಕ್ಕ ಧರ್ಮದಿಂದ ಜಗತ್ತನ್ನು ರಕ್ಷಿಸುವುದರಲ್ಲಿ ತೊಡಗಿದ ಶ್ರೀ ನರಸಿಂಹನ ಐಶ್ವರ್ಯ ಮತ್ತು ವಿಶೇಷ ಸನ್ನಿಧಾನ ಇವುಗಳಿಗೆ ಅಧಿಷ್ಠಾನವಾದುವನ್ನು ಎಲೈ ವಿಪ್ರನೇ! ನಿನಗೆ ಹೇಳಿರುತ್ತೇನೆ. ನಾನು ನಿನಗೆ ಇಂತು ದಕ್ಷಕನ್ನೆಯರ ಪುತ್ರಸಂತಾನವನ್ನು ಹೇಳಿದೆನು.

ಶ್ರದ್ಧಾಪ್ರ ಸಂಸ್ಮರೇದೇತಾಂ ಸ ತು ಸಂತಾನವಾನ್ ಭವೇತ್ ॥ ೬೬ ॥

ಸರ್ಗಾನುಸರ್ಗೌ ಕಥಿತೌ ಮಯಾ ತೇ
ಸಮಾಸತಃ ಸೃಷ್ಟಿವಿವೃದ್ಧಿ ಹೇತೋಃ ।
ಪಠಂತಿ ಯೇ ವಿಷ್ಣುಪರಾಃ ಸದಾ ನರಾಃ
ಇದಂ ದ್ವಿಜಾಸ್ತೇ ವಿಮಲಾ ಭವಂತಿ ॥ ೬೭ ॥

ಇತಿ ಶ್ರೀ ನರಸಿಂಹಪುರಾಣೇ ಸೃಷ್ಟಿಕಥನೇ ಪಂಚಮೋಽಧ್ಯಾಯಃ

---

೬೬. ಈ ದಕ್ಷಸಂತತಿಯನ್ನು ಶ್ರದ್ಧಾವಂತನಾಗಿ ನೆನೆಯುವಾತನು ಒಳ್ಳೆಯ ಸಂತಾನವನ್ನು ಪಡೆಯುತ್ತಾನೆ.

೬೭. ಎಲೈ ಭರದ್ವಾಜನೇ! ಸೃಷ್ಟಿಯ ಬೆಳವಣಿಗೆಗೆ ಕಾರಣಗಳಾದ ಸೃಷ್ಟಿ ಮತ್ತು ಅನುಸೃಷ್ಟಿ, ಇವುಗಳನ್ನು ನಿನಗೆ ಸಂಗ್ರಹವಾಗಿ ಹೇಳಿದೆನು. ಯಾವ ಮಾನವರು ಯಾವಾಗಲೂ ಶ್ರೀ ವಿಷ್ಣುವಿನಲ್ಲಿ ಭಕ್ತಿಯುಳ್ಳವರಾಗಿ ಇದನ್ನು ಪಠಿಸುತ್ತಾರೆಯೋ ಆ ದ್ವಿಜರು ಶುದ್ಧಾತ್ಮರಾಗುತ್ತಾರೆ.

ಇಂತು ಶ್ರೀ ನೃಸಿಂಹಪುರಾಣದಲ್ಲಿ ಸೃಷ್ಟಿಕಥನದಲ್ಲಿ
ಐದನೆಯ ಅಧ್ಯಾಯವು ಮುಗಿಯಿತು.

ಐದನೆಯ ಅಧ್ಯಾಯದ ವಿಷಯಸಂಗ್ರಹವು

ಈ ಅಧ್ಯಾಯದಲ್ಲಿ ರುದ್ರಸೃಷ್ಟಿಯನ್ನು ವಿಸ್ತಾರವಾಗಿ ನಿರೂಪಿಸುತ್ತಾ, ಚತುರ್ಮುಖನ ಮನಸ್ಸಿನಿಂದ ಉತ್ಪನ್ನನಾದ ರುದ್ರನು ಏಕಾದಶ ಪುಂರೂಪವನ್ನೂ, ಏಕಾದಶಸ್ತ್ರೀರೂಪವನ್ನೂ ಹಂಚಿ, ತಪವನ್ನೆಸಗಿ ಅನೇಕ ತೆರನಾದ ಭೂತಪಿಶಾಚ ಮುಖವುಳ್ಳವುಗಳನ್ನು ಸೃಷ್ಟಿಸಿದನು. ಮರೀಚ್ಯಾದಿಗಳ ಅನುಸರ್ಗವು ನಿರೂಪಿಸಿ ಬ್ರಹ್ಮನು ಸೃಷ್ಟಿಸಿದ ದೇವಾದಿಸ್ಥಾವರಾಂತವಾದ ಸೃಷ್ಟಿಯು ಪ್ರಜಾವೃದ್ಧಿಗೆ ಕಾರಣ ವಾಗದಿರಲು, ಮರೀಚ್ಯಾದಿ ಮಾನಸಪುತ್ರರನ್ನು ಸೃಷ್ಟಿಸಿದನೆಂದು ಹೇಳಿ ಅಲ್ಲಿಂದ ಸ್ತ್ರೀಪುಂಸರ ಮಿಥುನ ಸೃಷ್ಟಿಯನ್ನು ಹೇಳಲು ತೊಡಗಿ, ದಕ್ಷನು ಪ್ರಸೂತಿಯಲ್ಲಿ ಇಪತ್ತು ನಾಲ್ಕು ಕನ್ಯೆಯರನ್ನು ಪಡೆದು, ಅವರಲ್ಲಿ ಧರ್ಮ, ಮತ್ತು ಮರೀಚ್ಯಾದಿಗಳು ಇವ ರಿಂದ ಪ್ರಜಾಸೃಷ್ಟಿಯುಂಟಾದುದು, ನಲವತ್ತೊಂಬತ್ತು ವಹ್ನಿ ಸೃಷ್ಟಿಯುಂಟಾದುದು ; ಬಳಿಕ ದಕ್ಷನಿಂದ ಅಸಿಕ್ನಿಯಲ್ಲಿ ಅರುವತ್ತು ಮಂದಿ ಕನ್ಯೆಯರು ಹುಟ್ಟಿದರು ; ಅವರ ಸಂತತಿ ದ್ವಾದಶಾದಿತ್ಯರು ; ಅಷ್ಟವಸುಗಳು, ಸಾಧ್ಯರು, ಗಂಧರ್ವರು, ದೇವತೆಗಳು ದೈತ್ಯದಾನವರು. ಗರುಡಾರುಣರು, ನಾಗರು, ಗೋವುಗಳು, ವೃಕ್ಷಾದಿಗಳು ಕಶ್ಯಪ ಪ್ರಜಾಪತಿಗಳ ಸಂತಾನ- ಇವನ್ನು ನಿರೂಪಿಸಿರುವುದು.

ಇಂತು ಐದನೆಯ ಅಧ್ಯಾಯದ ವಿಷಯಸಂಗ್ರಹವು.

॥ ಶ್ರೀಃ ॥

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ಷಷ್ಠೋಽಧ್ಯಾಯಃ

ಪುಂಸವನಾಖ್ಯಾನಮ್

॥ ಸೂತ ಉವಾಚ ॥

ಸೃಷ್ಟಿಸ್ತೇ ಕಥಿತಾ ವಿಷ್ಣೋರ್ಮಯಾಸ್ಯ ಜಗತೋ ದ್ವಿಜ ।
ದೇವದಾನವಯಕ್ಷಾದ್ಯಾ ಯಥೋತ್ಪನ್ನಾ ಮಹಾತ್ಮನಃ ॥ ೧ ॥

ಯಾಮುದ್ದಿಶ್ಯ ತ್ವಯಾ ಪೃಷ್ಟಃ ಪುರಾಽಹಮೃಷಿಸಂನಿಧೌ ।
ಮಿತ್ರಾವರುಣ ಪುತ್ರತ್ವಂ ವಸಿಷ್ಠಸ್ಯ ಕಥಂ ತ್ವಿತಿ ॥ ೨ ॥

ತದಿದಂ ಕಥಯಿಷ್ಯಾಮಿ ಪುಣ್ಯಾಖ್ಯಾನಂ ಪುರಾತನಮ್ ।
ಶೃಣುಷ್ವೇಕಾಗ್ರಮನಸಾ ಭರದ್ವಾಜ ವಿಶೇಷತಃ ॥ ೩ ॥

ಸೃಷ್ಟಿಕಾಂಡ : ಆರನೆಯ ಅಧ್ಯಾಯವು.

ಪುಂಸವನದ ಕಥೆಯು

ಸೂತರು ಹೇಳುತ್ತಾರೆ :—

೧. ಎಲೈ ದ್ವಿಜನಾದ ಭಾರದ್ವಾಜನೇ! ನಿನಗೆ ಮಹಾತ್ಮನಾದ ಶ್ರೀ ವಿಷ್ಣುವಿನಿಂದ ಈ ಜಗತ್ತಿನ ಸೃಷ್ಟಿಯೂ, ದೇವತೆಗಳು, ದಾನವರು ಯಕ್ಷರು ಇವರೇ ಮೊದಲಾದವರು ಹೇಗೆ ಹುಟ್ಟಿದರೆಂಬುದೂ ಹೇಳಿದುದಾಯಿತು.

೨.-೩. ನೀನು ಹಿಂದೆ ಋಷಿಗಳ ಇದಿರಿನಲ್ಲಿ ನನ್ನನ್ನು ಕುರಿತು ವಸಿಷ್ಠನಿಗೆ ಮಿತ್ರಾವರುಣರ ಪುತ್ರತ್ವವು ಹೇಗೆ ಉಂಟಾಯಿತೆಂದು ಯಾವನನ್ನು ಉದ್ದೇಶಿಸಿ ಪ್ರಶ್ನಿಸಿದೆಯೋ ಆ ಈ ಹಳತಾದ ಪುಣ್ಯಸಂಪಾದಕವಾದ ಕಥೆಯನ್ನು ಹೇಳುವೆನು; ಎಲೈ ಭರದ್ವಾಜನೇ! ಚೆನ್ನಾಗಿ ಮನಗೊಟ್ಟು ಕೇಳು.

ಸರ್ವಧರ್ಮಾರ್ಥತತ್ವಜ್ಞಃ ಸರ್ವವೇದವಿದಾಂ ವರಃ ।
ಪಾರಗಃ ಸರ್ವವಿದ್ಯಾನಾಂ ದಕ್ಷೋ ನಾಮ ಪ್ರಜಾಪತಿಃ ॥ ೪ ॥

ತೇನ ದತ್ತಾಃ ಶುಭಾಃ ಕನ್ಯಾಃ ಸರ್ವಾಃ ಕಮಲಲೋಚನಾಃ ।
ಸರ್ವಲಕ್ಷಣಸಂಪೂರ್ಣಾಃ ಕಶ್ಯಪಾಯ ತ್ರಯೋದಶ ॥ ೫ ॥

ತಾಸಾಂ ನಾಮಾನಿ ವಕ್ಷ್ಯಾಮಿ ನಿಬೋಧ ತ್ವಂ ಮಯಾಧುನಾ ।
ಅದಿತಿರ್ದಿತಿರ್ದನುಃ ಕಾಲಾ ಮುಹೂರ್ತಾ ಸಿಂಹಿಕಾ ಮುನಿಃ ॥ ೬ ॥

ಇರಾ ಕ್ರೋಧಾ ಚ ಸುರಭಿರ್ವಿನತಾ ಸುರಸಾ ಸ್ವಸಾ ।
ಕದ್ರೂಶ್ಚ ಸರಮಾ ಚೈವ ಯಾ ತು ದೇವಶುನೀ ಸ್ಮೃತಾ ॥ ೭ ॥

---

೪. ಧರ್ಮ ಮತ್ತು ಅರ್ಥ ಇವುಗಳ ಎಲ್ಲಾ ತತ್ವಗಳನ್ನೂ ಅರಿತವನೂ ಋಗಾದಿವೇದಗಳು, ಶಿಕ್ಷಾದಿವೇದಾಂಗಗಳು, ಇವುಗಳನ್ನೆಲ್ಲಾ ಚೆನ್ನಾಗಿ ಕಲಿತವನೂ, ಮೀಮಾಂಸಾ, ನ್ಯಾಯ, ಪುರಾಣ, ಧರ್ಮಶಾಸ್ತ್ರಾದಿ ವಿದ್ಯೆಗಳನ್ನೆಲ್ಲಾ ಚೆನ್ನಾಗಿ ಅರಿತವನೂ, ಆದ ದಕ್ಷನೆಂಬ ಪ್ರಜಾಪತಿಯು ಇದ್ದನು.

೫. ಅವನು ತನ್ನ ಹದಿಮೂರು ಮಂದಿ ಕನ್ಯೆಯರನ್ನು ಕಶ್ಯಪನಿಗೆ ಕೊಟ್ಟು ಮದುವೆ ಮಾಡಿದನು. ಅವರೆಲ್ಲರೂ ತಾವರೆಯಂತೆ ಕಣ್ಣುಗಳುಳ್ಳವರೂ, ಉತ್ತಮವಾದ ಸ್ತ್ರೀಲಕ್ಷಣಗಳೆಲ್ಲವುಗಳಿಂದ ಕೂಡಿದವರೂ ಆಗಿದ್ದರು.

೬-೭. ಈಗ ನಾನು ಅವರ ಹೆಸರುಗಳನ್ನು ಹೇಳುವೆನು ; ಕೇಳು ; ಅದಿತಿ, ದಿತಿ, ದನು ಕಾಲಾತ್ಮಕ ಮುಹೂರ್ತ, ಸಿಂಹಿಕಾ, ಮುನಿ, ಇರಾ, ಕ್ರೋಧ, ಸುರಭಿ, ಸುರಸಾ, ಸ್ವಸಾ, ಕದ್ರು, ಮತ್ತು ದೇವಶುನಿಯೆಂದು ಹೇಳಿಸಿಕೊಂಡಿರುವ ಸರಮಾ ಎಂಬಿವರು.

ದಕ್ಷಸ್ಯೈತಾ ದುಹಿತರಸ್ತಾಃ ಪ್ರಾದಾತ್ಕಾಶ್ಯಪಾಯ ಸಃ ।
ತಾಸಾಂ ಜ್ಯೇಷ್ಠಾ ವರಿಷ್ಠಾ ಚ ಅದಿತಿರ್ನಾಮತೋ ದ್ವಿಜ ॥ ೮ ॥

ಅದಿತಿಃ ಸುಷುವೇ ಪುತ್ರಾನ್ದ್ವಾದಶಾಗ್ನಿಸಮಪ್ರಭಾನ್ ।
ತೇಷಾಂ ನಾಮಾನಿ ವಕ್ಷ್ಯಾಮಿ ಶೃಣುಷ್ವ ಗದತೋ ಮಮ ॥ ೯ ॥

ಯೈರಿದಂ ವಾಸರಂ ನಕ್ತಂ ವರ್ತತೇ ಕ್ರಮಶಃ ಸದಾ ।
ಭಗೋಽಂಶಶ್ಚಾರ್ಯಮಾ ಚೈವ ಮಿತ್ರೋಽಥ ವರುಣಸ್ತಥಾ ॥ ೧೦ ॥

ಸವಿತಾ ಚೈವ ಧಾತಾ ಚ ವಿವಸ್ವಾಂಶ್ಚ ಮಹಾಮತೇ ।
ತ್ವಷ್ಟಾ ಪೂಷಾ ತಥೈವೇಂದ್ರೋ ವಿಷ್ಣುರ್ದ್ವಾದಶಮಃ ಸ್ಮೃತಃ ॥ ೧೧ ॥

ಏತೇ ಚ ದ್ವಾದಶಾದಿತ್ಯಾಸ್ತಪಂತೇ ವರ್ಷಯಂತಿ ಚ ।
ತಸ್ಯಾಶ್ಚ ಮಧ್ಯಮಃ ಪುತ್ರೋ ವರುಣೋ ನಾಮ ನಾಮತಃ ॥ ೧೨ ॥

---

೮. ಈಗ ಹೇಳಿದವರು ದಕ್ಷಪ್ರಜಾಪತಿಯ ಹೆಣ್ಣುಮಕ್ಕಳು. ಆ ದಕ್ಷನು ಅವರನ್ನು ಕಶ್ಯಪನಿಗೆ ಕೊಟ್ಟು ಮದುವೆ ಮಾಡಿದನು. ಎಲೈ ದ್ವಿಜನೇ! ಅವರಲ್ಲಿ ಹಿರಿಯಳೂ ಉತ್ತಮಳೂ, ಆದವಳು ಹೆಸರಿನಿಂದ ಅದಿತಿಯೆನಿಸುವಳು.

೯. ಅದಿತಿಯು ಅಗ್ನಿಗೆ ಸಮಾನವಾದ ಪ್ರಕಾಶವುಳ್ಳ ಹನ್ನೆರಡು ಪುತ್ರರನ್ನು ಪಡೆದಳು. ನಾನು ಅವರ ಹೆಸರನ್ನು ಹೇಳುವೆನು ; ಅದನ್ನು ಕೇಳು.

೧೦-೧೧. ಯಾವ ಈ ಹನ್ನೆರಡು ಮಕ್ಕಳಿಂದ ಈ ಹಗಲಿರುಳೂ ಕ್ರಮದಿಂದ ಯಾವಾಗಲೂ ನಡೆಯುತ್ತಿದೆ. ಅವರು ಭರ್ಗನು, ಅಂಶನು, ಅರ್ಯಮನು, ಮಿತ್ರನು, ವರುಣನು, ಧಾತೃವು, ವಿವಸ್ವಂತನು, ತ್ವಷ್ಟೃವು, ಪೂಷನು, ಇಂದ್ರನು, ಮತ್ತು ಹನ್ನೆರಡನೆಯವನು ವಿಷ್ಣುವು ಎಂದು ಹೇಳಿಸಿಕೊಂಡಿರುತ್ತಾರೆ.

೧೨. ಈ ಹನ್ನೆರಡುಮಂದಿ ಆದಿತ್ಯರೂ ಜಗತ್ತನ್ನು ಕಾಯಿಸುತ್ತಾರೆ ಮತ್ತು ಮಳೆಗರೆಯುತ್ತಾರೆ. ಆ ಅದಿತಿಯ ನಡುವಣ ಮಗನು ಹೆಸರಿನಿಂದ ವರುಣನೆಂದು ಪ್ರಸಿದ್ಧನಾಗಿರುತ್ತಾನೆ.

ಲೋಕಪಾಲ ಇತಿ ಖ್ಯಾತೋ ವಾರುಣ್ಯಾಂ ದಿಶಿ ಶಬ್ದ್ಯತೇ ।
ಪಶ್ಚಿಮಸ್ಯ ಸಮುದ್ರಸ್ಯ ಪ್ರತೀಚ್ಯಾಂ ದಿಶಿ ರಾಜತೇ ॥ ೧೩ ॥

ಜಾತರೂಪಮಯಃ ಶ್ರೀಮಾನಾಸ್ತೇ ನಾಮ ಶಿಲೋಚ್ಚಯಃ ।
ಸರ್ವರತ್ನಮಯೈಃ ಶೃಂಗೈರ್ಧಾತುಪ್ರಸ್ರವಣಾನ್ವಿತೈಃ ॥ ೧೪ ॥

ಸಂಯುಕ್ತೋ ಭಾತಿ ಶೈಲೇಶೋ ನಾನಾರತ್ನಮಯಃ ಶುಭಃ ।
ಮಹಾದರೀ ಗುಹಾಭಿಶ್ಚ ಸಿಂಹಶಾರ್ದೂಲನಾದಿತಃ ॥ ೧೫ ॥

ನಾನಾವಿವಿಕ್ತಭೂಮಿಷು ಸಿದ್ಧಗಂಧರ್ವಸೇವಿತಃ ।
ಯಸ್ಮಿನ್ಗತೇ ದಿನಕರೇ ತಮಸಾ ಪೂರ್ಯತೇ ಜಗತ್ ॥ ೧೬ ॥

---

೧೩. ಇವನು ಲೋಕಪಾಲಕನೆಂದು ಪ್ರಸಿದ್ಧನಾಗಿ ಪಶ್ಚಿಮದಿಕ್ಕಿನಲ್ಲಿರುವವನೆಂದು ಹೇಳಿಸಿಕೊಳ್ಳುತ್ತಾನೆ ; ಪಶ್ಚಿಮಸಮುದ್ರದ ಪಡುವಣ ದಿಸೆಯಲ್ಲಿ ಪ್ರಕಾಶಿಸುತ್ತಿದ್ದಾನೆ.

೧೪–೧೫. ಸುವರ್ಣಮಯವಾದ ಸಂಪದ್ಯುಕ್ತವಾದ ಹೆಸರಿನಿಂದ ಶಿಲೋಚ್ಚಯವೆಂಬ ಪರ್ವತವು ಇದೆ. ಎಲ್ಲಾ ರತ್ನಗಳಿಂದ ಕೂಡಿದ ಕೋಡುಗಲ್ಲುಗಳಿಂದ, ನಾನಾ ತೆರನಾದ ಗೈರಿಕಾದಿ ಧಾತುಗಳು ಮತ್ತು ಜಲಪ್ರಪಾತಗಳು ಇವುಗಳಿಂದ ಕೂಡಿದುದೂ, ಅನೇಕ ರತ್ನಗಳಿಂದ ತುಂಬಿ ಕಲ್ಯಾಣಕರವಾದುದೂ ಆದ ಈ ಪರ್ವತ ಶ್ರೇಷ್ಠವು ದೊಡ್ಡ ಕಂದರಗಳಿಂದ ಮತ್ತು ನದಿಗಳಿಂದ ಕೂಡಿ, ಸಿಂಹವ್ಯಾಘ್ರಗಳ ಗರ್ಜನೆಗಳಿಂದ ಯುಕ್ತವಾಗಿಯೂ ರಂಜಿಸುತ್ತಿದೆ.

೧೬. ಇದರ ಜನರಹಿತವಾದ ಅನೇಕ ಪ್ರದೇಶಗಳಲ್ಲಿ ಸಿದ್ಧರೂ, ಗಂಧರ್ವರೂ ವಾಸಮಾಡುತ್ತಲಿರುತ್ತಾರೆ. ಈ ಪರ್ವತದಲ್ಲಿ ಸೂರ್ಯನು ಇರಲು ಪ್ರಪಂಚವು ಕತ್ತಲಿಂದ ವ್ಯಾಪಿಸುತ್ತದೆ

ತಸ್ಯ ಶೃಂಗೇ ಮಹಾದಿವ್ಯಾ ಜಾಂಬೂನದಮಯೀ ಶುಭಾ ।
ರಮ್ಯಾ ಮಣಿಮಯೈಃ ಸ್ತಂಭೈರ್ವಿಹಿತಾ ವಿಶ್ವಕರ್ಮಣಾ ॥ ೧೭ ॥

ಪುರೀ ವಿಶ್ವಾವತೀ ನಾಮ ಸಮೃದ್ಧಾ ಭೋಗ ಸಾಧನೈಃ ।
ತಸ್ಯಾಂ ವರುಣ ಆದಿತ್ಯೋ ದೀಪ್ಯಮಾನಃ ಸ್ವತೇಜಸಾ ॥ ೧೮ ॥

ಪಾತಿ ಸರ್ವಾನಿಮಾನ್ಲೋಕಾನ್ ನಿಯುಕ್ತೋ ಬ್ರಹ್ಮಣಾ ಸ್ವಯಮ್ ।
ಉಪಾಸ್ಯಮಾನೋ ಗಂಧರ್ವೈಸ್ತಥೈವಾಪ್ಸರಸಾಂ ಗಣೈಃ ॥ ೧೯ ॥

ದಿವ್ಯಗಂಧಾನುಲಿಪ್ತಾಂಗೋ ದಿವ್ಯಾಭರಣಭೂಷಿತಃ ।
ಕದಾಚಿದ್ವರುಣೋ ಯಾತೋ ಮಿತ್ರೇಣ ಸಹಿತೋ ವನಮ್ ॥ ೨೦ ॥

೧೭-೧೮. ವಿಶ್ವಕರ್ಮನೆಂಬ ದೇವಬಡಗಿಯು ಆದರ ಶಿಖರದಲ್ಲಿ ಬಹು ಶ್ರೇಷ್ಠವೂ, ಸುವರ್ಣಮಯವೂ, ಶುಭವೂ, ಸಕಲಸುಖಸಾಧನವಸ್ತುಗಳಿಂದ ಪೂರ್ಣವೂ ಆದ ವಿಶ್ವಾವತಿಯೆಂಬ ಪಟ್ಟಣವನ್ನು ರತ್ನಮಯವಾದ ಸ್ತಂಭಗಳಿಂದ ಮನೋಹರವಾಗಿ ರಚಿಸಿರುತ್ತಾನೆ. ಆ ಪುರಿಯಲ್ಲಿ ವರುಣನೆಂಬ ಆದಿತ್ಯನು ತನ್ನ ತೇಜಸ್ಸಿನಿಂದ ಬೆಳಗುತ್ತಲಿರುತ್ತಾನೆ.

೧೯. ವರುಣನು ಚತುರ್ಮುಖಬ್ರಹ್ಮನ ಅಪ್ಪಣೆಯ ಪ್ರಕಾರ ತಾನೇ ಗಂಧರ್ವರಿಂದಲೂ, ಅಪ್ಸರೋಗಣದಿಂದಲೂ ಸೇವಿಸಿಕೊಳ್ಳುತ್ತಾ, ಈ ಲೋಕಗಳೆಲ್ಲ ವನ್ನೂ ರಕ್ಷಿಸುತ್ತಾನೆ.

೨೦. ಈ ವರುಣನು ಒಮ್ಮೆ ಉತ್ತಮವಾದ ಗಂಧವನ್ನು ದೇಹಕ್ಕೆ ಬಳಿದು ಕೊಂಡು, ಶ್ರೇಷ್ಠವಾದ ಒಡವೆಗಳಿಂದ ಅಲಂಕೃತನಾಗಿ, ಮಿತ್ರನೆಂಬ ಆದಿತ್ಯನೊಡನೆ ವನಕ್ಕೆ ಹೋದನು.

ಕುರುಕ್ಷೇತ್ರೇ ಶುಭೇ ರಮ್ಯೇ ಸದಾ ಬ್ರಹ್ಮರ್ಷಿಸೇವಿತೇ ।
ನಾನಾಪುಷ್ಪಫಲೋಪೇತೇ ನಾನಾತೀರ್ಥಸಮಾಕುಲೇ ॥ ೨೧ ॥

ಆಶ್ರಮಾ ಯತ್ರ ದೃಶ್ಯಂತೇ ಮುನೀನಾಮೂರ್ಧ್ವರೇತಸಾಮ್ ।
ತಸ್ಮಿಂಸ್ತೀರ್ಥೇಽಸಮಾಶ್ರಿತ್ಯ ಬಹುಪುಷ್ಪ ಫಲೋದಕೇ ॥ ೨೨ ॥

ಚೀರಕೃಷ್ಣಾಜಿನಧರೌ ಚರಂತೌ ತಪ ಉತ್ತಮಮ್ ।
ತತ್ರೈಕಸ್ಮಿನ್ವನೋದ್ದೇಶೇ ವಿಮಲೋದೋ ಹ್ರದಃ ಶುಭಃ ॥ ೨೩ ॥

ಬಹುಗುಲ್ಮಲತಾಕೀರ್ಣೋಽ ನಾನಾಪಕ್ಷಿನಿಷೇವಿತಃ ।
ನಾನಾತರುವನಚ್ಛನ್ನೋ ನಲಿನ್ಯಾ ಚೋಪಶೋಭಿತಃ ॥ ೨೪ ॥

ಪೌಂಡರೀಕ ಇತಿ ಖ್ಯಾತೋ ಮೀನಕಚ್ಛಪಸೇವಿತಃ ।
ತತಸ್ತು ಮಿತ್ರಾವರುಣೌ ಭ್ರಾತರೌ ವನಚಾರಿಣೌ ।
ತಂ ತು ದೇಶಂ ಗತೌ ದೇವೌ ವಿಚರಂತೌ ಯದೃಚ್ಛಯಾ ॥ ೨೫ ॥

೨೧-೨೩. ಇವರಿಬ್ಬರು ಶುಭವೂ, ರಮ್ಯವೂ, ಯಾವಾಗಲೂ ಬ್ರಹ್ಮರ್ಷಿಗಳಿಂದ ಕೂಡಿದುದೂ, ಅನೇಕಗಳಾದ ಹೂ, ಹಣ್ಣುಗಳಿಂದ ಕೂಡಿದದೂ, ಅನೇಕ ತೀರ್ಥಗಳಿಂದ ಇಡಿದುದೂ ಆದ ಯಾವ ಕುರುಕ್ಷೇತ್ರದಲ್ಲಿ ಊರ್ಧ್ವರೇತಸ್ಕರಾದ ಮುನಿಗಳ ತಪೋವನಗಳು ಕಾಣುತ್ತವೆಯೋ, ಅಲ್ಲಿ ಬಹುವಾದ ಹೂವು, ಹಣ್ಣು, ನೀರು ಇರುವ ತೀರ್ಥದಲ್ಲಿದ್ದು, ನಾರುಬಟ್ಟೆ, ಜಿಂಕೆಯ ಚರ್ಮ, ಇವನ್ನು ಧರಿಸಿ, ಉತ್ತಮವಾದ ತಪವನ್ನೆಸಗುತ್ತಿದ್ದರು. ಅಲ್ಲಿ ಒಂದಾನೊಂದು ವನದ ಪ್ರದೇಶದಲ್ಲಿ ಶುದ್ಧೋದಕವಿರುವ ಆಳವಾದ ಶುಭ ಜಲಾಶಯವಿದ್ದಿತು.

೨೪-೨೫. ಆ ಜಲಾಶಯಕ್ಕೆ ಪೌಂಡರೀಕವೆಂದು ಪ್ರಸಿದ್ಧವಾದ ಹೆಸರು. ಅನೇಕವಾದ ಪೊದೆ, ಹಂಬು ಇವುಗಳಿಂದ ಗುಂಪಾಗಿರುವುದಾಗಿಯೂ, ಅನೇಕ ಪಕ್ಷಿಗಳಿಂದ ಸೇವಿತವಾದುದಾಗಿಯೂ, ಅನೇಕ ತೆರನಾದ ಮರಗಳುಳ್ಳ ಕಾಡಿನಿಂದ ಆವರಿಸಿಯೂ, ತಾವರೆಯಿಂದ ಅಂದಗಾಣುತ್ತಲೂ, ಮೀನು, ಆಮೆ ಇವುಗಳಿಂದ ಕೂಡಿದುದಾಗಿಯೂ, ಆ ಪೌಂಡರೀಕವು ಶೋಭಿಸುತ್ತಿದ್ದಿತು. ಬಳಿಕ ವನದಲ್ಲಿ ಸಂಚರಿಸುವ ಸ್ವಭಾವವುಳ್ಳ ಸಹೋದರರಾದ ಆ ಮಿತ್ರಾವರುಣರೆಂಬ ಆದಿತ್ಯರು ದೈವಯೋಗದಿಂದ ಸಂಚರಿಸುತ್ತಾ ಆ ಪ್ರದೇಶಕ್ಕೆ ಹೋದರು.

ತಾಭ್ಯಾಂ ತತ್ರ ತದಾ ದೃಷ್ಟಾ ಊರ್ವಶೀ ತು ವರಾಪ್ಸರಾಃ ।
ಸ್ನಾಯಂತೀ ಸಹಿತಾನ್ಯಾಭಿಃ ಸಖೀಭಿಃ ಸಾ ವರಾನನಾ ।
ಗಾಯಂತೀ ಚ ಹಸಂತೀ ಚ ವಿಶ್ವಸ್ತಾ ನಿರ್ಜನೇ ವನೇ ॥ ೨೬ ॥

ಗೌರೀ ಕಮಲ ಗರ್ಭಾಭಾ ಸ್ನಿಗ್ಧಕೃಷ್ಣಶಿರೋರುಹಾ ।
ಪದ್ಮಪತ್ರವಿಶಾಲಾಕ್ಷೀ ರಕ್ತೋಷ್ಠೀ ಮೃದುಭಾಷಿಣೀ ॥ ೨೭ ॥

ಶಂಖ ಕುಂದೇಂದು ಧವಲೈರ್ದಂತೈರವಿರಲೈಃ ಸಮೈಃ ।
ಸುಭ್ರೂಃ ಸುನಾಸಾ ಸಮುಖೀ ಸುಲಲಾಟಾ ಮನಸ್ವಿನೀ ॥ ೨೮ ॥

ಸಿಂಹವತ್ಸೂಕ್ಷ್ಮ ಮಧ್ಯಾಂಗೀ ಪೀನೋರುಜಘನಸ್ತನೀ ।
ಮಧುರಾಲಾಪಚತುರಾ ಸುಮಧ್ಯಾ ಚಾರುಹಾಸಿನೀ ॥ ೨೯ ॥

೨೬–೩೦. ಆಗ ಅಲ್ಲಿ ಅವರು ಇತರ ಗೆಳತಿಯರೊಡನೆ ಸ್ನಾನಮಾಡುತ್ತಲಿದ್ದ ಊರ್ವಶಿಯೆಂಬ ಉತ್ತಮಳಾದ ಅಪ್ಸರಸ್ತ್ರೀಯನ್ನು ಕಂಡರು. ಸುಂದರವದನೆಯಾದ ಅವಳು ಆ ನಿರ್ಜನವನದಲ್ಲಿ ಹಾಡುತ್ತಲೂ, ನಗುತ್ತಲೂ, ಯಾವ ಭಯವೂ ಇಲ್ಲವೆಂದು ನಂಬಿದವಳೂ, ಬೆಳ್ಳಗಿರುವಳೂ, ತಾವರೆಯುಗಬ್ಬದ ಕಾಂತಿಗೆ ಸಮಾನವಾದ ಕಾಂತಿಯುಳ್ಳವಳೂ, ಎಣ್ಣೆಬಳಿದ ಕಪ್ಪಾದ ಕೂದಲುಳ್ಳವಳೂ, ತಾವರೆಯು ದಳದಂತೆ ಹಿರಿದಾದ ಕಣ್ಗಳುಳ್ಳವಳೂ, ಕೆಂಪಗಿರುವ ಬಾಯ್ದೆರೆಯುಳ್ಳವಳೂ, ಮೆಲ್ಲನೆ ನುಡಿಯುತ್ತಿದ್ದವಳೂ, ಸಂಕು, ಮಲ್ಲಿಯನನೆ ಮತ್ತು ಚಂದ್ರ ಇವರಂತೆ, ಬೆಳ್ಳಗಿರುವ ದಟ್ಟವಾದ ಸಮವಾದ ಹಲ್ಲುಗಳಿಂದ ಕೂಡಿದವಳೂ, ಒಳ್ಳೆಯಮಾದ ಹುಬ್ಬು, ಮೂಗು, ಮೊಗ, ಹಣೆಗಳುಳ್ಳವಳಾಗಿಯೂ, ಉತ್ತಮವಾದ ಮನವುಳ್ಳವಳೂ, ಸಿಂಗದಂತೆ ಆಸಿನಡುವಿನೊಡಲುಳ್ಳವಳೂ, ತೋರವಾದ ತೊಡೆಗಳು, ಜಘನ ಮತ್ತು ಸ್ತನಗಳು ಇವುಗಳನ್ನುಳ್ಳವಳೂ, ಇನಿಮಾತಿನಲ್ಲಿ ಚತುರೆಯೂ, ಒಳ್ಳೆಯ ಮಧ್ಯಭಾಗವುಳ್ಳವಳೂ, ಮನೋಹರವಾಗಿ ಹಾಸಮಾಡುವವಳೂ, ಕೆಂದಾವರೆ

ರಕ್ತೋತ್ಪಲಕರಾ ತನ್ವೀ ಸುಪದೀ ವಿನಯಾನ್ವಿತಾ ।
ಪೂರ್ಣಚಂದ್ರನಿಭಾ ಬಾಲಾ ಮತ್ತದ್ವಿರದಗಾಮಿನೀ ॥ ೩೦ ॥

ದೃಷ್ಟ್ವಾ ತಸ್ಯಾಸ್ತು ತದ್ರೂಪಂ ತೌ ದೇವೌ ವಿಸ್ಮಯಂ ಗತೌ ।
ಯಸ್ಯಾ ಹಾಸ್ಯೇನ ಲಾಸ್ಯೇನ ಸ್ಮಿತೇನ ಲಲಿತೇನ ಚ ॥ ೩೧ ॥

ಮೃದುನಾ ವಾಯುನಾ ಚೈವ ಶೀತಲೇನ ಸುಗಂಧಿನಾ ।
ಮತ್ತಭ್ರಮರಗೀತೇನ ಪುಂಸ್ಕೋಕಿಲರುತೇನ ಚ ॥ ೩೨ ॥

ಸುಸ್ವರೇಣ ಹಿ ಗೀತೇನ ಊರ್ವಶ್ಯಾ ಮಧುರೇಣ ಚ ।
ಈಕ್ಷಿತಾ ಚ ಕಟಾಕ್ಷೇಣ ಸ್ಪಂದಿತೌ ತಾವುಭಾವಪಿ ॥ ೩೩ ॥

ಯಂತಿರುವ ಕೈಗಳುಳ್ಳವಳೂ, ಅಸಿಯಳೂ, ಒಳ್ಳೆಯ ಅಡಿಗಳುಳ್ಳವಳೂ, ವಿನಯದಿಂದ ಕೂಡಿದವಳೂ, ತುಂಬುವೆರೆಗೆ ಸಮಳೂ, ಮದಗೊಂಡ ಆನೆಯಂತೆ ನಡೆಯುಳ್ಳವಳೂ-ಆದ ಬಾಲೆಯಾಗಿದ್ದಳು.

೩೧-೩೩. ಆ ಮಿತ್ರಾವರುಣರೆಂಬ ದೇವತೆಗಳು ಅವಳ ಆ ರೂಪವನ್ನು ಕಂಡು ಅಚ್ಚರಿಗೊಂಡರು. ಯಾವ ಊರ್ವಶಿಯ ಹಾಸ್ಯ, ಲಾಸ್ಯ, ಮಂದಹಾಸ, ಲಲಿತಗಳಿಂದಲೂ, ಎಳೆಯೆಲರಿಂದಲೂ, ತಣ್ಣೆಲರ ಕಂಪಿನಿಂದಲೂ, ಕೊಬ್ಬಿದ ದುಂಬಿಯ ಝೇಂಕಾರದಿಂದಲೂ, ಗಂಡುಕೋಗಿಲೆಯ ಇಂಚರದಿಂದಲೂ, ಸುಸ್ವರವೂ, ಇಂಪೂ ಆದ ಊರ್ವಶಿಯ ಹಾಡಿನಿಂದಲೂ, ಅವಳ ಕಡೆಗಣ್ಣೋಟದಿಂದಲೂ, ಆ ಇರ್ವರು ದೇವತೆಗಳೂ ಚಲಿಸಿಹೋದರು.

ನಿಮೇಃ ಶಾಪಾದಥೋತ್ಕ್ರಮ್ಯ ಸ್ವದೇಹಾನ್ಮುನಿಸತ್ತಮ ।
ವಸಿಷ್ಠ ಮಿತ್ರಾವರುಣಾತ್ಮಜೋಽಸೀ-
-ತ್ಯೂಚುರಾಗತ್ಯ ಹಿ ವಿಶ್ವದೇವಾಃ ।
ರೇತಸ್ತ್ರಿಭಾಗಂ ಕಮಲೇ ಚರಂತಂ
ವಸಿಷ್ಠ ಏವಂ ತು ಪಿತಾಮಹೋಕ್ತೇಃ ॥ ೩೪ ॥

ಬಹುಧಾ ಪತಿತಂ ರೇತಃ ಕಮಲೇಽಥ ಸ್ಥಲೇ ಜಲೇ ।
ಅರವಿಂದೇ ವಸಿಷ್ಠಸ್ತು ಜಾತಸ್ತು ಮುನಿಸತ್ತಮ ॥ ೩೫ ॥

ಸ್ಥಲೇಽತ್ವಗಸ್ತ್ಯಃ ಸಂಭೂತೋ ಜಲೇ ಮತ್ಸ್ಯೋ ಮಹಾದ್ಯುತಿಃ ।
ಸ ತತ್ರ ಜಾತೋ ಮತಿಮಾನ್ವಸಿಷ್ಠಃ
ಕುಂಭೇ ತ್ವಗಸ್ತ್ಯಃ ಸಲಿಲೇಽಥ ಮತ್ಸ್ಯಃ ।

---

೩೪. ಎಲೈ ಮುನಿಶ್ರೇಷ್ಠನಾದ ಭಾರದ್ವಾಜನೇ ! ಕೇಳು ; ನಿಮಿಯ ಶಾಪದಿಂದ ವಸಿಷ್ಠ ಚೇತನವು ಆ ಒಡಲಿನಿಂದ ಹೊರಹೊರಟಿತು. ಎಲ್ಲ ದೇವತೆಗಳೂ ಆಗ, ' ಎಲೈ ವಸಿಷ್ಠನೇ ! ನೀನು ಮಿತ್ರಾವರುಣರ ಮಗನಾಗಿದ್ದೀಯೆ ' ಎಂದು ಅಲ್ಲಿಗೆ ಬಂದು ಹೇಳಿದರು. ಬ್ರಹ್ಮನೂ ಕಮಲದಲ್ಲಿ ಚಲಿಸುತ್ತಿದ್ದ ಆ ಮಿತ್ರಾವರುಣರ ರೇತಸ್ಸಿನ ಮೂರನೆಯ ಒಂದು ಭಾಗವನ್ನು ವಸಿಷ್ಠನೆಂದು ಹೇಳಿದನು.

೩೫. ಆ ಮಿತ್ರಾವರುಣರ ರೇತಸ್ಸು ತಾವರೆಯಲ್ಲಿಯೂ, ನೆಲದಲ್ಲಿಯೂ, ನೀರಿನಲ್ಲಿಯೂ, ಈ ಮೂರೆಡೆಗಳಲ್ಲಿಯೂ ಬಿದ್ದಿತು. ಎಲೈ ಮುನಿಸತ್ತಮ ! ಆ ತಾವರೆಯಲ್ಲಿ ವಸಿಷ್ಠನು ಮೈತ್ರಾವರುಣಿಯಾಗಿ ಹುಟ್ಟಿದನು.

೩೬. ನೆಲದಲ್ಲಿ ಅಗಸ್ತ್ಯನೂ, ಜಲದಲ್ಲಿ ಬಹು ತೇಜಸ್ವಿಯಾದ ಮೀನೂ ಹುಟ್ಟಿದುವು. ಇಂತು ಅಲ್ಲಿ ಜ್ಞಾನಿಯಾದ ವಸಿಷ್ಠನು ಜನಿಸಿದನು. ಕುಂಭದಲ್ಲಿ

ಸ್ಥಾನತ್ರಯೇ ತತ್ಪತಿತಂ ಸಮಾನಂ
ಮಿತ್ರಸ್ಯ ಯಸ್ಮಾದ್ವರುಣಸ್ಯ ರೇತಃ ॥ ೩೬ ॥

ಏತಸ್ಮಿನ್ನೇವ ಕಾಲೇ ತು ಸಾ ಗತಾ ಊರ್ವಶೀ ದಿವಮ್ ॥ ೩೭ ॥

ಉಪೇತ್ಯ ತಾನೃಷೀನ್ದೇವೌ ಗತೌ ಭೂಯಃ ಸ್ವಮಾಶ್ರಮಮ್ ।
ಯಮಾವಪಿ ತು ತಪ್ಯೇತೇ ಪುನರುಗ್ರಂ ಪರಂ ತಪಃ ॥ ೩೮ ॥

ತಪಸಾ ಪ್ರಾಪ್ತುಕಾಮೌ ತೌ ಪರಂ ಜ್ಯೋತಿಸ್ಸನಾತನಮ್ ।
ತಪಸ್ಯಂತೌ ಸುರಶ್ರೇಷ್ಠೌ ಬ್ರಹ್ಮಾಗತ್ಯೇದಮಬ್ರವೀತ್ ॥ ೩೯ ॥

ಅಗಸ್ತ್ಯನು ಹುಟ್ಟಿದನು. ನೀರಿನಲ್ಲಿ ಮೀನು ಹುಟ್ಟಿತು. ಯಾವ ಈ ಕಾರಣದಿಂದ ಮಿತ್ರನ ಮತ್ತು ವರುಣನ ರೇತಸ್ಸು ಮೂರೆಡೆಗಳಲ್ಲಿಯೂ ಸಮಾನ ಪರಿಮಾಣದಲ್ಲಿ ಬಿದ್ದಿತು.

೩೭. ಇದೇ ಸಮಯದಲ್ಲಿ ಊರ್ವಶಿಯು ಸ್ವರ್ಗಕ್ಕೆ ತೆರಳಿದಳು.

೩೮. ಈರ್ವರು ದೇವತೆಗಳೂ ಆ ಮುನಿಗಳನ್ನು ಹೊಂದಿ, ಮತ್ತೆ ತಮ್ಮ ಆಶ್ರಮಕ್ಕೆ ಹಿಂದಿರುಗಿ ಬಂದರು. ಪುನಃ ಈ ಯಮಳರೂ ಉಗ್ರತಪವನ್ನೆಸಗಲು ಮೊದಲುಮಾಡಿದರು.

೩೯. ತಪದಿಂದ ಪರಂಜ್ಯೋತಿಃಸ್ವರೂಪನೂ, ಸನಾತನನೂ ಆದ ಶ್ರೀಮನ್ನಾರಾಯಣನನ್ನು ಹೊಂದಬೇಕೆಂದು ಉದ್ದೇಶಿಸಿ ತಪವನ್ನು ಎಸಗುತ್ತಲಿದ್ದ, ಈ ದೇವಶ್ರೇಷ್ಠರನ್ನು ಕುರಿತು, ವಿರಿಂಚನು ಬಂದು ಇಂತು ಹೇಳಿದನು.

ಮಿತ್ರಾವರುಣಕೌ ದೇವೌ ಪುತ್ರವಂತೌ ಮಹಾದ್ಯುತೀ ।
ಸಿದ್ಧಿರ್ಭವಿಷ್ಯತಿ ಯಥಾ ಯುವಯೋರ್ವೈಷ್ಣವೀ ಪುನಃ ॥ ೪೦ ॥

ಸ್ವಾಧಿಕಾರೇಣ ತಿಷ್ಠೇಯಾತಾಮಧುನಾ ಲೋಕ ಸಾಕ್ಷಿಣೌ ।
ಇತ್ಯುಕ್ತ್ವಾಂತರ್ದಧೇ ಬ್ರಹ್ಮಾ ತೌ ಸ್ಥಿತೌ ಸ್ವಾಧಿಕಾರಕೌ ॥ ೪೧ ॥

ಏವಂ ತೇ ಕಥಿತಂ ವಿಪ್ರ ವಸಿಷ್ಠಸ್ಯ ಮಹಾತ್ಮನಃ ।
ಮಿತ್ರಾವರುಣ ಪುತ್ರತ್ವಮಗಸ್ತ್ಯಸ್ಯ ಚ ಧೀಮತಃ ॥ ೪೨ ॥

ಇದಂ ಪುಂಸೀಯಮಾಖ್ಯಾನಂ ವಾರುಣಂ ಪಾಪನಾಶನಮ್ ।
ಪುತ್ರಕಾಮಾಸ್ತು ಯೇ ಕೇಚಿಚ್ಛೃಣ್ವಂತೀದಂ ಶುಚಿವ್ರತಾಃ ॥ ೪೩ ॥

ಅಚಿರಾದೇವ ಪುತ್ರಾಂಸ್ತೇ ಲಭಂತೇ ನಾತ್ರ ಸಂಶಯಃ ।
ಯಶ್ಚೈತತ್ಪಠತೇ ನಿತ್ಯಂ ಹವ್ಯಕವ್ಯೇ ದ್ವಿಜೋತ್ತಮ ॥ ೪೪ ॥

೪೦-೪೧. 'ಮಹಾತೇಜಸ್ವಿಗಳೂ, ಪುತ್ರವಂತರೂ ಆದ ಎಲೈ ಮಿತ್ರಾವರುಣರಾದ ದೇವತೆಗಳೇ! ನಿಮಗೆ ವಿಷ್ಣುಲೋಕ ಪ್ರಾಪ್ತಿಯುಂಟಾಗುವುದು. ಮೊದಲಿನಂತೆಯೇ ಈಗ ನೀವು ಲೋಕಸಾಕ್ಷಿಗಳಾಗಿ ನಿಮ್ಮ ಅಧಿಕಾರದಿಂದ ಇದ್ದುಕೊಂಡಿರಿ' ಎಂದು ಬ್ರಹ್ಮನು ಹೇಳಿ, ಅಂತರ್ಧಾನವನ್ನು ಹೊಂದಿದನು. ಆ ಮಿತ್ರಾವರುಣರೂ ತಂತಮ್ಮ ಅಧಿಕಾರವನ್ನು ಕೈಕೊಂಡರು.

೪೨. ಎಲೈ ವಿಪ್ರನೇ! ಮಹಾತ್ಮನಾದ ವಸಿಷ್ಠನೂ, ಜ್ಞಾನಿಯಾದ ಅಗಸ್ತ್ಯನೂ, ಮಿತ್ರಾವರುಣರ ಮಕ್ಕಳಾಗಿ ಹುಟ್ಟಿದ ಈ ಸಂಗತಿಯನ್ನು ನಿನಗೆ ಹೇಳಿದೆನು.

೪೩-೪೭. ಸಂತಾನಾರ್ಥಿಗಳಾದವರು ಯಾರಾದರೂ ವರುಣನು ಮಕ್ಕಳನ್ನು ಪಡೆದ ಪಾಪನಾಶಕವಾದ ಈ ಕಥೆಯನ್ನು ಪರಿಶುದ್ಧರಾಗಿ ನಿಯಮದಿಂದ ಕೇಳುತ್ತಾರೆಯೋ, ಅವರು ಬೇಗನೆ ಮಕ್ಕಳನ್ನು ಹೊಂದುತ್ತಾರೆ. ಇದರಲ್ಲಿ ಸಂದೇಹವಿಲ್ಲವು. ಎಲೈ ದ್ವಿಜಶ್ರೇಷ್ಠನೇ! ಯಾರು ಈ ಆಖ್ಯಾನವನ್ನು ನಿತ್ಯದಲ್ಲಿಯೂ,

ದೇವಾಶ್ಚ ಪಿತರಸ್ತಸ್ಯ ತೃಪ್ತಾ ಯಾಂತಿ ಪರಂ ಸುಖಮ್ ।
ಯಶ್ಚೈತಚ್ಛೃಣುಯಾನ್ನಿತ್ಯಂ ಪ್ರಾತರುತ್ಥಾಯ ಮಾನವಃ ॥ ೪೫ ॥

ನಂದತೇ ಸ ಸುಖಂ ಭೂಮೌ ವಿಷ್ಣುಲೋಕಂ ಸಗಚ್ಛತಿ ॥ ೪೬ ॥

ಇತ್ಯೇತದಾಖ್ಯಾನಮಿದಂ ಮಯೇರಿತಂ
ಪುರಾತನಂ ವೇದವಿದ್ಯೈರುದೀರಿತಮ್ ।
ಪಠಿಷ್ಯತೇ ಯಸ್ತು ಶೃಣೋತಿ ಸರ್ವದಾ ।
ಸ ಯಾತಿ ಶುದ್ಧೋ ಹರಿಲೋಕಮಂಜಸಾ ॥ ೪೭ ॥

ಇತಿ ಶ್ರೀ ನೃಸಿಂಹಪುರಾಣೇ ಪುಂಸವನಾಖ್ಯಾನಂ
ನಾಮ ಷಷ್ಠೋಽಧ್ಯಾಯಃ

ಹವ್ಯಕವ್ಯಗಳಲ್ಲಿಯೂ ಪಠಿಸುತ್ತಾರೆಯೋ, ಅವರು ದೇವತೆಗಳ ಮತ್ತು ಪಿತೃಗಳ ಅನುಗ್ರಹದಿಂದ ಅತ್ಯಂತವಾದ ಆನಂದವನ್ನು ಹೊಂದುತ್ತಾರೆ. ಯಾವ ಮಾನವನು ನಿತ್ಯದಲ್ಲಿಯೂ ಬೆಳಗ್ಗೆ ಎದ್ದು ಈ ಆಖ್ಯಾನವನ್ನು ಕೇಳುತ್ತಾನೆಯೋ, ಅವನು ಈ ಪೊಡವಿಯಲ್ಲಿ ಸುಖದಿಂದ ನಲಿಯುತ್ತಾನೆ; ಪರದಲ್ಲಿ ವಿಷ್ಣುಲೋಕವನ್ನು ಹೊಂದುತ್ತಾನೆ. ವೇದಗಳನ್ನರಿತ ಜ್ಞಾನಿಗಳು ಹೇಳಿದ ಪುರಾತನವಾದ ಈ ಆಖ್ಯಾನವನ್ನು ನಾನು ನಿನಗೆ ಹೇಳಿದೆನು. ಯಾವಾತನು ಇದನ್ನು ಯಾವಾಗಲೂ ಓದುತ್ತಾನೆಯೋ ಮತ್ತು ಕೇಳುತ್ತಾನೆಯೋ, ಅವನು ಸಕಲ ಪಾಪಗಳಿಂದಲೂ ಸಂಪೂರ್ಣಶುದ್ಧನಾಗಿ ಶ್ರೀ ವಿಷ್ಣುಲೋಕವನ್ನು ಹೊಂದುವನು.

ಇಂತು ಶ್ರೀ ನೃಸಿಂಹಪುರಾಣದಲ್ಲಿ ಪುಂಸವನಾಖ್ಯಾನವೆಂಬ

ಆರನೆಯ ಅಧ್ಯಾಯವು ಮುಗಿದುದು.

ಆರನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ಭರದ್ವಾಜನು ಸೂತರನ್ನು ಕುರಿತು, ವಸಿಷ್ಠನು ಮಿತ್ರಾವರುಣರ ಮಗನಾದುದು ಹೇಗೆಂದು ಕೇಳಲು, ಮಿತ್ರಾವರುಣರೆಂಬ ಆದಿತ್ಯರು ತಪವನ್ನೆಸಗುತ್ತಲಿದ್ದವರು ಒಮ್ಮೆ ಕುರುಕ್ಷೇತ್ರಕ್ಕೆ ಬಂದು, ನಿರ್ಜನವಾದ ಒಂದು ಪ್ರದೇಶದಲ್ಲಿದ್ದ ಒಂದು ಕೊಳದಲ್ಲಿ ಗೆಳತಿಯರೊಡಗೂಡಿ ಮೀಯುತ್ತಲಿದ್ದ ಊರ್ವಶಿಯ ಸೊಬಗನ್ನು ಕಂಡು ಚಲಿಸಿದರು. ಅವರ ರೇತಸ್ಸು ತಾವರೆಯಲ್ಲಿ, ಸ್ಥಲದಲ್ಲಿ ಮತ್ತು ನೀರಲ್ಲಿ ಸಮಪ್ರಮಾಣದಲ್ಲಿ ಮೂರು ಭಾಗವಾಗಿ ಬಿದ್ದಿತು. ಆಗ ನಿಮಿಯ ಶಾಪದಿಂದ ವಸಿಷ್ಠ ಚೇತನನು ಆ ದೇಹವನ್ನು ಬಿಟ್ಟು ಬಂದು ಈ ತಾವರೆಯಲ್ಲಿ ಮೈತ್ರಾವರುಣಿಯಾಗಿ ಹುಟ್ಟಿದನು. ನೆಲದಲ್ಲಿ ಬಿದ್ದ ರೇತಸ್ಸಿನಿಂದ ಕುಂಭದಲ್ಲಿ ಅಗಸ್ತ್ಯರು ಹುಟ್ಟಿದರು. ನೀರಿನಲ್ಲಿ ಮೀನು ಹುಟ್ಟಿತು. ಮತ್ತೆ ಆ ಮಿತ್ರಾವರುಣರು ವಿಷ್ಣುಲೋಕವನ್ನು ಹೊಂದಬೇಕೆಂದು ತಪಸ್ಸು ಮಾಡುತ್ತಿರಲು, ಬ್ರಹ್ಮನು ಬಂದು ಅವರಿಗೆ ವಿಷ್ಣುಲೋಕ ಪ್ರಾಪ್ತಿಯಾಗುವುದೆಂದು ಅನುಗ್ರಹಿಸಿ, ಅವರು ತಮ್ಮ ಲೋಕಸಾಕ್ಷಿಕವೆಂಬ ಅಧಿಕಾರದಲ್ಲಿರಬೇಕೆನ್ನಲು, ಅವರೂ ಅಂತೆಸಗುವರು. ಈ ಪುಂಸವನ ಕಥೆಯನ್ನು ಕೇಳಿದವರು ಇಹಲೋಕದಲ್ಲಿ ಸೌಖ್ಯಸತ್ಸಂತಾನಾದಿಗಳನ್ನೂ, ಪರದಲ್ಲಿ ಮುಕ್ತಿಯನ್ನೂ ಪಡೆಯುವರು, ಎಂದು ನಿರೂಪಿಸಿದೆ.

ಇಂತು ಆರನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸಪ್ತಮೋಽಧ್ಯಾಯಃ

ಮಾರ್ಕಂಡೇಯ ಮೃತ್ಯುಂಜಯಃ

॥ ಶ್ರೀ ಭಾರದ್ವಾಜ ಉವಾಚ ॥

ಮಾರ್ಕಂಡೇಯೇನ ಮುನಿನಾ ಕಥಂ ಮೃತ್ಯುಃ ಪರಾಜಿತಃ ।
ಏತದಾಖ್ಯಾಹಿ ಮೇ ಸೂತ ತ್ವಯ್ಯೈತತ್ಸೂಚಿತಂ ಪುರಾ ॥ ೧ ॥

॥ ಸೂತ ಉವಾಚ ॥

ಇದಂ ತು ಮಹದಾಖ್ಯಾನಂ ಭರದ್ವಾಜ ಶೃಣುಷ್ವ ಮೇ ।
ಶೃಣ್ವಂತು ಋಷಯಶ್ಚೇಮೇ ಪುರಾವೃತ್ತಂ ಬ್ರವೀಮ್ಯಹಮ್ ॥ ೨ ॥

ಸೃಷ್ಟಿಕಾಂಡ; ಏಳನೆಯ ಅಧ್ಯಾಯವು

ಮಾರ್ಕಂಡೇಯನು ಮೃತ್ಯುವನ್ನು ಗೆದ್ದುದು.

ಶ್ರೀ ಭರದ್ವಾಜನು ಸೂತರನ್ನು ಕುರಿತು ಇಂತು ಹೇಳುತ್ತಾನೆ:--

೧. 'ಎಲೈ ಸೂತ ಮಹಾಮುನಿಗಳೇ! ನೀವು ಹಿಂದೆ ಸೂಚಿಸಿದ ಮಾರ್ಕಂಡೇಯ ಮುನಿಯು ಮೃತ್ಯುವನ್ನು ಗೆದ್ದುದು ಹೇಗೆ? ಎಂಬುದನ್ನು ದಯವಿಟ್ಟು ನನಗೆ ತಿಳಿಸಿರಿ' ಎಂದು ಕೇಳಲು;

ಸೂತರು ಹೇಳುತ್ತಾರೆ:—

೨. ಎಲೈ ಭರದ್ವಾಜನೇ! ಮತ್ತು ಮುನಿಗಳೇ! ಈ ಮಾರ್ಕಂಡೇಯಾಖ್ಯಾನವು ಬಹು ದೊಡ್ಡದು; ಬಹು ಪುರಾತನವಾದ ಚರಿತ್ರೆಯು. ಇದನ್ನು ಹೇಳುವೆನು; ಕೇಳಿರಿ.

ಕುರುಕ್ಷೇತ್ರೇ ಮಹಾಪುಣ್ಯೇ ವ್ಯಾಸಪೀಠೇ ಮಹಾಶ್ರಮೇ ।
ತತ್ರಾಸೀನಂ ಮುನಿವರಂ ಕೃಷ್ಣದ್ವೈಪಾಯನಂ ಮುನಿಮ್ ॥ ೩ ॥

ಕೃತಸ್ನಾನಂ ಕೃತಜಪಂ ಮುನಿಶಿಷ್ಯೈಃ ಸಮಾವೃತಮ್ ।
ವೇದವೇದಾರ್ಥತತ್ತ್ವಜ್ಞಂ ಸರ್ವಶಾಸ್ತ್ರವಿಶಾರದಮ್ ॥ ೪ ॥

ಪ್ರಣಿಪತ್ಯ ಯಥಾನ್ಯಾಯಂ ಶುಕಃ ಪರಮಧಾರ್ಮಿಕಃ ।
ಇಮಮೇವಾರ್ಥಮುದ್ದಿಶ್ಯ ತಂ ಪಪ್ರಚ್ಛ ಕೃತಾಂಜಲಿಃ ॥ ೫ ॥

ಯಮುದ್ದಿಶ್ಯ ವಯಂ ಪೃಷ್ಟಾಸ್ತ್ವಯಾತ್ರ ಮುನಿಸಂನಿಧೌ ।
ನರಸಿಂಹಸ್ಯ ಭಕ್ತೇನ ಕೃತತೀರ್ಥನಿವಾಸಿನಾ ॥ ೬ ॥

೩-೬. ಕುರುಕ್ಷೇತ್ರವು ಅತ್ಯಂತ ಪುಣ್ಯ ಭೂಯಿಷ್ಠವಾದುದು. ವೇದಗಳು, ವೇದಾರ್ಥಗಳು ಮತ್ತು ತತ್ವಗಳು-ಇವುಗಳನ್ನು ಸಂಪೂರ್ಣವಾಗಿ ಅರಿತಿರುವ, ಸಕಲ ಶಾಸ್ತ್ರನಿಪುಣನಾದ, ಸರ್ವಜ್ಞನಾದ ಶ್ರೀ ಕೃಷ್ಣದ್ವೈಪಾಯನ ವ್ಯಾಸಮುನಿಯು ಆ ಕುರುಕ್ಷೇತ್ರದ ಶ್ರೇಷ್ಠವಾದ ತಪೋವನ ನಿವಾಸಿಗಳಾದ, ಸ್ನಾನಜಪಾದಿ ಕರ್ಮಗಳನ್ನು ನೆರವೇರಿಸಿಕೊಂಡು ಬಂದಿರುವ ಶಿಷ್ಯರಾದ ಮುನಿಗಳಿಂದ ಸುತ್ತುವರಿಯಲ್ಪಟ್ಟು ಕುಳಿತಿರುವಾಗ, ಪರಮ ಧಾರ್ಮಿಕನಾದ ಶುಕಾಚಾರ್ಯನು ವಿಧ್ಯುಕ್ತರೀತಿಯಲ್ಲಿ ದಂಡಪ್ರಣಾಮವನ್ನೆಸಗಿ, ಅಂಜಲಿ ಬದ್ಧನಾಗಿ, ಇಲ್ಲಿ ಈ ಮುನಿಗಳ ಇದಿರಿನಲ್ಲಿ ಈ ಪ್ರಯಾಗತೀರ್ಥವಾಸಿಯೂ, ಶ್ರೀ ನರಸಿಂಹನ ಭಕ್ತನೂ ಆದ ನೀನು (ಭರದ್ವಾಜನು) ಯಾವುದನ್ನುದ್ದೇಶಿಸಿ ನಮ್ಮನ್ನು ಕೇಳಿದೆಯೋ, ಆ ಮಾರ್ಕಂಡೇಯನು ಮೃತ್ಯುವನ್ನು ಗೆದ್ದ ಈ ವಿಷಯವನ್ನೇ ಪ್ರಶ್ನೆ ಮಾಡಿದನು.

॥ ಶ್ರೀ ಶುಕ ಉವಾಚ ॥

ಮಾರ್ಕಂಡೇಯೇನ ಮುನಿನಾ ಕಥಂ ಮೃತ್ಯುಃ ಪರಾಜಿತಃ ।
ಏತದಾಖ್ಯಾಹಿ ಮೇ ತಾತ ಶ್ರೋತುಮಿಚ್ಛಾಮಿ ತೇಽಧುನಾ ॥ ೭ ॥

॥ ವ್ಯಾಸ ಉವಾಚ ॥

ಮಾರ್ಕಂಡೇಯೇನ ಮುನಿನಾ ಯಥಾ ಮೃತ್ಯುಃ ಪರಾಜಿತಃ ।
ತಥಾ ತೇ ಕಥಯಿಷ್ಯಾಮಿ ಶೃಣು ವತ್ಸ ಮಹಾಮತೇ ॥ ೮ ॥

ಶೃಣ್ವಂತು ಮುನಯಶ್ಶೀಷೋ ಕಥ್ಯಮಾನಂ ಮಯಾಽಧುನಾ ।
ಮಚ್ಛಿಷ್ಯಾಶ್ಚೈವ ಶೃಣ್ವಂತು ಮಹದಾಖ್ಯಾನಮುತ್ತಮಮ್ ॥ ೯ ॥

ಭೃಗೋಃ ಖ್ಯಾತ್ಯಾಂ ಸಮುತ್ಪನ್ನೋ ಮೃಕಂಡುರ್ನಾಮ ವೈ ಸುತಃ ।
ಸುಮಿತ್ರಾ ನಾಮ ವೈ ಪತ್ನೀ ಮೃಕಂಡೋಸ್ತು ಮಹಾತ್ಮನಃ ॥ ೧೦ ॥

---

೭. ಶ್ರೀ ಶುಕನು ಕೃಷ್ಣದ್ವೈಪಾಯನನನ್ನು ಕುರಿತು ಇಂತು ಹೇಳುತ್ತಾನೆ: 'ಎಲೈ ತಂದೆಯೇ! ಮಾರ್ಕಂಡೇಯ ಮುನಿಯು ಮೃತ್ಯುವನ್ನು ಹೇಗೆ ತಿರಸ್ಕರಿಸಿ ಗೆದ್ದನು? ಎಂಬುದನ್ನು ಕೇಳಲು ನಾನು ಈಗ ಬಯಸುತ್ತೇನೆ. ಈ ವಿಷಯವನ್ನು ದಯವಿಟ್ಟು ನನಗೆ ಹೇಳು;' ಎಂದು ಶುಕನು ಕೇಳಲು;

ಆಗ ಕೃಷ್ಣದ್ವೈಪಾಯನ ವ್ಯಾಸನು ಹೇಳುತ್ತಾನೆ:—

೮. ಎಲೈ ವತ್ಸನಾದ ಶುಕನೇ! ಕೇಳು; ಮಾರ್ಕಂಡೇಯ ಮುನಿಯು ಮೃತ್ಯುವನ್ನು ಹೇಗೆ ಸೋಲಿಸಿದನೆಂಬುದನ್ನು ನಿನಗೆ ಹೇಳುವೆನು.

೯. ಈಗ ನಾನು ಹೇಳುವ ಉತ್ತಮವಾದ ಹಿರಿದಾದ ಈ ಆಖ್ಯಾನವನ್ನು ಈ ಮುನಿಗಳೂ, ನನ್ನ ಶಿಷ್ಯರೂ ಕೇಳಲಿ.

೧೦. ಭೃಗುಮುನಿಯಿಂದ ಖ್ಯಾತಿಯೆಂಬುವಳಲ್ಲಿ ಮೃಕಂಡುವೆಂಬ ಹೆಸರಿನ ಮಗನು ಹುಟ್ಟಿದನು. ಆ ಮಹಾತ್ಮನಾದ ಮೃಕಂಡುವಿಗೆ ಸುಮಿತ್ರೆಯೆಂಬುವಳು ಹೆಂಡತಿಯು.

ಧರ್ಮಜ್ಞಾ ಧರ್ಮನಿರತಾ ಪತಿಶುಶ್ರೂಷಣೇ ರತಾ ।
ತಸ್ಯಾಂ ತು ಸಂಜಾತೋ ಜಾತೋ ಮಾರ್ಕಂಡೇಯೋ ಮಹಾಮತಿಃ ॥ ೧೧ ॥

ಭೃಗುಪೌತ್ರೋ ಮಹಾಭಾಗೋ ಬಾಲತ್ವೇಽಪಿ ಮಹಾಮತಿಃ ।
ವವೃಧೇ ವಲ್ಲಭೋ ಬಾಲಃ ಪಿತ್ರಾ ತತ್ರ ಕೃತಕ್ರಿಯಃ ॥ ೧೨ ॥

ತಸ್ಮಿನ್ಸ್ವೈ ಜಾತಮಾತ್ರೇ ತು ಆಗಮೀ ಕಶ್ಚಿದಬ್ರವೀತ್ ।
ವರ್ಷೇ ದ್ವಾದಶಮೇ ಪೂರ್ಣೇ ಮೃತ್ಯುರಸ್ಯ ಭವಿಷ್ಯತಿ ॥ ೧೩ ॥

ಶ್ರುತ್ವಾ ತನ್ಮಾತೃಪಿತರೌ ದುಃಖಿತೌ ತೌ ಬಭೂವತುಃ ।
ವಿದೂಯಮಾನ ಹೃದಯೌ ತಂ ನಿರೀಕ್ಷ್ಯ ಮಹಾಮತೇ ॥ ೧೪ ॥

---

೧೧. ಆ ಸುಮಿತ್ರೆಯು ಧರ್ಮವನ್ನರಿತವಳು, ಧರ್ಮಾಚರಣೆಯಲ್ಲಿ ತೊಡಗಿದವಳು ಮತ್ತು ಗಂಡನ ಸೇವೆಯಲ್ಲಿ ಆಸಕ್ತಳಾದವಳು ಆಗಿದ್ದಳು. ಆ ಮೃಕಂಡುವಿಗೆ ಅವಳಲ್ಲಿ ಮಹಾಜ್ಞಾನಿಯಾದ ಮಾರ್ಕಂಡೇಯನೆಂಬ ಮಗನು ಹುಟ್ಟಿದನು.

೧೨. ಭೃಗುವಿನ ಮುಮ್ಮಗನೂ, ಮಹಾ ಪುಣ್ಯಶಾಲಿಯೂ. ಬಾಲ್ಯದಲ್ಲಿಯೇ ಬಹುಬುದ್ಧಿವಂತನೂ, ಮಾತಾಪಿತೃಗಳಿಗೆ ಪ್ರಿಯನೂ ಆದ ಆ ಬಾಲನು ತಂದೆಯಿಂದ ಜಾತಕರ್ಮಾದಿ ಸಂಸ್ಕಾರಗಳನ್ನು ಪಡೆದು, ಬೆಳೆಯುತ್ತಿದ್ದನು.

೧೩. ಆ ಬಾಲಕನು ಹುಟ್ಟಿದ ಕೂಡಲೇ ಭವಿಷ್ಯವನ್ನು ನುಡಿಯುವನೊಬ್ಬನು 'ಈ ಮಗುವಿಗೆ ಹನ್ನೆರಡು ವರುಷಗಳು ತುಂಬಲು ಮರಣವುಂಟಾಗುವುದು,' ಎಂದು ಹೇಳಿದನು

೧೪. ಎಲೈ ಮಹಾಮತಿಯೇ! ಆ ತಾಯಿತಂದೆಗಳು ಇದನ್ನು ಕೇಳಿ, ಆ ಮಗುವನ್ನು ನೋಡಿ ನೊಂದಮನಸ್ಸುಳ್ಳವರಾಗಿ ದುಃಖಿತರಾದರು.

ತಥಾಪಿ ತತ್ಪಿತಾ ತಸ್ಯ ಯತ್ನಾತ್ಕಾಲೇ ಕ್ರಿಯಾಂ ತತಃ ।
ಚಕಾರ ಸರ್ವಾಂ ಮೇಧಾವೀ ಉಪನೀತೋ ಗುರೋರ್ಗೃಹೇ ॥ ೧೫ ॥

ವೇದಾನೇವಾಭ್ಯಸನ್ನಾಸ್ತೇ ಗುರುಶುಶ್ರೂಷಣೋದ್ಯತಃ ।
ಸ್ವೀಕೃತ್ಯ ವೇದಶಾಸ್ತ್ರಾಣಿ ಸ ಪುನರ್ಗೃಹಮಾಗತಃ ॥ ೧೬ ॥

ಮಾತಾಪಿತ್ರೋಸ್ನಮಸ್ಕೃತ್ಯ ಪಾದಯೋರ್ವಿನಯಾನ್ವಿತಃ ।
ತಸ್ಥೌ ತತ್ರ ಗೃಹೇ ಧೀಮಾನ್ಮಾರ್ಕಂಡೇಯೋ ಮಹಾಮುನಿಃ ॥ ೧೭ ॥

ತಂ ನಿರೀಕ್ಷ್ಯ ಮಹಾತ್ಮಾನಂ ಸತ್ಪ್ರಜ್ಞಂ ಚ ವಿಚಕ್ಷಣಮ್ ।
ದುಃಖಿತೌ ತೌ ಭೃಶಂ ತತ್ರ ತನ್ಮಾತಾಪಿತರೌ ಶುಕ ॥ ೧೮ ॥

೧೫-೧೬. ಅಷ್ಟು ಸಂಕಟವಿದ್ದರೂ. ತಂದೆಯಾದ ಮೃಕಂಡುವು ಆಯಾಕಾಲದಲ್ಲಿ ಆ ಮಗುವುಗೆ ಪ್ರಯತ್ನದಿಂದ ಚೌಲಾದಿಸಂಸ್ಕಾರಗಳನ್ನೆಲ್ಲಾ ಮಾಡಿದನು. ಮೇಧಾವಿಯಾದ ಆ ಬಾಲನು ತನ್ನ ಉಪನಯನವಾದ ಮೇಲೆ ಗುರುವಿನ ಮನೆಯಲ್ಲಿ ಅವರ ಸೇವೆಯನ್ನು ಮಾಡುತ್ತಾ ವೇದಗಳನ್ನು ಕಲಿಯುತ್ತಲೇ ಇದ್ದನು. ಅವನು ಇಂತು ವೇದಶಾಸ್ತ್ರಗಳನ್ನು ಗುರುವಿನಿಂದ ಕಲಿತು, ಪುನಃ ತನ್ನ ಮನೆಗೆ ಬಂದನು.

೧೭. ಪ್ರಜ್ಞಾವಂತನಾದ ಆ ಮಾರ್ಕಂಡೇಯನೆಂಬ ಮಹಾಮುನಿಯು ವಿನಯದೊಡನೆ ತಾಯಿ-ತಂದೆಗಳಿಗೆರಗಿ ಆ ಮನೆಯಲ್ಲಿಯೇ ನಿಂತನು.

೧೮. ಎಲೈ ಶುಕನೇ! ಆ ತಾಯಿತಂದೆಗಳೂ ಮಹಾತ್ಮನೂ, ವಿದ್ವಾಂಸನೂ ವಿವೇಕಿಯೂ ಆದ ಆ ಬಾಲಕನನ್ನು ಅಲ್ಲಿ ನೋಡಿ ಬಹು ದುಃಖಗೊಂಡವರಾದರು.

ತೌ ದೃಷ್ಟ್ವಾ ದುಃಖಸಂತಪ್ತೌ ಮಾರ್ಕಂಡೇಯೋ ಮಹಾಮತಿಃ ।
ಉವಾಚ ವಚನಂ ತತ್ರ ಕಿಮರ್ಥಂ ದುಃಖಮೀದೃಶಮ್ ॥ ೧೯ ॥

ಸದ್ಯೈತತ್ಕುರುಷೇ ಮಾತಸ್ತಾತೇನ ಸಹ ಧೀಮತಾ ।
ವಕ್ತುಮರ್ಹಸಿ ದುಃಖಸ್ಯ ಕಾರಣಂ ಮಮ ಪೃಚ್ಛತಃ ॥ ೨೦ ॥

ಇತ್ಯುಕ್ತಾ ತೇನ ಪುತ್ರೇಣ ಮಾತಾ ತಸ್ಯ ಮಹಾತ್ಮನಃ ।
ಕಥಯಾಮಾಸ ತತ್ಸರ್ವಮಾಗಮೀ ಯದುವಾಚ ಹ ॥ ೨೧ ॥

ತಚ್ಛ್ರುತ್ವಾಸೌ ಮುನಿಃ ಪ್ರಾಹ ಮಾತರಂ ಪಿತರಂ ಪುನಃ ।
ಪಿತ್ರಾ ಸಾರ್ಧಂ ತ್ವಯಾ ಮಾತರ್ನ ಕಾರ್ಯಂ ದುಃಖಮಣ್ವಪಿ ॥ ೨೨ ॥

ಅಪನೇಷ್ಯಾಮಿ ತೇ ಮೃತ್ಯುಂ ತಪಸಾ ನಾತ್ರ ಸಂಶಯಃ ।
ಯಥಾ ಚಾಹಂ ಚಿರಾಯುಃ ಸ್ಯಾಂ ತಥಾ ಕುರ್ಯಾಮಹಂ ತಪಃ ॥ ೨೩ ॥

---

೧೯. ಆ ಗೃಹದಲ್ಲಿ ಮಹಾಮತಿಯಾದ ಮರ್ಕಂಡೇಯನು, ಅಂತು ದುಃಖಗೊಂಡ ಆ ತಂದೆ ತಾಯಿಗಳನ್ನು ನೋಡಿ, "ಏತಕ್ಕೆ ನಿಮಗೆ ಇಂತಹ ದುಃಖವುಂಟಾಗಿದೆ?" ಎಂದು ನುಡಿದನು.

೨೦. "ಎಲೌ ತಾಯೇ! ನೀನು ಜ್ಞಾನಿಯಾದ ತಂದೆಯೊಡನೆ ಯಾವಾಗಲೂ ಇಂತು ದುಃಖಪಡುತ್ತಲಿರುವೆ. ನನಗೆ ಈ ವ್ಯಸನದ ಕಾರಣವನ್ನು ಹೇಳು."

೨೧. ಎಂದು ಮಗನು ಕೇಳಲು, ತಾಯಿಯು ಆ ಕಣಿಹೇಳುವವನು (ಭವಿಷ್ಯವಾದಿಯು) ಹೇಳಿದುದನ್ನೆಲ್ಲಾ ಆ ಮಹಾತ್ಮನಾದ ಮಗನಿಗೆ ಹೇಳಿದಳು.

೨೨. ಜ್ಞಾನಿಯಾದ ಈ ಮಾರ್ಕಂಡೇಯನು ಅದನ್ನು ಕೇಳಿ, ತಾಯಿಯನ್ನೂ ತಂದೆಯನ್ನೂ ಕುರಿತು ಪುನಃ ಹೇಳಿದನು :— "ಎಲೌ ತಾಯೇ! ನೀನು ತಂದೆಯೊಡನೆ ಸ್ವಲ್ಪವೂ ದುಃಖ ಮಾಡತಕ್ಕುದಲ್ಲ.

೨೩. ತಪಸ್ಸಿನಿಂದ ಮೃತ್ಯುವನ್ನು ನಾಶಮಾಡುವೆನು. (ಹೋಗಲಾಡಿಸುವೆನು) ಈ ವಿಷಯದಲ್ಲಿ ಸಂಶಯವಿಲ್ಲವು. ನಾನು ಹೇಗೆ ಚಿರಾಯುವಾಗುವೆನೋ ಅಂತಹ ತಪಸ್ಸನ್ನು ಆಚರಿಸುವೆನು.

ಇತ್ಯುಕ್ತ್ವಾ ತೌ ಸಮಾಶ್ವಾಸ್ಯ ಪಿತರೌ ವನಮಭ್ಯಗಾತ್ ।
ವಲ್ಲೀವಟಂ ನಾಮ ವನಂ ನಾನಾಋಷಿನಿಷೇವಿತಮ್ ॥ ೨೪ ॥

ತತ್ರಾಸೌ ಮುನಿಭಿಸ್ಸಾರ್ಧಮಾಸೀನಂ ಸ್ವಪಿತಾಮಹಮ್ ।
ಭೃಗುಂ ದದರ್ಶ ಧರ್ಮಜ್ಞಂ ಮಾರ್ಕಂಡೇಯೋ ಮಹಾಮತಿಃ ॥ ೨೫ ॥

ಅಭಿವಾದ್ಯ ಯಥಾನ್ಯಾಯಂ ಮುನೀಂಶ್ಚೈವ ಸ ಧಾರ್ಮಿಕಃ ।
ಕೃತಾಂಜಲಿಪುಟೋ ಭೂತ್ವಾ ತಸ್ಥೌ ತತ್ಪುರತೋ ದಮೀ ॥ ೨೬ ॥

ಗತಾಯುಷಂ ತತೋ ದೃಷ್ಟ್ವಾ ಪೌತ್ರಂ ಬಾಲಂ ಮಹಾಮತಿಃ ।
ಭೃಗುರಾಹ ಮಹಾಭಾಗಂ ಮಾರ್ಕಂಡೇಯಂ ತದಾ ಶಿಶುಮ್ ॥ ೨೭ ॥

ಕಿಮಾಗತೋಽಸಿ ಪುತ್ರಾತ್ರ ಪಿತುಸ್ತೇ ಕುಶಲಂ ಪುನಃ ।
ಮಾತುಶ್ಚ ಬಾಂಧವಾನಾಂ ಚ ಕಿಮಾಗಮನಕಾರಣಮ್ ॥ ೨೮ ॥

---

೨೪. ಆ ಬಾಲಕನು ಇಂತು ನುಡಿದು, ಆ ತಾಯಿತಂದೆಗಳನ್ನು ಸಮಾಧಾನಗೊಳಿಸಿ, ಕಾಡಿಗೆ ಹೋದನು. ಅನೇಕ ಮುನಿಗಳು ವಾಸಿಸುವ ವಲ್ಲೀವಟವೆಂಬುದು ಒಂದು ವನವಿದ್ದಿತು.

೨೫. ಮಹಾಜ್ಞಾನಿಯಾದ ಈ ಮಾರ್ಕಂಡೇಯನು ಅಲ್ಲಿ ಮುನಿಗಳೊಡನೆ ಕುಳಿತಿದ್ದ ತನ್ನ ಅಜ್ಜನಾದ ಧರ್ಮಜ್ಞನೆನಿಸಿದ ಭೃಗುಮುನಿಯನ್ನು ಕಂಡನು.

೨೬. ಧಾರ್ಮಿಕನೂ, ಜಿತೇಂದ್ರಿಯನೂ ಆದ ಆ ಬಾಲಕನು ತನ್ನ ಅಜ್ಜನಾದ ಭೃಗುವನ್ನೂ, ಇತರ ಮುನಿಗಳನ್ನೂ ವಿಧ್ಯನುಸಾರವಾಗಿ ನಮಸ್ಕರಿಸಿ, ಕೈಜೋಡಿಸಿ, ಅವರ ಇದಿರಿನಲ್ಲಿ ನಿಂತು ಕೊಂಡನು.

೨೭. ಅನಂತರ ಮಹಾಜ್ಞಾನಿಯಾದ ಭೃಗುವು ಕಳೆದ ಆಯುಸ್ಸುಳ್ಳ ಹುಡುಗನಾದ ಮೊಮ್ಮಗನನ್ನು ಕಂಡು, ಆಗ ಮಹಾಪುಣ್ಯಶಾಲಿಯೂ, ಶಿಶುವೂ ಆದ ಮಾರ್ಕಂಡೇಯನನ್ನು ಕುರಿತು, ಇಂತು ಹೇಳುತ್ತಾನೆ.

೨೮. "ಮಗುವೆ ! ಇಲ್ಲಿಗೆ ಏತಕ್ಕೆ ಬಂದಿರುವೆ? ನಿನ್ನ ತಂದೆಯೂ, ತಾಯಿಯೂ, ನಂಟರೂ ಕುಶಲದಿಂದಿರುವರೇ? ನೀನು ಬರಲು ಕಾರಣವೇನು ?"

ಇತ್ಯೇವಮುಕ್ತೋ ಭೃಗುಣಾ ಮಾರ್ಕಂಡೇಯೋ ಮಹಾಮತಿಃ ।
ಉವಾಚ ಸಕಲಂ ತಸ್ಮೈ ಆದೇಶಿವಚನಂ ತದಾ ॥ ೨೯ ॥

ಪೌತ್ರಸ್ಯ ವಚನಂ ಶ್ರುತ್ವಾ ಭೃಗುಸ್ತು ಪುನರಬ್ರವೀತ್ ।
ಏವಂ ಸತಿ ಮಹಾಬುದ್ಧೇ ಕಿಂ ತ್ವಂ ಕರ್ಮ ಚಿಕೀರ್ಷಸಿ ॥ ೩೦ ॥

॥ ಮಾರ್ಕಂಡೇಯ ಉವಾಚ ॥

ಭೂತಾಪಹಾರಿಣಂ ಮೃತ್ಯುಂ ಜೇತುಮಿಚ್ಛಾಮಿ ಸಾಂಪ್ರತಮ್ ।
ಶರಣಂ ತ್ವಾಂ ಪ್ರಪನ್ನೋಽಸ್ಮಿ ತತ್ರೋಪಾಯಂ ವದಸ್ವ ನಃ ॥ ೩೧ ॥

॥ ಭೃಗುರುವಾಚ ॥

ನಾರಾಯಣಮನಾರಾಧ್ಯ ತಪಸಾ ಮಹತಾ ಸುತ ।
ಕೋ ಜೇತುಂ ಶಕ್ನುಯಾನ್ಮೃತ್ಯುಂ ತಸ್ಮಾತ್ತಂ ತಪಸಾರ್ಚಯ ॥ ೩೨ ॥

---

೨೯. ಭೃಗುವು ಇಂತು ಕೇಳಲು ಮಹಾಮತಿಯಾದ ಮಾರ್ಕಂಡೇಯನು, ಆಗ ಅವನಿಗೆ ಭವಿಷ್ಯವಾದಿಯು ಹೇಳಿದುದನ್ನೆಲ್ಲವನ್ನೂ ಅರಿಕೆ ಮಾಡಿಕೊಂಡನು.

೩೦. ಮೊಮ್ಮಗನ ಮಾತನ್ನು ಕೇಳಿ ಭೃಗುವು ಪುನಃ "ಎಲೈ ಮೇಧಾವಿಯೇ! ಹೀಗಿರಲು ಈಗ ನೀನು ಯಾವ ಕರ್ಮವನ್ನು ಮಾಡಲು ಬಯಸುತ್ತೀಯೆ?" ಎಂದು ಕೇಳಿದನು.

೩೧ ಅದಕ್ಕೆ ಮಾರ್ಕಂಡೇಯನು ಇಂತು ಹೇಳುತ್ತಾನೆ:— "ಈಗ ನಾನು ಸಮಸ್ತ ಪ್ರಾಣಿಗಳನ್ನೂ ಕೊಲ್ಲುವ ಮೃತ್ಯುವನ್ನು ಗೆಲ್ಲಲು ಅಪೇಕ್ಷಿಸುತ್ತೇನೆ. ಅದಕ್ಕಾಗಿ ನಿಮ್ಮನ್ನು ಮರೆ ಹೊಕ್ಕಿರುವೆನು. ಹೀಗೆ ಮೃತ್ಯುವನ್ನು ಜಯಿಸುವ ವಿಷಯದಲ್ಲಿ ದಯವಿಟ್ಟು ನನಗೆ ಸಾಧನವನ್ನು ತಿಳಿಸಿರಿ," ಎಂದು ಕೇಳಲು, ಭೃಗುವು ಹೇಳುತ್ತಾನೆ.

೩೨ "ಎಲೈ ಮಗುವೇ! ಹಿರಿದಾದ ತಪದಿಂದ ಶ್ರೀಮನ್ನಾರಾಯಣನನ್ನು ಆರಾಧಿಸದೇ ಯಾವನು ಮೃತ್ಯುವನ್ನು ಗೆಲ್ಲಲಾಗುವುದು? ಆದುದರಿಂದ ನೀನು ಆ ಭಗವಂತನನ್ನು ತಪದಿಂದ ಸೇವಿಸು.

ತಮನಂತಮಜಂ ವಿಷ್ಣುಮಚ್ಯುತಂ ಪುರುಷೋತ್ತಮಮ್ ।
ಭಕ್ತಪ್ರಿಯಂ ಸುರಶ್ರೇಷ್ಠಂ ಭಕ್ತ್ಯಾ ತ್ವಂ ಶರಣಂ ವ್ರಜ ॥ ೩೩ ॥

ತಮೇವ ಶರಣಂ ಪೂರ್ವಂ ಗತವಾನ್ನಾರದೋ ಮುನಿಃ ।
ತಪಸಾ ಮಹತಾ ವತ್ಸ ನಾರಾಯಣಮನಾಮಯಮ್ ॥ ೩೪ ॥

ತತ್ಪ್ರಸಾದಾನ್ಮಹಾಭಾಗ ನಾರದೋ ಬ್ರಹ್ಮಣಃ ಸುತಃ ।
ಜರಾ ಮೃತ್ಯುಂ ವಿಜಿತ್ಯಾಶು ದೀರ್ಘಾಯುರ್ವರ್ಧತೇ ಸುಖಮ್ ॥ ೩೫ ॥

ತಮೃತೇ ಪುಂಡರೀಕಾಕ್ಷಂ ನಾರಸಿಂಹಂ ಜನಾರ್ದನಮ್ ।
ಕಃ ಕುರ್ಯಾನ್ಮಾನವೋ ವತ್ಸ ಮೃತ್ಯುಸತ್ತಾನಿವಾರಣಮ್ ॥ ೩೬ ॥

---

೩೩. ನಾಶರಹಿತನಾದುದರಿಂದ ಅನಂತನೂ, ಹುಟ್ಟಿಲ್ಲದವನಾದುದರಿಂದ ಅಜನೂ, ಎಲ್ಲೆಡೆಯಲ್ಲಿಯೂ ವ್ಯಾಪ್ತನಾದುದರಿಂದ ವಿಷ್ಣುವೂ, ವಿಕಾರವಿಲ್ಲದವನಾದುದರಿಂದ ಅಚ್ಯುತನೂ, ಕ್ಷರಾಕ್ಷರಗಳಿಂದ ಉತ್ತಮನಾದುದರಿಂದ ಪುರುಷೋತ್ತಮನೂ, ಭಕ್ತರಲ್ಲಿ ಪ್ರೀತಿಯುಳ್ಳವನೂ, ದೇವಶ್ರೇಷ್ಠನೂ ಆದ ಶ್ರೀಮನ್ನಾರಾಯಣನನ್ನು ನೀನು ಭಕ್ತಿಯಿಂದ ಮರೆಹೊಗು.

೩೪. ಎಲೈ ಮಗುವೇ! ಹಿಂದೆ ನಾರದ ಮುನಿಯು ಹಿರಿದಾದ ತಪದಿಂದ ದೋಷರಹಿತನಾದ ಆ ನಾರಾಯಣನನ್ನೇ ಮರೆಹೊಕ್ಕಿದ್ದನು.

೩೫. ಎಲೈ ಪುಣ್ಯಶಾಲಿಯೇ! ಬ್ರಹ್ಮನ ಪುತ್ರನಾದ ನಾರದನು ಶ್ರೀಮನ್ನಾರಾಯಣನ ಅನುಗ್ರಹದಿಂದ ಮುಪ್ಪು ಸಾವುಗಳನ್ನು ಬೇಗನೆ ಗೆದ್ದು, ದೀರ್ಘಾಯುವಾಗಿ ಸಂತಸದಿಂದ ಕೂಡಿ, ಮೇಲ್ಮೆ ಪಡೆಯುತ್ತಲಿದ್ದಾನೆ.

೩೬. ಎಲೈ ಮಗುವೇ! ತಾವರೆಗಣ್ಣನೂ, ದುಷ್ಟಜನಸಂಹಾರಕನೂ ಆದ ಶ್ರೀ ನರಸಿಂಹಸ್ವಾಮಿಯನ್ನುಳಿದು ಯಾವ ಮಾನವನು ಮೃತ್ಯುವು ಬಾರದಂತೆ ಮಾಡಿಯಾನು? (ಯಾವ ಮಾನವನಿಗೂ ಮೃತ್ಯುವನ್ನು ನಾಶಮಾಡುವ ಶಕ್ತಿಯಿಲ್ಲವು; ಭಗವಂತನೊಬ್ಬನೇ ಅದನ್ನು ಮಾಡಬಲ್ಲನು ಎಂದು ಅಭಿಪ್ರಾಯವು.)

ತಮನಂತಮಜಂ ವಿಷ್ಣುಂ ಕೃಷ್ಣಂ ಜಿಷ್ಣುಂ ಶ್ರಿಯಃ ಪತಿಮ್ ।
ಗೋವಿಂದಂ ಗೋಪತಿಂ ದೇವಂ ಸತತಂ ಶರಣಂ ವ್ರಜ ॥ ೩೭ ॥

ನರಸಿಂಹಂ ಮಹಾದೇವಂ ಯದಿ ಪೂಜಯಸೇ ಸದಾ ।
ವತ್ಸ ಜೇತಾಸಿ ಮೃತ್ಯುಂ ತ್ವಂ ಸತತಂ ನಾತ್ರ ಸಂಶಯಃ ॥ ೩೮ ॥

॥ ವ್ಯಾಸ ಉವಾಚ ॥

ಉಕ್ತಃ ಪಿತಾಮಹೇನ್ಯೈವಂ ಭೃಗುಣಾ ಪುನರಬ್ರವೀತ್ ।
ಮಾರ್ಕಂಡೇಯೋ ಮಹಾತೇಜಾ ವಿನಯಾತ್ಸ್ವಪಿತಾಮಹಮ್ ॥ ೩೯ ॥

---

೩೭. ಅನಂತನೂ, ಅಜನೂ, ವಿಷ್ಣುವೂ, ಪೂರ್ಣಸುಖನಾದುದರಿಂದ ಕೃಷ್ಣನೂ, ಎಲ್ಲವನ್ನೂ ತಿರಸ್ಕರಿಸಿ ಸರ್ವೋತ್ಕೃಷ್ಟನಾದುದರಿಂದ ಜಿಷ್ಣುವೂ, ಲಕ್ಷ್ಮೀ ಪತಿಯೂ, ವೇದೈಕಗಮ್ಯನೂ, ಗೋವು, ವೇದ–ಇವುಗಳಿಗೆ ಒಡೆಯನೂ, ಕ್ರೀಡಾದಿ ಗುಣವಿಶಿಷ್ಟನೂ, ಆದ ಶ್ರೀ ನರಸಿಂಹನನ್ನು ಮರೆಹೊಗು.

೩೮. ಎಲೈ ಮಗನೇ! ದೇವಶ್ರೇಷ್ಠನಾದ ಶ್ರೀ ನರಸಿಂಹನನ್ನು ಯಾವಾಗಲೂ ನೀನು ಸೇವಿಸುವುದಾದರೆ, ಯಾವಾಗಲೂ ಮೃತ್ಯುವನ್ನು ಗೆಲ್ಲುವವನಾಗುವೆ. ಈ ವಿಷಯದಲ್ಲಿ ಸಂದೇಹವಿಲ್ಲ."

೩೯. ಮತ್ತೆ ವ್ಯಾಸರು ಹೇಳುತ್ತಾರೆ:— ಪಿತಾಮಹನಾದ ಭೃಗುವು ಇಂತೆಂದು ಹೇಳಲು, ಮಹಾತೇಜಸ್ವಿಯಾದ ಮಾರ್ಕಂಡೇಯನು ವಿನಯದಿಂದ ಪುನಃ ತನ್ನ ಅಜ್ಜನಿಗೆ ಇಂತು ಹೇಳುವನು.

॥ ಮಾರ್ಕಂಡೇಯ ಉವಾಚ ॥

ಆರಾಧ್ಯಃ ಕಥಿತಸ್ತಾತ ವಿಷ್ಣುರ್ವಿಶ್ವೇಶ್ವರಃ ಪ್ರಭುಃ ।
ಕಥಂ ಕುತ್ರ ಮಯಾ ಕಾರ್ಯಮಚ್ಯುತಾರಾಧನಂ ಗುರೋ ।
ಯೇನಾಸೌ ಮಮ ತುಷ್ಟಃ ಸ್ತು ಮೃತ್ಯುಂ ಸದ್ಯೋಽಪನೇಷ್ಯತಿ ॥ ೪೦ ॥

॥ ಭೃಗುರುವಾಚ ॥

ತುಂಗಭದ್ರೇತಿ ವಿಖ್ಯಾತಾ ಯಾ ನದೀ ಸಹ್ಯಪರ್ವತೇ ।
ತತ್ರ ಭದ್ರವಟೇ ವತ್ಸ ತ್ವಂ ಪ್ರತಿಷ್ಠಾಪ್ಯ ಕೇಶವಮ್ ॥ ೪೧ ॥

ಆರಾಧಯ ಜಗನ್ನಾಥಂ ಗಂಧಪುಷ್ಪಾದಿಭಿಃ ಕ್ರಮಾತ್ ।
ಹೃದಿ ಕೃತ್ವೇಂದ್ರಿಯಗ್ರಾಮಂ ಮನಃ ಸಂಯಮ್ಯ ತತ್ವತಃ ॥ ೪೨ ॥

ಮಾರ್ಕಂಡೇಯನು ಭೃಗುವಿಗೆ ಹೇಳುತ್ತಾನೆ :—

೪೦. 'ಯಾವ ಈ ವಿಷ್ಣುವು ಪ್ರಸನ್ನನಾಗಿ ಒದಗಿರುವ ಮೃತ್ಯುವನ್ನು ತತ್‌ಕ್ಷಣದಲ್ಲಿಯೇ ಹೋಗಲಾಡಿಸುವನೋ, ಆ ಸರ್ವಶಕ್ತನೂ, ಚರಾಚರವಾದ ಸಕಲ ಪ್ರಪಂಚಕ್ಕೆ ಒಡೆಯನೂ, ಸರ್ವತ್ರವ್ಯಾಪ್ತನೂ, ಆದ ಶ್ರೀ ಮಹಾ ವಿಷ್ಣುವನ್ನು ಎಲೈ ಅಜ್ಜನೇ! ನೀವು ಸೇವಿಸೆಂದು ಹೇಳಿದಿರಿ. ಎಲೈ ಗುರುವೇ! ನಿರ್ವಿಕಾರ ನಾದುದರಿಂದ ಅಚ್ಯುತನಾದ ಆ ಶ್ರೀ ಮಹಾ ವಿಷ್ಣುವಿನ ಪೂಜೆಯನ್ನು ಎಲ್ಲಿ ಎಂತು ನಾನು ಎಸಗಬೇಕು? ಇದನ್ನು ದಯಮಾಡಿ ಹೇಳಿರಿ;'

ಎಂದು ಕೇಳಲು, ಭೃಗುಮುನಿಯು ಹೇಳುತ್ತಾನೆ :—

೪೧-೪೨. 'ಎಲೈ ಮಗುವೇ! ಸಹ್ಯಪರ್ವತದಲ್ಲಿ ತುಂಗಭದ್ರೆಯೆಂದು ಯಾವ ನದಿಯು ಪ್ರಸಿದ್ಧವಾಗಿದೆಯೋ, ಅದರ ತೀರದ ಭದ್ರವಟವೆಂಬ ಕ್ಷೇತ್ರದಲ್ಲಿ ಬ್ರಹ್ಮ ರುದ್ರಪ್ರವರ್ತಕನೂ, ಕ್ಷೀರಾಬ್ಧಿಶಾಯಿಯೂ, ಆದ ಕೇಶವನನ್ನು, ನೀನು ಪ್ರತಿಷ್ಠಿಸಿ, ಸಕಲ ಬಾಹ್ಯೇಂದ್ರಿಯಗಳು ಮತ್ತು ಅಂತಃಕರಣ-ಇವನ್ನು ಸ್ವಾಧೀನದಲ್ಲಿಟ್ಟು ಕೊಂಡು, ಆ ಲೋಕನಾಯಕನನ್ನು ಹೃದಯದಲ್ಲಿ ಸರಿಯಾಗಿ ಧ್ಯಾನಮಾಡುತ್ತಾ, ಕ್ರಮದಿಂದ ಗಂಧ, ಹೂವು ಇವೇ ಮೊದಲಾದ ವಸ್ತುಗಳಿಂದ ಪೂಜಿಸು.

ಹೃತ್ಪುಂಡರೀಕೇ ದೇವೇಶಂ ಶಂಖಚಕ್ರಗದಾಧರಮ್ ।
ಧ್ಯಾಯನ್ನೇಕಮನಾ ವತ್ಸ ದ್ವಾದಶಾಕ್ಷರಮಭ್ಯಸ ॥ ೪೩ ॥

“ ಓಂ ನಮೋ ಭಗವತೇ ವಾಸುದೇವಾಯ ”

ಇಮಂ ಮಂತ್ರಂ ಹಿ ಜಪತೋ ದೇವ ದೇವಸ್ಯ ಶಾರ್ಙ್ಗಿಣಃ ।
ಪ್ರೀತೋ ಭವತಿ ವಿಶ್ವಾತ್ಮಾ ಮೃತ್ಯುಂ ಯೇನಾಪನೇಷ್ಯತಿ ॥ ೪೪ ॥

॥ ವ್ಯಾಸ ಉವಾಚ ॥

ಇತ್ಯುಕ್ತಸ್ತಂ ಪ್ರಣಮ್ಯಾಥ ಸ ಜಗಾಮ ತಪೋವನಮ್ ॥ ೪೫ ॥

೪೩-೪೪. ಎಲೈ ಮಗುವೇ! ಸಕಲ ದೇವನಿಯಾಮಕನೂ, ಶಂಖಚಕ್ರ ಗದಾ - ಪದ್ಮಪಾಣಿಯೂ ಆದ ಶ್ರೀಮನಾರಾಯಣನನ್ನು ಹೃದಯಕಮಲದಲ್ಲಿ ಒಮ್ಮನದಿಂದ ಚಿಂತಿಸುತ್ತಾ, ಸಕಲ ಗುಣಪೂರ್ಣನಾದುದರಿಂದಲೂ, ಸಕಲ ಜಗದ್ರಕ್ಷಕನಾಗಿರುವುದರಿಂದಲೂ ಓಂಕಾರ ಸ್ವರೂಪನಾದ, ಅವ್ಯಾಹತಷಡ್ಗುಣೈಶ್ವರ್ಯಪೂರ್ಣನಾದ, ಮೋಕ್ಷದಾತೃವಾದ, ಸರ್ವತ್ರ ವಸನಶೀಲನೂ, ಕ್ರೀಡಾದಿ ಗುಣವಿಶಿಷ್ಟನೂ ಆದ ವಾಸುದೇವನಿಗೆ ನಮಸ್ಕಾರವು. ಎಂಬ ಅರ್ಥದ “ ಓಂ ನಮೋ ಭಗವತೇ ವಾಸುದೇವಾಯ," ಎಂಬ ಹನ್ನೆರಡು ಅಕ್ಷರಗಳ ಈ ಮಂತ್ರವನ್ನು ಅನೇಕ ಬಾರಿ ಉಚ್ಚರಿಸುತ್ತಾ ಸೇವಿಸು. ದೇವೋತ್ತಮನಾದ ಶಾರ್ಙ್ಗವೆಂಬ ಬಿಲ್ಲನ್ನು ತಾಳಿರುವ ಶ್ರೀಮನ್ನಾರಾಯಣನ ಮಹಿಮೆಯನ್ನು ಕೊಂಡಾಡುವ ಈ ಮಂತ್ರವನ್ನು ಜಪಿಸುವವರಿಗೆ ವಿಶ್ವಕ್ಕೆ ನಿಯಾಮಕನಾದ ದೇವರು ಪ್ರಸನ್ನನಾಗುತ್ತಾನೆ. ಅವನ ಸೇವೆಯಿಂದ ಮೃತ್ಯುವನ್ನು ಗೆಲ್ಲುವೆ,' ಎಂದು ಭೃಗುವು ಹೇಳಿದನು.

೪೫-೪೬. ಆಗ ವ್ಯಾಸಮುನಿಯು ಶುಕಾಚಾರ್ಯನಿಗೆ ಹೇಳುತ್ತಾನೆ:— ಇಂತು ಭೃಗುವು ಹೇಳಲು, ಆ ಬಾಲಕನಾದ ಮಾರ್ಕಂಡೇಯನು ಅವನಿಗೆರಗಿ ಸಹ್ಯಪರ್ವತದ

ಸಹ್ಯಪಾದೋದ್ಭವಾಯಾಸ್ತು ಭದ್ರಾಯಾಸ್ತಟಮುತ್ತಮಮ್ ।
ನಾನಾದ್ರುಮಲತಾಕೀರ್ಣಂ ನಾನಾಪುಷ್ಪೋಪಶೋಭಿತಮ್ ॥ ೪೬ ॥

ಗುಲ್ಮವೇಣುಲತಾಕೀರ್ಣಂ ನಾನಾಮುನಿಜನಾಕುಲಮ್ ।
ತತ್ರ ವಿಷ್ಣುಂ ಪ್ರತಿಷ್ಠಾಪ್ಯ ಗಂಧಧೂಪಾದಿಭಿಃ ಕ್ರಮಾತ್ ॥ ೪೭ ॥

ಪೂಜಯಾಮಾಸ ದೇವೇಶಂ ಮಾರ್ಕಂಡೇಯೋ ಮಹಾಮುನಿಃ ।
ಪೂಜಯಿತ್ವಾ ಹರಿಂ ತತ್ರ ತಪಸ್ತೇಪೇ ಸುದುಷ್ಕರಮ್ ॥ ೪೮ ॥

ನಿರಾಹಾರೋ ಮುನಿಸ್ತತ್ರ ವರ್ಷಮೇಕಮತಂದ್ರಿತಃ ।
ಮಾತ್ರೋಕ್ತಕಾಲೇ ಹ್ಯಾಸನ್ನೇ ದಿನೇ ತತ್ರ ಮಹಾಮತಿಃ ॥ ೪೯ ॥

ಪಾದದಲ್ಲಿ ಹುಟ್ಟಿದ ಭದ್ರಾನದಿಯ ಉತ್ತಮವಾದ ತಡಿಯೂ, ಅನೇಕ ತೆರನಾದ ಮರ, ಬಳ್ಳಿಗಳಿಂದ ತುಂಬಿದುದೂ, ಅನೇಕ ತೆರನಾದ ಹೂಗಳಿಂದ ಅಲಂಕೃತವೂ ಆದ ತಪೋವನಕ್ಕೆ ಹೋದನು.

೪೭-೪೮. ಮತ್ತು ಆ ತಪೋವನವು ಪೊದೆ, ಬಿದಿರು, ಬಳ್ಳಿ ಇವುಗಳಿಂದ ಇಟ್ಟಣಿಸಿಯೂ, ಅನೇಕ ಮುನಿಜನರಿಂದ ಕೂದಿದುದೂ ಆಗಿದ್ದಿತು. ಅಲ್ಲಿ ಮಹಾ ಮುನಿಯಾದ ಮಾರ್ಕಂಡೇಯನು ವಿಷ್ಣುವನ್ನು ಪ್ರತಿಷ್ಠೆಮಾಡಿ, ಕಲ್ಪೋಕ್ತಕ್ರಮ ಓಂದ ಆ ದೇವನಿಯಾಮಕನಾದ ಶ್ರೀ ಹರಿಯನ್ನು ಗಂಧ, ಧೂಪ, ಇವೇ ಮೊದ ಲಾದವುಗಳಿಂದ ಪೂಜಿಸಿದನು. ಇಂತು ಅಲ್ಲಿ ಅವನು ಶ್ರೀ ಹರಿಯನ್ನು ಸೇವಿಸಿ ಅತಿ ಕಠಿನವಾದ ತಪಸ್ಸನ್ನು ಮಾಡಿದನು.

೪೯–೫೪. ಇಂತು ಅಲ್ಲಿ ಆ ಮುನಿಯು ಆಹಾರವಿಲ್ಲದೆ, ಸೋಮಾರಿಯಾಗದೆ ಒಂದು ವರ್ಷ ಪೂರ್ತಿಯಾಗುವವರೆಗೂ ತಪಸ್ಸನ್ನು ಮಾಡಲು, ತಾಯಿಯು ಹೇಳಿದ ಸಮಯ ಸಮೀಪಿಸುತ್ತಿರಲು, ಆ ದಿನದಲ್ಲಿ ಜ್ಞಾನಿಯಾದ ಮಾರ್ಕಂಡೇ

ಸ್ನಾತ್ವಾ ಯಥೋಕ್ತವಿಧಿನಾ ಕೃತ್ವಾ ವಿಷ್ಣೋಸ್ತಥಾऽರ್ಚನಮ್ ।
ಹೃದಿ ಕೃತ್ವೇಂದ್ರಿಯಗ್ರಾಮಂ ವಿಶುದ್ಧೇನಾಂತರಾತ್ಮನಾ ॥ ೫೦ ॥

ಆಸನಂ ಸ್ವಸ್ತಿಕಂ ಬದ್ಧ್ವಾ ಕೃತ್ವಾऽಸೌ ಪ್ರಾಣಸಂಯಮಮ್ ।
ಓಂಕಾರೋಚ್ಚಾರಣಾದ್ಧೀಮಾನ್ ಹೃತ್ಪದ್ಮಂ ಸ ವಿಕಾಸಯನ್ ॥ ೫೧ ॥

ತನ್ಮಧ್ಯೇ ರವಿಸೋಮಾಗ್ನಿಮಂಡಲಾನಿ ಯಥಾಕ್ರಮಮ್ ।
ಕಲ್ಪಯಿತ್ವಾ ಹರೇಃ ಪೀಠಂ ತಸ್ಮಿನ್ದೇಶೇ ಸನಾತನಮ್ ॥ ೫೨ ॥

ಪೀತಾಂಬರಧರಂ ಕೃಷ್ಣಂ ಶಂಖಚಕ್ರಗದಾಧರಮ್ ।
ಭಾವಪುಷ್ಪೈಃ ಸಮಭ್ಯರ್ಚ್ಯ ಮನಸ್ತಸ್ಮಿನ್ನಿವೇಶ್ಯ ಚ ॥ ೫೩ ॥

ಬ್ರಹ್ಮರೂಪಂ ಹರಿಂ ಧ್ಯಾಯಂಸ್ತತೋ ಮಂತ್ರಮುದೀರಯತ್ ।
'ಓಂ ನಮೋ ಭಗವತೇ ವಾಸುದೇವಾಯ' ॥ ೫೪ ॥

ಯನು ಸ್ನಾನಮಾಡಿ ಜಿತೇಂದ್ರಿಯನೂ, ಶುದ್ಧಾಂತಃಕರಣನೂ ಆಗಿ, ವಿಧಿಯಲ್ಲಿ ಹೇಳಿರುವ ತೆರನಾಗಿ ಶ್ರೀ ಮಹಾವಿಷ್ಣುವನ್ನು ಪೂಜಿಸಿ, ಸ್ವಸ್ತಿಕವೆಂಬ ಆಸನದಲ್ಲಿ ಕುಳಿತುಕೊಂಡು, ಶ್ವಾಸನಿರೋಧವನ್ನು ಮಾಡಿ, ಈ ಜ್ಞಾನಿಯು ಓಂಕಾರವನ್ನು ಉಚ್ಚರಿಸುವುದರಿಂದ ಹೃದಯ ಕಮಲವನ್ನು ಅರಳಿಸುತ್ತಾ, ಅದರ ನಡುವೆ ಕ್ರಮಾನುಸಾರ ಸೂರ್ಯಚಂದ್ರಾಗ್ನಿ ಈ ಮಂಡಲಗಳನ್ನು ರಚಿಸಿ, ಶ್ರೀ ಹರಿಗೆ ಆಸನವನ್ನು ಕಲ್ಪಿಸಿ, ಆ ಆಸನದಲ್ಲಿ ಯಾವಾಗಲೂ ಏಕಪ್ರಕಾರನಾಗಿರುವ, ವೇದಪ್ರತಿಪಾದ್ಯನಾದ ಹೊಂಬಣ್ಣದ ವಸ್ತ್ರವನ್ನು ಉಟ್ಟಿರುವ, ಸಕಲ ಪಾಪನಾಶಕನೂ, ಪೂರ್ಣಸುಖನೂ ಆದ, ಶಂಖ, ಚಕ್ರ, ಗದಾ, ಪದ್ಮಪಾಣಿಯಾದ ಶ್ರೀ ಹರಿಯನ್ನು ಭಕ್ತಿಭಾವವೆಂಬ ಹೂವಿನಿಂದ ಪೂಜಿಸಿ, ಮನಸ್ಸನ್ನು ಆವನಲ್ಲಿಯೇ ನಿಲ್ಲಿಸಿ, ಸರ್ವಗುಣಪೂರ್ಣನಾದ ಶ್ರೀ ಹರಿಯನ್ನು ಅಸಂಪ್ರಜ್ಞಾತಸಮಾಧಿಯಿಂದ ಚಿಂತಿಸುತ್ತಾ, ಬಳಿಕ "ಓಂ ನಮೋ ಭಗವತೇ ವಾಸುದೇವಾಯ" ಎಂಬೀ ಮಂತ್ರವನ್ನು ಉಚ್ಚರಿಸಿದನು.

॥ ವ್ಯಾಸ ಉವಾಚ ॥

ಇತ್ಯೇವಂ ಧ್ಯಾಯತಸ್ತಸ್ಯ ಮಾರ್ಕಂಡೇಯಸ್ಯ ಧೀಮತಃ ॥ ೫೫ ॥
ಮನಸ್ತತ್ರೈವ ಸಂಲಗ್ನಂ ದೇವದೇವೇ ಜಗತ್ಪತೌ ।
ತತೋ ಯಮಾಜ್ಞಯಾ ತತ್ರ ಆಗತಾ ಯಮಕಿಂಕರಾಃ ॥ ೫೬ ॥
ಪಾಶಹಸ್ತಾಸ್ತು ತಂ ನೇತುಂ ವಿಷ್ಣುದೂತೈಸ್ತು ತೇ ಹತಾಃ ।
ಶೂಲೈಃ ಪ್ರಹನ್ಯಮಾನಾಸ್ತು ದ್ವಿಜಂ ಮುಕ್ತ್ವಾ ಯಯುಸ್ತದಾ ॥ ೫೭ ॥
ವಯಂ ನಿವರ್ತ್ಯ ಗಚ್ಛಾಮೋ ಮೃತ್ಯುರೇವಾಗಮಿಷ್ಯತಿ ।

॥ ವಿಷ್ಣುದೂತಾ ಊಚುಃ ॥

ಯತ್ರ ನಃ ಸ್ವಾಮಿನೋ ನಾಮ ಲೋಕನಾಥಸ್ಯ ಶಾರ್ಙ್ಗಿಣಃ ।
ಕೋ ಯಮಸ್ತತ್ರ ಮೃತ್ಯುರ್ವಾ ಕಾಲಃ ಕಲಯತಾಂ ವರಃ ॥ ೫೮ ॥

ಶ್ರೀ ವೇದವ್ಯಾಸನು ಶುಕನಿಗೆ ಹೇಳುತ್ತಾನೆ:—

೫೫-೫೭. "ಎಲೈ ಶುಕನೇ! ಕೇಳು; ಇಂತು ; ಶ್ರೀ ಹರಿಯನ್ನು ಧ್ಯಾನ ಮಾಡುತ್ತಲಿದ್ದ ಜ್ಞಾನಿಯಾದ ಆ ಮಾರ್ಕಂಡೇಯನ ಮನಸ್ಸು ದೇವೋತ್ತಮನೂ, ಜಗತ್ಪತಿಯೂ ಆದ ಶ್ರೀ ಹರಿಯಲ್ಲಿಯೇ ಸಂಪೂರ್ಣವಾಗಿ (ನಿಂತು) ಸೇರಿಕೊಂಡಿತು. ಅನಂತರ ಯಮನ ಭಟರು ಅವನ (ಯಮನ) ಅಪ್ಪಣೆಯಿಂದ ಪಾಶವನ್ನು ಕೈಯಲ್ಲಿ ಹಿಡಿದು ಆ ಮಾರ್ಕಂಡೇಯನನ್ನು ಕೊಂಡೊಯ್ಯಲು, ಅಲ್ಲಿಗೆ ಬಂದರು. ಹಾಗೆಯೇ ಶ್ರೀ ಹರಿದೂತರೂ ಅಲ್ಲಿಗೆ ಬಂದು, ಆ ಯಮದೂತರನ್ನು ಶೂಲಗಳೆಂಬ ಆಯುಧಗಳಿಂದ ಇರಿದರು. ಹೀಗೆ ವಿಷ್ಣುದೂತರಿಂದ ಪೆಟ್ಟುತಿಂದ ಯಮಭಟರು ಆಗ ಆ ಬ್ರಾಹ್ಮಣನನ್ನು ಬಿಟ್ಟು ಓಡಿ ಹೋದರು.

೫೮. "ನಾವೇನೋ ಹಿಂದಿರುಗಿ ಹೋಗುತ್ತೇವೆ. ಮೃತ್ಯುವೇ ಇಲ್ಲಿಗೆ ಬರುವನು" ಎಂದರು. ಆಗ ವಿಷ್ಣುದೂತರು ಹೇಳುತ್ತಾರೆ:— "ಎಲ್ಲಿ ಲೋಕಗಳಿಗೆಲ್ಲಾ ಪ್ರಭುವೂ, ಶಾರ್ಙ್ಗಧರನೂ ಆದ ನಮ್ಮೊಡೆಯನಾದ ಶ್ರೀಮನ್ನಾರಾಯಣನ ನಾಮಸಂಕೀರ್ತನವಿರುವುದೋ, ಅಲ್ಲಿ ಯಮನಾಗಲೀ, ಮೃತ್ಯುವಾಗಲೀ, ಬಂಧನಾದಿಗಳನ್ನು ಮಾಡುವವರಲ್ಲಿ ಶ್ರೇಷ್ಠವಾದ ಕಾಲವಾಗಲೀ ಎಲ್ಲಿರುವುವು? ಇವಕ್ಕೆ ಎಡೆಯಿಲ್ಲವು" ಎಂದು ವ್ಯಾಸನು ಶುಕನಿಗೆ ಹೇಳುತ್ತಾನೆ.

॥ ವ್ಯಾಸ ಉವಾಚ ॥

ಆಗತ್ಯ ಸ್ವಯಮೇವಾಹ ಮೃತ್ಯುಃ ಪಾರ್ಶ್ವಂ ಮಹಾತ್ಮನಃ ।
ಮಾರ್ಕಂಡೇಯಸ್ಯ ಬಭ್ರಾಮ ವಿಷ್ಣುಕಿಂಕರಶಂಕಯಾ ॥ ೫೯ ॥

ತೇಽಪ್ಯುದ್ಯಮ್ಯಾಶು ಮುಸಲಾನಾಯಸಾನ್ವಿಷ್ಣುಕಿಂಕರಾಃ ।
ವಿಷ್ಣ್ವಾಜ್ಞಯಾ ಹನಿಷ್ಯಾಮೋ ಮೃತ್ಯುಮಸ್ಯೇತಿ ಸಂಸ್ಥಿತಾಃ ॥ ೬೦ ॥

ತತೋ ವಿಷ್ಣ್ವರ್ಪಿತಮನಾ ಮಾರ್ಕಂಡೇಯೋ ಮಹಾಮತಿಃ ।
ತುಷ್ಟಾವ ಪ್ರಣತೋ ಭೂತ್ವಾ ದೇವದೇವಂ ಜನಾರ್ದನಮ್ ॥ ೬೧ ॥

ವಿಷ್ಣುನೈವೋದಿತಂ ಯತ್ತತ್ಸ್ತೋತ್ರಂ ಕರ್ಣೇ ಮಹಾತ್ಮನಃ ।
ಸುಭಾಷಿತೇನ ಮನಸಾ ತೇನ ತುಷ್ಟಾವ ಮಾಧವಮ್ ॥ ೬೨ ॥

---

೫೯. ಮೃತ್ಯುವು ಮಹಾತ್ಮನಾದ ಮಾರ್ಕಂಡೇಯನ ಹತ್ತಿರಕ್ಕೆ ತಾನೇ ಬಂದು, ಬರಹೇಳಿ ಅಲ್ಲಿ ವಿಷ್ಣುದೂತರ ಭಯದಿಂದ ಅತ್ತಿತ್ತ ಸುತ್ತಾಡಿದನು.

೬೦. ಆ ವಿಷ್ಣುದೂತರೂ ಬೇಗನೆ ಉಕ್ಕಿನ ಒನಕೆಗಳನ್ನು ತೆಗೆದುಕೊಂ ಶ್ರೀ ವಿಷ್ಣುವಿನ ಆಣತಿಯಂತೆ 'ಇಂದು ಮೃತ್ಯುವನ್ನು ಕೊಲ್ಲುವೆವು,' ಎಂದು ಬಂದರು.

೬೧. ಬಳಿಕ ಮಹಾಜ್ಞಾನಿಯಾದ ಮಾರ್ಕಂಡೇಯನು ಶ್ರೀ ಮಹಾವಿಷ್ಣುವಿನಲ್ಲಿಯೇ ಮನವನ್ನು ಇಟ್ಟವನು ಆಗಿ, ಸಕಲ ದೇವೋತ್ತಮನಾದ ಜನಾರ್ದನನನ್ನು ಸ್ತುತಿಸಿದನು.

೬೨. ಶ್ರೀ ಮಹಾವಿಷ್ಣುವೇ ಯಾವ ಸ್ತೋತ್ರವನ್ನು ಮಹಾತ್ಮನಾದ ಮಾರ್ಕಂಡೇಯನ ಕಿವಿಯಲ್ಲಿ ಒಳ್ನುಡಿಗಳಿಂದ ಹೇಳಿದನೋ, ಆ ಸ್ತೋತ್ರದಿಂದ ಮಾರ್ಕಂಡೇಯನು ಮನಸ್ಸಿನಿಂದಲೇ ಲಕ್ಷ್ಮೀಪತಿಯಾದ ನಾರಾಯಣನನ್ನು ಸ್ತುತಿಸಿದನು.

॥ ಮಾರ್ಕಂಡೇಯ ಉವಾಚ ॥

ನಾರಾಯಣಂ ಸಹಸ್ರಾಕ್ಷಂ ಪದ್ಮನಾಭಂ ಪುರಾತನಮ್ ।
ಪ್ರಣತೋಽಸ್ಮಿ ಹೃಷೀಕೇಶಂ ಕಿಂ ಮೇ ಮೃತ್ಯುಃ ಕರಿಷ್ಯತಿ ॥ ೬೩ ॥

ಗೋವಿಂದಂ ಪುಂಡರೀಕಾಕ್ಷಮನಂತಮಜಮವ್ಯಯಮ್ ।
ಕೇಶವಂ ಚ ಪ್ರಪನ್ನೋಽಸ್ಮಿ ಕಿಂ ಮೇ ಮೃತ್ಯುಃ ಕರಿಷ್ಯತಿ ॥ ೬೪ ॥

ವಾಸುದೇವಂ ಜಗದ್ಯೋನಿಂ ಭಾನುವರ್ಣಮತೀಂದ್ರಿಯಮ್ ।
ದಾಮೋದರಂ ಪ್ರಪನ್ನೋಽಸ್ಮಿ ಕಿಂ ಮೇ ಮೃತ್ಯುಃ ಕರಿಷ್ಯತಿ ॥ ೬೫ ॥

---

೬೩. ಮಾರ್ಕಂಡೇಯನು ಹೇಳುತ್ತಾನೆ :—‘ ಸಾವಿರ ಕಣ್ಣುಗಳುಳ್ಳವನೂ, (ಪೊಡೆಯಲರಾತನೂ) ಪದ್ಮನಾಭನೂ, ಪುರಾತನನೂ, ಸರ್ವೇಂದ್ರಿಯಗಳ ನಿಯಾಮಕನೂ, ಆದ ನಾರಾಯಣನನ್ನು ವಿನೀತನಾಗಿ ಮರೆಹೊಕ್ಕಿರುತ್ತೇನೆ. ನನಗೆ ಮೃತ್ಯುವೇನನ್ನೆಸಗುವುದು ?

೬೪. ಗೋವಿಂದನೂ, ತಾವರೆಗಣ್ಣನೂ, ನಾಶವಿಲ್ಲದವನೂ, ಉತ್ಪತ್ತಿ ರಹಿತನೂ, ಯಾವ ಭಾವವಿಕಾರವೂ ಇಲ್ಲದವನೂ ಆದ ಕೇಶವನನ್ನು ಮರೆಹೊಕ್ಕಿರುತ್ತೇನೆ. ನನಗೆ ಮೃತ್ಯುವೇನನ್ನು ಮಾಡುವುದು ?

೬೫. ಸಕಲ ಜಗತ್ತುಗಳ ಸೃಷ್ಟಿಕರ್ತನೂ, ಸೂರ್ಯನ ಬಣ್ಣದಂತೆ ಬಣ್ಣವುಳ್ಳವನೂ, ಸಂಪೂರ್ಣವಾಗಿ ಇಂದ್ರಿಯಗಳಿಗೆ ಗೋಚರಿಸದವನೂ, ದಾಮೋದರನೂ ಆದ ವಾಸುದೇವನನ್ನು ಮರೆಹೊಕ್ಕಿರುತ್ತೇನೆ. ಮೃತ್ಯುವು ನನಗೇನು ಮಾಡುವುದು ?

ಶಂಖಚಕ್ರಧರಂ ದೇವಂ ಛನ್ನರೂಪಿಣಮವ್ಯಯಮ್ ।
ಅಧೋಕ್ಷಜಂ ಪ್ರಪನ್ನೋಽಸ್ಮಿ ಕಿಂ ಮೇ ಮೃತ್ಯುಃ ಕರಿಷ್ಯತಿ ॥ ೬೬ ॥

ವಾರಾಹಂ ವಾಮನಂ ವಿಷ್ಣುಂ ನಾರಸಿಂಹಂ ಜನಾರ್ದನಮ್ ।
ಮಾಧವಂ ಚ ಪ್ರಪನ್ನೋಽಸ್ಮಿ ಕಿಂ ಮೇ ಮೃತ್ಯುಃ ಕರಿಷ್ಯತಿ ॥ ೬೭ ॥

ಪುರುಷಂ ಪುಷ್ಕರಂ ಪುಣ್ಯಂ ಕ್ಷೇಮಬೀಜಂ ಜಗತ್ಪತಿಮ್ ।
ಲೋಕನಾಥಂ ಪ್ರಪನ್ನೋಽಸ್ಮಿ ಕಿಂ ಮೇ ಮೃತ್ಯುಃ ಕರಿಷ್ಯತಿ ॥ ೬೮ ॥

---

೬೬. ಶಂಖಚಕ್ರಗದಾಪದ್ಮಪಾಣಿಯೂ, ಕ್ರೀಡಾದಿಗುಣಗಳುಳ್ಳವನೂ, ತನ್ನ ಅಪ್ರಾಕೃತರೂಪವನ್ನು ತೋರದವನೂ, ಅವ್ಯಯನೂ, ತಿರಸ್ಕೃತವಾದ ಇಂದ್ರಿಯದಿಂದುಂಟಾದ ಜ್ಞಾನವುಳ್ಳವನಾದುದರಿಂದ, ಎಂದರೆ ಮಾನವರಂತೆ ಇಂದ್ರಿಯಗಳಿಂದ ನೋಡಿ ತಿಳಿಯುವನಲ್ಲದ ಅಧೋಕ್ಷಜನಾದ ಶ್ರೀ ಹರಿಯನ್ನು ಶರಣುಹೊಂದುತ್ತೇನೆ ; ನನಗೆ ಮೃತ್ಯುವೇನನ್ನು ಮಾಡುವುದು ?

೬೭. ಸ್ವರೂಪಾಂಶದಿಂದ ಸೂಕರಾವತಾರವುಳ್ಳವನೂ, ವಿಷ್ಣುಸ್ವರೂಪನೂ, ನರಸಿಂಹರೂಪನೂ, ಜನಾರ್ದನನೂ ಆದ ಮಾಧವನನ್ನು ಮರೆಹೊಕ್ಕಿರುತ್ತೇನೆ. ನನಗೆ ಮೃತ್ಯುವೇನನ್ನು ಮಾಡುವುದು ?

೬೮. ಪೂರ್ಣಷಡ್ಗುಣನಾದ್ದರಿಂದಲೂ, ಸರ್ವ ಪ್ರಾಣಿಗಳ ದೇಹವನ್ನು ಹೊಂದಿದವನಾದ್ದರಿಂದಲೂ ಪುರುಷನೂ, ಸರೋವರಗಳ ಮಧ್ಯದಲ್ಲಿ ಸಮುದ್ರಕ್ಕೆ ಶೈತ್ಯಪ್ರದನಾಗಿರುವುದರಿಂದ ಪುಷ್ಕರನೂ, ಪುಣ್ಯಸ್ವರೂಪನೂ, ಸಕಲ ಲೋಕಕ್ಕೆ ಕಾರಣಭೂತನೂ, ಲೋಕಕ್ಕೆ ಒಡೆಯನೂ, ರಕ್ಷಕನೂ ಆದ ಶ್ರೀಹರಿಯನ್ನು ಮರೆಹೊಕ್ಕಿರುತ್ತೇನೆ ನನಗೆ ಮೃತ್ಯುವೇನನ್ನು ಮಾಡುವುದು ?

ಭೂತಾತ್ಮಾನಂ ಮಹಾತ್ಮಾನಂ ಜಗದ್ಯೋನಿಮಯೋನಿಜಮ್ ।
ವಿಶ್ವರೂಪಂ ಪ್ರಪನ್ನೋಽಸ್ಮಿ ಕಿಂ ಮೇ ಮೃತ್ಯುಃ ಕರಿಷ್ಯತಿ ॥ ೬೯ ॥

ಸಹಸ್ರ ಶಿರಸಂ ದೇವಂ ವ್ಯಕ್ತಾವ್ಯಕ್ತಂ ಸನಾತನಮ್ ।
ಮಹಾಯೋಗಂ ಪಪ್ರನ್ನೋಽಸ್ಮಿ ಕಿಂ ಮೇ ಮೃತ್ಯುಃ ಕರಿಷ್ಯತಿ ॥ ೭೦ ॥

ಇತ್ಯುದೀರಿತಮಾಕರ್ಣ್ಯ ಸ್ತೋತ್ರಂ ತಸ್ಯ ಮಹಾತ್ಮನಃ ।
ಅಪಯಾತಸ್ತತೋ ಮೃತ್ಯುರ್ವಿಷ್ಣುದೂತೈಶ್ಚ ಪೀಡಿತಃ ॥ ೭೧ ॥

---

೬೯. ಸಕಲ ಪ್ರಾಣಿಗಳ ಅಂತರ್ಯಾಮಿಯಾಗಿರುವ ಶ್ರೇಷ್ಠನಾದ ಸ್ವಾಮಿಯಾದ, ಜಗತ್ಕಾರಣನಾದ, ಯಾರಿಂದಲೂ ಜನ್ಮವಿಲ್ಲದ, ವಿಶ್ವಾಂತರ್ಯಾಮಿಯಾಗಿರುವುದರಿಂದ ವಿಶ್ವರೂಪನಾದ ಶ್ರೀ ಹರಿಯನ್ನು ಮರೆಹೊಕ್ಕಿರುತ್ತೇನೆ. ನನಗೆ ಮೃತ್ಯುವೇನನ್ನು ಮಾಡುವುದು ?

೭೦. ಅನಂತಶೀರ್ಷನೂ, ಅಪ್ರಾಕೃತತೇಜೋವಿಶಿಷ್ಟನೂ, ಅಚಿಂತ್ಯಾದ್ಭುತ ಶಕ್ತಿಯಿಂದ ಭಕ್ತಾನುಗ್ರಹಾರ್ಥವಾಗಿ ಅಭಿವ್ಯಕ್ತಸ್ವರೂಪನೂ. ಸ್ವತ ಏವ ಅವ್ಯಕ್ತರೂಪನೂ, ನಿತ್ಯನೂ, ವೇದಪ್ರತಿಪಾದ್ಯನೂ, ಸರ್ವಜ್ಞನೂ ಆದ ಶ್ರೀ ಹರಿಯನ್ನು ಮರೆಹೊಕ್ಕಿರುತ್ತೇನೆ; ನನಗೆ ಮೃತ್ಯುವೇನನ್ನೆಸಗುವುದು ?"

೭೧. ಇಂತು ಆ ಮಹಾತ್ಮನಾದ ಮಾರ್ಕಂಡೇಯನು ಮಾಡಿದ ಈ ಸ್ತೋತ್ರವನ್ನು ಮೃತ್ಯುವು ಕೇಳಿ, ವಿಷ್ಣುದೂತರಿಂದ ಹಿಂಸೆಗೊಂಡು, ಬಳಿಕ ಹೊರಟು ಹೋದನು.

ಇತಿ ತೇನ ಜಿತೋ ಮೃತ್ಯುರ್ಮಾರ್ಕಂಡೇಯೇನ ಧೀಮತಾ ।
ಪ್ರಸನ್ನೇ ಪುಂಡರೀಕಾಕ್ಷೇ ನೃಸಿಂಹೇ ನಾಸ್ತಿ ದುರ್ಲಭಮ್ ॥ ೭೨ ॥

ಮೃತ್ಯುಂಜಯಮಿದಂ ಪುಣ್ಯಂ ಮೃತ್ಯುಪ್ರಶಮನಂ ಶುಭಮ್ ।
ಮಾರ್ಕಂಡೇಯ ಹಿತಾರ್ಥಾಯ ಸ್ವಯಂ ವಿಷ್ಣುರುವಾಚ ಹ ॥ ೭೩ ॥

ಯ ಇದಂ ಪಠತೇ ಭಕ್ತ್ಯಾ ತ್ರಿಕಾಲಂ ನಿಯತಃ ಶುಚಿಃ ।
ನಾಕಾಲೇ ತಸ್ಯ ಮೃತ್ಯುಃ ಸ್ಯಾನ್ನರಸ್ಯಾಚ್ಯುತಚೇತಸಃ ॥ ೭೪ ॥

---

೭೨. ಇಂತು ಜ್ಞಾನಿಯಾದ ಮಾರ್ಕಂಡೇಯನು ಮೃತ್ಯುವನ್ನು ಗೆದ್ದನು. ಪುಂಡರೀಕಾಕ್ಷನಾದ ಶ್ರೀ ನರಸಿಂಹನು ಪ್ರಸನ್ನನಾದರೆ, ಹೊಂದಲಾಗದುದು ಯಾವುದೂ ಇಲ್ಲವು. (ಎಲ್ಲವನ್ನೂ ಹೊಂದಲಾಗುವುದು.)

೭೩. ಮೃತ್ಯುವನ್ನು ಗೆಲ್ಲುವ, ಪುಣ್ಯಸಂಪಾದಕವಾದ, ಮೃತ್ಯುವನ್ನು ಅಡಗಿಸುವ, ಮಂಗಳಕರವಾದ ಈ ಸ್ತೋತ್ರವನ್ನು ವಿಷ್ಣುವು ತಾನೇ ಮಾರ್ಕಂಡೇಯನಿಗೆ ಒಳ್ಳಿತನ್ನೆಸಗಲು ಹೇಳಿದನು.

೭೪. ಯಾವಾತನು ಈ ಸ್ತೋತ್ರವನ್ನು ಬೆಳಿಗ್ಗೆ, ಮಧ್ಯಾಹ್ನ, ಮತ್ತು ಸಂಜೆ ಈ ಹೊತ್ತುಗಳಲ್ಲಿ ಭಕ್ತಿಯಿಂದ ಜಿತೇಂದ್ರಿಯನೂ, ಶುಚಿಯೂ ಆಗಿ ಪಠಿಸುತ್ತಾನೆಯೋ, ಆ ಮಹಾಮಹಿಮನಾದ ಅಚ್ಯುತನನ್ನು ಧ್ಯಾನಮಾಡುವ ಆ ನರನಿಗೆ ಅಕಾಲದಲ್ಲಿ ಮರಣವುಂಟಾಗುವುದಿಲ್ಲವು.

ಹೃತ್ಪದ್ಮಮಧ್ಯೇ ಪುರುಷಂ ಪುರಾಣಂ
ನಾರಾಯಣಂ ಶಾಶ್ವತಮಾದಿ ದೇವಮ್ ।
ಸಂಚಿಂತ್ಯ ಸೂರ್ಯಾದಪಿ ರಾಜಮಾನಂ
ಮೃತ್ಯುಂ ಸ ಯೋಗೀ ಜಿತವಾಂಸ್ತಥೈವ ॥ ೭೫ ॥

ಇತಿ ಶ್ರೀ ನೃಸಿಂಹಪುರಾಣೇ ಮಾರ್ಕಂಡೇಯ ಮೃತ್ಯುಂಜಯೋ ನಾಮ ಸಪ್ತಮೋಽಧ್ಯಾಯಃ

---

೭೫. ಜ್ಞಾನಿಯಾದ ಮಾರ್ಕಂಡೇಯನು ತನ್ನ ಹೃದಯ ಪದ್ಮದ ನಡುವೆ ಪೂರ್ಣಸುಖನೂ, ಸರ್ವಶರೀರವನ್ನೂ ಹೊಂದುವವನೂ, ಪ್ರಾಚೀನನೂ, ಯಾವಾಗಲೂ ಏಕಪ್ರಕಾರವಾಗಿರುವವನೂ, ಜಗತ್ತಿಗೆ ಮುಂಚೆಯೂ ಇರುವ ಕ್ರಿಡಾದಿಗುಣ ವಿಶಿಷ್ಟನೂ, ಸೂರ್ಯನಿಗಿಂತ ವಿಶೇಷವಾದ ಪೂರ್ಣಪ್ರಕಾಶನೂ, ಗುಣಪೂರ್ಣನೂ, ದೋಷರಹಿತನೂ, ಜ್ಞೇಯನೂ, ಮುಕ್ತಾಶ್ರಯನೂ, ಆದುದರಿಂದ ನಾರಾಯಣ ಶಬ್ದವಾಚ್ಯನೂ, ಕ್ಷೀರಸಾಗರಶಾಯಿಯೂ ಆದ ಶ್ರೀ ಹರಿಯನ್ನು ಜಿತೇಂದ್ರಿಯನಾಗಿ ಏಕಾಗ್ರಮನದಿಂದ ಭಕ್ತಿಯಿಂದ ಧ್ಯಾನಮಾಡಿ, ಕೂಡಲೇ ಮೃತ್ಯುವನ್ನು ಗೆದ್ದನು." ಎಂದು ಶ್ರೀ ಕೃಷ್ಣದ್ವೈಪಾಯನನು ಶುಕನಿಗೆ ಹೇಳಿದ ಆಖ್ಯಾನವನ್ನು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಮಾರ್ಕಂಡೇಯನು
ಮೃತ್ಯುವನ್ನು ಗೆದ್ದುದು ಎಂಬ ಏಳನೆಯ
ಅಧ್ಯಾಯವು ಮುಗಿದುದು.

ಏಳನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ, ಭೃಗುವಿನ ಮುಮ್ಮಗನಾದ ಮಾರ್ಕಂಡೇಯನು ತನ್ನ ತಾಯಿಯಿಂದ ತನಗೆ ಹನ್ನೆಡನೆಯ ವಯಸ್ಸಿನಲ್ಲಿ ಮೃತ್ಯುವುಂಟಾಗುವುದೆಂದು ಭವಿಷ್ಯವಾದಿಯಿಂದ ತಿಳಿದ ಸಂಗತಿಯನ್ನು ಕೇಳಿ, ಮಾತಾಪಿತೃಗಳ ದುಃಖವನ್ನು ಪರಿಹರಿಸಲು, ತಾನು ಮೃತ್ಯುವನ್ನು ಜಯಿಸಲು ತಪವನ್ನೆಸಗುವುದಾಗಿ ಹೇಳಿ, ವನಕ್ಕೆ ತೆರಳಿ, ಅಲ್ಲಿ ತನ್ನ ಪಿತಾಮಹನಾದ ಭೃಗುವನ್ನು ಮುನಿಗಳ ಮಧ್ಯದಲ್ಲಿ ಕಂಡು, ಎರಗಿ, ತಾನು ಬಂದ ಉದ್ದೇಶವನ್ನು ತಿಳಿಸಲು, ಭೃಗುವು 'ಶ್ರೀಮನ್ನಾರಾಯಣನನ್ನು ಸೇವಿಸಿದ ಹೊರತು ಮೃತ್ಯುಬಾಧೆಯು ಪರಿಹಾರವಾಗುವುದಿಲ್ಲ. ಆದುದರಿಂದ ಅವನನ್ನು ಸಹ್ಯಾದ್ರಿಯಲ್ಲಿ ಹುಟ್ಟುವ, ತುಂಗಭದ್ರಾತಡಿಯ ಪುಣ್ಯ ವನದಲ್ಲಿಪ್ರತಿಷ್ಠಿಸಿ, ಸೇವಿಸು,' ಎನಲು, ಮಾರ್ಕಂಡೇಯನೂ ಅಂತೆಯೇ ಜಿತೇಂದ್ರಿಯ ನಾಗಿ ಶ್ರೀಮನ್ನಾರಾಯಣನನ್ನು ಅವನೇ (ವಿಷ್ಣುವೇ) ತನಗೆ ಕಿವಿಯಲ್ಲಿ ಹೇಳಿದ ಸ್ತೋತ್ರದಿಂದಸ್ತುತಿಸಿ, ಆ ಭಗವಂತನ ಅನುಗ್ರಹ ಪಡೆದು, ಮೃತ್ಯುವನ್ನು ಗೆದ್ದನು, ಎಂಬ ಆಖ್ಯಾನವನ್ನು ಹಿಂದೆ ಶ್ರೀ ಕೃಷ್ಣದ್ವೈಪಾಯನವ್ಯಾಸನು ಶ್ರೀ ಶುಕಾಚಾರ್ಯನಿಗೆ ಹೇಳಿದುದನ್ನು ಸೂತರು ಭರದ್ವಾಜನಿಗೆ ನಿರೂಪಿಸಿರುತ್ತಾರೆ.

ಇಂತು ಏಳನೆಯ ಅಧ್ಯಾಯದ ವಿಷಯ ಸಂಗ್ರಹವು.

॥ ಶ್ರೀಃ ॥

ಶ್ರೀ ಲಕ್ಷ್ಮೀ ನೃಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ಅಷ್ಟಮೋಽಧ್ಯಾಯಃ

ಯಮಗೀತಾ.

॥ ಶ್ರೀ ವ್ಯಾಸ ಉವಾಚ ॥

ಮೃತ್ಯುಶ್ಚ ಕಿಂಕರಾಶ್ಚೈವ ವಿಷ್ಣುದೂತೈಃ ಪ್ರಪೀಡಿತಾಃ ।
ಸ್ವರಾಜಸನ್ನಿಧಿಂ ಗತ್ವಾ ಚುಕ್ರುಶುರ್ವೇಪಿತಾ ಭೃಶಮ್ ॥ ೧ ॥

॥ ಮೃತ್ಯುಕಿಂಕರಾ ಊಚುಃ ॥

ಶೃಣು ರಾಜನ್ ವಚೋಽಸ್ಮಾಕಂ ತವಾಗ್ರೇ ಯದ್ಬ್ರವೀಮಹೇ ।
ತ್ವದಾದೇಶಾದ್ವಯಂ ಗತ್ವಾ ಮೃತ್ಯುಂ ಸಂಸ್ಥಾಪ್ಯ ದೂರತಃ ॥ ೨ ॥

ಸೃಷ್ಟಿಕಾಂಡ ; ಎಂಟನೆಯ ಅಧ್ಯಾಯವು

ಯಮಗೀತೆಯು

ಶ್ರೀ ವ್ಯಾಸಮಹರ್ಷಿಯು ಶುಕಾಚಾರ್ಯನಿಗೆ ಇಂತು ಹೇಳುತ್ತಾನೆ :—

೧. "ಮೃತ್ಯುವೂ, ಯಮಕಿಂಕರರೂ ವಿಷ್ಣುದೂತರಿಂದ ಇಂತು ಬಾಧೆಗೊಂಡು ನಡುಗುತ್ತಾ, ತಮ್ಮ ಒಡೆಯನಾದ ಯಮನ ಸಮೀಪಕ್ಕೆ ಹೋಗಿ ಗೋಳಿಟ್ಟರು.

ಮೃತ್ಯುಕಿಂಕರರು ಹೇಳುತ್ತಾರೆ :—

೨-೪ 'ಎಲೈ ಯಮಧರ್ಮರಾಯನೇ! ನಾವು ಈಗ ನಿನ್ನ ಇದಿರಿನಲ್ಲಿ ಹೇಳುವ ಈ ನುಡಿಯನ್ನು ಕೇಳು. ನಾವು ನಿನ್ನ ಆಣತಿಯಿಂದ ಮೃತ್ಯುವನ್ನು ದೂರದಲ್ಲಿರುವಂತೆ ಮಾಡಿ, ಭೃಗುವಿನ ಮುಮ್ಮಗನಾದ ಬ್ರಾಹ್ಮಣನ ಹತ್ತಿರಕ್ಕೆ

ಬ್ರಾಹ್ಮಣಸ್ಯ ಸಮೀಪಂ ಚ ಭೃಗೋಃ ಪೌತ್ರಸ್ಯ ಸತ್ತಮ ।
ತಂ ಧ್ಯಾಯಮಾನಂ ಕಮಪಿ ದೇವಮೇಕಾಗ್ರಮಾನಸಮ್ ॥ ೩ ॥

ಗಂತುಂ ನ ಶಕ್ತಾಸ್ತತ್ಪಾರ್ಶ್ವಂ ವಯಂ ಸರ್ವೇ ಮಹಾಮತೇ ।
ಯಾವತ್ತಾವನ್ಮಹಾಕಾಯೈಃ ಪುರುಷೈರ್ಮುಸಲೈರ್ಹತಾಃ ॥ ೪ ॥

ವಯಂ ನಿವೃತ್ತಾಸ್ತದ್ವೀಕ್ಷ್ಯ ಮೃತ್ಯುಸ್ತತ್ರ ಗತಃ ಪುನಃ ।
ಅಸ್ಮಾನ್ನಿರ್ಭರ್ತ್ಸ್ಯ ತತ್ರಾಯಂ ತೈರ್ನರೈರ್ಮುಸಲೈರ್ಹತಾಃ ॥ ೫ ॥

ಏವಮತ್ರ ತಮಾನೇತುಂ ಬ್ರಾಹ್ಮಣಂ ತಪಸಿ ಸ್ಥಿತಮ್ ।
ಅಶಕ್ತಾ ವಯಮೇವಾತ್ರ ಮೃತ್ಯುನಾ ಸಹ ವೈ ಪ್ರಭೋ ॥ ೬ ॥

ತದ್ಬ್ರೂಹಿ ಮಹಾಭಾಗ ಯದ್ಬ್ರಹ್ಮ ಬ್ರಾಹ್ಮಣಸ್ಯ ತು ।
ದೇವಂ ಕಂ ಧ್ಯಾಯತೇ ವಿಪ್ರಃ ಕೇವಾ ತೇ ಯೈರ್ಹತಾ ವಯಮ್ ॥ ೭ ॥

ಹೋದೆವು. ದೃಢವಾದ ಮನಸ್ಸಿನಿಂದ ಯಾವನೋ ಒಬ್ಬ ದೇವನನ್ನು ಧ್ಯಾನಿಸುತ್ತಿದ್ದ ಅವನನ್ನು ಕಂಡು, ಎಲೈ ಶ್ರೇಷ್ಠನಾದ ಮಹಾಮತಿಯೇ! ನಾವೆಲ್ಲರೂ ಅವನ ಪಕ್ಕಕ್ಕೆ ಹೋಗಲಾರದಾದೆವು ಅಷ್ಟರಲ್ಲಿಯೇ, ದೊಡ್ಡ ಶರೀರವುಳ್ಳ ಕೆಲವು ಮಂದಿಗಳು ಮುಸಲಾಯುಧಗಳಿಂದ ನಮ್ಮನ್ನು ಹೊಡೆದರು.

೫ ಆಗ ಪೆಟ್ಟು ತಿಂದು ನಾವು ಹಿಂದಿರುಗಿದೆವು. ಮೃತ್ಯುವು ಅವನ್ನು ಕಂಡು, ಮತ್ತೆ ತಾನೇ ಅಲ್ಲಿಗೆ ಹೋದನು. ಆ ಪುರುಷರು ನಮ್ಮನ್ನು ಬಯ್ದು, ಆ ಮೃತ್ಯುವನ್ನು ಮುಸಲಗಳಿಂದ ಹೊಡೆದರು.

೬. ಎಲೈ ಪ್ರಭುವೇ! ನಾವು ತಪದಲ್ಲಿ ಸಂದ ಆ ಬ್ರಾಹ್ಮಣನನ್ನು ಇಲ್ಲಿಗೆ ಕರೆತರಲು ಸಾಮರ್ಥ್ಯವಿಲ್ಲದೇ ಮೃತ್ಯುವಿನೊಡನೆ ನಾವೇ ಇಲ್ಲಿಗೆ ಬಂದಿರುತ್ತೇವೆ.

೭. ಎಲೈ ಪುಣ್ಯಶಾಲಿಯೇ! ಬ್ರಾಹ್ಮಣನ ಸಂಬಂಧಿಯಾದ ಬ್ರಹ್ಮನಾವನು? ಆ ಬ್ರಾಹ್ಮಣನು ಧ್ಯಾನಿಸುತ್ತಿದ್ದ ದೇವನಾವನು? ನಮ್ಮನ್ನು ಹೊಡೆದ ಆ ಮಂದಿಗಳಾರು? ದಯವಿಟ್ಟು ಇವರುಗಳನ್ನು ನಮಗೆ ತಿಳಿಸು, ಎಂದರು.

॥ ವ್ಯಾಸ ಉವಾಚ ॥

ಇತ್ಯುಕ್ತೈಃ ಕಿಂಕರೈಃ ಸರ್ವೈರ್ಮೃತ್ಯುನಾ ಚ ಮಹಾಮತೇ ।
ಧ್ಯಾತ್ವಾ ಕ್ಷಣಂ ಮಹಾಬುದ್ಧಿಃ ಪ್ರಾಹ ವೈವಸ್ವತೋ ಯಮಃ ॥ ೮ ॥

॥ ಯಮ ಉವಾಚ ॥

ಶೃಣ್ವಂತು ಕಿಂಕರಾಃ ಸರ್ವೇ ಮೃತ್ಯುಶ್ಚಾನ್ಯೇ ಚ ಮೇ ವಚಃ ।
ಸತ್ಯಮೇತತ್ಪ್ರವಕ್ಷ್ಯಾಮಿ ಜ್ಞಾನಂ ಯದ್ಯೋಗಮಾರ್ಗತಃ ॥ ೯ ॥

ಭೃಗೋಃ ಪೌತ್ರೋ ಮಹಾಭಾಗೋ ಮಾರ್ಕಂಡೇಯೋ ಮಹಾಮತಿಃ ।
ಸ ಜ್ಞಾತ್ವಾದ್ಯಾತ್ಮನಃ ಕಾಲಂ ಗತೋ ಮೃತ್ಯುಜಿಗೀಷಯಾ ॥ ೧೦ ॥

ಶ್ರೀ ವೇದವ್ಯಾಸನು ಹೇಳುತ್ತಾನೆ:—

೮. ಎಲೈ ಮಹಾಮತಿಯಾದ ಶುಕನೇ! ಕೇಳು ; ಎಲ್ಲಾ ಯಮಕಿಂಕರರೂ ಮೃತ್ಯುವೂ ಇಂತು ಬಿನ್ನವಿಸಿ ಕೇಳಲು, ಸೂರ್ಯನ ಕುವರನಾದ, ಮಹಾಬುದ್ಧಿಶಾಲಿಯಾದ ಯಮನು ಚಣಕಾಲ ಯೋಚಿಸಿ, ಅವರಿಗೆ ಇಂತು ಹೇಳಿದನು.

ಯಮನು ಹೇಳುತ್ತಾನೆ:—

೯. 'ಎಲೈ ಭಟರುಗಳಿರಾ! ಮೃತ್ಯುವೇ ಮತ್ತು ಇತರರೇ! ನನ್ನ ಮಾತನ್ನು ಕೇಳಿರಿ; ಯೋಗಮಾರ್ಗದಿಂದ ಕಂಡ ದಿಟವಾದ ಈ ಅರಿವನ್ನು ಹೇಳುವೆನು.

೧೦. ಬಹು ಬುದ್ಧಿವಂತನೂ, ಪುಣ್ಯಶಾಲಿಯೂ ಆದ ಭೃಗುಮುನಿಯ ಮೊಮ್ಮಗನಾದ ಮಾರ್ಕಂಡೇಯನು ತನ್ನ ಜೀವಿತಕಾಲವಿಷ್ಟೆಂದರಿತು, ಮೃತ್ಯುವನ್ನು ಗೆಲ್ಲಬೇಕೆಂದು ಹೊರಟನು.

ಭೃಗುಣೋಕ್ತೇನ ಮಾರ್ಗೇಣ ಸ ತೇಪೇ ಪರಮಂ ತಪಃ ।
ಹರಿಮಾರಾಧ್ಯ ಮೇಧಾವೀ ಜಪನ್ನೈ ದ್ವಾದಶಾಕ್ಷರಮ್ ॥ ೧೧ ॥

ಏಕಾಗ್ರೇಣೈವ ಮನಸಾ ಧ್ಯಾಯತೇ ಹೃದಿ ಕೇಶವಮ್ ।
ಸತತಂ ಯೋಗಯುಕ್ತಸ್ತು ಸ ಮುನಿಸ್ತತ್ರ ಕಿಂಕರಾಃ ॥ ೧೨ ॥

ಹರಿಧ್ಯಾನಮಹಾದಕ್ಷಾ ಬಲಂ ತಸ್ಯ ಮಹಾಮುನೇಃ ।
ನಾನ್ಯದ್ಧಿ ಪ್ರಾಪ್ತಕಾಲಸ್ಯ ಬಲಂ ಪಶ್ಯಾಮಿ ಕಿಂಕರಾಃ ॥ ೧೩ ॥

ಹೃದಿಸ್ಥೇ ಪುಂಡರೀಕಾಕ್ಷೇ ಸತತಂ ಭಕ್ತವತ್ಸಲೇ ।
ಪಶ್ಯಂತಂ ವಿಷ್ಣುಭೂತಂ ನು ಕೋ ಹಿ ಸ್ಯಾತ್ಕೇಶವಾಶ್ರಯಮ್ ॥ ೧೪ ॥

---

೧೧. ಮೇಧಾವಿಯಾದ ಆ ಬಾಲಕನು ತನ್ನ ತಾತನಾದ ಭೃಗುಮುನಿಯು ಹೇಳಿದಂತೆ "ಓಂ ನಮೋ ಭಗವತೇ ವಾಸುದೇವಾಯ" ಎಂಬ ಹನ್ನೆರಡು ಅಕ್ಷರದ ಮಂತ್ರವನ್ನು ಜಪಿಸುತ್ತಾ, ಶ್ರೀ ಹರಿಯನ್ನು ಪೂಜಿಸಿ, ಶ್ರೇಷ್ಠವಾದ ತಪವನ್ನೆಸಗಿದನು.

೧೨. ಎಲೈ ಭಟರೇ! ಅಲ್ಲಿ ಆ ಮಾರ್ಕಂಡೇಯ ಮುನಿಯು ಏಕಾಗ್ರ ಮನದಿಂದ ಯಾವಾಗಲೂ ಧ್ಯಾನಮಗ್ನನಾಗಿ ಹೃದಯದಲ್ಲಿ ಚಿಂತಿಸುತ್ತಾನೆ.

೧೩. ಎಲೈ ಕಿಂಕರರೇ! ಆ ಮಹಾಮುನಿಗೆ ಶ್ರೀಹರಿಯ ಧ್ಯಾನದಿಂದ ಉಂಟಾದ ಅತಿಶಯವಾದ ಶಕ್ತಿಯನ್ನು ಹೊರತು ಮರಣಕಾಲವನ್ನೈದಿದ ಅವನಿಗೆ ಬೇರೆ ಶಕ್ತಿಯಿರುವುದನ್ನು ನಾನು ಕಾಣಲಿಲ್ಲವು.

೧೪. ತಾವರೆಗಣ್ಣನೂ, ಭಕ್ತವತ್ಸಲನೂ ಆದ ಶ್ರೀಹರಿಯು ಹೃದಯದಲ್ಲಿ ವಿಶೇಷಸನ್ನಿಧಾನದಿಂದ ವಾಸಿಸುತ್ತಿರಲು, ವ್ಯಾಪ್ತವಾದ ಶ್ರೀ ವಿಷ್ಣುಸ್ವರೂಪವನ್ನು ಕಣ್ಣಾರೆ ನೋಡುತ್ತಲಿದ್ದ, ಬ್ರಹ್ಮರುದ್ರಪ್ರವರ್ತಕನಾದ ಹರಿಗೆ ನೆಲೆಯಾದ ಆ ಬಾಲಕನನ್ನು ಹಿಡಿಯಲು ಶಕ್ತರಾದವರಾರು ?

ತೇಽಪಿ ವೈ ಪುರುಷಾ ವಿಷ್ಣೋರ್ಯೈರ್ಯೂಯಂ ತಾಡಿತಾ ಭೃಶಮ್ ।
ಅತ ಊರ್ಧ್ವಂ ನ ಗಂತವ್ಯಂ ಯತ್ರ ವೈ ವೈಷ್ಣವಾಃ ಸ್ಥಿತಾಃ ॥ ೧೫ ॥

ನ ಚಿತ್ರಂ ತಾಡನಂ ತತ್ರ ಅಹಂ ಮನ್ಯೇ ಮಹಾತ್ಮಭಿಃ ।
ಭವತಾಂ ಜೀವನಂ ಚಿತ್ರಂ ಯುಷ್ಮೈರ್ದತ್ತಂ ಕೃಪಾಲುಭಿಃ ॥ ೧೬ ॥

ನಾರಾಯಣಪರಂ ವಿಪ್ರಂ ಕಸ್ತಂ ವೀಕ್ಷಿತುಮುತ್ಸಹೇತ್ ।
ಯುಷ್ಮಾಭಿಶ್ಚ ಮಹಾಪಾಪೈರ್ಮಾರ್ಕಂಡೇಯಂ ಹರಿಪ್ರಿಯಮ್ ।
ಸಮಾನೇತುಂ ಕೃತೋ ಯತ್ನಃ ಸಮೀಚೀನಂ ನ ತತ್ಕೃತಮ್ ॥ ೧೭ ॥

ನರಸಿಂಹಂ ಮಹಾದೇವಂ ಯೇ ನರಾಃ ಪರ್ಯುಪಾಸತೇ ।
ತೇಷಾಂ ಪಾರ್ಶ್ವಂ ನ ಗಂತವ್ಯಂ ಯುಷ್ಮಾಭಿರ್ಯಮಶಾಸನಾತ್ ॥ ೧೮ ॥

---

೧೫ ನಿಮ್ಮನ್ನು ಹೆಚ್ಚಾಗಿ ಹೊಡೆದವರೂ ಶ್ರೀ ಮಹಾವಿಷ್ಣುವಿನ ದೂತರಷ್ಟೆ! ಎಲ್ಲಿ ವಿಷ್ಣುಭಕ್ತರಾದ ವೈಷ್ಣವರು ಇರುತ್ತಾರೆಯೋ ಅಲ್ಲಿಂದ ಮೇಲಕ್ಕೆ ನೀವು ಹೋಗಬಾರದು.

೧೬ ಅಲ್ಲಿ ಆ ಮಹಾತ್ಮರು ನಿಮ್ಮನ್ನು ಹೊಡೆದುದೇನೂ ಆಶ್ಚರ್ಯವಲ್ಲ. ನೀವು ಕರುಣಾಳುಗಳಾದ ಯಕ್ಷರಿಂದ ರಕ್ಷಿತರಾಗಿ ಬದುಕಿ ಬಂದುದು ಆಶ್ಚರ್ಯವೆಂದು ತಿಳಿಯುತ್ತೇನೆ.

೧೭. ಶ್ರೀಮನ್ನಾರಾಯಣನ ಧ್ಯಾನದಲ್ಲಿ ತೊಡಗಿದ ಆ ಬ್ರಾಹ್ಮಣನನ್ನು ನೋಡಲು ತಾನೇ ಉತ್ಸಾಹಿಸುವವನು ಯಾವನು ? ಮಹಾ ಪಾಪಾತ್ಮರಾದ ನೀವು ಶ್ರೀಹರಿಗೆ ಪ್ರಿಯನಾದ ಮಾರ್ಕಂಡೇಯ ಮುನಿಯನ್ನು ಎಳೆದುಕೊಂಡು ಬರಲು ತೊಡಗಿದುದು ಒಳ್ಳಿತಾದ ಕೆಲಸವಲ್ಲವು.

೧೮. ಮಹಾದೇವನಾದ ಶ್ರೀ ನರಸಿಂಹನನ್ನು ಯಾವ ನರರು ಸೇವಿಸುತ್ತಾರೆಯೋ, ಅವರ ಬಳಿಗೆ ಕಿಂಕರರಾದ ನೀವು ಯಮಧರ್ಮರಾಯನಾದ ನನ್ನ ಅಪ್ಪಣೆಯಿಂದ ಹೋಗಕೂಡದು,' ಎಂದನು.

॥ ಶ್ರೀ ವ್ಯಾಸ ಉವಾಚ ॥

ಸ ಏವಂ ಕಿಂಕರಾನುಕ್ತ್ವಾ ಮೃತ್ಯುಂ ಚ ಪುರತಃ ಸ್ಥಿತಮ್ ।
ಯಮೋ ನಿರೀಕ್ಷ್ಯ ಚ ಜನಂ ನರಕಸ್ಥಂ ಪ್ರಪೀಡಿತಮ್ ॥ ೧೯ ॥

ಕೃಪಯಾ ಪರಯಾ ಯುಕ್ತೋ ವಿಷ್ಣುಭಕ್ತ್ಯಾ ವಿಶೇಷತಃ ।
ಜನಸ್ಯಾನುಗ್ರಹಾರ್ಥಾಯ ತೇನೋಕ್ತಾಶ್ಚ ಗಿರಃ ಶೃಣು ॥ ೨೦ ॥

ನರಕೇ ಪಚ್ಯಮಾನಸ್ಯ ಯಮೇನ ಪರಿಭಾಷಿತಮ್ ।
ಕಿಂ ತ್ವಯಾ ನಾರ್ಚಿತೋ ದೇವಃ ಕೇಶವಃ ಕ್ಲೇಶನಾಶನಃ ॥ ೨೧ ॥

ಉದಕೇನಾಪ್ಯಭಾವೇ ದ್ರವ್ಯಾಣಾಂ ಪೂಜಿತಃ ಪ್ರಭುಃ ।
ಯೋ ದದಾತಿ ಸ್ವಕಂ ಲೋಕಂ ಸ ತ್ವಯಾ ಕಿಂ ನ ಪೂಜಿತಃ ॥ ೨೨ ॥

೧೯–೨೦. ಶ್ರೀ ವ್ಯಾಸನು ಹೇಳುತ್ತಾನೆ:— ಆ ಯಮನು ಭಟರಿಗೂ, ಇದಿರಿನಲ್ಲಿದ್ದ ಮೃತ್ಯುದೇವತೆಗೂ ಇಂತು ನುಡಿದು, ನರಕದಲ್ಲಿದ್ದು ಬಾಧೆಗೊಳ್ಳುತ್ತಲಿದ್ದ ಜನರನ್ನು ಕಂಡು, ಅತ್ಯಂತ ಕರುಣೆಯಿಂದಲೂ, ವಿಶೇಷವಾಗಿ ಶ್ರೀ ಮಹಾವಿಷ್ಣುವಿನಲ್ಲಿ ಭಕ್ತಿಯಿಂದಲೂ ಕೂಡಿದವನಾಗಿ, ಆ ಜನರಿಗೆ ಅನುಗ್ರಹಾರ್ಥವಾಗಿ ನುಡಿದ ನುಡಿಗಳನ್ನು ಹೇಳುವೆನು ; ಸಶ್ರದ್ಧೆಯಿಂದ ಕೇಳು.

೨೧. ನರಕದಲ್ಲಿ ಬೇಯಿಸಲ್ಪಡುತ್ತಿದ್ದ ನಾರಕಿಗಳಿಗೆ ಯಮನು ಇಂತು ಹೇಳಿದನು :— " ನೀವು ಜನರ ಕಷ್ಟಗಳನ್ನು ಪರಿಹರಿಸುವ ಕೇಶವನನ್ನು ಸೇವಿಸಲಿಲ್ಲವೇ ?

೨೨. ತಮಗೆ ಧನಲೋಭವಿದ್ದರೂ ಕೇವಲ ನೀರಿನಿಂದಲಾದರೂ ಸೇವಿತನಾದ ಯಾವ ಸ್ವಾಮಿಯು ತನ್ನ ಲೋಕವನ್ನೀಯುವನೋ, ಅವನನ್ನು ನೀವು ಪೂಜಿಸಲಿಲ್ಲವೇನು ?

ನರಸಿಂಹೋ ಹೃಷೀಕೇಶಃ ಪುಂಡರೀಕನಿಭೇಕ್ಷಣಃ ।
ಸ್ಮರಣಾನ್ಮುಕ್ತಿದೋ ನೄಣಾಂ ಸ ತ್ವಯಾ ಕಿಂ ನ ಪೂಜಿತಃ ॥ ೨೩ ॥

ಇತ್ಯುಕ್ತ್ವಾ ನಾರಕಾನ್ಸರ್ವಾನ್ಪುನರಾಹ ಸ ಕಿಂಕರಾನ್ ।
ವೈವಸ್ವತೋ ಯಮಃ ಸಾಕ್ಷಾದ್ವಿಷ್ಣುಭಕ್ತಿಸಮನ್ವಿತಃ ॥ ೨೪ ॥

ನಾರದಾಯ ಸ ವಿಶ್ವಾತ್ಮಾ ಪ್ರಾಹೈವಂ ವಿಷ್ಣುರವ್ಯಯಃ ।
ಅನ್ಯೇಭ್ಯೋ ವೈಷ್ಣವೇಭ್ಯಶ್ಚ ಸಿದ್ಧೇಭ್ಯಃ ಸತತಂ ಶ್ರುತಮ್ ॥ ೨೫ ॥

ತದ್ವಃ ಪ್ರೀತ್ಯಾ ಪ್ರವಕ್ಷ್ಯಾಮಿ ಹರಿವಾಕ್ಯಮನುತ್ತಮಮ್ ।
ಶಿಕ್ಷಾರ್ಥಂ ಕಿಂಕರಾಃ ಸರ್ವೇ ಶೃಣುತ ಪ್ರಣತಾ ಹರೇಃ ॥ ೨೬ ॥

---

೨೩. ಸರ್ವೇಂದ್ರಿಯ ನಿಯಾಮಕನೂ, ತಾವರೆಯಂತೆ ಕಣ್ಣುಳ್ಳವನೂ ಆದ ಶ್ರೀ ನರಸಿಂಹನು ಕೇವಲ ಸ್ಮರಣೆಮಾಡುವುದರಿಂದಲೇ ಮೋಕ್ಷವನ್ನೀಯುವನು. ಅವನನ್ನು ನೀವು ಸೇವಿಸಲಿಲ್ಲವೇ ?'

೨೪ ಶ್ರೀ ಮಹಾವಿಷ್ಣುವಿನಲ್ಲಿ ಭಕುತಿಯಿಂದ ಕೂಡಿದ ಸೂರ್ಯತನಯನಾದ ಸಾಕ್ಷಾದ್ಯಮನು ಆ ನಾರಕಿಗಳೆಲ್ಲರಿಗೂ ಇಂತು ಹೇಳಿ, ಮತ್ತೆ ಆ ಯಮಭಟರಿಗೆ ಹೀಗೆ ಹೇಳುತ್ತಾನೆ.

೨೫–೨೬. " ಎಲೈ ಕಿಂಕರರೇ ! ವಿಶ್ವಾತ್ಮಕನಾದ ಕ್ಷಯರಹಿತನಾದ ಶ್ರೀ ಮಹಾವಿಷ್ಣುವು ಇತರ ವೈಷ್ಣವರೂ, ಸಿದ್ಧರೂ ಯಾವಾಗಲೂ ಕೇಳಿ, ತಿಳಿದಿರುವ ಯಾವ ಸಂಗತಿಯನ್ನು ನಾರದನಿಗೆ ಉಪದೇಶಿಸಿದನೋ, ಶ್ರೇಷ್ಠವಾದ ಆ ಶ್ರೀಹರಿವಾಕ್ಯವನ್ನು ನಿಮ್ಮಲ್ಲಿ ಕರುಣೆಯಿಂದ ನಿಮಗೆ ಕಲಿಸಲು ಹೇಳುವೆನು. ಕಿಂಕರರೆಲ್ಲರೂ ಸಡ್ಡೆಯಿಂದ ಶ್ರೀ ಹರಿಗೆ ವಂದಿಸಿ ಕೇಳಿರಿ.

ಹೇ ಕೃಷ್ಣ ಕೃಷ್ಣ ಕೃಷ್ಣೇತಿ ಯೋ ಮಾಂ ಸ್ಮರತಿ ನಿತ್ಯಶಃ ।
ಜಲಂ ಭಿತ್ತ್ವಾ ಯಥಾ ಪದ್ಮಂ ನರಕಾದುದ್ಧರಾಮ್ಯಹಮ್ ॥ ೨೭ ॥

ಪುಂಡರೀಕಾಕ್ಷ ದೇವೇಶ ನರಸಿಂಹ ತ್ರಿವಿಕ್ರಮ ।
ತ್ವಾಮಹಂ ಶರಣಂ ಪ್ರಾಪ್ತ ಇತಿ ಯಸ್ತಂ ಸಮುದ್ಧರೇ ॥ ೨೮ ॥

ತ್ವಾಂ ಪ್ರಪನ್ನೋಽಸ್ಮಿ ಶರಣಂ ದೇವ ದೇವ ಜನಾರ್ದನ ।
ಇತಿ ಯಃ ಶರಣಂ ಪ್ರಾಪ್ತಸ್ತಂ ಕ್ಲೇಶಾದುದ್ಧರಾಮ್ಯಹಮ್ ॥ ೨೯ ॥

॥ ವ್ಯಾಸ ಉವಾಚ ॥

ಇತ್ಯುದೀರಿತಮಾಕರ್ಣ್ಯ ಹರಿವಾಕ್ಯಂ ಯಮೇನ ಚ ।
ನಾರಕಾಃ ಕೃಷ್ಣ ಕೃಷ್ಣೇತಿ ನಾರಸಿಂಹೇತಿ ಚುಕ್ರುಶುಃ ॥ ೩೦ ॥

---

೨೭. ಹರಿಯಾದ ನನ್ನನ್ನು 'ಹೇ ಕೃಷ್ಣ! ಕೃಷ್ಣ! ಕೃಷ್ಣ!' ಎಂದು ನಿರಂತರದಲ್ಲಿಯೂ ಯಾವನು ಸ್ಮರಿಸುತ್ತಾನೆಯೋ, ನೀರನ್ನು ಭೇದಿಸಿಕೊಂಡು ಕಮಲವು ಮೇಲಕ್ಕೆ ಬರುವಂತೆ ನಾನು ಅವನನ್ನು ನರಕದಿಂದ ಉದ್ಧರಿಸುತ್ತೇನೆ.

೨೮. "ಎಲೈ ಪುಂಡರೀಕಾಕ್ಷನೇ! ಬ್ರಹ್ಮಾದಿಸಕಲ ದೇವತೆಗಳಿಗೂ, ನಿಯಾಮಕನಾದ ಒಡೆಯನೇ! ಮೂರು ಪಾದಗಳಿಂದ ಸ್ವರ್ಗ ಮರ್ತ್ಯ ಪಾತಾಳಗಳನ್ನು ಆಕ್ರಮಿಸಿದ ತ್ರಿವಿಕ್ರಮನೇ! ಹಿರಣ್ಯಕಶಿಪುವನ್ನು ಸಂಹರಿಸಿದ ಶ್ರೀ ನರಸಿಂಹನೇ! ನಾನು ನಿನ್ನನ್ನು ಮರೆಹೊಕ್ಕಿರುತ್ತೇನೆ," ಎಂದು ಯಾವನು ಹೇಳುತ್ತಾನೆಯೋ ಅವನನ್ನು ಉದ್ಧರಿಸುತ್ತೇನೆ.

೨೯. 'ಎಲೈ ದೇವದೇವನಾದ ದುಷ್ಟಜನಸಂಹಾರಕನಾದ ಜನಾರ್ದನ ಸ್ವಾಮಿಯೇ! ನಿನ್ನನ್ನು ಮರೆಹೊಕ್ಕಿರುತ್ತೇನೆ;' ಎಂದು ಯಾವನು ಶರಣಾಗತನಾಗಿರುತ್ತಾನೆಯೋ. ಅವನನ್ನು ನಾನು ಉದ್ಧರಿಸುತ್ತೇನೆ.'

ಶ್ರೀ ವ್ಯಾಸನು ಹೇಳುತ್ತಾನೆ:—

೩೦. 'ಯಮನು ಕಿಂಕರರನ್ನು ಕುರಿತು ಶ್ರೀ ಹರಿವಾಕ್ಯವನ್ನು ಇಂತು ಅನುವಾದಿಸಿ, ಹೇಳಿದುದನ್ನು ನರಕವಾಸಿಗಳೆಲ್ಲರೂ ಕೇಳಿ, 'ಶ್ರೀಕೃಷ್ಣ! ಕೃಷ್ಣ! ಶ್ರೀ ನರಸಿಂಹ!' ಎಂದು ಕೂಗಿಕೊಂಡರು.

ಯಥಾ ಯಥಾ ಹರೇರ್ನಾಮ ಕೀರ್ತಯಂತ್ಯತ್ರ ನಾರಕಾಃ ।
ತಥಾ ತಥಾ ಹರೇರ್ಭಕ್ತಿಮುದ್ವಹಂತೋಽಬ್ರುವನ್ನಿದಮ್ ॥ ೩೧ ॥

॥ ನಾರಕಾ ಊಚುಃ ॥

ಓಂ ನಮೋ ಭಗವತೇ ತಸ್ಮೈ ಕೇಶವಾಯ ಮಹಾತ್ಮನೇ ।
ಯನ್ನಾಮಕೀರ್ತನಾತ್ಸದ್ಯೋ ನರಕಾಗ್ನಿಃ ಪ್ರಶಾಮ್ಯತಿ ॥ ೩೨ ॥

ಭಕ್ತಪ್ರಿಯಾಯ ದೇವಾಯ ಯಜ್ಞಾಯ ಹರಯೇ ನಮಃ ।
ಲೋಕನಾಥಾಯ ಶಾಂತಾಯ ಯಜ್ಞೇಶಾಯಾದಿಮೂರ್ತಯೇ ॥ ೩೩ ॥

---

೩೧. ನರಕವಾಸಿಗಳು ಎಂತೆಂತು ಶ್ರೀ ಹರಿನಾಮವನ್ನು ಉಚ್ಚರಿಸಿದರೋ ಅಂತಂತು ಶ್ರೀ ಹರಿಭಕ್ತಿಯನ್ನು ತಾಳಿ ಇದನ್ನು ಹೇಳಿದರು.'

ನಾರಕರು ಹೇಳುತ್ತಾರೆ :—

೩೨. ' ಯಾವಾತನ ನಾಮಕೀರ್ತನಮಾತ್ರದಿಂದ ತತ್‌ಕ್ಷಣದಲ್ಲಿಯೇ ನರಕಾಗ್ನಿಯು ಆರಿಹೋಗುತ್ತದೆಯೋ, ಆ ಮಹಾತ್ಮನೂ, ಭಗವಂತನೂ ಆದ ಸರ್ವರಕ್ಷಕನಾದುದರಿಂದ ಓಂಕಾರ ವಾಚ್ಯನಾದ ಕೇಶವನಿಗೆ ನಮಸ್ಕಾರವು.

೩೩. ಭಕ್ತಪ್ರಿಯನೂ, ಕ್ರೀಡಾದಿಗುಣಗಳುಳ್ಳವನೂ, ಸೇವೆಯಿಂದ ಪ್ರಾಪ್ಯನೂ ಎಲ್ಲಾ ಜಗತ್ತಿಗೂ ದಿಕ್ಕಾದವನೂ, ಶಾಂತನೂ, ಸಕಲ ಯಜ್ಞಫಲಭೋಕ್ತೃವೂ ಆದುದರಿಂದ ಯಜ್ಞೇಶನೂ, ಲೋಕವು ಹುಟ್ಟುವುದಕ್ಕೆ ಮುಂಚೆ ಇರುವವನಾದುದರಿಂದ ಆದಿಮೂರ್ತಿಯೂ ಆದ ಶ್ರೀಹರಿಗೆರಗುವೆವು.

ಅನಂತಾಯಾಪ್ರಮೇಯಾಯ ನರಸಿಂಹಾಯ ತೇ ನಮಃ ।
ನಾರಾಯಣಾಯ ಗುರವೇ ಶಂಖಚಕ್ರಗದಾಭೃತೇ ॥ ೩೪ ॥

ವೇದಪ್ರಿಯಾಯ ಮಹತೇ ವಿಕ್ರಮಾಯ ನಮೋ ನಮಃ ।
ವಾರಾಹಾಯಾಪ್ರತರ್ಕ್ಯಾಯ ವೇದಾಂಗಾಯ ಮಹೀಭೃತೇ ॥ ೩೫ ॥

ನಮೋ ದ್ಯುತಿಮತೇ ನಿತ್ಯಂ ಬ್ರಾಹ್ಮಣಾಯ ನಮೋ ನಮಃ ।
ವಾಮನಾಯ ಬಹುಜ್ಞಾಯ ವೇದವೇದಾಂಗ ಧಾರಿಣೇ ॥ ೩೬ ॥

ಬಲಿಬಂಧನದತ್ತಾಯ ವೇದಪಾಲಾಯ ತೇ ನಮಃ ।
ವಿಷ್ಣವೇ ಸುರನಾಥಾಯ ವ್ಯಾಪಿನೇ ಪರಮಾತ್ಮನೇ ॥ ೩೭ ॥

---

೩೪. ನಾಶವಿಲ್ಲದುದರಿಂದ ಅನಂತನೂ, ಸಂಪೂರ್ಣವಾಗಿ ಯಾರಿಂದಲೂ ತಿಳಿಯಲಾಗದವನಾದುದರಿಂದ ಅಪ್ರಮೇಯನೂ, ಕ್ಷೀರಸಾಗರಶಾಯಿಯಾದುದರಿಂದ ನಾರಾಯಣನೂ, ಗುಣಪೂರ್ಣನೂ, ಲೋಕಗುರುವೂ, ಶಂಖಚಕ್ರಗದಾಪದ್ಮಧರನೂ, ಶ್ರೀನರಸಿಂಹನೂ ಆದ ನಿನಗೆ ನಮಸ್ಕಾರವು.

೩೫. ವೇದಗಳು ಪ್ರಿಯವಾಗಿ ಉಳ್ಳವನೂ, ಎಲ್ಲಕ್ಕಿಂತಲೂ ಹಿರಿಯವನೂ, ಅಚಿಂತ್ಯಾದ್ಭುತಶಕ್ತಿಯುಳ್ಳವನೂ, ಶ್ರೀ ವರಾಹಸ್ವರೂಪಿಯೂ, ಸಾಕಲ್ಯೇನ ಊಹಿಸಲಾಗದ ಪ್ರಭಾವಶಾಲಿಯೂ, ಸಮಸ್ತವೇದವೇದಾಂಗಗಳಿಂದ ಪ್ರತಿಪಾದ್ಯನೂ, ಭೂಧರನೂ ಆದ ಶ್ರೀಹರಿಗೆ ಮತ್ತೆ ಮತ್ತೆ ಪೊಡವಡುವೆವು.

೩೬. ಅಪ್ರಾಕೃತತೇಜಸ್ವಿಯೂ, ಸಕಲವೇದಗಮ್ಯನೂ, ಗುಣಪರಿಪೂರ್ಣನೂ, ವಾಮನಾವತಾರಿಯೂ, ಸರ್ವಜ್ಞನೂ, ವೇದವೇದಾಂಗಗಳನ್ನು ಪ್ರಳಯಕಾಲದಲ್ಲಿಯೂ ನಿಶ್ವಾಸೋಚ್ಛ್ವಾಸರೂಪದಿಂದ ತಾಳಿದವನೂ, ಆದ ಶ್ರೀ ನರಸಿಂಹನಿಗೆ ನಿತ್ಯವೂ ಅನಂತ ನಮಸ್ಕಾರಗಳನ್ನು ಮಾಡುತ್ತೇವೆ

೩೭. ಬಲಿಚಕ್ರವರ್ತಿಗೆ ಬಂಧನವನ್ನಿತ್ತವನೂ, ವೇದರಕ್ಷಕನೂ ಆದ ನಿನಗೆ ನಮಸ್ಕಾರವು. ದೇವತೆಗಳಿಗೆ ಒಡೆಯನೂ, ಎಲ್ಲೆಡೆಗಳಲ್ಲಿಯೂ ವ್ಯಾಪಿಸಿರುವವನೂ, ಪರಮಾತ್ಮನೂ ಆದ ವಿಷ್ಣುವಿಗೆ ನಮಸ್ಕಾರ ಮಾಡುತ್ತೇವೆ.

ಚತುರ್ಭುಜಾಯ ಶುದ್ಧಾಯ ಶುದ್ಧದ್ರವ್ಯಾಯ ತೇ ನಮಃ ।
ಜಾಮದಗ್ನ್ಯಾಯ ರಾಮಾಯ ದುಷ್ಟಕ್ಷತ್ರಾಂತಕಾರಿಣೇ ॥ ೩೮ ॥

ರಾಮಾಯ ರಾವಣಾಂತಾಯ ನಮಸ್ತುಭ್ಯಂ ಮಹಾತ್ಮನೇ ।
ಅಸ್ಮಾನುದ್ಧರ ಗೋವಿಂದ ಪೂತಿಗಂಧಾನ್ನಮೋಽಸ್ತು ತೇ ॥ ೩೯ ॥

॥ ವ್ಯಾಸ ಉವಾಚ ॥

ಇತಿ ಸಂಕೀರ್ತಿತೇ ವಿಷ್ಣೌ ನಾರಕೈರ್ಭಕ್ತಿಪೂರ್ವಕಮ್ ।
ತದಾ ಸಾ ನಾರಕೀ ಪೀಡಾ ಗತಾ ತೇಷಾಂ ಮಹಾತ್ಮನಾಮ್ ॥ ೪೦ ॥

---

೩೮. ನಾಲ್ಕು ತೋಳುಗಳುಳ್ಳವನೂ, ಪ್ರಾಕೃತಿಗುಣರಹಿತನಾದ ದರಿಂದ ಶುದ್ಧನೂ ಅಪ್ರಾಕೃತ ಅನಂತಕಲ್ಯಾಣಗುಣಪೂರ್ಣನಾಗಿ ಶುದ್ಧ ದ್ರವ್ಯರೂಪನೂ, ಜಮದಗ್ನಿಪುತ್ರನೂ, ದುಷ್ಟಕ್ಷತ್ರಿಯರನ್ನು ಇಪ್ಪತ್ತೊಂದು ಸಲ ಜಯಿಸಿದವನೂ ಆದು ಪರಶುರಾಮನಾದ ನಿನಗೆ ನಮಸ್ಕಾರವು.

೩೯. ರಾವಣಾಂತಕನೂ ಮಹಾತ್ಮನೂ ಆದ ದಾಶರಥಿ ಶ್ರೀರಾಮಚಂದ್ರನಾದ ನಿನಗೆ ನಮಸ್ಕಾರ ಮಾಡುತ್ತೇವೆ. ಎಲೈ ವೇದಪ್ರತಿಪಾದ್ಯನಾದ ಗೋವಿಂದನೇ ! ನಮ್ಮನ್ನು ಕರುಣೆಯಿಂದ ಈ ದುರ್ಗಂಧದ ನರಕದಿಂದ ಪಾರುಮಾಡು; ನಿನಗೆ ನಮಸ್ಕಾರವು,' ಎಂದು ನಾರಕಿಗಳು ಭಗವಂತನನ್ನು ಪ್ರಾರ್ಥಿಸಿದರು.

ವ್ಯಾಸನು ಹೇಳುತ್ತಾನೆ :—

೪೦. ನರಕವಾಸಿಗಳೆಲ್ಲರೂ ಇಂತು ಶ್ರೀ ಮಹಾವಿಷ್ಣುವಿನ ನಾಮಸಂಕೀರ್ತನವನ್ನೆಸಗಲು, ಆಗ ಆ ಮಹಾತ್ಮರ ಆ ನರಕಯಾತನೆಯು ನಾಶವಾಯಿತು.

ಕೃಷ್ಣರೂಪಧರಾಃ ಸರ್ವೇ ದಿವ್ಯವಸ್ತ್ರವಿಭೂಷಿತಾಃ ।
ದಿವ್ಯಗಂಧಾನುಲಿಪ್ತಾಂಗಾ ದಿವ್ಯಾಭರಣ ಭೂಷಿತಾಃ ॥ ೪೧ ॥

ತಾನಾರೋಪ್ಯ ವಿಮಾನೇಷು ದಿವ್ಯೇಷು ಹರಿಪೂರುಷಾಃ ।
ತರ್ಜಯಿತ್ವಾ ಯಮಭಟಾನ್ನೀತಾಸ್ತೇ ಕೇಶವಾಲಯಮ್ ॥ ೪೨ ॥

ನಾರಕೇಷು ಚ ಸರ್ವೇಷು ನೀತೇಷು ಹರಿಪೂರುಷೈಃ ।
ವಿಷ್ಣುಲೋಕಂ ಯಮೋ ಭೂಯೋ ನಮಶ್ಚಕ್ರೇ ತದಾ ಹರಿಮ್ ॥ ೪೩ ॥

ಯನ್ನಾಮಕೀರ್ತನಾದ್ಯಾತಾ ನಾರಕಾ ಕೇಶವಾಲಯಮ್ ।
ತಂ ನಮಾಮಿ ಸದಾ ದೇವಂ ನಾರಸಿಂಹಮಹಂ ಗುರುಮ್ ॥ ೪೪ ॥

---

೪೧. ಅವರೆಲ್ಲರೂ ಶ್ರೀಕೃಷ್ಣನ ಸಾರೂಪ್ಯವನ್ನು ತಾಳಿ, ಶ್ರೇಷ್ಠವಸ್ತ್ರಗಳಿಂದ- -ಲಂಕೃತರಾಗಿ ಉತ್ತಮವಾದ ಗಂಧಗಳಿಂದ ಪೂಸಿದವರಾಗಿ ಉತ್ತಮವಾದ ಒಡವೆ ಗಳನ್ನು ಧರಿಸಿದವರಾದರು.

೪೨. ಶ್ರೀ ವಿಷ್ಣುವಿನ ದೂತರು ಆ ನಾರಕಿಗಳನ್ನೆಲ್ಲಾ ಶ್ರೇಷ್ಠವಿಮಾನಗಳಲ್ಲಿ ಏರಿಸಿಕೊಂಡು, ಯಮಭಟರನ್ನೆಲ್ಲಾ ಬೆದರಿಸಿ, ಶ್ರೀ ವಿಷ್ಣುಲೋಕಕ್ಕೆ ಒಯ್ದರು.

೪೩. ಇಂತು ಹರಿದೂತರು ನಾರಕರನ್ನೆಲ್ಲಾ ವಿಷ್ಣುಲೋಕಕ್ಕೆ ಒಯ್ಯಲು, ಆಗ ಯಮಧರ್ಮನು ಮತ್ತೆ ಶ್ರೀ ಹರಿಗೆ ವಂದನೆಗಳನ್ನೆಸಗಿದನು.

೪೪. ಯಾವ ಮಹಾಮಹಿಮನ ನಾಮಸಂಕೀರ್ತನದಿಂದ ನಾರಕರೆಲ್ಲರೂ ಶ್ರೀ ವಿಷ್ಣುವಿನ ಲೋಕವನ್ನೈದಿದರೋ ಆ ಕ್ರಿಡಾದಿಗುಣವಿಶಿಷ್ಟನೂ, ಲೋಕಶಿಕ್ಷ ಕನೂ ಆದ ಶ್ರೀ ನರಸಿಂಹನಿಗೆ ಯಾವಾಗಲೂ ನಾನು ನಮಸ್ಕರಿಸುತ್ತೇನೆ.

ತಸ್ಯ ವೈ ನರಸಿಂಹಸ್ಯ ವಿಷ್ಣೋರಮಿತತೇಜಸಃ ।
ಪ್ರಣಾಮಂ ಯೇಽಪಿ ಕುರ್ವಂತಿ ತೇಭ್ಯೋಽಪೀಹ ನಮೋ ನಮಃ ॥ ೪೫ ॥

ದೃಷ್ಟ್ವಾ ಪ್ರಶಾಂತಂ ನರಕಾಗ್ನಿಮುಗ್ರಂ
ಯಂತ್ರಾದಿಸರ್ವಂ ವಿಪರೀತಮತ್ರ ।
ಪುನಃ ಸ ಶಿಕ್ಷಾರ್ಥಮಥಾತ್ಮದೂತಾ-
-ನ್ಯಮೋ ಹಿ ವಕ್ತುಂ ಕೃತವಾನ್ಮನಃ ಸ್ವಯಮ್ ॥ ೪೬ ॥

ಇತಿ ಶ್ರೀ ನೃಸಿಂಹಪುರಾಣೇ ಯಮಗೀತಾ ನಾಮ ಅಷ್ಟಮೋಽಧ್ಯಾಯಃ॥

---

೪೫. ವಿಷ್ಣುವೂ, ಅಪಾರವಾದ ತೇಜೋರೂಪನೂ ಆದ ಶ್ರೀ ನರಸಿಂಹನಿಗೆ ಯಾರು ಎರಗುವರೋ, ಆ ಭಗವದ್ಭಕ್ತರಿಗೂ ಇಲ್ಲಿ ಬಹುವಾಗಿ ನಮಸ್ಕರಿಸುತ್ತೇನೆ.

೪೬. ಅನೇಕತೆರನಾದ ಶೂಲಾದಿಯಂತ್ರಗಳಿಂದ ತುಂಬಿದ ಈ ಕ್ರೂರವಾದ ನರಕಾಗ್ನಿಯು ನಂದಿಹೋಗಿ ಶಾಂತವಾಗಿರುವುದನ್ನು ಕಂಡು, ಯಮಧರ್ಮನು ತಾನೇ ತನ್ನ ದೂತರಿಗೆ ವಿವೇಕವನ್ನು ಕಲಿಸಲು ಬುದ್ಧಿವಾದವನ್ನು ಹೇಳಲು ಮತ್ತು ಇಷ್ಟಪಟ್ಟನು, ಎಂದು ವ್ಯಾಸನು ಶುಕನಿಗೆ ಹೇಳಿದನೆಂದು ಸೂತರು ಭಾರದ್ವಾಜನಿಗೆ ಹೇಳಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಯಮಗೀತೆಯೆಂಬ
ಎಂಟನೆಯ ಅಧ್ಯಾಯವು
ಮುಗಿದುದು.

ಎಂಟನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ಯಮದೂತರು ಮರಣಕಾಲವು ತನಗೆ ಹತ್ತಿರಕ್ಕೆ ಬಂದಿತೆಂದು ತಿಳಿದ ಮಾರ್ಕಂಡೇಯನು ತನ್ನ ಪಿತಾಮಹನ ಉಪದೇಶದಂತೆ, ಶ್ರೀಹರಿಯು ಧ್ಯಾನದಲ್ಲಿರುವಾಗ, ಅವನನ್ನು ಎಳೆದು ತರಲು ತೊಡಗಲು, ವಿಷ್ಣುದೂತರು ಅವರನ್ನು ಹೊಡೆದಟ್ಟಿದರು. ಆಗ ಯಮದೂತರ ಕೈ ಸಾಗದಿರಲು ಮೃತ್ಯುವೇ ಹೋಗಲು, ಅವನನ್ನೂ ಹೊಡೆದಟ್ಟಿದರು. ಇಂತು ಮೃತ್ಯು ಮತ್ತು ಯಮಭಟರು ದುಃಖಿತರಾಗಿ ಸ್ವಾಮಿನಿಗೆ ಬಂದು ಯಮಧರ್ಮನಿಗೆ ಬಿನ್ನವಿಸಲು, ಆಗ ಯಮನು ಹರಿಭಕ್ತರಿರುವೆಡೆಗೆ ನೀವು ಹೋಗಕೂಡದೆಂದು ಅವರಿಗೆ ಹೇಳಿ, ಆ ಕಿಂಕರರಿಗೆ ವಿವೇಕಹೇಳಲು, ಮಹಾಭಕ್ತಿಯಿಂದ ಶ್ರೀ ವಿಷ್ಣುಮಹಿಮೆಯನ್ನು ಕೀರ್ತಿಸಿ ಅವರಿಗೂ, ಯಮಭಟರಿಗೂ, ನಾರಕಿಗಳಿಗೂ ಶ್ರೀ ಹರಿಯು ನಾರದರಿಗೆ ಉಪದೇಶಿಸಿದ ನಾಮಕೀರ್ತನ ಪ್ರಭಾವವನ್ನು ವಿವರಿಸ ತೊಡಗಿ, “ ಎಲೈ ನಾರಕಿಗಳೇ ! ನೀವು ವಿಷ್ಣುವನ್ನು ಸೇವಿಸಲಿಲ್ಲವೇ ? ಆತನು ತನ್ನ ನಾಮ ಕೀರ್ತನ ಮಾಡುವವರಿಗೆ ಅಷ್ಟಕ್ಕೇ ತನ್ನ ಲೋಕವನ್ನೀಯುತ್ತಾನೆ, ” ಎನಲು ಆಗ ನಾರಕಿಗಳೆಲ್ಲಾ, ‘ ಕೃಷ್ಣಾ ! ಗೋವಿಂದ ! ’ ಇತ್ಯಾದಿಯಾಗಿ ಶ್ರೀ ಹರಿ ನಾಮವನ್ನು ಉಚ್ಚರಿಸುತ್ತಿರಲು, ಶ್ರೀ ಹರಿದೂತರು ಬೇಗನೆ ಬಂದು, ತಮ್ಮನ್ನು ತಡೆಗಟ್ಟಿದವರನ್ನೆಲ್ಲಾ ಸದೆಬಡಿದು, ಶ್ರೀ ಕೃಷ್ಣನ ಸಾರೂಪ್ಯವನ್ನು ತಾಳಿದ ಆ ನಾರಕಿಗಳನ್ನೆಲ್ಲಾ ದಿವ್ಯವಿಮಾನಗಳಲ್ಲಿ ಕೂಡಿಸಿಕೊಂಡು, ವಿಷ್ಣುಲೋಕಕ್ಕೆ ಒಯ್ಯಲು, ಯಮಧರ್ಮನು ಮತ್ತು ವಿಶೇಷವಾಗಿ ಶ್ರೀ ಹರಿಭಕ್ತಿಯಿಂದ ತನ್ನ ಭಟರಿಗೆ ಬುದ್ಧಿಯನ್ನು ಕಲಿಸಲು ಪುನಃ ತೊಡಗುತ್ತಾನೆ, ” ಎಂದು ಶ್ರೀ ವ್ಯಾಸನು ಶುಕನಿಗೆ ಹೇಳಿದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿದರೆಂದು ಪ್ರತಿಪಾದಿತವಾಗಿದೆ.

ಇಂತು ಎಂಟನೆಯ ಅಧ್ಯಾಯದ ವಿಷಯಸಂಗ್ರಹವು.

॥ ಶ್ರೀಃ ॥

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ನವಮೋಽಧ್ಯಾಯಃ

ಯಮಗೀತಾ (ಅನುವೃತ್ತಾ)

॥ ಶ್ರೀ ವ್ಯಾಸ ಉವಾಚ ॥

ಸ್ವಪುರುಷಮಭಿವೀಕ್ಷ್ಯ ಪಾಶಹಸ್ತಂ
ವದತಿ ಯಮಃ ಕಿಲ ತಸ್ಯ ಕರ್ಣಮೂಲೇ ।
ಪರಿಹರ ಮಧುಸೂದನಪ್ರಪನ್ನಾನ್
ಪ್ರಭುರಹಮನ್ಯನೃಣಾಂ ನ ವೈಷ್ಣವಾನಾಮ್ ॥ ೧ ॥

ಒಂಬತ್ತನೆಯ ಅಧ್ಯಾಯವು.

ಶ್ರೀ ವ್ಯಾಸಮುನಿಯು ಶುಕನಿಗೆ ಇಂತು ಹೇಳುತ್ತಾನೆ :—

೧. ‘ಯಮಧರ್ಮನು ಪಾಶಾಯುಧವನ್ನು ಕೈಯಲ್ಲಿಟ್ಟುಕೊಂಡಿರುವ ತನ್ನ ಭಟರನ್ನು ನೋಡಿ, ಅವರ ಕಿವಿಯಲ್ಲಿ ಗುಟ್ಟಾಗಿ ಇಂತು ಹೇಳುತ್ತಾನೆ. ‘ನೀವು ಮಧುವೆಂಬ ದೈತ್ಯನನ್ನು ಕೊಂದ ಶ್ರೀಹರಿಯನ್ನು ಮರೆಹೊಕ್ಕಿರುವ ಹರಿಭಕ್ತರನ್ನು ಕೈತುಡುಕದೇ ಬಿಟ್ಟುಬಿಡಿರಿ. ನಾನು ವಿಷ್ಣುಭಕ್ತರಲ್ಲದ ಇತರ ಮರ್ತ್ಯರಿಗೆ ಮಾತ್ರ ಒಡೆಯನು.

ಅಹಮಮರಗಣಾರ್ಚಿತೇನ ಧಾತ್ರಾ
ಯಮ ಇತಿ ಲೋಕಹಿತಾಹಿತೇ ನಿಯುಕ್ತಃ ।
ಹರಿಗುರುವಿಮುಖಾನ್ಪ್ರಶಾಸ್ಮಿ ಮರ್ತ್ಯಾನ್
ಹರಿಚರಣಪ್ರಣತಾನ್ನಮಸ್ಕರೋಮಿ ॥ ೨ ॥

ಸುಗತಿಮಭಿಲಷಾಮಿ ವಾಸುದೇವಾ-
-ದಹಮಪಿ ಭಾಗವತೇ ಸ್ಥಿತಾಂತರಾತ್ಮಾ ।
ಮಧುವಧವಶಗೋಽಸ್ಮಿ ನ ಸ್ವತಂತ್ರಃ
ಪ್ರಭವತಿ ಸಂಯಮನೇ ಮಮಾಪಿ ಕೃಷ್ಣಃ ॥ ೩ ॥

ಭಗವತಿ ವಿಮುಖಸ್ಯ ನಾಸ್ತಿ ಸಿದ್ಧಿಃ
ವಿಷಮಮೃತಂ ಭವತೀತಿ ನೇದಮಸ್ತಿ ।
ಖಲು ವರ್ಷಶತಮಪೀಹ ಪಚ್ಯಮಾನಂ
ವ್ರಜತಿ ನ ಕಾಂಚನತಾಮಯಃ ಕದಾಚಿತ್ ॥ ೪ ॥

---

೨. ದೇವತೆಗಳ ತಂಡಗಳಿಂದ ಸೇವೆಗೊಳ್ಳುತ್ತಲಿರುವ ಬ್ರಹ್ಮನು ನನ್ನನ್ನು ಯಮನೆಂದು ಕರೆದು, ಲೋಕಕ್ಕೆ ಅವರವರ ಕರ್ಮಾನುಗುಣವಾಗಿ ಹಿತಾಹಿತವನ್ನು ಉಂಟುಮಾಡಲು ಅಪ್ಪಣೆಮಾಡಿರುತ್ತಾನೆ. ಹರಿಗುರುಗಳಲ್ಲಿ ಭಕ್ತಿಯಿಲ್ಲದ ಮರ್ತ್ಯರನ್ನು ನಾನು ದಂಡಿಸುತ್ತೇನೆ. ಪರಮಾತ್ಮನಾದ ಶ್ರೀಹರಿಯ ಚರಣಕ್ಕೆರಗಿದವರಿಗೆ ನಾನು ನಮಸ್ಕರಿಸುತ್ತೇನೆ.

೩. ನಾನೂ ಭಗವದ್ಭಕ್ತ್ಯಾದಿಗಳಲ್ಲಿ ತೊಡಗಿದ ಮನವುಳ್ಳವನಾಗಿ ಸದ್ಗತಿಯನ್ನಪೇಕ್ಷಿಸುತ್ತೇನೆ; ಶ್ರೀ ಮಧುಸೂದನನಿಗೆ ಅಧೀನನಾಗಿಯೇ ಇರುತ್ತೇನೆ; ಸ್ವತಂತ್ರನಲ್ಲ. ಶ್ರೀಕೃಷ್ಣನು ನನ್ನನ್ನೂ ನಿಯಮಿಸಿ ಬಂಧಿಸುವುದರಲ್ಲಿ ಶಕ್ತನಾದ ಪ್ರಭುವು.

೪. ಅವ್ಯಾಹತಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಹರಿಯಲ್ಲಿ ವಿಮುಖನಾದವನಿಗೆ ತತ್ತ್ವಜ್ಞಾನಾದಿ ಫಲವುಂಟಾಗುವುದಿಲ್ಲ. ಎಂದಿಗೂ ವಿಷವು ಅಮೃತವಾಗುವುದೆಂಬುದು ಇಲ್ಲವು. ಉಕ್ಕು ನೂರಾರು ವರ್ಷಗಳಕಾಲ ಅಗ್ನಿಪುಟವಿಟ್ಟರೂ, ಒಮ್ಮೆಯಾದರೂ ಸುವರ್ಣಭಾವವನ್ನು ಹೊಂದುವುದಿಲ್ಲವು.

ನ ಹಿ ಶಶಕಲುಷಚ್ಛವಿಃ ಕದಾಚಿ-

-ದ್ವಿರಮತಿ ನೋ ರವಿತಾಮುಪೈತಿ ಚಂದ್ರಃ ।

ಭಗವತಿ ಚ ಹರಾವನನ್ಯಚೇತಾ

ಭೃಶಮಲಿನೋಽಪಿ ವಿರಾಜತೇ ಮನುಷ್ಯಃ ॥ ೫ ॥

ವಿಷಕಣಕಣಭಕ್ಷಣಂ ಶಂಕರೋ

ಭಕ್ತಿಬಲೇನ ಶಿಲಕ್ಷ್ಣಾಕ್ಷಯಾದಗಸ್ತ್ಯಃ ।

ಸುರಪತಿರಸುರೈಃ ಸದಾಭಿಯುಕ್ತಃ

ಪಶುಪತಿರಥ ವಿನೀತಭೃತ್ಯವರ್ಗಃ ॥ ೬ ॥

---

೫. ಚಂದ್ರನು ಒಮ್ಮೆಯಾದರೂ ಮೊಲವುಳ್ಳವನಾಗಿ ಕಾಲುಷ್ಯಯುಕ್ತವಾದ ಕಾಂತಿಯುಳ್ಳವನು ಅದರಿಂದ ಬಿಡುಗಡೆಯನ್ನು ಹೊಂದುವುದಿಲ್ಲವಷ್ಟೆ! ಮತ್ತು ಒಮ್ಮೆ ಯಾದರೂ ನೇಸರುತನವನ್ನು ಹೊಂದುವುದಿಲ್ಲವಷ್ಟೆ! ಮಾನವನು ಅತ್ಯಂತ ವಾಗಿ ಕೊಳೆಯುಳ್ಳವನಾದರೂ, (ಪಾಪನಾದರೂ) ಭಗವಂತನಾದ ಶ್ರೀಹರಿಯಲ್ಲಿಯೇ ಮನಸ್ಸಿಟ್ಟು ಧ್ಯಾನಮಾಡುವವನು ವಿಶೇಷವಾಗಿ ಪ್ರಕಾಶಿಸುತ್ತಾನೆ.

೬. ಶ್ರೀ ವಿಷ್ಣುವಿನ ಭಕ್ತಿಸಾಮರ್ಥ್ಯದಿಂದಲೇ ಶಂಕರನು ಕ್ಷೀರಸಮುದ್ರದಲ್ಲಿ ಜನಿಸಿದ ವಿಷಕಣವನ್ನು ತಿಂದವನೂ, ಅಗಸ್ತ್ಯನು ಸಮುದ್ರವನ್ನು ಪಾನಮಾಡಿದ ವನೂ, ದೇವೇಂದ್ರನು ಯಾವಾಗಲೂ ಅಸುರರೊಡನೆ ಹೋರಾಡುವ ಸಾಮರ್ಥ್ಯ ವುಳ್ಳವನೂ, ಪಶುಪತಿಯಾದ ಶಿವನು ವಿನೀತರಾದ ಯಕ್ಷರಾಕ್ಷಸ ಪಿಶಾಚಾದಿ ಭೃತ್ಯ ವರ್ಗಗಳು ಉಳ್ಳವನೂ ಆಗಿರುತ್ತಾರೆ.

ವಿಷಧರ ಕಣಭಕ್ಷ ಶಂಕರೋಕ್ತೀ-
-ರ್ದಶ ಬಲ ಪಂಚಶಿಖಾಕ್ಷಪಾದನಾದಾನ್ ।
ಮಹದಪಿ ಸುವಿಚಾರ್ಯ ಲೋಕತತ್ವಂ
ಭಗವದುಪಾಸ್ತಿಮೃತೇ ನ ಸಿದ್ಧಿರಸ್ತಿ * ॥ ೭ ॥

ಸುರಗುರು ದೃಢಪ್ರಸಾದಕರ್ತಾರೌ
ಹರಿಚರಣೌ ಸ್ಮರತಾಽಪವರ್ಗಹೇತೋಃ ।
ಶುಭಮಿದಮುಪಲಭ್ಯ ಮಾನುಷತ್ವಂ
ಸುಕೃತಶತೇನ ವೃಥೇಂದ್ರಿಯಾರ್ಥಹೇತೋಃ ॥ ೮ ॥

---

೭. ಶೇಷಾವತಾರಿಯಾದ ಪತಂಜಲಿ, ಕಣಾದ ಮತ್ತು ಶಂಕರ, ಇವರ ಯೋಗ, ನ್ಯಾಯ ಮತ್ತು ಅದ್ವೈತದರ್ಶನಗಳು ಇವುಗಳಲ್ಲಿ ಹೇಳಿರುವ ಸಿದ್ಧಾಂತ ತತ್ವಗಳನ್ನೂ, ಬುದ್ಧ, ಸಾಂಖ್ಯಾಚಾರ್ಯನಾದ ಪಂಚಶಿಖ ಮತ್ತು ಅಕ್ಷಪಾದನೆಂಬ ಗೌತಮ ಮುನಿ- ಇವರ ಬೌದ್ಧದರ್ಶನ, ಸಾಂಖ್ಯದರ್ಶನ, ಮತ್ತು ನ್ಯಾಯದರ್ಶನ- ಇವುಗಳಲ್ಲಿ ಹೇಳಿರು ವಸಿದ್ಧಾಂತ ತತ್ವಗಳನ್ನೂ, ವಿಸ್ತಾರವಾದ ಈ ಪ್ರಪಂಚದ ತತ್ವವನ್ನೂ ವಿಚಾರಮಾಡಿದರೂ, ಭಗವಂತನ ಉಪಾಸನೆಯಿಲ್ಲದೇ ಮುಕ್ತಿರೂಪ ವಾದ ಫಲವುಂಟಾಗುವುದಿಲ್ಲವು, ಎಂದಿರುವುದು. (ಎಂದರೆ ಎಲ್ಲಾ ಸಿದ್ಧಾಂತಗಳಲ್ಲೂ ಭಗವಂತನ ಉಪಾಸನೆಯೇ ಮೋಕ್ಷಸಾಧನವೆಂದು ಹೇಳಿದೆ)

೮–೯. ಮೋಕ್ಷದ ಸಲುವಾಗಿ ದೇವತೆಗಳು ಮತ್ತು ಗುರುಗಳು ಇವರ ಅನುಗ್ರಹವನ್ನುಂಟು ಮಾಡುವ ಶ್ರೀ ಹರಿಯ ಪಾದಗಳನ್ನು ಸ್ಮರಣೆ ಮಾಡುವವನು, ಅನೇಕ ಸುಕೃತಗಳನ್ನೆಸಗುವುದರಿಂದ ಈ ಶುಭವಾದ ಮಾನುಷ್ಯವನ್ನು ಪಡೆದು ವ್ಯರ್ಥವಾಗಿ ಚಕ್ಷುರಾದೀಂದ್ರಿಯಗಳ ವಿಷಯ ನಿಮಿತ್ತವಾಗಿ ವಿಲಾಸಮಾಡುತ್ತಾನೆ ;

---

* ಅಸ್ಫುಟವೆಂದಿರುವುದರಿಂದ ಶ್ಲೋಕ ೬ ಮತ್ತು ೭ ಇವು ಪ್ರಕ್ಷಿಪ್ತಗಳೆಂದು ತೋರುತ್ತದೆ.

ರಮಯತಿ ಕುರುತೇ ನ ಮೋಕ್ಷಮಾರ್ಗಃ
ದಹಯತಿ ಚಂದನಮಾಶು ಭಸ್ಮಹೇತೋಃ ।
ಮುಕುಲಿತಕರಕುಡ್ಮಲೈಃ ಸುರೇಂದ್ರೈಃ
ಸತತ ನಮಸ್ಕೃತ ಪಾದಪಂಕಜೋ ಯಃ ॥ ೯ ॥

ಅವಿಹತಗತಯೇ ಸನಾತನಾಯ
ಜಗತಿ ಜನಿನಿವಾರಕೇ ನಮೋಽಗ್ರಜಾಯ ।
ಇತಿ ಘೋಷಯತಿ ಯಮಃ ಸ ದುಂದುಭೀ-
-ನ್ನಮಯತಿ ಸರ್ವದಿಶಾಂ ಸಯುಗ್ಮಕಾಡಿಕಾನ್ ॥ ೧೦ ॥

ಮೋಕ್ಷಮಾರ್ಗವನ್ನುಂಟುಮಾಡಿಕೊಳ್ಳುವುದಿಲ್ಲ ಅವನು ಶ್ರೀಗಂಧವನ್ನು ಭಸ್ಮಕ್ಕಾಗಿ ಬೇಗನೆ ಸುಡತಕ್ಕವನು ಎಂದು ಹೇಳಬಹುದು. ಸುರಶ್ರೇಷ್ಠರಾದ ಬ್ರಹ್ಮಾದಿ ದೇವತೆಗಳೂ ತಮ್ಮ ಕರಕಮಲವನ್ನು ಜೋಡಿಸಿ ಶ್ರೀ ಹರಿಯ ಪಾದಪಂಕಜಗಳಿಗೆ ಎರಗುತ್ತಿರುವರು.

೧೦. ಸದಾ ಏಕರೂಪನಾಗಿರುವ, ಅಡ್ಡಿಯಿಲ್ಲದ ಸಂಚಾರವುಳ್ಳ, ಜಗತ್ತಿನಲ್ಲಿ ಪುನರ್ಜನ್ಮವಿಲ್ಲದಂತೆ ಅನುಗ್ರಹಿಸುವ, ಜಗದಾದ್ಯನಾದ ಶ್ರೀ ನರಸಿಂಹನಿಗೆ ನಮಸ್ಕಾರವು ; ಎಂದು ಯಮಧರ್ಮನು ತನ್ನ ಕೈಮಿನಿಯಲ್ಲಿ ಜೋಡಿ ಕುಡುಹುಗಳಿಂದ ಹೊಡೆಯುತ್ತಲಿದ್ದ ದುಂದುಭಿಗಳನ್ನು ದಿಕ್ಕುಗಳಲ್ಲೆಲ್ಲಾ ಹಬ್ಬುವಂತೆ ಮೊಳಗಿಸುತ್ತಾ, ಮತ್ತೂ ಅಲ್ಲಿರುವವರನ್ನೆಲ್ಲಾ ಶ್ರೀ ಹರಿಭಕ್ತಿಯುಳ್ಳವರನ್ನಾಗಿ ಮಾಡುತ್ತಾನೆ.

ಯಮದೂತಾಶ್ಚ ಬಹವಶ್ಚಿತ್ರಗುಪ್ತಾದ್ಯಾ

ಯಚ್ಛ್ರುತ್ವಾ ಜಹತಿ ವಿಷ್ಣುಭಕ್ತಾನ್ಸುದೂರೇ ।

ಸ್ವಪುರುಷಮಭಿವೀಕ್ಷ್ಯ ಪಾಶಹಸ್ತಂ

ವದತಿ ಯಮ ಕಿಲ ಶೃಣ್ವತಾಂ ಗಣಾನಾಮ್ ॥ ೧೧ ॥

ಪರಿಹರ ಮಧುಸೂದನಪ್ರಪನ್ನಾನ್

ಪ್ರಭುರಹಮನ್ಯನೃಣಾಂ ನ ವೈಷ್ಣನಾಮ್ ।

ಯಮಾಷ್ಟಕಮಿದಂ ಪುಣ್ಯಂ ಪಠತೇ ಯಃ ಶೃಣೋತಿ ವಾ

ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ॥೧೨॥

೧೧-೧೨. ಯಾವ ಈ ದುಂದುಭಿನಾದವನ್ನು ಕೇಳಿ, ಬಹು ಸಂಖ್ಯಾಕರಾದ ಚಿತ್ರಗುಪ್ತನೇ ಮೊದಲಾದ ಯಮದೂತರು ಶ್ರೀ ಮಹಾವಿಷ್ಣುವಿನ ಭಕ್ತರನ್ನು ಬಹು ದೂರದಲ್ಲಿ ಬಿಟ್ಟುಬರುತ್ತಾರೆ. ಯಮಧರ್ಮನು ಪಾಶಹಸ್ತರಾದ ತನ್ನ ಭಟರನ್ನು ಕುರಿತು, ಜನಸಮುದಾಯವೆಲ್ಲವೂ ಕೇಳುವಂತೆ ಇಂತು ಹೇಳುತ್ತಾನೆ. ಶ್ರೀ ಮಧು ಸೂದನನಾದ ಹರಿಯನ್ನು ಮರೆಹೊಕ್ಕ ವಿಷ್ಣುಭಕ್ತರನ್ನು ಬಿಟ್ಟುಬಿಡಿರಿ. ನಾನು ವಿಷ್ಣುಭಕ್ತರಲ್ಲದ ಇತರ ನರರಿಗೆ ಮಾತ್ರ ಒಡೆಯನು ; ವೈಷ್ಣವರಿಗಲ್ಲವು. ನಾನು ಹೇಳಿರುವ ಪುಣ್ಯಪ್ರದವಾದ ಈ ಅಷ್ಟಕವನ್ನು ಯಾವನು ಪಠಿಸುವನೋ ಅಥವಾ ಕೇಳುವನೋ, ಅವನು ಸರ್ವಪಾಪಗಳಿಂದಲೂ ಬಿಡುಗಡೆಹೊಂದಿ ವಿಷ್ಣುಲೋಕಕ್ಕೆ ಹೋಗುತ್ತಾನೆ.

ಇತೀದಮುಕ್ತಂ ಯಮವಾಕ್ಯಮುತ್ತಮಂ
ಮಯಾಽಧುನಾ ತೇ ಹರಿಭಕ್ತಿವರ್ಧನಮ್ ।
ಪುನಃ ಪ್ರವಕ್ಷ್ಯಾಮಿ ಪುರಾತನೀಂ ಕಥಾಂ
ಭೃಗೋಸ್ತು ಪೌತ್ರೇಣ ಚ ಯಾ ಪುರಾ ಕೃತಾ ॥ ೧೩ ॥

ಇತಿ ಶ್ರೀ ನರಸಿಂಹಪುರಾಣೇ ಯಮಗೀತಾ ನಾಮ ನವಮೋಽಧ್ಯಾಯಃ

---

೧೩. ಇಂತು ಶ್ರೀ ಹರಿಯ ಭಕ್ತಿಯನ್ನು ಅಭಿವೃದ್ಧಿಮಾಡುವ, ಉತ್ತಮವಾದ ಈ ಯಮವಾಕ್ಯವನ್ನು ನಾನು ನಿನಗೆ ಹೇಳಿದೆನು. ಭೃಗುವಿನ ಪೌತ್ರನಾದ ಮಾರ್ಕಂಡೇಯನು ಪೂರ್ವದಲ್ಲಿಸಗಿದ ಹಳತಾದ ಕಥೆಯನ್ನು ಮತ್ತೆ ಹೇಳುವೆನು," ಎಂದು ವ್ಯಾಸಮುನಿಯು ಶುಕಮುನಿಗೆ ಹೇಳಿದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಯಮಗೀತೆಯೆಂಬ
ಒಂಬತ್ತನೆಯ ಅಧ್ಯಾಯವು ಮುಗಿದುದು.

ಒಂಬತ್ತನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ ಯಮಧರ್ಮರಾಯನು ಪಾಶಹಸ್ತರಾದ ತನ್ನ ಭಟರಿಗೆ ಗುಟ್ಟಾಗಿ, "ನೀವು ಭಕ್ತರನ್ನು ಬಿಟ್ಟುಬಿಡಿ, ನಾನು ವಿಷ್ಣುಭಕ್ತರಿಗೆ ಒಡೆಯನಲ್ಲ. ವಿಷ್ಣುಭಕ್ತರಲ್ಲದ ಇತರರಿಗೆ ಮಾತ್ರ ಒಡೆಯನು; ಹರಿಗುರುವಿಮುಖರಾದ ಪಾಪಾತ್ಮರನ್ನು ನಾನು ದಂಡಿಸುತ್ತೇನೆ. ಹರಿಚರಣಪ್ರಣತರಿಗೆ ನಮಸ್ಕರಿಸುತ್ತೇನೆ. ನಾನೂ ಶ್ರೀಮನ್ನಾರಾಯಣನಿಂದ ಸದ್ಗತಿಯನ್ನು ಅಪೇಕ್ಷಿಸಿ, ಅವನಲ್ಲಿ ಭಕ್ತಿಯನ್ನು ಮಾಡುತ್ತೇನೆ. ಮತ್ತು ಆತನ ಅಧೀನನು; ಸ್ವತಂತ್ರನಲ್ಲ. ಎಂದಿಗೂ ಪಾಪಾತ್ಮರು ಶುದ್ಧರಾಗುವುದಿಲ್ಲ. ಉಕ್ಕು ಎಷ್ಟು ಪುಟವಿಕ್ಕಿದರೆ ತಾನೇ ಮಿಸುನಿಯಾಗುವುದು? (ಎಂದಿಗೂ ಆಗುವುದಿಲ್ಲ) ಹರಿಭಕ್ತಿಯೇ ಮೋಕ್ಷಸಾಧನವೆಂದು ಯೋಗಾದಿ ಸಕಲ ದಾರ್ಶನಿಕರ ಸಿದ್ಧಾಂತಗಳ ವಿಮರ್ಶೆಯಿಂದಲೂ, ಲೋಕತತ್ವಪರೀಕ್ಷೆಯಿಂದಲೂ, ತಿಳಿದುಬರುತ್ತದೆ. ಇತ್ಯಾದಿಯಾಗಿ ಹೇಳಿದುದನ್ನು ಶ್ರೀ ವ್ಯಾಸಮುನಿಯು ಶುಕಮುನಿಗೆ ಹೇಳಿದನು. ಅದನ್ನೇ ಸೂತರು ಭಾರದ್ವಾಜನಿಗೆ ನಿರೂಪಿಸಿರುತ್ತಾರೆ.

ಇಂತು ಒಂಬತ್ತನೆಯ ಅಧ್ಯಾಯದ ವಿಷಯಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ದಶಮೋಽಧ್ಯಾಯಃ

ಮಾರ್ಕಂಡೇಯ ಚರಿತಮ್.

॥ ಶ್ರೀ ವ್ಯಾಸ ಉವಾಚ ॥

ಜಿತ್ವೈವಮಾತ್ಮನೋ ಮೃತ್ಯುಂ ತಪಸಾ ಶಂಸಿತವ್ರತಃ ।
ಸ ಜಗಾಮ ಪಿತುರ್ಗೇಹಂ ಮಾರ್ಕಂಡೇಯೋ ಮಹಾಮುನಿಃ ॥ ೧ ॥

ಕೃತ್ವಾ ವಿವಾಹಂ ಧರ್ಮೇಣ ಭೃಗೋರ್ವಾಕ್ಯವಿಶೇಷತಃ ।
ಸ ವೇದಶಿರಸಂ ಪುತ್ರಮುತ್ಪಾದ್ಯ ಚ ವಿಧಾನತಃ ॥ ೨ ॥

ಹತ್ತನೆಯ ಅಧ್ಯಾಯವು

ಮಾರ್ಕಂಡೇಯ ಚರಿತೆಯು

ಶ್ರೀ ವ್ಯಾಸಮುನಿಯು ಶುಕಮುನಿಗೆ ಇಂತು ನಿರೂಪಿಸುತ್ತಾನೆ :—

೧. ' ಸ್ತುತ್ಯವ್ರತನಾದ, ಮಹಾಮುನಿಯಾದ, ಆ ಮಾರ್ಕಂಡೇಯಮುನಿಯು ತಪಸ್ಸಿನಿಂದ ತನ್ನ ಮೃತ್ಯುವನ್ನು ಜಯಿಸಿ, ತಂದೆಯ ಮನೆಗೆ ಹೋದನು

೨-೪. ತನ್ನ ಪಿತಾಮಹನಾದ ಭೃಗುವಿನ ಮಾತಿನಂತೆ ಧರ್ಮದಿಂದ ಮದುವೆಯನ್ನು ಮಾಡಿಕೊಂಡು, ವೇದಶಿರಸನೆಂಬ ಮಗನನ್ನು ಪಡೆದು, ವೇದೋಕ್ತ

ಇಷ್ಟ್ವಾ ಯಜ್ಞೈಸ್ತು ದೇವೇಶಂ ನಾರಾಯಣಮನಾಮಯಮ್ ।
ಶ್ರಾದ್ಧೇನ ತು ಪಿತೄನಿಷ್ಟ್ವಾ ಅನ್ನದಾನೇನ ಚಾತಿಥೀನ್ ॥ ೩ ॥

ಪ್ರಯಾಗಮಾಸಾದ್ಯ ಪುನಃ ಸ್ನಾತ್ವಾ ತೀರ್ಥೇ ಗರೀಯಸಿ ।
ಮಾರ್ಕಂಡೇಯೋ ಮಹಾತೇಜಾಸ್ತೇಪೇ ವಟತಲೇ ತಪಃ ॥ ೪ ॥

ಯಸ್ಯ ಪ್ರಸಾದೇನ ಪುರಾ ಜಿತವಾನ್ಮೃತ್ಯುಮಾತ್ಮನಃ ।
ತಂ ದೇವಂ ದ್ರಷ್ಟುಮಿಚ್ಛನ್ಯಃ ಸ ತೇಪೇ ಪರಮಂ ತಪಃ ॥ ೫ ॥

ವಾಯುಭಕ್ಷಶ್ಚಿರಂ ಕಾಲಂ ತಪಸಾ ಶೋಷಯಂಸ್ತನುಮ್ ।
ಏಕದಾ ತು ಮಹಾತೇಜಾ ಮಾರ್ಕಂಡೇಯೋ ಮಹಾಮತಿಃ ॥ ೬ ॥

ಆರಾಧ್ಯ ಮಾಧವಂ ದೇವಂ ಗಂಧಪುಷ್ಪಾದಿಭಿಃ ಶುಭೈಃ ।
ಅಗ್ರೇಽವ್ಯಗ್ರಮನಾಃ ಸ್ಥಿತ್ವಾ ಹೃದಯೇ ತಮನುಸ್ಮರನ್ ॥ ೭ ॥

ಶಂಖಚಕ್ರಗದಾಪಾಣಿಂ ತುಷ್ಟಾವ ಗರುಡಧ್ವಜಮ್ ।

ಮಾರ್ಗದಿಂದ ಯಜ್ಞಗಳಿಂದ ರೋಗಾದ್ಯುಪದ್ರವರಹಿತನಾದ, ದೇವೋತ್ತಮನಾದ, ನಾರಾಯಣನನ್ನು ಪೂಜಿಸಿ, ಶ್ರಾದ್ಧಕರ್ಮಗಳಿಂದ ಪಿತೃಗಳನ್ನೂ, ಅನ್ನದಾನದಿಂದ ಅತಿಥಿಗಳನ್ನೂ ಸೇವಿಸಿ, ಪುನಃ ಪ್ರಯಾಗಕ್ಷೇತ್ರಕ್ಕೆ ಬಂದು, ಪವಿತ್ರವಾದ ತೀರ್ಥದಲ್ಲಿ ಮಿಂದು, ಮಹಾತೇಜಸ್ವಿಯಾದ ಮಾರ್ಕಂಡೇಯಮುನಿಯು ಆಲದಮರದ ತಡಿಯಲ್ಲಿ ಕುಳಿತು ತಪವನ್ನು ಅನುಷ್ಠಿಸಿದನು.

೫. ಯಾವ ದೇವನ ಅನುಗ್ರಹದಿಂದ ಹಿಂದೆ ತನ್ನ ಮೃತ್ಯುವನ್ನು ಜಯಿಸಿದನೋ, ಆ ದೇವನನ್ನು ನೋಡಬಯಸಿ, ಅವನು ಶ್ರೇಷ್ಠವಾದ ತಪವನ್ನಾಚರಿಸಿದನು.

೬-೭. ಮಹಾತೇಜಸ್ವಿಯೂ, ಮಹಾಮತಿಯೂ ಆದ ಮಾರ್ಕಂಡೇಯನು ಬಹುಕಾಲ ವಾಯ್ವಾಹಾರಿಯಾಗಿ, ತನ್ನ ಒಡಲನ್ನು ತಪಸ್ಸಿನಿಂದ ಒಣಗಿಸಿ, ಒಮ್ಮೆ ಕ್ರೀಡಾದಿಗುಣವಿಶಿಷ್ಟನಾದ ಮಾಧವನನ್ನು ಮಂಗಳಕರಗಳಾದ ಗಂಧ, ಪುಷ್ಪಾದಿಗಳಿಂದರ್ಚಿಸಿ, ಮುಂದೆ ಏಕಾಗ್ರಮನಸ್ಸುಳ್ಳವನಾಗಿ ನಿಂತು, ಹೃದಯದಲ್ಲಿ ಆ ಭಗವಂತನನ್ನೇ ಚಿಂತಿಸುತ್ತಾ ಶಂಖಚಕ್ರಗದಾಪಾಣಿಯಾದ ಗರುಡಧ್ವಜನಾದ ಶ್ರೀಹರಿಯನ್ನು ಮೆಚ್ಚಿಸಿದನು.

॥ ಮಾರ್ಕಂಡೇಯ ಉವಾಚ ॥

ನರಂ ನೃಸಿಂಹಂ ನರನಾಥಮಚ್ಯುತಂ
ಪ್ರಲಂಬಬಾಹುಂ ಕಮಲಾಯತೇಕ್ಷಣಮ್ ।
ಕ್ಷಿತೀಶ್ವರೈರರ್ಚಿತಪಾದಪಂಕಜಂ
ನಮಾಮಿ ವಿಷ್ಣುಂ ಪುರುಷಂ ಪುರಾತನಮ್ ॥ ೧ ॥

ಜಗತ್ಪತಿಂ ಕ್ಷೀರಸಮುದ್ರಮಂದಿರಂ
ತಂ ಶಾರ್ಙ್ಗಪಾಣಿಂ ಮುನಿವೃಂದವಂದಿತಮ್ ।
ಶ್ರಿಯಃ ಪತಿಂ ಶ್ರೀಧರಮೀಶಮೀಶ್ವರಂ
ನಮಾಮಿ ಗೋವಿಂದಮನಂತವರ್ಚಸಮ್ ॥ ೨ ॥

ಮಾರ್ಕಂಡೇಯನು ಇಂತು ಹೇಳುತ್ತಾನೆ :—

೧. ಕ್ಷಯರಹಿತನಾದುದರಿಂದ ನರನಾದ, ನೃಸಿಂಹನಾಗಿ ಅಖಂಡನಾಗಿರುವ ಅರ್ಜುನನೊಡೆಯನಾದ, ನಾಶರಹಿತನಾದ, ಉದ್ದವಾದ ತೋಳ್ಗಳುಳ್ಳ, ತಾವರೆಯಂತೆ ವಿಸ್ತಾರಗಳಾದ ಕಣ್ಗಳುಳ್ಳ ನರೋತ್ತಮರಾದ ಚಕ್ರವರ್ತಿಗಳಿಂದ ಸೇವಿತಗಳಾದ ತಾವರೆಯಂತಿರುವ ಪಾದಗಳುಳ್ಳ, ಪುರಾತನನಾದ, ಪೂರ್ಣಸುಖನಾದ ಶ್ರೀ ಮಹಾ ವಿಷ್ಣುವಿಗೆ ವಂದಿಸುತ್ತೇನೆ.

೨. ಹದಿನಾಲ್ಕು ಲೋಕಗಳಿಗೆ ಒಡೆಯನೂ, ಪಾಲ್ಗಡಲೇ ಮನೆಯಾಗಿರುವವನೂ, ಶಾರ್ಙ್ಗವೆಂಬ ಬಿಲ್ಲನ್ನು ಕೈಯಲ್ಲಿ ಹಿಡಿದಿರುವವನೂ, ಜ್ಞಾನಿಗಳ ತಂಡದಿಂದ ವಂದಿತನೂ, ಲಕ್ಷ್ಮೀಪತಿಯೂ, ಲಕ್ಷ್ಮಿಯನ್ನು ವಕ್ಷಸ್ಥಳದಲ್ಲಿ ಧರಿಸಿದವನೂ, ಸರ್ವ ನಿಯಾಮಕನೂ, ಅಣಿಮಾದ್ಯಷ್ಟೈಶ್ವರ್ಯಪೂರ್ಣನೂ, ಅಪರಿಮಿತತೇಜಸ್ವಿಯೂ, ಸಕಲವೇದಗಳಿಂದ ಪ್ರತಿಪಾದ್ಯನೂ, ಜ್ಞೇಯನೂ ಆದ ಗೋವಿಂದನನ್ನು ವಂದಿಸುತ್ತೇನೆ.

ಅಜಂ ವರೇಣ್ಯಂ ಜನದುಃಖನಾಶನಂ
ಗುರುಂ ಪುರಾಣಂ ಪುರುಷೋತ್ತಮಂ ಪ್ರಭುಮ್ ।
ಸಹಸ್ರಸೂರ್ಯದ್ಯುತಿಮಂತಮಚ್ಯುತಂ
ನಮಾಮಿ ಭಕ್ತ್ಯಾ ಹರಿಮಾದ್ಯಮಾಧವಂ ॥ ೧೦ ॥

ಪುರಸ್ಕೃತಂ ಪುಣ್ಯವತಾಂ ಪರಾಂ ಗತಿಂ
ಕ್ಷಿತೀಶ್ವರಂ ಲೋಕಪತಿಂ ಪ್ರಜಾಪತಿಮ್ ।
ಪರಂಪರಾಣಾಮಪಿ ಕಾರಣಂ ಹರಿಂ
ನಮಾಮಿ ಲೋಕತ್ರಯಕರ್ಮಸಾಕ್ಷಿಣಮ್ ॥ ೧೧ ॥

---

೧೦. ಉತ್ಪತ್ತಿರಹಿತನೂ, ಸರ್ವೋತ್ತಮನೂ, ಭಕ್ತಜನರ ಕಷ್ಟಗಳನ್ನು ನಿವಾರಿಸುವವನೂ, ಲೋಕಗುರುವೂ, ಸಕಲರ ಶರೀರಗಳಲ್ಲಿ ಅಂತರ್ಯಾಮಿಯಾಗಿರುವವನೂ, ಕ್ಷರಾಕ್ಷರಗಳಿಂದ ಉತ್ತಮನಾದುದರಿಂದ ಪುರುಷೋತ್ತಮನೂ, ಸರ್ವಶಕ್ತನೂ, ಸಾವಿರ ಸೂರ್ಯರಷ್ಟು ಪ್ರಕಾಶವುಳ್ಳವನೂ, ಅಚ್ಯುತನೂ, ಸಕಲ ಪ್ರಪಂಚಕ್ಕೂ ಮೊದಲಿಗನೂ, ಲಕ್ಷ್ಮೀರಮಣನೂ ಆದ ಶ್ರೀಹರಿಯನ್ನು ಮಹಾತ್ಮ್ಯ ಜ್ಞಾನಪೂರ್ವಕ ಸುದೃಢಸ್ನೇಹಾತ್ಮಕವಾದ ಭಕ್ತಿಯಿಂದ ನಾನು ವಂದಿಸುತ್ತೇನೆ.

೧೧. ಸರ್ವರಿಂದಲೂ ಸೇವೆಗೊಳ್ಳುವವನೂ, ಪುಣ್ಯವಂತರಿಗೆ ಪರಮ ಪ್ರಾಪ್ಯನೂ, ಸಕಲಭೂಮಂಡಲಕ್ಕೆ ಒಡೆಯನೂ, ಸಕಲಲೋಕಗಳಿಗೆ ನಿಯಾಮಕನೂ, ಸಮಸ್ತಪ್ರಜೆಗಳಿಗೆ ಸ್ವಾಮಿಯೂ, ಸಂಸಾರಪರಂಪರೆಗಳಿಗೆ ಕಾರಣನೂ, ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕಗಳ ಕರ್ಮವನ್ನೂ ಸಾಕ್ಷಾತ್ತಾಗಿ ನೋಡುವವನೂ ಆದ ಶ್ರೀಹರಿಗೆ ಎರಗುತ್ತೇನೆ.

ಭೋಗೇ ತ್ವನಂತಸ್ಯ ಪಯೋದಧೌ ಸುರಃ
ಪುರಾ ಹಿ ಶೇತೇ ಭಗವಾನನಾದಿಕೃತ್ ।
ಕ್ಷೀರೋದವೀಚೀಕಣಿಕಾಂಬುನೋತ್ಕ್ಷಿತಂ
ತಂ ಶ್ರೀನಿವಾಸಂ ಪ್ರಣತೋಽಸ್ಮಿ ಕೇಶವಮ್ ॥ ೧೨ ॥

ಯೋ ನಾರಸಿಂಹಂ ವಪುರಾಸ್ಥಿತೋ ಮಹಾನ್
ಸುರೋ ಮುರಾರಿರ್ಮಧುಕೈಟಭಾಂತಕೃತ್ ।
ಸಮಸ್ತಲೋಕಾರ್ತಿಹರಂ ಹಿರಣ್ಯಕಂ
ನಮಾಮಿ ವಿಷ್ಣುಂ ಸತತಂ ನಮಾಮಿ ತಮ್ ॥ ೧೩ ॥

---

೧೨. ಜಗತ್ಸೃಷ್ಟಿಗೆ ಮುಂಚೆ, ಅವ್ಯಾಹತಷಡ್ಗುಣೈಶ್ವರ್ಯಪೂರ್ಣನೂ, ಉತ್ಪತ್ತಿರಹಿತನೂ, ಸ್ವರಮಣನೂ, ಆದ ಯಾವ ದೇವನು ಕ್ಷೀರಸಮುದ್ರದಲ್ಲಿ ಆದಿಶೇಷನ ಒಡಲೆಂಬ ಶಯನದಲ್ಲಿ ಆ ಮುನ್ನೀರ ತೆರೆಗಳ ಸೀರ್ಪನಿಗಳಿಂದ ಸಿಂಪಡಿಸಿಕೊಂಡು ಯೋಗನಿದ್ರಾಸಕ್ತನಾಗಿರುತ್ತಾನೆಯೋ, ಆ ಶ್ರೀನಿವಾಸನಾದ ಬ್ರಹ್ಮರುದ್ರಪ್ರವರ್ತಕನಾದ ಕೇಶವಸ್ವಾಮಿಗೆ ಎರಗುವವನಾಗುತ್ತೇನೆ.

೧೩. ಯಾವಾತನು ಹಿರಿದಾದ ನರಸಿಂಹವೆಂಬ ಅಖಂಡವಾದ ಒಡಲನ್ನು ತಾಳಿದನೋ, ತನ್ನಲ್ಲಿಯೇ ವಿಹರಿಸುವನೋ, ಮುರಾಸುರನನ್ನು ಕೊಂದವನೋ, ಮಧುಕೈಟಭರ ನಾಶವನ್ನೆಸಗಿದವನೋ, ಅಂತಹ ಸಕಲ ಜಗತ್ತಿನ ದುಃಖವನ್ನು ಪರಿಹರಿಸುವನೂ, ಹಿರಣ್ಯವರ್ಣನೂ ಆದ ಆ ವಿಷ್ಣುವನ್ನು ಯಾವಾಗಲೂ ವಂದಿಸುತ್ತೇನೆ.

ಅನಂತಮವ್ಯಕ್ತಮತೀಂದ್ರಿಯಂ ವಿಭುಂ
ಸ್ವೇ ಸ್ವೇ ಹಿ ರೂಪೇ ಸ್ವಯಮೇವ ಸಂಸ್ಥಿತಮ್ ।
ಯೋಗೇಶ್ವರೈರೇವ ಸದಾ ನಮಸ್ಕೃತಂ
ನಮಾಮಿ ಭಕ್ತ್ಯಾ ಸತತಂ ಜನಾರ್ದನಮ್ ॥ ೧೪ ॥

ಆನಂದ ಮೇಕಂ ವಿರಜಂ ವಿದಾತ್ಮಕಂ
ವೃಂದಾಲಯಂ ಯೋಗಿಭಿರೇವ ಪೂಜಿತಮ್ ।
ಅಣೋರಣೀಯಾಂಸಮವೃದ್ಧಿಮಕ್ಷಯಂ
ನಮಾಮಿ ಭಕ್ತಪ್ರಿಯಮೀಶ್ವರಂ ಹರಿಮ್ ॥ ೧೫ ॥

---

೧೪. ಕೊನೆಯಿಲ್ಲದವನೂ, ಸಾಕಲ್ಯೇನ ತನ್ನ ರೂಪವನ್ನು ಯಾರಿಗೂ ಸ್ಪಷ್ಟಪಡಿಸದವನೂ, ಪ್ರಾಕೃತೇಂದ್ರಿಯಗಳಿಂದ ಕಾಣಲಾಗದವನೂ, ಸರ್ವತ್ರ ವ್ಯಾಪ್ತನೂ. ತನ್ನ ತನ್ನ ರಾಮಕೃಷ್ಣಾದ್ಯವತಾರಗಳಲ್ಲಿ ತಾನೇ ಪೂರ್ಣವಾದ ಸ್ವರೂಪಾಂಶದಿಂದಿರುವವನೂ, ಶ್ರವಣಾದಿಯೋಗಗಳು, ಅಣಿಮಾದ್ಯಷ್ಟೈಶ್ವರ್ಯಗಳು, ಇವು ಪೂರ್ಣವಾಗಿರುವುದರಿಂದಲೇ ಯಾವಾಗಲೂ ವಂದಿತನಾದ, ದುಷ್ಟಜನ ಸಂಹಾರಕನಾದ ಶ್ರೀ ಜನಾರ್ದನಸ್ವಾಮಿಯನ್ನು ಭಕ್ತಿಯಿಂದ ಸರ್ವದಾ ನಾನು ನಮಸ್ಕರಿಸುತ್ತೇನೆ.

೧೫. ಸ್ವಯಂ ಆನಂದಸ್ವರೂಪನೂ, ತನಗೆ ಸರಿಯಾದ ಮತ್ತೊಂದು ವಸ್ತು ವಿಲ್ಲದವನೂ, ರಾಗಾದಿದೋಷಶೂನ್ಯನೂ, ಪೂರ್ಣಜ್ಞಾನಸ್ವರೂಪನೂ, ಗೋಕುಲವೇ (ಯಾವಾಗಲೂ) ವಾಸಸ್ಥಾನವಾಗಿಯುಳ್ಳವನೂ, ಯೋಗಿಗಳಿಂದಲೇ ಸೇವಿತನೂ, ಸಣ್ಣವಸ್ತುವಾದ ಅಣುಗಿಂತಲೂ ಅಣುವಾಗಿರುವವನೂ, ವೃದ್ಧಿಯಿಲ್ಲದವನೂ, ಕ್ಷಯವಿಲ್ಲದವನೂ, (ಎಂದರೆ ಸದಾ ಪೂರ್ಣನಾಗಿ ಏಕರೂಪನಾಗಿರುವವನೂ,) ತನ್ನನ್ನು ಸೇವಿಸುವ ಭಕ್ತರಲ್ಲಿ ಪ್ರೀತಿಯುಳ್ಳವನೂ, ಸರ್ವನಿಯಾಮಕನೂ ಆದ ಶ್ರೀ ಹರಿಗೆ ನಮಸ್ಕರಿಸುತ್ತೇನೆ.

॥ ಶ್ರೀ ವ್ಯಾಸ ಉವಾಚ ॥

ಇತಿ ಸ್ತೋತ್ರಾವಸಾನೇ ತಂ ವಾಗುವಾಚಾಶರೀರಿಣೀ ।
ಮಾರ್ಕಂಡೇಯಂ ಮಹಾಭಾಗಂ ತೀರ್ಥಂ ನು ತಪಸಿ ಸ್ಥಿತಮ್ ॥ ೧೬ ॥

ಕಿಮರ್ಥಂ ಕ್ಲಿಶ್ಯತೇ ಬ್ರಹ್ಮಂಸ್ತ್ವಯಾ ಯೋ ನೈವ ದೃಶ್ಯತೇ ।
ಮಾಧವಃ ಸರ್ವತೀರ್ಥೇಷು ಯಾವನ್ನ ಸ್ನಾನಮಾಚರೇಃ ॥ ೧೭ ॥

ಇತ್ಯುಕ್ತಃ ಸರ್ವತೀರ್ಥೇಷು ತಮಾನೀಯ ಮಹಾಮತಿಃ ।
ಕೃತ್ವಾ ಕೃತ್ವಾ ಸರ್ವತೀರ್ಥೇ ಸ್ನಾನಂ ಚೈವ ಕೃತಂ ಭವೇತ್ ॥ ೧೮ ॥

ತದ್ವದ ತ್ವಂ ಮಮ ಪ್ರೀತ್ಯಾ ಯೋಽಸಿ ಸೋಽಸಿ ನಮೋಽಸ್ತು ತೇ ।

ಶ್ರೀ ವೇದವ್ಯಾಸಮುನಿಯು ಹೇಳುತ್ತಾನೆ:—

೧೬. ಇಂತು ಶ್ರೀಹರಿಯನ್ನು ಕೊಂಡಾಡಿದುದು ಪೂರೈಸಲು ಪುಣ್ಯಶಾಲಿಯೂ, ಪೂಜ್ಯನೂ, ತಪದಲ್ಲಿ ಸಂದವನೂ, ಆದ ಆ ಮಾರ್ಕಂಡೇಯಮುನಿಯನ್ನು ಕುರಿತು ಅಶರೀರವಾದ ನುಡಿಯು ಇಂತು ಹೇಳಿತು.

೧೭. 'ಎಲೈ ಬ್ರಾಹ್ಮಣನೇ! ನೀನು ಸಕಲತೀರ್ಥಗಳಲ್ಲಿ ಎಲ್ಲಿಯುವರಿಗೆ ಸ್ನಾನಮಾಡಿದವನಾಗುವುದಿಲ್ಲವೋ, ಅಲ್ಲಿಯುವರೆಗೆ ಯಾವ ಮಾಧವನು ನಿನಗೆ ಕಾಣಿಸುವುದಿಲ್ಲವೋ, ಅದಕ್ಕಾಗಿ ಏಕೆ ನೀನು ಕಷ್ಟಪಡುತ್ತೀಯೆ ?

೧೮. ಇಂತು ಅಶರೀರವಾಣಿಯು ನುಡಿಯಲು, ಅದನ್ನು ಕುರಿತು ಮಹಾಮತಿಯಾದ ಮಾರ್ಕಂಡೇಯನು ಸರ್ವ ತೀರ್ಥಗಳಲ್ಲಿಯೂ ಸನ್ನಿಹಿತನಾಗಿರುವ ಆ ಭಗವಂತನನ್ನು ಚಿತ್ತದಲ್ಲಿ ಧ್ಯಾನಮಾಡುತ್ತಾ ಯಾವ ಕರ್ಮವನ್ನೆಸಗುವುದರಿಂದ ಎಲ್ಲಾ ತೀರ್ಥಗಳಲ್ಲಿಯೂ ಸ್ನಾನವನ್ನು ಬಹುವಾರ ಮಾಡಿದಂತಾಗುವುದೋ, ಅದನ್ನು ನೀನು ನನ್ನಲ್ಲಿ ಪ್ರೀತಿಯಿಂದ ಹೇಳು; ನೀನು ಯಾರಾದರೂ ಆಗಿರು. ನಿನಗೆ ನಮಸ್ಕಾರವು.'

॥ ವಾಗುವಾಚ ॥

ಸ್ತೋತ್ರೇಣಾನೇನ ವಿಪ್ರೇಂದ್ರ ಸ್ತುಹಿ ನಾರಾಯಣಂ ಪ್ರಭುಮ್ ॥ ೧೯ ॥

ನಾನ್ಯಥಾ ಸರ್ವತೀರ್ಥಾನಾಂ ಫಲಂ ಪ್ರಾಪ್ಸ್ಯಸಿ ಸುವ್ರತ ।
ಕೃತ್ವಾ ಸ್ನಾನಂ ಚ ವಿಧಿವತ್ಸ ತತ್ರ ತಪಸಿ ಸ್ಥಿತಃ ।
ಆರಾಧಯಾಮಾಸ ಹರಿಂ ದ್ರಷ್ಟುಮಿಚ್ಛನ್ಮಹಾಮನಾಃ ॥ ೨೦ ॥

ಪುರುಷೋತ್ತಮಾಖ್ಯಂ ದೇವೇಶಂ ಗತ್ವಾ ತತ್ರ ಮಹಾಮತಿಃ ।
ತತ್ರ ಸ್ನಾತ್ವಾ ಮಹಾಯೋಗೀ ಮಾರ್ಕಂಡೇಯೋ ಮಹಾತಪಾಃ ॥ ೨೧ ॥

ತಪಸ್ತಪ್ತ್ವಾ ನಿರಾಹಾರೋ ದ್ರಷ್ಟುಂ ನಾರಾಯಣಂ ಹರಿಮ್ ।
ಬಹವೋಽಹರ್ಗಣಾಸ್ತತ್ರ ಗೃಣನ್ಬ್ರಹ್ಮ ಸನಾತನಮ್ ॥ ೨೨ ॥

---

೧೯. ಎಂದು ಮಾರ್ಕಂಡೇಯನು ಹೇಳಲು, ಆ ಅಶರೀರವಾಣಿಯು ಹೇಳುತ್ತದೆ. ' ಎಲೈ ವಿಪ್ರಶ್ರೇಷ್ಠನೇ ! ನಿಗ್ರಹಾನುಗ್ರಹಸಮರ್ಥನಾದ ಸರ್ವಶಕ್ತನಾದ ಶ್ರೀಮನ್ನಾರಾಯಣನನ್ನು ಈ ಮುಂದಿನ ಸ್ತೋತ್ರದಿಂದ ಸ್ತುತಿಸು.

೨೦. ಎಲೈ ಸುವ್ರತನೇ ! ಈ ನಾರಾಯಣಸ್ತುತಿಯನ್ನು ಮಾಡದೇ ಸರ್ವ ತೀರ್ಥಗಳಲ್ಲಿ ಸ್ನಾನಮಾಡಿದ ಫಲವನ್ನು ನೀನು ಹೊಂದುವುದಿಲ್ಲ,' ಎಂದು ವಾಣಿಯು ಹೇಳಲು, ಆ ಮಹಾಮತಿಯು ಅಲ್ಲಿ ವಿಧಿಯಂತೆ ಸ್ನಾನವನ್ನು ಮಾಡಿ, ತಪದಲ್ಲಿ ನಿಂದು ಶ್ರೀಹರಿಯನ್ನು ನೋಡಬಯಸಿ ಸೇವಿಸಿ, ನುತಿಸಿದನು.

೨೧-೨೨. ಪುರುಷೋತ್ತಮನೆಂಬ ಹೆಸರಿನ ದೇವತೆಗಳೊಡೆಯನನ್ನು ಧ್ಯಾನಿಸಿ, ಆ ಕ್ಷೇತ್ರದಲ್ಲಿ ಮಿಂದು, ಮಹಾಯೋಗಿಯೂ, ಮಹಾತಪಸ್ವಿಯೂ ಆದ ಮಹಾಮತಿಯಾದ ಮಾರ್ಕಂಡೇಯನು ಶ್ರೀ ನಾರಾಯಣನಾದ ಹರಿಯನ್ನು ಕಾಣಲು, ಆಹಾರವಿಲ್ಲದೇ ತಪವನ್ನೆಸಗಿ ಅಲ್ಲಿಯೇ ಅನೇಕ ದಿವಸಗಳು ಸನಾತನನಾದ, ಗುಣಪೂರ್ಣನಾದ ಪರಬ್ರಹ್ಮನನ್ನು ಸ್ತುತಿಸುತ್ತಾ ; ಆ ಕ್ಷೇತ್ರಸ್ವಾಮಿಯಾದ

ಪುರುಷೋತ್ತಮಂ ಸಮಭ್ಯರ್ಚ್ಯ ಗಂಧಪುಷ್ಪಾದಿಭಿಃ ಕ್ರಮಾತ್ ।
ತುಷ್ಟಾವ ವಾಗ್ಭಿರಿಷ್ಟಾಭಿರ್ವಿಷ್ಣುಂ ತತ್ರೋರ್ಧ್ವಬಾಹುಕಃ ॥ ೨೩ ॥

॥ ಮಾರ್ಕಂಡೇಯ ಉವಾಚ ॥

ತದೇವಾಖ್ಯಾಹಿ ಭಗವನ್ ಸ್ತೋತ್ರಂ ತೀರ್ಥಫಲಪ್ರದಂ ।
ಯೇನ ಜಪ್ತೇನ ಸಕಲಂ ತೀರ್ಥಸ್ನಾನಫಲಂ ಭವೇತ್ ॥ ೨೪ ॥

॥ ವಾಗುವಾಚ ॥

ಜಯ ಜಯ ದೇವ ದೇವ ಜಯ ಮಾಧವ ಕೇಶವ ।
ಜಯ ಪದ್ಮಪಲಾಶಾಕ್ಷ ಜಯ ಗೋವಿಂದ ಗೋಪತೇ ॥ ೨೫ ॥

ಪುರುಷೋತ್ತಮದೇವರನ್ನು ಕ್ರಮವಾಗಿ ಗಂಧಪುಷ್ಪಾದಿಗಳಿಂದ ಪೂಜಿಸಿ, ಅಲ್ಲಿ ತೋಳುಗಳನ್ನು ಎತ್ತಿಕೊಂಡು ಪ್ರಿಯಗಳಾದ ಆ ನುಡಿಗಳಿಂದ ಶ್ರೀ ಮಹಾವಿಷ್ಣುವನ್ನು ನುತಿಸಿದನು.

ಮಾರ್ಕಂಡೇಯನು ಹೇಳುತ್ತಾನೆ :—

೨೪. "ಎಲೈ ಪೂಜ್ಯನೇ ! ಯಾವ ಸ್ತೋತ್ರದ ಜಪದಿಂದ ಸಕಲತೀರ್ಥಗಳಲ್ಲಿ ಸ್ನಾನಮಾಡುವುದರ ಪುಣ್ಯಫಲ ಲಭಿಸುವುದೋ, ಆ ತೀರ್ಥಫಲಗಳನ್ನು ಕೊಡುವ ಸ್ತೋತ್ರವನ್ನು ದಯಮಾಡಿ ಹೇಳು ;'

ಎಂದು ಕೇಳಲು, ಆ ಅಶರೀರವಾಣಿಯು ಹೇಳುತ್ತದೆ :—

೨೫. 'ಎಲೈ ದೇವೋತ್ತಮನೇ ! ನಿನಗೆ ಉತ್ಕರ್ಷ ಉತ್ಕರ್ಷ, ಎಲೈ ಮಾಧವನೇ ! ಕೇಶವನೇ ! ನಿನಗೆ ಮೇಲ್ಮೆಯುಂಟಾಗಲಿ. ಎಲೈ ತಾವರೆಯ ಎಸಳಿನಂತೆ ಕಣ್ಣುಗಳುಳ್ಳವನೇ ! ನಿನಗೆ ಜಯವಾಗಲಿ. ಎಲೈ ವೇದಪ್ರತಿಪಾದ್ಯನಾದ, ವೇದನಾಯಕನಾದ ಶ್ರೀ ಹರಿಯೇ ! ನಿನಗೆ ವಿಜಯವಾಗಲಿ.

ಜಯ ಜಯ ಪದ್ಮನಾಭ ಜಯ ವೈಕುಂಠ ವಾಮನ ।
ಜಯ ಪದ್ಮಹೃಷೀಕೇಶ ಜಯದಾಮೋದರಾಚ್ಯುತ ॥ ೨೬ ॥

ಜಯ ಪದ್ಮೇಶ್ವರಾನಂತ ಜಯ ಲೋಕಗುರೋ ಜಯ ।
ಜಯ ಶಂಖಗದಾಪಾಣೇ ಜಯ ಭೂಧರ ಸೂಕರ ॥ ೨೭ ॥

ಜಯ ಯಜ್ಞೇಶ ವಾರಾಹ ಜಯ ಭೂಧರ ಸೂಕರ ।
ಜಯ ಯೋಗೇಶ ಯೋಗಜ್ಞ ಜಯ ಯೋಗ ಪ್ರವರ್ತಕ ॥ ೨೮ ॥

ಜಯ ಯೋಗಪ್ರವರ್ತಕ ಜಯ ಧರ್ಮಪ್ರವರ್ತಕ ।
ಕೃತಪ್ರಿಯ ಜಯ ಜಯ ಯಜ್ಞೇಶ ಯಜ್ಞಾಂಗ ಜಯ ॥ ೨೯ ॥

---

೨೬. ಎಲೈ ಪದ್ಮನಾಭನೇ ! ಜಯ ಜಯ. ಎಲೈ ವೈಕುಂಠ! ವಾಮನ ! ನಿನಗೆ ಜಯವಾಗಲಿ. ಎಲೈ ಕಾಲುಗಳಿಂದ ಮೂರು ಲೋಕಗಳನ್ನಳದವನೇ ! ಸರ್ವೇಂದ್ರಿಯ ನಿಯಾಮಕನೇ! ಜಯವಾಗಲಿ. ಎಲೈ ದಾಮೋದರನೇ ! ಅಚ್ಯುತನೇ ನಿನಗೆ ವಿಜಯವಾಗಲಿ.

೨೭. ಎಲೈ ಲಕ್ಷ್ಮೀಪತಿಯೇ ! ಅನಂತನೇ! ನಿನಗೆ ಜಯವಾಗಲಿ. ಎಲೈ ಲೋಕಶಿಕ್ಷಕನೇ ! ನಿನಗೆ ಜಯ ಜಯ. ಎಲೈ ಶಂಖಗದಾಪಾಣಿಯೇ ! ಸರ್ವೋತ್ತಮನಾಗಿರು ಭೂಮಿಯನ್ನು ಕೋರೆಯ ಹಲ್ಲಿನಿಂದ ಎತ್ತಿದ ವರಾಹಾವತಾರಿಯಾದ ಸ್ವಾಮಿಯೇ ! ನಿನಗೆ ಜಯವಾಗಲಿ.

೨೮. ಎಲೈ ಯಜ್ಞಪತಿಯಾದ ಶ್ರೀ ವರಾಹಸ್ವಾಮಿಯೇ ! ಸರ್ವೋತ್ಕೃಷ್ಟನಾಗಿರು. ಎಲೈ ಕೂರ್ಮರೂಪದಿಂದ ಭೂಮಿಯನ್ನು ಹೊತ್ತಿರುವ ಭೂ ರಕ್ಷಕನೇ ! ನಿನಗೆ ಜಯವಾಗಲಿ. ಎಲೈ ಯೋಗಗಳೊಡೆಯನೇ ! ಯೋಗವನ್ನು ಸಂಪೂರ್ಣವಾಗಿ ತಿಳಿದವನೇ ! ಯೋಗಶಾಸ್ತ್ರಪ್ರವರ್ತಕನೇ ! ನಿನಗೆ ಜಯವಾಗಲಿ.

೨೯. ಎಲೈ ಯೋಗಧರ್ಮಗಳ ಪ್ರವರ್ತಕನೇ ನಿನಗೆ ಜಯವಾಗಲಿ. ಕೃತಯುಗ ಪ್ರಿಯನೇ ! ಯಜ್ಞಪತಿಯೇ ! ಯಜ್ಞಾಂಗಗಳಲ್ಲಿ ನಿಯಾಮಕನಾಗಿರುವವನೇ ! ನಿನಗೆ ಜಯವಾಗಲಿ.

ಜಯ ವಂದಿತಸದ್ದ್ವಿಜ ಜಯ ನಾರದಸಿದ್ಧಿದ ।
ಜಯ ಪುಣ್ಯವತಾಂ ಗೇಹ ಜಯ ವೈದಿಕಭಾಜನ ॥ ೩೦ ॥

ಜಯ ಜಯ ಚತುರ್ಭುಜ ಜಯ ದೈತ್ಯಭಯಾಪಹ ।
ಜಯ ಸರ್ವಜ್ಞ ಸರ್ವಾತ್ಮನ್ ಜಯ ಶಂಕರ ಶಾಶ್ವತ ॥ ೩೧ ॥

ಜಯ ವಿಷ್ಣೋ ಮಹಾದೇವ ಜಯ ನಿತ್ಯಮಧೋಕ್ಷಜ ।
ಪ್ರಸಾದಂ ಕುರು ದೇವೇಶ ದರ್ಶಯಾದ್ಯ ಸ್ವಕಾಂ ತನುಮ್ ॥ ೩೨ ॥

---

೩೦. ಎಲೈ ಉತ್ತಮರಾದ ದ್ವಿಜರಿಂದ ವಂದಿತನಾದವನೇ! ನಿನಗೆ ಜಯವಾಗಲಿ. ನಾರದನಿಗೆ ಸಿದ್ಧಿಫಲವನ್ನಿತ್ತವನೇ! ಜಯವಾಗಲಿ. ಪುಣ್ಯವಂತರಿಗೆ ಆಶ್ರಯನೇ! ಉತ್ಕರ್ಷವಾಗಲಿ. ವೇದೋಕ್ತಯಜ್ಞಗಳ ಮುಖ್ಯಫಲಭೋಕ್ತೃವೇ! ನಿನಗೆ ಜಯವಾಗಲಿ.

೩೧. ಎಲೈ ನಾಲ್ಕು ತೋಳುಗಳುಳ್ಳವನೇ! ಜಯ ಜಯ; ಎಲೈ ದೈತ್ಯರಿಗೆ ಭಯಪಡಿಸುವವನೇ! ಜಯವಾಗಲಿ. ಎಲೈ ಸರ್ವಜ್ಞನೇ! ಸರ್ವನಿಯಾಮಕನೇ! ಸರ್ವಾಂತರ್ಯಾಮಿಯೇ! ಜಗತ್ತಿಗೆ ಕಲ್ಯಾಣವನ್ನು ಉಂಟುಮಾಡುವವನೇ! ಎಲೈ ಯಾವಾಗಲೂ ಏಕಪ್ರಕಾರವಾಗಿ ನಿತ್ಯನಾದವನೇ! ಜಯ ಜಯ.

೩೨. ಎಲೈ ಹೆದ್ದೈವನಾದ ವಿಷ್ಣುವೇ! ನಿನಗೆ ಜಯವಾಗಲಿ. ಇಂದ್ರಿಯಾಪೇಕ್ಷೆಯಿಲ್ಲದೇ ಎಲ್ಲವನ್ನೂ ತಿಳಿಯುವವನೇ! ನಿತ್ಯವೂ ನೀನು ವಿಜಯಿಯಾಗು. ಎಲೈ ದೇವೋತ್ತಮನೇ! ನನ್ನಲ್ಲಿ ಅನುಗ್ರಹಮಾಡು; ದೇವ! ನಿನ್ನ ಸ್ವರೂಪವನ್ನು ಕಾಣಿಸು.'

॥ ವ್ಯಾಸ ಉವಾಚ ॥

ಇತ್ಯೇವಂ ಕೀರ್ತಿತೇ ತೇನ ಮಾರ್ಕಂಡೇಯೇನ ಧೀಮತಾ ।
ಪ್ರಾದುರ್ಬಭೂವ ಭಗವಾನ್ಪೀತವಾಸಾ ಜನಾರ್ದನಃ ॥ ೩೩ ॥

ಶಂಖಚಕ್ರಗದಾಪಾಣಿಃ ಸರ್ವಾಭರಣಭೂಷಿತಃ ।
ತೇಜಸಾ ದ್ಯೋತಯನ್ಸರ್ವಾ ದಿಶೋ ವಿಷ್ಣುಃ ಸನಾತನಃ ॥ ೩೪ ॥

ತಂ ದೃಷ್ಟ್ವಾ ಸಹಸಾ ಭೂಮೌ ಚಿರಪ್ರಾರ್ಥಿತದರ್ಶನಮ್ ।
ಪ್ರಯಾತಃ ಶಿರಸಾ ವಶ್ಯೋ ಭಕ್ತ್ಯಾ ಸ ಭೃಗುನಂದನಃ ॥ ೩೫ ॥

ವ್ಯಾಸಮುನಿಯು ಹೇಳುತ್ತಾನೆ :—

೩೩. ‘ ಅಶರೀರವಾಣಿಯು ಹೇಳಿದಂತೆ ಇಂತು ಜ್ಞಾನಿಯಾದ ಆ ಮಾರ್ಕಂಡೇಯನು ಭಗವಂತನನ್ನು ಸ್ತುತಿಸಲು, ಆಗ ಭಗವಂತನಾದ, ಪೀತಾಂಬರಧಾರಿಯಾದ ಜನಾರ್ದನನಾದ ಶ್ರೀ ವಿಷ್ಣುವು ಇದಿರಿನಲ್ಲಿ ಬಂದು ನಿಂತು ಕಾಣಿಸಿದನು.

೩೪. ಆ ನಿತ್ಯನಾದ ವಿಷ್ಣುವು ಶಂಖಚಕ್ರಗದಾಪದ್ಮಗಳನ್ನು ತನ್ನ ನಾಲ್ಕು ಕೈಗಳಲ್ಲಿ ಧರಿಸಿದವನಾಗಿಯೂ, ಎಲ್ಲ ತೊಡವುಗಳಿಂದ ಅಲಂಕೃತನಾಗಿಯೂ, ತನ್ನ ದಿವ್ಯತೇಜಸ್ಸಿನಿಂದ ಎಲ್ಲ ತೇಜಸ್ಸುಗಳನ್ನು ಬೆಳಗುತ್ತಲೂ ಇದ್ದನು.

೩೫. ಆ ಭೃಗುನಂದನನಾದ ಮಾರ್ಕಂಡೇಯನು ಬಹುಕಾಲದಿಂದ ನೋಡಬೇಕೆಂಬ ಹಂಬಲಿಗೆ ವಿಷಯನಾದ ಶ್ರೀ ಹರಿಯನ್ನು ಈ ತಿರೆಯಲ್ಲಿ ಇದ್ದಕ್ಕಿದ್ದಂತೆ ಕಂಡು, ಭಕ್ತಿಯಿಂದ ತಲೆಬಾಗಿ ಎರಗಿ, ಅವನ ವಶವನ್ನು ಹೊಂದಿದನು.

ನಿಪತ್ಯೋತ್ಪತ್ಯ ಚ ಪುನಃ ಪುನಃ ಸಾಙ್ಗಂ ಮಹಾಮುನಾಃ ।
ಪ್ರಬದ್ಧಸಂಪುಟಕರೋ ಗೋವಿಂದಂ ಪುರತಃ ಸ್ತುವನ್ ॥ ೩೬ ॥

॥ ಮಾರ್ಕಂಡೇಯ ಉವಾಚ ॥

ನಮೋಽಸ್ತು ತೇ ದೇವ ದೇವ ಮಹಾಚಿತ್ತ ಮಹಾಕಾಯ
ಮಹಾಪ್ರಾಜ್ಞ ಮಹಾದೇವ ಮಹಾಕೀರ್ತೇ ಬ್ರಹ್ಮೇಂದ್ರ ॥ ೩೭ ॥

ಚಂದ್ರರುದ್ರಾರ್ಚಿತಪಾದಯುಗಲ ।
ಶ್ರೀ ಪದ್ಮಹಸ್ತ ಸಂಮರ್ದಿತದೈತ್ಯದೇಹ ॥ ೩೮ ॥

---

೩೬. ಉದಾತ್ತ ಮನಸ್ಕನಾದ ಮಾರ್ಕಂಡೇಯನು ಅಡಿಗಡಿಗೆ ತನ್ನ ಎಲ್ಲಾ ಅವಯವಗಳಿಂದ ಕೂಡಿ, ದೊಪ್ಪನೆ ಎರಗಿ ಎದ್ದು ಮತ್ತೆ ಅವನಡಿಗಳ ಮೇಲೆ ಬಿದ್ದು ತನ್ನ ಎರಡು ಕೈಗಳನ್ನೂ ಸಂಪುಟಾಕಾರವಾಗಿ ಜೋಡಿಸಿ, ಗೋವಿಂದನನ್ನು ಇದಿರಿನಲ್ಲಿ ಸ್ತುತಿಸುತ್ತಿದ್ದನು.'

ಮಾರ್ಕಂಡೇಯನು ಹೇಳುತ್ತಾನೆ :—

೩೭. ಎಲೈ ದೇವದೇವನೇ! ಹಿರಿದಾದ ಮನವುಳ್ಳವನೇ! ಪೇರೊಡಲಿನವನೇ! ಪೆರ್ಜಸನೇ! ಚತುರ್ಮುಖ ಬ್ರಹ್ಮನಿಗೂ ಸ್ವಾಮಿಯಾದ ನಿನಗೆ ನಮಸ್ಕಾರವು.

೩೮. ಚಂದ್ರ, ರುದ್ರ, ಇವರಿಂದ ಸೇವಿತಗಳಾದ ಪಾದಯುಗಳನೇ! ಸುಂದರವಾದ ಪದ್ಮವನ್ನು ಕೈಯಲ್ಲಿ ತಾಳಿರುವವನೇ! ದುಷ್ಟದೈತ್ಯರೊಡಲನ್ನು ನಾಶಮಾಡಿದವನೇ! ನಿನಗೆ ನಮಸ್ಕಾರ.

ಅನಂತಭೋಗಶಯನಾರ್ಪಿತಸರ್ವಾಂಗ
ಸನಕಸನಂದನಸನತ್ಕುಮಾರಾದ್ಯೈರ್ಯೋಗಿಭಿರ್ನಾಸಾಗ್ರ
ನ್ಯಸ್ತಲೋಚನೈರನವರತಮಭಿಚಿಂತಿತ ಮೋಕ್ಷ ತತ್ವ ।
ಗಂಧರ್ವವಿದ್ಯಾಧರ ಯಕ್ಷ ಕಿಂನರ ಕಿಂಪುರುಷೈ
ರಹರಹೋ ಗೀಯಮಾನ ದಿವ್ಯ ಯಶಃ ॥ ೩೯ ॥

ನೃಸಿಂಹ ನಾರಾಯಣ ಪದ್ಮನಾಭ
ಗೋವಿಂದ ಗೋವರ್ಧನ ಗುಹಾನಿವಾಸ ।
ಯೋಗೀಶ್ವರ ದೇವೇಶ್ವರ ಜಲೇಶ್ವರ
ಮಹೇಶ್ವರ ॥ ೪೦ ॥

---

೩೯. ಆದಿಶೇಷನ ಒಡಲೆಂಬ ಹಾಸಿನಲ್ಲಿ ಸರ್ವಾಂಗದೊಡನೆ ಮಲಗಿರುವವನೇ! ಮೂಗಿನ ತುದಿಯಲ್ಲಿಟ್ಟ ದೃಷ್ಟಿಯುಳ್ಳ ಸನಕ ಸನಂದನ ಸನತ್ಕುಮಾರರೇ ಮೊದಲಾದ ಜ್ಞಾನಿಗಳಿಂದ ಚಿಂತಿಸುವ ಮೋಕ್ಷತತ್ವರೂಪನಾದವನೇ! ಗಂಧರ್ವರು, ವಿದ್ಯಾಧರರು, ಯಕ್ಷರು, ಕಿಂನರರು, ಕಿಂಪುರುಷರು–ಇವರಿಂದ ಪ್ರತಿನಿತ್ಯವೂ ಹಾಡುತ್ತಲಿರುವ ಉತ್ತಮಶ್ಲೋಕನೇ! ನಿನಗೆರಗುವೆನು.

೪೦. ನರಸಿಂಹನೇ! ನಾರಾಯಣನೇ! ಪದ್ಮನಾಭನೇ! ಗೋವಿಂದನೇ! ಗೋವರ್ಧನಗಿರಿಯ ಗವಿಯಲ್ಲಿ ವಾಸಿಸುವವನೇ! ಯೋಗಿಶ್ರೇಷ್ಠನೇ ದೇವೋತ್ತಮನೇ! ಜಲನಿಯಾಮಕನೇ! ಜಗತ್ಸಾರ್ವಭೌಮನೇ! ನಿನಗೆ ವಂದಿಸುವೆನು.

ಯೋಗಧರ ಮಹಾಮಾಯಾಧರ
ವಿದ್ಯಾಧರ ಯಶೋಧರ ।
ಕೀರ್ತಿಧರ ತ್ರಿಗುಣನಿವಾಸ
ತ್ರಿತತ್ವಧರ ತ್ರೇತಾಗ್ನಿಧರ ॥ ೪೧ ॥

ತ್ರಿವೇದಭಾಕ್ ತ್ರಿನಿಕೇತನ ।
ತ್ರಿಸುಪರ್ಣ ತ್ರಿಪುಂಡ್ರಧರ ॥ ೪೨ ॥

ಸ್ನಿಗ್ಧಮೇಘಾಭಾರ್ಚಿತ ದ್ಯುತಿ ವಿರಾಜಿತ
ಪೀತಾಂಬರಧರ ಕಿರೀಟಕಟಕ ಕೇಯೂರ ಹಾರ
ಮಣಿರತ್ನಾಂಶು ದೀಪ್ತಿ ವಿದ್ಯೋತಿತಸರ್ವದಿಶ ॥ ೪೩ ॥

---

೪೧. ಯೋಗಗಳನ್ನು ತಾಳಿರುವವನೇ! ಮಹಾಲಕ್ಷ್ಮಿಯನ್ನು ಎದೆಯಲ್ಲಿ ತಾಳಿರುವವನೇ! ಸಕಲವಿದ್ಯಾಶ್ರಯನೇ! ಸಕಲದಿಗಂತವ್ಯಾಪ್ತವಾದ ಒಳ್ಳೆಯ ಹೆಸರಿನವನೇ! ಹತ್ತಿರದಲ್ಲಿ ನುಡಿಯುವ ಜಸಕೆಯೆಡೆಯೇ! ಸತ್ವರಜಸ್ತಮೋಗುಣಗಳಿಗೆ ನಿಯಾಮಕನಾಗಿ ಆಶ್ರಯವಿತ್ತವನೇ! ಜೀವ, ಜಡ, ಮಹಾಲಕ್ಷ್ಮಿ ಈ ಮೂರು ತತ್ವಗಳಿಗೆ ಆಶ್ರಯನೇ! ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ ಈ ಮೂರು ಅಗ್ನಿಗಳನ್ನು ಧರಿಸಿದವನೇ! ನಿನಗೆ ನಮಸ್ಕಾರ ಮಾಡುತ್ತೇನೆ.

೪೨. ಋಗ್ಯಜುಸ್ಸಾಮವೇದಗಳಿಂದ ಹೊಂದುವವನೇ! ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ವಾಸಸ್ಥಾನವುಳ್ಳವನೇ! ಅಥವಾ ಶ್ವೇತದ್ವೀಪ, ಅನಂತಾಸನ ವೈಕುಂಠಗಳೆಂಬ ಮೂರು ವಾಸಸ್ಥಾನಗಳುಳ್ಳವನೇ! ತ್ರಿಸುಪರ್ಣಗಳೆಂಬ ವೇದ ಮಂತ್ರಗಳಿಂದ ಪ್ರತಿಪಾದ್ಯನೇ! ಮೂರು ತೆರನಾದ ಶಿಕ್ಷೆಯನ್ನು ವಿಧಿಸುವವನೇ! ನಿನಗೆ ನಮಸ್ಕಾರ.

೪೩. ನೀರುಂಡಮುಗಿಲಿಗೆ ಹೋಲುವ ನಿರ್ಮಲವಾದ ಕಾಂತಿಯಿಂದೆಸೆಯುವ ಕೆಂಪು, ವಜ್ರಾದಿರತ್ನಗಳು, ಇವುಗಳ ಕಿರಣ ಪ್ರಕಾಶದಿಂದ ಬೆಳಗಿದ ಸಕಲ ದಿಶೆಯುಳ್ಳವನೇ! ನಿನಗೆ ನಮಸ್ಕಾರ ಮಾಡುತ್ತೇನೆ.

ಕನಕಮಣಿಕುಂಡಲ ಮಂಡಿತಗಂಡಸ್ಥಲ
ಮಧುಸೂದನ ವಿಶ್ವಮೂರ್ತೇ ॥ ೪೪ ॥

ಲೋಕನಾಥ ಯಜ್ಞೇಶ್ವರ ಯಜ್ಞಪ್ರಿಯ ತೇಜೋಮಯ
ಭಕ್ತಪ್ರಿಯ ವಾಸುದೇವ ದುರಿತಾಪಹಾರ ಆರಾಧ್ಯ
ಪುರುಷೋತ್ತಮ ನಮೋಽಸ್ತು ತೇ ॥ ೪೫ ॥

॥ ವ್ಯಾಸ ಉವಾಚ ॥

ಇತ್ಯುದೀರಿತಮಾಕರ್ಣ್ಯ ಭಗವಾಂಸ್ತು ಜನಾರ್ದನಃ ।
ದೇವದೇವಃ ಪ್ರಸನ್ನಾತ್ಮಾ ಮಾರ್ಕಂಡೇಯಮುವಾಚ ಹ ॥ ೪೬ ॥

---

೪೪. ಸುವರ್ಣದಲ್ಲಿ ಕೆತ್ತಿದ ರತ್ನವುಳ್ಳ ಓಲೆಯಿಂದ ಗಾಢಿಗೊಂಡ ಕೆನ್ನೆಯುಳ್ಳವನೇ! ಮಧುವೆಂಬ ರಕ್ಕಸನನ್ನು ಇರಿದವನೇ! ಸಮಸ್ತ ಪ್ರಪಂಚದಲ್ಲಿ ನಿಯಾಮಕನಾಗಿರುವವನೇ! ನಿನಗೆ ವಂದನೆಗಳು.

೪೫. ಎಲ್ಲೈ ಹದಿನಾಲ್ಕು ಲೋಕಗಳಿಗೊಡೆಯನೇ! ಯಜ್ಞಪ್ರಭುವೇ! ಜನ್ನವು ಪ್ರಿಯವಾಗಿ ಉಳ್ಳವನೇ! ತೇಜಃಪ್ರಚುರನಾದವನೇ! ಭಕ್ತಿಯಲ್ಲಿ ಪ್ರೀತಿಯುಳ್ಳವನೇ! ಸಮಸ್ತ ಪ್ರಾಣಿಗಳಲ್ಲಿ ವಾಸಿಸುವವನೇ! ಭಕ್ತರ ಪಾಪಗಳನ್ನು ಕಳೆಯುವವನೇ! ಸರ್ವಸೇವ್ಯನೇ! ಕ್ಷರಾಕ್ಷರರಿಂದ ಉತ್ತಮನಾದುದರಿಂದ ಪುರುಷೋತ್ತಮನೇ! ನಿನಗೆ ನಮಸ್ಕಾರವು.'

ವ್ಯಾಸಮುನಿಯು ಹೇಳುತ್ತಾನೆ :—

೪೬. ಭಗವಂತನೂ, ಜನಾರ್ದನನೂ, ದೇವೋತ್ತಮನೂ ಆದ ಶ್ರೀ ಹರಿಯು ಇಂತು ಮಾರ್ಕಂಡೇಯನು ಮಾಡಿದ ಸ್ತುತಿಯನ್ನು ಕೇಳಿ ಅವನಿಗೆ ಹೀಗೆ ಹೇಳಿದನು.

॥ ಶ್ರೀ ಭಗವಾನುವಾಚ ॥

ತುಷ್ಟೋಽಸ್ಮಿ ಭವತೋ ವತ್ಸ ತಪಸಾ ಮಹತಾ ಪುನಃ ।
ಸ್ತೋತ್ರೈರಪಿ ಮಹಾಬುದ್ಧೇ ನಷ್ಟಪಾಪೋಽಸಿ ಸಾಂಪ್ರತಮ್ ॥ ೪೭ ॥

ವರಂ ವರಯ ವಿಪ್ರೇಂದ್ರ ವರದೋಽಹಂ ತವಾಗ್ರತಃ ।
ನಾತಪ್ತತಪಸಾ ಬ್ರಹ್ಮನ್ದ್ರಷ್ಟುಂ ಸಾಧ್ಯೋಽಹಮಂಜಸಾ ॥ ೪೮ ॥

॥ ಮಾರ್ಕಂಡೇಯ ಉವಾಚ ॥

ಕೃತಕೃತ್ಯೋಽಸ್ಮಿ ದೇವೇಶ ಸಾಂಪ್ರತಂ ತವ ದರ್ಶನಾತ್ ।
ತ್ವದ್ಭಕ್ತಿಮಚಲಾಮೇಕಾಂ ಮಮ ದೇಹಿ ಜಗತ್ಪತೇ ॥ ೪೯ ॥

ಶ್ರೀ ಭಗವಂತನು ಇಂತು ಹೇಳುತ್ತಾನೆ:—

೪೭. 'ಎಲೈ ವತ್ಸನೇ! ನೀನೆಸಗಿದ ಹಿರಿದಾದ ತಪದಿಂದ ನಾನು ಸಂತಸಗೊಂಡಿರುತ್ತೇನೆ. ಎಲೈ ಮಹಾಬುದ್ಧಿಯೇ! ಮತ್ತೂ ಸ್ತುತಿಸಿದುದರಿಂದ ಈಗ ನೀನು ಪಾಪರಹಿತನಾಗಿ ಶುದ್ಧನಾಗಿರುತ್ತೀಯೆ.

೪೮. ಎಲೈ ಬ್ರಾಹ್ಮಣೋತ್ತಮನೇ! ಭಕ್ತರ ಇಷ್ಟಾರ್ಥಗಳನ್ನು ಸಲ್ಲಿಸುವ ವರದನೆಂಬ ನಾನು ನಿನ್ನೆದುರಿಗೆ ಬಂದಿರುತ್ತೇನೆ. ನಿನ್ನ ಇಷ್ಟಾರ್ಥವನ್ನು ಕೇಳಿಕೊಳ್ಳುವವನಾಗು. ಎಲೈ ಬ್ರಾಹ್ಮಣನೇ! ತಪವನ್ನೆಸಗದವನು ನನ್ನನ್ನು ಚೆನ್ನಾಗಿ ಕಾಣಲೂ, ತಿಳಿಯಲೂ ಅರನು.

ಮಾರ್ಕಂಡೇಯನು ಹೇಳುತ್ತಾನೆ:—

೪೯. 'ಎಲೈ ದೇವತೆಗಳಿಗೊಡೆಯನಾದ ಸ್ವಾಮಿಯೇ! ಇಂದು ನಿನ್ನ ದರ್ಶನದಿಂದ ಕೃತಕೃತ್ಯನಾಗಿದ್ದೇನೆ. ಎಲೈ ಜಗತ್ಪತಿಯೇ! ನನಗೆ ನಿನ್ನಲ್ಲಿ ಸ್ಥಿರವಾದ ಬಕುತಿಯೊಂದನ್ನು ಮಾತ್ರ ಅನುಗ್ರಹಿಸು.

ಯದಿ ಪ್ರಸನ್ನೋ ಭಗವಾನ್ಮಮ ಮಾಧವ ಶ್ರೀಪತೇ ।
ಚಿರಾಯುಷ್ಯಂ ಹೃಷೀಕೇಶ ದೇಹಿ ತ್ವಾಂ ಚಿರಮರ್ಚಯೇ ॥ ೫೦ ॥

॥ ಶ್ರೀ ಭಗವಾನುವಾಚ ॥

ಮೃತ್ಯುಸ್ತೇ ನಿರ್ಜಿತಃ ಪೂರ್ವಂ ಚಿರಾಯುಸ್ತ್ವಂ ಚ ಲಬ್ಧವಾನ್ ।
ಭಕ್ತಿರಸ್ತ್ವಚಲಾ ತೇ ಮೇ ವೈಷ್ಣವೀ ಮುಕ್ತಿದಾಯಿನೀ ॥ ೫೧ ॥

ಇದಂ ತೀರ್ಥಂ ಮಹಾಭಾಗ ತ್ವನ್ನಾಮ್ನಾ ಖ್ಯಾತಿಮೇಷ್ಯತಿ ।
ಪುನಸ್ತ್ವಂ ದ್ರಕ್ಷ್ಯಸೇ ಮಾಂ ವೈ ಕ್ಷೀರಾಬ್ಧೌ ಯೋಗಶಾಯಿನಮ್ ॥ ೫೨ ॥

---

೫೦. ಲಕ್ಷ್ಮೀಪತಿಯೂ, ಮಾಧವನೂ, ಆದ ಭಗವಂತನೇ ! ನೀನು ನನ್ನಲ್ಲಿ ಪ್ರಸನ್ನನಾಗಿರುವಲ್ಲಿ, ನಿನ್ನನ್ನು ನಾನು ಬಹುಕಾಲ ಸೇವಿಸುತ್ತಿರುವಂತೆ, ಬಹುಕಾಲ ಬದುಕಿರುವಂತೆ, ಚಿರಾಯುಷ್ಯವನ್ನು ದಯೆಗೈಯ್ಯುವನಾಗು.’

ಶ್ರೀ ಭಗವಂತನು ಇಂತು ಹೇಳುತ್ತಾನೆ :—

೫೧. ಎಲೈ ಮಾರ್ಕಂಡೇಯನೇ ! ಹಿಂದೆಯೇ ನೀನು ಮೃತ್ಯುವನ್ನು ಗೆದ್ದಿರುತ್ತೀಯೆ, ಹಾಗೆಯೇ ಚಿರಕಾಲ ಬಾಳುವೆಯನ್ನೂ ಪಡೆದಿರುತ್ತೀಯೆ. ನಿನ್ನಲ್ಲಿ ಮುಕ್ತಿಯನ್ನು ಈಯುವ ನನ್ನ ವೈಷ್ಣವ ಭಕುತಿಯು ದೃಢವಾಗಲಿ.

೫೨. ಎಲೈ ಪುಣ್ಯಶಾಲಿಯೇ ! ಈ ತೀರ್ಥವು ನಿನ್ನ ಹೆಸರಿನಿಂದ ಪ್ರಸಿದ್ಧವಾಗುವುದು. ನೀನು ಮತ್ತೂ ಪಾಲ್ಗಡಲಲ್ಲಿ ಯೋಗನಿದ್ರೆಯಲ್ಲಿ ತೊಡಗಿದ ನನ್ನನ್ನು ಕಾಣುವೆ.’

॥ ವ್ಯಾಸ ಉವಾಚ ॥

ಇತ್ಯುಕ್ತ್ವಾ ಪುಂಡರೀಕಾಕ್ಷಸ್ತತ್ರೈವಾಂತರಧೀಯತ ।
ಮಾರ್ಕಂಡೇಯೋಽಪಿ ಧರ್ಮಾತ್ಮಾ ಚಿಂತಯನ್ಮಧುಸೂದನಮ್ ॥ ೫೩ ॥

ಅರ್ಚಯನ್ದೇವದೇವೇಶಂ ಜಪನ್ಯುದ್ಧಂ ನಮನ್ನಪಿ ।
ವೇದಶಾಸ್ತ್ರಾಣಿ ಪುಣ್ಯಾನಿ ಪುರಾಣಾನ್ಯಖಿಲಾನಿ ಯಃ ॥ ೫೪ ॥

ಮುನೀನಾಂ ಶ್ರಾವಯಾಮಾಸ ಗಾಥಾಶ್ಚೈವ ತಪೋಧನಃ ।
ಇತಿಹಾಸಾನಿ ಪುಣ್ಯಾನಿ ಪಿತೃತತ್ತ್ವಂ ಚ ಸತ್ತಮಃ ॥ ೫೫ ॥

ತತಃ ಕದಾಚಿತ್ಪುರುಷೋತ್ತಮೋಕ್ತಂ
ವಚಃ ಸ್ಮರನ್ಶಾಸ್ತ್ರವಿದಾಂ ವರಿಷ್ಠಃ ।
ಭ್ರಮನ್ಸಮುದ್ರಂ ಸ ಜಗಾಮ ದ್ರಷ್ಟುಂ
ಹರಿಂ ಸುರೇಶಂ ಮುನಿರುಗ್ರತೇಜಾಃ ॥ ೫೬ ॥

ಶ್ರೀ ವ್ಯಾಸಮುನಿಯು ಇಂತು ಹೇಳುತ್ತಾನೆ:—

೫೩-೫೫. 'ಎಲೈ ಶ್ರೇಷ್ಠನಾದ ಶುಕನೇ! ಪುಂಡರೀಕಾಕ್ಷನಾದ ಶ್ರೀ ಹರಿಯು ಮಾರ್ಕಂಡೇಯ ಮುನಿಗೆ ಇಂತು ಅನುಗ್ರಹಿಸಿ, ಅಲ್ಲಿಯೇ ಮಾಯವಾದನು. ಧರ್ಮಬುದ್ಧಿಯುಳ್ಳ ಮಾರ್ಕಂಡೇಯನಾದರೋ ಮಧುಸೂದನನ್ನು ಧ್ಯಾನಗೆಯ್ಯುತ್ತಾ, ದೇವದೇವೋತ್ತಮನನ್ನು ಪೂಜಿಸುತ್ತಾ, ದೋಷರಹಿತನಾಗಿರುವ ಶ್ರೀ ಹರಿಯನ್ನು ಪದೇಪದೇ ಜಪಿಸುತ್ತಲೂ, ನಮಸ್ಕರಿಸುತ್ತಲೂ, ಋಗಾದಿವೇದಗಳನ್ನೂ ವ್ಯಾಕರಣಾದಿ ಶಾಸ್ತ್ರಗಳನ್ನೂ, ಪುಣ್ಯಸಂಪಾದಕಗಳಾದ ಶ್ರೀ ಭಾಗವತಾದಿ ಹದಿನೆಂಟುಪುರಾಣಗಳನ್ನೂ, ನಾಳ್ನುಡಿಗಳನ್ನೂ, ಗಾಹೆಗಳನ್ನೂ, ಪುಣ್ಯಪ್ರದವಾದ ಭಾರತಾದೀತಿಹಾಸಗಳನ್ನೂ, ಪಿತೃತತ್ವವನ್ನೂ, ಮುನಿಗಳಿಗೆ ಶ್ರವಣಮಾಡಿಸಿದನು.

೫೬. ಬಳಿಕ ಶಾಸ್ತ್ರಜ್ಞರಲ್ಲಿ ಹಿರಿಯವನೂ, ಮಹಾತೇಜಸ್ವಿಯೂ ಆದ ಮಾರ್ಕಂಡೇಯ ಮುನಿಯು, ಪುರುಷೋತ್ತಮನಾದ ಶ್ರೀ ಹರಿಯು ಹೇಳಿದ. ಅನುಗ್ರಹದ ಮಾತನ್ನು ಒಮ್ಮೆ ನೆನೆಯುತ್ತಾ, ಸಮುದ್ರವನ್ನು ಅಲೆಯುತ್ತಾ, ದೇವೋತ್ತಮನಾದ ಶ್ರೀ ಹರಿಯನ್ನು ದರ್ಶಿಸಲು ಅಲ್ಲಿಗೆ ಹೋದನು.

ಶ್ರಮೇಣ ಯುಕ್ತಶ್ಚಿರಕಾಲ ಸಂಭ್ರಮಾ-

-ದ್ಭೃಗೋಃ ಸುಪುತ್ರೋ ಹರಿಭಕ್ತಿಮುದ್ವಹನ್ ।

ಕ್ಷೀರಾಬ್ಧಿಮಾಸಾದ್ಯ ಹರಿಂ ಸುರೇಶಂ

ನಾಗೇಂದ್ರಭೋಗೇ ಕೃತನಿದ್ರಮೈಕ್ಷತ ॥ ೫೭ ॥

ಇತಿ ಶ್ರೀ ನರಸಿಂಹಪುರಾಣೇ ಮಾರ್ಕಂಡೇಯ ಚರಿತೇ

ದಶಮೋಽಧ್ಯಾಯಃ

---

೫೭. ಬಹುಕಾಲದಿಂದಲೂ ಶ್ರೀ ಹರಿಯನ್ನು ನೋಡಬೇಕೆಂಬ ಸಡಗರದಿಂದುಂಟಾದ ಶ್ರಮದಿಂದ ಕೂಡಿ, ಭೃಗುಕುಮಾರನಾದ ಮೃಕಂಡುವಿನ ಪುತ್ರನು ಶ್ರೀ ಹರಿಯಲ್ಲಿ ಮಾಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹರೂಪವಾದ ಭಕುತಿಯನ್ನು ತಾಳಿ, ಪಾಲ್ಗಡಲನ್ನೈದಿ, ಸಕಲದೇವತೆಗಳಿಗೂ ಒಡೆಯನಾದ, ಸರ್ಪರಾಜನಾದ ಆದಿಶೇಷನ ಒಡಲಿನ ಮೇಲೆ ಯೋಗನಿದ್ರೆಗೊಂಡಿರುವ ಶ್ರೀ ಹರಿಯನ್ನು ಕಂಡನು,' ಎಂದು ಶ್ರೀ ವ್ಯಾಸಮುನಿಯು ಶುಕನಿಗೆ ನಿರೂಪಿಸಿದುದನ್ನು ಸೂತರು ಭರದ್ವಾಜನಿಗೆ ಹೇಳಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಮಾರ್ಕಂಡೇಯ ಚರಿತದಲ್ಲಿ

ಹತ್ತನೆಯ ಅಧ್ಯಾಯವು

ಮುಗಿದುದು.

ಹತ್ತನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ, ಮಾರ್ಕಂಡೇಯನು ಮೃತ್ಯುಜಯಾನಂತರ, ತಂದೆಯ ಮನೆಗೆ ಹಿಂದಿರಿಗಿ ಬಂದು, ಮದುವೆಮಾಡಿಕೊಂಡು, ತನ್ನ ಧರ್ಮಪತ್ನಿಯಲ್ಲಿ ವೇದ ಶಿರಸನೆಂಬ ಪುತ್ರನನ್ನು ಪಡೆದು, ದೇವಯಜ್ಞ, ಪಿತೃಯಜ್ಞ, ಮುನಿಯಜ್ಞಗಳನ್ನೆಲ್ಲಾ ಎಸಗಿ, ವೈರಾಗ್ಯದಿಂದ ಪುನಃ ಪ್ರಯಾಗಕ್ಷೇತ್ರಕ್ಕೆ ಬಂದು, ಅಲ್ಲಿ ಉತ್ತಮವಾದ ತೀರ್ಥದಲ್ಲಿ ಮಿಂದು, ಒಂದು ಆಲದಮರದ ಅಡಿಯಲ್ಲಿ ತಪದಲ್ಲಿ ಸಂದನು. ವಾಯ್ವಾಹಾರಿಯಾಗಿದ್ದ ಮಾರ್ಕಂಡೇಯನು ಏಕಾಗ್ರಮನಸ್ಸಿನಿಂದ ಒಮ್ಮೆ ಶ್ರೀಮಾಧವನನ್ನು ಗಂಧ, ಪುಷ್ಪಾದಿಗಳಿಂದರ್ಚಿಸಿ, ಶಂಖಚಕ್ರಗದಾಪಾಣಿಯಾದ ಗರುಡಧ್ವಜನನ್ನು ಧ್ಯಾನಮಾಡುತ್ತಾ ಭಕ್ತಿಯಿಂದ ಸ್ತುತಿಸಿದನು. ಆಗ ಒಂದು ಅಶರೀರವಾಣಿಯು ಅವನನ್ನು ಕುರಿತು, 'ಅಯ್ಯಾ ಬ್ರಾಹ್ಮಣನೇ! ಏಕೆ ಕಷ್ಟಪಡುತ್ತಿದ್ದೀಯೆ? ಸರ್ವತೀರ್ಥಗಳಲ್ಲಿ ಮಿಂದ ಹೊರತು ಭಗವಂತನನ್ನು ನೀನು ಕಾಣಲಾರೆ,' ಎನ್ನಲು ಮತ್ತು ಆ ಬ್ರಾಹ್ಮಣನು ಆ ವಾಣಿಯನ್ನು ಕುರಿತು, 'ನೀನು ಯಾರಾದರೂ ಆಗಿರಲಿ; ಯಾವ ಕಾರ್ಯವನ್ನೆಸಗಿದರೆ, ಸರ್ವತೀರ್ಥಗಳಲ್ಲಿ ಮಿಂದಫಲವು ಲಭಿಸುವುದೋ ಅಂಥದನ್ನು ಹೇಳು,' ಎಂದು ಕೇಳಲು ಆ ವಾಣಿಯು ಆ ಬ್ರಾಹ್ಮಣನಿಗೆ ಸಕಲ ತೀರ್ಥಫಲಗಳನ್ನುಂಟುಮಾಡುವ ಶ್ರೀ ಭಗವಂತನ ಸ್ತೋತ್ರವನ್ನರುಹಿತು. ಅದರಂತೆ ಮಾರ್ಕಂಡೇಯನು ನುತಿಸಲು, ಶ್ರೀ ಹರಿಯು ಮೈದೋರಿ, ಆತನ ತಪಸ್ಸಿಗೆ ತಾನು ಮೆಚ್ಚಿ ಬಂದಿರುವುದಾಗಿ ಹೇಳಿ, ವರವನ್ನು ಬೇಡೆಂದು ಹೇಳಲು, ಆ ಮುನಿಯು 'ಎಲೈ ಸ್ವಾಮಿಯೇ! ನೀನು ಪ್ರಸನ್ನನಾಗಿದ್ದರೆ, ನಿನ್ನಲ್ಲಿ ದೃಢಭಕ್ತಿಯುಂಟಾಗುವಂತೆ ನನಗೆ ಅನುಗ್ರಹಿಸು ಮತ್ತು ಚಿರಾಯುಷ್ಯವನ್ನು ಕೊಡು. ಆಗ ನಿನ್ನನ್ನು ನಾನು ಬಹುಕಾಲ ಪೂಜಿಸುವೆನು' ಎಂದು ವರವನ್ನು ಬೇಡಲು, ಭಗವಂತನು ಅಂತೆಯೇ ಕರುಣಿಸಿ, ಮತ್ತೆ 'ನೀನು ನನ್ನನ್ನು ಕ್ಷೀರಸಾಗರದಲ್ಲಿ ನೋಡುವೆ,' ಎಂದು ಹೇಳಿ, ಮರೆಯಾದನು. ಬಹುಕಾಲದಿಂದ ಶ್ರೀ ಹರಿಯನ್ನು ಕಾಣಬೇಕೆಂದು ಹಂಬಲಿಸಿ, ಅವನನ್ನೇ ನುತಿಸುತ್ತಿದ್ದ ಆ ಮುನಿಯು ಒಮ್ಮೆ ಕ್ಷೀರಸಾಗರಕ್ಕೆ ಬಂದು, ಅಲ್ಲಿ ಅನಂತಶಾಯಿಯಾಗಿ ಯೋಗನಿದ್ರಾಸಕ್ತನಾಗಿದ್ದ ಶ್ರೀಹರಿಯನ್ನು ಕಂಡನು, ಎಂಬು ಶ್ರೀ ವ್ಯಾಸಮುನಿಯು ಶುಕಮುನಿಗೆ ಹೇಳಿದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಹತ್ತನೆಯ ಅಧ್ಯಾಯದ ವಿಷಯಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಏಕಾದಶ, ದ್ವಾದಶಾಧ್ಯಾಯೌ

ಮಾರ್ಕಂಡೇಯ ಚರಿತಮ್ (ಅನುವೃತ್ತಮ್)

॥ ವ್ಯಾಸ ಉವಾಚ ॥

ಪ್ರಣಿಪತ್ಯ ಜಗನ್ನಾಥಂ ಚರಾಚರಗುರುಂ ಹರಿಮ್ ।
ಮಾರ್ಕಂಡೇಯೋಽಭಿತುಷ್ಟಾವ ಭೋಗಪರ್ಯಂಕಶಾಯಿನಮ್ ॥ ೧ ॥

॥ ಮಾರ್ಕಂಡೇಯ ಉವಾಚ ॥

ಪ್ರಸೀದ ಭಗವನ್ ವಿಷ್ಣೋ ಪ್ರಸೀದ ಪುರುಷೋತ್ತಮ ।
ಪ್ರಸೀದ ದೇವದೇವೇಶ ಪ್ರಸೀದ ಗರುಡಧ್ವಜ ॥ ೨ ॥

ಹನ್ನೊಂದನೆಯ ಮತ್ತು ಹನ್ನೆರಡನೆಯ ಅಧ್ಯಾಯಗಳು.

ಮಾರ್ಕಂಡೇಯ ಚರಿತವು (ಮುಂದುವರಿದುದು)

ಶ್ರೀ ವ್ಯಾಸಮುನಿಯು ಶುಕಮುನಿಯನ್ನು ಕುರಿತು ಇಂತು ಹೇಳುತ್ತಾನೆ:—

೧. 'ಮಾರ್ಕಂಡೇಯನು ಶೇಷನೆಂಬ ಮಂಚದಲ್ಲಿ ಯೋಗನಿದ್ರಾಸಕ್ತನಾಗಿ ಮಲಗಿರುವ, ಚರಾಚರಪ್ರಪಂಚಕ್ಕೆ ಸ್ವಾಮಿಯಾದ, ಜಗದೊಡೆಯನಾದ ಶ್ರೀಹರಿಗೆ ಎರಗಿ, ಇಂತು ಕೊಂಡಾಡಿದನು.'

ಮಾರ್ಕಂಡೇಯನು ಹೇಳುತ್ತಾನೆ:—

೨. 'ಎಲೈ ಭಗವಂತನಾದ ವಿಷ್ಣುವೇ! ಪ್ರಸನ್ನನಾಗು; ಎಲೈ ಪುರುಷೋತ್ತಮನೇ! ಪ್ರಸನ್ನನಾಗು; ಎಲೈ ದೇವೋತ್ತಮನೇ! ಪ್ರಸನ್ನನಾಗು; ಎಲೈ ಗರುಡಧ್ವಜನೇ! ಪ್ರಸನ್ನನಾಗು.

ಪ್ರಸೀದ ವಿಷ್ಣೋ ಲಕ್ಷ್ಮೀಶ ಪ್ರಸೀದ ಧರಣೀಧರ ।
ಪ್ರಸೀದ ಲೋಕನಾಥಾದ್ಯ ಪ್ರಸೀದ ಪರಮೇಶ್ವರ ॥ ೩ ॥

ಪ್ರಸೀದ ಸರ್ವದೇವೇಶ ಪ್ರಸೀದ ಕಮಲೇಕ್ಷಣ ।
ಪ್ರಸೀದ ಮಂದರಧರ ಪ್ರಸೀದ ಮಧುಸೂದನ ॥ ೪ ॥

ಪ್ರಸೀದ ಶುಭಗೋಕಾಂತ ಪ್ರಸೀದ ಭುವನಾಧಿಪ ।
ಪ್ರಸೀದಾದ್ಯ ಮಹಾದೇವ ಪ್ರಸೀದ ಮಮ ಕೇಶವ ॥ ೫ ॥

ಜಯ ಕೃಷ್ಣ ಜಯಾಚಿಂತ್ಯ ಜಯ ವಿಷ್ಣೋ ಜಯಾವ್ಯಯ ।
ಜಯ ವಿಶ್ವ ಜಯಾವ್ಯಕ್ತ ಜಯ ವಿಷ್ಣೋ ನಮೋಽಸ್ತು ತೇ ॥ ೬ ॥

೩-೫. ಎಲೈ ಲಕ್ಷ್ಮೀಪತಿಯಾದ ವಿಷ್ಣುವೇ! ಪ್ರಸನ್ನನಾಗು; ಎಲೈ ಭೂಧರನೇ! ಪ್ರಸನ್ನನಾಗು; ಎಲೈ ವಿಶ್ವಪತಿಯೇ! ಪ್ರಸನ್ನನಾಗು; ಎಲೈ ಶ್ರೇಷ್ಠನಾದ ಒಡೆಯನೇ! ಪ್ರಸನ್ನನಾಗು; ಎಲೈ ಸರ್ವದೇವನಿಯಾಮಕನೇ! ಪ್ರಸನ್ನನಾಗು; ಎಲೈ ಪುಂಡರೀಕಾಕ್ಷನೇ! ಪ್ರಸನ್ನನಾಗು; ಎಲೈ ಮಂದರಧಾರಿಯಾದ ಕೂರ್ಮಸ್ವರೂಪನೇ! ಪ್ರಸನ್ನನಾಗು; ಎಲೈ ಮಧುಸೂದನನೇ! ಪ್ರಸನ್ನನಾಗು; ಎಲೈ ಮಂಗಳಕರಳಾದ ಆಕಳಿಗೆ ಒಡೆಯನಾದ ಗೋವಿಂದನೇ! ಇಂದು ಪ್ರಸನ್ನನಾಗು; ಎಲೈ ಹದಿನಾಲ್ಕು ಲೋಕಗಳಿಗೂ ಒಡೆಯನೇ! ಪ್ರಸನ್ನನಾಗು; ಎಲೈ ಮಹಾದೇವನೇ! ಪ್ರಸನ್ನನಾಗು; ಎಲೈ ಬ್ರಹ್ಮರುದ್ರಪ್ರವರ್ತಕನಾದ ಶ್ರೀ ಹರಿಯೇ ಪ್ರಸನ್ನನಾಗು.

೬-೭. ಎಲೈ ಕೃಷ್ಣನೇ! ಉತ್ಕೃಷ್ಟನಾಗಿರು; ಸಾಕಲ್ಯೇನ ಚಿಂತಿಸಲಾಗದವನೇ! ನಿನಗೆ ಗೆಲುವಾಗಲಿ; ಎಲೈ ವಿಷ್ಣುವೇ! ಎಲೈ ಅವ್ಯಯನೇ! ಜಯವಾಗಲಿ; ಎಲೈ ವಿಶ್ವಾತ್ಮಕನೇ! ಜಯವಾಗಲಿ; ಸಾಕಲ್ಯದಿಂದ ಯಾರಿಗೂ ತೋರದವನೇ! ನಿನಗೆ ವಿಜಯವಾಗಲಿ; ಎಲೈ ವಿಷ್ಣುವೇ! ಜಯವಾಗಲಿ; ನಿನಗೆ ನಮಸ್ಕಾರ. ಎಲೈ ಕ್ರೀಡಾದಿಗುಣವಿಶಿಷ್ಟನಾದವನೇ! ಉತ್ಕರ್ಷವನ್ನು ಹೊಂದು;

ಜಯ ದೇವ ಜಯಾಜೇಯ ಜಯ ಸತ್ಯ ಜಯಾಕ್ಷರ ।
ಜಯ ಕಾಲ ಜಯೇಶಾನ ಜಯ ಸರ್ವ ನಮೋಽಸ್ತು ತೇ ॥ ೭ ॥

ಜಯ ಯಜ್ಞಪತೇ ನಾಥ ಜಯ ವಿಶ್ವಪತೇ ಪ್ರಭೋ ।
ಜಯ ಭೂತಪತೇ ನಾಥ ಜಯ ಸರ್ವಪತೇ ವಿಭೋ ॥ ೮ ॥

ಜಯ ವಿಶ್ವಪತೇ ನಾಥ ಜಯ ದಕ್ಷ ನಮೋಽಸ್ತು ತೇ ।
ಜಯ ಪಾಪಹರಾನಂತ ಜಯ ಜನ್ಮಜರಾಪಹ ॥ ೯ ॥

ಜಯ ಭದ್ರಾತಿಭದ್ರೇಶ ಜಯ ಭದ್ರ ನಮೋಽಸ್ತು ತೇ ।
ಜಯ ಕಾಮದ ಕಾಕುತ್ಸ್ಥ ಜಯ ಮಾನದ ಮಾಧವ ॥ ೧೦ ॥

ಯಾರಿಂದಲೂ ತಿರಸ್ಕರಿಸಲಾಗದವನೇ! ನಿನಗೆ ಗೆಲುವಾಗಲಿ; ಸತ್ಯಸ್ವರೂಪನೇ! ಎಲೈ ನಾಶರಹಿನಾದವನೇ! ಜಯವಾಗಲಿ; ಎಲೈ ಕಾಲನಿಯಾಮಕನೇ! ಎಲೈ ಈಶ್ವರನೇ! ಜಯವಾಗಲಿ; ಎಲೈ ಸರ್ವನಿಯಾಮಕನೂ ಸರ್ವಾಂತರ್ಯಾಮಿಯೂ ಆದುದರಿಂದ ಸರ್ವಶಬ್ದವಾಚ್ಯನೇ! ನಿನಗೆ ಜಯವಾಗಲಿ; ನಿನಗೆ ಜಯವಾವಾಗಲಿ; ನಿನಗೆ ನಮಸ್ಕಾರವು.

೮-೧೪. ಎಲೈ ಯಜ್ಞಪತಿಯೇ! ನಿನಗೆ ಜಯವಾಗಲಿ; ಎಲೈ ವಿಶ್ವಪತಿಯೇ! ವ್ಯಾಪ್ತನಾದ ಸ್ವಾಮಿಯೇ! ಗೆಲುವಾಗಲಿ; ಎಲೈ ಸರ್ವಪ್ರಾಣಿಗಳಿಗೆ ಒಡೆಯನೇ! ಸ್ವಾಮಿಯೇ! ಉತ್ಕರ್ಷವುಂಟಾಗಲಿ; ಎಲೈ ಸರ್ವನಿಯಾಮಕನೇ! ವಿಭುವೇ! ನಿನಗೆ ವಿಜಯವಾಗಲಿ; ಎಲೈ ಸರ್ವಶಕ್ತನೇ! ನಿನಗೆ ಉತ್ಕರ್ಷವಾಗಲಿ; ನಿನಗೆ ನಮಸ್ಕಾರವು ಭಜಕರ ಪಾಪವನ್ನು ನಾಶಗೈಯುವವನೇ! ನಾಶರಹಿತನಾದವನೇ! ನಿನಗೆ ಜಯವಾಗಲಿ, ಎಲೈ ಭಕ್ತರ ಹುಟ್ಟು ಮುಪ್ಪುಗಳನ್ನು ಹೋಗಲಾಡಿಸುವವನೇ! ನಿನಗೆ ಉತ್ಕರ್ಷವಾಗಲಿ; ಎಲೈ ಮಂಗಳಸ್ವರೂಪನೇ! ಎಲೈ ಪರಮಂಗಳನೇ! ಸ್ವಾಮಿಯೇ! ಉತ್ಕರ್ಷವಾಗಲಿ. ಉತ್ಕರ್ಷವಾಗಲಿ; ಎಲೈ ಮಂಗಳವಸ್ತುಗಳಿಗೆ ಮಾಂಗಲ್ಯವನ್ನುಂಟುಮಾಡುವವನೇ! ನಿನಗೆ ನಮಸ್ಕಾರವು. ಎಲೈ ಭಕ್ತರ ಇಷ್ಟವನ್ನೀಯುವವನೇ! ಯಾವಾಗಲೂ ನಿರ್ವಿಕಾರನಾಗಿರುವವನೇ! ಜಯವಾಗಲಿ; ಎಲೈ ಸೇವಕರಿಗೆ ಮಾನವನ್ನು ಕೊಡುವವನೇ! ಲಕ್ಷ್ಮೀಪತಿಯೇ! ನಿನಗೆ ಜಯವಾಗಲಿ;

ಜಯ ಶಂಕರ ದೇವೇಶ ಜಯ ಶ್ರೀಶ ನಮೋಽಸ್ತು ತೇ ।
ಜಯ ಕುಂಕುಮರಕ್ತಾಭ ಜಯ ಪಂಕಜಲೋಚನ ॥ ೧೧ ॥

ಜಯ ಚಂದನಲಿಪ್ತಾಂಗ ಜಯ ರಾಮ ನಮೋಽಸ್ತು ತೇ ।
ಜಯ ದೇವ ಜಗನ್ನಾಥ ಜಯ ದೇವಕಿನಂದನ ॥ ೧೨ ॥

ಜಯ ಸರ್ವಗುರೋ ಜ್ಞೇಯ ಜಯ ಶಂಭೋ ನಮೋಽಸ್ತು ತೇ ।
ಜಯ ಸುಂದರ ಪದ್ಮಾಭ ಜಯ ಸುಂದರಿವಲ್ಲಭ ।
ಜಯ ಸುಂದರಸರ್ವಾಂಗ ಜಯ ವಂದ್ಯ ನಮೋಽಸ್ತು ತೇ ॥ ೧೩ ॥

ಜಯ ಸರ್ವದ ಸರ್ವೇಶ ಜಯ ಶರ್ಮದ ಶಾಶ್ವತ ।
ಜಯ ಕಾಮದ ಭಕ್ತಾನಾಂ ಪ್ರಭವಿಷ್ಣೋ ನಮೋಽಸ್ತು ತೇ ॥ ೧೪ ॥

ಎಲೈ ಲೋಕಕ್ಕೆ ಸುಖವನ್ನೀಯುವವನೇ! ದೇವರೊಡಯನೇ! ಜಯವಾಗಲಿ ಜಯವಾಗಲಿ ; ಎಲೈ ಶ್ರೀಪತಿಯೇ! ನಿನಗೆ ನಮಸ್ಕಾರ. ಎಲೈ ಕುಂಕುಮ ಕೇಸರದಂತೆ ಕೆಂಪುಬಣ್ಣವುಳ್ಳವನೇ! ಎಲೈ ತಾವರೆಗಣ್ಣನೇ! ನಿನಗೆ ಜಯವಾಗಲಿ ಜಯವಾಗಲಿ ; ಎಲೈ ಶ್ರೀಗಂಧದಿಂದ ಪೂಸಿದ ಒಡಲುಳ್ಳವನೇ! ಜಯವಾಗಲಿ ಜಯವಾಗಲಿ ; ಎಲೈ ಶ್ರೀರಾಮನೇ! ನಿನಗೆ ನಮಸ್ಕಾರವು. ಎಲೈ ಕ್ರೀಡಾದಿಗುಣ ವಿಶಿಷ್ಟನಾದ ಲೋಕನಾಯಕನೇ ದೇವಕೀದೇವಿಯ ಕುವರನೇ! ಜಯವಾಗಲಿ ಜಯವಾಗಲಿ ; ಎಲೈ ಸರ್ವಗುರುವೇ ! ಸರ್ವರಿಂದಲೂ ಪರಮಜ್ಞೇಯನಾದವನೇ! ಜಯವಾಗಲಿ ಜಯವಾಗಲಿ ; ಎಲೈ ಲೋಕಕ್ಕೆ ಸುಖಕರನೇ! ನಿನಗೆ ನಮಸ್ಕಾರ ಎಲೈ ಚೆಲುವನೇ! ತಾವರೆಯಂತೆ ಮನೋಹರನೇ! ಜಯ ಜಯ : ಎಲೈ ಚೆಲುವೆಯಾದ ರಮೆಯ ಅರಸನೇ! ಜಯವಾಗಲಿ ; ಎಲೈ ಗಾಡಿಗೊಂಡ ಎಲ್ಲಾ ಅಂಗಗಳುಳ್ಳವನೇ! ಜಯವಾಗಲಿ ; ಎಲ್ಲರಿಂದಲೂ ನಮಸ್ಕರಿಸಿಕೊಳ್ಳುವವನೇ ನಿನಗೆ ನಮಸ್ಕಾರ ; ಎಲೈ ಭಜಕರ ಸರ್ವಾಭೀಷ್ಟಗಳನ್ನು ಕೊಡುವವನೇ! ಸರ್ವಸ್ವಾಮಿಯೇ! ಲೋಕಕ್ಕೆ ಸುಖವನ್ನೀಯುವವನೇ! ಎಲೈ ನಿತ್ಯನೇ! ಜಯವಾಗಲಿ ಜಯವಾಗಲಿ ; ಎಲೈ ಭಕ್ತರ ಕಾಮಗಳನ್ನು ಸಲ್ಲಿಸುವವನೇ! ಎಲೈ ಸರ್ವಶಕ್ತನೇ! ಜಯವಾಗಲಿ ; ನಿನಗೆ ನಮಸ್ಕಾರವು.

ನಮಃ ಕಮಲನಾಭಾಯ ನಮಃ ಕಮಲಮಾಲಿನೇ ।
ಲೋಕನಾಥ ನಮಸ್ತೇಽಸ್ತು ವೀರಭದ್ರ ನಮೋಽಸ್ತು ತೇ ॥ ೧೫ ॥

ನಮಸ್ತ್ರೈಲೋಕ್ಯನಾಥಾಯ ಚತುರ್ಮೂರ್ತೇ ಜಗತ್ಪತೇ ।
ನಮೋ ದೇವಾಧಿದೇವಾಯ ನಮೋ ನಾರಾಯಣಾಯ ತೇ ॥ ೧೬ ॥

ನಮಸ್ತೇ ವಾಸುದೇವಾಯ ನಮಸ್ತೇ ಪೀತವಾಸಸೇ ।
ನಮಸ್ತೇ ನರಸಿಂಹಾಯ ನಮಸ್ತೇ ಶಾರ್ಙ್ಗಧಾರಿಣೇ ॥ ೧೭ ॥

ನಮಃ ಕೃಷ್ಣಾಯ ರಾಮಾಯ ನಮಶ್ಚಕ್ರಾಯುಧಾಯ ಚ ।
ನಮಃ ಶಿವಾಯ ದೇವಾಯ ನಮಸ್ತೇ ಭುವನೇಶ್ವರ ॥ ೧೮ ॥

೧೫–೧೮. ಎಲೈ ಪದ್ಮನಾಭನೇ! ಪದ್ಮಮಾಲಾಧಾರಿಯೇ! ನಿನಗೆ ನಮಸ್ಕಾರ ನಮಸ್ಕಾರ; ಎಲೈ ಲೋಕನಾಥನೇ! ನಿನಗೆ ನಮಸ್ಕಾರ; ಶೂರನಾದ ಮಂಗಳಮೂರ್ತಿಯೇ! ನಿನಗೆ ನಮಸ್ಕಾರವು; ಸ್ವರ್ಗ, ಮರ್ತ್ಯ ಪಾತಾಳಗಳೆಂಬ ಮೂರು ಲೋಕಗಳಿಗೂ ಒಡೆಯನಾದವನಿಗೆ ನಮಸ್ಕಾರ; ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೆಂಬ ನಾಲ್ಕು ರೂಪಗಳುಳ್ಳವನೇ! ಜಗತ್ಪತಿಯೇ! ನಿನಗೆ ನಮಸ್ಕಾರ ಮಾಡುವೆನು; ಸರ್ವಪ್ರಾಣಿಗಳಲ್ಲಿಯೂ ನಾಸಿಸುವ ವಸುದೇವತನಯನೆನಿಸಿರುವ ವಾಸುದೇವನಾದ ನಿನಗೆ ವಂದನೆಗಳು. ಎಲೈ ಪೀತಾಂಬರಧಾರಿಯೇ! ನಿನಗೆರಗುವೆನು. ನರಸಿಂಹನಾದ ನಿನಗೆರಗುವೆನು. ಶಾರ್ಙ್ಗವೆಂಬ ಬಿಲ್ಲನ್ನು ಹಿಡಿದಿರುವನಾದ ನಿನಗೆ ನಮಸ್ಕರಿಸುವೆನು. ಕೃಷ್ಣನೂ, ರಾಮನೂ, ಚಕ್ರಾಯುಧವುಳ್ಳವನೂ, ಆದ ನಿನಗೆ ನಮಸ್ಕಾರ ಮಂಗಳಸ್ವರೂಪನೂ, ಕ್ರೀಡಾದಿ ಗುಣವಿಶಿಷ್ಟನೂ, ಲೋಕಗಳೊಡೆಯನೂ, ಆದ ನಿನಗೆ ನಮಸ್ಕರಿಸುತ್ತೇನೆ.

ನಮೋ ವೇದಾಂತವೇದ್ಯಾಯ ನಮೋಽನಂತಾಯ ವಿಷ್ಣವೇ ।
ನಮಸ್ತೇ ಸಕಲಾಧ್ಯಕ್ಷ ಪರಮಾತ್ಮನ್ನಮೋಽಸ್ತು ತೇ ॥ ೧೯ ॥

ತ್ವಂ ಮಾತಾ ಸರ್ವಲೋಕಾನಾಂ ತ್ವಮೇವ ಜಗತಃ ಪಿತಾ ॥ ೨೦ ॥

ತ್ವಂ ಮಾರ್ತಾನಾಂ ಸುಹೃನ್ಮಿತ್ರಂ ಪ್ರಿಯಸ್ತ್ವಂ ಪ್ರಪಿತಾಮಹ ।
ತ್ವಂ ಗುರುಸ್ತ್ವಂ ಗತಿಃ ಸಾಕ್ಷೀ ತ್ವಂ ಪತಿಸ್ತ್ವಂ ಪರಾಯಣಃ ॥ ೨೧ ॥

ತ್ವಂ ಧ್ರುವಸ್ತ್ವಂ ವಷಟ್ಕರ್ತಾ ತ್ವಂ ಹವಿಸ್ತ್ವಂ ಹುತಾಶನಃ ।
ತ್ವಂ ಶಿವಸ್ತ್ವಂ ವಸುರ್ಧಾತಾ ತ್ವಂ ಬ್ರಹ್ಮಾ ತ್ವಂ ಸುರೇಶ್ವರಃ ॥ ೨೨ ॥

ವೇದಾಂತಗಳಾದ ಉಪನಿಷತ್ತುಗಳಿಂದ ತಿಳಿಯತಕ್ಕವನಾದ ನಿನಗೆ ನಮಸ್ಕಾರ ಮಾಡುವೆನು ; ಅನಂತನಾದ ವಿಷ್ಣುವಿಗೆ ನಮಸ್ಕಾರವು. ಎಲೈ ಸಕಲ ವಸ್ತುಗಳಿಗೂ ನಿಯಾಮಕನೇ ! ಲಕ್ಷ್ಮೀದೇವಿಯನ್ನು ವಕ್ಷಸ್ಥಳದಲ್ಲಿ ಧರಿಸಿದವನೇ ! ನಾಶರಹಿತನೇ ! ನಿನಗೆ ನಮಸ್ಕಾರ. ಎಲೈ ಸರ್ವಲೋಕನಿಯಾಮಕನೇ ! ಸಮಸ್ತಪ್ರಪಂಚದಿಂದ ಸೇವ್ಯನಾದವನೇ ! ಪರಮಾತ್ಮನೇ ! ನಿನಗೆ ವಂದಿಸುತ್ತೇನೆ.

೨೦-೨೨. ಎಲೈ ಭಗವಂತನೇ ! ನೀನೇ ಸರ್ವಲೋಕಗಳಿಗೂ ತಾಯಿಯು : ನೀನೇ ಎಲ್ಲಾ ಜಗತ್ತಿಗೂ ತಂದೆಯು : ನೀನೇ ಪೀಡಿತರಾದವರಿಗೆ ಸಮೀಚೀನವಾದ ಹೃದಯವುಳ್ಳವನು, ಮತ್ತು ಕ್ಲೇಶಸ್ಥಾನವನ್ನು ತೋರಿ, ಅದರಿಂದ ಪಾರುಮಾಡುವವನು ; ಎಲೈ ಪ್ರಪಿತಾಮಹನೇ ! ನೀನೇ ಪ್ರಿಯನಾದವನು ; ನೀನೇ ಗುರುವು ; ಪ್ರಾಪ್ಯನು ; ನೀನೇ ಸಾಕ್ಷಿಯು ; ನೀನೇ ಸ್ವಾಮಿಯು ; ನೀನೇ ಪರಮಪ್ರಾಪ್ಯನಾದವನು ; ನೀನೇ ಸ್ಥಿರನಾಗಿರುವವನು ; ನೀನೇ ವಷಟ್ಕರ್ತನು ; ನೀನೇ ಹವಿಯೆಸ್ಸಿನಲ್ಲಿರುವವನಾಗಿ ಹವಿಯೆನಿಸಿಕೊಳ್ಳುವವನು ; ನೀನೇ ಹುತವಾದ ವಸ್ತುಗಳನ್ನು ತಿನ್ನುವ ಯಜ್ಞೇಶ್ವರನಲ್ಲಿದ್ದು ಹುತಾಶನನೆನಿಸುವವನು ; ನೀನೇ ಶಿವನಲ್ಲಿ ಶಿವರೂಪದಿಂದಿದ್ದು ಶಿವನೆನಿಸಿಕೊಳ್ಳುವವನು ; ನೀನೇ ವಸುಗಳಲ್ಲಿದ್ದು ವಸುವೆನಿಸಿಕೊಳ್ಳುವವನು ; ನೀನೇ ಈ ಜಗತ್ತನ್ನು ಪೋಷಣಧಾರಣಗಳನ್ನೆಸಗುವವನಾಗಿ ಧಾತನೆನಿಸಿಕೊಳ್ಳುವವನು ; ನೀನೇ ಗುಣಪೂರ್ಣನಾದ ಬ್ರಹ್ಮನು ! ನೀನೇ ಸಕಲ ದೇವತೆಗಳಿಗೆ ಒಡೆಯನು.

ತ್ವಂ ಯಮಸ್ತ್ವಂ ರವಿರ್ವಾಯುಸ್ತ್ವಂ ಜಲಂ ತ್ವಂ ಧನೇಶ್ವರಃ ।
ತ್ವಂ ಮನಸ್ತ್ವಮಹೋರಾತ್ರಂ ತ್ವಂ ನಿಶಾ ತ್ವಂ ನಿಶಾಕರಃ ।
ತ್ವಂ ಧೃತಿಸ್ತ್ವಂ ಶ್ರಿಯಃ ಕಾಂತಿಸ್ತ್ವಂ ಕ್ಷಮಾ ತ್ವಂ ಧರಾಧರಃ ॥ ೨೩ ॥

ತ್ವಂ ಕರ್ತಾ ಜಗತಾಮೀಶಸ್ತ್ವಂ ಹಂತಾ ಮಧುಸೂದನ ।
ತ್ವಮೇವ ಗೋಪ್ತಾ ಸರ್ವಸ್ಯ ಜಗತಸ್ತ್ವಂ ಚರಾಚರಃ ॥ ೨೪ ॥

ಕರಣಂ ಕಾರಣಂ ಕರ್ತಾ ತ್ವಮೇವ ಪರಮೇಶ್ವರಃ ।
ಶಂಖಚಕ್ರಗದಾಪಾಣೇ ಭೋ ಸಮುದ್ಧರ ಮಾಧವ ॥ ೨೫ ॥

೨೩-೨೫. ಭಗವಂತನೇ ! ನೀನೇ ಯಮನಲ್ಲಿದ್ದು ಯಮನೆನಿಸುವೆ ; ನೀನೇ ರವಿಯಲ್ಲಿದ್ದು ರವಿಯೆನಿಸುವೆ ; ನೀನೇ ವಾಯುವಿನಲ್ಲಿದ್ದು ವಾಯುವೆನಿಸುವೆ ; ಜಲದಲ್ಲಿರುವವನೂ ನೀನೇ ; ಧನಾಧಿಪತಿಯಾದ ಕುಬೇರನಿಗೆ ಆ ಸ್ಥಿತಿಯನ್ನಿತ್ತಿರುವುದರಿಂದ ಧನೇಶ್ವರನೂ ನೀನೇ ; ನೀನೇ ಮನ ಇಂದ್ರಿಯಕ್ಕೆ ನಿಯಾಮಕನು ; ನೀನೇ ಹಗಲಿರುಳುಗಳಿಗೂ ನಿಯಾಮಕನಾಗಿ ಅಹೋರಾತ್ರನೆನಿಸಿಕೊಳ್ಳುವೆ ; ನೀನೇ ರಾತ್ರಿಯ ನಿಯಾಮಕನಾಗಿ ನಿಶೆಯೆನಿಸುವೆ ; ನೀನೇ ನಿಶಾಕರನಲ್ಲಿ ಸನ್ನಿಹಿತನಾಗಿ ನಿಶಾಕರನೆನಿಸುವೆ ; ನೀನೇ ಧೈರ್ಯವನ್ನು ಕೊಡುವವನಾಗಿ ಧೃತಿಯೆನಿಸುವೆ ; ನೀನೇ ಸಂಪತ್ತುಗಳಿಗೆ ನಿಯಾಮಕನಾಗಿ ಸಂಪದನೆನಿಸುವೆ ; ನೀನೇ ಸರ್ವಕಾಂತಿಪ್ರದನಾಗಿ ಕಾಂತಿಯೆನಿಸಿಕೊಳ್ಳುವೆ ; ನೀನೇ ಸರ್ವರಿಗೂ ಕ್ಷಮಾಶಕ್ತಿಯನ್ನು ಈವನಾಗಿ ಕ್ಷಮೆಯೆನಿಸಿಕೊಳ್ಳುವೆ ; ನೀನೆ ಪರ್ವತಗಳಿಗೂ ಭೂಧಾರಕಶಕ್ತಿಯನ್ನು ಕೊಡುವುದರಿಂದ ಧರಾಧರನೆನಿಸುವೆ ; ನೀನೇ ಜಗತ್ತನ್ನು ಸೃಷ್ಟಿಸುವವನು ; ನೀನೇ ಸ್ವಾಮಿಯು ಎಲ್ಟೆ ಮಧುಸೂದನನೇ ನೀನೇ ಜಗತ್ತನ್ನು ಲಯಮಾಡುವವನು ; ನೀನೇ ಚರಾಚರವಸ್ತುಗಳಲ್ಲಿ ಅಂತರ್ಯಾಮಿಯಾಗಿರುವುದರಿಂದ ಚರಾಚರನೆನಿಸಿಕೊಳ್ಳುವೆ ; ನೀನೇ ಸಕಲ ಜಗತ್ತನ್ನು ರಕ್ಷಿಸುವವನು. ನೀನೇ ಸಾಧನವಸ್ತುಗಳಲ್ಲಿದ್ದು ಕರಣನೆನಿಸುವೆ ; ಕಾರಣವಸ್ತುಗಳಿಗೂ ಕಾರಣತ್ವವನ್ನಿತ್ತು ಕಾರಣನೆನಿಸುವವನೂ ನೀನೇ ; ಸಕಲರ ವ್ಯಾಪಾರವನ್ನು ಮಾಡಿಸುವ ಮುಖ್ಯಕರ್ತೃವೂ ನೀನೇ ; ಸರ್ವಲೋಕಕ್ಕೂ ಹೆದ್ದೈವನಾದವನೂ ನೀನೇ ; ಎಲೈ ಶಂಖಚಕ್ರಗದಾಪಾಣಿಯಾದ ರಮಾವಲ್ಲಭನೇ ! ನನ್ನನ್ನು ಉದ್ಧಾರಮಾಡು.

ಶೇಷಪರ್ಯಂಕಶಯನ ಪ್ರಿಯ ಪದ್ಮಾಲಯಾಕ್ಷಯ ।
ತ್ವಾಮೇವ ಭಕ್ತ್ಯಾ ಸತತಂ ನಮಾಮಿ ಪುರುಷೋತ್ತಮ ॥ ೨೬ ॥

ಶ್ರೀವತ್ಸಾಂಕಂ ಜಗದ್ಬೀಜಂ ಶ್ಯಾಮಲಂ ಕಮಲೇಕ್ಷಣಮ್ ।
ನಮಾಮಿ ತೇ ವಪುರ್ದೇವ ಕಲಿಕಲ್ಮಷನಾಶನಮ್ ॥ ೨೭ ॥

ಲಕ್ಷ್ಮೀಧರಮುದಾರಾಂಗಂ ದಿವ್ಯಮಾಲಾವಿಭೂಷಿತಮ್ ।
ಚಾರುಪೃಷ್ಠಂ ಮಹಾಬಾಹುಂ ಚಾರುಭೂಷಣಭೂಷಿತಮ್ ॥ ೨೮ ॥

ಪದ್ಮನಾಭಂ ವಿಶಾಲಾಕ್ಷಂ ಪದ್ಮಪತ್ರನಿಭೇಕ್ಷಣಮ್ ।
ದೀರ್ಘತುಂಗಮಹಾಘ್ರಾಣಂ ನೀಲಜೀಮೂತಸನ್ನಿಭಮ್ ॥ ೨೯ ॥

---

೨೬. ಎಲೈ ಶೇಷಪರ್ಯಂಕಶಾಯಿಯೇ ನನಗೆ ಸರ್ವಾತ್ಮನಾ ಇಷ್ಟನಾದವನೇ! ತಾವರೆಯ ಎಸಳಿನಂತೆ ಕಣ್ಣುಳ್ಳವನೇ! ಕ್ಷರಾಕ್ಷರರಿಂದ ಶ್ರೇಷ್ಠನಾದ ಪುರುಷೋತ್ತಮನೇ! ಯಾವಾಗಲೂ ನಿನ್ನನ್ನೇ ಭಕ್ತಿಯಿಂದ ವಂದಿಸುತ್ತೇನೆ.

೨೭. ಎಲೈ ಸ್ವಾಮಿಯೇ! ಶ್ರೀವತ್ಸವೆಂಬ ಮಚ್ಚೆಯುಳ್ಳದ್ದೂ, ಲೋಕಸೃಷ್ಟಿಗೆ ಕಾರಣಭೂತವಾದುದೂ, ಶ್ಯಾಮಲವರ್ಣವುಳ್ಳದ್ದೂ, ತಾವರೆಯಂತೆ ಕಣ್ಣುಳ್ಳದ್ದೂ, ಕಲಿಯಿಂದುಂಟಾಗುವ ಪಾಪಗಳನ್ನು ಕಳೆಯುವುದೂ ಆದ ನಿನ್ನ ಮಂಗಳಶರೀರಕ್ಕೆರಗುತ್ತೇನೆ.

೨೮-೩೫. ಲಕ್ಷ್ಮಿಯನ್ನು ಎದೆಯಲ್ಲಿ ತಾಳಿರುವವನೂ, ಉತ್ತಮವಾದ ಒಡಲುಳ್ಳವನೂ, ಶ್ರೇಷ್ಠವಾದ ವನಮಾಲೆಯಿಂದ ಅಲಂಕೃತನೂ, ಮನೋಹರವಾದ ಬೆನ್ನುಳ್ಳವನೂ, ಹಿರಿದಾದ ತೋಳ್ಗಳುಳ್ಳವನೂ, ಮನೋಹರಗಳಾದ ತೊಡವುಗಳಿಂದ ಅಲಂಕೃತನೂ, ತಾವರೆಯನ್ನು ಹೊಕ್ಕಳಲ್ಲುಳ್ಳವನೂ, ಅಗಲವಾದ ಕಣ್ಣುಳ್ಳವನೂ, ತಾವರೆಯ ದಳಕ್ಕೆ ಸಮಾನವಾದ ಕಣ್ಣುಳ್ಳವನೂ, ಉದ್ದವೂ, ಎತ್ತರವೂ, ಆದ ದೊಡ್ಡ ಮೂಗುಳ್ಳವನೂ, ನೀಲ

ದೀರ್ಘಬಾಹುಂ ಸುಗುಪ್ತಾಂಗಂ ರತ್ನಹಾರೋಜ್ಜ್ವಲೋರಸಮ್ ।
ಸುಭ್ರೂಲಲಾಟಮುಕುಟಂ ಸ್ನಿಗ್ಧದಂತಂ ಸುಲೋಚನಮ್ ॥ ೩೦ ॥

ಚಾರುಬಾಹುಂ ಸುತಾಮ್ರೋಷ್ಠರತ್ನೋಜ್ಜ್ವಲಿತಕುಂಡಲಮ್ ।
ವೃತ್ತಕಂಠಂ ಸುಪೀನಾಂಸಂ ಸರಸಂ ಶ್ರೀಧರಂ ಹರಿಮ್ ॥ ೩೧ ॥

ಸುಕುಮಾರಮಜಂ ನಿತ್ಯಂ ನೀಲಕುಂಚಿತಮೂರ್ಧಜಮ್ ।
ಉನ್ನತಾಂಸಂ ಮಹೋರಸ್ಕಂ ಕರ್ಣಾಂತಾಯತಲೋಚನಮ್ ॥ ೩೨ ॥

ಹೇಮಾರವಿಂದವದನಮಿಂದಿರಾಯನಮೀಶ್ವರಮ್ ।
ಸರ್ವಲೋಕವಿಧಾತಾರಂ ಸರ್ವಪಾಪಹರಂ ಹರಿಮ್ ॥ ೩೩ ॥

ಬಣ್ಣದ ಮುಗಿಲಿಗೆ ಸಮನೂ, ಉದ್ದವಾದ ತೋಳುಗಳುಳ್ಳವನೂ, ಸಮೀಚೀನವಾದ ಗೂಢವಾದ ಅವಯುವವುಳ್ಳವನೂ, ರನ್ನದ ಸರದಿಂದೆಸೆವೆದೆಯುಳ್ಳವನೂ, ಸುಂದರಗಳಾದ ಹುಬ್ಬುಗಳುಳ್ಳವನೂ, ಒಳಿತಾದ ಹಣೆ ಮತ್ತು ಕಿರೀಟ ಇವುಳ್ಳವನೂ, ಹೊಳೆಯುವ ಹಲ್ಲುಗಳುಳ್ಳವನೂ,ಸುಂದರಗಳಾದ ದೃಷ್ಟಿಯುಳ್ಳವನೂ, ಮನೋಹರಗಳಾದ ತೋಳುಗಳುಳ್ಳವನೂ, ಒಳ್ಳೆಯ ಚೆಂದುಟಿಯುಳ್ಳವನೂ, ರನ್ನಗಳಿಂದ ಪ್ರಕಾಶಗೊಂಡ ಕರ್ಣಾಭರಣಗಳುಳ್ಳವನೂ, ಬಟ್ಟಕತ್ತುಳ್ಳವನೂ, ಮನೋಹರನೂ, ಶ್ರೀಧರನೂ, ಭಜಕರ ಪಾಪಗಳನ್ನು ಕಳೆಯುವವನೂ, ಕೋಮಲನೂ, ಉತ್ಪತ್ತಿಯಿಲ್ಲದವನೂ, ನಾಶರಹಿತನೂ, ನೀಲವರ್ಣವುಳ್ಳವನೂ, ವಕ್ರವಾಗಿ ಕಿರಿದಾದುದೂ ಆದ ತಲೆಗೂದಲುಳ್ಳವನೂ, ಎತ್ತರವಾದ ಭುಜಶಿರಸ್ಸುಳ್ಳವನೂ, ವಿಶಾಲವಾದ ಎದೆಯುಳ್ಳವನೂ, ಕಿವಿಗಳವರೆಗೂ ಅಗಲವಾದ ಕಣ್ಣುಳ್ಳವನೂ ಚಿನ್ನದ ತಾವರೆಯಂತೆ ಮೊಗವುಳ್ಳವನೂ, ಲಕ್ಷ್ಮೀನಿವಾಸನೂ, ಸ್ವಾಮಿಯೂ, ಸರ್ವಲೋಕಕರ್ತೃವೂ ಸರ್ವಪಾಪಗಳನ್ನು ಕಳೆಯುವವನೂ, ಶ್ರೀಹರಿಯೂ,

ಸರ್ವಲಕ್ಷಣಸಂಪನ್ನಂ ಸರ್ವಸತ್ತ್ವಮನೋರಮಮ್ ।
ವಿಷ್ಣುಮಚ್ಯುತಮೀಶಾನಮನಂತಂ ಪುರುಷೋತ್ತಮಮ್ ॥ ೩೪ ॥

ನತೋಽಸ್ಮಿ ಮನಸಾ ನಿತ್ಯಂ ನಾರಾಯಣಮನಾಮಯಮ್ ।
ವರದಂ ಕಾಮದಂ ಕಾಂತಮನಂತಂ ಸೂನೃತಂ ಶಿವಮ್ ॥ ೩೫ ॥

ನಮಾಮಿ ಶಿರಸಾ ವಿಷ್ಣೋ ಸದಾ ತ್ವಾಂ ಭಕ್ತವತ್ಸಲ ।
ಅಸ್ಮಿನ್ನೇಕಾರ್ಣವೇ ಘೋರೇ ವಾಯುಸ್ತಂಭಿತಚಂಚಲೇ ॥ ೩೬ ॥

ಅನಂತಭೋಗಶಯನೇ ಸಹಸ್ರಫಣಶೋಭಿತೇ ।
ವಿಚಿತ್ರಶಯನೇ ರಮ್ಯೇ ಸೇವಿತೇ ಮಂದವಾಯುನಾ ॥ ೩೭ ॥

ಭುಜಪಂಜರಸಂಸಕ್ತಕಮಲಾಲಯಸೇವಿತಂ ।
ಇಹ ತ್ವಾಂ ಮನಸಾ ಸರ್ವಮಿದಾನೀಂ ದೃಷ್ಟವಾನಹಮ್ ॥ ೩೮ ॥

ಸಕಲಮಂಗಳ ಚಿಹ್ನೆಗಳಿಂದ ಕೂಡಿದವನೂ, ಸರ್ವಪ್ರಾಣಿಗಳಿಗೂ ಮನೋಹರನಾದವನೂ, ವ್ಯಾಪ್ತನಾದ ವಿಷ್ಣುವೂ, ಚ್ಯುತಿರಹಿತನಾದ ಅಚ್ಯುತನೂ, ಅಣಿಮಾದ್ಯಷ್ಟೈಶ್ವರ್ಯಪೂರ್ಣನೂ, ನಾಶವಿಲ್ಲದ ಅನಂತನೂ, ಕ್ಷರಾಕ್ಷರಪುರುಷರಿಂದುತ್ತಮನಾದ ಪುರುಷೋತ್ತಮನೂ, ಜ್ವರಾದಿರೋಗವಿಲ್ಲದ ಅನಾಮಯನೂ, ಭಕ್ತರಿಗೆ ಇಷ್ಟಾರ್ಥವನ್ನು ಸಲ್ಲಿಸುವ ವರದನೂ, ಬಯಕೆಯನ್ನು ಸಲ್ಲಿಸುವ ಕಾಮದನೂ, ಮನೋಹರನೂ ಕರುಣಾಳುವೂ, ಮಂಗಳಕರನೂ, ಗುಣಪೂರ್ಣನೂ, ದೋಷದೂರನೂ, ಜ್ಞಾನಿಪ್ರಾಪ್ಯನೂ, ಮುಕ್ತಾಶ್ರಯನೂ, ಕ್ಷೀರಸಾಗರ ಶಾಯಿಯೂ ಆದ ಶ್ರೀಮನ್ನಾರಾಯಣನನ್ನು ನಿತ್ಯವೂ ಮನಃಪೂರ್ವಕವಾಗಿ ನಮಸ್ಕರಿಸುತ್ತೇನೆ.

೩೬–೩೮. ಎಲೈ ಭಕ್ತಪ್ರಿಯನಾದ ವಿಷ್ಣುವೇ! ನಿನ್ನನ್ನು ಯಾವಾಗಲೂ ತಲೆಬಾಗಿ ನಮಸ್ಕರಿಸುತ್ತೇನೆ. ವಾಯುವಿನಿಂದ ಅಡಗಿಸಿದ ಚಾಂಚಲ್ಯವುಳ್ಳ ಭಯಂಕರವಾದ ಈ ಏಕಾರ್ಣವದಲ್ಲಿ ಎಳೆಯೆಲರಿಂದ ಸೇವೆಗೊಂಡ' ಮನೋಹರವಾದ ಪಾಸಿಗೆಯಾದ ಸಾವಿರ ಹೆಡೆಗಳಿಂದಲಂಕೃತನಾದ, ಆದಿಶೇಷನ ಒಡಲು ಪಾಸಿನಲ್ಲಿ ತೋಳ್ಗಳಪಂಜರದಲ್ಲಿ ಸಿಕ್ಕಿಕೊಂಡಿರುವ ಮಹಾಲಕ್ಷ್ಮೀದೇವಿಯಿಂದ ಸೇವೆಗೊಳ್ಳುತ್ತಿರುವ, ಸರ್ವಾತ್ಮಕನಾದ ನಿನ್ನನ್ನು ಇಲ್ಲಿ ಈಗ ನಾನು ಮನದಿಂದ ಕಂಡೆನು. (ಅರಿತೆನು.)

ಇದಾನೀಂ ತು ಸುದುಃಖಾರ್ತೋ ಮಾಯಯಾ ತವ ಮೋಹಿತಃ
ಏಕೋದಕೇ ನಿರಾಲಂಬೇ ನಷ್ಟಸ್ಥಾವರಜಂಗಮೇ ॥ ೩೯ ॥

ಶೂನ್ಯೇ ತಮಸಿ ದುಃಪಾರೇ ದುಃಖಪಂಕೇ ನಿರಾಮಯೇ ।
ಶೀತಾತಪಜ್ವರಾರೋಗಶೋಕತೃಷ್ಣಾದಿಭಿಃ ಸದಾ ॥ ೪೦ ॥

ಪೀಡಿತೋಽಸ್ಮಿ ಭೃಶಂ ತಾತ ಸುಚಿರಂ ಕಾಲಮಚ್ಯುತ ।
ಶೋಕಮೋಹಗ್ರಹಗ್ರಸ್ತೋ ವಿಚರನ್ಭವಸಾಗರೇ ॥ ೪೧ ॥

ಇಹಾದ್ಯ ವಿಧಿನಾ ಪ್ರಾಪ್ತಸ್ತವ ಪಾದಾಬ್ಜಸನ್ನಿಧೌ ।
ಏಕಾರ್ಣವೇ ಮಹಾಘೋರೇ ದುಸ್ತರೇ ದುಃಖಪೀಡಿತಃ ॥ ೪೨ ॥

೩೯–೪೧. ಈಗ ನಾನು ನಿನ್ನ ಇಚ್ಛಾರೂಪವಾದ ಮಾಯೆಯಿಂದ ಮೋಹಗೊಂಡವನೂ, ಆದುದರಿಂದಲೇ ಬಹು ದುಃಖದಿಂದ ಬಾಧಿತನೂ ಆಗಿ ಸ್ಥಾವರ ಜಂಗಮಶೂನ್ಯವಾದ, ಆಶ್ರಯವಿಲ್ಲದ ಏಕಾರ್ಣವದಲ್ಲಿ ನಿನ್ನನ್ನು ಹೊರತು ಯಾವ ವಸ್ತುವೂ ಇಲ್ಲದ, ದಾಟಲಶಕ್ಯವಾದ ದುಃಖವೆಂಬ ಕೆಸರುಳ್ಳ ನೀರೋಗವಾದ ತಮಸ್ಸಿನಲ್ಲಿ ತಣ್ಣು, ಬಿಸಿಲು, ಜ್ವರ, ರೋಗ, ಕಷ್ಟ, ಆಸೆ, ಇವೇ ಮೊದಲಾದವುಗಳಿಂದ ಯಾವಾಗಲೂ, ಎಲೈ ತಂದೆಯಾದ ಅಚ್ಯುತನೇ! ಬಹುಕಾಲ ಸಂಸಾರವೆಂಬ ಸಾಗರದಲ್ಲಿ ಶೋಕಮೋಹಗಳೆಂಬ ಗರದಿಂದ ಹಿಡಿದವನಾಗಿ ಸಂಚರಿಸುತ್ತಾ, ಅತ್ಯಂತವಾಗಿ ಪೀಡಿತನಾಗಿರುತ್ತೇನೆ.

೪೨. ಇಂದು ಇಲ್ಲಿ ಬಹು ಭಯಂಕರವೂ, ದಾಟಲಸಾಧ್ಯವೂ ಆದ ಏಕಾರ್ಣವದಲ್ಲಿ ದುಃಖದಿಂದ ಬಾಧೆಗೊಂಡವನಾಗಿ ನಿನ್ನ ಪಾದಕಮಲದ ಹತ್ತಿರಕ್ಕೆ ದೈವಯೋಗದಿಂದ ಬಂದವನಾಗಿರುತ್ತೇನೆ.

ಚಿರಭ್ರಮಪರಿಶ್ರಾಂತಸ್ತ್ವಾಮದ್ಯ ಶರಣಂ ಗತಃ ।
ಪ್ರಸೀದ ಸುಮಹಾಮಾಯ ವಿಷ್ಣೋ ರಾಜೀವಲೋಚನ ॥ ೪೩ ॥

ವಿಶ್ವಯೋನೇ ವಿಶಾಲಾಕ್ಷ ವಿಶ್ವಾತ್ಮನ್ವಿಶ್ವಸಂಭವ ।
ಅನನ್ಯಶರಣಂ ಪ್ರಾಪ್ತಮತೋಽತ್ರಿಕುಲನಂದನ ॥ ೪೪ ॥

ತ್ರಾಹಿ ಮಾಂ ಕೃಪಯಾ ಕೃಷ್ಣ ಶರಣಾಗತಮಾತುರಮ್ ।
ನಮಸ್ತೇ ಪುಂಡರೀಕಾಕ್ಷ ಪುರಾಣಪುರುಷೋತ್ತಮ ॥ ೪೫ ॥

ಅಂಜನಾಭ ಹೃಷೀಕೇಶ ಮಾಯಾಮಯ ನಮೋಽಸ್ತು ತೇ ।
ಮಾಮುದ್ಧರ ಮಹಾಬುದ್ಧೇ ಭಗ್ನಂ ಸಂಸಾರ ಸಾಗರೇ ॥ ೪೬ ॥

---

೪೩. ಶ್ರೇಷ್ಠವಾದ ಹಿರಿದಾದ ಪ್ರಕೃತಿಯನ್ನು ವಶದಲ್ಲಿಟ್ಟುಕೊಂಡಿರುವ ಪುಂಡರೀಕಾಕ್ಷನಾದ ವಿಷ್ಣುವೇ ! ಬಹುಕಾಲ ತೊಳಲಿ ಆಯಾಸಗೊಂಡವನಾಗಿ ನಾನು ಇಂದು ನಿನ್ನನ್ನು ಮರೆಹೊಕ್ಕಿರುತ್ತೇನೆ.

೪೪-೪೫. ಎಲೈ ವಿಶ್ವಕ್ಕೆ ಉತ್ಪತ್ತಿಸ್ಥಾನನೇ ! ವಿಸ್ತಾರವಾದ ಕಣ್ಗಳುಳ್ಳವನೇ ! ವಿಶ್ವನಿಯಾಮಕನೇ ! ಜಗತ್ಸ್ರಷ್ಟೃವೇ ಅತ್ರಿಕುಲವನ್ನು ನಿನ್ನ ಅವತಾರದಿಂದ ಸಂತಸಗೊಳಿಸಿದವನೇ ! ಇನ್ನು ಮತ್ತಾರೂ ದಿಕ್ಕಿಲ್ಲದೇ ಬಂದಿರುವ, ನಿನ್ನನ್ನೇ ಮರೆ ಹೊಕ್ಕಿರುವ, ರುಗ್ಣನಾದ ನನ್ನನ್ನು ಕರುಣೆಯಿಂದ ಕಾಪಾಡು; ಎಲೈ ಪುಂಡರೀಕಾಕ್ಷನೇ! ಪುರಾಣನಾದ ಪುರುಷೋತ್ತಮನೇ ! ನಿನಗೆ ನಮಸ್ಕಾರ.

೪೬. ಎಲೈ ಕಾಡಿಗೆಯಂತೆ ಕಾಂತಿಯುಳ್ಳವನೇ ! ಸರ್ವೇಂದ್ರಿಯನಿಯಾಮಕನೇ ! ಪ್ರಚುರವಾದ ಮಾಯೆಯುಳ್ಳವನೇ ! ನಿನಗೆ ನಮಸ್ಕಾರ ; ಎಲೈ ಮಹಾಬಾಹುವೇ ! ಸಂಸಾರಸಾಗರದಲ್ಲಿ ಬನ್ನಗೊಂಡ ನನ್ನನ್ನು ಉದ್ಧರಿಸು.

ಗಹ್ವರೇ ದುಸ್ತರೇ ದುಃಖಕ್ಲಿಷ್ಟೇ ಕ್ಲೇಶಮಹಾಗ್ರಹೈಃ ।
ಅನಾಥಂ ಕೃಪಣಂ ದೀನಂ ಪತಿತಂ ಭವಸಾಗರೇ ।
ಮಾಂ ಸಮುದ್ಧರ ಗೋವಿಂದ ವರದೇಶ ನಮೋಽಸ್ತು ತೇ ॥ ೪೭ ॥

ನಮಸ್ತ್ರೈಲೋಕ್ಯನಾಥಾಯ ಹರಯೇ ಭೂಧರಾಯ ಚ ।
ದೇವ ದೇವ ನಮಸ್ತೇಽಸ್ತು ಶ್ರೀವಲ್ಲಭ ನಮೋಽಸ್ತು ತೇ ॥ ೪೮ ॥

ಕೃಷ್ಣ ಕೃಷ್ಣ ಕೃಪಾಲುಸ್ತ್ವಮಗತೀನಾಂ ಗತಿರ್ಭವಾನ್ ।
ಸಂಸಾರಾರ್ಣವಮಗ್ನಾನಾಂ ಪ್ರಸೀದ ಮಧುಸೂದನ ॥ ೪೯ ॥

ತ್ವಾಮೇಕಮಾದ್ಯಂ ಪುರುಷಂ ಪುರಾಣಂ
ಜಗತ್ಪತಿಂ ಕಾರಣಮಚ್ಯುತಂ ಪ್ರಭುಮ್ ।
ಜನಾರ್ದನಂ ಜನ್ಮಜರಾರ್ತಿನಾಶನಂ
ಸುರೇಶ್ವರಂ ಸುಂದರಮಿಂದಿರಾಪತಿಮ್ ॥ ೫೦ ॥

---

೪೭. ಎಲೈ ಗೋವಿಂದನೇ! ಹುಗಲಾಗದ, ದಾಟಲಶಕ್ಯವಾದ, ಕ್ಲೇಶವೆಂಬ ದೊಡ್ಡಪಿಶಾಚಿಯಿಂದಾದ ದುಃಖಕ್ಲೇಶವುಳ್ಳ ಸಂಸಾರ ಸಮುದ್ರದಲ್ಲಿ ಬಿದ್ದಿರುವ, ದಿಕ್ಕಿಲ್ಲದ ದುಃಖಿಯಾದ, ದೀನನಾದ, ನನ್ನನ್ನು ಉದ್ಧರಿಸು; ಎಲೈ ವರವನ್ನು ಕೊಡುವವರಿಗೂ ಒಡೆಯನೇ! ನಿನಗೆ ನಮಸ್ಕಾರ.

೪೮. ಸ್ವರ್ಗಮರ್ತ್ಯಪಾತಾಳಗಳಿಗೆ ಒಡೆಯನಾದವನೂ, ಭೂಧರನೂ ಆದ ಶ್ರೀ ಹರಿಗೆ ನಮಸ್ಕಾರವು. ಎಲೈ ದೇವದೇವನೇ! ನಿನಗೆ ನಮಸ್ಕಾರವು. ಎಲೈ ಶ್ರೀಪತಿಯೇ! ನಿನಗೆ ನಮಸ್ಕಾರ ಮಾಡುತ್ತೇನೆ.

೪೯. ಎಲೈ ಕೃಷ್ಣ ಕೃಷ್ಣ! ನೀನು ಕೃಪಾಶಾಲಿಯು; ಗತಿಯಿಲ್ಲದವರಿಗೆ ನೀನೇ ಗತಿಯು; ಎಲೈ ಮಧುಸೂದನನೇ! ಸಂಸಾರ ಸಮುದ್ರದಲ್ಲಿ ಮುಳುಗಿದವರಿಗೆ ಪ್ರಸನ್ನನಾಗು.

೫೦-೫೧. ಸಜಾತೀಯ ದ್ವಿತೀಯರಹಿತನೂ, ಜಗತ್ತಿಗೆ ಮೊದಲಿಗನೂ, ಸರ್ವ ಶರೀರಗಳಲ್ಲಿರುವವನೂ, ಪೂರ್ಣಸುಖನೂ, ಎಲ್ಲರಿಗೂ ಹಳಬನೂ, ಸಕಲಲೋಕಗಳಿಗೂ ಒಡೆಯನೂ, ಎಲ್ಲದಕ್ಕೂ ನಿಮಿತ್ತಕಾರಣನೂ, ನಾಶರಹಿತನೂ, ನಿಗ್ರಹಾನು

ಬೃಹದ್ಭುಜಂ ಶ್ಯಾಮಲಕೋಮಲಂ ಶುಭಂ
ವರಾನನಂ ವಾರಿಜಪತ್ರನೇತ್ರವತ್ ।
ತರಂಗಭಂಗಾಯತ ಕುಂತಲಂ ಹರಿಂ
ಸುಕಾಂತಮೀಶಂ ಪ್ರಣತೋಽಸ್ಮಿ ಶಾಶ್ವತಮ್ ॥ ೫೧ ॥

ಸಾ ಜಿಹ್ವಾ ಯಾ ಹರಿಂ ಸ್ತೌತಿ ತಚ್ಚಿತ್ತಂ ಯತ್ತದರ್ಪಿತಮ್ ।
ತಾವೇವ ಕೇವಲೌ ಶ್ಲಾಘ್ಯೌ ಯೌ ತ್ವತ್ಪೂಜಾಕರೌ ಕರೌ ॥ ೫೨ ॥

ಜನ್ಮಾಂತರ ಸಹಸ್ರೇಷು ಯನ್ಮಯಾ ಪಾತಕಂ ಕೃತಮ್ ।
ತನ್ಮೇ ಹರ ತ್ವಂ ಗೋವಿಂದ ವಾಸುದೇವೇತಿ ಕೀರ್ತನಾತ್ ॥ ೫೩ ॥

ಗ್ರಹ ಸಮರ್ಥನೂ, ದುಷ್ಟಜನಹಿಂಸಕನೂ, ಹುಟ್ಟು, ಮುಪ್ಪು, ಪೀಡೆ, ಇವುಗಳನ್ನು ಹೋಗಲಾಡಿಸುವವನೂ, ದೇವತೆಗಳೊಡೆಯನೂ, ಚೆಲುವನೂ, ಲಕ್ಷ್ಮೀಪತಿಯೂ, ಹಿರಿದಾದ ತೋಳುಗಳುಳ್ಳವನೂ, ಶ್ಯಾಮಲಬಣ್ಣವುಳ್ಳವನಾಗಿ ಕೋಮಲನಾಗಿರುವವನೂ, ತಾವರೆಯ ಎಸಳಿನಂತೆ ಕಣ್ಣುಳ್ಳವನೂ, ಅಲೆಯಂತೆ ವಕ್ರವಾಗಿಯೂ, ಉದ್ದವಾಗಿಯೂ, ಇರುವ ಮುಂಗುರುಳುಳ್ಳವನೂ, ಕಡುಚೆಲುವನೂ, ಒಡೆಯನೂ, ಯಾವಾಗಲೂ ಏಕರೀತಿಯಾಗಿರುವವನೂ, ಆದ ಶ್ರೀ ಹರಿಗೆ ನಮಸ್ಕರಿಸುತ್ತೇನೆ.

೫೨. ಯಾವುದು ಶ್ರೀ ಹರಿಯನ್ನು ನುತಿಸುತ್ತದೆಯೋ ಆ ನಾಲಗೆಯೇ ಸಾರ್ಥಕವಾಗದ ನಾಲಗೆಯು, ಯಾವ ಯಾವ ಮನಸ್ಸು ; ಯಾವ ಕೈಗಳು ಸ್ವಾಮಿಯಾದ ನಿನ್ನ ಪೂಜೆಯನ್ನೆಸಗುವುವೋ ಅವೇ ಸ್ತುತ್ಯಗಳಾದುವುಗಳು.

೫೩. ಎಲೈ ಗೋವಿಂದನೇ! ವಾಸುದೇವನೆಂಬ ನಿನ್ನ ನಾಮೋಚ್ಚಾರಣೆ ಮಾಡಿದುದರಿಂದ ನಾನು ಸಾವಿರಾರು ಜನ್ಮಾಂತರಗಳಲ್ಲಿ ಯಾವ ಪಾತಕಕಾರ್ಯಗಳನ್ನೆಸಗಿರುವೆನೋ, ಆ ನನ್ನ ಪಾಪಗಳೆಲ್ಲವನ್ನೂ ನೀನು ಪರಿಹರಿಸು.'

॥ ವ್ಯಾಸ ಉವಾಚ ॥

ಇತಿ ಸ್ತುತಸ್ತತೋ ವಿಷ್ಣುರ್ಮಾರ್ಕಂಡೇಯೇನ ಧೀಮತಾ ।
ಸಂತುಷ್ಟಃ ಪ್ರಾಹ ವಿಶ್ವಾತ್ಮಾ ತಂ ಮುನಿಂ ಗರುಡಧ್ವಜಃ ॥ ೫೪ ॥

॥ ಶ್ರೀ ಭಗವಾನುವಾಚ ॥

ಪ್ರೀತೋಽಸ್ಮಿ ತಪಸಾ ವಿಪ್ರ ಸ್ತುತ್ಯಾ ಚ ಭೃಗುನಂದನ ।
ವರಂ ವೃಣೀಷ್ವ ಭದ್ರಂ ತೇ ಪ್ರಾರ್ಥಿತಂ ದದ್ಮಿ ತೇ ವರಮ್ ॥ ೫೫ ॥

॥ ಮಾರ್ಕಂಡೇಯ ಉವಾಚ ॥

ತ್ವತ್ಪಾದಪದ್ಮೇ ದೇವೇಶ ಭಕ್ತಿಂ ಮೇ ದೇಹಿ ಸರ್ವದಾ ।
ಯದಿ ತುಷ್ಟೋ ಮಮಾದ್ಯ ತ್ವಮನ್ಯದೇಕಂ ವೃಣೋಮ್ಯಹಮ್ ॥ ೫೬ ॥

ವ್ಯಾಸಮುನಿಯು ಹೇಳುತ್ತಾನೆ:—

೫೪. 'ಇಂತು ಜ್ಞಾನಿಯಾದ ಮಾರ್ಕಂಡೇಯನು ಶ್ರೀ ಮಹಾವಿಷ್ಣುವನ್ನು ನುತಿಸಲು, ಅನಂತರ ವಿಶ್ವನಿಯಾಮಕನೂ, ಗರುಡಧ್ವಜನೂ, ಆದ ಶ್ರೀ ಹರಿಯು ಸಂತಸಗೊಂಡು, ಆ ಮುನಿಗೆ ಇಂತು ಹೇಳಿದನು.

ಶ್ರೀ ಭಗವಂತನು ಹೇಳುತ್ತಾನೆ:—

೫೫. 'ಎಲೈ ಭೃಗುಪುತ್ರನಾದ ಬ್ರಾಹ್ಮಣನೇ! ನಿನ್ನ ತಪಸ್ಸಿನಿಂದಲೂ ಸ್ತುತಿಯಿಂದಲೂ ಸಂತೋಷಗೊಂಡಿರುತ್ತೇನೆ. ನಿನಗೆ ಕಲ್ಯಾಣಕರವಾದ ಅಭೀಷ್ಟವನ್ನು ಕೇಳು; ಬೇಡಿದ ವರವನ್ನು ನಿನಗೆ ಅನುಗ್ರಹಿಸುವೆನು.'

ಮಾರ್ಕಂಡೇಯನು ಹೇಳುತ್ತಾನೆ:—

೫೬. 'ಎಲೈ ದೇವತೆಗಳೊಡೆಯನೇ! ಇಂದು ನೀನು ನನ್ನ ವಿಷಯದಲ್ಲಿ ಪ್ರಸನ್ನನಾಗಿದ್ದರೆ, ನನಗೆ ಯಾವಾಗಲೂ ನಿನ್ನ ಅಡಿದಾವರೆಯಲ್ಲಿ ಭಕ್ತಿಯನ್ನು ಅನುಗ್ರಹಿಸು; ನಿನ್ನನ್ನು ಮತ್ತೊಂದು ವರವನ್ನು ಕೇಳಿಕೊಳ್ಳುವೆನು.

ಸ್ತೋತ್ರೇಣಾನೇನ ದೇವೇಶ ಯಸ್ತ್ವಾಂ ಸ್ತೋಷ್ಯತಿ ನಿತ್ಯಶಃ ।
ಸ್ವರ್ಲೋಕವಸತಿಂ ತಸ್ಯ ದೇಹಿ ದೇವ ಜಗತ್ಪತೇ ॥ ೫೭ ॥

ದೀರ್ಘಾಯುಸ್ತ್ವಂ ತು ಯದ್ದತ್ತಂ ತ್ವಯಾ ಮೇ ತಪ್ಯತಃ ಪುರಾ ।
ತತ್ಸರ್ವಂ ಸಫಲಂ ಜಾತಮಿದಾನೀಂ ತವ ದರ್ಶನಾತ್ ॥ ೫೮ ॥

ವಸ್ತುಮಿಚ್ಛಾಮಿ ದೇವೇಶ ತವ ಪಾದಾಬ್ಜಮರ್ಚಯನ್ ।
ಅತ್ರೈವ ಭಗವನ್ನಿತ್ಯಂ ಜನ್ಮಮೃತ್ಯುವಿವರ್ಜಿತಃ ॥ ೫೯ ॥

॥ ಶ್ರೀ ಭಗವಾನುವಾಚ ॥

ಮಯ್ಯಸ್ತು ತೇ ಭೃಗುಶ್ರೇಷ್ಠ ಭಕ್ತಿರವ್ಯಭಿಚಾರಿಣೀ ।
ಭಕ್ತ್ಯಾ ಮುಕ್ತಿರ್ಭವತ್ಯೇವ ತವ ಕಾಲೇನ ಸತ್ತಮ ॥ ೬೦ ॥

---

೫೭. ಎಲೈ ದೇವೇಶನೇ! ಜಗನ್ನಾಥನೇ! ಸ್ವಾಮಿಯೇ! ಯಾವಾತನು ನಿನ್ನನ್ನು ಈ ಸ್ತೋತ್ರದಿಂದ ನಿತ್ಯವೂ ನುತಿಸುವನೋ, ಅವನಿಗೆ ಸ್ವರ್ಗಲೋಕದಲ್ಲಿ ವಾಸವನ್ನು ಅನುಗ್ರಹಿಸು.

೫೮. ಹಿಂದೆ ತಪವನ್ನೆಸಗುತ್ತಲಿದ್ದ ನನಗೆ ನೀನು ಯಾವ ಬಹುಕಾಲದ ಬಾಳನ್ನು ದಯೆಗೆಯ್ದಿತ್ತಿಯೋ, ಅದೆಲ್ಲವೂ ಈಗ ದೇವೋತ್ತಮನಾದ ನಿನ್ನ ದರ್ಶನದಿಂದ ಸಫಲವಾಯಿತು.

೫೯. ಎಲೈ ಭಗವಂತನೇ! ನಾನು ಹುಟ್ಟು, ಸಾವುಗಳಿಲ್ಲದೇ ಇಲ್ಲಿಯೇ ನಿನ್ನ ಅಡಿದಾವರೆಯನ್ನು ನಿತ್ಯವೂ ಸೇವಿಸುತ್ತಾ ವಾಸಿಸಲು ಬಯಸುತ್ತೇನೆ’.

ಶ್ರೀ ಭಗವಂತನು ಹೇಳುತ್ತಾನೆ :—

೬೦. “ಎಲೈ ಭೃಗುಶ್ರೇಷ್ಠನೇ! ನಿನಗೆ ಶ್ರದ್ಧಾಯುಕ್ತವಾದ ಭಕ್ತಿಯು ನನ್ನಲ್ಲಿ ಉಂಟಾಗಲಿ; ಎಲೈ ಉತ್ತಮನೇ! ನಿನಗೆ ಕೆಲಗಾಲದ ಮೇಲೆ ಭಕ್ತಿಯಿಂದ ಮೋಕ್ಷವು ನಿಶ್ಚಯವಾಗಿ ಲಭಿಸುವುದು.

ಯಸ್ತ್ವಿದಂ ಪಠತೇ ಸ್ತೋತ್ರಂ ಸಾಯಂ ಪ್ರಾತಸ್ತ್ವೇರಿತಮ್ ।
ಮಯಿ ಭಕ್ತಿಂ ದೃಢಾಂ ಕೃತ್ವಾ ಮಮ ಲೋಕೇ ಸ ಮೋದತೇ ॥ ೬೧ ॥

ಯತ್ರ ಯತ್ರ ಭೃಗುಶ್ರೇಷ್ಠ ಸ್ಥಿತಸ್ತ್ವಂ ಮಾಂ ಸ್ಮರಿಷ್ಯಸಿ ।
ತತ್ರ ತತ್ರ ಸಮೋಷ್ಯಾಮಿ ದರ್ಶಯನ್ ಮಾಂ ಸಮರ್ಚಯ ॥ ೬೨ ॥

॥ ವ್ಯಾಸ ಉವಾಚ ॥

ಇತ್ಯುಕ್ತ್ವಾ ತಂ ಮುನಿಶ್ರೇಷ್ಠಂ ಮಾರ್ಕಂಡೇಯಂ ಸ ಮಾಧವಃ ।
ವಿರರಾಮ ಸ ಸರ್ವತ್ರ ಪಶ್ಯನ್ ವಿಷ್ಣುಂ ಯತಃ ಸ್ಥಿತಮ್ ॥ ೬೩ ॥

ಇತಿ ತೇ ಕಥಿತಂ ವಿಪ್ರ ಚರಿತಂ ತಸ್ಯ ಧೀಮತಃ ।
ಮಾರ್ಕಂಡೇಯಸ್ಯ ಚ ಮುನೇಸ್ತೇನೈವೋಕ್ತಂ ಪುರಾ ಮಮ ॥ ೬೪ ॥

---

೬೧. ಯಾವಾತನು ನೀನು ನುತಿಸಿದ ಈ ಸ್ತೋತ್ರವನ್ನು ಹೊತ್ತಾರೆ ಮತ್ತು ಬೈಗು– ಈ ಹೊತ್ತುಗಳಲ್ಲಿ ನನ್ನಲ್ಲಿ ದೃಢವಾದ ಭಕ್ತಿಯನ್ನಿಟ್ಟು ಪಠಿಸುತ್ತಾನೆಯೋ ಅವನು ನನ್ನ ಲೋಕದಲ್ಲಿ ಸುಖಿಸುತ್ತಾನೆ.

೬೨. ಎಲೈ ಭೃಗುಶ್ರೇಷ್ಠನೇ! ನೀನು ಎಲ್ಲೆಲ್ಲಿದ್ದು ನನ್ನನ್ನು ಸ್ಮರಿಸುವೆಯೋ ನಾನು ಅಲ್ಲಲ್ಲಿಗೆ ಉದಾರನಾಗಿ ಬರುವೆನು. ಅಲ್ಲಲ್ಲಿ ನನ್ನನ್ನು ಕಾಣುತ್ತಾ ಪೂಜಿಸು."

ಶ್ರೀ ವ್ಯಾಸ ಮುನಿಯು ಹೇಳುತ್ತಾನೆ :—

೬೩. ಆ ಮಾಧವನು ಆ ಮುನಿಶ್ರೇಷ್ಠನಾದ ಮಾರ್ಕಂಡೇಯನಿಗೆ ಇಂತು ನುಡಿದು ಸುಮ್ಮನಾದನು. ಆ ಮಾರ್ಕಂಡೇಯನೂ ಎಲ್ಲೆಡೆಗಳಲ್ಲಿಯೂ ಇದ್ದ ವಿಷ್ಣುವನ್ನು ನೋಡುತ್ತಲಿದ್ದನು.

೬೪. ಎಲೈ ಶುಕನೇ! ಆ ಜ್ಞಾನಿಯಾದ ಮಾರ್ಕಂಡೇಯ ಮುನಿಯ ಚರಿತೆಯನ್ನು ನಿನಗೆ ಹೇಳಿದೆನು. ಹಿಂದೆ ಆ ಮುನಿಯೇ ನನಗೆ ಇದನ್ನು ಹೇಳಿದ್ದನು.

ಯೇ ವಿಷ್ಣುಭಕ್ತಾ್ಯ ಚರಿತಂ ಪುರಾಣಂ
ಭೃಗೋಸ್ತು ಪೌತ್ರಸ್ಯ ಪಠಂತಿ ನಿತ್ಯವ್ ।
ತೇ ಮುಕ್ತಪಾಪಾ ನರಸಿಂಹಲೋಕೇ
ವಸಂತಿ ಭಕ್ತೈರಭಿಪೂಜ್ಯಮಾನಾಃ ॥ ೬೫ ॥

ಇತಿ ಶ್ರೀ ನರಸಿಂಪುರಾಣೇ ಮಾರ್ಕಂಡೇಯ ಚರಿತಂ ನಾಮ
ಏಕಾದಶಶ್ಚ ದ್ವಾದಶಶ್ಚಾಧ್ಯಾಯೌ

---

೬೫. ಯಾರು ಶ್ರೀ ಮಹಾವಿಷ್ಣುವಿನಲ್ಲಿ ಭಕ್ತಿಯಿಂದ ಭೃಗುವಿನ ಮುಮ್ಮಗನಾದ ಮಾರ್ಕಂಡೇಯನ ಪ್ರಾಚೀನವಾದ ಚರಿತೆಯನ್ನು ನಿತ್ಯವೂ ಪಠಿಸುತ್ತಾರೆಯೋ, ಅವರು ಪಾಪಗಳನ್ನು ಕಳೆದುಕೊಂಡು, ಭಕ್ತರಿಂದ ಸೇವಿಸಲ್ಪಡುತ್ತಾ ಶ್ರೀ ನರಸಿಂಹಸ್ವಾಮಿಯ ವೈಕುಂಠಾದಿಲೋಕಗಳಲ್ಲಿ ವಾಸಮಾಡುತ್ತಾರೆ,' ಎಂದು ವ್ಯಾಸಮುನಿಯು ಶುಕಮುನಿಗೆ ನಿರೂಪಿಸಿದುದನ್ನು ಸೂತರು ಭಾರದ್ವಾಜನಿಗೆ ಹೇಳಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಮಾರ್ಕಂಡೇಯ ಚರಿತೆಯೆಂಬ
ಹನ್ನೊಂದನೆಯ ಮತ್ತು ಹನ್ನೆರಡನೆಯ ಅಧ್ಯಾಯಗಳು
ಮುಗಿದುವು.

ಹನ್ನೊಂದು ಮತ್ತು ಹನ್ನೆರಡು ಈ ಅಧ್ಯಾಯಗಳ ವಿಷಯಸಂಗ್ರಹವು

ಈ ಅಧ್ಯಾಯಗಳಲ್ಲಿ, " ಮಾರ್ಕಂಡೇಯ ಮುನಿಯು ಹಿಂದೆ ಶ್ರೀಮನಾರಾಯಣನು ಹೇಳಿದಂತೆ ಅವನನ್ನು ಸಂದರ್ಶಿಸಲು ಕ್ಷೀರಸಮುದ್ರಕ್ಕೆ ಹೋಗಿ, ಅಲ್ಲಿ ಆದಿಶೇಷನ ಮೇಲೆ ಯೋಗನಿದ್ರೆಯಿಂದ ಪವಡಿಸಿದ ಶ್ರೀ ಹರಿಯನ್ನು ಅನೇಕ ತೆರನಾಗಿ ಕೊಂಡಾಡುವನು. ಇವನ ಸ್ತುತಿಗೂ, ತಪಸ್ಸಿಗೂ ಭಗವಂತನು ಮೆಚ್ಚಿ ಪ್ರಸನ್ನನಾಗಿ, ವರವನ್ನು ಬೇಡೆನಲು ಆ ಜ್ಞಾನಿಯಾದ ಮುನಿಯು ತನಗೆ ಶ್ರೀ ಹರಿಯ ಅಡಿದಾವರೆಯಲ್ಲಿ ದೃಢಭಕ್ತಿಯುಂಟಾಗಬೇಕೆಂದು ಪ್ರಾರ್ಥಿಸಿದುದಲ್ಲದೇ, ಯಾರು ತಾನು ಮಾಡಿದ ಸ್ತುತಿಯನ್ನು ಪಠಿಸುತ್ತಾರೆಯೋ, ಅವರಿಗೂ ಸ್ವರ್ಗಪ್ರಾಪ್ತಿಗಯಾಬೇಕಂದು ಬೇಡುವನು. ಶ್ರೀಮನ್ನಾರಾಯಣನು ಆ ಮುನಿಗೆ ಅಂತೆಯೇ ತನ್ನಲ್ಲಿ ಭಕ್ತಿಯುಂಟಾಗಲಿ ಎಂದು ಅನುಗ್ರಹಿಸಿ, ಆ ತೆರನಾಗಿ ಭಕ್ತಿ ಮಾಡುವುದರಿಂದ ಕೆಲಗಾಲದ ಮೇಲೆ ಮುಕ್ತನೂ ಆಗುವೆಯೆಂದು ಹೇಳಿ, ಅವನ ಇಷ್ಟದಂತೆ ಆ ಸ್ತೋತ್ರ ಪಠಿಸಿದವರಿಗೆ ತನ್ನ ಲೋಕಪ್ರಾಪ್ತಿಯಾಗುವುದೆಂದು ವರವಿತ್ತು ಸುಮ್ಮನಾಗುವನು. ಮಾರ್ಕಂಡೇಯನು ಜ್ಞಾನಿಯಾದುದರಿಂದ ಭಗವಂತನನ್ನು ಎಲ್ಲೆಲ್ಲಿಯೂ ಕಾಣುವನು, " ಎಂಬ ಮಾರ್ಕಂಡೇಯ ಚರಿತೆಯನ್ನು ವ್ಯಾಸಮುನಿಯು ಶುಕಮುನಿಗೆ ಹೇಳಿದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿರುತ್ತಾರೆ.

ಇಂತು ಹನ್ನೊಂದು ಮತ್ತು ಹನ್ನೆರಡು ಈ ಅಧಾಯಗಳ ವಿಷಯ ಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ತ್ರಯೋದಶೋಽಧ್ಯಾಯಃ

ಯಮೀ ಯಮ ಸಂವಾದ:

॥ ಸೂತ ಉವಾಚ ॥

ಶ್ರುತ್ವೇಮಾಮಮೃತಾಂ ಪುಣ್ಯಾಂ ಸರ್ವಪಾಪಪ್ರಣಾಶಿನೀಮ್ ।
ಅವಿತೃಪ್ತಸ್ಸ ಧರ್ಮಾತ್ಮಾ ಶುಕೋ ವ್ಯಾಸಮಭಾಷತ ॥ ೧ ॥

॥ ಶ್ರೀ ಶುಕ ಉವಾಚ ॥

ಅಹೋಽತೀವ ತಪಶ್ಚರ್ಯಾ ಮಾರ್ಕಂಡೇಯಸ್ಯ ಧೀಮತಃ ।
ಯೇನ ದೃಷ್ಟೋ ಹರಿಸ್ಸಾಕ್ಷಾದ್ಯೇನ ಮೃತ್ಯುಃ ಪರಾಜಿತಃ ॥ ೨ ॥

ಸೃಷ್ಟಿಕಾಂಡವು ; ಹದಿಮೂರನೆಯ ಅಧ್ಯಾಯವು
ಯಮೀಯಮರ ಸಂವಾದವು

ಸೂತರು ಭರದ್ವಾಜನಿಗೆ ಇಂತು ಹೇಳುತ್ತಾರೆ :—

೧. "ಧರ್ಮಾತ್ಮನಾದ ಶುಕಮುನಿಯು ಸಕಲಪಾಪಗಳನ್ನೂ ಕಳೆಯುವ, ಪುಣ್ಯವನ್ನೂ, ಮುಕ್ತಿಯನ್ನೂ ದೊರಕಿಸುವ ಈ ಮಾರ್ಕಂಡೇಯ ಚರಿತೆಯನ್ನು ಕೇಳಿ, ತೃಪ್ತಿಪಡೆಯದೇ, ವ್ಯಾಸಮುನಿಯನ್ನು ಕುರಿತು, ಇಂತು ನುಡಿದನು.

ಶ್ರೀ ಶುಕನು ಹೇಳುತ್ತಾನೆ :—

೨. ಯಾವ ತಪಶ್ಚರ್ಯೆಯಿಂದ ಶ್ರೀ ಹರಿಯು ಪ್ರತ್ಯಕ್ಷನಾಗಿ ಪ್ರಸನ್ನನಾದನೋ, ಮೃತ್ಯುವೂ ತಿರಸ್ಕೃತನಾದನೋ, ಆ ಜ್ಞಾನಿಯಾದ ಮಾರ್ಕಂಡೇಯ ಮುನಿಯ ತಪಶ್ಚರ್ಯೆಯು ಅತ್ಯಂತವಾಗಿ ಆಶ್ಚರ್ಯವನ್ನುಂಟುಮಾಡುವುದು.

ನ ತೃಪ್ತಿರಸ್ತಿ ಮೇ ತಾತ ಶ್ರುತ್ವೇಮಾಂ ವೈಷ್ಣವೀಂ ಕಥಾಮ್ ।
ಪುಣ್ಯಾಂ ಪಾಪಹರಾಂ ತಾತ ತಸ್ಮಾದನ್ಯತ್ತು ಮೇ ವದ ॥ ೩ ॥

ನರಾಣಾಂ ದೃಢಚಿತ್ತಾನಾಮಕಾರ್ಯಂ ನೇಹ ಕುರ್ವತಾಮ್ ।
ಯತ್ಪುಣ್ಯಮೃಷಿಭಿಃ ಪ್ರೋಕ್ತಂ ತನ್ಮೇ ವದ ಮಹಾಮತೇ ॥ ೪ ॥

॥ ವ್ಯಾಸ ಉವಾಚ ॥

ನರಾಣಾಂ ದೃಢಚಿತ್ತಾನಾಮಿಹ ಲೋಕೇ ಪರತ್ರ ಚ ।
ಪುಣ್ಯಂ ಯತ್ಸ್ಯಾನ್ಮುನಿಶ್ರೇಷ್ಠ ತನ್ಮೇ ನಿಗದತಃ ಶೃಣು ॥ ೫ ॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ಯಮ್ಯಾ ಚ ಸಹ ಸಂವಾದಂ ಯಮಸ್ಯ ಚ ಮಹಾತ್ಮನಃ ॥ ೬ ॥

---

೩. ಎಲೈ ತಂದೆಯೇ! ಪುಣ್ಯಸಂಪಾದಕವೂ, ಪಾಪನಾಶಕವೂ ಆದ ಈ ವಿಷ್ಣುಭಕ್ತನಾದ ಮಾರ್ಕಂಡೇಯನ ಈ ಕಥೆಯನ್ನು ಕೇಳಿ, ನನಗೆ ತೃಪ್ತಿಯುಂಟಾಗಲಿಲ್ಲವು. ನನಗೆ ಮತ್ತೊಂದು ಚರಿತೆಯನ್ನು ಹೇಳು.

೪. ಎಲೈ ಮಹಾಮತಿಯಾದ ತಂದೆಯೇ! ಇಹಲೋಕದಲ್ಲಿ ದುಷ್ಕೃತ್ಯವನ್ನೆಸಗದ, ದೃಢಚಿತ್ತರಾದ ಮಾನವರಿಗೆ ಎಂತಹ ಪುಣ್ಯವು ಲಭಿಸುವುದೆಂದು ಜ್ಞಾನಿಗಳಾದ ಮುನಿಗಳು ಹೇಳಿದ್ದಾರೆಯೋ, ಅದನ್ನು ನನಗೆ ದಯಮಾಡಿ ಹೇಳು ; ಎಂದು ಕೇಳಿದನು.

ಆಗ ವ್ಯಾಸಮುನಿಯು ಹೇಳುತ್ತಾನೆ:—

೫. "ಎಲೈ ಮುನಿಶ್ರೇಷ್ಠನಾದ ಶುಕನೇ! ದೃಢಮನಸ್ಕರಾದ ನರರಿಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ, ಯಾವ ಪುಣ್ಯವು ಲಭಿಸುವುದೋ, ಅದನ್ನರುಹುವೆನು ; ಸಡ್ಡೆಯಿಂದ ಕೇಳು.

೬. ಮಹಾತ್ಮನಾದ ಯಮನು ತನ್ನ ಸಹೋದರಿಯೊಡನೆ ಮಾಡಿದ ಸಂವಾದ ಪುರಾತನವಾದ, ರೂಪವಾದ ಇತಿಹಾಸವನ್ನು ಜ್ಞಾನಿಗಳು ಈ ವಿಷಯದಲ್ಲಿ ಹೇಳುತ್ತಾರೆ.

ವಿವಸ್ವಾನದಿತೇಃ ಪುತ್ರಸ್ತಸ್ಯ ಪುತ್ರೌ ಸುವರ್ಚಸೌ ।
ಜಜ್ಞಾತೇ ಸ ಯಮಶ್ಚೈವ ಯಮೀ ಚಾಪಿ ಯವೀಯಸೀ ॥ ೭ ॥

ತೌ ತತ್ರ ಸಂವಿವರ್ಧೇತೇ ಪಿತುರ್ಭವನ ಉತ್ತಮೇ ।
ಕ್ರೀಡಮಾನೌ ಸ್ವಭಾವೇನ ಸ್ವಚ್ಛಂದಗಮನಾವುಭೌ ॥ ೮ ॥

ಯಮೀ ಯಮಂ ಸಮಾಸಾದ್ಯ ಸ್ವಸಾ ಭ್ರಾತರಮಬ್ರವೀತ್ ।

॥ ಯಮ್ಯುವಾಚ ॥

ನ ಭ್ರಾತಾ ಭಗಿನೀಂ ಯೋಗ್ಯಾಂ ಕಾಮಯಂತೀಂ ಚ ಕಾಮಯೇತ್ ॥ ೯ ॥

ಭ್ರಾತೃಭೂತೇನ ಕಿಂ ತಸ್ಯ ಸ್ವಸುರ್ಯೋ ನ ಪತಿರ್ಭವೇತ್ ।
ಅಭೂತ ಇವ ಸ ಜ್ಞೇಯೋ ನನು ಭೂತಃ ಕಥಂ ಚ ನ ॥ ೧೦ ॥

---

೭. " ಅದಿತಿದೇವಿಗೆ ವಿವಸ್ವಂತನೆಂಬ ಸೂರ್ಯನು ಮಗನು. ಅವನಿಗೆ ಬಹು ವರ್ಚಸ್ವಿಯಾದ ಈರ್ವರು ಮಕ್ಕಳು ಹುಟ್ಟಿದರು. ಆ ಯಮನೊಬ್ಬನು. ಯಮೀ ಎಂಬವಳು ಅವನಿಗೆ ಕಿರಿಯವಳು.

೮. ಅವರೀರ್ವರು ಮಕ್ಕಳೂ ಆ ಉತ್ತಮವಾದ ತಂದೆಯ ಮನೆಯಲ್ಲಿಯೇ ಸ್ವಭಾವದಿಂದ ಮನಬಂದಂತೆ ನಡೆಯುತ್ತಾ, ಆಟವಾಡುತ್ತಾ ಬಳೆದರು. ತಂಗೆಯಾದ ಯಮಿಯು ಅಣ್ಣನಾದ ಯಮನನ್ನು ಹೊಂದಿ ಇಂತು ಹೇಳಿದಳು.

ಯಮಿಯು ಹೇಳುತ್ತಾಳೆ :—

೯-೧೦. " ಎಲೈ ಅಣ್ಣನೇ ! ಅಣ್ಣನಾದವನು ತನ್ನನ್ನು ಮೋಹಿಸುತ್ತಿರುವ ಯೋಗ್ಯಳಾದ ತಂಗೆಯನ್ನು ಕಾಮಿಸದಿದ್ದಲ್ಲಿ, ತನ್ನ ತಂಗೆಗೆ ಯಾವ ಆ ಅಣ್ಣನು ಪತಿಯಾಗುವುದಿಲ್ಲವೋ, ಅಂತಹವನು ಅಣ್ಣನಾಗಿರುವುದರಿಂದ ಫಲವೇನು ? ಅವನು ಹುಟ್ಟಲಿಲ್ಲವೆಂದೇ ತಿಳಿಯಬೇಕು. ಅವನು ಎಂತಹ ಪ್ರಾಣಿಯು ?

ಅನಾಥಾಂ ನಾಥಮಿಚ್ಛಂತೀಂ ಸ್ವಸಾರಂ ಯೋ ನ ನಾಥತಿ ।
ಕಾಂಕ್ಷಂತೀಂ ಭ್ರಾತರಂ ನಾಥಂ ಭರ್ತಾರಂ ಯಸ್ತು ನೇಚ್ಛತಿ ॥ ೧೧ ॥

ಭ್ರಾತೇತಿ ನೋಚ್ಯತೇ ಲೋಕೇ ಸ ಪುಮಾನ್ಮುನಿಸತ್ತಮಃ ।
ಸ್ಯಾದ್ಧ್ಯಾನ್ಯತನಯಾ ತಸ್ಯ ಭಾರ್ಯಾ ಭವತಿ ಕಿಂ ತಯಾ ॥ ೧೨ ॥

ಇಚ್ಛತಸ್ತು ಸ್ವಸಾ ಭ್ರಾತುಃ ಕಾಮೇನ ಪರಿದಹ್ಯತೇ ।
ಯತ್ಕಾರ್ಯಮಹಮಿಚ್ಛಾಮಿ ತ್ವಮೇವೇಚ್ಛ ತದೇವ ಹಿ ॥ ೧೩ ॥

ಅನ್ಯಥಾಽಹಂ ಮರಿಷ್ಯಾಮಿ ತ್ವಾಮಿಚ್ಛಂತೀ ವಿಚೇತನಾ ।
ಕಾಮದುಃಖಮಸಹ್ಯಂ ನು ಭ್ರಾತಃ ಕಿಂ ತ್ವಂ ನ ಚೇಚ್ಛಸಿ ॥ ೧೪ ॥

೧೧-೧೨. ಯಾವನು ಪತಿಯಿಲ್ಲದ, ಪತಿಯನ್ನು ಬಯಸುವ ಸೋದರಿಯನ್ನು ಕೋರುವುದಿಲ್ಲವೋ, ಅಣ್ಣನನ್ನು ದಿಕ್ಕಾದ ಗಂಡನನ್ನಾಗಿ ಮೋಹಿಸುವವಳನ್ನು ಯಾವನು ಅಪೇಕ್ಷಿಸುವುದಿಲ್ಲವೋ, ಮುನಿಶ್ರೇಷ್ಠನಾದ ಆ ಪುರುಷನು ಲೋಕದಲ್ಲಿ ಅಣ್ಣನೆನಿಸಿಕೊಳ್ಳುವುದಿಲ್ಲ. ಅವನಿಗೆ (ಮತ್ತೊಬ್ಬನ) ಪೆರನ ಮಗಳು ಹೆಂಡತಿಯಾಗಲಿ ; ಅವಳಿಂದ ಏನು ಪ್ರಯೋಜನ ?

೧೩. ಮೋಹಗೊಂಡ ಅಣ್ಣನ ತಂಗೆಯು ಕಾಮದಿಂದ ಸುಡಲ್ಪಡುತ್ತಿದ್ದಾಳೆ. ನಾನು ಯಾವ ಕೆಲಸವನ್ನು ಅಪೇಕ್ಷಿಸುತ್ತೇನೆಯೋ ನೀನೂ ಅದನ್ನೇ ಅಪೇಕ್ಷಿಸಬೇಕಷ್ಟೆ ?

೧೪. ಹಾಗಾಗದಿದ್ದಲ್ಲಿ ನಿನ್ನನ್ನು ಮೋಹಿಸುತ್ತಿರುವ ನಾನು ಎಚ್ಚರವಿಲ್ಲದೇ ಸಾಯುವೆನು. ಮೋಹದಿಂದುಂಟಾಗುವ ದುಃಖ ಸಹಿಸಲಸದಳವಲ್ಲವೇ ? (ಅಣ್ಣನೇ !) ಸೋದರನೇ ! ನೀನು ನನ್ನನ್ನು ಮೋಹಿಸುವುದಿಲ್ಲವೆ ?

ಕಾಮಾಗ್ನಿನಾ ಭೃಶಂ ತಪ್ತಾ ಪ್ರಲಯಾಮ್ಯಂಗ ಮಾ ಚಿರಮ್ ।
ಕಾಮಾರ್ತಾಯಾಃ ಸ್ತ್ರಿಯಾಃ ಕಾಂತ ವಶಗೋ ಭವ ಮಾ ಚಿರಮ್ ॥ ೧೫ ॥

ಸ್ವೇನ ಕಾಯೇನ ಮೇ ಕಾಯಂ ಸಂಯೋಜಯಿತುಮರ್ಹಸಿ ।
ಕಿಮಿದಂ ಲೋಕವಿದ್ವಿಷ್ಟಂ ಧರ್ಮಂ ಭಗಿನಿ ಭಾಷಸೇ ॥ ೧೬ ॥

॥ ಯಮ ಉವಾಚ ॥

ಅಕಾರ್ಯಮಿಹ ಕಃ ಕುರ್ಯಾತ್ಪುಮಾನ್ಭದ್ರೇ ಸುಚೇತನಃ ।
ನ ತೇ ಸಂಯೋಜಯಿಷ್ಯಾಮಿ ಕಾಯಂ ಕಾಯೇನ ಭಾಮಿನಿ ॥ ೧೭ ॥

ನ ಭ್ರಾತಾ ಮದನಾರ್ತಾಯಾಃ ಸ್ವಸುಃ ಕಾಮಂ ಪ್ರಯಚ್ಛತಿ ।
ಮಹಾಪಾತಕಮಿತ್ಯಾಹುಃ ಸ್ವಸಾರಂ ಯೋಽಧಿಗಚ್ಛತಿ ॥ ೧೮ ॥

---

೧೫. ಅಯ್ಯಾ ! ಕಾಮಾಗ್ನಿಯಿಂದ ತುಂಬ ಸುಟ್ಟು ನಾಶವನ್ನೈದುವೆನು ; ತಡಮಾಡಬೇಡ ; ಎಲೈ ಕಾಂತನೇ ! ಕಾಮಪೀಡಿತಳಾದ ಸ್ತ್ರೀಯಾದ ನನಗೆ ವಶನಾಗು : ತಳುವಬೇಡ.

೧೬. ನಿನ್ನೊಡಲಿಂದ ನನ್ನ ಒಡಲನ್ನು ಸೇರಿಸಲು ಅರ್ಹನಾಗಿದ್ದೀಯೆ', ಎಂದು ಯಮಿಯು ನುಡಿಯಲು ; ಯಮನು ಹೇಳುತ್ತಾನೆ; 'ಎಲೈ ತಂಗಿಯೇ ! ನೀನು ಲೋಕದಲ್ಲಿ ಹಳಿದ ಕೆಲಸವನ್ನು ಏಕೆ ಹೇಳುತ್ತೀಯೆ ?

೧೭. ಎಲೈ ಮಂಗಳಕರಳೇ ! ಯೋಗ್ಯನಾದ ಯಾವ ಪುರುಷನು ಇಲ್ಲಿ ಈ ಕಾರ್ಯವನ್ನೆಸಗುವನು ? ಎಲೈ ಸುಂದರಿಯೇ ! ನಿನ್ನ ಶರೀರವನ್ನು ನನ್ನ ಶರೀರದಿಂದ ಸೇರಿಸುವುದಿಲ್ಲ.

೧೮. ಸಹೋದರನು ಮನ್ಮಥನಿಂದ ಪೀಡಿತಳಾದ ಸಹೋದರಿಯ ಬಯಕೆಯನ್ನುಂಟುಮಾಡುವುದಿಲ್ಲ. ಯಾವನು ಸಹೋದರಿಯನ್ನನುಭವಿಸುತ್ತಾನೆಯೋ, ಅವನನ್ನು ಮಹಾಪಾತಕಿಯೆಂದು ಹೇಳುವರು.

ಪಶೂನಾಮೇಷಧರ್ಮಃ ಸ್ಯಾತ್ತಿರ್ಯಗ್ಯೋನಿವತಾಂ ಶುಭೇ ।

॥ ಯಮ್ಯುವಾಚ ॥

ಏಕಸ್ಥಾನೇ ಯಥಾಪೂರ್ವಂ ಸಂಯೋಗೋ ನೌ ನ ದುಷ್ಯತಿ ॥ ೧೯ ॥

ಮಾತೃಗರ್ಭೇ ತಥೈವಾಯಂ ಸಂಯೋಗೋ ನೌ ನ ದುಷ್ಯತಿ ।
ಕಿಂ ಭ್ರಾತಸ್ತ್ವದ್ಯ ನಾಥತ್ವಂ ಮಮ ನೇಚ್ಛಸಿ ಶೋಭನಮ್ ॥ ೨೦ ॥

॥ ಯಮ ಉವಾಚ ॥

ಸ್ವಸಾರಂ ನಿರ್ಋತಿಂ ರಕ್ಷೋ ಸಂಗಚ್ಛತಿ ಚ ನಿತ್ಯಶಃ ।
ಸ್ವಯಂಭುವಾಪ್ಯನಿಂದ್ಯೇತಲ್ಲೋಕವೃತ್ತಂ ಜುಗುಪ್ಸಿತಮ್ ॥ ೨೧ ॥

ಪ್ರಧಾನಪುರುಷಾಚೀರ್ಣಂ ಲೋಕೋಽಯಮನುವರ್ತತೇ ।
ತಸ್ಮಾದನಿಂದಿತಂ ಧರ್ಮಂ ಪ್ರಧಾನಪುರುಷಶ್ಚರೇತ್ ॥ ೨೨ ॥

೧೯–೨೦. ಎಲೈ ಮಂಗಳಕರಳೇ! ಇದು ತಿರ್ಯಜ್ಞಾನವುಳ್ಳ ಪಶುಗಳ ಧರ್ಮವಾಗಿರುವುದು," ಎಂದು ಯಮನು ಹೇಳಲು, ಯಮಿಯು ಇಂತು ನುಡಿಯುತ್ತಾಳೆ. ಎಂತು ಒಂದು ತಾಣದಲ್ಲಿ, ತಾಯಿಯ ಬಸುರಿನಲ್ಲಿ ನಮ್ಮೀರ್ವರ ಸಂಬಂಧವು ನಿಂದ್ಯವಲ್ಲವೋ, ಅಂತೆಯೇ ನಮ್ಮೀರ್ವರ ಈ ಸಂಬಂಧವೂ ನಿಂದ್ಯವಲ್ಲವು. ಎಲೈ ಅಣ್ಣನೇ! ಇಂದು ನೀನು ನನಗೆ ಒಳ್ಳಿತಾದ ಒಡೆತನವನ್ನು ಬಯಸುವುದಿಲ್ಲವೇ?

೨೧. ನಿರ್ಋತನೆಂಬ ರಾಕ್ಷಸನು ತನ್ನ ತಂಗೆಯಾದ ನಿರ್ಋತಿಯೆಂಬವಳನ್ನು ನಿತ್ಯವೂ ಅನುಭವಿಸುತ್ತಾನೆ;" ಎಂದು ಯಮಿಯು ಹೇಳಲು, ಯಮನು ನುಡಿಯುತ್ತಾನೆ. "ಬ್ರಹ್ಮನೂ ನೀನು ಹೇಳಿದ ಅಸಹ್ಯವಾದ ಈ ಜನರ ನಡತೆಯನ್ನು ಹಳಿದಿದ್ದಾನೆ.

೨೨. ಈ ಲೋಕವು ಉತ್ತಮ ಮಾನವನು ಎಸಗಿದ ಕೆಲಸವನ್ನೇ ಹಿಂಬಾಲಿಸುತ್ತದೆ. ಆದುದರಿಂದ ದೊಡ್ಡವನಾದ ಮನುಷ್ಯನು ನಿರ್ದುಷ್ಟವಾದ ಹಳಿಯದ ಧರ್ಮವನ್ನಾ ಚರಿಸಬೇಕು.

ನಿಂದಿತಂ ವರ್ಜಯೇದ್ಯತ್ನಾದೇತದ್ಧರ್ಮಸ್ಯ ಲಕ್ಷಣಮ್ ।
ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ॥ ೨೩ ॥

ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ।
ಅತಿಪಾಪಮಹಂ ಮನ್ಯೇ ಸುಭಗೇ ವಚನಂ ತವ ॥ ೨೪ ॥

ವಿರುದ್ಧಂ ಸರ್ವಧರ್ಮೇಷು ಲೋಕೇಷು ಚ ವಿಶೇಷತಃ ।
ಮತ್ತೋಽನ್ಯೋ ಯೋ ಭವೇದ್ಯೋ ವೈ ವಿಶಿಷ್ಟೋ ರೂಪಶೀಲತಃ ॥ ೨೫ ॥

ತೇನ ಸಾರ್ಧಂ ಪ್ರಮೋದಸ್ವ ನ ತೇ ಭರ್ತಾ ಭವಾಮ್ಯಹಮ್ ।
ನಾಹಂ ಸ್ಪೃಶಾಮಿ ತನ್ವಾ ತೇ ತನುಂ ಭದ್ರೇ ದೃಢವ್ರತಃ ॥ ೨೬ ॥

---

೨೩. ಹಳಿಯತಕ್ಕ ಕೆಲಸವನ್ನು ಪ್ರಯತ್ನಪೂರ್ವಕವಾಗಿ ಬಿಡಬೇಕು. ಇದೇ ಧರ್ಮದ ಕುರುಹು. ಹಿರಿಯನು, ಉತ್ತಮನು ಆವಾವುದನ್ನಾಚರಿಸುತ್ತಾನೆಯೋ ಇತರರಾದ ಜನರೂ ಅವನ್ನೇ ಆಚರಿಸುತ್ತಾರೆ.

೨೪. ಹಿರಿಯನು ಯಾವುದನ್ನು (ತತ್ವಜ್ಞಾನಸಾಧನವೆನ್ನುತ್ತಾನೆಯೋ ಪ್ರಮಾಣವೆಂದು ಹೇಳುತ್ತಾನೆಯೋ, ಪ್ರಪಂಚವೂ ಅದನ್ನೇ ಅನುಸರಿಸುತ್ತದೆ. ಎಲೈ ಪುಣ್ಯಶಾಲಿನಿಯೇ! ನೀನು ನುಡಿದ ನುಡಿಯು ಅತ್ಯಂತ ಪಾಪಸಾಧನವೆಂದು ನಾನು ತಿಳಿಯುತ್ತೇನೆ.

೨೫-೨೬. ನೀನು ಹೇಳಿದುದು ಎಲ್ಲಾ ಧರ್ಮಗಳಲ್ಲಿಯೂ ದುಷ್ಟವಾದುದು. ಈ ಜಗತ್ತಿನಲ್ಲಿ ಇನ್ನೂ ಹೆಚ್ಚಾಗಿ ಹಳಿಯತಕ್ಕದ್ದಾಗಿರುವುದು. ನನ್ನಿಂದ ಬೇರೆ ಯಾವನಾದರೂ ರೂಪಶೀಲಗಳಿಂದ ಉತ್ತಮನಾದವನು ಇರುತ್ತಾನೆಯೋ, ಅವನೊಡನೆ ಸುಖಪಡು. ನಾನು ನಿನಗೆ ಪತಿಯಾಗುವುದಿಲ್ಲವು. ಎಲೈ ಮಂಗಳಕರಳೇ! ಕಠಿನವಾದ ನಿಯಮವಿರುವ ನಾನು ನನ್ನ ಒಡಲಿನಿಂದ ನಿನ್ನ ಒಡಲನ್ನು ಮುಟ್ಟುವುದಿಲ್ಲ.

ಮುನಯಃ ಪಾಪಮಾಹುಸ್ತಂ ಯಃ ಸ್ವಸಾರಂ ನಿಗೃಹ್ಣತಿ ।

॥ ಯಮ್ಯುವಾಚ ॥

ದುರ್ಲಭಂ ತ್ವೈವ ಪಶ್ಯಾಮಿ ಲೋಕೇ ರೂಪಮಿಹೇದೃಶಮ್ ।
ಯತ್ರ ರೂಪಂ ವಯಶ್ಚೈವ ಪೃಥಿವ್ಯಾಂ ಕ್ವ ಪ್ರತಿಷ್ಠಿತಮ್ ॥ ೨೭ ॥

ನ ವಿಜಾನಾಮಿ ತೇ ಚಿತ್ತಂ ಕುತ ಏತತ್ಪ್ರತಿಷ್ಠಿತಮ್ ।
ಆತ್ಮರೂಪಗುಣೋಪೇತಾಂ ನ ಕಾಮಯತಿ ಮೋಹಿತಾಮ್ ॥ ೨೮ ॥

ಹೃದಯಂ ನ ವಿಜಾನಾಮಿ ಸ್ಯಾದ್ವೈ ಕೇನ ನಿವೇದಿತಮ್ ।
ಅನ್ಯಾ ವಾ ಕರಿಣಾ ಹಸ್ತಿಕಕ್ಷೇವ ತನುಮಧ್ಯಮಾ ॥ ೨೯ ॥

ಲತೇವ ಪಾದಪೇ ಮಗ್ನಾ ಕಾಮಂ ತ್ವಚ್ಚರಣಂ ಗತಾ ।
ಬಾಹುಭ್ಯಾಂ ಸಂಪರಿಷ್ವಜ್ಯ ನಿವಸಾಮಿ ಶುಚಿಸ್ಮಿತಾ ॥ ೩ ॥

---

೨೭. ಜ್ಞಾನಿಗಳು, ಯಾವನು ತಂಗೆಯನ್ನು ಪರಿಗ್ರಹಿಸುವನೋ, ಅವನನ್ನು ಪಾಪಾತ್ಮನೆಂದು ಹೇಳುತ್ತಾರೆ,' ಎಂದು ಯಮನು ಹೇಳಲು, ಯಮಿಯು ಮತ್ತೂ ಹೇಳುತ್ತಾಳೆ:— 'ಈ ಜಗತ್ತಿನಲ್ಲಿ ನಿನಗಿರುವಂತಹ ರೂಪವುಳ್ಳವನು ದುರ್ಲಭನೆಂದು ನಾನು ತಿಳಿಯುತ್ತೇನೆ. ಈ ಪೊಡವಿಯಲ್ಲಿ ರೂಪವೂ, ಹರಯವೂ ಒಂದೆಡೆಯಲ್ಲಿ ಎಲ್ಲಿರುವುವು?

೨೮. ನಿನ್ನ ಹೃದಯವನ್ನು ನಾನು ಅರಿಯಲಾರೆ; ನಿನ್ನ ರೂಪು, ಗುಣ, ಇವುಗಳಿಗೆ ಸಮಾನಗಳಾದ ರೂಪು ಮತ್ತು ಗುಣ, ಇವುಗಳಿಂದ ಕೂಡಿ, ನಿನ್ನನ್ನು ಮೋಹಿಸಿದವಳನ್ನು ನೀನು ಬಯಸದೇ ಇರುವುದು ಏತಕ್ಕೆ ಉಂಟಾಯಿತು?

೨೯. ಆನೆಯಿಂದ ಪೆರಳಾಗಿ, ಪಿಡಿಯ ನಡುವಿನಂತೆ ಅಸಿನಡುವುಳ್ಳ ನಾನು ನಿನ್ನ ಮನೋಗತವನ್ನು ತಿಳಿಯಲಾರೆನು. ನಿನಗೆ ಇಂತು ಹೇಳಿದವರಾರಿರಬಹುದು?

೩೦. ಮರದಲ್ಲಿ ಕಾಣದಂತೆ ಸೇರಿರುವ ಬಳ್ಳಿಯಂತೆ, ಅತ್ಯಂತವಾಗಿ ನಿನ್ನನ್ನೇ ಮರೆಹೊಕ್ಕಿರುವವಳಾಗಿರುತ್ತೇನೆ. ಕಪಟವರಿಯದ ಎಳನಗೆಯುಳ್ಳ ನಾನು ತೋಳುಗಳಿಂದ ನಿನ್ನನ್ನು ತಳ್ಕೈಸಿ ಬಾಳುವೆನು.'

॥ ಯಮ ಉವಾಚ ॥

ಅನ್ಯಂ ಶ್ರಯಸ್ವ ಸುಶ್ರೋಣಿ ದೇವಂ ದೇವ್ಯಸಿತೇಕ್ಷಣೇ ।
ಮತ್ತದಂತೀವ ಹಸ್ತಿನ್ಯಾಃ ಪರಿಷ್ವಂಗಂ ಕರಿಷ್ಯತಿ ॥ ೩೧ ॥

ಯಸ್ತು ತೇ ಕಾಮಮೋಹೇನ ಚೇತಸಾ ವಿಭ್ರಮಂ ಗತಃ ।
ತಸ್ಯ ದೇವಸ್ಯ ದೇವಿ ತ್ವಂ ಭವೇಥಾ ವರವರ್ಣಿನಿ ॥ ೩೨ ॥

ಈಪ್ಸಿತಾಂ ಸರ್ವಭೂತಾನಾಂ ವರ್ಧ್ಯಾಂ ಶಂಸಂತಿ ಮಾನವಾಃ ।
ಸುಭದ್ರಾಂ ಚಾರುಸರ್ವಾಂಗೀಂ ಸಂಸ್ಕೃತಾಂ ಪರಿಚಕ್ಷತೇ ॥ ೩೩ ॥

ತತ್ಕೃತೇಽಪಿ ಸುವಿದ್ವಾಂಸೋ ನ ಕರಿಷ್ಯಂತಿ ದೂಷಣಮ್ ।
ಪರಿತಾಪಂ ಮಹಾಪ್ರಾಜ್ಞೇ ನ ಕರಿಷ್ಯೇ ದೃಢವ್ರತಃ ॥ ೩೪ ॥

ಚಿತ್ತಂ ಮೇ ನಿರ್ಮಲಂ ಭದ್ರೇ ವಿಷ್ಣೌ ರುದ್ರೇ ಚ ಸಂಸ್ಥಿತಮ್ ।
ಅತಃ ಪಾಪಂ ನ ನೇಚ್ಛಾಮಿ ಧರ್ಮಚಿತ್ತೋ ದೃಢವ್ರತಃ ॥ ೩೫ ॥

---

೩೧. ಎಂದು ಯಮಿಯು ಹೇಳಲು, ಯಮನು ಹೇಳುತ್ತಾನೆ :—' ಎಲೈ ಸುಶ್ರೋಣಿ ! ನೀಲಲೋಚನೇ ! ದೇವಿ ! ಬೇರೆಯೊಬ್ಬ ದೇವನನ್ನು ಹೊಂದುವ ಳಾಗು ; ಪಿಡಿಯನ್ನು ಕೊಬ್ಬಿದ ಸಲಗನಂತೆ ನಿನ್ನನ್ನು ತಳ್ಕೈಸಿಕೊಳ್ಳುವನು.

೩೨. ಎಲೈ ಶ್ರೇಷ್ಠವರ್ಣವುಳ್ಳವಳೇ ! ಮನ್ಮಥಮೋಹಗೊಂಡ ಮನಸ್ಸಿನಿಂದ ಯಾವನು ವಿಲಾಸಗೊಳ್ಳುವನೋ ಆ ದೇವನಿಗೆ ನೀನು ದೇವಿಯಾಗುವೆ.

೩೩. ಮಾನವರು ಆಗ ನಿನ್ನನ್ನು ಎಲ್ಲ ಪ್ರಾಣಿಗಳಿಗೂ ಬೇಕಾದವಳು ಮತ್ತು ಉತ್ತಮಳು ಎಂದು ಹೊಗಳುತ್ತಾರೆ ; ಅಲ್ಲದೆ ಮಂಗಳಮೂರ್ತಿಯು ಸುಂದರ ವಾದ ಸರ್ವಾವಯವವುಳ್ಳವಳು, ಮತ್ತು ಸಂಸ್ಕೃತಳು, ಎಂದೂ ಹೇಳುತ್ತಾರೆ.

೩೪–೩೫. ನಾನು ನುಡಿದಂತೆ ನೀನು ಒಮ್ಮೆ ನಡೆದರೂ ಉತ್ತಮಜ್ಞಾನಿಗಳು ಹಳಿಯುವುದಿಲ್ಲ. ಆದುದರಿಂದ ಎಲೈ ಹೆಚ್ಚಿನ ಅರಿವುಳ್ಳವಳೇ ! ಕಠಿನವ್ರತನೂ, ಧರ್ಮಾಚರಣೆಯ ಮನಸ್ಸುಳ್ಳವನೂ ಆದ ನಾನು ಪಾಪಕರ್ಮವನ್ನೆಸಗಲೆಳಸುವುದಿಲ್ಲ ವೆಂದು ಯಮನು ಹೇಳಿದನು.'

॥ ವ್ಯಾಸ ಉವಾಚ ॥

ಅಸಕೃತ್ಪ್ರೋಚ್ಯಮಾನೋಽಪಿ ತಯಾ ಚೈವಂ ದೃಢವ್ರತಃ ।
ಕೃತವಾನ್ನಿಯಮಃ ಕಾರ್ಯಂ ತೇನ ದೇವತ್ವಮಾಪ್ತವಾನ್ ॥ ೩೬ ॥

ನರಾಣಾಂ ದೃಢಚಿತ್ತಾನಾಮೇವಂ ಪಾಪಮುಕುರ್ವತಾಮ್ ।
ಅನಂತಂ ಫಲಮಿತ್ಯಾಹುಸ್ತೇಷಾಂ ಸ್ವರ್ಗಫಲಂ ಭವೇತ್ ॥ ೩೭ ॥

ಏತತ್ತು ಯಮ್ಯುಪಾಖ್ಯಾನಂ ಪೂರ್ವವೃತ್ತಂ ಸನಾತನಮ್ ।
ಸರ್ವಪಾಪಹರಂ ಪುಣ್ಯಂ ಶ್ರೋತವ್ಯಮನಸೂಯಯಾ ॥ ೩೮ ॥

ಯಶ್ಚೈತತ್ಪಠತೇ ನಿತ್ಯಂ ಹವ್ಯಕವ್ಯೇಷು ಬ್ರಾಹ್ಮಣಃ ।
ಸಂತೃಪ್ತಾಃ ಪಿತರಸ್ತಸ್ಯ ನ ವಿಶಂತಿ ಯಮಾಲಯಮ್ ॥ ೩೯ ॥

---

೩೬. ವ್ಯಾಸಮುನಿಯು ಹೇಳುತ್ತಾನೆ:—' ಯಮಿಯು ಇಂತು ಮೇಲಿಂದ ಮೇಲೆ ಹೇಳಿದರೂ, ಕಠಿನನಿಯಮನಾದ ಯಮನು, ಅಪಳಿಕಜ್ಜವನೆಸಗಲಿಲ್ಲವು ; ಆದರಿಂದ ದೇವತ್ವವನ್ನೈದಿದನು.

೩೭. ಇಂತು ಪಾಪವನ್ನಾಚರಿಸದ ಗಟ್ಟಿಮನಸ್ಸಿನ ಮಾನವರಿಗೆ ಜ್ಞಾನಿಗಳು ಅನಂತವಾದ ಫಲವುಂಟಾಗುವುದೆಂದು ಹೇಳುತ್ತಾರೆ. ಅವರಿಗೆ ಸ್ವರ್ಗಫಲವು ಲಭಿಸುತ್ತದೆ.

೩೮. ಈ ಯಮಿಯ ಉಪಾಖ್ಯಾನವು ಹಿಂದೆ ನಡೆದುದು ; ವೇದದಲ್ಲಿ ಹೇಳಿರುವುದು ; ಎಲ್ಲ ಪಾಪಗಳನ್ನೂ ಕಳೆವುದು ಮತ್ತು ಪುಣ್ಯವನ್ನುಂಟುಮಾಡುವುದು. ಇದನ್ನು ಎಲ್ಲರೂ ಕುರುಬದೇ ಅವಶ್ಯವಾಗಿ ಕೇಳುವುದು.

೩೯. ಯಾವ ಬ್ರಾಹ್ಮಣನು ಹವ್ಯಕವ್ಯಗಳಲ್ಲಿ ನಿತ್ಯವೂ ಇದನ್ನು ಪಠಿಸುತ್ತಾನೆಯೋ, ಅವನ ಪಿತೃಗಳು ಇದರಿಂದ ಸುಖಗೊಂಡು ಯಮಲೋಕಕ್ಕೆ ಹೋಗದಂತೆ ಪಾರಾಗುವರು.

ಯಶ್ಚೈತತ್ಪಠತೇ ನಿತ್ಯಂ ಪಿತೄಣಾಮನೃಣೋ ಭವೇತ್ ।
ವೈವಸ್ವತೀಭ್ಯಸ್ತೀವ್ರಾಭ್ಯೋ ಯಾತನಾಭ್ಯಃ ಪ್ರಮುಚ್ಯತೇ ॥ ೪೦ ॥

ಪುತ್ರೈತದಾಖ್ಯಾನಮನುತ್ತಮಂ ಮಯಾ
ತವೋದಿತಂ ವೇದಪದಾರ್ಥನಿಶ್ಚಿತಮ್ ।
ಪುರಾತನಂ ಪಾಪಹರಂ ಸದಾ ನೃಣಾಂ
ಕಿಮನ್ಯದದ್ಯೈವ ವದಾಮಿ ಶಂಸ ಮೇ ॥ ೪೧ ॥

ಇತಿ ಶ್ರೀ ನರಸಿಂಹಪುರಾಣೇ ಯಮೀಯಮಸಂವಾದೋ ನಾಮ
ತ್ರಯೋದಶೋಽಧ್ಯಾಯಃ

---

೪೦. ಯಾವಾತನು ಈ ಯಮ್ಯುಪಾಖ್ಯಾನವನ್ನು ನಿತ್ಯವೂ ಪಠಿಸುತ್ತಾನೆಯೋ, ಅವನು ಪಿತೃಋಣದಿಂದ ಮುಕ್ತನಾಗುತ್ತಾನೆ; ಅಲ್ಲದೇ ಯಮಲೋಕದ ಕ್ಲೇಶಕರಗಳಾದ ಬಾಧೆಗಳಿಂದಲೂ ಬಿಡುಗಡೆಯನ್ನೈದುತ್ತಾನೆ.

೪೧. ಎಲೈ ಮಗನಾದ ಶುಕನೇ! ಅತ್ಯುತ್ತಮವೂ, ವೇದಶಬ್ದಾರ್ಥಗಳಿಂದ ನಿರೂಪಿಸಿದುದೂ, ಹಳತೂ, ಯಾವಾಗಲೂ, ಕೇಳುವ, ಪಠಿಸುವ ಮಾನವರ ಪಾಪಗಳನ್ನು ಕಳೆಯುವುದೂ ಆದ ಈ ಯಮ್ಯುಪಾಖ್ಯಾನವನ್ನು ನಿನಗರುಹಿದೆನು. ಈಗಲೇ ಮತ್ತಾವುದನ್ನು ಹೇಳಲಿ ? ಹೇಳು." ಎಂದು ವ್ಯಾಸಮುನಿಯು ಶುಕಮುನಿಗೆ ಹೇಳಿದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಯಮೀ-ಯಮ ಸಂವಾದವೆಂಬ
ಹದಿಮೂರನೆಯ ಅಧ್ಯಾಯವು ಮುಗಿದುದು.

ಹದಿಮೂರನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ಶುಕಮುನಿಯು ಮತ್ತೂ ಶ್ರೀ ವ್ಯಾಸಮುನಿಯನ್ನು ಕುರಿತು ದೃಢಮನಸ್ಕನಾದವನಿಗೆ ದೊರೆಯುವ ಫಲವೇನೆಂದು ಕೇಳಲು, ಶ್ರೀ ವ್ಯಾಸ ಮುನಿಯು ವೇದದಲ್ಲಿ ಹೇಳಿರುವ ಪುರಾತನವಾದ ನಡೆದ ಯಮೀ-ಯಮ ಸಂವಾದ ವನ್ನು ಅರುಹುವನು.

"ಅದಿತಿಯ ಮಗನಾದ ಸೂರ್ಯನ ಮಕ್ಕಳು ಯಮ ಮತ್ತು ಯಮಿಯೆಂಬ ಯಮಳರು. ಕೆಲಗಾಲದ ಮೇಲೆ, ಹರಯದವಳಾದ ತಂಗಿಯಾದ ಯಮಿಯು ಕಾಮಪೀಡಿತಳಾಗಿ, ತನ್ನ ಅಣ್ಣನಾದ ಯಮನನ್ನೇ ಮೋಹಿಸಿ, ತನ್ನೊಡನೆ ವಿಹರಿಸೆಂದು ಬೇಡುವಳು. ಯಮನು ಎಷ್ಟು ತೆರನಾಗಿ, ಅಣ್ಣನು ತಂಗಿಯ ಸಂಗವನ್ನು ಮಾಡುವುದು ಮಹಾಪಾತಕ, ಮತ್ತು ದೂಷ್ಯವೆಂದರೂ, ಅವಳು, 'ನಿರ್ಋತನು ತನ್ನ ತಂಗಿಯಾದ ನಿರ್ಋತಿಯನ್ನು ನಿತ್ಯವೂ ಅನುಭವಿಸುವನು,' ಎಂದರುಹಿ, ಮತ್ತೊಮ್ಮೆ ಬಯಸುವಳು. ಕೊನೆಗೆ ಯಮನು ತನಗಿಂತ ಬೇರೆಯವನಾದರೂ ಸುಂದರನಾದ ದೇವತೆಯನ್ನು ಹೊಂದೆಂದು, ದೃಢಮನಸ್ಸಿನಿಂದ ಹೇಳಿ ಅವಳನ್ನು ತ್ಯಜಿಸುವನು. ಇದರಿಂದ ಯಮನು ದೇವತ್ವವನ್ನು ಪಡೆದನಲ್ಲದೇ ಸ್ವರ್ಗಫಲ ವನ್ನೂ ಹೊಂದಿದನು." ಈ ಉಪಾಖ್ಯಾನವನ್ನು ಕೇಳಿದವರ ಮತ್ತು ಪಠಿಸಿದವರ ಪಿತೃಗಳು ಯಮಲೋಕಕ್ಕೆ ಹೋಗದಂತಾಗುವುದಲ್ಲದೇ, ಅವರೂ ಯಮಲೋಕಕ್ಕೆ ಹೋಗದೇ ಸದ್ಗತಿಯನ್ನು ಹೊಂದುವರು, ಎಂದು ಶ್ರೀ ವ್ಯಾಮುನಿಯು ಶುಕಮುನಿಗೆ ನಿರೂಪಿಸಿದುದನ್ನು ಸೂತರು ಭಾರದ್ವಾಜನಿಗೆ ಅರುಹಿದರು.

ಇಂತು ಹದಿಮೂರನೆಯ ಅಧ್ಯಾಯದ ವಿಷಯಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ಅಥ ಚತುರ್ದಶೋಽಧ್ಯಾಯಃ

ಪತಿವ್ರತಾ ಬ್ರಹ್ಮಚಾರಿ ಸಂವಾದ:

॥ ಶುಕ ಉವಾಚ ॥

ವಿಚಿತ್ರೇಯಂ ಕಥಾ ತಾತ ವೈದಿಕೀ ಮೇ ತ್ವಯೇರಿತಾ ।
ಅನ್ಯಾಃ ಪುಣ್ಯಾಶ್ಚ ಮೇ ಬ್ರೂಹಿ ಕಥಾಃ ಪಾಪಪ್ರಣಾಶನೀಃ ॥ ೧ ॥

॥ ವ್ಯಾಸ ಉವಾಚ ॥

ಅಹಂ ತೇ ಕಥಯಿಷ್ಯಾಮಿ ಪುರಾವೃತ್ತಮನುತ್ತಮಮ್ ।
ಪತಿವ್ರತಾಯಾಃ ಸಂವಾದಂ ಕಸ್ಯಚಿದ್ಬ್ರಹ್ಮಚಾರಿಣಃ ॥ ೨ ॥

ಹದಿನಾಲ್ಕನೆಯ ಅಧ್ಯಾಯವು.

ಪತಿವ್ರತೆ ಮತ್ತು ಬ್ರಹ್ಮಚಾರಿ ಇವರ ಸಂವಾದವು.

ಶುಕಮುನಿಯು ವ್ಯಾಸಮುನಿಯನ್ನು ಕುರಿತು ಇಂತು ಕೇಳುತ್ತಾನೆ:—

೧. 'ಎಲೈ ತಂದೆಯೇ! ನೀವು ಹೇಳಿದ, ವೇದದಲ್ಲಿ ನಿರೂಪಿಸಿರುವ ಈ ಯಮೀ ಯಮ ಸಂವಾದ ರೂಪವಾದ ಕಥೆಯು ಅತ್ಯಾಶ್ಚರ್ಯಕರವಾದುದು. ಪಾಪಗಳನ್ನು ಕಳೆಯುವ ಇನ್ನಾವುದಾದರೂ, ಪುಣ್ಯಪ್ರದವಾದ ಕಥೆಗಳನ್ನು ದಯಮಾಡಿ ನನಗೆ ಹೇಳಿರಿ;' ಎಂದು ಶುಕಮುನಿಯು ಕೇಳಲು ;

ಆಗ ಶ್ರೀ ವ್ಯಾಸಮುನಿಯು ಇಂತು ಹೇಳುತ್ತಾನೆ:—

೨. "ಎಲೈ ಶುಕನೇ! ಕೇಳು; ಹಿಂದೆ ಉತ್ತಮನಾದ ಒಬ್ಬಾನೊಬ್ಬ ಬ್ರಹ್ಮಚಾರಿಗೂ, ಪತಿವ್ರತೆಗೂ ನಡೆದ ಸಂವಾದವನ್ನು ಈಗ ನಿನಗೆ ಹೇಳುವೆನು.

ಕಶ್ಯಪೋ ನೀತಿಮಾನ್ನಾಮ ಬ್ರಾಹ್ಮಣೋ ವೇದಪಾರಗಃ ।
ಸರ್ವಶಾಸ್ತ್ರಾರ್ಥತತ್ತ್ವಜ್ಞೋ ವ್ಯಾಖ್ಯಾನೇ ಪರಿನಿಷ್ಠಿತಃ ॥ ೩ ॥

ಸ್ವಧರ್ಮಕಾರ್ಯನಿರತಃ ಪರಧರ್ಮಪರಾಙ್ಮುಖಃ ।
ಋತುಕಾಲಾಭಿಗಾಮೀ ಚ ಅಗ್ನಿಹೋತ್ರಪರಾಯಣಃ ॥ ೪ ॥

ಸಾಯಂ ಪ್ರಾತರ್ಮಹಾಭಾಗ ಹುತ್ವಾಗ್ನಿಂ ತರ್ಪಯನ್ದ್ವಿಜಾನ್ ।
ಅತಿಥೀನಾಗತಾನ್ ಗೇಹಂ ನರಸಿಂಹಂ ಚ ಪೂಜಯನ್ ॥ ೫ ॥

ತಸ್ಯ ಪತ್ನೀ ಮಹಾಭಾಗಾ ಸಾವಿತ್ರೀ ನಾಮ ನಾಮತಃ ।
ಪತಿವ್ರತಾ ಮಹಾಭಾಗಾ ಪತ್ಯುಃ ಪ್ರಿಯಹಿತೇ ರತಾ ॥ ೬ ॥

---

೩. 'ಸಕಲ ವೇದಗಳಲ್ಲಿ ಪಾರಂಗತನಾದ ನೀತಿವಂತನಾದ ಕಶ್ಯಪನೆಂಬ ಹೆಸರಿನ ಬ್ರಾಹ್ಮಣನಿದ್ದನು. ಅವನು ಸಕಲ ಶಾಸ್ತ್ರಗಳ ತತ್ತ್ವವನ್ನೂ ಅರಿತವನಾಗಿಯೂ, ಅದನ್ನು ಇತರರಿಗೆ ಬೋಧಿಸುವುದರಲ್ಲಿ ಘಟಕನಾಗಿಯೂ ಇದ್ದನು.

೪. ಅವನು ತನ್ನ ಜಾತಿ ಮತ್ತು ಆಶ್ರಮ ಇವುಗಳಿಗೆ ಯೋಗ್ಯಗಳಾದ ಧರ್ಮದಲ್ಲಿ ತೊಡಗಿದವನೂ, ಇತರ ವರ್ಣಾಶ್ರಮಧರ್ಮಗಳಿಂದ ಹಿಮ್ಮೆಟ್ಟಿದವನೂ, ಋತುಕಾಲಗಳಲ್ಲಿ ಮಾತ್ರ ಸ್ವಧರ್ಮಪತ್ನಿಯಲ್ಲಿ ರತನಾದವನೂ, ಅಗ್ನಿಹೋತ್ರ ಕರ್ಮವನ್ನೆಸಗುವವನೂ ಆಗಿದ್ದನು.

೫. ಎಲೈ ಪುಣ್ಯಶಾಲಿಯೇ! ಆ ಬ್ರಾಹ್ಮಣನು ಬೆಳಗ್ಗೆ, ಸಾಯಂಕಾಲಗಳಲ್ಲಿ ಅಗ್ನಿಹೋತ್ರವನ್ನಾಚರಿಸಿ, ದ್ವಿಜರನ್ನು ತೃಪ್ತಿಪಡಿಸಿ, ಮನೆಗೆ ಬಂದ ಅತಿಥಿಗಳನ್ನೂ, ಶ್ರೀ ನರಸಿಂಹಮೂರ್ತಿಯನ್ನೂ ಸೇವಿಸುತ್ತಿದ್ದನು.

೬. ಹೆಸರಿನಿಂದ ಸಾವಿತ್ರಿಯೆಂದು ಖ್ಯಾತಳಾದವಳು ಅವನ ಧರ್ಮಪತ್ನಿಯಾಗಿದ್ದಳು. ಆ ಪುಣ್ಯಶಾಲಿನಿಯು ಗಂಡನಿಗೆ ಇಷ್ಟವೂ, ಹಿತವೂ ಆದ ಕಾರ್ಯಗಳನ್ನೆಸಗುವ ಹದಿಬದೆಯಾಗಿದ್ದಳು.

ಭರ್ತುಃ ಶುಶ್ರೂಷಣೇನೈವ ದೀರ್ಘಕಾಲಮನಿಂದಿತಾ ।
ಪರೋಕ್ಷಜ್ಞಾನಮಾಪನ್ನಾ ಕಲ್ಯಾಣೀ ಗುಣಸಮ್ಮತಾ ॥ ೭ ॥

ತಯಾ ಸಹ ಸ ಧರ್ಮಾತ್ಮಾ ಮಧ್ಯದೇಶೇ ಮಹಾಮತಿಃ ।
ನಂದಿಗ್ರಾಮೇ ವಸನ್ಧೀಮಾನ್ಸ್ವಾನುಷ್ಠಾನಪರಾಯಣಃ ॥ ೮ ॥

ಅಥ ಕೌಶಲಿಕೋ ವಿಪ್ರೋ ಯಜ್ಞಶರ್ಮಾ ಮಹಾಮತಿಃ ।
ತಸ್ಯ ಭಾರ್ಯಾಽಭವತ್ಸಾಧ್ವೀ ರೋಹಿಣೀ ನಾಮ ನಾಮತಃ ॥ ೯ ॥

ಸಾ ಪ್ರಸೂತಾ ಸುತಂ ತ್ವೇಕಂ ತಸ್ಮಾದ್ಭರ್ತುರನಿಂದಿತಾ
ಸ ಯಾಯಾವರವೃತ್ತಿಸ್ತು ಪುತ್ರೇ ಜಾತೇ ವಿಚಕ್ಷಣಃ ॥ ೧೦ ॥

ಜಾತಕರ್ಮ ತದಾ ಚಕ್ರೇ ಸ್ನಾತ್ವಾ ಪುತ್ರಸ್ಯ ಮಂತ್ರತಃ ।
ದ್ವಾದಶೇಽಹನಿ ತಸ್ಯೈವ ದೇವಶರ್ಮೇತಿ ಬುದ್ಧಿಮಾನ್ ॥ ೧೧ ॥

---

೭. ಆ ಸತಿ ಪತಿಯ ಸೇವೆಯಿಂದಲೇ ಬಹು ಕಾಲ ಹಳಿಗೆ ಈಡಾಗದೇ ಪರೋಕ್ಷ ಜ್ಞಾನಪಡೆದು, ಮಂಗಳಕರಳಾಗಿ, ತನ್ನ ಗುಣಗಳಿಂದ ಪತಿಗೆ ಒಪ್ಪಿಗೆಯಾಗಿದ್ದಳು.

೮. ಮಹಾ ಬುದ್ಧಿಯುಳ್ಳವನೂ, ಧರ್ಮಪರಾಯಣನೂ, ಧೀಮಂತನೂ, ಆದ ಆ ಬ್ರಾಹ್ಮಣನು ಅವಳೊಡನೆ ಮಧ್ಯದೇಶದಲ್ಲಿ ನಂದಿಗ್ರಾಮದಲ್ಲಿ ವಾಸ ಮಾಡುತ್ತಾ ತನ್ನ ಧರ್ಮದಲ್ಲಿ ಬಹುವಾಗಿ ತೊಡಗಿದ್ದನು.'

೯. ಆಗ ಆ ಪ್ರಾಂತವಲ್ಲಿ ಕುಶಲ ವಿದ್ಯೆಯಿಂದ ಜೀವಿಸುವ ಮಹಾಮತಿಯಾದ ಯಜ್ಞಶರ್ಮನೆಂಬ ಬ್ರಾಹ್ಮಣನಿದ್ದನು. ಹದಿಬದೆಯಾದ ಹೆಸರಿನಿಂದ ರೋಹಿಣಿಯೆಂಬವಳು ಅವನ ಮಡದಿಯಾಗಿದ್ದಳು.

೧೦–೧೨. ಉತ್ತಮ ಸ್ತ್ರೀಲಕ್ಷಣಗಳಿಂದ ಕೂಡಿದ, ಪತಿಸೇವೆಯಲ್ಲಿ ತೊಡಗಿದ್ದ, ಆ ರೋಹಿಣಿಯು ಒಬ್ಬ ಪುತ್ರನನ್ನು ಹೆತ್ತಳು; ಆದರಿಂದ ಗಂಡನಿಗೆ ಪ್ರಿಯಳಾದಳು. ಸಂಚರಿಸಿ ತಿರಿದು ತಂದ ಬಿಕ್ಕೆಯಿಂದ ಜೀವಿಸುವ ಆ ಕುಶಲನಾದ ಬ್ರಾಹ್ಮಣನು

ಪುಣ್ಯಾಹಂ ವಾಚಯಿತ್ವಾ ತು ನಾಮ ಚಕ್ರೇ ಯಥಾವಿಧಿ ॥ ೧೨ ॥

ಉಪನಿಷ್ಕ್ರಮಣಂ ಚೈವ ಚತುರ್ಥೇ ಮಾಸಿ ಯತ್ನತಃ ।
ತಥಾನ್ನಪ್ರಾಶನಂ ಷಷ್ಠೇ ಮಾಸಿ ಚಕ್ರೇ ಯಥಾವಿಧಿ ॥ ೧೩ ॥

ಸಂವತ್ಸರೇ ತತಃ ಪೂರ್ಣೇ ಚೂಡಾಕರ್ಮ ಚ ಧರ್ಮವಿತ್ ।
ಕೃತ್ವಾ ಗರ್ಭಾಷ್ಟಮೇ ವರ್ಷೇ ವ್ರತಬಂಧಂ ಚಕಾರ ಸಃ ॥ ೧೪ ॥

ಸೋಽಪನೀತೋ ಯಥಾನ್ಯಾಯಂ ಪಿತ್ರಾ ವೇದಮಧೀತವಾನ್ ।
ಸ್ವೀಕೃತೇ ತ್ವೇಕವೇದೇ ತು ಪಿತಾ ಸ್ವರ್ಲೋಕಮಾಸ್ಥಿತಃ ॥ ೧೫ ॥

ಮಗನು ಹುಟ್ಟಲು, ಸ್ನಾನಮಾಡಿ ಮಗನಿಗೆ ಮಂತ್ರಪೂರ್ವಕವಾಗಿ ಜಾತಕರ್ಮವೆಂಬ ಸಂಸ್ಕಾರವನ್ನೆಸಗಿದನು. ಹನ್ನೆರಡನೆಯ ದಿವಸ ಆ ಬುದ್ಧಿವಂತನಾದ ಯಜ್ಞಶರ್ಮನು ಆ ಮಗನಿಗೆ ಪುಣ್ಯಾಹವಾಚನಮಾಡಿದನಂತರ ವಿಧ್ಯನುಸಾರವಾಗಿ ದೇವಶರ್ಮನೆಂದು ನಾಮಕರಣಮಾಡಿದನು.

೧೩. ವಿಶೇಷ ಪ್ರಯತ್ನದಿಂದ ಆ ಮಗುವಿಗೆ ನಾಲ್ಕನೆಯ ತಿಂಗಳಲ್ಲಿ ದೇವಾಲಯಕ್ಕೆ ಕರೆದುಕೊಂಡು ಹೋಗುವುದೆಂಬ ನಿಷ್ಕ್ರಮರೂಪ ಸಂಸ್ಕಾರವನ್ನೂ, ಆರನೆಯ ತಿಂಗಳಲ್ಲಿ ಶಾಸ್ತ್ರೋಕ್ತರೀತಿಯಿಂದ ಅನ್ನಪ್ರಾಶನವನ್ನೂ ನೆರವೇರಿಸಿದನು.

೧೪. ಧರ್ಮಜ್ಞನಾದ ಆ ಬ್ರಾಹ್ಮಣನು ಒಂದು ವರ್ಷವು ತುಂಬಲು ಚೂಡಾಕರ್ಮವನ್ನು ಮಾಡಿ ಗರ್ಭಾಷ್ಟಮವರ್ಷದಲ್ಲಿ ವ್ರತಬಂಧವನ್ನೂ ಮಾಡಿದನು.

೧೫. ಆ ದೇವಶರ್ಮನು ಶಾಸ್ತ್ರನಿಯಮವನ್ನು ಮೀರದೆ, ತಂದೆಯು ಉಪನಯನವೆಂಬ ಸಂಸ್ಕಾರವನ್ನು ಮಾಡಿದಮೇಲೆ, ವೇದವನ್ನು ಅಧ್ಯಯನ ಮಾಡಲು ತೊಡಗಿದನು. ಅವನು ಒಂದು ವೇದವನ್ನು ಕಲಿಯುವಷ್ಟರಲ್ಲಿ ಅವನ ತಂದೆಯು ಸ್ವರ್ಗಸ್ಥನಾದನು.

ಮಾತ್ರಾ ಸಹ ಸ ದುಃಖಿತ್ವಾ ಪಿತರ್ಯುಪರತೇ ಸುತಃ ।
ಧೈರ್ಯಮಾಸ್ಥಾಯ ಮೇಧಾವೀ ಸಾಧುಭಿಃ ಪ್ರೇರಿತಃ ಪುನಃ ॥ ೧೬ ॥

ಪ್ರೇತಕಾರ್ಯಾಣಿ ಕೃತ್ವಾ ತು ದೇವಶರ್ಮಾ ಗತಃ ಸುತಃ ।
ಗಂಗಾದಿಷು ಸುತೀರ್ಥೇಷು ಸ್ನಾನಂ ಕೃತ್ವಾ ಯಥಾವಿಧಿ ॥ ೧೭ ॥

ತಮೇವ ಪ್ರಾಪ್ತವಾನ್ಗ್ರಾಮಂ ಯತ್ರಾಸ್ತೇ ಸಾ ಪತಿವ್ರತಾ ।
ಸಂಪ್ರಾಪ್ಯ ವಿಶ್ರುತಃ ಸೋಽಥ ಬ್ರಹ್ಮಚಾರೀ ಮಹಾಮತೇ ॥ ೧೮ ॥

ಭಿಕ್ಷಾಟನಂ ತು ಕೃತ್ವಾಽಸೌ ಜಪನ್ವೇದಮತಂದ್ರಿತಃ ।
ಕುರ್ವನ್ನೇವಾಗ್ನಿಕಾರ್ಯಂ ತು ನಂದಿಗ್ರಾಮೇ ಚ ತಸ್ಥಿವಾನ್ ॥ ೧೯ ॥

ಮೃತೇ ಭರ್ತರಿ ತನ್ಮಾತಾ ಪುತ್ರೇ ಪ್ರವ್ರಜಿತೇ ತು ಸಾ ।
ದುಃಖಾದ್ದುಃಖಮನುಪ್ರಾಪ್ತಾ ನಿಯತಂ ರಕ್ಷಕಂ ವಿನಾ ॥ ೨೦ ॥

೧೬-೧೯. ಇಂತು ತಂದೆಯು ಮೃತನಾಗಲು ಆ ಬಾಲಕನಾದ ದೇವಶರ್ಮನು ತಾಯಿಯೊಡನೆ ದುಃಖಿಸುತ್ತಿರಲು, ಮೇಧಾವಿಯಾದ ಆ ಬಾಲಕನು ಸಾಧುಗಳಿಂದ ಪ್ರೇರಿತನಾಗಿ, ಧೈರ್ಯವನ್ನವಲಂಬಿಸಿ, ಪ್ರೇತಕಾರ್ಯಗಳನ್ನೆಸಗಿ ಹೊರಟು, ನಿಯಮಾನುಸಾರವಾಗಿ ಗಂಗಾದಿತೀರ್ಥಗಳಲ್ಲಿ ಮಿಂದು, ಆ ಹದಿಬದೆಯು ವಾಸಿಸುತ್ತಿದ್ದ ಆ (ನಂದಿಗ್ರಾಮಕ್ಕೆ) ಹಳ್ಳಿಗೆ ಹಿಂದಕ್ಕೆ ಬಂದನು. ಎಲೈ ಮಹಾಮತಿಯಾದ ಶುಕನೇ! ಕೇಳು; ತರುವಾಯ ಪ್ರಖ್ಯಾತನಾದ ಆ ಬ್ರಹ್ಮಚಾರಿಯಾದ ದೇವಶರ್ಮನು ಆ ಹಳ್ಳಿಗೆ ಬಂದು ಭಿಕ್ಷಾಟನೆಯನ್ನು ಮಾಡಿ, ಸೋಮಾರಿಯಾಗದೆ, ವೇದವನ್ನು ಜಪಿಸುತ್ತಾ, ಅಗ್ನಿಕಾರ್ಯವನ್ನೆಸಗುತ್ತಾ, ಆ ನಂದಿಗ್ರಾಮದಲ್ಲಿಯೇ ನಿಂತನು.

೨೦. ಪತಿಯು ಮೃತನಾಗಲು, ಆ ದೇವಶರ್ಮನ ತಾಯಿಯು ಮಗನು ಮನೆಯನ್ನು ತೊರೆದು ಸಂನ್ಯಾಸಿಯಾಗಿ ಹೋಗಲು, ಗೊತ್ತಾದ ರಕ್ಷಕರಿಲ್ಲದೇ ದುಃಖಪರಂಪರೆಯನ್ನು ಹೊಂದಿದಳು.

ಅಥ ಸ್ನಾತ್ವಾ ತು ನದ್ಯಾಂ ವೈ ಬ್ರಹ್ಮಚಾರೀ ಸ್ವಕರ್ಪಟಮ್ ।
ಕ್ಷಿತೌ ಪ್ರಸಾರ್ಯ ಶೋಷಾರ್ಥಂ ಜಪನ್ನಾಸೀತ ವಾಗ್ಯತಃ ॥ ೨೧ ॥

ಕಾಕೋ ಬಲಾಕಾ ತದ್ವಸ್ತ್ರಂ ಪರಿಗೃಹ್ಯಾಶು ಜಗ್ಮತುಃ ।
ತೌ ದೃಷ್ಟ್ವಾ ಭರ್ತ್ಸಯಾಮಾಸ ದೇವಶರ್ಮಾ ತತೋ ದ್ವಿಜಃ ॥ ೨೨ ॥

ವಿಷ್ಠಾಮುತ್ಸೃಜ್ಯ ವಸ್ತ್ರೇ ತು ಜಗ್ಮತುಸ್ತಸ್ಯ ಭರ್ತ್ಸನಾತ್ ।
ರೋಷೇಣ ವೀಕ್ಷಯಾಮಾಸ ಖೇ ಯಾನ್ತೌ ಪಕ್ಷಿಣೌ ಹಿ ಸಃ ।
ತದ್ರೋಷವಹ್ನಿನಾ ದಗ್ಧೌ ಭೂಮ್ಯಾಂ ನಿಪತಿತೌ ಖಗೌ ।
ಸ ದೃಷ್ಟ್ವಾ ತೌ ಕ್ಷಿತಿಂ ಯಾತೌ ಪಕ್ಷಿಣೌ ವಿಸ್ಮಯಂ ಗತಃ ॥ ೨೩ ॥

ತಪಸಾ ನ ಮಯಾ ಕಶ್ಚಿತ್ ಸದೃಶೋಽಸ್ತಿ ಮಹೀತಲೇ ।
ಇತಿ ಮತ್ವಾ ಗತೋ ಭಿಕ್ಷಾಮಟಿತುಂ ಗ್ರಾಮಮಂಜಸಾ ॥ ೨೪ ॥

---

೨೧. ಬಳಿಕ ಒಮ್ಮೆ ಬ್ರಹ್ಮಚಾರಿಯು ನದಿಯಲ್ಲಿ ಮಿಂದು, ತನ್ನ ವಸ್ತ್ರವನ್ನು ಒಣಗಿಸಲು ಭೂಮಿಯ ಮೇಲೆ ಹರಹಿ, ಮೌನದಿಂದ ಜಪಿಸುತ್ತಾ ಕುಳಿತಿದ್ದನು.

೨೨. ಒಂದು ಕಾಗೆ, ಮತ್ತು ಒಂದು ಬಲಾಕೆ ಇವೆರಡು ಹಕ್ಕಿಗಳೂ ಅವನ ಬಟ್ಟೆಯನ್ನು ತಮ್ಮ ಕೊಕ್ಕಿನಿಂದ ಕಚ್ಚಿಕೊಂಡು ಹಾರಿಹೋದುವು. ಬಳಿಕ ದ್ವಿಜನಾದ ಆ ದೇವಶರ್ಮನು ಅಂತು ಬಟ್ಟೆಯನ್ನು ಎತ್ತಿಕೊಂಡು ಹೋಗುತ್ತಿದ್ದ ಆ ಹಕ್ಕಿಗಳನ್ನು ಬೆದರಿಸಿದನು.

೨೩. ಆ ಹಕ್ಕಿಗಳು ಆ ಬ್ರಹ್ಮಚಾರಿಯ ಬೆದರಿಕೆಯಿಂದ, ಆ ವಸ್ತ್ರದಲ್ಲಿ ಮಲವನ್ನು ವಿಸರ್ಜಿಸಿ, ಹಾರಿಹೋದುವು. ಆಗ ಅವನು ಹಾರಿಹೋಗುತ್ತಿದ್ದ ಆ ಹಕ್ಕಿಗಳನ್ನು ಕನಲ್ದು ನೋಡಿದನು. ಆ ಹಕ್ಕಿಗಳು ಅವನ ಮುಳಿಸುಕಿಚ್ಚಿನಿಂದ ಸುಟ್ಟು, ನೆಲದಲ್ಲಿ ಬಿದ್ದುವು. ಅವನು ಹಾಗೆ ನೆಲದಮೇಲೆ ಬಿದ್ದ ಆ ಎರಡು ಹಕ್ಕಿಗಳನ್ನೂ ನೋಡಿ ಅಚ್ಚರಿಗೊಂಡನು.

೨೪. ಈ ಭೂತಲದಲ್ಲಿ ‘ ನನ್ನ ತಪಕ್ಕೆ ಸಮನಾದುದು ಯಾವುದೂ ಇಲ್ಲವು ’ ಎಂದು ತಿಳಿದು, ಕೂಡಲೇ ಬಿಕ್ಕೆಯನ್ನು ತಿರಿಯಲು ಆ ಹಳ್ಳಿಗೆ ಹೋದನು.

ಅಟನ್ ಬ್ರಾಹ್ಮಣಗೇಹೇಷು ಬ್ರಹ್ಮಚಾರೀ ತಪಃಸ್ಥಯೀ ।
ಪ್ರವಿಷ್ಟಸ್ತದ್ಗೃಹಂ ವತ್ಸ ಗೃಹೇ ಯತ್ರ ಪತಿವ್ರತಾ ॥ ೨೫ ॥

ತಂ ದೃಷ್ಟ್ವಾ ಯಾಚ್ಯಮಾನಾಪಿ ತೇನ ಭಿಕ್ಷಾಂ ಪತಿವ್ರತಾ ।
ವಾಗ್ಯತಾ ಪೂರ್ವಂ ವಿಜ್ಞಾಯ ಭರ್ತುಃ ಕೃತ್ವಾನುಶಾಸನಮ್ ॥ ೨೬ ॥

ಕ್ಷಾಲಯಾಮಾಸ ತತ್ಪಾದೌ ಭೂಯ ಉಷ್ಣೇನ ವಾರಿಣಾ ।
ಆಶ್ವಾಸ್ಯ ಸ್ವಪತಿಂ ಸಾ ತು ಭಿಕ್ಷಾಂ ದಾತುಂ ಪ್ರಚಕ್ರಮೇ ॥ ೨೭ ॥

ತತಃ ಕ್ರೋಧೇನ ರಕ್ತಾಕ್ಷೋ ಬ್ರಹ್ಮಚಾರೀ ಪತಿವ್ರತಾಮ್ ।
ದಗ್ಧುಕಾಮಸ್ತಪೋವೀರ್ಯಾತ್ಪುನಃಪುನರುದೈಕ್ಷತ ॥ ೨೮ ॥

---

೨೫ ಎಲೈ ವತ್ಸನಾದ ಶುಕನೇ! ಕೇಳು ; ತಪದಿಂದ ಸೊಕ್ಕಿದ ಆ ಬ್ರಹ್ಮಚಾರಿಯು, ಹಾರುವರ ಮನೆಗಳಲ್ಲಿ ಬಿಕ್ಕೆಯನ್ನು ತಿರಿಯುತ್ತಾ, ಆವ ಮನೆಯಲ್ಲಿ ಹದಿಬದೆಯು ವಾಸಿಸುತ್ತಿದ್ದಳೋ ಆ ಮನೆಯನ್ನು ಹೊಕ್ಕನು.

೨೬-೨೭. ಆ ಪತಿವ್ರತೆಯು ಅವನನ್ನು ನೋಡಿ, ಅವನಿಂದ ಭಿಕ್ಷೆಯು ಬೇಡಲ್ಪಡುತ್ತಲಿದ್ದರೂ, ಮೌನದಿಂದ ಹಿಂದಿನ ಸಂಗತಿಯನ್ನರಿತು ತನ್ನ ಪತಿಯ ಅಪ್ಪಣೆಯನ್ನೆಸಗಿ, ಮತ್ತೆ ಅವನ ಕಾಲುಗಳನ್ನು ಬಿಸಿನೀರಿನಿಂದ ತೊಳೆದಳು. ಇಂತು ತನ್ನ ಪತಿಯನ್ನು ಸಮಾಧಾನಪಡಿಸಿ, ಅನಂತರ ಆ ಸಾವಿತ್ರಿಯು ಆ ಬ್ರಹ್ಮಚಾರಿಗೆ ಭಿಕ್ಷೆಯನ್ನು ಕೊಡಲು ಮೊದಲು ಮಾಡಿದಳು.

೨೮. ತರುವಾಯ ಆ ಬ್ರಹ್ಮಚಾರಿಯು ಮುಳಿಸಿಂದ ಕಿಸುಗಣ್ಣಿ ತಪದ ಬಲದಿಂದ ಅವಳನ್ನು ಸುಡಬಯಸಿ, ಪುನಃಪುನಃ ಅವಳ ಕಡೆ ನೋಡಿದನು. ಆ ಸಾವಿತ್ರಿಯು ಇಂತು ತೊಡಗಿರುವ ಆ ಬ್ರಹ್ಮಚಾರಿಯನ್ನು ನೋಡಿ ನಗುತ್ತಾ, ಅವನಿಗೆ ಇಂತು ಹೇಳಿದಳು.

ಸಾವಿತ್ರೀ ತು ನಿರೀಕ್ಷ್ಯೈನಂ ಹಸಂತೀ ಸಾ ತಮಬ್ರವೀತ್ ।
ನ ಕಾಕೋ ನ ಬಲಾಕಾಽಹಂ ತ್ವತ್ಕ್ರೋಧೇನ ತು ಯೌ ಮೃತೌ ।
ನದೀತೀರೇಽದ್ಯ ಕೋಪಾತ್ಮನ್ ಭಿಕ್ಷಾಂ ಮತ್ತೋ ಯದೀಚ್ಛಸಿ ॥ ೨೯ ॥

ಇತ್ಯೇವಮುಕ್ತಸ್ಸಾವಿತ್ರ್ಯಾ ಭಿಕ್ಷಾಮಾದಾಯ ಸೋಽಗ್ರತಃ ।
ಚಿಂತಯನ್ಮನಸಾ ತಸ್ಯಾಃ ಶಕ್ತಿಂ ದೂರಾರ್ಥವೇದಿನೀಮ್ ॥ ೩೦ ॥

ವಿತ್ಯಾಶ್ರಮೋ ಮಠೇ ಸ್ಥಾಪ್ಯ ಭಿಕ್ಷಾಪಾತ್ರಂ ಪ್ರಯತ್ನತಃ ।
ಪತಿವ್ರತಾಯಾಂ ಭುಕ್ತಾಯಾಂ ಗೃಹಸ್ಥೇ ನಿರ್ಗತೇ ಪತೌ ॥ ೩೧ ॥

ಪುನರಾಗಮ್ಯ ತದ್ಗೇಹಂ ತಾಮುವಾಚ ಪತಿವ್ರತಾಮ್ ।

॥ ಬ್ರಹ್ಮಚಾರ್ಯುವಾಚ ॥

ಪ್ರಬ್ರೂಹ್ಯೇತನ್ಮಹಾಭಾಗೇ ಪೃಚ್ಛತೋ ಮೇ ಯಥಾರ್ಥತಃ ॥ ೩೨ ॥

---

೨೯. 'ಎಲೈ ಕೋಪಸ್ವಭಾವನೇ! ಇಂದು ಹೊಳೆಯ ದಡದಲ್ಲಿ ಸತ್ತು ಹೋದ ಕಾಗೆಯೂ, ಬಲಾಕೆಯೂ ನಾನಲ್ಲವು; ಭಿಕ್ಷೆಯನ್ನು ಅಪೇಕ್ಷಿಸುವುದಾದರೆ ತೆಗೆದುಕೊಳ್ಳುವನಾಗು.'

೩೦–೩೨. ಹದಿಬದೆಯಾದ ಸಾವಿತ್ರಿಯು ಇಂತು ನುಡಿಯಲು, ಆ ಬ್ರಹ್ಮಚಾರಿಯು ಭಿಕ್ಷೆಯನ್ನು ಅವಳಿಂದ ಸ್ವೀಕರಿಸಿ, ಮುಂದೆ ಹೋಗಿ, ದೂರದಲ್ಲಿರುವ ವಿಷಯವನ್ನು ತಿಳಿಯುವ ಅವಳ ಶಕ್ತಿಯನ್ನು ಮನಸ್ಸಿನಿಂದ ಯೋಚಿಸುತ್ತಾ, ತನ್ನ ಆಶ್ರಮಕ್ಕೆ ಬಂದು, ಶ್ರಮದಿಂದ ಭಿಕ್ಷಾಪಾತ್ರೆಯನ್ನು ಮಠದಲ್ಲಿಟ್ಟು, ಅವಳ ಪತಿಯಾದ ಗೃಹಸ್ಥನು ಹೊರಗೆ ಹೋದ ಮೇಲೆ ಆ ಪತಿವ್ರತೆಯು ಉಂಡಿರಲು, ಮತ್ತೂ ಅವಳ ಮನೆಗೆ ಬಂದು, ಆ ಪತಿವ್ರತೆಯಾದ ಸಾವಿತ್ರಿಗೆ ಇಂತು ಹೇಳಿದನು.

ಬ್ರಹ್ಮಚಾರಿಯು ಹೇಳುತ್ತಾನೆ:—'ಎಲೈ ಪುಣ್ಯಾತ್ಮಳೇ! ನಾನು ಕೇಳುವುದನ್ನು ಯಥಾರ್ಥವಾಗಿ ಹೇಳು.

ವಿಪ್ರಕೃಷ್ಟಾರ್ಥವಿಜ್ಞಾನಂ ಕಥಮಾಶು ತವಾಭವತ್ ।
ಇತ್ಯುಕ್ತ್ವಾ ತೇನ ಸಾ ಸಾಧ್ವೀ ಸಾವಿತ್ರೀ ತು ಪತಿವ್ರತಾ ॥ ೩೩ ॥

ತಂ ಬ್ರಹ್ಮಚಾರಿಣಂ ಪ್ರಾಹ ಸ್ವೇಚ್ಛಂತಂ ಗೃಹಮೇತ್ಯ ವೈ ।
ಶೃಣುಷ್ವಾವಹಿತೋ ಬ್ರಹ್ಮನ್ಯನ್ಮಾಂ ತ್ವಂ ಪರಿಪೃಚ್ಛಸಿ ॥ ೩೪ ॥

ತತ್ತೇಽಹಂ ಸಂಪ್ರವಕ್ಷ್ಯಾಮಿ ಸ್ವಧರ್ಮಪರಿಬೃಂಹಿತಮ್ ।
ಸ್ತ್ರೀಣಾಂ ತು ಪತಿಶುಶ್ರೂಷಾ ಧರ್ಮ ಏಷ ಪರಿಸ್ಥಿತಃ ॥ ೩೫ ॥

ತಮೇವಾಹಂ ಸದಾ ಕುರ್ಯಾಂ ನಾನ್ಯಮಸ್ಮಿ ಮಹಾಮತೇ ।
ದಿವಾರಾತ್ರಮಸಂದಿಗ್ಧಂ ಶ್ರದ್ಧಯಾ ಪರಿತೋಷಣಮ್ ॥ ೩೬ ॥

೩೩-೩೪. ನಿನಗೆ ತೀವ್ರವಾಗಿ ದೂರದ ಸಂಗತಿಯು ಅರಿವು ಹೇಗೆ ಉಂಟಾಯಿತು ? ' ಇಂತು ಬ್ರಹ್ಮಚಾರಿಯು ಕೇಳಲು, ಪತಿವ್ರತೆಯೂ, ಸಾಧ್ವಿಯೂ ಆದ ಸಾವಿತ್ರಿಯು ತನ್ನ ಮನೆಗೆ ಬಂದು, ತನ್ನನ್ನು ಕೇಳುತ್ತಲಿದ್ದ ಆ ಬ್ರಹ್ಮಚಾರಿಗೆ ಇಂತು ಹೇಳಿದಳು. " ಎಲೈ ಬ್ರಾಹ್ಮಣನೇ! ನೀನು ನನ್ನನ್ನು ಏನನ್ನು ಕೇಳುತ್ತಲಿರುವೆಯೋ, ಅದನ್ನು ಹೇಳುವೆನು ; ಸಡ್ಡೆಯಿಂದ ಕೇಳು ;

೩೫. ನಾನು ಸ್ವಧರ್ಮಾನುಷ್ಠಾನದಿಂದ ಬಲಗೊಂಡ ಆ ಸಂಗತಿಯನ್ನು ನಿನಗೆ ತಿಳಿಸುವೆನು. ಹೆಂಗುಸರಿಗೆ ತನ್ನ ಗಂಡನ ಸೇವೆಯೆಂಬುದೇ ಧರ್ಮವೆಂದು ಗೊತ್ತಾಗಿರುತ್ತದೆ.

೩೬-೩೭. ಎಲೈ ಮಹಾಮತಿಯಾದ ಬ್ರಹ್ಮಚಾರಿಯೇ! ಆ ಪತಿಸೇವೆಯೆಂಬುದನ್ನೇ ನಾನು ಯಾವಾಗಲೂ ಅನುಷ್ಠಿಸುತ್ತಿರುವೆನು. ಮತ್ತಾವ ಕೆಲಸವನ್ನೂ ಎಸಗೆನು. ಹಗಲಿರುಳೂ ಸಂಶಯವಿಲ್ಲದಂತೆ ಸಡ್ಡೆಯಿಂದ ಪತಿಗೆ ಸಂತಸ

ಕುರ್ವಂಸ್ತ್ವಾ ಮಮ ಸಂಭೂತಂ ವಿಪ್ರಕೃಷ್ಟಾರ್ಥದರ್ಶನಮ್ ।
ಅನ್ಯಚ್ಚ ತೇ ಪ್ರವಕ್ಷ್ಯಾಮಿ ನಿಬೋಧ ತ್ವಂ ಯದೀಚ್ಛಸಿ ॥ ೩೭ ॥

ಪಿತಾ ಯಾಯಾವರಃ ಶುದ್ಧಸ್ತಸ್ಮಾದ್ವೇದಮಧೀತ್ಯ ವೈ ।
ಮೃತೇ ಪಿತರಿ ಕೃತ್ವಾ ತು ಪ್ರೇತಕಾರ್ಯಮಿಹಾಗತಃ ॥ ೩೮ ॥

ಉತ್ಸೃಜ್ಯ ಮಾತರಂ ದ್ರಷ್ಟುಂ ವೃದ್ಧಾಂ ದೀನಾಂ ತಪಸ್ವಿನೀಮ್ ।
ಅನಾಥಾಂ ವಿಧವಾಮತ್ರ ನಿತ್ಯಂ ಸ್ವೋದರಪೋಷಕಃ ॥ ೩೯ ॥

ಯಯಾ ಗರ್ಭೇ ಧೃತಃ ಪೂರ್ವಂ ಪಾಲಿತೋ ಲಾಲಿತಸ್ತಥಾ ।
ತಾಂ ತ್ಯಕ್ತ್ವಾ ವಿಪಿನೇ ಧರ್ಮಂ ಚರನ್ವಿಪ್ರ ನ ಲಜ್ಜಸೇ ॥ ೪೦ ॥

ವನ್ನುಂಟುಮಾಡುತ್ತಲಿರುವ ನನಗೆ ದೂರದಲ್ಲಿರುವ ಮತ್ತು ನಡೆದ ಸಂಗತಿಗಳ ಅರಿವುಂಟಾಯಿತು. ನಿನಗೆ ತಿಳಿಯಲಿಷ್ಟವಿದ್ದರೆ ಮತ್ತೊಂದು ಸಂಗತಿಯನ್ನು ಅರುಹುವೆನು ; ತಿಳಿಯುವವನಾಗು.

೩೮. ನಿನ್ನ ತಂದೆಯು (ಉಂಛವೃತ್ತಿ) ಭಿಕ್ಷಾವೃತ್ತಿಯಿಂದ ಜೀವಿಸುವವನಾಗಿ ಶುದ್ಧನಾಗಿದ್ದನು. ಅವನಿಂದ ಒಂದು ವೇದವನ್ನು ಕಲಿತು, ಆ ತಂದೆಯು ತೀರಿಕೊಳ್ಳಲು ಅವನ ಪ್ರೇತಕಾರ್ಯಗಳನ್ನೆಸಗಿ, ಇಲ್ಲಿಗೆ ಬಂದಿರುತ್ತೀಯೆ.

೩೯. ವೃದ್ಧೆಯೂ, ದೀನೆಯೂ, ಶೋಚ್ಯಳೂ, ದಿಕ್ಕಿಲ್ಲದವಳೂ, ಪತಿಯಿಲ್ಲದವಳೂ, ಆಗಿರುವ ತಾಯಿಯನ್ನು ನೋಡಿಕೊಳ್ಳುವುದನ್ನು ಬಿಟ್ಟು, ಇಲ್ಲಿ ನಿತ್ಯವೂ ನಿನ್ನ ಹೊಟ್ಟೆಯನ್ನು ಮಾತ್ರ ಹೊರೆದುಕೊಳ್ಳುತ್ತಲಿದ್ದೀಯೆ.

೪೦. ಎಲೈ ವಿಪ್ರನೇ! ಯಾವಳು ಮೊದಲು ನಿನ್ನನ್ನು ಗರ್ಭದಲ್ಲಿ ತಾಳಿ, ಹೆತ್ತು, ಬಳಿಕ ಕಾಪಿಟ್ಟು, ಹಾಗೆಯೇ ಸವಿನುಡಿಗಳನ್ನಾಡಿ, ಆಡಿಸಿದಳೋ, ಅವಳನ್ನು ಬಿಟ್ಟು ಕಾಡಿನಲ್ಲಿ ಧರ್ಮವನ್ನಾಚರಿಸುತ್ತಾ ನಾಚಿಕೆಗೊಳ್ಳದಿರುತ್ತೀಯೆ.

ಯಯಾ ತವ ಕೃತಂ ಬ್ರಹ್ಮನ್ಬಾಲ್ಯೇ ಮಲನಿಕೃಂತನಮ್ ।
ದುಃಖಿತಾಂ ತಾಂ ಗೃಹೇ ತ್ಯಕ್ತ್ವಾ ಕಿಂ ಭವೇದ್ವಿಪಿನೇಽಟತಃ ॥ ೪೧ ॥

ಮಾತೃದುಃಖೇನ ತೇ ವಕ್ತ್ರಂ ಪೂತಿಗಂಧಮಿದಂ ಭವೇತ್ ।
ಪಿತ್ರೈವ ಸಂಸ್ಕೃತೋ ಯಸ್ಮಾತ್ತಸ್ಮಾಚ್ಛಕ್ತಿರಭೂದಿಯಮ್ ॥ ೪೨ ॥

ಪಕ್ಷೀ ದಗ್ಧಃ ಸುದುರ್ಬುದ್ಧೇ ಪಾಪಾತ್ಮನ್ಸಾಂಪ್ರತಂ ವೃಥಾ ।
ವೃಥಾ ಸ್ನಾನಂ ವೃಥಾ ತೀರ್ಥಂ ವೃಥಾ ಜಪ್ತಂ ವೃಥಾ ಹುತಮ್ ॥ ೪೩ ॥

ಸ ಜೀವತಿ ವೃಥಾ ಬ್ರಹ್ಮನ್ಯಸ್ಯ ಮಾತಾ ಸುದುಃಖಿತಾ ।
ಯೋ ರಕ್ಷೇತ್ಸತತಂ ಭಕ್ತ್ಯಾ ಮಾತರಂ ಮಾತೃವತ್ಸಲಃ ॥ ೪೪ ॥

---

೪೧. ಎಲೈ ಬ್ರಾಹ್ಮಣನೇ! ಯಾವಳು ನಿನ್ನ ಕಿರಿಯುತನದಲ್ಲಿ ಹೇಸಿಗೆಯನ್ನು ತೊಳೆದು ಕಾಪಿಟ್ಟಳೋ, ದುಃಖಿತೆಯಾದ ಅವಳನ್ನು ಈಗ ನೀನು ಮನೆಯಲ್ಲಿ ಬಿಟ್ಟು, ಕಾಡಿನಲ್ಲಿ ಅಲೆಯುವುದರಿಂದೇನು ಲಭಿಸುವುದು.

೪೨. ನೀನು ತಾಯಿಗೆ ದುಃಖವನ್ನುಂಟುಮಾಡಿದುದರಿಂದ ನಿನ್ನ ಈ ಬಾಯಿಯು (ದುರ್ವಾಸನೆ) ದುರ್ಗಂಧವುಳ್ಳದಾಗಿದೆ. ತಂದೆಯಿಂದ ಸಂಸ್ಕಾರಹೊಂದಿರುವುದರಿಂದ ಈ ತಪಶ್ಶಕ್ತಿಯುಂಟಾಗಿರುತ್ತದೆ.

೪೩. ಎಲೈ ದುರ್ಬುದ್ಧಿಯೇ! ಪಾಪಾತ್ಮನೇ! ಈಗ ವ್ಯರ್ಥವಾಗಿ ಹಕ್ಕಿಯನ್ನು ಸುಟ್ಟೆ. ನೀನು ಮಾಡಿದ ತೀರ್ಥಸ್ನಾನವೂ, ಶ್ರೀ ಹರಿತೀರ್ಥವನ್ನು ತೆಗೆದುಕೊಂಡುದೂ, ಜಪವನ್ನೆಸಗಿದುದೂ, ಹೋಮಮಾಡಿದುದೂ ಇನೆಲ್ಲವೂ ನಿಷ್ಪ್ರಯೋಜನವಾದುವು.

೪೪-೪೫. ಎಲೈ ಬ್ರಾಹ್ಮಣನೇ! ಯಾವನ ತಾಯಿಯು ಅತ್ಯಂತ ದುಃಖಗೊಂಡಿರುವಳೋ, ಅವನ ಬಾಳು ವ್ಯರ್ಥವಾದುದು. ಯಾವನು ತಾಯಿಯನ್ನು ಅವಳಲ್ಲಿ ಭಕ್ತಿವಿಶ್ವಾಸಗಳಿಂದ ಕೂಡಿ, ಯಾವಾಗಲೂ ಕಾಪಿಡುವನೋ ಅವನಿಗೆ ಈ

ತಸ್ಯೇಹಾನುಷ್ಠಿತಂ ಸರ್ವಂ ಫಲಂ ಚಾಮುತ್ರ ಚೇಹ ಹಿ ।
ಮಾತುರ್ಯೇ ವಚನಂ ಬ್ರಹ್ಮನ್ಪಾಲಿತಂ ಯೈರ್ನರೋತ್ತಮೈಃ ॥ ೪೫ ॥

ತೇ ಮಾನ್ಯಾಸ್ತೇ ನಮಸ್ಕಾರ್ಯಾ ಇಹಲೋಕೇ ಪರತ್ರ ಚ ।
ಅತಸ್ತ್ವಂ ತತ್ರ ಗತ್ವಾದ್ಯ ಯತ್ರ ಮಾತಾ ವ್ಯವಸ್ಥಿತಾ ॥ ೪೬ ॥

ತಾಂ ತ್ವಂ ರಕ್ಷಯ ಜೀವಂತೀಂ ತದ್ರಕ್ಷಾ ತೇ ಪರಂ ತಪಃ ।
ಕ್ರೋಧಂ ಪರಿತ್ಯಜ್ಯೈನಂ ತ್ವಂ ದೃಷ್ಟ್ವಾಽದೃಷ್ಟವಿಘಾತಕಮ್ ॥ ೪೭ ॥

ತಯೋಃ ಕುರು ವಧೇ ಶುದ್ಧಿಂ ಪಕ್ಷಿಣೋರಾತ್ಮಶುದ್ಧಯೇ ।
ಯಥಾತಥ್ಯೇನ ಕಥಿತಮೇತತ್ಸರ್ವಂ ಮಯಾ ತವ ॥ ೪೮ ॥

ಬ್ರಹ್ಮಚಾರಿನ್ಕುರುಷ್ವ ತ್ವಂ ಯದೀಚ್ಛಸಿ ಸತಾಂ ಗತಿಮ್ ।
ಇತ್ಯುಕ್ತ್ವಾ ವಿರರಾಮಾಥ ದ್ವಿಜಪುತ್ರಂ ಪತಿವ್ರತಾ ॥ ೪೯ ॥

ಲೋಕದಲ್ಲಿ ಎಸಗಿದ ಕಾರ್ಯವೆಲ್ಲವೂ ಇಹಪರಗಳಲ್ಲಿ ಫಲವನ್ನುಂಟುಮಾಡುವುವು. ಯಾವ ನರೋತ್ತಮರು ತಾಯಿಯ ನುಡಿಯನ್ನು ಪಾಲಿಸುವರೋ, ಅವರು ಇಹಪರ ಲೋಕಗಳಲ್ಲಿ ಮನ್ನಣೆಗೆ ಅರ್ಹರು, ಮತ್ತು ನಮಸ್ಕಾರಾರ್ಹರು ಆಗಿರುತ್ತಾರೆ. ಆದುದರಿಂದ ನೀನು ಇಂದು ಎಲ್ಲಿ ನಿನ್ನ ತಾಯಿಯು ಇರುತ್ತಾಳೆಯೋ, ನೀನು ಅಲ್ಲಿಗೆ ಹೋಗಿ ಬದುಕಿರುವ ಅವಳನ್ನು ರಕ್ಷಿಸು. ಅವಳ ರಕ್ಷಣೆಯೇ ನಿನಗೆ ಶ್ರೇಷ್ಠವಾದ ತಪಸ್ಸು. ಕಂಡ ಮತ್ತು ಕಾಣದ ವಸ್ತುಗಳಿಗೆ ಅಳಿವನ್ನೆಸಗುವ ಈ ಕ್ರೋಧವನ್ನು ನೀನು ಬಿಟ್ಟುಬಿಡು.

೪೮. ನೀನು ಶುದ್ಧಿಯನ್ನುಂಟುಮಾಡಿಕೊಳ್ಳುವುದಕ್ಕೆ ಆ ಹಕ್ಕಿಗಳನ್ನು ಕೊಂದ ವಿಷಯದಲ್ಲಿ ಶುದ್ಧಿಪ್ರದವಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವನಾಗು; ನಾನು ಇವೆಲ್ಲವನ್ನೂ ಮರೆಮಾಚದೇ ಇದ್ದುದನ್ನು ಇದ್ದ ಹಾಗೆಯೇ ನಿನಗೆ ಹೇಳುತ್ತೇನೆ;' ಎಂದು,

೪೯. ಆ ಹದಿಬದೆಯು ಮತ್ತೂ ಆ ಬ್ರಾಹ್ಮಣನ ಮಗನನ್ನು ಕುರಿತು, 'ಎಲೈ ಬ್ರಹ್ಮಚಾರಿಯೇ! ನೀನು ಸದ್ಗತಿಯನ್ನು ಅಪೇಕ್ಷಿಸುವನಾದರೆ ಈಗ ನಾನು ಹೇಳಿದಂತೆ ನಡೆದುಕೋ,' ಎಂದು ಹೇಳಿ, ಬಳಿಕ ಸುಮ್ಮನಾದಳು.

ಸೋಽಪಿ ತಾಮಾಹ ಭೂಯೋಽಪಿ ಸಾವಿತ್ರೀಂ ತು ಕ್ಷಮಾಪಯನ್ ।
ಅಜ್ಞಾನಾತ್ಕೃತಪಾಪಸ್ಯ ಕ್ಷಮ ತ್ವಂ ವರವರ್ಣಿನಿ ॥ ೫೦ ॥

ಮಯಾ ತವಾಹಿತಂ ಯಚ್ಚ ಕೃತಂ ಕ್ರೋಧನಿರೀಕ್ಷಣಮ್ ।
ತತ್ಕ್ಷಮಸ್ವ ಮಹಾಭಾಗೇ ಹಿತಮುಕ್ತಂ ಪತಿವ್ರತೇ ॥ ೫೧ ॥

ತತ್ರ ಗತ್ವಾ ಮಯಾ ಯಾನಿ ಕರ್ಮಾಣಿ ತು ಶುಭವ್ರತೇ ।
ಕಾರ್ಯಾಣಿ ತಾನಿ ಮೇ ಬ್ರೂಹಿ ಯಥಾ ಮೇ ಸುಗತಿರ್ಭವೇತ್ ॥ ೫೨ ॥

ತೇನೈವಮುಕ್ತಾ ಸಾಽಪ್ಯಾಹ ತಂ ಪೃಚ್ಛಂತಂ ಪತಿವ್ರತಾ ।
ಯಾನಿ ಕರ್ಮಾಣಿ ವಕ್ಷ್ಯಾಮಿ ತ್ವಯಾ ಕಾರ್ಯಾಣಿ ಮೇ ಶೃಣು ॥ ೫೩ ॥

---

೫೦. ಆ ಬ್ರಹ್ಮಚಾರಿಯೂ ಆ ಸಾವಿತ್ರಿಯನ್ನು ಕ್ಷಮಿಸೆಂದು ಬೇಡುತ್ತಾ ಮತ್ತೂ ಹೇಳಿದನು. 'ಎಲೈ ಗಾಢಿಕಾರ್ತಿಯಾದ ಹದಿಬದೆಯೇ! ಅರಿವಿಲ್ಲದೆಯೆ ಎಸಗಿದ ಕಾರ್ಯವುಳ್ಳ ನನ್ನನ್ನು ಕ್ಷಮಿಸು.

೫೧. ಎಲೌ ಪುಣ್ಯಶಾಲಿನಿಯೇ! ನಾನು ಮುಳಿಸಿನಿಂದ ನಿನ್ನನ್ನು ನೋಡಿ ಎಸಗಿದ ಅನಿಷ್ಟಕಾರ್ಯವನ್ನೂ ಕ್ಷಮಿಸು. ಎಲೌ ಹದಿಬದೆಯೇ ನೀನು ನನಗೆ ಹಿತವನ್ನುಂಟುಮಾಡಿದೆ.

೫೨. 'ಎಲೌ ಮಂಗಳವಾದ ನಿಯಮವುಳ್ಳವಳೇ! ನಾನು ತಾಯಿಯ ಬಳಿಗೆ ಹೋಗಿ, ಯಾವ ಕೆಲಸವನ್ನು ಆಚರಿಸಬೇಕೋ, ಯಾವ ಅನುಷ್ಠಾನದಿಂದ ನನಗೆ ಸದ್ಗತಿಯುಂಟಾಗುವುದೋ, ಆ ಕಜ್ಜಗಳನ್ನು ದಯಮಾಡಿ ನನಗೆ ಹೇಳು.'

೫೩. ಇಂತು ಬ್ರಹ್ಮಚಾರಿಯು ಕೇಳಲು, ಆ ಪತಿವ್ರತೆಯು ಅಂತು ಕೇಳುತ್ತಲಿದ್ದ ಬ್ರಹ್ಮಚಾರಿಯನ್ನು ಕುರಿತು, ಇಂತು ಹೇಳಿದಳು.

ಪೋಷ್ಯಾ ಮಾತಾ ತ್ವಯಾ ತತ್ರ ನಿಶ್ಚಯಂ ಭೈಕ್ಷ್ಯವೃತ್ತಿನಾ ।
ಅತ್ರ ವಾ ತತ್ರ ವಾ ಬ್ರಹ್ಮನ್ಪ್ರಾಯಶ್ಚಿತ್ತಂ ಚ ಪಕ್ಷಿಣೋಃ ॥ ೫೪ ॥

ಯಜ್ಞಶರ್ಮಸುತಾ ಕನ್ಯಾ ಭಾರ್ಯಾ ತವ ಭವಿಷ್ಯತಿ ।
ತಾಂ ಗೃಹೀಷ್ವ ಚ ಧರ್ಮೇಣ ಗತೇ ತ್ವಯಿ ಸ ದಾಸ್ಯತಿ ॥ ೫೫ ॥

ಪುತ್ರಸ್ತೇ ಭವಿತಾ ತಸ್ಯಾಮೇಕಃ ಸಂತತಿವರ್ಧನಃ ।
ಯಾಯಾವರಧನಾದ್ವೃತ್ತಿಃ ಪಿತೃವತ್ತೇ ಭವಿಷ್ಯತಿ ॥ ೫೬ ॥

'ಎಲೈ ಬ್ರಹ್ಮಚಾರಿಯೇ! ಈಗ ನೀನು ಮಾಡಬೇಕಾದ ಯಾವ ಕೆಲಸಗಳನ್ನು ನಾನು ಹೇಳುವೆನೋ, ಅವನ್ನು ಸಡ್ಡೆಯಿಂದ ಕೇಳು.

೫೪. ನೀನು ಭಿಕ್ಷೆಯನ್ನು ತಂದು ಅಲ್ಲಿ ನಿನ್ನ ತಾಯಿಯನ್ನು ಪೋಷಿಸಬೇಕು. ಎಲೈ ಬ್ರಾಹ್ಮಣನೇ! ಆ ಪಕ್ಷಿಗಳಿಗೆ ಅಳಿವನ್ನುಂಟುಮಾಡಿದುದಕ್ಕೆ ಎಲ್ಲಿಯಾದರೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದು,

೫೫. ಯಜ್ಞಶರ್ಮನ ಮಗಳಾದ ಕನ್ನೆಯು ನಿನ್ನ ಮಡದಿಯಾಗುವಳು; ಅವಳನ್ನು ಧರ್ಮದಿಂದ ನೀನು ಮದುವೆಯಾಗು; ನೀನು ಅವನಲ್ಲಿಗೆ ಹೋದರೆ ಅವನು ತನ್ನ ಮಗಳನ್ನು ನಿನಗೆ ಕೊಡುವನು.

೫೬. ಅವಳಲ್ಲಿ ನಿನ್ನ ಕುಲವನ್ನು ಬಳೆಸುವ ಒಬ್ಬ ಮಗನು ಹುಟ್ಟುವನು. ನಿನಗೂ ನಿನ್ನ ತಂದೆಯಂತೆಯೇ ಭಿಕ್ಷೆಯಿಂದ ಬಂದ ಹಣದಿಂದ ಜೀವನವು ಉಂಟಾಗುವುದು.

ಪುನರ್ವ್ಯಕ್ತಾಯಾಂ ಭಾರ್ಯಾಯಾಂ ಭವಿತಾ ತ್ವಂ ತ್ರಿದಂಡಕಃ ।
ನರಸಿಂಹಪ್ರಸಾದೇನ ವೈಷ್ಣವಂ ಪದಮಾಪ್ಸ್ಯಸಿ ॥ ೫೭ ॥

ಭಾವ್ಯಮೇತತ್ತು ಕಥಿತಂ ಮಯಾ ತವ ಹಿ ಪೃಚ್ಛತಃ ।
ಮನ್ಯಸೇ ನಾನೃತಂ ಚ್ಚೇತತ್ಕುರು ಸರ್ವಂ ಹಿ ಮೇ ವಚಃ ॥ ೫೮ ॥

॥ ಬ್ರಾಹ್ಮಣ ಉವಾಚ ॥

ಗಚ್ಛಾಮಿ ಮಾತೃರಕ್ಷಾರ್ಥಮದ್ಯೈವಾಹಂ ಪತಿವ್ರತೇ ।
ಕರಿಷ್ಯೇ ತ್ವದ್ವಚಃ ಸರ್ವಂ ತತ್ರ ಗತ್ವಾ ಶುಭೇಕ್ಷಣೇ ॥ ೫೯ ॥

---

೫೭. ನಿನ್ನ ಮಡದಿಯು ನಿಧನವನ್ನೈದಲು, ಮತ್ತೆ ನೀನು ತ್ರಿದಂಡ ಸಂನ್ಯಾಸಿಯಾಗುವೆ; ಆ ನೀನು ಯತ್ಯಾಶ್ರಮಕ್ಕೆ ಯೋಗ್ಯವಾದ ಧರ್ಮಾಚರಣೆ ಯಿಂದಲೂ, ಸತ್ಯವನ್ನು ನುಡಿಯುವುದರಿಂದಲೂ (ಒಳ್ಳೆಯ ನಡತೆಯಿಂದಲೂ) ನಿತ್ಯ ಕರ್ಮಾನುಷ್ಠಾನದಿಂದಲೂ, ಶ್ರೀ ನರಸಿಂಹನ ಅನುಗ್ರಹವನ್ನು ಪಡೆದು ವಿಷ್ಣು ಲೋಕವನ್ನೈದುವೆ.

೫೮. ನೀನು ಕೇಳಿದುದರಿಂದ ನಿನಗೆ ಮುಂದೆ ಸಂಭವಿಸುವ ಈ ವಿಷಯು ವನ್ನೆಲ್ಲಾ ಹೇಳಿದೆನು. ನಾನು ಹೇಳಿದ ಈ ಸಂಗತಿಯನ್ನು ನೀನು ಸುಳ್ಳಲ್ಲವೆಂದು ತಿಳಿಯುವುದಾದರೆ ನನ್ನ ಈ ಮಾತೆಲ್ಲವನ್ನೂ ನಡೆಸು;' ಎಂದು ಪತಿವ್ರತೆಯು ಹೇಳಿದಳು.

ಬ್ರಾಹ್ಮಣನು ಹೇಳುತ್ತಾನೆ :—

೫೯. 'ಎಲೌ ಪತಿವ್ರತೆಯೇ! ಇಂದೇ ನಾನು ತಾಯಿಯನ್ನು ರಕ್ಷಿಸಲು ಹೋಗುತ್ತೇನೆ. ಎಲೌ ಮಂಗಳಕರವಾದ ನೋಟವುಳ್ಳವಳೇ! ಅಲ್ಲಿ ಹೋಗಿ ನೀನು ಹೇಳಿದುದೆಲ್ಲವನ್ನೂ ಮಾಡುವೆನು.'

ಇತ್ಯುಕ್ತ್ವಾ ಗತವಾನ್ ಬ್ರಹ್ಮನ್ದೇವಶರ್ಮಾ ತತಸ್ತ್ವರನ್ ।
ಸಂರಕ್ಷ್ಯ ಮಾತರಂ ಯತ್ನಾತ್ಕ್ರೋಧಮೋಹವಿವರ್ಜಿತಃ ॥ ೬೦ ॥

ಕೃತ್ವಾ ವಿವಾಹಮುತ್ಪಾದ್ಯ ಪುತ್ರಂ ವಂಶಕರಂ ಶುಭಮ್ ।
ಮೃತಭಾರ್ಯಶ್ಚ ಸಂನ್ಯಸ್ಯ ಸಮಲೋಷ್ಟಾಶ್ಮಕಾಂಚನಃ ॥ ೬೧ ॥

ನರಸಿಂಹಪ್ರಸಾದೇನ ಪರಾಂ ಸಿದ್ಧಿಮವಾಪ್ತವಾನ್ ।
ಪತಿವ್ರತಾಶಕ್ತಿರಿಯಂ ತವೇರಿತಾ
ಧರ್ಮಶ್ಚ ಮಾತುಃ ಪರಿರಕ್ಷಣಂ ಪರಮ್ ।

೬೦-೬೧. 'ಎಲೌ ಬ್ರಹ್ಮಜ್ಞಾನಿಯಾದ ಶುಕನೇ! ಕೇಳು; ಬಳಿಕ ಆ ದೇವಶರ್ಮನು ಆ ಹದಿಬದೆಗೆ ಇಂತು ಹೇಳಿ, ತ್ವರೆಗೊಳ್ಳುತ್ತಾ ಹೋದನು. ಕ್ರೋಧಮೋಹಗಳನ್ನುಳಿದು ಪ್ರಯತ್ನದಿಂದ ತಾಯಿಯನ್ನು ರಕ್ಷಿಸಿ, ಮದುವೆ ಮಾಡಿಕೊಂಡು, ಕುಲವನ್ನು ಬೆಳೆಸುವ ಸುಪುತ್ರನನ್ನು ಪಡೆದು, ಮಡದಿಯು ಅಳಿದ ಮೇಲೆ ಮಣ್ಣು, ಹೆಂಟೆ, ಕಲ್ಲು, ಮಿಸುನಿ, ಇವೆಲ್ಲವನ್ನೂ ಒಂದೇ ಸಮನೆ ತಿಳಿಯುತ್ತಾ ಸಂನ್ಯಾಸಗೊಂಡು ಶ್ರೀ ನರಸಿಂಹನ ಅನುಗ್ರಹದಿಂದ ಉತ್ತಮ ಫಲವನ್ನು ಹೊಂದಿದನು.

೬೨. ನಿನಗೆ ಪರೋಕ್ಷವಿಷಯಗಳನ್ನು ತಿಳಿಯುವ ಪತಿವ್ರತೆಯ ಈ ಶಕ್ತಿಯನ್ನು ಅರುಹಿದೆನು. ಮಾನವನಿಗೆ ತಾಯಿಯ ರಕ್ಷಣೆಯೇ ಪರಮಧರ್ಮವು. ಹೀಗೆ ಯಾವ ಮಾನವನು ನಡೆದುಕೊಳ್ಳುವನೋ ಅವನು ಸಂಸಾರವೆಂಬ ವೃಕ್ಷವನ್ನು

ಸಂಸಾರವೃಕ್ಷಂ ಚ ನಿಹತ್ಯ ಬಂಧನಂ

ಛಿತ್ವಾ ಚ ವಿಷ್ಣೋಃ ಪದಮೇತಿ ಮಾನವಃ ॥ ೬೨ ॥

ಇತಿ ಶ್ರೀ ನರಸಿಂಹಪುರಾಣೇ ಬ್ರಹ್ಮಚಾರಿ ಪತಿವ್ರತಾ ಸಂವಾದೋ

ನಾಮ ಚತುರ್ದಶೋಽಧ್ಯಾಯಃ

ಕತ್ತರಿಸಿ, ಅನಾದಿಯಾದ ಅವಿದ್ಯಾಕಾಮಕರ್ಮಗಳಿಂದುಂಟಾದ ಸಂಸಾರ ಬಂಧನವನ್ನು ಕತ್ತರಿಸಿ, ಶ್ರೀ ವಿಷ್ಣುಲೋಕವನ್ನೈದುವನು ;' ಎಂದು ವ್ಯಾಸಮುನಿಯು ಶುಕನಿಗೆ ಹೇಳಿದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಪತಿವ್ರತಾ ಬ್ರಹ್ಮಚಾರಿಸಂವಾದವೆಂಬ

ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

ಹದಿನಾಲ್ಕನೆಯ ಅಧ್ಯಾಯದ ವಿಷಯಸಂಗ್ರಹವು

ಈ ಅಧ್ಯಾಯದಲ್ಲಿ, ವ್ಯಾಸಮುನಿಯು ಶುಕಮುನಿಗೆ ಹಿಂದೆ ಧಾರ್ಮಿಕನಾದ ಕಶ್ಯಪನೆಂಬ ಬ್ರಾಹ್ಮಣನಿದ್ದನು. ಅವನ ಮಡದಿ ಸಾವಿತ್ರಿಯೆಂಬ ಮಹಾ ಪತಿವ್ರತೆಯು. ಇವರು ಮಧ್ಯದೇಶದ ನಂದಿಗ್ರಾಮದಲ್ಲಿ ವಾಸಮಾಡುತ್ತಿದ್ದರು. ಅಲ್ಲಿ ಮತ್ತೊಬ್ಬ ಯಜ್ಞಶರ್ಮನೆಂಬ ಬ್ರಾಹ್ಮಣನಿದ್ದನು. ಅವನ ಹೆಂಡತಿ ರೋಹಿಣಿ ಯೆಂಬ ಪತಿವ್ರತೆ; ಈ ಯಜ್ಞಶರ್ಮನು ಭಿಕ್ಷಾವೃತ್ತಿಯಿಂದ ಜೀವಿಸುತ್ತಿದ್ದನು. ಈ ದಂಪತಿಗಳಿಗೆ ದೇವಶರ್ಮನೆಂಬ ಮಗನು ಹುಟ್ಟಿದನು. ಈ ಬಾಲಕನು ತನ್ನ ಗರ್ಭಾಷ್ಟಮವರ್ಷದಲ್ಲಿ ಉಪನೀತನಾಗಿ ತನ್ನ ತಂದೆಯ ಬಳಿಯಲ್ಲಿ ಒಂದು ವೇದ ವನ್ನು ಅಧ್ಯಯನ ಮಾಡಿದನು. ಅಷ್ಟು ಹೊತ್ತಿಗೆ ಇವನ ತಂದೆಯು ಮೃತನಾದನು. ತರುವಾಯ ಆ ಬ್ರಾಹ್ಮಣಪುತ್ರನು ತಂದೆಯ ಪ್ರೇತಕರ್ಮವನ್ನೆಸಗಿ ತೀರ್ಥಯಾತ್ರೆ ಯನ್ನು ಮಾಡಿಕೊಂಡು, ಮತ್ತೆ ಅದೇ ಊರಿಗೆ ಬಂದು, ತಾನೂ ತಿರಿದು ಜೀವಿಸುತ್ತಾ ಜಪತಪಗಳನ್ನನುಷ್ಠಿಸಿಕೊಂಡಿದ್ದನು.

ಒಮ್ಮೆ ಈ ದೇವಶರ್ಮನು ಸ್ನಾನಮಾಡಿ ತನ್ನ ಬಟ್ಟೆಯನ್ನು ಒಣಗಲು ಹರಹಿರಲು, ಒಂದು ಕಾಗೆ ಮತ್ತೊಂದು ಬಲಾಕೆ ಇವು ಆ ವಸ್ತ್ರವನ್ನು ತೆಗೆದು ಕೊಂಡು ಹೋಗಲು, ಆಗ ಇವನು ಬೆದರಿಸಿದನು. ಆಗ ಆ ಹಕ್ಕಿಗಳು ಮಲವನ್ನು ಆ ಬಟ್ಟೆಯಮೇಲೆ ವಿಸರ್ಜಿಸಿ, ಬಿಟ್ಟು ಹಾರಿಹೋಗಲು, ಇವನು ಮುಳಿಸಿಂದ ಆ ಹಕ್ಕಿಗಳನ್ನು ನೋಡಿದನು. ಅವು ಸುಟ್ಟು ಭೂಮಿಯ ಮೇಲೆ ಬಿದ್ದುವು. ಅದನ್ನು ನೋಡಿ ತನ್ನ ತಪಃಶಕ್ತಿಗೆ ಗರ್ವಗೊಂಡು, ಎಂದಿನಂತೆ ಭಿಕ್ಷೆಗೆ ಹೊರಟವನು ಮಹಾ ಪತಿವ್ರತೆಯಾದ ಕಶ್ಯಪನ ಮಡದಿ ಸಾವಿತ್ರಿಯಲ್ಲಿಗೆ ಬಂದನು. ಆಕೆ ಈತನು ಭಿಕ್ಷೆಯನ್ನು ಬೇಡುತ್ತಿದ್ದರೂ, ಮೌನದಿಂದ ತನ್ನ ಪತಿಸೇವೆಯನ್ನೆಸಗುತ್ತಾ ಬಿಸು ನೀರಿನಿಂದ ಅವನ ಪಾದವನ್ನು ತೊಳೆದು, ಪತಿಯನ್ನು ಸಮಾಧಾನಗೊಳಿಸಿದ

ಮೇಲೆ ಆ ಬ್ರಹ್ಮಚಾರಿಗೆ ಭಿಕ್ಷೆಯನ್ನು ನೀಡಲು ಹೋದಳು. ಇಂತು ತಡಮಾಡಿ ದುದಕ್ಕೆ ಆ ಬ್ರಹ್ಮಚಾರಿಯು ಕೋಪಗೊಂಡು, ಹಕ್ಕಿಗಳನ್ನು ಸುಟ್ಟಂತೆ ಅವಳನ್ನೂ ಸುಡಲು, ಕೋಪದಿಂದ ನೋಡಿದನು. ಆಗ ಆ ಪತಿವ್ರತೆಯು ತಾನು ಆ ಹಕ್ಕಿಗಳಲ್ಲ ; ತಂದೆಯು ಸತ್ತಮೇಲೆ ಪ್ರೇತಕಾರ್ಯವನ್ನೆಸಗಿ ತೀರ್ಥಗಳಲ್ಲಿ ಮಿಂದು ತಾಯಿಯನ್ನು ಸಾಕದೇ ಇಂತು ಧರ್ಮಾಚರಣೆಯನ್ನು ಮಾಡುತ್ತೇನೆಂದು, ತಿರಿದು ಜೀವಿಸಲು ನಿಮಗೆ ನಾಚಿಕೆಯಿಲ್ಲವೆ? ಎಂದು ಕೇಳಿದಳು. ಆಗ ಅವನು ಭಿಕ್ಷೆಯನ್ನು ತೆಗೆದು ಕೊಂಡು, ತನ್ನ ಆಶ್ರಮಕ್ಕೆ ಬಂದು ಆ ಪತಿವ್ರತೆಯ ಪರೋಕ್ಷಾರ್ಥ ಜ್ಞಾನಕ್ಕೆ ಆಶ್ಚರ್ಯಪಟ್ಟು, ಮತ್ತೆ ಹೋಗಿ ಅವಳನ್ನು ಆ ಶಕ್ತಿ ಅವಳಿಗೆ ಉಂಟಾಗಲು ಕಾರಣ ವನ್ನು ಕೇಳಿದನು.

ಆಗ ಆ ಸಾವಿತ್ರಿಯು, ಸತಿಗೆ ಪಾತಿವ್ರತ್ಯವೇ ಪರಮಧರ್ಮ ; ಅದರ ಪ್ರಭಾವ ದಿಂದ ತನಗೆ ಆ ಶಕ್ತಿ ಲಭಿಸಿಮುದಾಗಿ ಹೇಳಲು, ತಾನು ತನಗೆ ಸದ್ಗತಿಯುಂಟಾಗಲು ಏನು ಮಾಡಬೇಕೆಂದು ಆ ಬ್ರಹ್ಮಚಾರಿಯು ಕೇಳಲು, ಮಾತೃರಕ್ಷಣೆಮಾಡಿ, ವಿವಾಹಿತನಾಗಿ, ಸಂತತಿಯನ್ನು ಬೆಳೆಸುವ ಸುಪುತ್ರನನ್ನು ಪಡೆದು, ಕೊನೆಗೆ ಮಡ ದಿಯು ಮೃತಳಾಗಲು ಸಂನ್ಯಸ್ತನಾಗಿ ಶ್ರೀ ನರಸಿಂಹನ ಪ್ರಸಾದದಿಂದ ಸದ್ಗತಿಯನ್ನು ಪಡೆಯುವೆಯೆಂದು ಅವನು ಮುಂದೆ ಮಾಡಬೇಕಾದುದೆಲ್ಲವನ್ನೂ ತನ್ನ ಪಾತಿವ್ರತ್ಯ ಮಹಿಮೆಯಿಂದರಿತು, ಹೇಳಲು ಆ ಬ್ರಾಹ್ಮಣನು ತನ್ನ ಅಕೃತ್ಯಕ್ಕೆ ನಾಚಿ, ಆ ಪತಿ ವ್ರತೆಯು ಹೇಳಿದಂತೆ ನಡೆದುಕೊಂಡು, ಶ್ರೀ ವಿಷ್ಣುಲೋಕವನ್ನೈದಿದನೆಂದು ಹೇಳಿ ದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಹದಿನಾಲ್ಕನೆಯ ಅಧ್ಯಾಯದ ವಿಷಯದ ವಿಷಯ ಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ಪಂಚದಶೋಽಧ್ಯಾಯಃ

ಪತಿವ್ರತಾ ಬ್ರಹ್ಮಚಾರಿ ಸಂವಾದ : (ಅನುವೃತ್ತಃ)

॥ ವ್ಯಾಸ ಉವಾಚ ॥

ಶೃಣು ವತ್ಸ ಮಹಾಬುದ್ಧೇ ಶಿಷ್ಯಾಶ್ಚೈತಾಂ ಪರಾಂ ಕಥಾಮ್ ।
ಮಯೋಚ್ಯಮಾನಾಂ ಶೃಣ್ವಂತು ಸರ್ವಪಾಪಪ್ರಣಾಶಿನೀಮ್ ॥ ೧ ॥

ಪುರಾ ದ್ವಿಜವರಃ ಕಶ್ಚಿದ್ವೇದಶಾಸ್ತ್ರವಿಶಾರದಃ ।
ಮೃತಭಾರ್ಯೋ ಗತಸ್ತೀರ್ಥಂ ಪುಣ್ಯಸ್ನಾನಂ ಯಥಾವಿಧಿ ॥ ೨ ॥

ಹದಿನೈದನೆಯ ಅಧ್ಯಾಯವು

ಪತಿವ್ರತೆಯ ಮತ್ತು ಬ್ರಹ್ಮಚಾರಿಯ ಸಂವಾದವು (ಮುಂದುವರಿದುದು)

ಶ್ರೀ ವ್ಯಾಸಮುನಿಯು ಶುಕನಿಗೆ ಇಂತು ಹೇಳುತ್ತಾನೆ :—

೧. 'ಎಲೈ ಮಹಾಮತಿಯಾದ ಮಗನೇ ! ಎಲೈ ಶಿಷ್ಯರೇ ! ನಾನು ಹೇಳುವ, ಸಕಲಪಾಪಗಳನ್ನೂ ಕಳೆಯುವ ಈ ಉತ್ತಮವಾದ ಕಥೆಯನ್ನು ಕೇಳಿರಿ.

೨. ಪೂರ್ವಕಾಲದಲ್ಲಿ ವೇದಶಾಸ್ತ್ರಗಳಲ್ಲಿ ನಿಪುಣನಾದ ಒಬ್ಬಾನೊಬ್ಬ ಶ್ರೇಷ್ಠನಾದ ಬ್ರಾಹ್ಮಣನು ಮಡದಿಯು ಸತ್ತುಹೋದ ಮೇಲೆ ವಿಧ್ಯನುಸಾರವಾಗಿ ಪುಣ್ಯಸಂಪಾದಕವಾದ ತೀರ್ಥ ಸ್ನಾನವನ್ನಾಚರಿಸಲು ತೀರ್ಥಕ್ಷೇತ್ರಗಳಿಗೆ ಹೋದನು.

ತಪಃ ಸುತಪ್ತಂ ವಿಜನೇ ನಿಸ್ಪೃಹೋ ದಾರಕರ್ಮಣಿ ।
ಭಿಕ್ಷಾಹಾರಃ ಪ್ರವಸಿತೋ ಜಪಸ್ನಾನಪರಾಯಣಃ ॥ ೩ ॥

ಸ್ನಾತ್ವಾ ಸ ಗಂಗಾಂ ಯಮುನಾಂ ಸರಸ್ವತೀಂ
ಪುಣ್ಯಾಂ ವಿತಸ್ತಾಮಥ ಗೋಮತೀಂ ಚ ।
ಗಯಾಂ ಸಮಾಸಾದ್ಯ ಪಿತೄನ್ಪಿತಾಮಹಾನ್
ಸಂತರ್ಪಯನ್ನನ್ಗತವಾನ್ಮಹೇಂದ್ರಮ್ ॥ ೪ ॥

ತತ್ರಾಪಿ ಕುಂಡೇಷು ಗಿರೌ ಮಹಾಮತಿಃ
ಸ್ನಾತ್ವಾನು ದೃಷ್ಟ್ವಾ ಭೃಗುನಂದನೋತ್ತಮಮ್ ।
ಕೃತ್ವಾ ಪಿತೃಭ್ಯಸ್ತು ತಥೈವ ತೃಪ್ತಿಂ
ವ್ರಜನ್ವನಂ ಪಾಪಹರಂ ಪ್ರವಿಷ್ಟಃ ॥ ೫ ॥

---

೩. ಆ ಬ್ರಾಹ್ಮಣನು ಯಾರೂ ಇಲ್ಲದ ನಿರ್ಜನ ಪ್ರದೇಶದಲ್ಲಿ ತಪವನ್ನು ಮಾಡಿದನು. ಮತ್ತೆ ಮದುವೆಮಾಡಿಕೊಳ್ಳಲು ಬಯಸಲಿಲ್ಲ. ತಿರಿದು ತಂದುದನ್ನು ಆಹಾರವಾಗಿ ಮಾಡಿಕೊಂಡು ಜಪಸ್ನಾನಗಳಿಗೆ ತೊಡಗಿದವನಾಗಿ ದೇಶಸಂಚಾರ ಮಾಡಿದನು.

೪. ಆ ವಿಪ್ರನು ಗಂಗೆ, ಯಮುನೆ, ಸರಸ್ವತಿ, ವಿತಸ್ತೆ, ಗೋಮತಿ ಮೊದಲಾದ ಪುಣ್ಯತೀರ್ಥಗಳಲ್ಲಿ ಮಿಂದು ಗಯೆಗೆ ಹೋಗಿ, ಅಲ್ಲಿ ತಂದೆ, ತಂದೆಯ ತಂದೆ ಇವರನ್ನು ಶ್ರಾದ್ಧಕರ್ಮದಿಂದ ತೃಪ್ತಿಪಡಿಸಿ, ಮಹೇಂದ್ರ ಪರ್ವತಕ್ಕೆ ಹೋದನು.

೫. ಆ ಬೆಟ್ಟದಲ್ಲಿ ಆ ಮಹಾಮತಿಯಾದ ಬ್ರಾಹ್ಮಣನು ಭಾವಿಗಳಲ್ಲಿ ಸ್ನಾನ ಮಾಡಿ, ಶ್ರೇಷ್ಠನಾದ ಭಾರ್ಗವನನ್ನು ಕಂಡು ಹಾಗೆಯೇ ಪಿತೃಗಳಿಗೆ (ಆನಂದ) ಸುಖವುಂಟಾಗುವಂತೆಸಗಿ, ತೆರಳಿ, ಪಾಪಗಳಿಗಳಿವನ್ನುಂಟುಮಾಡುವ ಬನಕ್ಕೆ ಹೊದನು.

ಧಾರಾಂ ಪತಂತೀಂ ಮಹತೀಂ ಶಿಲೋಚ್ಚಯಾತ್
ಸಂಧಾರ್ಯ ಭಕ್ತ್ಯಾ ತ್ವನು ನಾರಸಿಂಹೇ ।
ಶಿರಸ್ಯಶೇಷಾಘವಿನಾಶಿನೀಂ ತದಾ
ವಿಶುದ್ಧದೇಹಃ ಸ ಬಭೂವ ವಿಪ್ರಃ ॥ ೬ ॥

ವಿಂಧ್ಯಾಚಲೇ ಸಕ್ತಮನಂತಮಚ್ಯುತಂ ।
ಭಕ್ತೈರ್ಮುನೀಂದ್ರೈರಪಿ ಪೂಜಿತಂ ಸದಾ ।
ಆರಾಧ್ಯ ಪುಷ್ಪೈರ್ಗಿರಿಸಂಭವೈಃ ಶುಭೈ-
-ಸ್ತತ್ರೈವ ಸಿದ್ಧಿಂ ತ್ವಭಿಕಾಂಕ್ಷ್ಯ ಸಂಸ್ಥಿತಃ ।
ಸ ನಾರಸಿಂಹೋ ಬಹುಕಾಲ ಪೂಜಯಾ
ತುಷ್ಟಃ ಸ ನಿದ್ರಾಗತಮಾಹ ಭಕ್ತಮ್ ॥ ೭ ॥

ಅನಾಶ್ರಮಿತ್ವಂ ಗೃಹಭಂಗಕಾರಣಂ
ಹ್ಯತೋ ಗೃಹಾಣಾಶ್ರಮಮುತ್ತಮಂ ದ್ವಿಜ ।

---

೬. ಆಗ ಶ್ರೀ ನರಸಿಂಹಸ್ವಾಮಿಯಲ್ಲಿ ಭಕ್ತಿಯುಳ್ಳವನಾಗಿ ದೊಡ್ಡ ಬಂಡೆಯಿಂದ ಕೆಳಗೆ ಧುಮ್ಮಿಕ್ಕುತ್ತಲಿರುವ, ಸಕಲಪಾಪಗಳನ್ನೂ ಕಳೆಯುವ, ನೀರಿನ ಸಂಪಾತದ ಕೆಳಗೆ ತಲೆಗೊಟ್ಟು ಮಿಂದು, ಆ ಬ್ರಾಹ್ಮಣನು ಪೂತದೇಹನಾದನು.

೭. ಆ ಬ್ರಾಹ್ಮಣನು ವಿಂಧ್ಯಗಿರಿಯಲ್ಲಿದ್ದ, ನಿತ್ಯನಾದ, ದೇಹಹಾನ್ಯಾದಿಚ್ಯುತಿರಹಿತನಾದುದರಿಂದ ಅಚ್ಯುತನೆನಿಸಿಕೊಳ್ಳುವ, ಭಕ್ತರಾದ ಜ್ಞಾನಿಶ್ರೇಷ್ಠರಿಂದ ಸೇವೆಗೊಂಡ, ಶ್ರೀ ನರಸಿಂಹನನ್ನು ತಾನು ಯಾವಾಗಲೂ ಆ ಪರ್ವತದಲ್ಲಿಯೇ ಹುಟ್ಟಿದ ಮಂಗಳಸುಮಗಳಿಂದ ಪೂಜಿಸಿ, ಅಲ್ಲಿಯೇ ನಿರ್ವಾಣವನ್ನು ಪಡೆಯಲು ಎಳಸಿ ನಿಂತನು. ಆ ನರಸಿಂಹಸ್ವಾಮಿಯು ಇಂತು ಅವನೆಸಗಿದ ಬಹುಕಾಲದ ಸೇವೆಯಿಂದ ಮೆಚ್ಚಿ, ನಿದ್ರೆಗೊಳ್ಳುತ್ತಲಿದ್ದ ಆ ಭಕ್ತನಿಗೆ ಸ್ವಪ್ನದಲ್ಲಿ ಇಂತು ಹೇಳಿದನು.

೮. 'ಎಲೈ ದ್ವಿಜನೇ ! ಕೇಳು ; ಆಶ್ರಮವಿಲ್ಲದಿರುವುದು ಮನೆಯಿಲ್ಲದುದಕ್ಕೆ ಕಾರಣವಾಗಿದೆ. ಆದುದರಿಂದ ನೀನು ಉತ್ತಮವಾದ ಆಶ್ರಮವನ್ನು ಸ್ವೀಕರಿಸು,

ಅನಾಶ್ರಮೀತಿ ದ್ವಿಜ ವೇದಪಾರಗ್ಯೈ-
ರಪಿ ತ್ವಹಂ ನಾನುಗೃಹ್ಣಾಮಿ ಚಾತ್ರ ॥ ೮ ॥

ತಥಾಪಿ ನಿಷ್ಠಾಂ ತವ ವೀಕ್ಷ್ಯ ಸತ್ತಮ
ತ್ವಯಿ ಪ್ರಸನ್ನೇನ ಮಯೇತ್ಯುದೀರಿತಮ್ ।
ತೇನೈವಮುಕ್ತಃ ಪರಮೇಶ್ವರೇಣ
ದ್ವಿಜೋಽಪಿ ಬುದ್ಧ್ಯಾ ಪ್ರವಿಚಿಂತ್ಯ ವಾಕ್ಯಮ್ ॥ ೯ ॥

ಹರೇರಲಂಘ್ಯಂ ನರಸಿಂಹಮೂರ್ತೇ-
ರ್ವಿಧಿಂ ಚ ಕೃತ್ವಾ ಸ ಯತಿರ್ಬಭೂವ ।
ತ್ರಿದಂಡವೃಕ್ಷಾಕ್ಷಪವಿತ್ರಪಾಣಿ-
ರಾಪ್ಲುತ್ಯ ತೀರ್ಥೇ ತ್ವಘಹಾರಿಣಿ ಸ್ಥಿತಃ ॥ ೧೦ ॥

ಜಪನ್ಸದಾ ಮಂತ್ರಮಪಾಸ್ತದೋಷಂ
ಸಾವಿತ್ರ್ಯಮೀಶಂ ಹೃದಯೇ ಸ್ಮರನ್ಹರಿಮ್ ।

ಎಲೈ ದ್ವಿಜನೇ ! ನಾನು ಆಶ್ರಮ ಶೂನ್ಯವಾಗಿರುವ, ಸಕಲ ವೇದಪಾರಂಗತರಾದವರ ವಿಷಯದಲ್ಲಿಯೂ ಇಲ್ಲಿ ಅನುಗ್ರಹಮಾಡುವುದಿಲ್ಲ.

೯-೧೦. ಆದರೂ ಎಲೈ ಶ್ರೇಷ್ಠನಾದವನೇ! ನಿನ್ನ ನಿಷ್ಠೆಯನ್ನು ಅರಿತು, ನಾನು ನಿನ್ನಲ್ಲಿ ಪ್ರಸನ್ನನಾಗಿ ಇಂತು ಹೇಳಿದೆನು,' ಎಂದು ಭಗವಂತನು ಹೇಳಲು, ಆ ಬ್ರಾಹ್ಮಣನು ಆ ನುಡಿಯನ್ನು ತನ್ನ ಬುದ್ಧಿಯಿಂದ ಆಲೋಚನೆಗೆಯ್ದು ಶ್ರೀ ನರಸಿಂಹಸ್ವರೂಪನಾದ ಶ್ರೀ ಹರಿಯು ಮೀರಲಾಗದ ಆಜ್ಞೆಯನ್ನು ಅರಿತು, ಸಂನ್ಯಾಸಾಶ್ರಮವನ್ನು ತಾಳಿದನು. ತ್ರಿದಂಡಗಳು, ಕಮಲಾಕ್ಷಮಣಿ, ಕುಶದ ಪವಿತ್ರ— ಇವುಗಳ್ನು ಕೈಯಲ್ಲಿ ಧರಿಸಿ, ಆ ಪಾಪನಾಶಕವಾದ ತೀರ್ಥದಲ್ಲಿ ಸ್ನಾನಮಾಡಿ ಇದ್ದನು.

೧೧. ಆ ಬ್ರಾಹ್ಮಣನು ಯಾವಾಗಲೂ ಶ್ರೀ ಹರಿಯನ್ನು ಮನದಲ್ಲಿ ನೆನೆಯುತ್ತಾ, ಪವಿತ್ರವಾದ ಸೂರ್ಯದೇವತಾಕವಾದ ಮಂತ್ರವನ್ನು ಯಾವಾಗಲೂ ಜಪಿ

ಯಂಥಾಕಥಂಚಿತ್ಪ್ರತಿಲಭ್ಯ ಶಾಕಂ
ಭೈಕ್ಷ್ಯಾಭಿತುಷ್ಟೋ ವನವಾಸವಾಸೀ ॥ ೧೧ ॥

ಅಭ್ಯರ್ಚ್ಯ ವಿಷ್ಣುಂ ನರಸಿಂಹಮೂರ್ತಿಂ
ಧ್ಯಾತ್ವಾ ಚ ನಿತ್ಯಂ ಹೃದಿ ಶುದ್ಧಮಾದ್ಯಮ್ ।
ವಿವಿಕ್ತದೇಶೇ ವಿಪುಲೇ ಕುಶಾಸನೇ
ನಿವೇಶ್ಯ ಸರ್ವಂ ಹೃದಯೇಽಸ್ಯ ಸರ್ವಮ್ ॥ ೧೨ ॥

ಬಾಹ್ಯಂ ಸಮಸ್ತಂ ಗುಣಮಿಂದ್ರಿಯಾಣಾಂ
ವಿಲೀಯ ಭೇದಂ ಭಗವತ್ಯನಂತೇ ।
ವಿಜ್ಞೇಯಮಾನಂದಮಜಂ ವಿಶಾಲಂ
ಸತ್ಯಾತ್ಮಕಂ ಕ್ಷೇಮಪದಂ ವರೇಣ್ಯಮ್ ॥ ೧೩ ॥

ಸುತ್ತಾ, ಹೇಗೆಯೋ ದೊರೆತ ಸೊಪ್ಪು, ಭಿಕ್ಷೆಯಿಂದ ದೊರೆತ ಧಾನ್ಯ—ಇವುಗಳಿಂದ ಸಂತಸಗೊಂಡು, ಕಾಡಿನಲ್ಲಿ ವಾಸಮಾಡಿಕೊಂಡಿದ್ದನು.

೧೨-೧೬. ಶ್ರೀ ನರಸಿಂಹಮೂರ್ತಿಯಾದ ವಿಷ್ಣುವನ್ನು ಪೂಜಿಸಿ, ನಿರಂತರದಲ್ಲಿಯೂ, ಹೃದಯದಲ್ಲಿ ಸಕಲಗಳಾದ ಸಾಂತತ್ವ, ಸಾತಿಶಯತ್ವಾದಿ ದೋಷಗಳಿಂದ ಶೂನ್ಯವಾದ, ಸಕಲ ಲೋಕಕ್ಕೂ ಮೊದಲಿಗನಾದ ಭಗವಂತನನ್ನು ಧ್ಯಾನಮಾಡಿ, ನಿರ್ಜನವಾದೆಡೆಯಲ್ಲಿ ಅಗಲವಾದ ದರ್ಭೆಯ ಚಾಪೆಯಲ್ಲಿ ಕುಳಿತು, ಹೃದಯದಲ್ಲಿ ಸರ್ವಾತ್ಮಕನಾದ ಭಗವಂತನನ್ನು ಜಾನಿಸಿ, ಸಕಲವಾದ ಇತರ ವಿಷಯಗಳನ್ನೂ ಹೊರದೂಡಿ, ಹೊರಗಣ ಕಣ್ಣೇ ಮೊದಲಾದ ಇಂದ್ರಿಯಗಳ ವಿಷಯಗಳಾದ ರೂಪಾದಿ ಗುಣಗಳನ್ನೆಲ್ಲಾ ದೂರಮಾಡಿ, ಅನಂತವಾದ ಭಗವಂತನ ಸ್ವರೂಪಗಳಲ್ಲಿ ಭೇದಬುದ್ಧಿಯನ್ನುಳಿದು, ಸರ್ವರಿಂದಲೂ ಪರಮಾರ್ಥತತ್ವವೆಂದು ತಿಳಿಯಬೇಕಾದ, ಪೂರ್ಣ ಸುಖಸ್ವರೂಪನಾದ, ಹುಟ್ಟಿಲ್ಲದ, ಸರ್ವತ್ರವ್ಯಾಪ್ತನಾದ, ಸತ್ಯಸ್ವರೂಪನಾದ, ಮಂಗಳ

ಸಂಚಿಂತ್ಯ ತಸ್ಮಿನ್ಪ್ರವಿಹಾಯ ದೇಹಂ
ಬಭೂವ ಮುಕ್ತಃ ಪರಮಾತ್ಮರೂಪೀ ।
ಇಮಾಂ ಕಥಾಂ ಮುಕ್ತಿಪರಾಂ ಯಥೋಕ್ತಾಂ
ಪಠಂತಿ ಯೇ ನಾರಸಿಂಹಂ ಸ್ಮರಂತಃ ॥ ೧೪ ॥

ಪ್ರಯಾಗತೀರ್ಥಪ್ಲವನೇ ತು ಯತ್ಫಲಂ
ತತ್ಪ್ರಾಪ್ಯ ತೇ ಯಾಂತಿ ಹರೇಃ ಪದಂ ಮಹತ್ ।
ಇತ್ಯೇತದುಕ್ತಂ ತವ ಪುತ್ರ ಪೃಚ್ಛತಃ
ಪುರಾತನಂ ಪುಣ್ಯತಮಂ ಪವಿತ್ರಕಮ್ ॥ ೧೫ ॥

ಸ್ವರೂಪನಾದ, ಸರ್ವೋತ್ತಮನಾದ ಶ್ರೀ ಹರಿಯನ್ನು ಧ್ಯಾನಮಾಡಿ, ಆ ವಿಂಧ್ಯಗಿರಿಯ ಹಳುವದಲ್ಲಿ ಒಡಲನ್ನು ಬಿಟ್ಟು, ಶ್ರೀ ಪರಮಾತ್ಮನ ಸಾರೂಪ್ಯವೆಂಬ ಮುಕ್ತಿಯನ್ನು ಪಡೆದನು.

ಯಾರು ಶ್ರೀ ನರಸಿಂಹನನ್ನು ಚಿಂತಿಸುತ್ತಾ, ಮುಕ್ತಿಸಾಧಕವಾದ ನಾನು ಹೇಳಿದ ಈ ಕಥೆಯನ್ನು ಓದುತ್ತಾರೆಯೋ, ಅವರು ಪ್ರಯಾಗತೀರ್ಥದಲ್ಲಿ ಮಿಂದವನಿಗೆ ಲಭಿಸುವಂತಹ ಫಲವನ್ನು ಹೊಂದಿ, ಶ್ರೀ ಹರಿಯ ಉತ್ತಮ ಸ್ಥಾನವಾದ ವೈಕುಂಠಾದಿಲೋಕಗಳನ್ನೈದುವರು. ಎಲೈ ಪುತ್ರನಾದ ಶುಕನೇ! ಸದ್ಭಕ್ತಿಯಿಂದ ಕೇಳಿದ ನಿನಗೆ, ಹಳತಾದ, ವಿಶೇಷ ಪುಣ್ಯಸಂಪಾದಕವಾದ, ಪವಿತ್ರವಾದ ಈ ಕಥೆ

ಸಂಸಾರವೃಕ್ಷಸ್ಯ ವಿನಾಶನಂ ಪರಂ
ಪುನಃ ಕಿಮಿಚ್ಛಸ್ಯಭಿವಾಂಛಿತಂ ವದ ॥ ೧೬ ॥

ಇತಿ ಶ್ರೀ ನರಸಿಂಹಪುರಾಣೇ ಆಶ್ರಮ ಮಹಿಮಾ ನಾಮ
ಪಂಚದಶೋಽಧ್ಯಾಯಃ

ಯನ್ನರುಹಿದೆನು. ಇದು ಸಂಸಾರವೆಂಬ ಮರವನ್ನು ಕತ್ತರಿಸಿ, ಮುಕ್ತಿಯನ್ನು ದೊರಕಿಸುವುದು. ಮತ್ತೂ ಇನ್ನಾವುದನ್ನು ಕೇಳಲೆಳಸುವೆ; ಹೇಳು.' ಎಂದು ಶ್ರೀ ವ್ಯಾಸಮುನಿಯು ಶುಕಮುನಿಗೆ ಹೇಳಿದುದನ್ನು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಆಶ್ರಮ ಮಹಿಮೆಯೆಂಬ
ಹದಿನೈದನೆಯ ಅಧ್ಯಾಯವು
ಮುಗಿದುದು

ಹದಿನೈದನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ಶ್ರೀ ವ್ಯಾಸಮುನಿಯು ತನ್ನ ತನಯನಾದ ಶುಕನಿಗೂ, ಇತರ ಶಿಷ್ಯರಿಗೂ ಪುರಾತನವಾದ, ಪಾಪಹರವಾದ ಕಥೆಯನ್ನು ಹೇಳಲು ತೊಡಗಿ, ಪೂರ್ವದಲ್ಲಿ ಓರ್ವಬ್ರಾಹ್ಮಣನು ಸಕಲ ವೇದಪಾರಂಗತನಾಗಿ ಗೃಹಸ್ಥಾಶ್ರಮದಲ್ಲಿದ್ದು, ಪತ್ನಿಯು ತೀರಿಕೊಳ್ಳಲು, ಮತ್ತೆ ಮದುವೆ ಮಾಡಿಕೊಳ್ಳಲು ಬಯಸದೆ, ಜಪ, ತಪ ಇವೇ ಮೊದಲಾದವುಗಳಲ್ಲಿ ಮನತೊಡಗಿ, ತೀರ್ಥಯಾತ್ರೆಯಿಂದ ಹೊರಟು, ಅನೇಕ ಪವಿತ್ರಗಳಾದ ಗಂಗಾದಿತೀರ್ಥಗಳಲ್ಲಿ ಮಿಂದು, ಮಹೇಂದ್ರಪರ್ವತಕ್ಕೆ ಬಂದು, ಅಲ್ಲಿದ್ದ ಶ್ರೀ ಹರಿಯನ್ನು ಸೇವಿಸಿ, ವಿಂಧ್ಯಗಿರಿಗೆ ಬಂದು, ಅಲ್ಲಿ ಒಂದು ಶಿಲೆಯಿಂದ ಬೀಳುವ ಪ್ರಪಾತದ ಕೆಳಗೆ ನಿಂತು ಸ್ನಾನಮಾಡಿ, ಶುದ್ಧಾತ್ಮನಾಗಿ, ಯದೃಚ್ಛೆಯಿಂದ ದೊರೆತ ಶಾಕಭೈಕ್ಷದಿಂದ ಜೀವಿಸುತ್ತಾ ಶ್ರೀ ನರಸಿಂಹಧ್ಯಾನಪರನಾಗಿದ್ದನು.

ಆಗ ಭಗವಂತನು ಒಮ್ಮೆ ಆತನಿಗೆ ಸ್ವಪ್ನದಲ್ಲಿ ಭಕ್ತನಾದವನು ಎಷ್ಟೇ ವೇದ ಶಾಸ್ತ್ರಪಾರಂಗತನಾಗಿದ್ದರೂ, ನಿರಾಶ್ರಮಿಯಾಗಿದ್ದಲ್ಲಿ ತಾನು ಅನುಗ್ರಹಿಸುವುದಿಲ್ಲ ವಾದುದರಿಂದ ಉತ್ತಮವಾದ ಆಶ್ರಮವನ್ನು ತಾಳಬೇಕೆಂದು ಹೇಳಲು, ಆ ದ್ವಿಜನು ಶ್ರೇಷ್ಠವಾದ ಯತ್ಯಾಶ್ರಮವನ್ನಾಶ್ರಯಿಸಿ, ತ್ರಿದಂಡ, ಕಮಲಾಕ್ಷ, ಪವಿತ್ರಪಾಣಿ ಯಾಗಿ ಶುದ್ಧನಾಗಿ, ಬಾಹ್ಯೇಂದ್ರಿಯವಿಷಯಗಳನ್ನು ತಿರಸ್ಕರಿಸಿ, ಶ್ರೀಮನ್ನಾರಾಯಣ, ಅವನ ಮೂಲರೂಪ, ಅವತಾರರೂಪಗಳು ಇವುಗಳಿಗೆ ಭೇದವನ್ನೆಣಿಸದೆ ಅನವರತ ತದೇಕಧ್ಯಾನದಿಂದಿದ್ದು, ಆ ಕಳೇಬರವನ್ನು ಬಿಟ್ಟು, ಶ್ರೀ ಹರಿ ಸಾರೂಪ್ಯಮುಕ್ತಿ ಯನ್ನು ಪಡೆದನು. ಭಗವದನುಗ್ರಹವನ್ನು ಬಯಸುವವನು ಆಶ್ರಮರಹಿತನಾಗಿ ರದೆ, ಭಗವಂತನನ್ನು ಧ್ಯಾನಮಾಡಬೇಕು. ಈ ಕಥೆಯನ್ನು ಪಠಿಸುವವರೂ ಪಾಪಶೂನ್ಯರಾಗಿ, ಶ್ರೀ ಹರಿಯ ಲೋಕವನ್ನೈದುವರು, ಎಂದು ನಿರೂಪಿಸಿದುದನ್ನು ಸೂತರು ಭರದ್ವಾಜರಿಗೆ ಹೇಳಿರುತ್ತಾರೆ.

ಇಂತು ಹದಿನೈದನೆಯ ಅಧ್ಯಾಯದ ವಿಷಯ ಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ಷೋಡಶೋಽಧ್ಯಾಯಃ

ಸಂಸಾರ ಲಕ್ಷಣಂ ; ತತ್ಪರಿಹಾರಶ್ಚ

॥ ಶ್ರೀ ಶುಕ ಉವಾಚ ॥

ಶ್ರೋತುಮಿಚ್ಛಾಮ್ಯಹಂ ತಾತ ಸಾಂಪ್ರತಂ ಮುನಿಭಿಃ ಸಹ ।
ಸಂಸಾರವೃಕ್ಷಂ ಸಕಲಂ ಯೇನೇದಂ ಪರಿವರ್ತತೇ ॥ ೧ ॥

ವಕ್ತುಮರ್ಹಸಿ ಮೇ ತಾತ ತ್ವಯ್ಯೈತತ್ಸೂಚಿತಂ ಪುರಾ ।
ನಾನ್ಯೋ ವೇತ್ತಿ ಮಹಾಭಾಗ ಸಂಸಾರೋಚ್ಛಾರಲಕ್ಷಣಮ್ ॥ ೨ ॥

ಸೃಷ್ಟಿಕಾಂಡವು ; ಹದಿನಾರನೆಯ ಅಧ್ಯಾಯವು

ಸಂಸಾರಲಕ್ಷಣವು ಮತ್ತು ಅದರ ಪರಿಹಾರವು

ಶುಕಮುನಿಯು ತನ್ನ ತಂದೆಯೂ, ಗುರುವೂ ಆದ ವ್ಯಾಸಮುನಿಗೆ ಇಂತು ಹೇಳುತ್ತಾನೆ :—

೧-೨. "ಎಲೈ ತಂದೆಯೇ! ಈಗ ನಾನು ಈ ಮುನಿಗಳಿಂದ ಕೂಡಿ, ಈ ಸಂಸಾರವೆಂಬ ಮಹೀರುಹವು ಯಾವನಿಂದ ಪ್ರವರ್ತಿಸುತ್ತದೆಯೋ, ಆ ಸಂಗತಿಯನ್ನು ಕೇಳಬಯಸುತ್ತೇನೆ ; ಹಿಂದೆ ನೀವೇ ಇದನ್ನು ಸೂಚಿಸಿದ್ದಿರಿ ; ಎಲೈ ಪೂಜ್ಯರೇ! ಈ ಸಂಸಾರವನ್ನು ತೊಲಗಿ ಹೋಗಿಸುವ ಧರ್ಮವನ್ನು ನಿಮ್ಮನ್ನು ಹೊರತು ಮತ್ತಾರೂ ಅರಿಯರು ; ಆದುದರಿಂದ ನೀವೇ ಇದನ್ನು ನಮಗೆ ಹೇಳಬೇಕೆಂದು ಬೇಡುತ್ತೇನೆ," ಎಂದು ಕೇಳಿದನು.

॥ ಸೂತ ಉವಾಚ ॥

ಸ ಪುತ್ರೇಣೈವಮುಕ್ತಸ್ತು ಶಿಷ್ಯಾಣಾಂ ಮಧ್ಯಗೇನ ಚ ।
ಕೃಷ್ಣದ್ವೈಪಾಯನಃ ಪ್ರಾಹ ಸಂಸಾರತರುಲಕ್ಷಣಮ್ ॥ ೩ ॥

॥ ವ್ಯಾಸ ಉವಾಚ ॥

ಶೃಣ್ವಂತು ಶಿಷ್ಯಾಃ ಸಕಲಾ ವತ್ಸ ತ್ವಂ ಶೃಣು ಭಾವಿತಃ ।
ಸಂಸಾರವೃಕ್ಷಂ ವಕ್ಷ್ಯಾಮಿ ಯೇನ ಚೇದಂ ಸಮಾವೃತಮ್ ॥ ೪ ॥

ಅವ್ಯಕ್ತಮೂಲಪ್ರಭವಸ್ತಸ್ಮಾದಗ್ರೇ ತಥೋಚ್ಛ್ರಿತಃ ।
ಬುದ್ಧಿಸ್ಕಂಧಮಯಶ್ಚೈವ ಇಂದ್ರಿಯಾಂಕುರಕೋಟರಃ ॥ ೫ ॥

ಸೂತರು ಭರದ್ವಾಜನಿಗೆ ಹೇಳುತ್ತಾರೆ :—

೩. "ಎಲೈ ಭರದ್ವಾಜನೇ ! ಕೇಳು ; ಶಿಷ್ಯರ ಮಧ್ಯದಲ್ಲಿ ಪುತ್ರನಾದ ಶುಕ ಮುನಿಯು ಇಂತು ಕೇಳಲು, ಶ್ರೀ ಕೃಷ್ಣದ್ವೈಪಾಯನ ವ್ಯಾಸ ಮುನಿಯು, ಸಂಸಾರ ವೆಂಬ ತರುವಿನ ಲಕ್ಷಣವನ್ನು ಹೇಳತೊಡಗಿದನು."

ಶ್ರೀ ವ್ಯಾಸಮುನಿಯು ಶುಕಾದಿಗಳಿಗೆ ಇಂತು ಹೇಳುತ್ತಾನೆ:—

೪. "ಎಲೈ ಶಿಷ್ಯರುಗಳಿರಾ ! ಎಲೈ ಪುತ್ರನಾದ ಶುಕನೇ ! ನೀವೆಲ್ಲರೂ ಚಿತ್ತಶುದ್ಧಿಯಿಂದ ಕೇಳಿರಿ; ಈ ಸಂಸಾರವೆಂಬ ತರುವು ಯಾವುದರಿಂದ ಕವಿದಿದೆ ಯೆಂಬುದನ್ನು ಹೇಳುವೆನು.

೫-೭. ಈ ಸಂಸಾರವೆಂಬ ವೃಕ್ಷವು ಪರಿಣಾಮವಿಲ್ಲದ ಪರಾವ್ಯಕ್ತನೆನಿಸುವ ಶ್ರೀಮನ್ನಾರಾಯಣನೂ, ಚೇತನಪ್ರಕೃತಿಯೂ, ಪರಿಣಾಮಿಯಾದ ಜಡಪ್ರಕೃತಿಯೂ ಎಂಬ ಬೇರಿನಿಂದ ಹುಟ್ಟುವುದು. ಆ ಪ್ರಕೃತಿಯಿಂದಲೇ ಮುಂದೆ ಹಾಗೆಯೇ

ಮಹಾಭೂತವಿಶಾಲಶ್ಚ ವಿಶೇಷೈಃ ಪತ್ರಶಾಖವಾನ್ ।
ಧರ್ಮಾಧರ್ಮಸುಪುಷ್ಪಶ್ಚ ಸುಖದುಃಖಫಲೋದಯಃ ॥ ೬ ॥

ಆಜೀವ್ಯಃ ಸರ್ವಭೂತಾನಾಂ ಬ್ರಹ್ಮವೃಕ್ಷಸ್ಸನಾತನಃ ।
ಏತದ್ಬ್ರಹ್ಮ ಪರಂ ಚೈವ ಬ್ರಹ್ಮವೃಕ್ಷಸ್ಯ ತಸ್ಯ ತತ್ ॥ ೭ ॥

ಇತ್ಯೇವಂ ಕಥಿತಂ ವತ್ಸ ಸಂಸಾರವೃಕ್ಷಲಕ್ಷಣಮ್ ।
ವೃಕ್ಷಮೇವಂ ಸಮಾರೂಢಾ ಮೋಹಮಾಯಾಂತಿ ದೇಹಿನಃ ॥ ೮ ॥

ಸಂಸರಂತೀಹ ಸತತಂ ಸುಖದುಃಖಸಮನ್ವಿತಾಃ ।
ಪ್ರಾಯೇಣ ಪ್ರಾಕೃತಾ ಮರ್ತ್ಯಾ ಬ್ರಹ್ಮಜ್ಞಾನಪರಾಙ್ಮುಖಾಃ ॥ ೯ ॥

ಎತ್ತರವಾಗಿ ಬೆಳೆದಿರುವುದು. ಬುದ್ಧ್ಯಭಿಮಾನಿದೇವತೆಗಳಾದ ವಾಯುವಾಣ್ಯಾದಿ ದೇವತೆಗಳುಳ್ಳ ಬುದ್ಧಿಯೆಂಬ ರೆಂಬೆಗಳಿಂದ ತುಂಬಿರುವುದು. ಇಂದ್ರಿಯಗಳೆಂಬ ಮೊಳೆಯು ಮರದ ಹೊಳಲುಳ್ಳದು. ಪಂಚಮಹಾಭೂತಗಳಿಂದ ಹರಡಿರುವುದು. ತನ್ಮಾತ್ರಗಳಾದ ಶಬ್ದಾದಿಗಳೆಂಬ ಎಲೆಯುಳ್ಳ ಸಣ್ಣಸಣ್ಣರೆಂಬೆಯುಳ್ಳದು ; ಸುಖ ದುಃಖಗಳೆಂಬ ಹಣ್ಣುಬಿಡುವ, ಧರ್ಮಾಧರ್ಮವೆಂಬ ಹೂಗಳುಳ್ಳದು ; ಸಕಲ ಸ್ಥಾವರಜಂಗಮಾತ್ಮಕಗಳಾದ ಪ್ರಾಣಿಗಳಿಗೂ ಆಶ್ರಯವಾಗಿರುವುದು. ಪ್ರವಾಹದಂತೆ ನಿತ್ಯವಾದ ವಿಧಿನಿಷೇಧ ಬದ್ಧವಾದುದು ಈ ಸಂಸಾರವೃಕ್ಷವು. ಆ ಬ್ರಹ್ಮಸೃಷ್ಟವಾದ ಸಂಸಾರ ವೃಕ್ಷದಿಂದ ಆ ಈ ಗುಣಪೂರ್ಣನಾದ ನಾರಾಯಣನು ಅತಿರಿಕ್ತನಾಗಿ, ಭಿನ್ನನಾಗಿ, ನಿಯಾಮಕನಾಗಿ, ಸರ್ವೋತ್ಕೃಷ್ಟನಾಗಿರುತ್ತಾನೆ.

೮. ಎಲೈ ಪುತ್ರನೇ! ಇಂತು ಸಂಸಾರವೆಂಬ ತರುವಿನ ಲಕ್ಷಣವನ್ನು ಅರುಹಿದೆನು. ಈ ಮರವನ್ನೇರಿದ ದೇಹಿಗಳು ಮೋಹವನ್ನು ಹೊಂದಿರುತ್ತಾರೆ.

೯. ಪ್ರಕೃತಿಸಂಬಂಧದಿಂದ ಮರಣವನ್ನು ಹೊಂದುವ ಸ್ವಭಾವದವರಾದ, ಪರಬ್ರಹ್ಮಜ್ಞಾನರಹಿತರಾದ ಮಾನವರು ಯಾವಾಗಲೂ ಸುಖದುಃಖಗಳಿಂದ ಕೂಡಿದವರಾಗಿ, ಈ ಪ್ರಪಂಚದಲ್ಲಿ ಜನನ ಮರಣ ಪ್ರವಾಹರೂಪವಾದ ಸಂಸಾರದಲ್ಲಿ ತೊಳಲುತ್ತಾರೆ.

ಛಿತ್ವೈನಂ ಕೃತಿನೋ ಯಾಂತಿ ನೋ ಯಾಂತ್ಯಬ್ರಹ್ಮಜ್ಞಾನಿನಃ ।
ಕರ್ಮಕ್ರಿಯೋ ಮಹಾಪ್ರಾಜ್ಞ ನೈನಂ ಛಿಂದಂತಿ ದುಷ್ಕೃತಾಃ ॥ ೧೦ ॥

ಏನಂ ಛಿತ್ವಾ ಚ ಭಿತ್ವಾ ಚ ಜ್ಞಾನೇನ ಪರಮಾಸಿನಾ ।
ತತೋಽಮರತ್ವಂ ತೇ ಯಾಂತಿ ಯಸ್ಮಾನ್ನಾವರ್ತತೇ ಪುನಃ ॥ ೧೧ ॥

ದೇಹದಾರಮಯೈಃ ಪಾಶೈರ್ದೃಢಂ ಬದ್ಧೋಽಪಿ ಮುಚ್ಯತೇ ।
ಜ್ಞಾನಮೇವ ಪರಂ ಪುಂಸಾಂ ಶ್ರೇಯಸಾಮಭಿವಾಂಛಿತಮ್ ।
ತೋಷಣಂ ನರಸಿಂಹಸ್ಯ ಜ್ಞಾನಹೀನಃ ಪಶುಃ ಪುಮಾನ್ ॥ ೧೨ ॥

---

೧೦. ಪುಣ್ಯವಂತರಾದ ಜ್ಞಾನಿಗಳು ಮಾತ್ರ ಈ ಸಂಸಾರಬಂಧನವನ್ನು ಕತ್ತರಿಸಿಕೊಂಡು, ಮುಕ್ತರಾಗುತ್ತಾರೆ. ಬ್ರಹ್ಮಜ್ಞಾನವಿಲ್ಲದವರು ನಿರ್ವಾಣವನ್ನೈದುವುದಿಲ್ಲವು. ಎಲೈ ಮಹಾ ಮತಿಯಾದ ಶುಕನೇ! ಕೇಳು ; ಯಜ್ಞಯಾಗಾದಿ ಕರ್ಮಗಳ ಫಲಗಳಲ್ಲಿ ಆಸಕ್ತರಾದವರಾಗಿ ದುಷ್ಕರ್ಮವನ್ನೆಸಗುವವರು ಈ ಸಂಸಾರದ ಬಂಧವನ್ನು ಕತ್ತರಿಸಿಕೊಳ್ಳಲಾರರು.

೧೧. ಸುಕೃತಿಗಳಾದವರು ತತ್ವಜ್ಞಾನವೆಂಬ ಉತ್ತಮವಾದ ಕೂರಸಿಯಿಂದ ಈ ಸಂಸಾರಕಾರಣಗಳಾದ ಸಂಶಯಾದಿಗಳನ್ನು ಕತ್ತರಿಸಿ, ಪರಮಾತ್ಮಸಾಕ್ಷಾತ್ಕಾರಕ್ಕೆ ಅಡ್ಡಿಯಾಗಿರುವ ಅಜ್ಞಾನವನ್ನು ಭೇದಿಸಿ, ಬಳಿಕ ಪುನಃ ಹಿಂದಕ್ಕೆ ಬಂದು, ಜನ್ಮವನ್ನು ತಾಳದಿರುವ ಮೋಕ್ಷವೆಂಬ ಪುರುಷಾರ್ಥವನ್ನು ಭಗವಂತನ ಅತ್ಯರ್ಥ ಪ್ರಸಾದದ ಮೂಲಕ ಹೊಂದುತ್ತಾರೆ.

೧೨. ಈ ಮಾನವನು ಪಾಂಚಭೌತಿಕವಾದ ಒಡಲು, ಹೆಂಡತಿ, ಮೊದಲಾದ ಹಗ್ಗಗಳಿಂದ ಬಹುಬಲವಾಗಿ ಕಟ್ಟಿಸಿಕೊಂಡಿರುವನಾದರೂ, ಬ್ರಹ್ಮಜ್ಞಾನವೆಂಬ ಸಾಧನದಿಂದ ಈ ಕಟ್ಟಿನಿಂದ ಬಿಡುಗಡೆಯನ್ನು ಹೊಂದುತ್ತಾನೆ. ಆದುದರಿಂದ ಪುರುಷರು ನಿಃಶ್ರೇಯಸ್ಸಿಗೆ ಮುಖ್ಯಸಾಧನವೆಂದು ಬಯಸಬೇಕಾದುದು ತತ್ವಜ್ಞಾನವೊಂದೇ ; ಅಂತಹ ಜ್ಞಾನಪುರಸ್ಸರವಾದ ಭಕ್ತಿಯಿಂದುಂಟಾಗುವ ಭಗವತ್ಪ್ರಸಾದವು ಮೋಕ್ಷಸಾಧನವು. ಜ್ಞಾನವಿಲ್ಲದ ಪುರುಷನು ಪಶುಸಮಾನನು.

ಆಹಾರನಿದ್ರಾಭಯ ಮೈಥುನಾನಿ
ಸಾಮಾನ್ಯಮೇತತ್ಪಶುಭಿರ್ನರಾಣಾಮ್ ।
ಜ್ಞಾನಂ ನರಾಣಾಮಧಿಕಂ ಹಿ ಲೋಕೇ
ಜ್ಞಾನೇನ ಹೀನಾಃ ಪಶುಭಿಃ ಸಮಾನಾಃ ॥ ೧೩ ॥

ಇತಿ ಶ್ರೀ ನರಸಿಂಹಪುರಾಣೇ ಸಂಸಾರಲಕ್ಷಣಂ, ತತ್ಪರಿಹಾರೋ ನಾಮ ಷೋಡಶೋಽಧ್ಯಾಯಃ

---

೧೩. ಮಾನವರಿಗೆ ಆಹಾರ, ನಿದ್ರೆ, ಭಯ, ಭೋಗ ಇವುಗಳು ಪಶುಗಳಿಂದ ಸಮಾನವು ; ಆದರೆ ಮಾನವರಿಗೆ ಜ್ಞಾನವೆಂಬುದೊಂದು ಹೆಚ್ಚಿನದಾಗಿದೆ. ಜ್ಞಾನ ಹೀನರಾದ ಮಾನವರು ಪಶುಗಳಿಗೆ ಸಮಾನರು. ಆದುದರಿಂದ ಪ್ರತಿಯೊಬ್ಬ ಮನುಷ್ಯನೂ ತತ್ವಜ್ಞಾನಪೂರ್ವಕವಾಗಿ ಭಗವಂತನಲ್ಲಿ ನಿರತಿಶಯವಾದ ಭಕ್ತಿಯಿಟ್ಟು, ಅವನ ಅತ್ಯರ್ಥ ಪ್ರಸಾದದಿಂದ ಮುಕ್ತಿಯನ್ನೈದುವನು,' ಎಂದು ಶ್ರೀಕೃಷ್ಣದ್ವೈಪಾಯನಮುನಿಯು ಶುಕನೇ ಮೊದಲಾದ ಶಿಷ್ಯರಿಗೆ ಹೇಳಿದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಸಂಸಾರಲಕ್ಷಣವು ಮತ್ತು ಅದರ ಪರಿಹಾರವು ಎಂಬ ಹದಿನಾರನೆಯ ಅಧ್ಯಾಯವು ಮುಗಿದುದು.

ಹದಿನಾರನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ ಶುಕಮುನಿಯು ಕೇಳಿಕೊಂಡಂತೆ ಶ್ರೀಕೃಷ್ಣದ್ವೈಪಾಯನ ವ್ಯಾಸಮುನಿಯು, ಆತನಿಗೂ ಇತರ ಶಿಷ್ಯರಿಗೂ ಸಂಸಾರಸ್ವರೂಪವನ್ನೂ ಬಿತ್ತರಿಸಿ, ಆ ಸಂಸಾರಕ್ಕೆ ಅಳಿವು ತತ್ವಜ್ಞಾನ ಮತ್ತು ಭಗವಂತನ ಅತ್ಯರ್ಥಪ್ರಸಾದ ಇವುಗಳಿಂದ ಉಂಟಾಗಿ, ಮಾನವನು ಶಾಶ್ವತವಾದ, ಪುನರಾವೃತ್ತಿರಹಿತವಾದ ಮುಕ್ತಿಯ ನ್ನೈದುವನು ; ಹೀಗೆ ಜ್ಞಾನವಿಲ್ಲದವನು ಪಶುಸಮಾನನಾಗುವನು ; ಆದುದರಿಂದ ಪ್ರತಿಯೊಬ್ಬ ಮಾನವನೂ, ಬ್ರಹ್ಮಜ್ಞಾನವನ್ನು ಸಂಪಾದಿಸಲು ಯತ್ನಿಸಿ, ಭಗವದನು ಗ್ರಹದಿಂದ ಮುಕ್ತಿಯನ್ನು ಪಡೆಯುವುದೆಂದು ನಿರೂಪಿಸಿದುದನ್ನು ಸೂತರು ಭಾರ ದ್ವಾಜನಿಗೆ ಹೇಳಿರುತ್ತಾರೆ.

ಇಂತು ಹದಿನಾರನೆಯ ಅಧ್ಯಾಯದ ವಿಷಯಸಂಗ್ರಹವು.

॥ ಶ್ರೀಃ ॥

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ಸಪ್ತದಶೋಽಧ್ಯಾಯಃ

ಶ್ರೀ ವಿಷ್ಣೋಃ ಸ್ತವರಾಜ ನಿರೂಪಣಮ್.

॥ ಶ್ರೀ ಶುಕ ಉವಾಚ ॥

ಸಂಸಾರವೃಕ್ಷಮಾರುಹ್ಯ ದ್ವಂದ್ವಪಾಶಶತೈರ್ದೃಢೈಃ ।
ಬಧ್ಯಮಾನಂ ಸುತೈಶ್ವರ್ಯೈಃ ಪತಿತೋ ಯೋನಿಸಾಗರೇ ॥ ೧ ॥

ಯಃ ಕಾಮಕ್ರೋಧಲೋಭೈಸ್ತು ವಿಷಯೈಃ ಪರಿಪೀಡಿತಃ ।
ಬದ್ಧಃ ಸ್ವಕರ್ಮಭಿರ್ಗೌಣೈಃ ಪುತ್ರದಾರೈಷಣಾದಿಭಿಃ ॥ ೨ ॥

ಸೃಷ್ಟಿಕಾಂಡ ; ಹದಿನೇಳನೆಯ ಅಧ್ಯಾಯವು

ಶ್ರೀ ವಿಷ್ಣುವಿನ ಉತ್ತಮಸ್ತೋತ್ರ ನಿರೂಪಣೆಯು.

ಶುಕಮುನಿಯು ವ್ಯಾಸಮುನಿಯನ್ನು ಕುರಿತು ಇಂತು ಹೇಳುತ್ತಾನೆ :—

೧-೩. 'ಎಲೈ ತಂದೆಯೇ! ಯಾವ ಮಾನವನು ಶೀತೋಷ್ಣಾದ್ಯನೇಕ ದ್ವಂದ್ವಗಳೆಂಬ ಬಹುವಾದ ಹಗ್ಗಗಳಿಂದ ಬಲವಾಗಿ ಕಟ್ಟಿಹಾಕುವ ಸಂಸಾರವೆಂಬ ಮರವನ್ನೇರಿ, ಭವಸಾಗರದಲ್ಲಿ ಮಕ್ಕಳು ಮತ್ತು ಐಶ್ವರ್ಯ ಇವುಗಳಿಂದ ಬೀಳಿಸಿಕೊಂಡು, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರುವಗೆಗಳಿಂದಲೂ, ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳೆಂಬ, ಪಂಚೇಂದ್ರಿಯ ವಿಷಯಗಳಿಂದಲೂ ಅತ್ಯಂತವಾಗಿ ಹಿಂಸೆಗೊಂಡು, ತನ್ನ ಪ್ರಾರಬ್ಧಾದಿಕರ್ಮಗಳಿಂದಲೂ, ಸತ್ವರಜಸ್ತಮೋಗುಣನಿಮಿತ್ತಗಳಾದ ಪುತ್ರೈಷಣಾ, ದಾರೈಷಣಾ, ವಿತ್ತೈಷಣಾದಿ

ಸ ಕೇನ ನಿಸ್ತರತ್ಯಾಶು ದುಸ್ತರಂ ಭವಸಾಗರಮ್ ।
ಪೃಚ್ಛಾಮ್ಯಾಖ್ಯಾಹಿ ಮೇ ತಾತ ತಸ್ಯ ಮುಕ್ತಿಃ ಕಥಂ ಭವೇತ್ ॥ ೩ ॥

॥ ವ್ಯಾಸ ಉವಾಚ ॥

ಶೃಣು ವತ್ಸ ಮಹಾಪ್ರಾಜ್ಞ ಯಜ್ಜ್ಞಾತ್ವಾ ಮುಕ್ತಿಮಾಪ್ನುಯಾತ್ ।
ತಚ್ಚ ವಕ್ಷ್ಯಾಮಿ ತೇ ದಿವ್ಯಂ ನಾರದೇನ ಶ್ರುತಂ ಪುರಾ ॥ ೪ ॥

ನರಕೇ ರೌರವೇ ಘೋರೇ ಧರ್ಮಜ್ಞಾನವಿವರ್ಜಿತಾಃ ।
ಸ್ವಕರ್ಮಭಿರ್ಮಹಾದುಃಖಂ ಪ್ರಾಪ್ತಾ ಯತ್ರ ಯಮಾಲಯೇ ॥ ೫ ॥

ಗಳಿಂದಲೂ ಬಂಧಿತನಾಗಿರುವನೋ, ಅವನು ಯಾವ ಉಪಾಯದಿಂದ ದಾಟಿಕೊಳ್ಳಲು ದುಶ್ಶಕ್ಯವಾದ ಸಂಸಾರಸಾಗರವನ್ನು ಬೇಗ ದಾಟುತ್ತಾನೆ. ? ಮತ್ತು ಅವನಿಗೆ ಮೋಕ್ಷವುಂಟಾಗುವುದು ಹೇಗೆ? ಎಂದು ಕೇಳುತ್ತೇನೆ, ಇದನ್ನು ನನಗೆ ಕೃಪೆಮಾಡಿ ಹೇಳುವುದು,' ಎಂದು ಕೇಳಲು ;

ಶ್ರೀ ವ್ಯಾಸಮುನಿಯು ಶುಕಮುನಿಗೆ ಇಂತು ಹೇಳುತ್ತಾನೆ:—

೪. 'ಎಲೈ ವತ್ಸನಾಥ, ಪ್ರಾಜ್ಞನೆನಿಸಿದ ಶುಕನೇ! ಕೇಳು ; ಸಂಸಾರ ಬಂಧದಲ್ಲಿ ಸಿಕ್ಕಿದವನು ಯಾವ ವಿಷಯವನ್ನು ಅರಿತು, ಮುಕ್ತಿಯನ್ನೈದುವನೋ, ಹಿಂದೆ ನಾರದನು ಕೇಳಿ ಶ್ರವಣಮಾಡಿದ ಆ ದಿವ್ಯವಾದ ವಿಷಯವನ್ನು ನಿನಗೆ ಈಗ ಹೇಳುವೆನು.

೫. ಯಾವ ಯಮನ ಆಡಳಿತಕ್ಕೆ ಸೇರಿದ, ಭಯಂಕರವಾದ ರೌರವವೆಂಬ ನರಕದಲ್ಲಿ ಚೇತನರು ತಾವು ತಾವೆಸಗಿದ ಕರ್ಮಗಳಿಂದ ಧರ್ಮಜ್ಞಾನವಿಲ್ಲದವರಾಗಿ, ವಿಶೇಷವಾಗಿ ದುಃಖವನ್ನು ಹೊಂದಿರುತ್ತಾರೆ.

ಮಹಾಪಾಪಕೃತಂ ಘೋರಂ ಸಂಪ್ರಾಪ್ತಾಃ ಪಾಪಕೃಜ್ಜನಾಃ ।
ಇತ್ಯುಕ್ತ್ವಾ ನಾರದಃ ಶೀಘ್ರಂ ಗತ್ವಾ ಯತ್ರ ತ್ರಿಲೋಚನಃ ॥ ೬ ॥

ಗಂಗಾಧರಂ ಮಹಾದೇವಂ ಶಂಕರಂ ಶೂಲಪಾಣಿನಮ್ ।
ಪ್ರಣಮ್ಯ ವಿಧಿವದ್ದೇವಂ ನಾರದಃ ಪರಿಪೃಚ್ಛತಿ ॥ ೭ ॥

॥ ನಾರದ ಉವಾಚ ॥

ಯಃ ಸಂಸಾರೇ ಮಹಾದ್ವಂದ್ವೈಃ ಕಾಮಭೋಗೈಃ ಶುಭಾಶುಭೈಃ ।
ಶಬ್ದಾದಿವಿಷಯೈರ್ಬದ್ಧಃ ಪೀಡ್ಯಮಾನಃ ಷಡೂರ್ಮಿಭಿಃ ॥ ೮ ॥

ಕಥಂ ನು ಮುಚ್ಯತೇ ಕ್ಷಿಪ್ರಂ ಮೃತ್ಯು ಸಂಸಾರಸಾಗರಾತ್ ।
ಭಗವನ್ ಬ್ರೂಹಿ ಮೇ ತತ್ತ್ವಂ ಶ್ರೋತುಮಿಚ್ಛಾಮಿ ಶಂಕರ ॥ ೯ ॥

೬-೭. ಪಾಪವನ್ನೆಸಗಿದ ಜನರು, ತಾವೆಸಗಿದ ಮಹಾಪಾಪದಿಂದ ಭಯಂಕರವಾದ ರೌರವನರಕವನ್ನು ಹೊಂದಿರುವರೆಂದು ನಾರದನು ಕೇಳಿದವನಾಗಿ ಮುಕ್ಕಣ್ಣನಾದ ರುದ್ರದೇವನಿರುವೆಡೆಗೆ ಬೇಗನೆ ಹೋಗಿ, ಜಟಾಜೂಟದಲ್ಲಿ ಗಂಗೆಯನ್ನು ತಾಳಿರುವ ಮಹಾದೇವನಾದ ಶಂಕರನೆನಿಸಿದ ಶೂಲಾಯುಧವನ್ನು ಕೈಯಲ್ಲಿ ಹಿಡಿದಿರುವ ರುದ್ರದೇವನನ್ನು ನಿಯಮಾನುಸಾರವಾಗಿ ಪ್ರಣಾಮವನ್ನು ಮಾಡಿ, ಮುಂದೆ ಹೇಳುವಂತೆ ಪ್ರಶ್ನಿಸುತ್ತಾನೆ.'

ನಾರದನು ಹೇಳುತ್ತಾನೆ:—

೮-೧೦. 'ಎಲೈ ಪೂಜ್ಯನಾದ, ಭಗವಂತನಾದ ಶಂಕರನೇ! ಯಾವ ಚೇತನನು ಸಂಸಾರದಲ್ಲಿ ಸುಖದುಃಖಾದಿದ್ವಂದ್ವಗಳಿಂದಲೂ, ಕಾಮಸಾಧನಗಳಿಂದಲೂ, ಶುಭಾಶುಭಗಳಾದ ಶಬ್ದವೇ ಮೊದಲಾದ ಐದು ಇಂದ್ರಿಯದ ವಿಷಯಗಳಿಂದಲೂ, ಕಾಮ, ಕ್ರೋಧ, ಲೋಭ, ಮೋಹ, ಮದ ಮಾತ್ಸರ್ಯಗಳೆಂಬ ಆರು ಅಲೆಗಳಿಂದಲೂ ಬಂಧಿತನಾಗಿ ದುಃಖಗೊಂಡಿರುವವನು ಮೃತ್ಯುವಿನಿಂದ ಕೂಡಿದ

ತಸ್ಯ ತದ್ವಚನಂ ಶ್ರುತ್ವಾ ನಾರದಸ್ಯ ತ್ರಿಲೋಚನಃ ।
ಉವಾಚ ತಮೃಷಿಂ ಶಂಭುಃ ಪ್ರಸನ್ನವದನೋ ಹರಃ ॥ ೧೦ ॥

॥ ಮಹೇಶ್ವರ ಉವಾಚ ॥

ಜ್ಞಾನಾಮೃತಂ ಚ ಗುಹ್ಯಂ ಚ ರಹಸ್ಯಂ ಋಷಿಸತ್ತಮ ।
ವಕ್ಷ್ಯಾಮಿ ಶೃಣು ದುಃಖಘ್ನಂ ಸರ್ವಬಂಧಭಯಾಪಹಮ್ ॥ ೧೧ ॥

ತೃಣಾದಿ ಚತುರಾಸ್ಯಾಂತಂ ಭೂತಗ್ರಾಮಂ ಚತುರ್ವಿಧಮ್ ।
ಚರಾಚರಂ ಜಗತ್ಸರ್ವಂ ಪ್ರಸುಪ್ತಂ ಯಸ್ಯಮಾಯಯಾ ॥ ೧೨ ॥

ಈ ಸಂಸಾರವೆಂಬ ಸಾಗರದಿಂದ ಬೇಗನೆ ಹೇಗೆ ಬಿಡುಗಡೆಯನ್ನೈದುವನು ? ಇದರ ತತ್ವವನ್ನು ಕೇಳಬಯಸುತ್ತೇನೆ ; ದಯಮಾಡಿ ನನಗೆ ಹೇಳು ; ' ಎಂಬ ಆ ನಾರದ ಮುನಿಯ ಆ ಮಾತನ್ನು ಕೇಳಿ ತ್ರಿಲೋಚನನೂ, ಶಂಭುವೂ ಆದ ಹರನು ಪ್ರಸನ್ನವಾದ ಮುಖಮುದ್ರೆಯುಳ್ಳವನಾಗಿ, ಆ ಮುನಿಯನ್ನು ಕುರಿತು ಇಂತು ಹೇಳಿದನು.

ಮಹೇಶ್ವರನು ಹೇಳುತ್ತಾನೆ:—

೧೧. ' ಎಲೈ ಮುನಿಶ್ರೇಷ್ಠನಾದ ನಾರದನೇ ! ಕೇಳು ; ಯಾರಿಗೂ ತಿಳಿಯದ, ಗುಟ್ಟಾದ, ಸರ್ವಬಂಧದಿಂದುಟಾದ ಭಯವನ್ನು ಕಳೆಯುವ, ಸಕಲದುಃಖವನ್ನೂ ಹೋಗಲಾಡಿಸುವ ಜ್ಞಾನಾಮೃತವನ್ನು ಅರುಹುವೆನು.

೧೨-೧೩. ತೃಣಮೊದಲು ಚತುರ್ಮುಖ ಬ್ರಹ್ಮನೇ ಕೊನೆಯಾಗಿರುವ ದೇವ, ಸ್ಥಾವರ, ತಿರ್ಯಜ್, ಮನುಷ್ಯರೆಂದು, ನಾಲ್ಕು ತೆರನಾದ ಜೀವಕೋಟಿಗಳೆಲ್ಲವೂ, ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ಯಾವ ಪರಮಾತ್ಮನ ಇಚ್ಛಾ

ತಸ್ಯ ವಿಷ್ಣೋಃ ಪ್ರಸಾದೇನ ಯದಿ ಕಶ್ಚಿತ್ಪ್ರಬುಧ್ಯತೇ ।
ಸ ನಿಸ್ತರತಿ ಸಂಸಾರಂ ದೇವಾನಾಮಪಿ ದುಸ್ತರಮ್ ॥ ೧೩ ॥

ಭೋಗೈಶ್ವರ್ಯಮದೋನ್ಮತ್ತಸ್ತತ್ವಜ್ಞಾನಪರಾಙ್ಮುಖಃ ।
ಸಂಸಾರಸುಮಹಾಪಂಕೇ ಜೀರ್ಣಾ ಗೌರಿವ ಮಜ್ಜತಿ ॥ ೧೪ ॥

ಯಸ್ತ್ವಾತ್ಮಾನಂ ನಿಬಧ್ನಾತಿ ಕರ್ಮಭಿಃ ಕೋಶಕಾರವತ್ ।
ತಸ್ಯ ಮುಕ್ತಿಂ ನ ಪಶ್ಯಾಮಿ ಜನ್ಮಕೋಟಿಶತೈರಪಿ ॥ ೧೫ ॥

ತಸ್ಮಾನ್ನಾರದ ಸರ್ವೇಶಂ ದೇವಾನಾಂ ದೇವಮವ್ಯಯಮ್ ।
ಆರಾಧಯೇತ್ಸದಾ ಸಮ್ಯಗ್ಧ್ಯಾಯೇದ್ವಿಷ್ಣುಂ ಸಮಾಹಿತಃ ॥ ೧೬ ॥

ರೂಪವಾದಮಾಯೆಯಿಂದ ನಿದ್ರೆಮಾಡುತ್ತಿರುವಂತೆ ಇವೆಯೋ, ಆ ಮಹಾವಿಷ್ಣುವಿನ ಅನುಗ್ರಹದಿಂದ, ಯಾವನೊಬ್ಬನು ತತ್ವಜ್ಞಾನವನ್ನು ಸಂಪಾದಿಸುವನೋ, ಅವನು ದೇವತೆಗಳಿಗೂ ದಾಟಲು ಕಠಿಣವಾದ ಈ ಸಂಸಾರವನ್ನು ದಾಟಿಕೊಳ್ಳುತ್ತಾನೆ.

೧೪. ಚೇತನನು ಸುಖಸಾಧನಗಳು, ಐಶ್ವರ್ಯಗಳು ಇವುಗಳಿಂದುಂಟಾದ ಮದದಿಂದ ಸೊಕ್ಕಿ, ತತ್ವಜ್ಞಾನಶೂನ್ಯನಾದವನಾಗಿ, ಸಂಸಾರವೆಂಬ ದೊಡ್ಡಕೆಸರಿನಲ್ಲಿ ಮುದಿಯೆತ್ತಿನಂತೆ ಸಿಕ್ಕಿಕೊಂಡಿರುತ್ತಾನೆ.

೧೫. ಯಾವನು ತನ್ನನ್ನು ಕರ್ಮಗಳಿಂದ ರೇಶಿಮೆಯ ಹುಳುವಿನಂತೆ ಬಂಧಿಸಿಕೊಳ್ಳುತ್ತಾನೆಯೋ, ಅವನಿಗೆ ಶತಕೋಟಿ ಜನ್ಮಗಳಿಂದಲೂ ಮುಕ್ತಿಯುಂಟಾಗುವುದನ್ನು ನಾನು ಕಾಣೆನು.

೧೬. ಎಲೈ ನಾರದನೇ! ಆದುದರಿಂದ ಚರಾಚರಾತ್ಮಕಗಳಾದ ಪ್ರಪಂಚವೆಲ್ಲಕ್ಕೂ ಒಡೆಯನಾದ, ದೇವತೆಗಳಿಗೂ, ನಿಯಾಮಕನಾದ, ನಾಶರಹಿತನಾದ ಶ್ರೀ ಮಹಾವಿಷ್ಣುವನ್ನು ಯಾವಾಗಲೂ ಪೂಜಿಸುವುದು ಮತ್ತು ಧ್ಯಾನಮಾಡುವುದು.

ಯಸ್ತಂ ವಿಶ್ವಮನಾದ್ಯಂತಂ ಆದ್ಯಂ ಸ್ವಾತ್ಮನಿ ಸಂಸ್ಥಿತಮ್ ।
ಸರ್ವಜ್ಞಮಮಲಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೧೭ ॥

ನಿರ್ವಿಕಲ್ಪಂ ನಿರಾಕಾಶಂ ನಿಃಪ್ರಪಂಚಂ ನಿರಾಮಯಮ್ ।
ವಾಸುದೇವಮಜಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೧೮ ॥

ನಿರಂಜನಂ ಪರಂ ಶಾಂತಮಚ್ಯುತಂ ಭೂತ (ಮವ್ಯಯಂ) ಭಾವನಮ್ ।
ದೇವಗರ್ಭಂ ವಿಭುಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೧೯ ॥

---

೧೭. ಯಾವನು ವಿಶ್ವದಲ್ಲೆಲ್ಲಾ ವ್ಯಾಪ್ತನಾಗಿರುವುದರಿಂದಲೂ, ವಿಶ್ವ ನಿಯಾಮಕನಾದುದರಿಂದಲೂ, ವಿಶ್ವನೆನಿಸಿಕೊಳ್ಳುವನೋ ಉತ್ಪತ್ತಿನಾಶರಹಿತನೂ, ಸಕಲ ಪ್ರಪಂಚಕ್ಕೂ ಮೊದಲಿಗನೂ, ತನ್ನಲ್ಲಿ ಅಂತರ್ಯಾಮಿಯಾಗಿ ಬಿಂಬರೂಪದಿಂದರುವವನೂ, ಆಲೋಚನೆಯಿಲ್ಲದೆ ಸಕಲವಿಷಯಗಳ ಅರಿವುಳ್ಳವನೂ, ಚಿಂತಾಸಂತಾಪಾದಿ ದೋಷರಹಿತನೂ, ಆದ ಆ ವಿಷ್ಣುವನ್ನು ಸದಾ ನಿದಿಧ್ಯಾಸನ ರೂಪವಾದ ಧ್ಯಾನವನ್ನೆಸಗುವವನೋ, ಅವನು ಈ ಸಂಸಾರ ಬಂಧನದಿಂದ ಮುಕ್ತನಾಗುತ್ತಾನೆ.

೧೮ ಮೂಲರೂಪ, ಅವತಾರರೂಪಗಳು, ಅನಂತ ರೂಪಗಳು, ಇವುಗಳಿಗೆ ಪರಸ್ಪರಭೇದರಹಿತನೂ, ಸರ್ವತ್ರ ವ್ಯಾಪ್ತನಾದುದರಿಂದ ದೇಶಾವಧಿರಹಿತನೂ, ಪ್ರಕೃತಿ ಪರಿಣಾಮವಾದ ಪ್ರಪಂಚದಿಂದ ಅತಿರಿಕ್ತನೂ, ಅದರಿಂದಲೇ ಪ್ರಕೃತಿಜನ್ಯವಾದ ಉಪದ್ರವ್ಯಶೂನ್ಯನೂ, ಸಮಸ್ತ ಪ್ರಪಂಚವೂ ತನ್ನಲ್ಲಿ ವಾಸಿಸುವುದರಿಂದಲೂ ವಾಸುದೇವನೆನಿಸಿಕೊಳ್ಳುವನೂ, ತಾನು ಪ್ರಪಂಚದಲ್ಲೆಲ್ಲಾ ವಾಸಿಸುವುದರಿಂದಲೂ ವಾಸುದೇವನೆನಿಸಿಕೊಳ್ಳುವನೂ, ಉತ್ಪತ್ತಿಶೂನ್ಯನೂ ಆದ ವಿಷ್ಣುವನ್ನು ಸದಾ ಧ್ಯಾನಿಸುವವನು ಮುಕ್ತನಾಗುತ್ತಾನೆ.

೧೯. ಕರ್ಮಲೇಪರಹಿತನೂ, ಸರ್ವೋತ್ತಮನೂ, ರಾಗದ್ವೇಷರಹಿತನೂ, ಅನಿತ್ಯತ್ವ, ದೇಹಹಾನಿ, ದುಃಖಪ್ರಾಪ್ತಿ, ಅಪೂರ್ಣತೆ— ಈ ಚತುರ್ವಿಧವಾದ ನಾಶರಹಿತನೂ, ಚೇತನರಿಂದ ಚಿಂತ್ಯನೂ, ದೇವತೆಗಳನ್ನು ಸೃಷ್ಟಿಸಿದವನೂ, ವ್ಯಾಪ್ತನೂ ಆದ ಶ್ರೀ ವಿಷ್ಣುವನ್ನು ಯಾವಾಗಲೂ ಚಿಂತಿಸುವವನು ಮುಕ್ತನಾಗುತ್ತಾನೆ.

ಸರ್ವಪಾಪವಿನಿರ್ಮುಕ್ತಮಪ್ರಮೇಯಮಲಕ್ಷಣಮ್ ।
ನಿರ್ವಾಣಮನಘಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೨೦ ॥

ಅಮೃತಂ ಪರಮಾನಂದಂ ಸರ್ವಪಾಪವಿವರ್ಜಿತಮ್ ।
ಬ್ರಹ್ಮಣ್ಯಂ ಶಂಕರಂ ವಿಷ್ಣುಂ ಸದಾ ಸಂಕೀರ್ತ್ಯ ಮುಚ್ಯತೇ ॥ ೨೧ ॥

ಯೋಗೇಶ್ವರಂ ಪುರಾಣಾಖ್ಯಮಶರೀರಂ ಗುಹಾಶಯಮ್ ।
ಅಮಾತ್ರಮವ್ಯಯಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೨೨ ॥

ಶುಭಾಶುಭವಿನಿರ್ಮುಕ್ತಂ ಮೂರ್ತಿಷಟ್ಕಪರಂ ವಿಭುಮ್ ।
ಅಚಿಂತ್ಯಮಮಲಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೨೩ ॥

---

೨೦. ಸಕಲಪಾಪಗಳ ಸಂಬಂಧವಿಲ್ಲದವನೂ, ಸಾಕಲ್ಯೇನ ತಿಳಿಯಲಾಗದವನೂ, ಪ್ರಾಕೃತಲಕ್ಷಣರಹಿತನೂ, ಪ್ರಾಕೃತಶರೀರರಹಿತನೂ, ದುಃಖಶೂನ್ಯನೂ, ಆದ ಶ್ರೀಮಹಾವಿಷ್ಣುವನ್ನು ಸದಾ ನೆನೆಯುವವನು ಮುಕ್ತನಾಗುತ್ತಾನೆ.

೨೧. ಚೇತನನೂ ಪೂರ್ಣಸುಖನೂ, ಮೃತಿರಹಿತನೂ, ಸಕಲಪಾಪ ದೂರನೂ, ಸಕಲ ವೇದವಾಚ್ಯನೂ, ಲೋಕಕ್ಕೆ ಕಲ್ಯಾಣವನ್ನೆಸಗುವವನೂ, ಆದ ಶ್ರೀ ಮಹಾವಿಷ್ಣುವನ್ನು ಸದಾ ಸಂಕೀರ್ತನಮಾಡಿ ಮುಕ್ತಿಯನ್ನೈದುತ್ತಾನೆ.

೨೨. ಯಮನಿಯಮಾದ್ಯಷ್ಟಾಂಗಯೋಗಗಳಿಗೆ ಒಡೆಯನೂ, ಜಗತ್ಸೃಷ್ಟಿಗಿಂತಲೂ ಮೊದಲಿಗನಾದುದರಿಂದಲೂ ಪುರಾಣನೆಂಬ ಹೆಸರಿನವನೂ, ನಾಶವೈದುವ ಒಡಲಿಲ್ಲದವನೂ, ನಿತ್ಯಜ್ಞಾನಾನಂದ ಶರೀರನೂ, ಜೀವರ ಹೃದಯ ಗುಹೆಯಲ್ಲಿ ವಾಸಿಸುವವನೂ, ಮಾನ, ತ್ರಾಣ, ರಹಿತನೂ, ನಾಶರಹಿತನೂ ಆದ ವಿಷ್ಣುವನ್ನು ಸದಾ ಧ್ಯಾನವಗೈವವನು ಮುಕ್ತನಾಗುತ್ತಾನೆ.

೨೩. ಪ್ರಾಕೃತಗಳಾದ ಶುಭಾಶುಭಗಳಿಂದ ಬಿಡಲ್ಪಟ್ಟವನೂ, ಪ್ರಾಕೃತ ವೈಕೃತ ಷಡ್ವಿಧಶರೀರರಹಿತನೂ, ವ್ಯಾಪ್ತನೂ, ಸಾಕಲ್ಯೇನ ಧ್ಯಾನಿಸಲು ಅವಿಷಯನೂ, ಶುದ್ಧನೂ ಆದ ಶ್ರೀ ವಿಷ್ಣುವನ್ನು ಧ್ಯಾನಿಸುವವನು ಮುಕ್ತನಾಗುತ್ತಾನೆ.

ಸರ್ವದ್ವಂದ್ವವಿನಿರ್ಮುಕ್ತಂ ಸರ್ವದುಃಖವಿವರ್ಜಿತಮ್ ।
ಅಪ್ರತರ್ಕ್ಯಮಜಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೨೪ ॥

ಅನಾಮಗೋತ್ರಮದ್ವೈತಂ ಚತುರ್ಥಂ ಪರಮಂ ಪದಮ್ ।
ತಂ ಸರ್ವಹೃದ್ಗತಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೨೫ ॥

ಅರೂಪಂ ಸತ್ಯಸಂಕಲ್ಪಂ ಶುದ್ಧಮಾಕಾಶವತ್ಪರಮ್ ।
ಏಕಾಗ್ರಮನಸಾ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೨೬ ॥

ಸರ್ವಾತ್ಮಕಂ ಸ್ವಭಾವಸ್ಥಮಾತ್ಮಚೈತನ್ಯರೂಪಕಮ್ ।
ಶುಭ್ರಮೇಕಾಕ್ಷರಂ ವಿಷ್ಣುಂ ಸದಾಧ್ಯಾಯನ್ವಿಮುಚ್ಯತೇ ॥ ೨೭ ॥

---

೨೪. ಶೀತೋಷ್ಣಾದಿ ಸಕಲ ದ್ವಂದ್ವಗಳಿಂದ ಸದಾ ಬಿಡಲ್ಪಟ್ಟವನೂ, ಸಕಲ ದುಃಖಗಳಿಂದ ಸದಾ ಸೋಂಕಿಲ್ಲದವನೂ, ಊಹೆಗೂ ನಿಲುಕದವನೂ, ಉತ್ಪತ್ತಿ ರಹಿತನೂ, ಆದ ಶ್ರೀ ಮಹಾವಿಷ್ಣುವನ್ನು ಯಾವಾಗಲೂ ಶ್ರವಣ, ಮನನ, ನಿದಿಧ್ಯಾಸನವನ್ನೆಸಗುವವನು ಮುಕ್ತನಾಗುತ್ತಾನೆ.

೨೫. ಪ್ರಾಕೃತಗಳಾದ ನಾಮಗೋತ್ರರಹಿತನೂ, ಮಿಥ್ಯಾಜ್ಞಾನನಿವರ್ತಕನೂ, ನಾಲ್ಕನೆಯದಾದ ಮೋಕ್ಷದಾತೃವಾದ ತುರೀಯರೂಪವುಳ್ಳವನೂ, ಉತ್ತಮ ಸ್ವರೂಪನೂ, ಪರಮಪ್ರಾಪ್ಯನೂ, ಸರ್ವಚೇತನರ ಹೃದಯದಲ್ಲಿರುವವನೂ, ಆದ ಶ್ರೀ ಮಹಾವಿಷ್ಣುವನ್ನು ಚಿಂತಿಸುವವನು ಮುಕ್ತನಾಗುತ್ತಾನೆ.

೨೬. ಪ್ರಾಕೃತರೂಪರಹಿತನೂ, ಯಥಾರ್ಥವಾದ ಉದ್ದೇಶವುಳ್ಳವನೂ, ಆಕಾಶದಂತೆ ಸಾಂತತ್ವ, ಸಾತಿಶಯತ್ವ ರೂಪದೋಷರಹಿತನಾಗಿ ಶುದ್ಧನೂ, ಸರ್ವೋತ್ತಮನೂ, ಆದ ವಿಷ್ಣುವನ್ನು ಅನನ್ಯಮನಸ್ಕನಾಗಿ, ಯಾವಾಗಲೂ ಚಿಂತಿಸುವವನು ಮುಕ್ತನಾಗುತ್ತಾನೆ.

೨೭. ಸರ್ವಾಂತರ್ಯಾಮಿಯೂ, ಸರ್ವನಿಯಾಮಕನೂ, ಸ್ವರೂಪನಿಯಾಮಕನೂ, ವ್ಯಾಪ್ತವಾದ ಜ್ಞಾನಸ್ವರೂಪನೂ, ಶುದ್ಧನೂ, ಓಂಕಾರವೆಂಬೊಂದು ಅಕ್ಷರಾತ್ಮಕಶಬ್ದದಿಂದ ವಾಚ್ಯನೂ ಆದ ಶ್ರೀ ಮಹಾವಿಷ್ಣುವನ್ನು ಯಾವಾಗಲೂ ಧ್ಯಾನಿಸುವವನು ಮುಕ್ತನಾಗುತ್ತಾನೆ.

ಅನಿರ್ವಾಚ್ಯಮವಿಜ್ಞೇಯಮಕ್ಷರಾದಿಮಸಂಭವಮ್ ।
ಏಕಂ ನೂತ್ನಂ ಸದಾ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೨೮ ॥

ವಿಶ್ವಾದ್ಯಂ ವಿಶ್ವಗೋಪ್ತಾರಂ ವಿಶ್ವಾದಂ ವಿಶ್ವಕಾಮದಮ್ ।
ಸ್ಥಾನತ್ರಯಾತಿಗಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೨೯ ॥

ಸರ್ವದುಃಖಕ್ಷಯಕರಂ ಸರ್ವಶಾಂತಿಕರಂ ಹರಿಮ್ ।
ಆನಂದಮಗ್ನಃ ಪುರುಷಃ ಕೀರ್ತನಾದೇವ ಮುಚ್ಯತೇ ॥ ೩೦ ॥

೨೮, ಸಂಪೂರ್ಣವಾಗಿ ಶಬ್ದಗಳಿಂದ ಹೇಳಲಾಗದವನೂ. ಸಂಪೂರ್ಣವಾಗಿ ಯಾರಿಂದಲೂ ತಿಳಿಯಲಾಗದವನೂ, ಅಕ್ಷರಾತ್ಮಕಳಾದ ಚೇತನಾಚೇತನ ಪ್ರಕೃತಿಗೂ ಕಾರಣಭೂತನೂ, ಸ್ವತಃ ಉತ್ಪತ್ತಿಯಿಲ್ಲದವನೂ, ಸ್ವಾತಂತ್ರ್ಯದಿಂದ ಕರ್ತೃವೂ, ಕಾರಯಿತೃವೂ ಆದವನೂ, ಎಷ್ಟು ತಿಳಿದರೂ ಯಾವಾಗಲೂ ಅಪೂರ್ವನೂ ಆದ ಶ್ರೀ ವಿಷ್ಣುವನ್ನು ಸದಾ ಧ್ಯಾನಿಸುವವನು ಮುಕ್ತನಾಗುತ್ತಾನೆ.

೨೯. ಸಕಲ ಪ್ರಪಂಚಕ್ಕೂ ಮೊದಲಿಗನೂ, ಸಕಲ ಪ್ರಪಂಚವನ್ನು ಕಾಪಿಡುವವನೂ,ಸಕಲ ಪ್ರಪಂಚಕ್ಕೂ ಅಳಿವನ್ನೆಸಗುವವನೂ, ಎಲ್ಲರೂ ಎಳಸಿದುದನ್ನೀಯುವವನೂ, ಹೃದಯ, ಕಂಠ ಮತ್ತು ಅಕ್ಷಿರೂಪವಾದ ಮೂರು ತಾಣಗಳನ್ನು ಳಿದು, ತುರೀಯರೂಪದಿಂದಿರುವವನೂ, ಆದ ಶ್ರೀ ಮಹಾವಿಷ್ಣುವನ್ನು ಧ್ಯಾನಿಸುವವನು ಮುಕ್ತನಾಗುತ್ತಾನೆ.

೩೦. ಆಶ್ರಿತರಾದೆಲ್ಲರ ದುಃಖಗಳನ್ನು ಕಳೆಯುವವನೂ. ಎಲ್ಲರಿಗೂ ಸಮಾಧಾನವನ್ನೂ, ಸುಖವನ್ನೂ ಉಂಟುಮಾಡುವವನೂ, ಆದ ಶ್ರೀಹರಿಯನ್ನು ಕೀರ್ತಿಸುತ್ತಾ, ಸುಖಸ್ವರೂಪನಾದ ಪರಮಾತ್ಮನಲ್ಲಿಯೇ ಚಿಂತನಾದಿಗಳಿಂದ ಪ್ರವಣನಾದ ದೇಹಿಯು ಪರಮಾತ್ಮನ ವಿಷಯವನ್ನು ಪ್ರತಿಪಾದಿಸುವ ವೇದಾದಿಶಾಸ್ತ್ರಗಳ ಶ್ರವಣಾದ್ಯಾತ್ಮಕ ಶಾಸ್ತ್ರಾಭ್ಯಾಸಪ್ರವಚನಾದಿಗಳಿಂದಲೇ ಅನಾದಿಕಾಲದಿಂದ ತನಗಿರುವ ಈ ಸಂಸಾರ ಬಂಧನದಿಂದ ಮುಕ್ತನಾಗುತ್ತಾನೆ.

ಬ್ರಹ್ಮಾದಿದೇವಗಂಧರ್ವೈರ್ಮುನಿಭಿಃ ಸಿದ್ಧಚಾರಣೈಃ ।
ಯೋಗಿಭಿಃ ಸೇವಿತಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೩೧ ॥

ವಿಷ್ಣೌ ಪ್ರತಿಷ್ಠಿತಂ ವಿಶ್ವಂ ವಿಷ್ಣುರ್ವಿಶ್ವೇ ಪ್ರತಿಷ್ಠಿತಃ ।
ವಿಶ್ವೇಶ್ವರಮಜಂ ವಿಷ್ಣುಂ ಕೀರ್ತನಾದೇವ ಮುಚ್ಯತೇ ॥ ೩೨ ॥

ಸಂಸಾರಬಂಧನಾನ್ಮುಕ್ತಿಮಿಚ್ಛನ್ಕಾಮಮಶೇಷತಃ ।
ಭಕ್ತ್ಯೈವ ವರದಂ ವಿಷ್ಣುಂ ಸದಾ ಧ್ಯಾಯನ್ವಿಮುಚ್ಯತೇ ॥ ೩೩ ॥

---

೩೧. ಚತುರ್ಮುಖನೇ ಮೊದಲಾದ ದೇವತೆಗಳಿಂದಲೂ, ಗಂಧರ್ವರಿಂದಲೂ, ಕಶ್ಯಪಾದಿಮುನಿಗಳಿಂದಲೂ, ಸಿದ್ಧಚಾರಣರಿಂದಲೂ, ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗವುಳ್ಳ ಪ್ರಾಜ್ಞರಿಂದಲೂ ಸೇವೆಗೊಳ್ಳುತ್ತಿರುವ ಶ್ರೀ ಮಹಾ ವಿಷ್ಣುವನ್ನು ಯಾವಾಗಲೂ ಚಿಂತಿಸುವವನು ಮುಕ್ತನಾಗುತ್ತಾನೆ.

೩೨. ಸಕಲ ಜಗತ್ತೂ ಶ್ರೀ ವಿಷ್ಣುವಿನಲ್ಲಿ ಆಶ್ರಯಮಾಡಿಕೊಂಡಿರುತ್ತದೆ. ವಿಷ್ಣುವು ತನ್ನ ಅಚಿಂತ್ಯಾದ್ಭುತಶಕ್ತಿಯಿಂದ ಸ್ವಾಶ್ರಿತವಾದ ಜಗತ್ತಿನಲ್ಲಿ ವ್ಯಾಪಿಸಿರುತ್ತಾನೆ. ಇಂತಹ ವಿಶ್ವನಿಯಾಮಕನಾದ, ಉತ್ಪತ್ತಿರಹಿತನಾದ ವಿಷ್ಣುವಿನ ನಾಮವನ್ನು ಭಕ್ತಿಪೂರ್ವಕವಾಗಿ ಉಚ್ಚರಿಸುವುದರಿಂದಲೇ ಮುಕ್ತನಾಗುತ್ತಾನೆ.

೩೩. ಸಂಪೂರ್ಣವಾಗಿ ಸಂಸಾರವೆಂಬ ಪಾಶದ ಕಟ್ಟಿನಿಂದ ಬಿಡುಗಡೆಯನ್ನು ಅಪೇಕ್ಷಿಸುವವನು, ಮಾಹಾತ್ಮ್ಯಜ್ಞಾನಪೂರ್ವಕವಾದ ಸುದೃಢಸ್ನೇಹವೆಂಬ ಭಕ್ತಿಯಿಂದಲೇ ಭಕ್ತರ ಇಷ್ಟಾರ್ಥವನ್ನೀಯುವ, ಸರ್ವತ್ರವ್ಯಾಪ್ತನಾದ ಶ್ರೀ ಮಹಾವಿಷ್ಣುವನ್ನು ಧ್ಯಾನಿಸುವವನಾಗಿ ಮುಕ್ತನಾಗುತ್ತಾನೆ," ಎಂದು ಮಹಾರುದ್ರದೇವನು ಹೇಳಿದನು.

॥ ವ್ಯಾಸ ಉವಾಚ ॥

ನಾರದೇನ ಪುರಾ ಪೃಷ್ಟಃ ಏವಂ ಸ ವೃಷಭಧ್ವಜಃ ।
ಯದುವಾಚ ತದಾ ತಸ್ಮೈ ತನ್ಮಯಾ ಕಥಿತಂ ತವ ॥ ೩೪ ॥

ತಮೇವ ಸತತಂ ಧ್ಯಾಹಿ ನಿರ್ಬೀಜಂ ಬ್ರಹ್ಮ ಕೇವಲಂ ।
ಅವಾಪ್ಸ್ಯಸಿ ಧ್ರುವಂ ತಾತ ಶಾಶ್ವತಂ ಪದಮವ್ಯಯಮ್ ॥ ೩೫ ॥

ಶ್ರುತ್ವಾ ಸುರಋಷಿರ್ವಿಷ್ಣೋಃ ಪ್ರಾಧಾನ್ಯಮಿದಮೀಶ್ವರಾತ್ ।
ಸ ವಿಷ್ಣುಂ ಸಮ್ಯಗಾರಾಧ್ಯ ಪರಾಂ ಸಿದ್ಧಿಮವಾಪ್ತವಾನ್ ॥ ೩೬ ॥

ಶ್ರೀ ವ್ಯಾಸಮುನಿಯು ಹೇಳುತ್ತಾನೆ :—

೩೪. " ಪೂರ್ವದಲ್ಲಿ ಇಂತು ನಾರದನು, ಹೇಳಿದುದಕ್ಕೆ ವೃಷಭಧ್ವಜನಾದ ಮಹಾರುದ್ರದೇವನು ಆಗ ಯಾವ ಉತ್ತರವನ್ನು ಅವನಿಗೆ ನುಡಿದನೋ, ಅದನ್ನು ಎಲೈ ಶುಕನೇ ! ನಿನಗೆ ನಾನು ಈಗ ಹೇಳಿದೆನು.

೩೫. ಆದುದರಿಂದ ಕಾರಣಶೂನ್ಯನಾದ, ತನಗೆ ಸಮಾನವಾದ ಮತ್ತೊಂದು ವಸ್ತುವಿಲ್ಲದ ಆ ಪೂರ್ಣಗುಣವುಳ್ಳವನಾದ ಪರಬ್ರಹ್ಮನನ್ನೇ ಯಾವಾಗಲೂ ಧ್ಯಾನ ಮಾಡುವವನಾಗು ; ನಾಶರಹಿತವೂ, ಯಾವಾಗಲೂ ಏಕಪ್ರಕಾರವಾಗಿರುವುದೂ, ಸುಖರೂಪವೂ, ಆದ ಮೋಕ್ಷಸ್ಥಾನವನ್ನು ಎಲೈ ಮಗುವೇ ! ನೀನು ಹೊಂದುವೆ.

೩೬. ದೇವಋಷಿಯಾದ ನಾರದನು ಮಹಾರುದ್ರದೇವನಿಂದ ಶ್ರೀ ಮಹಾವಿಷ್ಣುವಿನ ಸರ್ವೋತ್ತಮತ್ವವನ್ನು ಕೇಳಿ, ಶ್ರೀ ಮಹಾವಿಷ್ಣುವನ್ನು ಭಕ್ತಿಪೂರ್ವಕವಾಗಿ ಪೂಜಿಸಿ, ಪರಮಫಲವಾದ ಮೋಕ್ಷವನ್ನು ಪಡೆದನು.

ಯಶ್ಚೈನಂ ಪಠತೇ ಚೈವ ನೃಸಿಂಹಕೃತಮಾನಸಃ ।
ಶತಜನ್ಮಕೃತಂ ಪಾಪಮಪಿ ತಸ್ಯ ಪ್ರಣಶ್ಯತಿ ॥ ೩೭ ॥

ವಿಷ್ಣೋಸ್ತವಮಿದಂ ಪುಣ್ಯಂ ಮಹಾದೇವೇನ ಕೀರ್ತಿತಂ ।
ಪ್ರಾತಃ ಸ್ನಾತ್ವಾ ಪಠೇನ್ನಿತ್ಯಮಮೃತತ್ವಂ ಸ ಗಚ್ಛತಿ ॥ ೩೮ ॥

ಧ್ಯಾಯಂತೀ ಯೇ ನಿತ್ಯಮನಂತಮಚ್ಯುತಂ
ಹೃತ್ಪದ್ಮಮಧ್ಯೇಽಪ್ಯಥ ಕೀರ್ತಯಂತಿ ಯೇ ।

---

೩೭. ಯಾವ ಭಕ್ತನು ಶ್ರೀ ನರಸಿಂಹಸ್ವಾಮಿಯಲ್ಲಿ ಶ್ರದ್ಧಾಭಕ್ತಿಗಳಿಂದ ತನ್ನ ಮನಸ್ಸನ್ನಿಟ್ಟು, ಈ ರುದ್ರನಾರದ ಸಂವಾದವನ್ನು ಪಠಿಸುತ್ತಾನೆಯೋ, ನೂರಾರು ಜನ್ಮಗಳಲ್ಲಿ ಗಳಿಸಿದ ಅವನ ಪಾಪವೂ ನಾಶವಾಗುತ್ತದೆ.

೩೮. ಯಾವ ಅಧಿಕಾರಿಯು ಮಹಾದೇವನು ನಾರದನಿಗೆ ಹೇಳಿದ ಈ ಪುಣ್ಯವನ್ನುಂಟುಮಾಡುವ ಶ್ರೀ ಮಹಾವಿಷ್ಣುವಿನ ಸ್ತೋತ್ರವನ್ನು ಹೊತ್ತಾರೆ ಎದ್ದು ಮಿಂದು, ನಿತ್ಯವೂ ಅರ್ಥಜ್ಞಾನಪೂರ್ವಕವಾಗಿ ಪಠಿಸುತ್ತಾನೆಯೋ, ಅವನು ಮೋಕ್ಷವನ್ನೈದುವನು.

೩೯. ಯಾವ ಅಧಿಕಾರಿಗಳು ನಿರಂತರದಲ್ಲಿಯೂ, ತಮ್ಮ ಹೃದಯಕಮಲಗಳ ಮಧ್ಯದಲ್ಲಿ ನಾಶರಹಿತನೂ, ನಿರ್ವಿಕಾರನೂ, ಆದ ಭಗವಂತನಾದ ಶ್ರೀ ಮಹಾವಿಷ್ಣುವನ್ನು ಧ್ಯಾನಮಾಡುತ್ತಾರೆಯೋ ಅಥವಾ ಉಪಾಸಕರಿಗೆ ಸ್ವಾಮಿಯಾದ ಸರ್ವಚೇತನರ ಸೃಷ್ಟಿಕರ್ತೃವೂ, ಚತುರ್ಮುಖನೇ ಮೊದಲಾದ ಪ್ರಜಾಪತಿಗಳಿಗಿಂತಲೂ ಸರ್ವೋತ್ತ

ಉಪಾಸಕಾನಾಂ ಪ್ರಭುಮೀಶ್ವರಂ ಪರಂ
ತೇ ಯಾಂತಿ ಸಿದ್ಧಿಂ ಪರಮಾಂ ತು ವೈಷ್ಣವೀಮ್ ॥ ೩೯ ॥

ಇತಿ ಶ್ರೀ ನರಸಿಂಹಪುರಾಣೇ ವಿಷ್ಣೋಃಸ್ತವರಾಜನಿರೂಪಣೇ
ಸಪ್ತದಶೋಽಧ್ಯಾಯಃ

ಮನೂ ಆದ ಶ್ರೀ ನರಸಿಂಹನನ್ನು ಭಕ್ತಿಪೂರ್ವಕವಾಗಿ ನಾಮೋಚ್ಚಾರಣ ರೂಪವಾದ ಕೀರ್ತನವನ್ನು ಮಾಡುತ್ತಾರೆಯೋ, ಅವರು ಉತ್ತಮಫಲವಾದ ವಿಷ್ಣುಲೋಕಗಳಾದ, ಶ್ವೇತದ್ವೀಪಾಸನಂತಾಸನವೈಕುಂಠಗಳೆಂಬ ಮುಕ್ತಿಸ್ಥಾನಗಳನ್ನು ಹೊಂದುತ್ತಾರೆ." ಎಂದು ಶ್ರೀ ವ್ಯಾಸಮುನಿಯು ಶುಕನಿಗೆ ಹೇಳಿದುದನ್ನು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ವಿಷ್ಣುವಿನ ಸ್ತವರಾಜನಿರೂಪಣದಲ್ಲಿ
ಹದಿನೇಳನೆಯ ಅಧ್ಯಾಯವು ಮುಗಿದುದು.

ಹದಿನೇಳನೆಯ ಅಧ್ಯಾಯದ ವಿಷಯಸಂಗ್ರಹವು

ಈ ಅಧ್ಯಾಯದಲ್ಲಿ ವ್ಯಾಸಮುನಿಯು, ತನ್ನ ಮಗನಾದ ಶುಕಮುನಿಯು ಸಕಲ ಶಿಷ್ಯರೊಡನೆ "ಅನಾದಿಯಾದ ಸಂಸಾರವೆಂಬ ಪಾಶಬಂಧದಿಂದ ಕೂಡಿರುವವನು ಇದರಿಂದ ಮುಕ್ತನಾಗುವುದು ಹೇಗೆ?" ಎಂದು ಪ್ರಶ್ನಿಸಲು, ಯಾವಾತನು ಅಪ್ರಾಕೃತಗಳಾದ ಅನಂತಕಲ್ಯಾಣಗುಣಪೂರ್ಣನೂ, ಸರ್ವಶಕ್ತನೂ, ಈ ಚರಾಚರಾತ್ಮಕ ಪ್ರಪಂಚಕ್ಕೆ ಉತ್ಪತ್ತಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನಾಜ್ಞಾನ ಬಂಧಮೋಕ್ಷಗಳೆಂಬ ಎಂಟು ಅವಸ್ಥೆಗಳನ್ನು ಸ್ವಾತಂತ್ರ್ಯದಿಂದೆಯ್ದಿಸುವವನೂ, ಸರ್ವತ್ರ ವ್ಯಾಪ್ತನೂ, ಆದ ಭಗವಂತನನ್ನು ಮಾಹಾತ್ಮ್ಯಜ್ಞಾನಪೂರ್ವಕವಾದ ಸುದೃಢಸ್ನೇಹದಿಂದ ಸದಾ ಧ್ಯಾನಮಾಡಿದವನೂ, ಕೀರ್ತಿಸಿದವನೂ ಆಗಿ ಈ ಸಂಸಾರಬಂಧನದಿಂದ ಮುಕ್ತನಾಗುವನೆಂದು, ಮಹಾರುದ್ರದೇವನು ಪೂರ್ವದಲ್ಲಿ ಇದೇ ಪ್ರಶ್ನೆಯನ್ನು ನರಕದಲ್ಲಿ ದುಃಖಮಗ್ನರಾಗಿದ್ದ ನಾರಕಿಗಳನ್ನು ನೋಡಿ, ಬಂದು ತನ್ನನ್ನು ಕೇಳಿದ ದೇವಮುನಿಯಾದ ನಾರದನಿಗೆ ಹೇಳಿದುದನ್ನು ನಿರೂಪಿಸಿದನೆಂದು, ಭಾರದ್ವಾಜನಿಗೆ ಸೂತರು ನಿರೂಪಿಸಿರುತ್ತಾರೆ.

ಇಂತು ಹದಿನೇಳನೆಯ ಅಧ್ಯಾಯದ ವಿಷಯಸಂಗ್ರಹವು ಮುಗಿದುದು

॥ ಶ್ರೀಃ ॥

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ಅಷ್ಟಾದಶೋಽಧ್ಯಾಯಃ

ಅಷ್ಟಾಕ್ಷರ ಮಂತ್ರ ಮಾಹಾತ್ಮ್ಯಮ್.

॥ ಶ್ರೀ ಶುಕ ಉವಾಚ ॥

ಕಿಂ ಜಪನ್ಮುಚ್ಯತೇ ತಾತ ಸತತಂ ವಿಷ್ಣುತತ್ಪರಃ ।
ಸಂಸಾರದುಃಖಾತ್ಸರ್ವೇಷಾಂ ಹಿತಾಯ ವದ ಮೇ ಪಿತಃ ॥ ೧ ॥

॥ ಶ್ರೀ ವ್ಯಾಸ ಉವಾಚ ॥

ಸೃಷ್ಟಿಕಾಂಡವು ; ಹದಿನೆಂಟನೆಯ ಅಧ್ಯಾಯವು

ಅಷ್ಟಾಕ್ಷರ ಮಂತ್ರದ ಮಹಿಮೆಯು

ಶುಕಮುನಿಯು ತನ್ನ ತಂದೆಯೂ, ಗುರುವೂ ಆದ ಶ್ರೀ ವ್ಯಾಸಮುನಿಯನ್ನು ಕುರಿತು, ಇಂತು ಹೇಳುತ್ತಾನೆ:—

೧. "ಎಲೈ ತಂದೆಯೇ! ಯಾವಾಗಲೂ ವಿಷ್ಣುಧ್ಯಾನಾಸಕ್ತನಾದವನು ಯಾವುದನ್ನು ಜಪಮಾಡಿದವನಾಗಿ ಈ ಸಂಸಾರದ ಕಷ್ಟದಿಂದ ಮುಕ್ತನಾಗುತ್ತಾನೆಯೋ, ಅದನ್ನು ಸಕಲಚೇತನರಿಗೆ ಹಿತವನ್ನುಂಟುಮಾಡಲು, ಕರುಣೆಯಿಂದ ನನಗೆ ನಿರೂಪಿಸು ;" ಎಂದು ಶುಕಮುನಿಯು ಕೇಳಲು,

ಅಷ್ಟಾಕ್ಷರಂ ಪ್ರವಕ್ಷ್ಯಾಮಿ ಮಂತ್ರಾಣಾಂ ಮಂತ್ರಮುತ್ತಮಮ್ ।
ಯಂ ಜಪನ್ಮುಚ್ಯತೇ ಮರ್ತ್ಯೋ ಜನ್ಮಸಂಸಾರ ಬಂಧನಾತ್ ॥ ೨ ॥

ಹೃತ್ಪುಂಡರೀಕಮಧ್ಯಸ್ಥಂ ಶಂಖಚಕ್ರಗದಾಧರಮ್ ।
ಏಕಾಗ್ರಮನಸಾ ಧ್ಯಾತ್ವಾ ವಿಷ್ಣುಂ ಕುರ್ಯಾಜ್ಜಪಂ ದ್ವಿಜಃ ॥ ೩ ॥

ಏಕಾಂತೇ ನಿರ್ಜನಸ್ಥಾನೇ ವಿಷ್ಣ್ವಗ್ರೇ ವಾ ಜಲಾಂತಿಕೇ ।
ಜಪೇದಷ್ಟಾಕ್ಷರಂ ಮಂತ್ರಂ ಚಿತ್ತೇ ವಿಷ್ಣುಂ ನಿಧಾಯ ವೈ ॥ ೪ ॥

ಅಷ್ಟಾಕ್ಷರಸ್ಯ ಮಂತ್ರಸ್ಯ ಋಷಿರ್ನಾರಾಯಣಃ ಸ್ವಯಮ್ ।
ಛಂದಶ್ಚ ದೇವೀ ಗಾಯತ್ರೀ ಪರಮಾತ್ಮಾ ಚ ದೇವತಾ ॥ ೫ ॥

ಶ್ರೀ ವ್ಯಾಸಮುನಿಯು ಅರುಹುತ್ತಾನೆ:—

೨. 'ಎಲೈ ತನಯನಾದ ಶುಕನೇ! ಶಿಷ್ಯರಿರಾ! ಕೇಳಿರಿ; ಕೇಳಿರಿ; ಮರ್ತ್ಯನು ಯಾವುದನ್ನು ಜಪಿಸಿ, ಮುಕ್ತನಾಗುತ್ತಾನೆಯೋ, ಆ ಮಂತ್ರಗಳಲ್ಲೆಲ್ಲಾ ಉತ್ತಮಮಂತ್ರವಾದ (ಎಂಟು ಅಕ್ಷರಗಳುಳ್ಳ) ಅಷ್ಟಾಕ್ಷರ ಮಂತ್ರವನ್ನು ನಿಮಗೆ ತಿಳಿಸುವೆನು.

೩. ದ್ವಿಜನಾದವನು ತನ್ನ ಹೃದಯಕಮಲದ ಮಧ್ಯದಲ್ಲಿರುವ, ಶಂಖಚಕ್ರ ಗದಾಪದ್ಮಗಳನ್ನು ನಾಲ್ಕು ಕೈಗಳಲ್ಲಿ ಧರಿಸಿರುವ ಶ್ರೀ ಮಹಾವಿಷ್ಣುವನ್ನು ಅನನ್ಯ ಮನದಿಂದ ಚಿಂತಿಸಿ, ಈ ಅಷ್ಟಾಕ್ಷರಮಂತ್ರ ಜಪವನ್ನೆಸಗುವುದು.

೪. ಅಧಿಕಾರಿಯು ಗುಟ್ಟಿನಲ್ಲಿ, ಯಾರೂ ಇಲ್ಲನೆಡೆಯಲ್ಲಿ, ದೇವರ ಇದಿರಿನಲ್ಲಿ ಯಾಗಲೀ, ನೀರಿನ ತಡಿಯಲ್ಲಾಗಲೀ ವಿಷ್ಣುವನ್ನು ಮನದಲ್ಲಿ ನೆನೆದು, ಅಷ್ಟಾಕ್ಷರ ಮಂತ್ರವನ್ನು ಜಪಿಸುವುದು.

೫ ಈ ಅಷ್ಟಾಕ್ಷರಮಂತ್ರಕ್ಕೆ ಶ್ರೀ ನಾರಾಯಣನು ತಾನೇ ಋಷಿಯು; ಗಾಯತ್ರಿಯೇ ಛಂದಸ್ಸು! ಸರ್ವೋತ್ತಮನಾದ ಭಗವಂತನೇ ಪ್ರತಿಪಾದ್ಯನಾದ ದೇವತೆಯು.

ಶುಕ್ಲವರ್ಣಂ ಚ ಓಂಕಾರಂ ನಕಾರಂ ರಕ್ತಮುಚ್ಯತೇ ।
ಮೋಕಾರಂ ವರ್ಣತಃ ಕೃಷ್ಣಂ ನಾಕಾರಂ ರಕ್ತಮುಚ್ಯತೇ ॥ ೬ ॥

ರಾಕಾರಂ ಕುಂಕುಮಾಭಂ ತು ಯಕಾರಂ ಪೀತಮುಚ್ಯತೇ ।
ಣಾಕಾರಮಂಜನಾಭಂ ತು ಯಕಾರಂ ಬಹುವರ್ಣಕಮ್ ॥ ೭ ॥

'ಓಂ ನಮೋ ನಾರಾಯಣಾಯೇತಿ' ಮಂತ್ರಃ ಸರ್ವಾರ್ಥಸಾಧಕಃ ।
ಭಕ್ತಾನಾಂ ಜಪತಾಂ ತಾತ ಸ್ವರ್ಗಮೋಕ್ಷಫಲಪ್ರದಃ ।
ವೇದಾನಾಂ ಪ್ರಣಯೇನೈಷಾ ಸಿದ್ಧೋ ಮಂತ್ರಃ ಸನಾತನಃ ॥ ೮ ॥

ಸರ್ವಪಾಪಹರಃ ಶ್ರೀಮಾನ್ಸರ್ವಮಂತ್ರೇಷು ಚೋತ್ತಮಃ ।
ಏನಮಷ್ಟಾಕ್ಷರಂ ಮಂತ್ರಂ ಜಪನ್ನಾರಾಯಣಂ ಸ್ಮರೇತ್ ॥ ೯ ॥

---

೬. 'ಓಂಕಾರವು ಬಿಳಿಯವರ್ಣವಾಗಿಯೂ,' 'ನಕಾರವು ರಕ್ತವರ್ಣವಾಗಿಯೂ ಇರುವುದೆಂದೂ ; 'ಮೋಕಾರವು ಬಣ್ಣದಿಂದ ಕಪ್ಪಾಗಿಯೂ,' 'ನಾಕಾರವು ಕೆಂಪಾಗಿಯೂ' ಇರುವುದೆಂದೂ ಹೇಳಿರುತ್ತವೆ ?

೭. 'ರಾಕಾರವು ಕುಂಕುಮದ ಬಣ್ಣವಾಗಿಯೂ,' 'ಯಕಾರವು ಹೊಂಬಣ್ಣವಾಗಿಯೂ,' 'ಣಾಕಾರವು ಕಾಡಿಗೆಯ ಬಣ್ಣವಾಗಿಯೂ,' 'ಯಕಾರವು ಅನೇಕ ಬಣ್ಣವಾಗಿಯೂ' ಇರುವುದೆಂದೂ ಹೇಳಿರುತ್ತವೆ

೮. ಎಲೈ ಮಗನಾದ ಶುಕನೇ! ಕೇಳು ; 'ಓಂ ನಮೋ ನಾರಾಯಣಾಯ,' ಎಂಬೀಮಂತ್ರವು ಭಕ್ತರಾಗಿ ಜಪಿಸುವವರಿಗೆ ಐಹಿಕವಾದ ಸಕಲ ಫಲವನ್ನುಂಟುಮಾಡುವುದಲ್ಲದೇ ಸ್ವರ್ಗಮೋಕ್ಷರೂಪವಾದ ಆಮುಷ್ಮಿಕಫಲವನ್ನೂ ಕುಡುವುದು. ನಿತ್ಯವಾದ ಈ ಮಂತ್ರವು ಸಕಲ ವೇದಗಳ ಅರ್ಥಪ್ರತಿಪಾದಕವಾಗಿರುವುದು.

೯. ಸಕಲ ಪಾಪಗಳನ್ನೂ ಕಳೆಯುವ ಪ್ರಭಾವವುಳ್ಳದಾದ ಈ ಮಂತ್ರವು ಸಕಲ ಮಂತ್ರಗಳಲ್ಲೆಲ್ಲಾ ಶ್ರೇಷ್ಠವಾದುದು. ಈ ಅಷ್ಟಾಕ್ಷರ ಮಂತ್ರವನ್ನು ಜಪಿಸುತ್ತಾ, ಶ್ರೀಮನ್ನಾರಾಯಣನನ್ನು ಚಿಂತಿಸುವುದು.

ಸಂಧ್ಯಾವಸಾನೇ ಸತತಂ ಸರ್ವಪಾಪೈಃ ಪ್ರಮುಚ್ಯತೇ ।
ಏಷ ಏವ ಪರೋ ಮಂತ್ರ ಏಷ ಏವ ಪರಂ ತಪಃ ॥ ೧೦ ॥

ಏಷ ಏವ ಪರೋ ಮೋಕ್ಷ ಏಷಃ ಸ್ವರ್ಗ ಉದಾಹೃತಃ ।
ಸರ್ವವೇದರಹಸ್ಯೇಭ್ಯಃ ಸಾರ ಏಷ ಸಮುದ್ಧೃತಃ ॥ ೧೧ ॥

ವಿಷ್ಣುನಾ ವೈಷ್ಣವಾನಾಂ ಹಿ ಹಿತಾಯ ಮನುಜಾಂ ಪುರಾ ।
ಏವಂ ಜ್ಞಾತ್ವಾ ತತೋ ವಿಪ್ರಃ ಅಷ್ಟಾಕ್ಷರಮಿಮಂ ಸ್ಮರೇತ್ ॥ ೧೨ ॥

ಸ್ನಾತ್ವಾ ಶುಚಿಃ ಶುಚೌ ದೇಶೇ ಜಪೇತ್ಪಾಪವಿಶುದ್ಧಯೇ ।
ಜಪೇ ದಾನೇ ಚ ಹೋಮೇ ಚ ಗಮನೇ ಧ್ಯಾನಪರ್ವಸು ॥ ೧೩ ॥

---

೧೦. ಸಂಧ್ಯೋಪಾಸನಾನಂತರದಲ್ಲಿ ಯಾವಾಗಲೂ ಈ ಮಂತ್ರವನ್ನು ಜಪಿಸುವವನು ಸಕಲ ಪಾಪಗಳಿಂದ ಮುಕ್ತನಾಗುತ್ತಾನೆ. ಈ ಮಂತ್ರವೇ ಶ್ರೇಷ್ಠವಾದುದು. ಇದರ ಜಪವೇ ಉತ್ತಮವಾದ ಜಪವು

೧೧. ಈ ಮಂತ್ರವೇ ಉತ್ತಮವಾದ ಮೋಕ್ಷಕ್ಕೆ ಸಾಧನವಾದುದು ; ಸ್ವರ್ಗಾದ್ಯುತ್ತಮಲೋಕವನ್ನೈದಲು ಸಾಧನವಾದುದು ; ಸಕಲ ವೇದಗಳ ರಹಸ್ಯಗಳಿಂದ ಸಾರಭೂತವಾದ ಈ ಮಂತ್ರವು ಸರ್ವೋತ್ಕೃಷ್ಟವಾಗಿರುವುದು.

೧೨. ಪೂರ್ವದಲ್ಲಿ ವಿಷ್ಣುಭಕ್ತರಾದ ಮಾನವರ ಹಿತಕ್ಕಾಗಿ ಶ್ರೀ ಮಹಾವಿಷ್ಣುವಿನಿಂದ ಉಪದಿಷ್ಟವಾದುದು ಈ ಮಂತ್ರವೆಂದು ತಿಳಿದು, ಬಳಿಕ ಬ್ರಾಹ್ಮಣನು ಈ ಅಷ್ಟಾಕ್ಷರಮಂತ್ರವನ್ನು ಚಿಂತಿಸುವುದು.

೧೩. ಅಧಿಕಾರಿಯು ಸ್ನಾನಮಾಡಿ ಶುಚಿಯಾದವನಾಗಿ, ಪಾಪಗಳಿಂದ ಶುದ್ಧನಾಗಲು, ಜಪಮಾಡುವ ಕಾಲದಲ್ಲಿಯೂ, ದಾನಮಾಡುವ ವೇಳೆಯಲ್ಲಿಯೂ, ದೇವತೆಗಳನ್ನುದ್ದೇಶಿಸಿ ಅಗ್ನಿಯಲ್ಲಿ ಹವಿಸ್ಸನ್ನು ಹುಡುವಾಗಲೂ, ಸಂಚರಿಸುವಾಗಲೂ, ಭಗವಂತನ ಧ್ಯಾನವನ್ನೆಸಗುವಾಗಲೂ ಈ ಮಂತ್ರವನ್ನು ಜಪಿಸುವುದು.

ಜಪೇನ್ನಾರಾಯಣಂ ಮಂತ್ರಂ ಕರ್ಮಪೂರ್ವೇ ಪರೇ ತಥಾ ।
ಜಪೇತ್ಸಹಸ್ರಂ ನಿಯುತಂ ಶುಚಿರ್ಭೂತ್ವಾ ಸಮಾಹಿತಃ ॥ ೧೪ ॥

ಮಾಸಿ ಮಾಸಿ ತು ದ್ವಾದಶ್ಯಾಂ ವಿಷ್ಣುಭಕ್ತೋ ದ್ವಿಜೋತ್ತಮಃ ।
ಸ್ನಾತ್ವಾ ಶುಚಿರ್ಜಪೇದ್ಯಸ್ತು ನಮೋ ನಾರಾಯಣಂ ಶತಮ್ ॥ ೧೫ ॥

ಸ ಗಚ್ಛೇತ್ಪರಮಂ ದೇವಂ ನಾರಾಯಣಮನಾಮಯಮ್ ।
ಗಂಧ ಪುಷ್ಪಾದಿಭಿರ್ವಿಷ್ಣುಂ ಅನೇನಾರಾಧ್ಯ ಯೋ ಜಪೇತ್ ॥ ೧೬ ॥

ಮಹಾಪಾತಕಯುಕ್ತೋಽಪಿ ಮುಚ್ಯತೇ ನಾತ್ರ ಸಂಶಯಃ ।
ಹೃದಿ ಕೃತ್ವಾ ಹರಿಂ ದೇವಂ ಮಂತ್ರಮೇನಂ ತು ಯೋ ಜಪೇತ್ ॥ ೧೭ ॥

---

೧೪ ಸಕಲ ಕರ್ಮಗಳ ಮೊದಲಲ್ಲಿಯೂ, ಕರ್ಮವು ಪೂರೈಸಿದಮೇಲೆಯೂ, ಹಾಗೆಯೇ ನಾರಾಯಣಮಂತ್ರವನ್ನು ಜಪಿಸುವುದು. ಮಾನವನು ತಪ್ಪದೇ ಇಂದ್ರಿಯನಿಗ್ರಹಿಯಾಗಿ, ಪರಿಶುದ್ಧನಾಗಿ, ಶಾಂತನಾಗಿ ಸಾವಿರ ಬಾರಿ ಈ ನಾರಾಯಣ ಮಂತ್ರವನ್ನು ಜಪಿಸುವುದು.

೧೫. ಪ್ರತಿ ತಿಂಗಳಲ್ಲಿಯೂ ದ್ವಾದಶೀತಿಥಿಯಲ್ಲಿ ವಿಷ್ಣುಭಕ್ತನಾದ ದ್ವಿಜ ಶ್ರೇಷ್ಠನು, ಸ್ನಾನಮಾಡಿ ಶುಚಿಯಾಗಿ, 'ಓಂ ನಮೋ ನಾರಾಯಣಾಯ' ವೆಂಬ ಅಷ್ಟಾಕ್ಷರಮಂತ್ರವನ್ನು ನೂರು ಬಾರಿ ಜಪಮಾಡಬೇಕು.

೧೬. ಯಾವಾತನು ಗಂಧಪುಷ್ಪಾದಿಗಳಿಂದ ಕ್ರೀಡಾದಿಗುಣವಿಶಿಷ್ಟನೂ, ವ್ಯಾಧಿಶೂನ್ಯನೂ, ಗುಣಪೂರ್ಣನೂ, ದೋಷವರ್ಜಿತನೂ, ಜ್ಞೇಯನೂ, ಗಮ್ಯನೂ, ಆದ ಶ್ರೀ ಮಹಾವಿಷ್ಣುವನ್ನು ಈ ಅಷ್ಟಾಕ್ಷರಮಂತ್ರದಿಂದ ಆರಾಧಿಸಿ, ಜಪಿಸುತ್ತಾನೆಯೋ, ಅವನು ಸರ್ವೋತ್ತಮಸ್ವಾಮಿಯಾದ ಶ್ರೀಹರಿಯನ್ನೈದುವನು.

೧೭. ಯಾವನು ಸ್ವಾಮಿಯಾದ ಶ್ರೀಹರಿಯನ್ನು ಧ್ಯಾನಿಸಿ, ಈ ಅಷ್ಟಾಕ್ಷರ ಮಂತ್ರವನ್ನು ಜಪಿಸುತ್ತಾನೆಯೋ ಅವನು, ಬ್ರಹ್ಮಹತ್ಯಾ, ಸುರಾಪಾನ, ಸ್ವರ್ಣ ಸ್ತೇಯ, ಗುರುತಲ್ಪಗಮನ, ಇದನ್ನಾಚರಿಸಿದವರ ಸಂಸರ್ಗ, ಈ ಪಂಚಮಹಾ ಪಾತಕವನ್ನೆಸಗಿದವನಾದರೂ ಮುಕ್ತನಾಗುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ.

ಸರ್ವಪಾಪವಿಶುದ್ಧಾತ್ಮಾ ಸ ಗಚ್ಛೇತ್ಪರಮಾಂ ಗತಿಮ್ ।
ಪ್ರಥಮೇನ ತು ಲಕ್ಷೇಣ ಆತ್ಮಶುದ್ಧಿರ್ಭವಿಷ್ಯತಿ ॥ ೧೮ ॥

ದ್ವಿತೀಯೇನ ತು ಲಕ್ಷೇಣ ಮನಶುದ್ಧಿಮವಾಪ್ನುಯಾತ್ ।
ತೃತೀಯೇನ ಚ ಲಕ್ಷೇಣ ಸ್ವರ್ಗಲೋಕಮವಾಪ್ನುಯಾತ್ ॥ ೧೯ ॥

ಚತುರ್ಥೇನ ತು ಲಕ್ಷೇಣ ಹರೇಃ ಸಾಮೀಪ್ಯಮಾಪ್ನುಯಾತ್ ।
ಪಂಚಮೇನ ತು ಲಕ್ಷೇಣ ನಿರ್ಮಲಂ ಜ್ಞಾನಮಾಪ್ನುಯಾತ್ ॥ ೨೦ ॥

ತಥಾ ಷಷ್ಠೇನ ಲಕ್ಷೇಣ ಭವೇದ್ವಿಷ್ಣೌ ಸ್ಥಿರಾ ಮತಿಃ ।
ಸಪ್ತಮೇನ ತು ಲಕ್ಷೇಣ ಸ್ವರೂಪಂ ಪ್ರತಿಪದ್ಯತೇ ॥ ೨೧ ॥

ಅಷ್ಟಮೇನ ತು ಲಕ್ಷೇಣ ನಿರ್ವಾಣಮಧಿಗಚ್ಛತಿ ।
ಸ್ವಸ್ವಧರ್ಮಸಮಾಯುಕ್ತೋ ಜಪಂ ಕುರ್ಯಾದ್ದ್ವಿಜೋತ್ತಮಃ ॥ ೨೨ ॥

೧೮–೨೨. ಮೊದಲನೆಯ ಒಂದು ಲಕ್ಷಸಂಖ್ಯೆಯ ಈ ಅಷ್ಟಾಕ್ಷರಮಂತ್ರ ಜಪದಿಂದ ಆತ್ಮಶುದ್ಧಿಯುಂಟಾಗುವುದು. ಆ ಅಧಿಕಾರಿಯು ಸಕಲ ಪಾಪಗಳಿಂದ ಪರಿಶುದ್ಧವಾದ ಚೇತನವುಳ್ಳವನಾಗಿ ಉತ್ತಮಲೋಕವನ್ನೈದುವನು. ಎರಡನೆಯ ಲಕ್ಷಜಪದಿಂದ ಮನಃಶುದ್ಧಿಯನ್ನೈದುವನು. ಮೂರನೆಯ ಲಕ್ಷಜಪದಿಂದ ಸ್ವರ್ಗ ಲೋಕವನ್ನೈದುವನು. ನಾಲ್ಕನೆಯ ಲಕ್ಷಜಪದಿಂದ ಶ್ರೀ ಹರಿಯ ಸಾಮೀಪ್ಯ ವನ್ನೈದುವನು. ಐದನೆಯ ಲಕ್ಷಜಪದಿಂದ ಪವಿತ್ರವಾದ ತತ್ತ್ವಜ್ಞಾನವನ್ನು ಹೊಂದು ವನು. ಹಾಗೆಯೇ ಈ ಅಷ್ಟಾಕ್ಷರ ಮಂತ್ರದ ಆರನೆಯ ಲಕ್ಷಜಪದಿಂದ ವಿಷ್ಣುವಿನಲ್ಲಿ ದೃಢಬುದ್ಧಿಯುಂಟಾಗುವುದು. ಏಳನೆಯ ಲಕ್ಷಜಪದಿಂದ ಚೇತನನು ಸ್ವಸ್ವರೂಪ ಜ್ಞಾನವನ್ನು ಹೊಂದುತ್ತಾನೆ. ಎಂಟನೆಯ ಲಕ್ಷದಿಂದ ಅನ್ಯಥಾರೂಪಪರಿತ್ಯಾಗ ಪೂರ್ವಕ ಸ್ವಸ್ವರೂಪಪ್ರಾಪ್ತಿರೂಪವಾದ ಪ್ರಾಕೃತ ವೈಕೃತಾದಿದೇಹರಾಹಿತ್ಯವುಳ್ಳ ಮುಕ್ತಿಯನ್ನು ಹೊಂದುವನು. ದ್ವಿಜಶ್ರೇಷ್ಠನಾದವನು ತನ್ನ ತನ್ನ ಧರ್ಮದಿಂದ ಕೂಡಿದವನಾಗಿ, ಈ ಅಷ್ಟಾಕ್ಷರ ಮಂತ್ರಜಪವನ್ನಾಚರಿಸಬೇಕು.

ಏತತ್ಸಿದ್ಧಿಕರಂ ಮಂತ್ರಮಷ್ಟಾಕ್ಷರಮತಂದ್ರಿತಾಃ ।
ದುಃಸ್ವಪ್ನಾತುರ ಪೈಶಾಚಾ ಉರಗಾ ಬ್ರಹ್ಮರಾಕ್ಷಸಾಃ ॥ ೨೩ ॥

ಜಾಪಿತಂ ನೋಪಸರ್ಪಂತಿ ಚೋರಕ್ಷುದ್ರಾದಯಸ್ತಥಾ ।
ಏಕಾಗ್ರಮನಸಾಽವ್ಯಗ್ರೋ ವಿಷ್ಣುಭಕ್ತೋ ದೃಢವ್ರತಃ ॥ ೨೪ ॥

ಜಪೇನ್ನಾರಾಯಣಂ ಮಂತ್ರಮೇತನ್ಮೃತ್ಯುಭಯಾಪಹಮ್ ।
ಮಂತ್ರಾಣಾಂ ಪರಮೋ ಮಂತ್ರೋ ದೇವತಾನಾಂ ಚ ದೈವತಮ್ ॥ ೨೫ ॥

ಗುಹ್ಯಾನಾಂ ಪರಮಂ ಗುಹ್ಯಮೋಂಕಾರಾದ್ಯಕ್ಷರಾಷ್ಟಕಮ್ ।
ಆಯುಷ್ಯಂ ಧನಪುತ್ರಾಂಶ್ಚ ಪಶೂನ್ವಿದ್ಯಾಂ ಮಹದ್ಯಶಃ ॥ ೨೬ ॥

೨೩-೨೪. ಯಾವಾಗಲೂ ಎಚ್ಚರವಾಗಿರುವ, ದುಸ್ವಪ್ನಗಳು, ವ್ಯಾಧಿ, ಪಿಶಾಚಗಳು, ಹಾವುಗಳು, ಬ್ರಹ್ಮರಾಕ್ಷಸರು, ಕಳ್ಳರು, ಕಪಟಿಗಳು, ಮನೋವ್ಯಥೆಗಳು, ಇವು ಈ ಮುಕ್ತಿರೂಪಫಲವನ್ನು ಕೊಡುವ ಈ ಅಷ್ಟಾಕ್ಷರ ಮಂತ್ರವನ್ನು ಜಪಿಸುವವನನ್ನು ಹತ್ತಿರಕ್ಕೆ ಹೋಗಿ ಸೋಕುವುದಿಲ್ಲವು. ಅಂತಹವನು ಒಂದೇ ಮನಸ್ಸಿನಿಂದ ಕೂಡಿದವನೂ, ವಿಷಯಾಂತರದಲ್ಲಿ ಸೇರದ ಬುದ್ಧಿಯುಳ್ಳವನೂ, ಕಠಿಣವಾದ ನಿಯಮವುಳ್ಳ ವಿಷ್ಣುಭಕ್ತನೂ ಆಗುವನು.

೨೫. ಮೃತ್ಯುಭಯವನ್ನು ಹೋಗಲಾಡಿಸುವ ಈ ನಾರಾಯಣಮಂತ್ರವನ್ನು ಜಪಿಸುವುದು. ಈ ಮಂತ್ರವು ಮಂತ್ರಗಳಲ್ಲೆಲ್ಲಾ ಉತ್ತಮವಾದ ಮಂತ್ರವು. ಇದರಿಂದ ಪ್ರತಿಪಾದ್ಯದೇವತೆಯು ದೇವತೆಗಳಲ್ಲೆಲ್ಲಾ ಅತ್ಯುತ್ತಮವಾದ ದೇವನು.

೨೬-೨೭. ಓಂಕಾರರವೇ ಮೊದಲಾಗಿ ಉಳ್ಳ, "ಓಂ ನಮೋ ನಾರಾಯಣಾಯ" ಎಂಬ ಎಂಟು ಅಕ್ಷರಗಳ ಮಂತ್ರವು ಗೂಢವಾದ ಮಂತ್ರಗಳಲ್ಲಿ ಅತಿಗೂಢವಾದುದು. ಈ ಮಂತ್ರವನ್ನು ಜಪಿಸುವ ಮಾನವನು ಪೂರ್ಣವಾದ ಪುರುಷಾರ್ಥವನ್ನೂ ದ್ರವ್ಯವನ್ನೂ, ಮಕ್ಕಳನ್ನೂ, ಪಶುಗಳನ್ನೂ, ವಿದ್ಯೆಗಳನ್ನೂ, ವಿಶೇಷವಾದ ಹೆಚ್ಚಾದ

ಧರ್ಮಾರ್ಥ ಕಾಮಮೋಕ್ಷಾಂಶ್ಚ ಲಭತೇ ಚ ಜಪನ್ನರಃ ।
ಏತತ್ಸತ್ಯಂ ಚ ಧರ್ಮ್ಯಂ ಚ ವೇದಶ್ರುತಿನಿದರ್ಶನಾತ್ ॥ ೨೭ ॥

ಏತತ್ಸಿದ್ಧಿಕರಂ ನೃಣಾಂ ಮಂತ್ರರೂಪಂ ನ ಸಂಶಯಃ ।
ಋಷಯಃ ಪಿತರೋ ದೇವಾಃ ಸಿದ್ಧಾಸ್ತ್ವಸುರರಾಕ್ಷಸಾಃ ॥ ೨೮ ॥

ಏತದೇವ ಪರಂ ಜಪ್ತ್ವಾ ಪರಾಂ ಸಿದ್ಧಿಮಿತೋ ಗತಾಃ ।
ಜ್ಞಾತ್ವಾ ಯಸ್ತ್ವಾತ್ಮನಃ ಕಾಲಂ ಶಾಸ್ತ್ರಾಂತರ ವಿಧಾನತಃ ॥ ೨೯ ॥

ಅಂತಕಾಲೇ ಜಪನ್ನೇತಿ ತದ್ವಿಷ್ಣೋಃ ಪರಮಂ ಪದಮ್ ॥ ೩೦ ॥

ಕೀರ್ತಿಯನ್ನೂ, ಧರ್ಮ, ಅರ್ಥ, ಕಾಮ, ಮೋಕ್ಷ- ಈ ನಾಲ್ಕುತೆರನಾದ ಪುರುಷಾರ್ಥಗಳನ್ನೂ ಹೊಂದುತ್ತಾನೆ. ವೇದಗಳಲ್ಲಿ ಹೇಳಿರುವ ಉದಾಹರಣಗಳಿಂದ ಇದು ಸತ್ಯವೂ, ಧರ್ಮದಿಂದ ವಿಹಿತವಾದುದೂ, ಯುಕ್ತವಾದುದೂ ಎಂದು ತಿಳಿದು ಬರುತ್ತದೆ.

೨೮-೩೦. ಈ ಮಂತ್ರಸ್ವರೂಪವು ಜಪಿಸುವ ಮಾನವರಿಗೆ, ಅಪೇಕ್ಷಿತವಾದ, ಉದ್ದಿಷ್ಟವಾದ ಫಲವನ್ನೀವುದೆಂಬ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಜ್ಞಾನಿಗಳಾದ ಮುನಿಗಳು, ಪಿತೃಗಳು, ದೇವತೆಗಳು, ಸಿದ್ಧರು, ಅಸುರರು, ಮತ್ತು ರಾಕ್ಷಸರು ಈ ಅಷ್ಟಾಕ್ಷರಮಂತ್ರವನ್ನೇ ಜಪಿಸಿ, ಇದರಿಂದ ಪರಮಫಲವಾದ ಮುಕ್ತಿಯನ್ನು ಹೊಂದುತ್ತಾರೆ. ಯಾವಾತನು ತನ್ನ ಅವಸಾನಕಾಲವನ್ನರಿತು ಶಾಸ್ತ್ರದಲ್ಲಿ ಹೇಳಿರುವ ನಿಯಮಾನುಸಾರವಾಗಿ, ಕೊನೆಗಾಲದಲ್ಲಿ ಈ ಮಂತ್ರವನ್ನು ಜಪಿಸುತ್ತಾನೆಯೋ, ಅವನು ಶ್ರೀ ಮಹಾವಿಷ್ಣುವಿನ ಪರಮಸ್ಥಾನವಾದ ಶ್ವೇತದ್ವೀಪಾನಂತಾಸನ ವೈಕುಂಠಾದಿಲೋಕಗಳನ್ನೈದುವನು.

ನಾರಾಯಣಾಯ ನಮ ಇತ್ಯಯಮೇವ ಸತ್ಯಂ
ಸಂಸಾರಘೋರವಿಷಸಂಹರಣಾಯ ಮಂತ್ರಃ ।
ಶೃಣ್ವಂತು ಭವ್ಯಮತಯೋ ಮುದಿತಾಸ್ತ್ವರಾಗಾ
ಉಚ್ಚೈಸ್ತರಾಮುಪದಿಶಾಮ್ಯಹಮೂರ್ಧ್ವಬಾಹುಃ ॥ ೩೦ ॥

ಭೂತ್ವೋರ್ಧ್ವಬಾಹುರದ್ಯಾಹಂ ಸತ್ಯಪೂರ್ವಂ ಬ್ರವೀಮ್ಯಹಂ ।
ಹೇ ಪುತ್ರ ಶಿಷ್ಯಾಃ ಶೃಣುತ ನ ಮಂತ್ರೋಽಷ್ಟಾಕ್ಷರಾತ್ಪರಃ ॥ ೩೧ ॥

ಸತ್ಯಂ ಸತ್ಯಂ ಪುನಃ ಸತ್ಯಮುತ್ಕ್ಷಿಪ್ಯ ಭುಜಮುಚ್ಯತೇ ।
ವೇದಾಚ್ಛಾಸ್ತ್ರಂ ಪರಂ ನಾಸ್ತಿ ನ ದೇವಃ ಕೇಶವಾತ್ಪರಃ ॥ ೩೨ ॥

---

೩೦. ಕಾಮಾದಿರಹಿತರಾದ ಸದ್ಬುದ್ಧಿಯುಳ್ಳವರೇ! ನಾನು ಎರಡು ತೋಳುಗಳನ್ನೂ ಮೇಲಕ್ಕೆ ಎತ್ತಿಕೊಂಡವನಾಗಿ, ಅಬ್ಬರಿಸಿ ಉಪದೇಶಿಸುತ್ತೇನೆ; ಸಂತೋಷದಿಂದ ಕೇಳಿರಿ; "ಓಂ ನಮೋ ನಾರಾಯಣಾಯ" ಎಂಬೀ ಮಂತ್ರವೇ ಸಂಸಾರವೆಂಬ ಕ್ರೂರವಾದ ನಂಜನ್ನು ನಾಶಮಾಡಲು ಶಕ್ತವಾದುದು— ಈ ವಿಷಯವು ಯಥಾರ್ಥವು.

೩೧. ಎಲೈ ಪುತ್ರನಾದ ಶುಕನೇ! ಶಿಷ್ಯರಿರಾ! ಕೇಳಿರಿ; ಇಂದು ನಾನು, ಕೈಗಳನ್ನು ಮೇಲಕ್ಕೆತ್ತಿ, ಸತ್ಯಪೂರ್ವಕವಾಗಿ, ಶಪಥಮಾಡಿ ಹೇಳುತ್ತೇನೆ; ಅಷ್ಟಾಕ್ಷರಮಂತ್ರದಿಂದ ಉತ್ತಮವಾದ ಮಂತ್ರವಿಲ್ಲ.

೩೨. ಮತ್ತೆ ತೋಳನ್ನೆತ್ತಿ ಸತ್ಯ, ಸತ್ಯ, ಸತ್ಯವಾಗಿಯೂ ಹೇಳುತ್ತೇನೆ. ವೇದದಿಂದಲೂ ಉತ್ತಮವಾದ ಶಾಸ್ತ್ರವಿಲ್ಲವು; ಬ್ರಹ್ಮ, ರುದ್ರ, ಪ್ರವರ್ತಕನಾದ ಕೇಶವನಾದ ಶ್ರೀಮನ್ನಾರಾಯಣನಿಗಿಂತ ಉತ್ತಮನಾದ ದೇವನಿಲ್ಲವು.

ಆಲೋಚ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥ ೩೪ ॥

ಇತ್ಯೇತತ್ಸಕಲಂ ಪ್ರೋಕ್ತಂ ಶಿಷ್ಯಾಣಾಂ ತವ ಪುಣ್ಯದಮ್ ।
ಕಥಾಶ್ಚ ವಿವಿಧಾಃ ಪ್ರೋಕ್ತಾ ಮಯಾ ಭಜ ಜನಾರ್ದನಮ್ ॥ ೩೫ ॥

ಅಷ್ಟಾಕ್ಷರಮಿಮಂ ಮಂತ್ರಂ ಸರ್ವದುಃಖವಿನಾಶನಮ್ ।
ಜಪ ಪುತ್ರ ಮಹಾಬುದ್ಧೇ ಯದಿ ಸಿದ್ಧಿಮಭೀಪ್ಸ್ಯಸಿ ॥ ೩೬ ॥

---

೩೪. ಸಕಲಶಾಸ್ತ್ರಗಳನ್ನೂ ಆಲೋಚಿಸಿ, ಮತ್ತೆ ಮತ್ತೆ ವಿಚಾರಮಾಡಿ, ಯಾವಾಗಲೂ ಶ್ರೀಮನ್ನಾರಾಯಣನು ಧ್ಯಾನಮಾಡಲ್ಪಡತಕ್ಕವನು ಎಂಬುದಿದೊಂದೇ ಸಿದ್ಧಾಂತಿತವಾಗಿರುವುದು.

೩೫. ಎಲೈ ಶಿಷ್ಯರುಗಳಿರಾ! ಪುತ್ರನೇ! ಇಂತು ನಿಮಗೆ ಪುಣ್ಯವನ್ನುಂಟು ಮಾಡುವ ಈ ಎಲ್ಲವನ್ನೂ ಹೇಳಿದೆನು; ಅನೇಕತೆರನಾದ ಕಥೆಗಳನ್ನು ಹೇಳಿದೆನು. ನೀವು ಇನ್ನು ಮೋಕ್ಷಪ್ರದನಾದ ಶ್ರೀ ಜನಾರ್ದನನ್ನು ಭಜಿಸಿರಿ.

೩೬. "ಎಲೈ ಮಹಾಮತಿಯಾದ ಪುತ್ರನಾದ ಶುಕನೇ! ಮುಕ್ತಿರೂಪವಾದ ಫಲವನ್ನಪೇಕ್ಷಿಸುವೆಯಾದರೆ, ಸರ್ವದುಃಖಗಳಿಗೂ ಅಳಿವನ್ನೆಸಗುವ, ಈ 'ಓಂ ನಮೋ ನಾರಾಯಣಾಯ' ವೆಂಬ ಅಷ್ಟಾಕ್ಷರಮಂತ್ರವನ್ನು ವಿಧ್ಯನುಸಾರವಾಗಿ ನೀನು ಜಪಿಸು."

॥ ಸೂತ ಉವಾಚ ॥

ಇದಂ ಸ್ತವಂ ವ್ಯಾಸಮುಖಾತ್ತು ನಿಃಸೃತಂ
ಸಂಧ್ಯಾತ್ರಯೇ ಯೇ ಪುರುಷಾಃ ಪಠಂತಿ ।
ತೇ ಧೌತಪಾಂಡುರಪಟಾ ಇವ ರಾಜಹಂಸಾ
ಸಂಸಾರ ಸಾಗರಮಪೇತಭಯಾಸ್ತರಂತಿ ॥ ೩೭ ॥

ಇತಿ ಶ್ರೀ ನರಸಿಂಹಪುರಾಣೇ ಅಷ್ಟಾಕ್ಷರ ಮಂತ್ರ ಮಾಹಾತ್ಮ್ಯಂ
ನಾಮಾಷ್ಟಾದಶೋಽಧ್ಯಾಯಃ

ಸೂತರು ಹೇಳುತ್ತಾರೆ :—

೩೭. " ಯಾವ ಪುರುಷರು ಶ್ರೀ ವ್ಯಾಸಮುನಿಗಳ ಮುಖದಿಂದ ಹೊರಟ, ಈ ' ಓಂ ನಮೋ ನಾರಾಯಣಾಯ ' ವೆಂಬ ಅಷ್ಟಾಕ್ಷರ ಮಂತ್ರದ ಹಿರಿಮೆಯನ್ನು ಹೇಳುವ ಈ ಸ್ತೋತ್ರವನ್ನು ಮೂರು ಸಂಜೆಗಳಲ್ಲಿಯೂ ಪಠಿಸುತ್ತಾರೆಯೋ, ಅವರು ಒಗೆದ ಬಿಳಿಯ ವಸ್ತ್ರಗಳಂತೆಯೂ, ರಾಜಹಂಸ ಪಕ್ಷಿಗಳಂತೆಯೂ ನಿರ್ಮಲರಾಗಿ, ನಿರ್ಭೀತರಾಗಿ, ಈ ಸಂಸಾರಸಾಗರವನ್ನು ದಾಟಿಕೊಂಡು ಮುಕ್ತರಾಗುತ್ತಾರೆ, " ಎಂದು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಅಷ್ಟಾಕ್ಷರ ಮಂತ್ರ ಮಹಾತ್ಮ್ಯವೆಂಬ
ಹದಿನೆಂಟನೆಯ ಅಧ್ಯಾಯವು
ಮುಗಿದುದು

ಹದಿನೆಂಟನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ ಶುಕನು ವ್ಯಾಸಶಿಷ್ಯರೊಡನೆ, ತಮ್ಮ ತಂದೆಯೂ, ಗುರುವೂ ಆದ ವ್ಯಾಸಮುನಿಯನ್ನು, ಈ ಸಂಸಾರವನ್ನು ದಾಟಿಕೊಳ್ಳಲು ಯಾವುದನ್ನು ಎಸಗಬೇಕೆಂದು ಕೇಳಲು, ವ್ಯಾಸಮುನಿಯು ' ಓಂ ನಮೋ ನಾರಾಯಣಾಯ, ' ಎಂಬೀ ಸಕಲ ವೇದಾರ್ಥಗಳನ್ನೊಳಗೊಂಡ, ಶ್ರೀಮನ್ನಾರಾಯಣನೇ ದೇವತೆಯಾಗಿ ಇರುವ, ಮಂತ್ರಗಳಲ್ಲೆಲ್ಲಾ ಶ್ರೇಷ್ಠವಾದ ಮಂತ್ರವನ್ನು ಶಾಸ್ತ್ರೋಕ್ತಕ್ರಮದಲ್ಲಿ ಜಪಿಸಿದವನು, ಅನಾದಿಯಾದ ಈ ಸಂಸಾರದಿಂದ ಮುಕ್ತನಾಗುತ್ತಾನೆ. ಮಂತ್ರಗಳಲ್ಲೆಲ್ಲಾ ಈ ಅಷ್ಟಾಕ್ಷರಮಂತ್ರವೇ ಹಿರಿದು ; ಶಾಸ್ತ್ರಗಳಲ್ಲೆಲ್ಲಾ ವೇದವೇ ಉತ್ತಮ ಶಾಸ್ತ್ರ ; ದೇವತಲ್ಲೆಲ್ಲಾ ನಾರಾಯಣನೇ ಉತ್ತಮನಾದ ದೈವತ ; ಎಂದು ಭುಜವನ್ನೆತ್ತಿ, ತಮ್ಮ ಶಿಷ್ಯರಿಗೂ, ಪುತ್ರನಿಗೂ ಉಪದೇಶಿಸಿದುದನ್ನು ಸೂತರು ಭಾರದ್ವಾಜನಿಗೆ ನಿರೂಪಿಸಿರುತ್ತಾರೆ.

ಇಂತು ಹದಿನೆಂಟನೆಯ ಅಧ್ಯಾಯದ ವಿಷಯ ಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ಏಕೋನವಿಂಶೋಽಧ್ಯಾಯಃ

ಅಶ್ವಿನೋರುತ್ಪತ್ತಿವರ್ಣನಮ್.

॥ ಸೂತ ಉವಾಚ ॥

ಇತಿ ಶ್ರುತ್ವಾ ಕಥಾಃ ಪುಣ್ಯಾಃ ಸರ್ವಪಾಪಪ್ರಣಾಶನೀಃ ।
ನಾನಾವಿಧಾ ಮುನಿಶ್ರೇಷ್ಠಾಃ ಕೃಷ್ಣದ್ವೈಪಾಯನಾತ್ಮನಃ ॥ ೧ ॥

ಶುಕಃ ಪೂರ್ವಂ ಮಹಾಭಾಗೋ ಭರದ್ವಾಜೋ ಮಹಾಮತಿಃ ।
ಸಿದ್ಧೈರನ್ಯೈಶ್ಚ ಸಹಿತೋ ನಾರಾಯಣಪರೋಽಭವತ್ ॥ ೨ ॥

ಸೃಷ್ಟಿಕಾಂಡವು ; ಹತ್ತೊಂಬತ್ತನೆಯ ಅಧ್ಯಾಯವು

ಅಶ್ವಿನೀದೇವತೆಗಳ ಉತ್ಪತ್ತಿಯ ನಿರೂಪಣೆಯು

ಸೂತರು ಭಾರದ್ವಾಜನಿಗೆ ಇಂತು ಹೇಳುತ್ತಾರೆ :—

೧-೨. 'ಎಲೈ ಭಾರದ್ವಾಜನೇ! ಕೇಳು ; ನಾನಾವಿಧರಾದ ಮುನಿಶ್ರೇಷ್ಠರು ಕೃಷ್ಣದ್ವೈಪಾಯನವ್ಯಾಸಮುನಿಯಿಂದ ಇಂತು ಪುಣ್ಯಪ್ರದಗಳೂ, ಸರ್ವಪಾಪನಾಶಕಗಳೂ ಆದ ಕಥೆಗಳನ್ನು ಕೇಳಿ, ಪುನಃ ಮಹಾಪುಣ್ಯಶಾಲಿಯಾದ, ಶುಕನೇ ಮುಂದಾಳಾದ, ಮಹಾಜ್ಞಾನಿಯಾದ ಭರದ್ವಾಜಮುನಿಯು ಇತರ ಸಿದ್ಧರೊಡಗೂಡಿ, ಶ್ರೀಮನ್ನಾರಾಯಣನ ಧ್ಯಾನಾಸಕ್ತನಾದನು.

ಏವಂ ತೇ ಕಥಿತಾ ವಿಪ್ರ ಮಾರ್ಕಂಡೇಯಾದಿಕಾಃ ಕಥಾಃ ।
ಮಯಾ ವಿಚಿತ್ರಾಃ ಪಾಪಘ್ನಾಃ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೩ ॥

॥ ಭರದ್ವಾಜ ಉವಾಚ ॥

ವಸ್ವಾದೀನಾಂ ತಥಾ ಪ್ರೋಕ್ತಾ ಮನುಸ್ಸೃಷ್ಟಿಸ್ತ್ವಯಾ ಪುರಾ ।
ಅಶ್ವಿನೋ ಮರುತಾಂ ಚೈವ ನೋಕ್ತೋತ್ಪತ್ತಿಸ್ತು ತಾಂ ವದ ॥ ೪ ॥

॥ ಸೂತ ಉವಾಚ ॥

ಮರುತಾಂ ವಿಸ್ತರೇಣೋಕ್ತಾಂ ವೈಷ್ಣವಾಖ್ಯೇ ಮಹಾಮತೇ ।
ಪುರಾಣೇ ಶಕ್ತಿಪುತ್ರೇಣ ಪುರೋತ್ಪತ್ತಿಸ್ತು ವಾಯುನಾ ॥ ೫ ॥

ಅಶ್ವಿನೋರ್ದೇವಯೋಶ್ಚೈವ ಸೃಷ್ಟಿರುಕ್ತಾ ಸುವಿಸ್ತರಾತ್ ।
ಸಂಕ್ಷೇಪಾತ್ತವ ವಕ್ಷ್ಯಾಮಿ ಸೃಷ್ಟಿಮೇತಾಂ ಶೃಣುಷ್ವ ಮೇ ॥ ೬ ॥

---

೩. ಎಲೈ ಬ್ರಾಹ್ಮಣನೇ ! ವಿಚಿತ್ರಗಳಾದ ಪಾಪನಾಶಕಗಳಾದ ಮಾರ್ಕಂಡೇಯ ಚರಿತೆಯೇ ಮೊದಲಾದ ಕಥೆಗಳನ್ನು ನಿನಗೆ ಹೇಳಿದೆನು. ಮತ್ತೂ ಯಾವುದನ್ನು ಕೇಳಲಿಚ್ಛಿಸುತ್ತೀಯೆ ? ' ಎಂದು ಸೂತರು ಪ್ರಶ್ನಿಸಲು ;

ಭರದ್ವಾಜನು ಹೇಳುತ್ತಾನೆ :—

೪. "ಹಿಂದೆ ನೀವು ವಸುಗಳೇ ಮೊದಲಾದವರ ಸೃಷ್ಟಿಯನ್ನು ಹೇಳಿದ ಹಾಗೆ, ಅಶ್ವಿನೀ ದೇವತೆಗಳು ಮತ್ತು ಮರುತ್ತಗಳು ಇವರ ಸೃಷ್ಟಿಯನ್ನು ಹೇಳಲಿಲ್ಲ. ಈಗ ಅದನ್ನು ದಯಮಾಡಿ ಹೇಳಿರಿ," ಎಂದು ಭರದ್ವಾಜನು ಕೇಳಲು ;

ಆಗ ಸೂತರು ಹೇಳುತ್ತಾರೆ :—

೫-೬. 'ಮಹಾಮತಿಯಾದ ಭರದ್ವಾಜನೇ ! ಪೂರ್ವದಲ್ಲಿ ಶಕ್ತಿಯ ಮಗನಾದ ವ್ಯಾಸಮುನಿಯು, 'ವೈಷ್ಣವ' ಎಂಬ ಹೆಸರಿನ ಪುರಾಣದಲ್ಲಿ ವಾಯುವಿನಿಂದ ಮರುತ್ತಗಳ ಉತ್ಪತ್ತಿಯನ್ನೂ, ಅತಿವಿಸ್ತಾರದಿಂದ ನಿರೂಪಿಸಿರುವ, ಅಶ್ವಿನೀದೇವತೆಗಳ ಉತ್ಪತ್ತಿಯನ್ನೂ ನಿನಗೆ ಸಂಕ್ಷೇಪವಾಗಿ ಅರುಹುವೆನು ; ಕೇಳು ;

ದಕ್ಷಕನ್ಯಾಽದಿತಿಃ ಅದಿತೇರಾದಿತ್ಯಃ ಪುತ್ರಃ ।
ತಸ್ಮೈ ತ್ವಷ್ಟಾ ದುಹಿತರಂ ಸಂಜ್ಞಾಂ ನಾಮ ಕನ್ಯಾಂ ದತ್ತವಾನ್ ॥ ೭ ॥

ಸೋಽಪಿ ತ್ವಾಷ್ಟ್ರೀಂ ರೂಪವತೀಂ ಮನೋಜ್ಞಾಂ ಪ್ರಾಪ್ಯ ತಯಾ ಸಹ
ರೇಮೇ । ಸಾ ಕತಿಪಯಾತ್ಕಾಲಾತ್ಸ್ವಭರ್ತುರಾದಿತ್ಯಸ್ಯ ತಾಪಮಸಹಂತೀ
ಪಿತುರ್ಗೃಹಂ ಜಗಾಮ ॥ ೮ ॥

ತಾಮವಲೋಕ್ಯ ಸುತಾಂ ಪಿತೋವಾಚ; । ಕಿಂ ಪುತ್ರಿ ತವ ಭರ್ತಾ
ಸವಿತಾ ಸ್ನೇಹಾತ್ತ್ವಾಂ ರಕ್ಷತ್ಯುತ ಪರುಷ ಇತಿ ॥ ೯ ॥

ಏವಂ ಪಿತುರ್ವಚನಂ ಶ್ರುತ್ವಾ ಸಂಜ್ಞಾ ತಂ ಪ್ರತ್ಯುವಾಚ ।
ದಗ್ಧಾಽಹಂ ಭರ್ತುಃ ಪ್ರಚಂಡತಾಪಾದಿತಿ ॥ ೧೦ ॥

---

೭. "ದಕ್ಷಪ್ರಜಾಪತಿಯ ಮಗಳು 'ಅದಿತಿ' ಎಂಬವಳು; ಆ ಅದಿತಿಯ ಮಗನು ಆದಿತ್ಯನೆಂಬವನು. ಅವನಿಗೆ ದೇವಶಿಲ್ಪಿಯಾದ ತ್ವಷ್ಟೃವು ತನ್ನ ಮಗಳಾದ ಸಂಜ್ಞೆಯೆಂಬ ಕನ್ಯೆಯನ್ನು ಕೊಟ್ಟು ಮದುವೆಮಾಡಿದನು.

೮. ಆ ಆದಿತ್ಯನು, ತ್ವಷ್ಟೃವಿನ ಮಗಳೂ, ರೂಪವತಿಯೂ, ಮನೋಹರೆಯೂ ಆದ ಆ ಸಂಜ್ಞೆಯೆಂಬ ಮಡದಿಯನ್ನು ಹೊಂದಿ, ಅವಳೊಡನೆ ವಿಲಾಸದಿಂದಿದ್ದನು. ಕೆಲಗಾಲದ ಮೇಲೆ, ಅವಳು ತನ್ನ ಗಂಡನಾದ ಆದಿತ್ಯನ ತಾಪವನ್ನು ಸಹಿಸಲಾರದೆ ತಂದೆಯ ಮನೆಗೆ ಹೋದಳು.

೯. ಆ ಮಗಳನ್ನು ನೋಡಿ, ತಂದೆಯಾದ ತ್ವಷ್ಟೃವು ಇಂತು ಹೇಳಿದನು; ಎಲೌ ಮಗಳೇ! ನಿನ್ನ ಗಂಡನಾದ ಸವಿತಾರನು ಪ್ರೀತಿಯಿಂದ ನಿನ್ನನ್ನು ಕಾಪಿಡುತ್ತಾನೆಯೇ? ಅಥವ ಕಠಿನನೇ? ಎಂದು ತ್ವಷ್ಟೃವು ಕೇಳಿದನು.

೧೦. ಸಂಜ್ಞೆಯು ಇಂತು ತಂದೆಯ ಮಾತನ್ನು ಕೇಳಿ, ಅವನಿಗೆ ಉತ್ತರವಿತ್ತಳು; "ನಾನು ಗಂಡನ ತೀಕ್ಷ್ಣವಾದ ಬೇಗೆಯಿಂದ ಸುಟ್ಟುಹೋಗಿದ್ದೇನೆ;" ಎಂದು.

ಏವಂ ಶ್ರುತ್ವಾ ತಾಮಾಹ ಪಿತಾ । ಗಚ್ಛ ಪುತ್ರಿ ಭರ್ತುರ್ಗೃಹಮಿತಿ ॥ ೧೧ ॥

ಯುವತೀನಾಂ ಭರ್ತುಃ ಶುಶ್ರೂಷಣಮೇವ ಧರ್ಮಃ ಶ್ರೇಯಾನ್ ।
ಅಹಮಪಿ ಕತಿಪಯದಿವಸಾದಾಗತ್ಯ ಆದಿತ್ಯಸ್ಯೋಷ್ಣತಾಂ
ಜಾಮಾತುರುದ್ಧರಿಷ್ಯಾಮಿ ॥ ೧೨ ॥

ಇತ್ಯುಕ್ತಾ ಸಾ ಚ ಪುನರ್ಭರ್ತುರ್ಗೃಹಂ ಪ್ರಾಪ್ಯ ಕತಿಪಯದಿವಸಾನ್ಮನುಂ
ಯಮೀಂ ಯಮಂ ಚಾಪತ್ಯತ್ರಯಮಾದಿತ್ಯಾತ್ಪ್ರಸೂತ ।
ಸ್ವಪ್ರಜ್ಞಾಬಲೇನೋತ್ಪಾದ್ಯ ತತ್ರ ಸಂಸ್ಥಾಪ್ಯ ಗತ್ವೋತ್ತರಕುರೂನ-
ಧಿಷ್ಠಾಯಾಶ್ವೀಭೂಯ ವಿಚಚಾರ ॥ ೧೩ ॥

---

೧೧. ಇದನ್ನು ಕೇಳಿ ತಂದೆಯು, ಅವಳನ್ನು ಕುರಿತು, 'ಎಲೌ ಮಗಳೇ! ಗಂಡನ ಮನೆಗೆ ಹೋಗು, ಎಂದು ಹೇಳಿದನು.

೧೨. ಹರಯದ ಹೆಂಗಸರಿಗೆ ಪತಿಯ ಸೇವೆಯೇ ಉತ್ತಮವಾದ ಧರ್ಮವು. ನಾನು ಕೆಲವು ದಿನಗಳಾದ ಮೇಲೆ ಬಂದು, ಅಳಿಯನಾದ ಆದಿತ್ಯನ ಉಷ್ಣತೆಯನ್ನು ಹೋಗಲಾಡಿಸುವೆನು.'

೧೩. ಇಂತು ತಂದೆಯಾದ ತ್ವಷ್ಟೃವು ಹೇಳಲು, ಆ ಸಂಜ್ಞೆಯು ಮತ್ತೆ ಗಂಡನ ಮನೆಗೆ ಬಂದಿದ್ದು, ಕೆಲದಿನಗಳ ಬಳಿಕ, ಮನು, ಯಮಿ, ಮತ್ತು ಯಮ, ಈ ಮೂವರು ಮಕ್ಕಳನ್ನು ಆದಿತ್ಯನಿಂದ ಪಡೆದಳು. ಪುನಃ ಅವನ ಉಷ್ಣತೆಯನ್ನು ತಾಳಲಾರದವಳಾಗಿ, ಛಾಯೆಯೆಂಬವಳನ್ನು ಗಂಡನ ಉಪಭೋಗಕ್ಕಾಗಿ ತನ್ನ ಬುದ್ಧಿ ಸಾಮರ್ಥ್ಯದಿಂದ ಸೃಷ್ಟಿಸಿ, ಅಲ್ಲಿರುವಂತೆ ಮಾಡಿ, ತಾನು ಅಲ್ಲಿಂದ ಹೊರಟು, ಉತ್ತರ ಕುರುದೇಶವನ್ನು ಹೊಂದಿ, ಅಲ್ಲಿ ಹೆಣ್ಣುದುರೆಯಾಗಿ ಓಡಾಡಿಕೊಂಡಿದ್ದಳು.

ಆದಿತ್ಯೋಽಪಿ ಸಂಜ್ಞೇಯಮಿತಿ ಮತ್ವಾ ತಸ್ಯಾಂ ಛಾಯಾಯಾಂ
ಪುನರಪತ್ಯತ್ರಯಮುತ್ಪಾದಯಾಮಾಸ ॥ ೧೪ ॥

ಮನುಂ ಶನೈಶ್ಚರಂ ತಪತೀಂ ಚ । ಸ್ವೇಷ್ವಪತ್ಯೇಷು ಪಕ್ಷಪಾತೇನ
ವರ್ತಂತೀಂ ಛಾಯಾಂ ದೃಷ್ಟ್ವಾ ಯಮಃ ಸ್ವಪಿತರಮಾಹ
ನೇಯಮಸ್ಮನ್ಮಾತೇತಿ ॥ ೧೫ ॥

ಪಿತಾಪಿ ತಚ್ಛ್ರುತ್ವಾ ಭಾರ್ಯಾಂ ಪ್ರಾಹ । ಸರ್ವೇಷ್ವಪತ್ಯೇಷು
ಸಮಮೇವ ವರ್ತತಾಮಿತಿ ॥ ೧೬ ॥

ಪುನರಪಿ ಸ್ವೇಷ್ವಪತ್ಯೇಷು ಸ್ನೇಹಾತ್ಪ್ರವರ್ತಂತೀಂ ಛಾಯಾಂ
ದೃಷ್ಟ್ವಾ ಯಮೋ ಯಮೀ ಚ ತಾಂ ಬಹುವಿಧಮಪ್ರಿಯಮೂಚತುಃ ।
ಆದಿತ್ಯಸನ್ನಿಧಾನಾತ್ಕ್ಷಾಂತಿರ್ಬಭೂವ ನ ತಯೋಃ ॥ ೧೭ ॥

---

೧೪. ಆದಿತ್ಯನೂ ಈ ಛಾಯೆಯನ್ನು ಸಂಜ್ಞೆಯೆಂದೇ ಅರಿತು, ಆ ಹೆಂಡತಿಯಲ್ಲಿ ಮತ್ತೆ ಮೂರು ಮಕ್ಕಳನ್ನು ಹುಟ್ಟಿಸಿದನು.

೧೫. ಆ ಮಕ್ಕಳು ಮನು, ಶನೈಶ್ಚರ, ಮತ್ತು ತಪತಿ, ಎಂಬಿವರು. ತನ್ನ ಮಕ್ಕಳಲ್ಲಿ ಪಕ್ಷಪಾತದಿಂದ ನಡೆದುಕೊಳ್ಳುತ್ತಿದ್ದ ಛಾಯೆಯನ್ನು ನೋಡಿ, ಯಮನು ತನ್ನ ತಂದೆಗೆ "ಇವಳು ನಮ್ಮ ತಾಯಿಯಲ್ಲವು" ಎಂದು ಹೇಳಿದನು.

೧೬. ತಂದೆಯೂ ಅದನ್ನು ಕೇಳಿ ಮಡದಿಗೆ, 'ಎಲೌ ಮಡದಿ! ನೀನು ಮಕ್ಕಳಲ್ಲೆಲ್ಲಾ ಒಂದೇ ಸಮನೇ ನಡೆದುಕೊ,' ಎಂದು ಹೇಳಿದನು.

೧೭. ಮತ್ತೆಯೂ ತನ್ನ ಮಕ್ಕಳಲ್ಲಿ ಪ್ರೀತಿಯಿಂದ ಪ್ರವರ್ತಿಸುತ್ತಿದ್ದ ಛಾಯೆಯನ್ನು ನೋಡಿ, ಯಮನೂ ಯಮಿಯೂ, ಅವಳಿಗೆ ಅನೇಕ ತೆರನಾದ ಅಹಿತದ ನುಡಿಗಳನ್ನು ಹೇಳಿದರು. ಆದರೆ ಆದಿತ್ಯನು ಹತ್ತಿರವಿದ್ದುದರಿಂದ ಅವನಿಗೆ ಮತ್ತೆ ತಿಳಿಸದಿದ್ದರು.

ತತಶ್ಛಾಯಯಾ ತಯೋಃ ಶಾಪಂ ದತ್ತವತೀ । ಯಮ ತ್ವಂ ಪ್ರೇತ.
ರಾಜೋ ಭವ, ಯಮಿ ! ತ್ವಂ ಯಮುನಾ ನಾಮ ನದೀ ಭವೇತಿ ॥ ೧೮ ॥

ತತಃ ಕ್ರೋಧಾದಾದಿತ್ಯೋಽಪಿ ಛಾಯಾಪುತ್ರಯೋಃ ಶಾಪಂ
ದತ್ತವಾನ್ ಹೇಪುತ್ರ ! ಶನೈಶ್ಚರ ! ತ್ವಂ ಗ್ರಹೋ ಭವ
ಕ್ರೂರದೃಷ್ಟಿರ್ಮಂದಗಾಮೀ ಚ ಪಾಪಗ್ರಹತ್ವಂ ಚ ॥ ೧೯ ॥

ಪುತ್ರಿ ! ತಪತೀ ನಾಮ ನದೀ ಭವೇತಿ । ಅಥಾದಿತ್ಯೋ ಧ್ಯಾನಮಾಸ್ಥಾಯ
ಸಂಜ್ಞಾಂ ಕ್ವ ಸ್ಥಿತೇತಿ ವಿಚಾರಯಾಮಾಸ ॥ ೨೦ ॥

ಸ ದೃಷ್ಟವಾನುತ್ತರಕುರುಷು ಧ್ಯಾನಚಕ್ಷುಷಾಽಶ್ವೀ ಭೂತ್ವಾ
ವಿಚರಂತೀಮ್ । ಸ್ವಯಂ ಚಾಶ್ವರೂಪೇಣ ತತ್ರ ಗತ್ವಾ ತಯಾ ಸಹ
ಸಂಪರ್ಕಂ ಕೃತವಾನ್ ॥ ೨೧ ॥

---

೧೮. ಅನಂತರದಲ್ಲಿ ಛಾಯೆಯು ಅವರಿಬ್ಬರಿಗೆ, ‘ ಎಲೈ ಯಮನೇ ! ನೀನು ಪ್ರೇತರಾಜನಾಗು ; ಎಲೌ ಯಮಿ ! ನೀನು ಯಮುನೆಯೆಂಬ ನದಿಯಾಗು, ’ ಎಂದು ಶಾಪವನ್ನು ಕೊಟ್ಟಳು.

೧೯. ಬಳಿಕ ಇದನ್ನರಿತ ಆದಿತ್ಯನೂ ಕ್ರೋಧದಿಂದ ಆ ಛಾಯೆಯ ಮಕ್ಕಳಿಗೆ, “ ಎಲೋ ಮಗನಾದ ಶನೈಶ್ಚರನೇ ! ನೀನು ಕ್ರೂರದೃಷ್ಟಿಯುಳ್ಳವನೂ, ಮಂದಗಾಮಿಯೂ ಆದ ಪಾಪಗ್ರಹನಾಗು.

೨೦. ಎಲೆಗೆ ಮಗಳೇ ! ನೀನು ತಪತಿಯೆಂಬ ನದಿಯಾಗು, ಎಂದು ಶಾಪವನ್ನಿತ್ತನು. ಅನಂತರದಲ್ಲಿ ಆದಿತ್ಯನು ಧ್ಯಾನಾಸಕ್ತನಾಗಿ ಜ್ಞಾನದೃಷ್ಟಿಯಿಂದ ಸಂಜ್ಞೆಯು ಎಲ್ಲಿರುವಳೆಂದು ವಿಚಾರಮಾಡಿದನು.

೨೧. ಅವನು ಧ್ಯಾನಚಕ್ಷುಸ್ಸಿನಿಂದ ಉತ್ತರ ಕುರುದೇಶಗಳಲ್ಲಿ ಅವಳು ಹೆಣ್ಣು ಕುದುರೆಯಾಗಿ ಸಂಚರಿಸುತ್ತಿರುವುದನ್ನು ಅರಿತು, ತಾನೂ ಗಂಡುಕುದುರೆಯ ರೂಪಿನಿಂದ ಅಲ್ಲಿಗೆ ಹೋಗಿ, ಅವಳೊಡನೆ ಸಂಬಂಧವನ್ನು ಮಾಡಿದನು.

ತಸ್ಯಾಮೇವಾದಿತ್ಯಾದಶ್ವಿನಾವುತ್ಪನ್ನೌ ತಯೋರತಿಶಯವಪುಷೋಃ
ಸಾಕ್ಷಾತ್ಪ್ರಜಾಪತಿರಾಗತ್ಯ ದೇವತ್ವಂ ಯಜ್ಞಭಾಗಾರ್ಹತ್ವಂ ಮುಖ್ಯಂ
ದೇವಾನಾಂ ಭಿಷಕ್ತ್ವಂಚ ದತ್ವಾ ಜಗಾಮ ॥ ೨೨ ॥

ವಿಶ್ವಕರ್ಮಾ ಚಾಗತ್ಯ ಆದಿತ್ಯಂ ನಾಮಭಿಃ ಸ್ತುತ್ವಾ ತದತಿಶಯ
ಸ್ತುತ್ಯಾ ಶಮಯಾಮಾಸ ॥ ೨೩ ॥

ಏವಂ ವೋ ಕಥಿತಾ ವಿಪ್ರಾ ಅಶ್ವಿನ್ಯುತ್ಪತ್ತಿರುತ್ತಮಾ ।
ಪುಣ್ಯಾ ಪವಿತ್ರಾ ಪಾಪಘ್ನೀ ಭರದ್ವಾಜ ಮಹಾಮತೇ ॥ ೨೪ ॥

---

೨೨. ಅಶ್ವಿಯಾಗಿದ್ದ ಸಂಜ್ಞೆಯಲ್ಲಿ ಅಶ್ವರೂಪನಾದ ಆದಿತ್ಯನಿಂದ ಅವಳಿಯಾದ ಅಶ್ವಿನೀ ದೇವತೆಗಳು ಜನಿಸಿದರು. ಬಹುಸುಂದರವಾದ ಒಡಲಿನಿಂದ ಅವಳಿ ಮಕ್ಕಳಿರಲು, ಚತುರ್ಮುಖನು ತಾನೇ ಪ್ರತ್ಯಕ್ಷನಾಗಿ ಬಂದು ಅವರಿಗೆ ದೇವತ್ವವನ್ನೂ ಯಜ್ಞದಲ್ಲಿ ಭಾಗವನ್ನೂ, ದೇವತೆಗಳ ಮುಖ್ಯವಾದ ಬೆಜ್ಜತನವನ್ನೂ ಅನುಗ್ರಹಿಸಿತ್ತು ಹೋದನು.

೨೩. ವಿಶ್ವಕರ್ಮನೆಂಬ ದೇವಶಿಲ್ಪಿಯೂ ಅಲ್ಲಿಗೆ ಬಂದು ಆದಿತ್ಯನನ್ನು ಅವನ ನಾಮಗಳನ್ನು ಕೀರ್ತಿಸಿ, ತುಳಿಲ್ಗೈದು, ಆ ಅತಿಶಯವಾದ ಸ್ತುತಿಯಿಂದ ಅವನ ಉಷ್ಣತೆಯನ್ನು ಕಡಿಮೆ ಮಾಡಿಸಿದನು.

೨೪. ಎಲೈ ಬ್ರಾಹ್ಮಣರೇ! ಮಹಾಮತಿಯಾದ ಭರದ್ವಾಜನೇ! ಇಂತು ನಿಮಗೆ ಪುಣ್ಯಪ್ರದವೂ, ಪವಿತ್ರವೂ. ಶ್ರೇಷ್ಠವೂ, ಪಾಪನಾಶಕವೂ ಆದ ಅವಳಿಗಳಾದ ಅಶ್ವಿನೀದೇವತೆಗಳ ಉತ್ಪತ್ತಿಯನ್ನು ಹೇಳಿದೆನು.

ಆದಿತ್ಯ ಪುತ್ರೌ ಭಿಷಜೌ ಸುರಾಣಾಂ
ದಿವ್ಯೇನ ರೂಪೇಣ ವಿರಾಜಮಾನೌ ।
ಶ್ರುತ್ವಾ ತಯೋರ್ಜನ್ಮ ನರಃ ಪೃಥಿವ್ಯಾಂ
ಭವೇತ್ಸುರೂಪೋ ಭುವಿ ಮೋದತೇ ಚ ॥ ೨೫ ॥

ಇತಿ ಶ್ರೀ ನರಸಿಂಹಪುರಾಣೇ ಅಶ್ವಿನೋರುತ್ಪತ್ತಿವರ್ಣನಂ
ನಾಮೈಕೋನವಿಂಶೋಽಧ್ಯಾಯಃ

---

೨೫. ಎಲೈ ಬ್ರಾಹ್ಮಣರೇ ! ಆದಿತ್ಯನ ಅವಳಿಮಕ್ಕಳಾದ ಅಶ್ವಿನೀದೇವತೆಗಳು ದೇವವೈದ್ಯರೂ, ದಿವ್ಯರೂಪದಿಂದೆಸಗುವವರೂ ಆಗಿರುತ್ತಾರೆ. ಅವರ ಉತ್ಪತ್ತಿ ಕಥೆಯನ್ನು ಪೊಡವಿಯಲ್ಲಿ ಮಾನವನು ಕೇಳಿ, ಒಳ್ಳೆಯ ರೂಪವಂತನಾಗುತ್ತಾನೆ, ಮತ್ತು ಸ್ವರ್ಗದಲ್ಲಿ ಸುಖಿಸುತ್ತಾನೆ.

ಇಂತು ಶ್ರೀ ನರಸಿಂಹಪುರಾಣದಲ್ಲಿ ಅಶ್ವಿನೀದೇವತೆಗಳ ಉತ್ಪತ್ತಿಯೆಂಬ
ಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

ಹತ್ತೊಂಬತ್ತನೆಯ ಅಧ್ಯಾಯದ ವಿಷಯಸಂಗ್ರಹವು

ಈ ಅಧ್ಯಾಯದಲ್ಲಿ, ಸೂತರು ಭಾರದ್ವಾಜನಿಗೆ ತಾವು ಮಾರ್ಕಂಡೇಯ ಚರಿತ್ರೆಯೇ ಮೊದಲಾದ ಪಾಪನಾಶಕವೂ, ಪುಣ್ಯಪ್ರದವೂ ಆದ ಕಥೆಗಳನ್ನು ಹೇಳಿದುದಾಯಿತು. ಮತ್ತಾವುದನ್ನು ಕೇಳಬಯಸುವೆಯೆನ್ನಲು, ಭಾರದ್ವಾಜನು ಸೂತರಿಗೆ 'ತಾವು ವಸ್ವಾದಿಸೃಷ್ಟಿಯನ್ನು ಹೇಳಿದಿರಿ. ಅಶ್ವಿನೀದೇವತೆಗಳು ಮತ್ತು ಮರುತ್ತುಗಳು ಇವರ ಉತ್ಪತ್ತಿಯನ್ನು ದಯಮಾಡಿ ತಿಳಿಸಿರಿ' ಎಂದು ಕೇಳಲು ; ಸೂತರು ವಿಷ್ಣುಪುರಾಣದಲ್ಲಿ ವಿಸ್ತಾರವಾಗಿ ಹೇಳಿರುವುದನ್ನು ತಾವು ಸಂಗ್ರಹಿಸಿ ನಿರೂಪಿಸುವುದಾಗಿ ಹೇಳಿ, 'ದಕ್ಷನ ಕನ್ಯೆಯಾದ ಅದಿತಿಯ ಮಗ ಆದಿತ್ಯ. ಅವನು ದೇವತೆಗಳ ಬಡಗಿ ತ್ವಷ್ಟೃವಿನ ಮಗಳಾದ ಸಂಜ್ಞೆಯನ್ನು ಮದುವೆಮಾಡಿಕೊಂಡಿರಲು, ಅವಳು ಆದಿತ್ಯನ ತಾಪವನ್ನು ಸಹಿಸಲಾರದೆ ಮತ್ತೆ ತಂದೆಯ ಮನೆಗೆ ಬಂದಳು. ಆಗ ತಂದೆಯು ಮಗಳಿಗೆ 'ಸ್ತ್ರೀಯಾದವಳಿಗೆ ಪತಿಸೇವೆಯೇ ಪರಮ ಧರ್ಮವು' ಎಂದು ವಿವೇಕ ಹೇಳಿ, ತಾನು ಆದಿತ್ಯನ ತಾಪವನ್ನು ಕಡಿಮೆ ಮಾಡುವೆನೆಂದು ತಿಳಿಸಿ, ಅವಳನ್ನು ಮತ್ತೆ ಸೂರ್ಯನ ಮನೆಗೆ ಕಳುಹಿಸಿದನು. ಅವಳು ಇಂತು ಬಂದು ಸುಖದಿಂದಿರಲು ಮನು, ಯಮಿ, ಯಮರೆಂದು ಮೂವರು ಮಕ್ಕಳು ಹುಟ್ಟಿದರು.

ಬಳಿಕ ಅವಳು ಪುನಃ ಆದಿತ್ಯನ ತಾಪವನ್ನು ಸಹಿಸದೆ ತನ್ನ ಸಾಮರ್ಥ್ಯದಿಂದ ಛಾಯೆಯೆಂಬ ಸ್ತ್ರೀಯನ್ನು ತನ್ನಂತೆ ಸೃಷ್ಟಿಮಾಡಿ, ಸೂರ್ಯನ ಭೋಗಕ್ಕಿಳವಡಿಸಿ, ತಾನು ಉತ್ತರಕುರುದೇಶಕ್ಕೆ ಹೋಗಿ, ಅಲ್ಲಿ ಹೆಣ್ಣುಕುದುರೆಯಾಗಿ ಸಂಚರಿಸುತ್ತಿದ್ದಳು. ಇತ್ತ ಛಾಯೆಯನ್ನು ಸಂಜ್ಞೆಯೆಂದು ತಿಳಿದೇ ಆದಿತ್ಯನು ಅವಳೊಡನೆ ಇರಲು, ಅವಳಲ್ಲಿಯೂ ಮನು, ಶನೈಶ್ಚರ, ತಪತಿಯರೆಂದು ಮೂವರು ಮಕ್ಕಳು ಹುಟ್ಟಿದರು. ಛಾಯೆಯು ತನ್ನ ಮಕ್ಕಳಲ್ಲಿ ಪಕ್ಷಪಾತದಿಂದಿರಲು, ಯಮೀಯಮರು ತಂದೆಗೆ ಅವಳು ತಮ್ಮ ತಾಯಿಯಲ್ಲವೆಂದೂ, ತನ್ನ ಮಕ್ಕಳಲ್ಲಿ ಪಕ್ಷಪಾತದಿಂದ ವರ್ತಿಸುವಳೆಂದೂ ಹೇಳಲು, ಆದಿತ್ಯನು ಅವಳಿಗೆ ವಿವೇಕವನ್ನು ಹೇಳಿದನು.

ಆಮೇಲೆಯೂ ಹಾಗೆ ಅವಳಿರುತ್ತಾ ಯಮೀಯಮರ ಅಸಮಾಧಾನವನ್ನರಿತು, ಯಮನಿಗೆ ಪ್ರೇತರಾಜನಾಗುವಂತೆಯೂ, ಯಮಿಗೆ ಯಮುನಾನದಿಯಾಗುವಂತೆಯೂ ಶಪಿಸಿದಳು.

ಇದನ್ನರಿತು ಸೂರ್ಯನು ಅವಳ ಮಕ್ಕಳಲ್ಲಿ ಶನೈಶ್ಚರನಿಗೆ ಪಾಪಗ್ರಹವಾಗುವಂತೆಯೂ, ತಪತಿಗೆ ನದಿಯಾಗವಂತೆಯೂ ಶಪಿಸಿ, ತನ್ನ ಜ್ಞಾನ ದೃಷ್ಟಿಯಿಂದ ಸಂಜ್ಞೆಯು ಉತ್ತರಕುರುದೇಶದಲ್ಲಿ ಅಶ್ವಿಯಾಗಿರುವುದನ್ನು ತಿಳಿದು, ತಾನು ಅಶ್ವವಾಗಿ ಅಲ್ಲಿಗೆ ಹೋಗಿ, ಅವಳನ್ನು ಸ್ಪರ್ಶಮಾಡಲು, ಆ ಅಶ್ವಿರೂಪದ ಸಂಜ್ಞೆಯಲ್ಲಿ ಅವಳಿಮಕ್ಕಳಾದ ಅಶ್ವಿನಿಗಳು ಹುಟ್ಟಿದರು. ಬ್ರಹ್ಮನು ಅಲ್ಲಿಗೆ ಬಂದು ಆ ಮಕ್ಕಳಿಗೆ ದೇವವೈದ್ಯಪದವಿಯನ್ನೂ, ಯಜ್ಞದಲ್ಲಿ ಹವಿರ್ಭಾಗವನ್ನೂ ಕೊಡಿಸಿ ಹೋದನು.

ಬಳಿಕ ತ್ವಷ್ಟೃವು ಅಲ್ಲಿಗೆ ಬಂದು ಸೂರ್ಯನನ್ನು ಸ್ತುತಿಸಿ, ಅವನ ತಾಪವು ಕಡಿಮೆಯಾಗುವಂತೆ ಮಾಡಿಸಿ, ಸಂಜ್ಞೆಯು ಅವನೊಡನೆ ಸುಖದಿಂದಿರುವಂತೆಸಗಿದನು. ಈ ಅಶ್ವಿನಿಗಳ ಉತ್ಪತ್ತಿಯನ್ನು ಕೇಳಿದವರು ಇಹದಲ್ಲಿ ತಮಗೆ ಬೇಕಾದುದನ್ನು ಹೊಂದಿ, ಪರದಲ್ಲಿ ಸುಖಿಸುತ್ತಾರೆ ' ಎಂದು ನಿರೂಪಿಸಿರುತ್ತಾರೆ.

ಇಂತು ಹತ್ತೊಂಬತ್ತನೆಯ ಅಧ್ಯಾಯದ ವಿಷಯಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ವಿಂಶೋಽಧ್ಯಾಯಃ

ವಿಶ್ವಕರ್ಮ ಕೃತಾ ಸವಿತೃ ಸ್ತುತಿಃ

॥ ಭಾರದ್ವಾಜ ಉವಾಚ ॥

ಯೈಃಸ್ತುತೋ ನಾಮಭಿಸ್ತೇನ ಸವಿತಾ ವಿಶ್ವಕರ್ಮಣಾ ।
ತಾನ್ಯಹಂ ಶ್ರೋತುಮಿಚ್ಛಾಮಿ ವದ ಸೂತ ವಿವಸ್ವತಃ ॥ ೧ ॥

॥ ಸೂತ ಉವಾಚ ॥

ತಾನಿ ಮೇ ಶೃಣು ನಾಮಾನಿ ಯೈಃ ಸ್ತುತೋ ವಿಶ್ವಕರ್ಮಣಾ ।
ಸವಿತಾ ತಾನಿ ವಕ್ಷ್ಯಾಮಿ ಸರ್ವಪಾಪಹರಾಣಿ ತೇ ॥ ೨ ॥

ಇಪ್ಪತ್ತನೆಯ ಅಧ್ಯಾಯವು.

ವಿಶ್ವಕರ್ಮನು ಮಾಡಿದ ಸವಿತಾರನ ಸ್ತುತಿಯು.

ಭಾರದ್ವಾಜನು ಸೂತರನ್ನು ಇಂತು ಕೇಳುತ್ತಾನೆ :—

೧. ಎಲೈ ಸೂತರೇ ! ವಿಶ್ವಕರ್ಮನು ಯಾವ ನಾಮಗಳಿಂದ ಸೂರ್ಯನನ್ನು ತುತಿಸಿದನೋ, ಆ ನಾಮಗಳನ್ನು ಕೇಳಲು ಇಚ್ಛಿಸುತ್ತೇನೆ. ದಯಮಾಡಿ ನನಗೆ ಆ ಸೂರ್ಯನ ಹೆಸರುಗಳನ್ನು ಹೇಳಿರಿ, ' ಎಂದು ಭಾರದ್ವಾಜನು ಕೇಳಲು, ಸೂತರು ಹೇಳುತ್ತಾರೆ.

೨. ' ಎಲೈ ಭರದ್ವಾಜನೇ ಕೇಳು ! ವಿಶ್ವಕರ್ಮನು ಯಾವ ನಾಮಗಳಿಂದ ಸೂರ್ಯನನ್ನು ಸ್ತುತಿಸಿದನೋ, ಆ ಸಕಲ ಪಾಪನಾಶಕಗಳಾದ ಸವಿತೃವಿನ ನಾಮಗಳನ್ನು ನಿನಗರುಹುವೆನು.

ಆದಿತ್ಯಃ ಸವಿತಾ ಸೂರ್ಯಃ ಖಗಃ ಪೂಷಾ ಗಭಸ್ತಿಮಾನ್ ।
ತಿಮಿರೋನ್ಮಥನಃ ಶಂಭುಸ್ತ್ವಷ್ಟಾ ಮಾರ್ತಾಂಡ ಆಶುಗಃ ॥ ೩ ॥

ಹಿರಣ್ಯಗರ್ಭಃ ಕಪಿಲಸ್ತಪನೋ ಭಾಸ್ಕರೋ ರವಿಃ ।
ಅಗ್ನಿಗರ್ಭೋಽದಿತೇಃ ಪುತ್ರಃ ಶಂಭುಸ್ತಿಮಿರನಾಶನಃ ॥ ೪ ॥

ಅಂಶುಮಾನಂಶುಮಾಲೀ ಚ ತಮೋಘ್ನಸ್ತೇಜಸಾಂ ನಿಧಿಃ ।
ಆತಪೀ ಮಂಡಲೀ ಮೃತ್ಯುಃ ಕಪಿಲಸ್ಸರ್ವತಾಪನಃ ॥ ೫ ॥

೩–೭. ಅದಿತಿಯ ಮಗನಾದುದರಿಂದ ಆದಿತ್ಯನು ; ಮಲಗಿರುವ ಜಗತ್ತಿಗೆ ಎಚ್ಚರವನ್ನೆಸಗಿ ಪ್ರೇರಿಸುವನಾದುದರಿಂದ ಸವಿತೃವು ; ವ್ಯಾಪಾರಗಳಲ್ಲಿ ಚೇತನರನ್ನು ಪ್ರೇರಿಸುವನಾದುದರಿಂದ ಸೂರ್ಯನು ; ಬಾನಲ್ಲಿ ಸಂಚರಿಸುವನಾದುದರಿಂದ ಖಗನು ; ಸಸ್ಯಾದಿ ಸಕಲ ವಸ್ತುವನ್ನು ಪೋಷಿಸುವುದರಿಂದ ಪೂಷನು ; ಪ್ರಕಾಶಕಗಳಾದ ಕಿರಣಗಳುಳ್ಳವನಾದುದರಿಂದ ಗಭಸ್ತಿಮಂತನು ; ಕತ್ತಲೆಯನ್ನು ಹೋಗಲಾಡಿಸುವುದರಿಂದ ತಿಮಿರೋನ್ಮಥನನು, ಲೋಕಕ್ಕೆ ಆರೋಗ್ಯಾದಿ ಕಲ್ಯಾಣಗಳನ್ನುಂಟುಮಾಡುವುದರಿಂದ ಶಂಭುವು ; ಲೋಕಕ್ಕೆ ಸಂತಸವನ್ನೆಸಗುವುದರಿಂದ ತ್ವಷ್ಟೃವು ; ಮೃತವಾದ ಬ್ರಹ್ಮಾಂಡವನ್ನು ಪುನರುಜ್ಜೀವಿಸುವನಾದುದರಿಂದ ಮಾರ್ತಾಂಡನು ; ಬೇಗನೆ ಸಂಚರಿಸುವುದರಿಂದ ಆಶುಗನು ; ಸುವರ್ಣವನ್ನು ತಾಳಿರುವವನಾದುದರಿಂದ ಹಿರಣ್ಯಗರ್ಭನು ; ಕಪಿಲವರ್ಣವುಳ್ಳವನಾದುದರಿಂದ ಕಪಿಲನು ; ಲೋಕಕ್ಕೆ ತಾಪವನ್ನೆಸಗುವವನಾದುದರಿಂದ ತಪನನು ; ಲೋಕವನ್ನು ಬೆಳಗುವವನಾದುದರಿಂದ ಭಾಸ್ಕರನು ; ಭಕ್ತರಿಂದ ಹೊಗಳಿಸಿಕೊಳ್ಳುವವನಾದುದರಿಂದ ರವಿಯು ; ಅಗ್ನಿಯು ಗರ್ಭದಲ್ಲಿ ಉಳ್ಳವನಾದುದರಿಂದ ಅಗ್ನಿಗರ್ಭನು ; ಅದಿತಿಯ ಮಗನಾದುದರಿಂದ ಆದಿತ್ಯನು ; ಪ್ರಕಾಶಕವಾದ ಉತ್ತಮಕಿರಣಗಳುಳ್ಳವನಾದುದರಿಂದ ಅಂಶುಮಂತನು ; ಕಿರಣಗಳ ಸಮುದಾಯವನ್ನುಳ್ಳವನಾದುದರಿಂದ ಅಂಶುಮಾಲಿಯು ; ಕತ್ತಲೆಯನ್ನು ನಾಶಮಾಡುವುದರಿಂದ ತಮೋಘ್ನನು ; ತೇಜಸ್ಸುಗಳಿಗೆ ಆಶ್ರಯನಾದುದರಿಂದ

ಹರಿರ್ವಿಶ್ವೋ ಮಹಾತೇಜಾಃ ಸರ್ವರತ್ನಪ್ರಭಾಕರಃ ।
ಅಂಶುಮಾಲೀ ತಿಮಿರಹಾ ಋಗ್ಯಜುಸ್ಸಾಮಭಾವಿತಃ ॥ ೬ ॥

ಪ್ರಾಣಾವಿಷ್ಕರಣೋ ಮಿತ್ರಃ ಸುಪ್ರದೀಪೋ ಮನೋಜವಃ ।
ಯಜ್ಞೇಶೋ ಗೋಪತಿಃ ಶ್ರೀಮಾನ್ ಭೂತಜ್ಞಃ ಕ್ಲೇಶನಾಶನಃ ॥ ೭ ॥

ತೇಜೋನಿಧಿಯು ; ಬಿಸಿಲನ್ನುಂಟುಮಾಡುವುದರಿಂದ ಆತಪಿಯು, ಬಟ್ಟೆತಾಗಿರುವುದರಿಂದ ಮಂಡಲಿಯು ; ದುಷ್ಟರು, ರೋಗಾದಿಗಳು–ಇವುಗಳಿಗೆ ಅಳಿವನ್ನೆಸಗುವುದರಿಂದ ಮೃತ್ಯುವು ; ಸರ್ವವಸ್ತುವನ್ನೂ ಸುಡುವವನಾದುದರಿಂದ ಸರ್ವತಾಪನನು ; ಹರಿದ್ವರ್ಣನಾದುದರಿಂದ ಹರಿಯು ; (ಕ್ಲೇಶಗಳನ್ನು ಪರಿಹರಿಸುವವನಾದುದರಿಂದ ಹರಿಯು ;) ಪ್ರಪಂಚದಲ್ಲಿ ತನ್ನ ಕಿರಣಗಳಿಂದ ವ್ಯಾಪಿಸುವವನಾದುದರಿಂದ ವಿಶ್ವನು ; ತೇಜದ ಬೊಬ್ಬುಳಿಯಾದುದರಿಂದ ಮಹಾತೇಜನು ; ಸಕಲ ಮಣಿಗಳ ಕಾಂತಿಗಳುಳ್ಳವನಾದುದರಿಂದ ಸರ್ವರತ್ನಪ್ರಭಾಕರನು ; ಋಗ್ಯಜುಸ್ಸಾಮವೇದಗಳಲ್ಲಿ ಪ್ರತಿಪಾದಿತವಾದ ಮಹಿಮೆಯುಳ್ಳವನಾದುದರಿಂದ ಋಗ್ಯಜುಸ್ಸಾಮಭಾವಿತನು ; ತನ್ನ ಕಿರಣಗಳಿಂದ ಜಗತ್ತಿಗೆ ಹರಣ ಬಂದಂತೆಸಗುವವನಾದುದರಿಂದ ಪ್ರಾಣಾವಿಷ್ಕರಣನು ; ಸರ್ವಭೂತಗಳಲ್ಲಿ ಸ್ನೇಹಮಾಡುವವನಾದುದರಿಂದ ಮಿತ್ರನು ; ವಿಶೇಷವಾದ ಬೆಳಕನ್ನುಂಟುಮಾಡುವವನಾದುದರಿಂದ ಸುಪ್ರದೀಪನು ; ಮನಸ್ಸಿನಂತೆ ವೇಗದಿಂದ ಸಂಚರಿಸುವವನಾದುದರಿಂದ ಮನೋಜವನು ; ಯಜ್ಞಗಳಲ್ಲಿ ಪೂಜಿಸಲ್ಪಡುವವನಾದುದರಿಂದ ಯಜ್ಞೇಶನು ; ಕಿರಣಗಳಿಗೆ ಒಡೆಯನಾದುದರಿಂದ ಗೋಪತಿಯು ; ಕಾಂತಿಯುಳ್ಳವನಾದುದರಿಂದ ಶ್ರೀಮಂತನು ; ಸಕಲ ಪ್ರಾಣಿಗಳನ್ನರಿತವನಾದುದರಿಂದ ಭೂತಜ್ಞನು ; ಭಕ್ತರ ಕ್ಲೇಶವನ್ನು ಕಳೆಯುವವನಾದುದರಿಂದ ಕ್ಲೇಶನಾಶನನು ;—

ಅಮಿತ್ರಹಾ ಶಿವೋ ಹಂಸೋ ನಾಯಕಃ ಪ್ರಿಯದರ್ಶನಃ ।
ಶುದ್ಧೋ ವಿರೋಚನಃ ಕೇಶೀ ಸಹಸ್ರಾಂಶುಃ ಪ್ರತರ್ದನಃ ॥ ೮ ॥

ಘರ್ಮರಶ್ಮಿಃ ಪತಂಗಶ್ಚ ವಿಶಾಲೋ ವಿಶ್ವಸಂಸ್ತುತಃ ।
ದುರ್ವಿಜ್ಞೇಯಗತಿಶ್ಶೂರಸ್ತೇಜೋರಾಶಿರ್ಮಹಾಯಶಾಃ ॥ ೯ ॥

ಭ್ರಾಜಿಷ್ಣುರ್ಜ್ಯೋತಿಷಾಮೀಶೋ ವಿಜಿಷ್ಣುರ್ವಿಶ್ವಭಾವನಃ ।
ಪ್ರಭವಿಷ್ಣುಃ ಪ್ರಕಾಶಾತ್ಮಾ ಜ್ಞಾನರಾಶಿಃ ಪ್ರಭಾಕರಃ ॥ ೧೦ ॥

೮-೧೧. ವೈರಿಗಳನ್ನು ಸಂಹರಿಸುವವನಾದುದರಿಂದ ಅಮಿತ್ರಹನು ; ಮಂಗಳ ಸ್ವರೂಪನಾದುದರಿಂದ ಶಿವನು ; ಹಂಸನಾಮಕ ಭಗವಂತನನ್ನು ಉಪಾಸನೆ ಮಾಡತಕ್ಕವನಾದುದರಿಂದ ಹಂಸನು ; (ಶ್ವೇತವರ್ಣನಾದುದರಿಂದ ಹಂಸನು ;) ಗ್ರಹಗಳಿಗೆ ಒಡೆಯನಾದುದರಿಂದ ನಾಯಕನು ; ಲೋಕಕ್ಕೆ ಪ್ರಿಯವಾದ ದರ್ಶನವನ್ನು ಉಂಟುಮಾಡುವುದರಿಂದ ಪ್ರಿಯದರ್ಶನನು ; ದೋಷಶೂನ್ಯನಾದುದರಿಂದ ಶುದ್ಧನು; ವಿಶೇಷವಾಗಿ ಪ್ರಕಾಶಿಸುವವನಾದುದರಿಂದ ವಿರೋಚನನು ; ಭೂಮಿಯಲ್ಲಿ ವ್ಯಾಪಿಸಿರುವವನಾದುದರಿಂದ ಕೇಶಿಯು ; ಸಾವಿರಕಿರಣಗಳುಳ್ಳವನಾದುದರಿಂದ ಸಹಸ್ರಾಂಶುವು; ಶತ್ರುಗಳನ್ನು ಹಿಂಸೆಪಡಿಸುವವನಾದುದರಿಂದ ಪ್ರತರ್ದನನು ; ಉಷ್ಣವಾದ ಕಿರಣಗಳುಳ್ಳವನಾದುದರಿಂದ ಘರ್ಮರಶ್ಮಿಯು ; ಬಾನಿನಲ್ಲಿ ಸಂಚರಿಸುವವನಾದುದರಿಂದ ಪತಂಗನು ; ವಿಸ್ತಾರವಾಗಿ ಹರಡುವವನಾದುದರಿಂದ, ವಿಶೇಷವಾಗಿ ಪ್ರಕಾಶಿಸುವವನಾದುದರಿಂದ ವಿಶಾಲನು ; ಪ್ರಪಂಚದಿಂದ ಹೊಗಳಿಸಿಕೊಳ್ಳತಕ್ಕವನಾದುದರಿಂದ ವಿಶ್ವಸಂಸ್ತುತನು ; ಸಾಮಾನ್ಯರಿಂದ ತಿಳಿಯಲಾಗದ ಗಮನವುಳ್ಳವನಾದುದರಿಂದ ದುರ್ಜ್ಞೇಯಗತಿಯು ; ಶತ್ರುಗಳಿಗೆ ಅಳಿವನ್ನೆಸಗುವವನಾದುದರಿಂದ ಶೂರನು ; ತೇಜಸ್ಸಿನ ರಾಶಿಯಾಗಿರುವುದರಿಂದ ಜ್ಯೋತಿರೀಶನು ; ವಿಶೇಷವಾಗಿ ಜಯಶೀಲನಾಗಿರುವುದರಿಂದ ವಿಜಿಷ್ಣುವು ; ವಿಶ್ವದಿಂದ ಚಿಂತ್ಯನಾದುದರಿಂದ ವಿಶ್ವಭಾವನನು ; ಅತಿಸಮರ್ಥನಾದುದರಿಂದ ಪ್ರಭವಿಷ್ಣುವು ; ಪ್ರಕಾಶ ಸ್ವರೂಪನಾದುದರಿಂದ ಪ್ರಕಾಶಾತ್ಮನು ; ವಿಶೇಷವಾಗಿ ಜ್ಞಾನವುಳ್ಳವನಾದುದರಿಂದ ಜ್ಞಾನರಾಶಿಯು ;

ಅವಿಶ್ಯೋ ವಿಶ್ವದೃಗ್ ಯಜ್ಞಕರ್ತಾ ನೇತಾ ಯಶಸ್ಕರಃ ।
ವಿಮಲೋ ವೀರ್ಯವಾನೀಶೋ ಯೋಗಜ್ಞೋ ಯೋಗಭಾವನಃ ॥ ೧೧ ॥

ಅಮೃತಾತ್ಮಾ ಶಿವೋ ನಿತ್ಯೋ ವರೇಣ್ಯೋ ವರದಃ ಪ್ರಭುಃ ।
ಘನದಃ ಪ್ರಾಣದಃ ಶ್ರೇಷ್ಠಃ ಕಾಮದಃ ಕಾಮರೂಪಧೃಕ್ ॥ ೧೨ ॥

ತರಣಿಃ ಶಾಶ್ವತಃ ಶಾಸ್ತಾ ಶಾಸ್ತ್ರಜ್ಞಸ್ತಪನಶ್ಶಯಃ ।
ವೇದಗರ್ಭೋ ವಿಭುರ್ವೀರಃ ಶಾಂತಃ ಸಾವಿತ್ರಿವಲ್ಲಭಃ ॥ ೧೩ ॥

ಹೆಚ್ಚಾದ ಬೆಳಕನ್ನುಂಟುಮಾಡುವ ಪ್ರಭಾಕರನು ; ಅದಿತಿಯ ಪುತ್ರನಾದ ಆದಿತ್ಯನು, ಲೋಕಕ್ಕೆ ಬೆಳಕನ್ನೆಸಗಿ ವಸ್ತುಗಳನ್ನು ಕಾಣುವಂತೆ ಮಾಡುವವನಾದುದರಿಂದ ವಿಶ್ವದೃಶನು ; ಯಜ್ಞಕರ್ತೃವಿನಲ್ಲಿ ಸನ್ನಿಧಾನವುಳ್ಳವನಾದುದರಿಂದ ಯಜ್ಞಕರ್ತೃವು ; ನಾಯಕನಾದ ನೇತೃವು ; ಸೇವಕರಿಗೆ ಶ್ರೇಯಸ್ಸನ್ನುಂಟುಮಾಡುವುದರಿಂದ ಯಶಸ್ಕರನು ; ಪರಿಶುದ್ಧನಾದುದರಿಂದ ವಿಮಲನು ಶಕ್ತಿಯುಳ್ಳವನಾದುದರಿಂದ ವೀರ್ಯವಂತನು ; ಐಶ್ವರ್ಯವಂತನಾದುದರಿಂದ ಈಶನು ; ಉಪಾಯವನ್ನರಿತವನಾದುದರಿಂದ ಯೋಗಜ್ಞನು ; ಯೋಗದಿಂದ ಚಿಂತಿಸುವವನಾದುದರಿಂದ ಯೋಗಭಾವನನು ಸುಖ ಸ್ವರೂಪನಾದುದರಿಂದ ಅಮೃತಾತ್ಮನು ; ನಿತ್ಯನು ; ಸ್ವಾಶ್ರಿತನಿಂದ ಭಜನೀಯನಾದುದರಿಂದ ವರೇಣ್ಯನು ; ಭಕ್ತರಿಗೆ ಇಷ್ಟವನ್ನು ಸಲ್ಲಿಸುವವನಾದುದರಿಂದ ವರದನು ; ಒಡೆಯನಾದ ಪ್ರಭುವು ; ಮೇಘಗಳನ್ನುಂಟುಮಾಡುವ ಘನದನು ; ಚೈತನ್ಯವನ್ನು ಕೊಡುವುದರಿಂದ ಪ್ರಾಣದನು ; ಉತ್ತಮನಾದುದರಿಂದ ಶ್ರೇಷ್ಠನು ; ಇಷ್ಟವನ್ನು ಕೊಡುವ ಕಾಮದನು ; ತನಗೆ ಬೇಕಾದ ರೂಪವನ್ನು ತಾಳುವ ಕಾಮರೂಪಧೃಕ್ ; ತಮವನ್ನು ಹೋಗಲಾಡಿಸುವ ತರಣಿಯು ; ಯಾವಾಗಲೂ ಏಕರೀತಿಯಿಂದಿರುವ ಶಾಶ್ವತನು ; ನಿಯಾಮಕನಾದ ಶಾಸ್ತಾರನು ; ವಿಧಿಯನ್ನರಿತ ಶಾಸ್ತ್ರಜ್ಞನು ; ಲೋಕಕ್ಕೆ ಶಾಖವನ್ನುಂಟುಮಾಡುವ ತಪನನು ; ಲೋಕದಲ್ಲೆಲ್ಲಾ ಇರುವ ಶಯನು ; ವೇದಪ್ರತಿಪಾದ್ಯನಾದ, ವೇದವನ್ನರಿತ ವೇದಗರ್ಭನು ;

ಧ್ಯೇಯೋ ವಿಶ್ವೇಶ್ವರೋ ಭರ್ತಾ ಲೋಕನಾಥೋ ಮಹೇಶ್ವರಃ ।
ಮಹೇಂದ್ರೋ ವರುಣೋ ಧಾತಾ ವಿಷ್ಣುರಗ್ನಿರ್ದಿವಾಕರಃ ॥ ೧೪ ॥

ಏತೈಸ್ತು ನಾಮಭಿಃ ಸೂರ್ಯ ಸ್ತುತಸ್ತೇನ ಮಹಾತ್ಮನಾ ।
ಉವಾಚ ವಿಶ್ವಕರ್ಮಾಣಂ ಪ್ರಸನ್ನೋ ಭಗವಾನ್ ರವಿಃ ॥ ೧೫ ॥

ಭ್ರಮಿಮಾರೋಪ್ಯ ಮಾಮತ್ರ ಮಂಡಲಂ ಮಮ ಶಾತಯ ।
ತ್ವದ್ಬುದ್ಧಿಸ್ಥಂ ಮಯಾ ಜ್ಞಾತಮೇವಮೌಷ್ಣ್ಯಂ ಶಮಂ ವ್ರಜೇತ್ ।
ಇತ್ಯುಕ್ತೋ ವಿಶ್ವಕರ್ಮಾ ಚ ತಥಾ ಸ ಕೃತವಾನ್ ದ್ವಿಜ ॥ ೧೬ ॥

ವ್ಯಾಪ್ತನಾದ ವಿಭುವು ; ವೀರನು ; ಶಾಂತನು ; ಸಾವಿತ್ರಿಯ ಪತಿಯು ; ಧ್ಯೇಯನು, ವಿಶ್ವಕ್ಕೆ ಒಡೆಯನಾದ ವಿಶ್ವೇಶ್ವರನು ; ಭರಿಸುವ ಭರ್ತನು ; ಲೋಕನಾಥನು ; ಮಹೇಶ್ವರನು ; ವಿಶೇಷವಾದ ಐಶ್ವರ್ಯವಿರುವ ಮಹೇಂದ್ರನು; *ವರುಣನು; ಲೋಕವನ್ನೇ ಪೋಷಿಸುವವನಾದ ಧಾತನು ; ವ್ಯಾಪ್ತನಾದ ವಿಷ್ಣುವು ; ಅಗ್ರ್ಯನಾದುದರಿಂದ (ಶ್ರೇಷ್ಠನಾದುದರಿಂದ) ಅಗ್ನಿಯು ; ಹಗಲನ್ನುಂಟುಮಾಡುವುದರಿಂದ ದಿವಾಕರನು.

೧೫. ಆ ಮಹಾಪ್ರಭಾವಶಾಲಿಯಾದ ತ್ವಷ್ಟೃವು ಈ ನಾಮಗಳಿಂದ ಸೂರ್ಯದೇವನನ್ನು ನುತಿಸಿದನು. ಆಗ ಭಗವಂತನಾದ, ಭಕ್ತಸ್ತುತನಾದ ರವಿಯು ಪ್ರಸನ್ನನಾಗಿ ವಿಶ್ವಕರ್ಮನಿಗೆ ಇಂತು ಹೇಳಿದನು.

೧೬. 'ಎಲೈ ಮಾವನಾದ ತ್ವಷ್ಟೃವೇ ! ಇಲ್ಲಿ ನೀನು ನನ್ನ ಮಂಡಲವನ್ನು ಸಾಣೆಗೆ ಕೊಟ್ಟು ಸವೆಸು. ನಿನ್ನ ಮನದ ಬಯಕೆಯಂತೆ ನನ್ನಲ್ಲಿರುವ ಉಷ್ಣತೆಯು (ಅಡಗಿ) ಕಡಿಮೆಯಾಗುವುದು.' ಎಲೈ ಭಾರದ್ವಾಜನೇ ! ಸೂರ್ಯನು ಇಂತು ಹೇಳಲು, ವಿಶ್ವಕರ್ಮನೂ ಆ ರೀತಿಯಾಗಿ ಸೂರ್ಯಮಂಡಲವನ್ನು ಸಾಣೆಗೆ ಕೊಟ್ಟು ಸವೆಸಿದನು.

---

* ಯಾಭಿರಾದಿತ್ಯಸ್ತಪತಿ ರಶ್ಮಿಭಿಃ ತಾಭಿಃ ಪರ್ಜನ್ಯೋ ವರ್ಷತೇ ।

ಶಾಂತೋಽಷ್ಟಃ ಸವಿತಾ ತಸ್ಯ ದುಹಿತುರ್ವಿಶ್ವಕರ್ಮಣಃ ।
ಸಂಜ್ಞಾಯಾಶ್ಚಾಭವದ್ವಿಪ್ರ ಭಾನುಸ್ತ್ವಷ್ಟಾರಮಬ್ರವೀತ್ ॥ ೧೭ ॥

ತ್ವಯಾ ಯಸ್ಮಾತ್ಸ್ತುತೋಽಹಂ ವೈ ನಾಮ್ನಾಮಷ್ಟಶತೇನ ಚ ।
ವರಂ ವೃಣೀಷ್ವ ತಸ್ಮಾತ್ತ್ವಂ ವರದೋಽಹಂ ತವಾನಘ ॥ ೧೮ ॥

ಇತ್ಯುಕ್ತೋ ಭಾನುನಾ ಸೋಽಥ ವಿಶ್ವಕರ್ಮಾಽಬ್ರವೀದಿದಮ್ ।
ವರದೋ ಯದಿ ಮೇ ದೇವ ವರಮೇತಂ ಪ್ರಯಚ್ಛಮೇ ॥ ೧೯ ॥

ಏತೈಸ್ತು ನಾಮಭಿರ್ಯಸ್ತ್ವಾಂ ನರಸ್ತೋಷ್ಯತಿ ನಿತ್ಯಶಃ ।
ತಸ್ಯ ಪಾಪಕ್ಷಯಂ ದೇವ ಕುರು ಭಕ್ತಸ್ಯ ಭಾಸ್ಕರ ॥ ೨೦ ॥

---

೧೭. ಎಲೈ ವಿಪ್ರನೇ, ಆಗ ಸುಪ್ತವಾದ ಜಗತ್ತಿಗೆ ಎಚ್ಚರವನ್ನೆಸಗುವ ಭಾನುವು ಆ ವಿಶ್ವಕರ್ಮನ ಮಗಳಾದ ಸಂಜ್ಞೆಯೆಂಬ ತನ್ನ ಮಡದಿಗೆ ಆದಿದ ಕಾವುಳ್ಳವನಾಗಿ ತ್ವಷ್ಟೃವಿಗೆ ಇಂತು ಹೇಳಿದನು.

೧೮. 'ಎಲೈ ನಿರ್ದುಷ್ಟನಾದ ತ್ವಷ್ಟೃವೇ! ನೀನು ನನ್ನನ್ನು ಒಂದು ನೂರೆಂಟು ನಾಮಗಳಿಂದ ತುಳಿಲ್ಗೈದುದರಿಂದ, ನಾನು ನಿನಗೆ ಇಷ್ಟವಾದುದನ್ನು ಸಲ್ಲಿಸಲು ಇಷ್ಟಪಡುವೆನು. ನಿನಗೆ ಬೇಕಾದ ಬಯಕೆಯನ್ನು ಅಪೇಕ್ಷಿಸು.

೧೯. ಇಂತು ಭಾನುವು ಹೇಳಲು, ಅನಂತರದಲ್ಲಿ ಆ ವಿಶ್ವಕರ್ಮನು ಅಳಿಯುನಾದ ಸೂರ್ಯದೇವನಿಗೆ ಇದನ್ನು ಹೇಳಿದನು. 'ಎಲೈ ಸೂರ್ಯದೇವನೇ! ನೀನು ನನಗೆ ವರವನ್ನು ಸಲ್ಲಿಸುವೊಡೆ, ಈ ಮುಂದಣ ವರವನ್ನು ಅನುಗ್ರಹಿಸು.

೨೦. ಎಲೈ ಭಾಸ್ಕರದೇವನೇ! ಯಾವ ನರನು ಈ ನೂರೆಂಟು ನಾಮಗಳಿಂದ ನಿತ್ಯದಲ್ಲಿಯೂ ನಿನ್ನನ್ನು ತುಳಿಲ್ಗೈವ್ವನೋ, ಅವನ ಪಾಪಗಳಿಗೆ ಅಳಿವನ್ನೆಸಗುವವನಾಗು.'

ತೇನೈವಮುಕ್ತೋ ದಿನಕೃತ್ತಥೇತಿ
ತ್ವಷ್ಟಾರಮುಕ್ತ್ವಾ ವಿರರಾಮ ಭಾಸ್ಕರಃ ।
ಸಂಜ್ಞಾಂ ವಿಶಂಕಾಂ ರವಿಮಂಡಲಸ್ಥಿತಾಂ
ಕೃತ್ವಾ ಜಗಮಾಥ ರವಿಂ ಪ್ರಸಾದ್ಯ ॥ ೨೧ ॥

ಇತಿ ಶ್ರೀ ನರಸಿಂಹಪುರಾಣೇ ವಿಶ್ವಕರ್ಮಕೃತಾ ಸವಿತೃಸ್ತುತಿರ್ನಾಮ
ವಿಂಶೋಽಧ್ಯಾಯಃ

---

೨೧. ಇಂತು ತ್ವಷ್ಟೃವು ಸೂರ್ಯನನ್ನು ಪ್ರಾರ್ಥಿಸಲು, ಭಾಸ್ಕರನೂ ಹಾಗೆಯೇ ಆಗಲೆಂದು ತ್ವಷ್ಟಾರನಿಗೆ ಅನುಗ್ರಹಿಸಿ ಸುಮ್ಮನಾದನು. ಅನಂತರದಲ್ಲಿ ತ್ವಷ್ಟೃವೂ ತನ್ನ ಮಗಳಾದ ಸಂಜ್ಞೆಯನ್ನು ತಾಪದ ಭಯವಿಲ್ಲದೆ, ಸೂರ್ಯಮಂಡಲದಲ್ಲಿ ವಾಸಿಸುವಂತೆ ಮಾಡಿ, ಸೂರ್ಯನನ್ನು ಸಂತಸಗೊಳಿಸಿ, ಬಳಿಕ ಹಿಂದಕ್ಕೆ ಹೋದನು.'

ಎಂದು ಸೂತರು ಭರದ್ವಾಜನಿಗೆ ಹೇಳಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ವಿಶ್ವಕರ್ಮನು ಮಾಡಿದ ಸವಿತೃವಿನ
ಸ್ತೋತ್ರವೆಂಬ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

ಇಪ್ಪತ್ತನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ, ಭಾರದ್ವಾಜನು ಸೂತರನ್ನು ತ್ವಷ್ಟೃವು ಸೂರ್ಯನನ್ನು ಸ್ತುತಿಸಿದ ಬಗೆಯನ್ನು ತಿಳಿಸಬೇಕೆಂದು ಬಿನ್ನವಿಸಲು, ಸೂತರು ಅವನಿಗೆ ತ್ವಷ್ಟೃವು ಸೂರ್ಯನನ್ನು ಆದಿತ್ಯನೇ ಮೊದಲಾದ ಒಂದು ನೂರ ಎಂಟು ನಾಮಗಳಿಂದ ಸ್ತುತಿಸಿದನು; ಆ ಸ್ತುತಿಗೆ ಮೆಚ್ಚಿ ಭಾಸ್ಕರನು ತಾನು ಪ್ರಸನ್ನನಾಗಿದ್ದೇನೆ; ಅವನು ತನ್ನ ಮಂಡಲವನ್ನು ಸಾಣೆಗೆ ಕೊಟ್ಟು ಚಿಕ್ಕದಾಗಿ ಮಾಡಿದಲ್ಲಿ, ತನ್ನಲ್ಲಿರುವ ತಾಪವು ಕಡಿಮೆಯಾಗುವುದೆನ್ನಲು, ತ್ವಷ್ಟೃವೂ ಅಂತೆಯೇ ಮಾಡಿದನು. ತರುವಾಯ ಸೂರ್ಯನು ಅವನ ಸ್ತುತಿಗೆ ಮೆಚ್ಚಿ, ವರವನ್ನು ಕರುಣಿಸಲು ಸಿದ್ಧನಾಗಿರುವೆನೆನ್ನಲು ತ್ವಷ್ಟೃವು ತಾನು ಸೂರ್ಯನನ್ನು ಸ್ತುತಿಸಿದ ಆ ನೂರೆಂಟು ನಾಮಗಳಿಂದ ಯಾವ ನರನು ಅವನನ್ನು (ಆದಿತ್ಯನನ್ನು) ನುತಿಸುವನೋ, ಅವನ ಪಾಪಗಳೆಗಳೆವನ್ನೆಸಗುವನಾಗೆಂದು ಪ್ರಾರ್ಥಿಸಲು, ಸೂರ್ಯನು ಅದಕ್ಕೆ ಒಪ್ಪಿದನು. ಅನಂತರ ತ್ವಷ್ಟೃವು ತನ್ನ ಮಗಳಾದ ಸಂಜ್ಞೆಯು ತಾಪದ ಭಯವಿಲ್ಲದೆ ಸೂರ್ಯಮಂಡಲದಲ್ಲಿ ಗಂಡನೊಡನೆ ಸುಖದಿಂದ ವಾಸಿಸುವಂತೆ ಮಾಡಿ, ಸೂರ್ಯನನ್ನು ಸಂತೋಷಗೊಳಿಸಿ, ಹೋದನೆಂದು ಸೂತರು ಭರದ್ವಾಜನಿಗೆ ನಿರೂಪಿಸಿರುತ್ತಾರೆ.

ಇಂತು ಶ್ರೀ ನರಸಿಂಹಪುರಾಣದಲ್ಲಿ ಇಪ್ಪತ್ತನೆಯ ಅಧ್ಯಾಯದ

ವಿಷಯಸಂಗ್ರಹವು.

॥ ಶ್ರೀಃ ॥

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಸೃಷ್ಟಿಕಾಂಡಮ್ ; ಏಕವಿಂಶತಿತಮೋಽಧ್ಯಾಯಃ

॥ ಏಕೋನಪಂಚಾಶನ್ಮರುತಾಮುತ್ಪತ್ತಿಃ ॥

॥ ಶ್ರೀ ಸೂತಉವಾಚ ॥

ಸಾಂಪ್ರತಂ ಮಾರುತೋತ್ಪತ್ತಿಂ ವಕ್ಷ್ಯಾಮಿ ದ್ವಿಜಸತ್ತಮ ।
ಪುರಾ ದೇವಾಸುರೇ ಯುದ್ಧೇ ದೇವೈರಿಂದ್ರಾದಿಭಿರ್ಜಿತೇಃ ॥ ೧ ॥

ಪುತ್ರಾಃ ಪರಾಭೂತಾಃ, ದಿತಿಶ್ಚ ವಿನಷ್ಟಪುತ್ರಾ
ಮಹೇಂದ್ರದರ್ಪಹರಂ ಪುತ್ರಮಿಚ್ಛಂತೀ ಕಶ್ಯಪಮೃಷಿಂ
ಸ್ವಪತಿಮಾರಾಧಯಾಮಾಸ ॥ ೨ ॥

ಇಪ್ಪತ್ತೊಂದನೆಯ ಅಧ್ಯಾಯವು

ನಲವತ್ತೊಂಬತ್ತು ಮರುತ್ತುಗಳ ಉತ್ಪತ್ತಿಯು

ಶ್ರೀ ಸೂತರು ಭಾರದ್ವಾಜನಿಗೆ ಇಂತು ಹೇಳುತ್ತಾರೆ :—

೧–೨. 'ಎಲೈ ಬ್ರಾಹ್ಮಣೋತ್ತಮನಾದ ಭರದ್ವಾಜನೇ! ಕೇಳು ; ನಿನಗೆ ಈಗ ಮಾರುತರ ಉತ್ಪತ್ತಿಯನ್ನು ನಿನ್ನಿಷ್ಟದಂತೆ ಅರುಹುವೆನು. ಪೂರ್ವದಲ್ಲಿ ದೇವಾಸುರ ಯುದ್ಧದಲ್ಲಿ ಇಂದ್ರಾದಿ ದೇವತೆಗಳಿಂದ ದಿತಿಯ ಪುತ್ರರಾದವರಿಗೆ ಸೋಲುಂಟಾಯಿತು. ಆಗ ದಿತಿಯೂ ಮಕ್ಕಳನ್ನು ಕಳೆದುಕೊಂಡವಳು ಮಹೇಂದ್ರನ ಗರ್ವವನ್ನಡಗಿಸುವಂತಹ ಮಗನು ಹುಟ್ಟಬೇಕೆಂದೆಳಸಿ ತನ್ನ ವಲ್ಲಭನಾದ ಕಶ್ಯಪ ಮುನಿಯನ್ನು ಸೇವಿಸಿದಳು.

ಸ ಚ ತಪಸಾ ಸಂತುಷ್ಟೋ ಗರ್ಭಾಧಾನಂ ಚಕಾರ ।
ತಸ್ಯಾಂ ಪುನಸ್ತಾಮೇವಮುಕ್ತವಾನ್ ॥ ೩ ॥

ಯದಿ ತ್ವಂ ಶುಚಿಃ ಸತೀ ಶರಚ್ಛತಮಿಮಂ ಗರ್ಭಂ
ಧಾರಯಿಷ್ಯಸಿ । ತತಶ್ಚ ಮಹೇಂದ್ರದರ್ಪಹಂತಾ
ಪುತ್ರೋ ಭವಿಷ್ಯತೀತ್ಯೇವಮುಕ್ತಾ ಸಾ ತಂ
ಗರ್ಭಂ ಧಾರಯಾಮಾಸ ॥ ೪ ॥

ಇಂದ್ರೋಽಪಿ ತಂ ಜ್ಞಾತ್ವಾ ವೃದ್ಧಬ್ರಾಹ್ಮಣರೂಪೇಣಾಗತ್ಯ
ದಿತಿಪಾರ್ಶ್ವೇ ಸ್ಥಿತವಾನ್ । ಕಿಂಚಿದೂನಪೂರ್ಣೇ ವರ್ಷಶತೇ
ಪಾದಶೌಚಮಕೃತ್ವಾ ದಿತಿಃ ಶಯನ ಮಾರುಹ್ಯ ನಿದ್ರಾಂ ಗತಾ ॥ ೫ ॥

---

೩. ಆ ಕಶ್ಯಪನು ಅವಳ ತಪಸ್ಸಿಗೆ ಮೆಚ್ಚಿ ಆ ದಿತಿಯಲ್ಲಿ ಗರ್ಭಾಧಾನ ಮಾಡಿದನಲ್ಲದೆ, ಮತ್ತು ಅವಳಿಗೆ ಇಂತು ಹೇಳಿದನು.

೪. ‘ಎಲೌ ದಿತಿಯೇ! ನೀನು ಪರಿಶುದ್ಧಳೂ, ಸತಿಯೂ ಆಗಿದ್ದು, ಒಂದು ನೂರು ವರ್ಷಗಳ ಕಾಲದವರೆಗೆ ಈ ಗಬ್ಬವನ್ನು ಹೊತ್ತುಕೊಂಡಿರುವ ಪಕ್ಷದಲ್ಲಿ, ಬಳಿಕ ಮಹೇಂದ್ರನ ಗರ್ವಕ್ಕೆ ಅಳಿವನ್ನೆಸಗುವ ಮಗನು ಹುಟ್ಟುವನು.’ ಇಂತು ಕಶ್ಯಪನು ಹೇಳಲು ಅವಳೂ ಆ ಗಬ್ಬವನ್ನು ತಾಳಿದಳು.

೫. ದೇವೇಂದ್ರನೂ ಅದನ್ನು ತಿಳಿದು ಮುದುಕ ಹಾರುವನ ವೇಷದಿಂದ ಬಂದು, ಆ ದಿತಿಯ ಬಳಿಯಲ್ಲಿಯೇ ಇರುತ್ತಿದ್ದನು. ಸ್ವಲ್ಪ ಕಡಿಮೆ ಒಂದು ನೂರು ವರ್ಷ ತುಂಬಲು, ಅಶುಚಿಯಾದ ದಿತಿಯು ಕಾಲುಗಳನ್ನು ತೊಳೆಯದೆ, ಹಾಸಿಗೆಯಲ್ಲಿ ಮಲಗಿ ನಿದ್ರೆಯನ್ನು ಹೊಂದಿದಳು.

ಸೋಽಪಿ ಲಬ್ಧಾವಸರೋ ವಜ್ರಪಾಣಿಸ್ತತ್ಕುಕ್ಷಿಂ ಪ್ರವಿಶ್ಯ
ವಜ್ರೇಣ ತಂ ಗರ್ಭಂ ಸಪ್ತಧಾ ಚಿಚ್ಛೇದ । ಸೋಽಪಿ
ತೇನ ಪ್ರಚ್ಛಿದ್ಯಮಾನಃ ರುರೋದ ॥ ೬ ॥

ಮಾರೋದೀರಿತಿ ವದನ್ನಿಂದ್ರಸ್ತಾನ್ ಸಪ್ತಧೈಕೈಕಂ ಚಿಚ್ಛೇದ ॥ ೭ ॥

ಸಪ್ತಧಾ ತೇ ಸರ್ವೇ ಮರುತೋ ಜಾತಮಾತ್ರಾನ್
ಮಾರೋದೀರಿತ್ಯುಕ್ತವಾನ್ । ಮಹೇಂದ್ರಸ್ಯ ಸಹಾಯಾ
ಅಮೀ ಮಾರುತೋ ನಾಮ ದೇವಾ ಬಭೂವುಃ ॥ ೮ ॥

---

೬. ಆ ವಜ್ರಪಾಣಿಯಾದ ಇಂದ್ರನು ಅವಕಾಶಪಡೆದವನು ಆ ದಿತಿಯ ಗಬ್ಬವನ್ನು ಏಳಾಗಿ ಕತ್ತರಿಸಿದನು. ಆ ಗಬ್ಬವೂ ಆ ಇಂದ್ರನಿಂದ ಕತ್ತರಿಸಿದುದಾಗಿ ಅತ್ತಿತು.

೭. ಆಗ ಇಂದ್ರನು (ಮಾ ರೋದೀಃ) ಅಳಬೇಡವೆಂದು ಹೇಳುತ್ತಾ, ಆ ಏಳು ಹೋಳುಗಳನ್ನೂ ಒಂದೊಂದನ್ನೂ ಏಳು ಭಾಗವಾಗಿ ಮತ್ತೆ ಕತ್ತರಿಸಿದನು.

೮. ಇಂತು (ಏಳೇಳಾಗಿ) ನಲವತ್ತೊಂಬತ್ತು ಭಾಗವಾಗಿ ಆ ಗರ್ಭದ ಹೋಳಾದ ಮರುತ್ತುಗಳೆಲ್ಲಾ ಹುಟ್ಟಿದುವನ್ನೇ ಕುರಿತು ಇಂದ್ರನು (ಮರೋದೀ :) 'ಅಳಬೇಡಿ' ರೆಂದು ಹೇಳಿದನು. ಇಂತು ಹುಟ್ಟಿದ ಇವರು, ದೇವೇಂದ್ರನಿಗೆ ನೆರವನ್ನೆಸಗುವ, ಮರುತ್ತುಗಳೆಂಬ ಹೆಸರಿನ ದೇವತೆಗಳಾದರು.

ಏವಂ ಮುನೇ ಸೃಷ್ಟಿರಿಯಂ ತವೇರಿತಾ
ದೇವಾಸುರಾಣಾಂ ನರನಾಗರಕ್ಷಸಾಮ್ ।
ಏಯನ್ಮುಖಾನಾಮಪಿ ಯಃ ಪಠೇದಿದಂ
ಶೃಣ್ವಂಶ್ಚ ಭಕ್ತ್ಯಾ ಹರಿಲೋಕಮೇತಿ ಸಃ ॥ ೯ ॥

ಇತಿ ಶ್ರೀ ನರಸಿಂಹಪುರಾಣೇ ಏಕೋನಪಂಚಾಂಶನ್ಮರುತಾಮುತ್ಪತ್ತಿರ್ನಾಮ
ಏಕವಿಂಶತಿತಮೋಽಧ್ಯಾಯಃ

ಸೃಷ್ಟಿಕಾಂಡಂ ಸಮಾಪ್ತಂ

---

೯. ಎಲೈ ಭರದ್ವಾಜಮುನಿಯೇ! ನಿನಗೆ ದೇವತೆಗಳು, ಅಸುರರು, ಮಾನವರು, ನಾಗರು, ರಾಕ್ಷಸರು ಮತ್ತು ಆಗಸವೇ ಮುಂತಾದ ಪಂಚಭೂತಗಳು ಇವುಗಳನ್ನು ಭಗವಂತನು ಸೃಷ್ಟಿಸಿದುದನ್ನು ಅರುಹಿದೆನು. ಈ ದೇವಾದಿಗಳ ಸೃಷ್ಟಿಯನ್ನು ಯಾವ ಮಾನವನು ಭಕ್ತಿಯಿಂದ ಪಠಿಸುತ್ತಾನೆಯೋ ಮತ್ತು ಕೇಳುತ್ತಾನೆಯೋ ಅವನು ಶ್ರೀಹರಿಯ ಲೋಕವನ್ನೈದುವನು,' ಎಂದು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ನಲವತ್ತೊಂಬತ್ತು ಮರುತ್ತುಗಳ
ಉತ್ಪತ್ತಿಯೆಂಬ ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

ಇಂತು ಸೃಷ್ಟಿಕಾಂಡವು

ಇಪ್ಪತ್ತೊಂದನೆಯ ಅಧ್ಯಾಯದ ವಿಷಯಸಂಗ್ರಹವು

ಈ ಅಧ್ಯಾಯದಲ್ಲಿ, ದೇವತೆಗಳು ದಿತಿಯ ಮಕ್ಕಳನ್ನು ದೇವಾಸುರ ಯುದ್ಧಗಳಲ್ಲಿ ನಾಶಮಾಡಲು, ದಿತಿಯು ದುಃಖಿಗೊಂಡು ಇಂದ್ರನ ದರ್ಪವನ್ನು ಹಾಳು ಮಾಡುವ ಮಗನನ್ನು ಪಡೆಯಲು, ತನ್ನ ಗಂಡನಾದ ಕಶ್ಯಪಮುನಿಯನ್ನು ಪ್ರಾರ್ಥಿಸಲು, ಅವನು ದಿತಿಯು ಒಂದು ನೂರು ವರ್ಷ ಶುದ್ಧಳೂ, ಸತಿಯೂ ಆಗಿ ಗರ್ಭವನ್ನು ಧರಿಸಿದರೆ, ಅಂತಹ ಮಗನು ಹುಟ್ಟುವನೆಂದು ಹೇಳಿ, ಅವಳಲ್ಲಿ ಗರ್ಭಾಧಾನಮಾಡಿದನು. ಆಗ ದೇವೇಂದ್ರನು ಅವಳ ಬಳಿಯಲ್ಲಿಯೇ ವಜ್ರಪಾಣಿಯಾಗಿ ಸಮಯವನ್ನು ನಿರೀಕ್ಷಿಸುತ್ತಿರಲು, ಸ್ವಲ್ಪ ಕಡಿಮೆ ನೂರು ವರ್ಷವಾಗುವಷ್ಟರಲ್ಲಿ, ಒಂದು ದಿನ ಅಶುದ್ಧಳಾಗಿದ್ದ ದಿತಿಯು ಕಾಲು ತೊಳೆಯದೆ, ಹಾಸಿಗೆಯಲ್ಲಿ ಮಲಗಿ ನಿದ್ರಿಸಿದಳು. ಆಗ ಇಂದ್ರನು ಅವಳ ಗರ್ಭವನ್ನು ಹೊಕ್ಕು, ಅದನ್ನು ಏಳು ಭಾಗವಾಗಿ ಮಾಡಲು ಆ ಗರ್ಭವು ಅತ್ತಿತು ; ಅಳಬೇಡಿರೆನ್ನುತ್ತಾ, ಮತ್ತೆ ಇಂದ್ರನು ಆ ಒಂದೊಂದು ತುಂಡನ್ನೂ ಏಳಾಗಿ ಕತ್ತರಿಸಿದನು. ಅವು ಹುಟ್ಟುವಾಗ ಮತ್ತೆ ಅಳಬೇಡಿ—(ಮಾರೋದೀಃ) ಎಂದು ಹೇಳಿದುದರಿಂದ ಅವು ಇಂದ್ರನಿಗೆ ವೈರಿಗಳಾಗದೆ ಸಹಾಯಕರಾದ ನಲವತ್ತೊಂಬತ್ತು ಮರುತ್ತುಗಳೆಂಬ ದೇವತೆಗಳಾದರು. ಈ ಮರುತ್ತುಗಳ ಉತ್ಪತ್ತಿಯನ್ನು ಕೇಳುವವರು ಶ್ರೀಹರಿಯ ಲೋಕವನ್ನೈದುವರು.

ಇಂತು ಸೂತರು ಭಾರದ್ವಾಜನಿಗೆ ದೇವಾಸುರ-ನರನಾಗರಾಕ್ಷಸರ ಮತ್ತು ಆಕಾಶಾದಿ ಭೂತಗಳ ಸೃಷ್ಟಿಯನ್ನು ನಿರೂಪಿಸಿದುದಾಗಿ ಹೇಳಿರುತ್ತಾರೆ.

ಇಂತು ಇಪ್ಪತ್ತೊಂದನೆಯ ಅಧ್ಯಾಯದ ವಿಷಯಸಂಗ್ರಹವು.

ಇಂತು ಸೃಷ್ಟಿಕಾಂಡವು ಮುಗಿದುದು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಅಥ ವಂಶಾನುಚರಿಮ್ ; ದ್ವಾವಿಂಶೋಽಧ್ಯಾಯಃ

॥ ಸೂರ್ಯವಂಶಕಥನಮ್ ॥

॥ ಭಾರದ್ವಾಜ ಉವಾಚ ॥

ಅನುಸರ್ಗಶ್ಚ ಸರ್ಗಶ್ಚ ತ್ವಯಾ ಚಿತ್ರಾ ಕಥೇರಿತಾ ।
ವಂಶಮನ್ವಂತರೇ ಬ್ರೂಹಿ ವಂಶಾನುಚರಿತಂ ಚ ಮೇ ॥ ೧ ॥

॥ ಸೂತ ಉವಾಚ ॥

ರಾಜ್ಞಾಂ ವಂಶಃ ಪುರಾಣೇಷು ವಿಸ್ತರೇಣ ಪ್ರಕೀರ್ತಿತಃ ।
ಸಂಕ್ಷೇಪಾತ್ಕಥಯಿಷ್ಯಾಮಿ ವಂಶಮನ್ವಂತರಾಣಿ ತೇ ॥ ೨ ॥

ವಂಶಾನುಚರಿತವು ; ಇಪ್ಪತ್ತೆರಡನೆಯ ಅಧ್ಯಾಯವು

ಸೂರ್ಯವಂಶದ ನಿರೂಪಣೆಯು

ಭಾರದ್ವಾಜನು ಸೂತರನ್ನು ಕುರಿತು ಇಂತು ಹೇಳುತ್ತಾನೆ :—

೧. 'ಎಲೈ ಸೂತರೇ ! ನೀವು ಅತ್ಯಾಶ್ಚರ್ಯಕರಗಳಾದ ಸೃಷ್ಟ್ಯನುಸೃಷ್ಟಿಗಳನ್ನು ಹೇಳಿದಿರಿ. ಇನ್ನು ವಂಶಮನ್ವಂತರಗಳನ್ನೂ, ವಂಶಾನುಚರಿತವನ್ನೂ ದಯವಿಟ್ಟು ನನಗೆ ಹೇಳಿರಿ ;'

೨. ಎಂದು ಭಾರದ್ವಾಜನು ಕೇಳಲು, ಸೂತರು ಹೇಳುತ್ತಾರೆ :— 'ಎಲೈ ಭಾರದ್ವಾಜನೇ ! ಪುರಾಣಗಳಲ್ಲಿ ರಾಜರ ವಂಶವು ಬಿತ್ತರದಿಂದ ಹೇಳಿರುತ್ತದೆ. ನಿನಗೆ ಈಗ ರಾಜರ ವಂಶ ಮತ್ತು ಮನ್ವಂತರ ಇವುಗಳನ್ನು ಸಂಕ್ಷೇಪದಿಂದರುಹುವೆನು.

ವಂಶಾನುಚರಿತಂ ಚೈವ ಶೃಣು ವಿಪ್ರ ಮಹಾಮತೇ ।
ಶೃಣ್ವಂತು ಮುನಯಶ್ಚೇಮೇ ಶ್ರೋತುಮಾಗತ್ಯ ಯೇ ಸ್ಥಿತಾಃ ॥ ೩ ॥

ಆದೌ ತಾವದ್ಬ್ರಹ್ಮಾ, ಬ್ರಹ್ಮಣೊ ಮರೀಚಃ ।
ಮರೀಚೇಃ ಕಶ್ಯಪಃ, ಕಶ್ಯಪಾದಾದಿತ್ಯಃ ॥ ೪ ॥

ಆದಿತ್ಯಾನ್ಮನುಃ, ಮನೋರಿಕ್ಷ್ವಾಕುಃ, ಇಕ್ಷ್ವಾಕೋರ್ವಿಕುಕ್ಷಿಃ ।
ವಿಕುಕ್ಷೇರ್ದ್ಯೋತಃ, ದ್ಯೋತಾದ್ವೇನೋ, ವೇನಾತ್ಪೃಥುಃ ।
ಪೃಥೋಃ ಪೃಥಾಶ್ವಃ ॥ ೫ ॥

ಪೃಥಾಶ್ವಾದಸಂಖ್ಯಾತಾಶ್ವಃ, ಅಸಂಖ್ಯಾತಾಶ್ವಾನ್ಮಾಂಧಾತಾ ॥ ೬ ॥

---

೩. ಎಲೈ ಮಹಾಮತಿಯಾದ ವಿಪ್ರನೇ! ಮತ್ತು ನಾನು ಹೇಳುವುದನ್ನು ಕೇಳಲು ಬಂದಿರುವ ಮುನಿಗಳೇ! ನೀವು ನಾನು ಈಗ ಹೇಳುವ ವಂಶಾನುಚರಿತವನ್ನು ಕೇಳಿರಿ.

೪. ಶ್ರೀ ಮಹಾವಿಷ್ಣುವಾದ ನಾರಾಯಣನ ನಾಭಿಕಮಲದಲ್ಲಿ ಮೊದಲು ಚತುರ್ಮುಖಬ್ರಹ್ಮನು ಹುಟ್ಟಿದನು. ಆ ಬ್ರಹ್ಮನಿಂದ ಮರೀಚಿಯೂ, ಮರೀಚಿಯಿಂದ ಕಶ್ಯಪನೂ, ಆ ಕಶ್ಯಪನಿಂದ ಆದಿತ್ಯನೂ ಹುಟ್ಟಿದರು.

೫. ಆದಿತ್ಯನಿಂದ ಮನುವೂ, ಮನುವಿನಿಂದ ಇಕ್ಷ್ವಾಕುವೂ, ಇಕ್ಷ್ವಾಕುವಿನಿಂದ ವಿಕುಕ್ಷಿಯೂ, ವಿಕುಕ್ಷಿಯಿಂದ ದ್ಯೋತನೂ, ದ್ಯೋತನಿಂದ ವೇನನೂ, ವೇನನಿಂದ ಪೃಥುವೂ, ಪೃಥುವಿನಿಂದ ಪೃಥಾಶ್ವನೂ ಹುಟ್ಟಿದರು.

೬. ಪೃಥಾಶ್ವನಿಂದ ಅಸಂಖ್ಯಾತಾಶ್ವನೂ, ಅವನಿಂದ ಮಾಂಧಾತನೂ ಜನಿಸಿದರು.

ಮಾಂಧಾತುಃ ಪುರುಕುತ್ಸಃ, ಪುರುಕುತ್ಸಾದ್ದೃಷದೋ,
ದೃಷದಾದಭಿಶಂಭುಃ ॥ ೭ ॥

ಅಭಿಶಂಭೋರ್ದಾರುಣಃ । ದಾರುಣಾತ್ಸಗರಃ ॥ ೮ ॥

ಸಗರಾತ್ ಹರ್ಯಶ್ವೋ ಹರ್ಯಶ್ವಾದ್ಧಾರೀತಃ ॥ ೯ ॥

ಹಾರಿತಾದ್ರೋಹಿತಾಶ್ವೋ । ರೋಹಿತಾಶ್ವಾದಂಶುಮಾನ್ ।
ಅಂಶುಮತೋ ಭಗೀರಥಃ ॥ ೧೦ ॥

ಭಗೀರಥಾತ್ಸೌದಾಸಃ, ಸೌದಾಸಾಚ್ಛತ್ರುಂದಮಃ ॥ ೧೧ ॥

ಶತ್ರುಂದಮಾದನರಣಃ, ಅನರಣಾದ್ದೀರ್ಘಬಾಹುಃ
ದೀರ್ಘಬಾಹೋರಜಃ ॥ ೧೨ ॥

---

೭. ಮಾಂಧಾತೃವಿನಿಂದ ಪುರುಕುತ್ಸನೂ, ಆ ಪುರುಕುತ್ಸನಿಂದ ದೃಷದನೂ, ದೃಷದನಿಂದ ಅಭಿಶಂಭುವೂ ಹುಟ್ಟಿದರು.

೮. ಅಭಿಶಂಭುವಿನಿಂದ ದಾರುಣನೂ, ದಾರುಣನಿಂದ ಸಗರನೂ ಹುಟ್ಟಿದರು.

೯. ಸಗರನಿಂದ ಹರ್ಯಶ್ವನೂ, ಹರ್ಯಶ್ವನಿಂದ ಹಾರೀತನೂ ಜನಿಸಿದರು.

೧೦. ಹಾರೀತನಿಂದ ರೋಹಿತಾಶ್ವನೂ, ರೋಹಿತಾಶ್ವನಿಂದ ಅಂಶುಮಂತನೂ, ಅಂಶುಮಂತನಿಂದ ಭಗೀರಥನೂ ಹುಟ್ಟಿದರು.

೧೧. ಭಗೀರಥನಿಂದ ಸೌದಾಸನೂ, ಸೌದಾಸನಿಂದ ಶತ್ರುಂದಮನೂ ಜನಿಸಿದರು.

೧೨. ಶತ್ರುಂದಮನಿಂದ ಅನರಣನೂ, ಅನರಣನಿಂದ ದೀರ್ಘಬಾಹುವೂ, ದೀರ್ಘಬಾಹುವಿನಿಂದ ಅಜನೂ ಹುಟ್ಟಿದರು.

ಅಜಾದ್ದಶರಥಃ, ದಶರಥಾದ್ರಾಮಃ, ॥ ೧೩ ॥

ರಾಮಾಲ್ಲವಃ, ಲವಾತ್ಪದ್ಮಃ, ಪದ್ಮಾದನುಪರ್ಣಃ,
ಅನುಪರ್ಣಾದ್ವಸ್ತ್ರಪಾಣಿಃ ॥ ೧೪ ॥

ವಸ್ತ್ರಪಾಣೇಃ ಶುದ್ಧೋದನಃ, ಶುದ್ಧೋದನಾದ್ಬುಧಃ,
ಬುಧಾದಾದಿತ್ಯವಂಶೋ ನಿವರ್ತತೇ ॥ ೧೫ ॥

ಸೂರ್ಯವಂಶಭವಾಸ್ತೇ ತೇ ಪ್ರಾಧಾನ್ಯೇನ ಪ್ರಕೀರ್ತಿತಾಃ ।
ಯೈರಿಯಂ ಪೃಥಿವೀ ಭುಕ್ತಾ ಧರ್ಮತಃ ಕ್ಷತ್ರಿಯೈಃ ಪುರಾ ॥ ೧೬ ॥

---

೧೩. ಅಜನಿಂದ ದಶರಥನೂ, ದಶರಥನಿಂದ ರಾಮನೂ ಜನಿಸಿದರು.

೧೪. ಶ್ರೀರಾಮನಿಂದ ಲವನೂ, ಲವನಿಂದ ಪದ್ಮನೂ, ಪದ್ಮನಿಂದ ಅನುಪರ್ಣನೂ, ಅನುಪರ್ಣನಿಂದ ವಸ್ತ್ರಪಾಣಿಯೂ ಜನಿಸಿದರು.

೧೫. ವಸ್ತ್ರಪಾಣಿಯಿಂದ ಶುದ್ಧೋದನನೂ, ಶುದ್ಧೋದನನಿಂದ ಬುಧನೂ ಹುಟ್ಟಿದರು. ಬುಧನಿಂದ ಸೂರ್ಯವಂಶವು ಕಡೆಯಾಗುತ್ತದೆ.

೧೬. ಪೂರ್ವದಲ್ಲಿ ಯಾವ ಕ್ಷತ್ರಿಯರು ಧರ್ಮದಿಂದ ಈ ಪೊಡವಿಯನ್ನು ಕಾಪಿಟ್ಟರೋ, ಸೂರ್ಯವಂಶದಲ್ಲಿ ಮುಖ್ಯರಾದ ಆಯಾ ರಾಯರ ಹೆಸರನ್ನು ಹೇಳಿದುದಾಯಿತು.

ಸೂರ್ಯಸ್ಯ ವಂಶಃ ಕಥಿತೋ ಮಯಾ ಮುನೇ

ಸಮುದ್ಗತಾ ಯತ್ರ ನರೇಶ್ವರಾಃ ಪುರಾ ।

ಮಯೋಚ್ಯಮಾನಾಞ್ಛಶಿನಃ ಸಮಾಹಿತಃ

ಶೃಣುಷ್ವ ವಂಶೇಽಥ ನೃಪಾನನುತ್ತಮಾನ್ ॥ ೧೭ ॥

ಇತಿ ಶ್ರೀ ನರಸಿಂಹಪುರಾಣೇ ಸೂರ್ಯವಂಶಕಥನಂ ನಾಮ

ದ್ವಾವಿಂಶೋಽಧ್ಯಾಯಃ

---

೧೭. ಎಲೈ ಭಾರದ್ವಾಜಮುನಿಯೇ! ಪೂರ್ವದಲ್ಲಿ ನರಪತಿಗಳು ಯಾವ ಸೂರ್ಯವಂಶದಲ್ಲಿ ಹುಟ್ಟಿ, ಖ್ಯಾತಿಪಡೆದರೋ, ಆ ಸೂರ್ಯವಂಶವನ್ನು ನಿನಗೆ ಹೇಳಿದೆನು. ಇನ್ನು ನಾನು ಹೇಳುವ ಚಂದ್ರವಂಶದ ಶ್ರೇಷ್ಠರಾದ ರಾಜರನ್ನು ಸಮಾಧಾನದಿಂದ ಕೇಳು.

ಎಂದು ಸೂತರು ಭಾರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀನರಸಿಂಹಪುರಾಣದಲ್ಲಿ ಸೂರ್ಯವಂಶಕಥನವೆಂಬ

ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೆರಡನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, ಭಾರದ್ವಾಜಮುನಿಯ ಪ್ರಶ್ನೆಯ ಅನುಸಾರವಾಗಿ ಸೂತರು, ವಂಶ, ಮನ್ವಂತರ ಇವುಗಳನ್ನು ಸಂಕ್ಷೇಪದಿಂದ ಅರುಹುವುದಾಗಿ ಹೇಳಿ, ಮೊದಲು ಚತುರ್ಮುಖನಿಂದ ಮರೀಚಿ, ಅವನಿಂದ ಕಶ್ಯಪನು, ಅವನಿಂದ ಆದಿತ್ಯನು ಹುಟ್ಟಿ, ದರು. ಈ ಆದಿತ್ಯವಂಶದಲ್ಲಿ ಸುಪ್ರಸಿದ್ಧರಾದ ಮನುವೇ ಮೊದಲು ಬುಧನೆಂಬವನೇ ಕೊನೆಯಾಗಿ ಅನೇಕ ರಾಯರು ಹುಟ್ಟಿ, ಪೊಡವಿಯನ್ನು ಧರ್ಮದಿಂದ ಕಾಪಿಟ್ಟು ಖ್ಯಾತಿಪಡೆದರೆಂದು ನಿರೂಪಿಸಿ, ಇನ್ನು ಮುಂದೆ ಚಂದ್ರವಂಶದಲ್ಲಿ ಖ್ಯಾತರಾದ ಅರಸುಗಳನ್ನು ಹೇಳುವುದಾಗಿ ತಿಳಿಸಿರುತ್ತಾರೆ.

ಇಂತು ಇಪ್ಪತ್ತೆರಡನೆಯ ಅಧ್ಯಾಯದ ವಿಷಯಸಂಗ್ರಹವು.

॥ ಶ್ರೀಃ ॥

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವಂಶಾನುಚರಿತಮ್ ; ತ್ರಯೋವಿಂಶತಿತಮೋಽಧ್ಯಾಯಃ

ಸೋಮವಂಶಾನುಕೀರ್ತನಮ್.

॥ ಸೂತ ಉವಾಚ ॥

ಸೋಮವಂಶಂ ಶೃಣುಷ್ವಾಥ ಭರದ್ವಾಜ ಮಹಾಮುನೇ ।
ಪುರಾಣೇ ವಿಸ್ತರೇಣೋಕ್ತಂ ಸಂಕ್ಷೇಪಾತ್ಕಥಯೇಽಧುನಾ ॥ ೧ ॥

ಆದೌ ತಾವದ್ಬ್ರಹ್ಮಾ, ಬ್ರಹ್ಮಣೋ ಮಾನಸಃ ಪುತ್ರೋ ಮರೀಚಿಃ,
ಮರೀಚೇರ್ದಾಕ್ಷಾಯಣ್ಯಾಂ ಕಶ್ಯಪಃ ॥ ೨ ॥

ಇಪ್ಪತ್ತಮೂರನೆಯ ಅಧ್ಯಾಯವು

ಸೋಮವಂಶದ ನಿರೂಪಣೆಯು

ಮಹಾಮುನಿಯಾದ ಸೂತರು ಭರದ್ವಾಜನಿಗೆ ಇಂತು ನಿರೂಪಿಸುತ್ತಾರೆ.

೧. 'ಎಲೈ ಭಾರದ್ವಾಜನೇ ! ಕೇಳು ; ಪುರಾಣದಲ್ಲಿ ಬಿತ್ತರದಿಂದ ಹೇಳಿರುವ ಚಂದ್ರವಂಶವನ್ನು ಈಗ ಸಂಗ್ರಹವಾಗಿ ಹೇಳುತ್ತೇನೆ.

೨. ಮೊದಲು ಶ್ರೀಮನ್ನಾರಾಯಣನ ನಾಭಿಕಮಲದಲ್ಲಿ ಚತುರ್ಮುಖ ಬ್ರಹ್ಮನು ಹುಟ್ಟಿದನು. ಆ ಚತುರ್ಮುಖ ಬ್ರಹ್ಮನ ಮನಸ್ಸಿನಿಂದ ಹುಟ್ಟಿದ ಮಗನು ಮರೀಚಿಯು. ಆ ಮರೀಚಿಯಿಂದ ದಾಕ್ಷಾಯಣಿಯಲ್ಲಿ ಕಶ್ಯಪನು ಜನಿಸಿದನು.

ಕಶ್ಯಪಾದದಿತೇರಾದಿತ್ಯಃ, ಆದಿತ್ಯಾತ್ಸುವರ್ಚಲಾಯಾಂ ಮನುಃ ॥ ೩ ॥

ಮನೋಃ ಸುರೂಪಾಯಾಂ ಸೋಮಃ । ಸೋಮಾದ್ರೋಹಿಣ್ಯಾಂ
ಬುಧಃ, ಬುಧಾದಿಲಾಯಾಂ ಪುರೂರವಾಃ ॥ ೪ ॥

ಪುರೂರವಸಃ ಅಯುಃ, ಆಯೋಃ ರೂಪವತ್ಯಾಂ ನಹುಷಃ ॥ ೫ ॥

ನಹುಷಾತ್ಪಿತೃವತ್ಯಾಂ ಯಯಾತಿಃ, ಯಯಾತೇಃ
ಶರ್ಮಿಷ್ಠಾಯಾಂ ಪುರುಃ ॥ ೬ ॥

ಪುರೋರ್ವಂಶದಾಯಾಂ ಸಂಪಾತಿಃ । ಸಂಪಾತೇರ್ಭಾನುದತ್ತಾಯಾಂ
ಸಾರ್ವಭೌಮಃ, ಸಾರ್ವಭೌಮಸ್ಯ ವೈದೇಹ್ಯಾಂ ಭೋಜಃ ॥ ೭ ॥

---

೩. ಕಶ್ಯಪನಿಂದ ಅದಿತಿಯಲ್ಲಿ ಆದಿತ್ಯನು ಹುಟ್ಟಿದನು. ಆದಿತ್ಯನಿಂದ ಸುವರ್ಚಲೆಯಲ್ಲಿ ಮನುವು ಜನಿಸಿದನು.

೪. ಆ ಮನುವಿನಿಂದ ಸುರೂಪೆಯಲ್ಲಿ ಸೋಮನೂ, ಬುಧನಿಂದ ಇಳೆಯಲ್ಲಿ ಪುರೂರವನೂ ಹುಟ್ಟಿದರು.

೫. ಪುರೂರವನಿಂದ ಆಯುವೂ, ಆಯುವಿನಿಂದ ರೂಪವತಿಯಲ್ಲಿ ನಹುಷನೂ ಹುಟ್ಟಿದರು.

೬. ನಹುಷನಿಂದ ಪಿತೃವತಿಯಲ್ಲಿ ಯಯಾತಿಯೂ, ಯಯಾತಿಯಿಂದ ಶರ್ಮಿಷ್ಠೆಯಲ್ಲಿ ಪುರುವೂ ಹುಟ್ಟಿದರು.

೭. ಪುರುವಿನಿಂದ ವಂಶದೆಯಲ್ಲಿ ಸಂಪಾತಿಯೂ, ಸಂಪಾತಿಯಿಂದ ಭಾನುದತ್ತೆಯಲ್ಲಿ ಸಾರ್ವಭೌಮನೂ, ಸಾರ್ವಭೌಮನಿಗೆ ವೈದೇಹಿಯಲ್ಲಿ ಭೋಜನೂ ಹುಟ್ಟಿದರು.

ಭೋಜಸ್ಯ ಲಿಂಗಾಯಾಂ ದುಷ್ಯಂತಃ । ದುಷ್ಯಂತಸ್ಯ
ಶಕುಂತಲಾಯಾಂ ಭರತಃ ॥ ೮ ॥

ಭರತಸ್ಯ ನಂದಾಯಾಮಜಮೀಢಃ । ಅಜಮೀಢಸ್ಯ
ಸುದೇವ್ಯಾಂ ಪೃಶ್ನಿಃ । ಪೃಶ್ನೇರುಗ್ರಸೇನಾಯಾಂ ಪ್ರಸರಃ ।
ಪ್ರಸರಸ್ಯ ಬಹುರೂಪಾಯಾಂ ಶಾಂತನುಃ । ಶಾಂತನೋಃ
ಯೋಜನಗಂಧಾಯಾಂ ವಿಚಿತ್ರವೀರ್ಯಃ । ವಿಚಿತ್ರವೀರ್ಯಸ್ಯ
ಅಂಬಿಕಾಯಾಂ ಪಾಂಡುಃ ॥ ೯ ॥

ಪಾಂಡೋಃ ಕುಂತೀದೇವ್ಯಾಮರ್ಜುನಃ । ಅರ್ಜುನಾತ್
ಸುಭದ್ರಾಯಾಂ ಅಭಿಮನ್ಯುಃ ॥ ೧೦ ॥

ಅಭಿಮನ್ಯೋರುತ್ತರಾಯಾಂ ಪರೀಕ್ಷಿತಃ । ಪರೀಕ್ಷಿತಸ್ಯ
ಮಾತೃವತ್ಯಾಂ ಜನಮೇಜಯಃ ಜನಮೇಜಯಸ್ಯ
ಪುಣ್ಯವತ್ಯಾಂ ಶತಾನೀಕಃ ॥ ೧೧ ॥

---

೮. ಭೋಜನಿಗೆ ಲಿಂಗಾ ಎಂಬವಳಲ್ಲಿ ದುಷ್ಯಂತನೂ, ದುಷ್ಯಂತನಿಗೆ ಶಕುಂತಲೆಯಲ್ಲಿ ಭರತನೂ ಜನಿಸಿದರು.

೯. ಭರತನಿಗೆ ನಂದೆಯಲ್ಲಿ ಅಜಮೀಢನೂ, ಅಜಮೀಢನಿಗೆ ಸುದೇವಿಯಲ್ಲಿ ಪೃಶ್ನಿಯೂ, ಪೃಶ್ನಿಗೆ ಉಗ್ರಸೇನೆಯಲ್ಲಿ ಪ್ರಸರನೂ, ಪ್ರಸರನಿಗೆ ಬಹುರೂಪೆಯಲ್ಲಿ ಶಾಂತನುವೂ, ಶಾಂತನುವಿಗೆ ಯೋಜನಗಂಧೆಯಲ್ಲಿ ವಿಚಿತ್ರವೀರ್ಯನೂ, ವಿಚಿತ್ರ ವೀರ್ಯನಿಗೆ ಅಂಬಿಕೆಯಲ್ಲಿ ಪಾಂಡುವೂ ಜನಿಸಿದರು.

೧೦. ಪಾಂಡುವಿನಿಂದ ಕುಂತೀದೇವಿಯಲ್ಲಿ ಅರ್ಜುನನೂ, ಅರ್ಜುನನಿಂದ ಸುಭದ್ರೆಯಲ್ಲಿ ಅಭಿಮನ್ಯುವೂ ಜನಿಸಿದರು.

೧೧. ಅಭಿಮನ್ಯುವಿನಿಂದ ಉತ್ತರೆಯಲ್ಲಿ ಪರೀಕ್ಷಿತನೂ, ಪರೀಕ್ಷಿತನಿಗೆ ಮಾತೃವತಿಯಲ್ಲಿ ಜನಮೇಜಯನೂ, ಜನಮೇಜಯನಿಗೆ ಪುಣ್ಯವತಿಯಲ್ಲಿ ಶತಾನೀಕನೂ ಹುಟ್ಟಿದರು.

ಶತಾನೀಕಸ್ಯ ಪುಷ್ಪವತ್ಯಾಂ ಸಹಸ್ರಾನೀಕಃ । ಸಹಸ್ರಾನೀಕಸ್ಯ
ಮೃಗವತ್ಯಾಮುದಯನಃ । ತಸ್ಯ
ವಾಸವದತ್ತಾಯಾಂ ನರವಾಹನಃ ॥ ೧೨ ॥

ನರವಾಹನಸ್ಯಾಶ್ವಮೇಧಾಯಾಂ ಕ್ಷೇಮಕಃ ।
ಕ್ಷೇಮಕಾಂತಾಃ ಪಾಂಡವಾಃ ಸೋಮವಂಶೋ ನಿವರ್ತತೇ ॥ ೧೩ ॥

ಯ ಇದಂ ಶೃಣುಯಾನ್ನಿತ್ಯಂ ರಾಜವಂಶಮನುತ್ತಮಮ್ ।
ಸರ್ವಪಾಪವಿಶುದ್ಧಾತ್ಮಾ ವಿಷ್ಣುಲೋಕಂ ಸ ಗಚ್ಛತಿ । ೧೪ ॥

ಯಶ್ಚೇದಂ ಪಠತೇ ನಿತ್ಯಂ ಶ್ರಾದ್ಧೇ ವಾ ಶ್ರಾವಯೇತ್ಪಿತೄನ್ ।
ವಂಶಾನುಕೀರ್ತನಂ ಪುಣ್ಯಂ ಪಿತೄಣಾಂ ದತ್ತಮಕ್ಷಯಮ್ ॥ ೧೫ ॥

---

೧೨. ನರವಾಹನನಿಗೆ ಪುಷ್ಪವತಿಯಲ್ಲಿ ಸಹಸ್ರಾನೀಕನೂ, ಸಹಸ್ರಾನೀಕನಿಗೆ ಮೃಗವತಿಯಲ್ಲಿ ಉದಯನನೂ, ಆ ಉದಯನನಿಗೆ ವಾಸವದತ್ತೆಯಲ್ಲಿ ನರವಾಹನನೂ ಹುಟ್ಟಿದರು.

೧೩. ನರವಾಹನನಿಗೆ ಅಶ್ವಮೇಧೆಯಲ್ಲಿ ಕ್ಷೇಮಕನು ಜನಿಸಿದನು. ಪಾಂಡುವಿನ ವಂಶೀಯರು ಕ್ಷೇಮಕನೇ ಕೊನೆಯಾಗುಳ್ಳವರು. ಈ ಕ್ಷೇಮಕನಿಂದ ಚಂದ್ರವಂಶವು ಲ್ಲೊನೆಯಾಗುತ್ತದೆ.

೧೪. ಯಾವ ಮಾನವನು ಅತ್ಯಂತಶ್ರೇಷ್ಠವಾದ ಈ ರಾಜವಂಶಜರನ್ನು ನಿತ್ಯವೂ ಕೇಳುತ್ತಾನೆಯೋ, ಅವನು ಎಲ್ಲ ಪಾಪಗಳನ್ನೂ ಕಳೆದು ವಿಶುದ್ಧ ಚೇತನನಾಗಿ, ಶ್ರೀ ಮಹಾವಿಷ್ಣುವಿನ ಲೋಕವನ್ನೈದುವನು.

೧೫. ಯಾವಾತನು ಪುಣ್ಯಪ್ರದವಾದ ಈ ವಂಶಾನುಕೀರ್ತನವನ್ನು ನಿತ್ಯದಲ್ಲಿಯೂ ಪಠಿಸುತ್ತಾನೆಯೋ, ಅಥವಾ ಶ್ರಾದ್ಧಕಾಲದಲ್ಲಿ ಪಿತೃಗಳಿಗೆ ಕೇಳಿಸುತ್ತಾನೆಯೋ, ಅವನು ಪಿತೃಗಳಿಗೆ ಶ್ರದ್ಧೆಯಿಂದಿತ್ತುದು ಅಕ್ಷಯವಾಗುವುದು.

ರಾಜ್ಞಾಂ ಹಿ ಸೋಮಸ್ಯ ಮಯಾ ತವೇರಿತಾ
ವಂಶಾನುಕೀರ್ತಿರ್ದ್ವಿಜ ಪಾಪನಾಶನೀ ।
ಶೃಣುಷ್ವ ವಿಪ್ರೇಂದ್ರ ಮಯೋಚ್ಯಮಾನಂ
ಮನ್ವಂತರಂ ಚಾಪಿ ಚತುರ್ದಶಾಖ್ಯಮ್ ॥ ೧೬ ॥

ಇತಿ ಶ್ರೀ ನರಸಿಂಹಪುರಾಣೇ ಸೋಮವಂಶಾನುಕೀರ್ತನಂ
ನಾಮ ತ್ರಯೋವಿಂಶತಿತಮೋಽಧ್ಯಾಯಃ

---

೧೬. ಎಲೈ ದ್ವಿಜನಾದ ಭಾರದ್ವಾಜನೇ! ಕೇಳುವವರ ಮತ್ತು ಓದುಗರ ಸಕಲಪಾಪಗಳನ್ನೂ ಕಳೆಯುವ ಚಂದ್ರವಂಶದ ರಾಯರ ವಂಶಾನುಕೀರ್ತಿಯನ್ನು ನಾನು ನಿನಗೆ ಹೇಳಿದೆನು. ಇನ್ನು ನಾನು ಹೇಳುವ ಹದಿನಾಲ್ಕು ಮನ್ವಂತರಗಳನ್ನು ಕೇಳು ; ಎಂದು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಸೋಮವಂಶಾನುಕೀರ್ತನವೆಂಬ
ಇಪ್ಪತ್ತಮೂರನೆಯ ಅಧ್ಯಾಯವು
ಮುಗಿದುದು

ಇಪ್ಪತ್ತಮೂರನೆ ಅಧ್ಯಾಯದ ವಿಷಯಸಂಗ್ರಹವು

ಈ ಅಧ್ಯಾಯದಲ್ಲಿ ಸೂತರು ಭರದ್ವಾಜನಿಗೆ ಶ್ರೀಮನ್ನಾರಾಯಣನ ನಾಭಿ ಕಮಲದಲ್ಲಿ ಮೊದಲು ಬ್ರಹ್ಮನು ಜನಿಸಿದನು. ಅವನ ಮಾನಸಪುತ್ರನು ಮರೀಚಿಯು, ಅವನ ಮಗನು ಕಶ್ಯಪನು. ಅವನಿಂದ ಆದಿತ್ಯನು, ಅವನಿಂದ ಮನುವು, ಆ ಮನುವಿನಿಂದ ಸುರೂಪೆಯಲ್ಲಿ ಸೋಮನು ಜನಿಸಿದನು. ಈ ಚಂದ್ರನ ಸಂತತಿಯಲ್ಲಿ ಪಾಂಡವರು ಹುಟ್ಟಿದರು. ಈ ಸಂತತಿಯು ಕ್ಷೇಮಕರಾಯನಿಂದ ಕೊನೆಗೊಂಡಿತು. ಈ ಚಂದ್ರವಂಶದ ರಾಜರ ವಂಶಾನುಕೀರ್ತನೆವನ್ನು ಕೇಳಿದವನೂ, ಓದಿದವನೂ, ಸಕಲಪಾಪಗಳನ್ನೂ ಕಳೆದು, ಶುದ್ಧನಾಗಿ ಮೋಕ್ಷವನ್ನೈದುವನು, ಎಂದು ನಿರೂಪಿಸಿರುತ್ತಾರೆ.

ಇಂತು ಇಪ್ಪತ್ತಮೂರನೆಯ ಅಧ್ಯಾಯದ ವಿಷಯಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವಂಶಾನುಚರಿತಮ್ ; ಚತುರ್ವಿಂಶತಿತಮೋಽಧ್ಯಾಯಃ

ಚತುರ್ದಶ ಮನ್ವಂತರ ನಿರೂಪಣಮ್.

॥ ಸೂತ ಉವಾಚ ॥

ಪ್ರಥಮಂ ತಾವತ್ಸ್ವಾಯಂಭುವಂ ಮನ್ವಂತರಂ ; ತತ್ಸ್ವರೂಪಂ
ಕಥಿತಮ್ । ಸರ್ಗಾದೌ ಸ್ವಾರೋಚಿಷೋ ನಾಮ ದ್ವಿತೀಯೋ ಮನುಃ ॥೧॥

ತಸ್ಮಿನ್ ಸ್ವಾರೋಚಿಷೇ ಮನ್ವಂತರೇ ವಿಪಶ್ಚಿನ್ನಾಮ ದೇವೇಂದ್ರಃ ।
ಪಾರಾವತಾಃ ಸತುಷಿತಾ ದೇವಾಃ ॥ ೨ ॥

ವಂಶಾನುಚರಿತವು ; ಹದಿನಾಲ್ಕನೆಯ ಅಧ್ಯಾಯವು

ಹದಿನಾಲ್ಕು ಮನ್ವಂತರಗಳು

ಸೂತರು ಭರದ್ವಾಜನಿಗೆ ಇಂತು ನಿರೂಪಿಸುತ್ತಾರೆ:-

೧. ' ಮೊದಲನೆಯದಾದುದು ಸ್ವಾಯಂಭುವ ಮನ್ವಂತರವು. ಅದರ ಸ್ವರೂಪವನ್ನು ಹಿಂದೆಯೇ ಹೇಳಿದುದಾಗಿದೆ. ಸೃಷ್ಟಿಯ ಮೊದಲಲ್ಲಿ ಸ್ವಾರೋಚಿಷನೆಂದು ಪ್ರಸಿದ್ಧನಾದವನು ಎರಡನೆಯ ಮನುವು.

೨. ಆ ಸ್ವಾರೋಚಿಷವೆಂಬ ಮನ್ವಂತರದಲ್ಲಿ ವಿಪಶ್ಚಿತನೆಂಬವನು ದೇವೇಂದ್ರನು. ತುಷಿತರೆಂಬವರಿಂದಕೂಡಿದ ಪಾರಾವತರೆಂಬವರು ದೇವತೆಗಳು.

ಉರ್ಜಸ್ತಂಬಃ ಸುಪ್ರಾಣೋ ದಂತೋ ನಿರ್ಋಷಭೋ
ವರೀಯಾನೀಶ್ವರಃ ಸೋಮಃ ಸಪ್ತರ್ಷಯಶ್ಚೈವಮ್ ।
ಕಿಂ ಪುರುಷಾದ್ಯಾಃ ಸ್ವಾರೋಚಿಷಸ್ಯ ಮನೋಃ
ಪುತ್ರಾ ರಾಜಾನೋ ಭವಂತಿ ॥ ೩ ॥

ತೃತೀಯೋ ಉತ್ತಮೋ ನಾಮ ಮನುಃ ಸುಧಾಮಾನಃ
ಸತ್ಯಾಃ ಶಿವಾಃ । ಪ್ರತರ್ದನಾ ವಂಶವರ್ತಿನಶ್ಚ ದೇವಾಃ ।
ಪಂಚೈತೇ ದ್ವಾದಶಗಣಾಃ ॥ ೪ ॥

ತೇಷಾಂ ಸುಶಾಂತಿರಿಂದ್ರಃ ॥ ೫ ॥

ವದ್ಯಾಃ ಸಪ್ತರ್ಷಯೋಽಭವನ್ । ಅತ್ರ ಪರಶುಚಿತ್ರಾದ್ಯಾ
ಮನೋಃ ಸುತಾಃ ॥ ೬ ॥

---

೩. ಊರ್ಜಸ್ತಂಬನು, ಸುಪ್ರಾಣನು, ಉದಂತನು, ನಿರ್ಯಷಭನು, ವರೀಯನು, ಈಶ್ವರನು, ಮತ್ತು ಸೋಮ ಈ ಏಳ್ವರೂ ಸಪ್ತರ್ಷಿಗಳು. ಕಿಂಪುರುಷನೇ ಮೊದಲಾದ ಸ್ವಾರೋಚಿಷ ಮನುವಿನ ಪುತ್ರರು ರಾಜರಾಗುತ್ತಾರೆ.

೪. ಮೂರನೆಯ ಮನ್ವಂತರದಲ್ಲಿ ಉತ್ತಮನೆಂಬವನು ಮನುವು ಸುಧಾಮರು, ಸತ್ವರು, ಶಿವರು, ಪ್ರತರ್ದನರು, ಮತ್ತು ವಂಶವರ್ತಿಗಳೆಂಬವರು ದೇವತೆಗಳು. ಈ ಐವರೂ ಹನ್ನೆರಡು ಗಣಗಳಾಗಿರುತ್ತಾರೆ.

೫. ಅವರಿಗೆ ಸುಶಾಂತಿಯೆಂಬವನು ಇಂದ್ರನು.

೬. ವದ್ಯರೆಂಬ ಸಪ್ತರ್ಷಿಗಳಾದರು. ಇಲ್ಲಿ ಪರಶುಚಿತ್ರರೇ ಮೊದಲಾದವರು ಮನುವಿನ ಮಕ್ಕಳು.

ಚತುರ್ಥಸ್ತಾಮಸೋ ನಾಮ ಮನುಃ । ತತ್ರ ಮನ್ವಂತರೇ ಸುರಾಃ
ಪರಾಃ ಸತ್ಯಾಃ ಸುಧಿಯಶ್ಚ ಸಪ್ತವಿಂಶತಿಕಾ ಗಣಾಃ ॥ ೭ ॥

ತತ್ರ ಭುಶುಂಡೀ ನಾಮ ದೇವೇಂದ್ರಃ । ಹಿರಣ್ಯರೋಮಾ
ದೇವಶ್ರೀರೂರ್ಧ್ವಬಾಹುರ್ದೇವಬಾಹುಃ । ಸುಧಾಮಾ
ಪರ್ಜನ್ಯೋ ಮುನಿರಿತ್ಯೇತೇ ಸಪ್ತರ್ಷಯಃ ॥ ೮ ॥

ಜ್ಯೋತಿರ್ಧಾಮಾ ಪೃಥುಃ ಕಾಶ್ಯೋಽಗ್ನಿರ್ಧನಕ ಇತ್ಯೇತೇ
ತಾಮಸಸ್ಯ ಮನೋಃ ಪುತ್ರಾ ರಾಜಾನಃ ॥ ೯ ॥

ಪಂಚಮೋ ನಾಮ ರೈವತೋ ಮನುಃ । ತಸ್ಯಾಂತರೇಽಮಿತಾ
ನಿರತಾ ವೈಕುಂಠಾಃ । ಸುಮೇಧಸ ಇತ್ಯೇತೇ ದೇವಗಣಾಃ
ಚತುರ್ದಶಕಾ ಗಣಾಃ । ಸುರಾಂತಕೋ ನಾಮ ದೇವೇಂದ್ರಃ ।
ಸಪ್ತಕಾದ್ಯಾ ಮನೋಃ ಸುತಾ ರಾಜಾನೋ ವೈ ಬಭೂವುಃ ॥ ೧೦ ॥

---

೭. ನಾಲ್ಕನೆಯವನು ತಾಮಸನೆಂಬ ಹೆಸರಿನ ಮನುವು. ಆ ಮನ್ವಂತರದಲ್ಲಿ ಪರರು, ಸತ್ಯರು, ಸುಧಿಯರು ಎಂಬ ದೇವತೆಗಳು ಇಪ್ಪತ್ತೇಳು ಗಣಗಳಾಗಿರುತ್ತಾರೆ.

೮. ಅಲ್ಲಿ ಭುಶುಂಡಿಯೆಂಬ ಹೆಸರಿನವನು ದೇವೇಂದ್ರನು. ಹಿರಣ್ಯರೋಮನು, ದೇವಶ್ರೀ, ಊರ್ಧ್ವಬಾಹು, ದೇವಬಾಹು, ಸುಧಾಮ, ಪರ್ಜನ್ಯ ಮತ್ತು ಮುನಿ ಇವರು ಸಪ್ತರ್ಷಿಗಳು.

೯. ಜ್ಯೋತಿರ್ಧಾಮ, ಪೃಥು, ಕಾಶ್ಯ, ಅಗ್ನಿ, ಧನಕ, ತಾಮಸರೆಂಬ ಮನುವಿನ ಈ ಪುತ್ರರು ರಾಜರುಗಳು.

೧೦. ಐದನೆಯವನು ರೈವತನೆಂಬ ಮನುವು. ಆ ಮನ್ವಂತರದಲ್ಲಿ ಅಮಿತರು, ನಿರತರು, ವೈಕುಂಠರು, ಸುಮೇಧಸರು ಈ ದೇವತೆಗಳ ಸಮುದಾಯುವು ಹದಿನಾಲ್ಕು ಗಣಗಳಾಗಿರುತ್ತದೆ. ಸುರಾಂತಕನೆಂಬ ಹೆಸರಿನವನು ದೇವೇಂದ್ರನು. ಸಪ್ತಕನೇ ಮೊದಲಾದ ಮನುಪುತ್ರರು ರಾಜರಾದರು.

ಶಾಂತಿಃ ಶಾಂತೋ ನವೋ ವಿದ್ವಾಂಸ್ತಪಸ್ವೀ ಮೇಧಾವೀ
ಸುತಪಾಃ ಸಪ್ತರ್ಷಯೋಽಭವನ್ ॥ ೧೧ ॥

ಷಷ್ಠಶ್ಚಾಕ್ಷುಷೋ ನಾಮ ಮನುಃ ಪುರುಶತದ್ಯುಮ್ನಪ್ರಮುಖಾಸ್ತಸ್ಯ
ಸುತಾ ರಾಜಾನಃ । ಸುಶಾಂತಾ ಆದ್ಯಾಃ ಪ್ರಸೂತಾ ಭವ್ಯಾಃ
ಪ್ರಥಿತಾಶ್ಚ ಮಹಾನುಭಾವಾ ಲೇಖಾದ್ಯಾ ಪಂಚೈತೇ
ಹ್ಯಷ್ಟಕಾ ಗಣಾಸ್ತತ್ರ ದೇವಾಃ ॥ ೧೨ ॥

ತೇಷಾಮಿಂದ್ರೋ ಮನೋಜವಃ । ಮೇಧಾ ಸುಮೇಧಾ ವಿರಜಾ
ಹವಿಷ್ಮಾನುತ್ತಮೋ ಮತಿಮಾನ್ನಾಮ್ನಾ ಸಹಿಷ್ಣುಶ್ಚೈತೇ
ಸಪ್ತರ್ಷಯಃ ॥ ೧೩ ॥

ಸಪ್ತಮೋ ವೈವಸ್ವತೋ ನಾಮ ಮನುಃ ಸಾಂಪ್ರತಂ ವರ್ತತೇ ।
ತಸ್ಯ ಪುತ್ರಾ ಇಕ್ಷ್ವಾಕುಪ್ರಭೃತಯಃ ಕ್ಷತ್ರಿಯಾ ಭೂಭುಜಃ ॥ ೧೪ ॥

---

೧೧. ಶಾಂತಿ, ಶಾಂತ, ನವ, ವಿದ್ವಾನ್, ತಪಸ್ವೀ, ಮೇಧಾವೀ, ಸುತಪ ಎಂಬ ಈ ಏಳು ಮಂದಿ ಋಷಿಗಳಾದರು.

೧೨. ಆರನೆಯವನು ಚಾಕ್ಷುಷನೆಂಬ ಮನುವು. ಅವನಿಗೆ ಪುರು, ಶತದ್ಯುಮ್ನ- ಇವರೇ ಮುಂತಾದ ಪುತ್ರರು ರಾಜರಾದರು. ಸುಶಾಂತರೇ ಮೊದಲಾದವರು, ಪ್ರಸೂತರು, ಭವ್ಯರು, ಪ್ರಥಿತರು ಮತ್ತು ಮಹಾನುಭಾವರಾದ ಲೇಖರು ಇವರೇ ಮೊದಲಾದ ಈ ಐದು ಸಂಖ್ಯಾಕರೂ ಎಂಟು ಗಣಗಳಾಗಿ ಆ ಮನ್ವಂತರದಲ್ಲಿ ದೇವತೆಗಳಾದರು.

೧೩. ಅವರಿಗೆ ಮನೋಜವನೆಂಬವನು ಇಂದ್ರನು. ಮೇಧ, ಸುಮೇಧ, ವಿರಜ, ಹವಿಷ್ಮಂತ, ಉತ್ತಮ, ಮತಿವಂತ ಮತ್ತು ಸಹಿಷ್ಣು ಈ ಹೆಸರಿನವರು ಸಪ್ತರ್ಷಿಗಳು.

೧೪. ಏಳನೆಯವನು ವೈವಸ್ವತನೆಂಬ ಮನುವು ಈಗ ಇರುತ್ತಾನೆ. ಅವನ ಮಕ್ಕಳು ಇಕ್ಷ್ವಾಕುವೇ ಮೊದಲಾದ ಕ್ಷತ್ರಿಯರಾದ ಭೂಪತಿಗಳು.

ಆದಿತ್ಯವಸುರುದ್ರಾದ್ಯಾ ದೇವಾಃ ಪುರಂದರೋಽತ್ರ ದೇವೇಂದ್ರಃ ॥ ೧೫ ॥

ವಶಿಷ್ಠಃ ಕಶ್ಯಪೋಽತ್ರಿರ್ಜಮದಗ್ನಿರ್ಗೌತಮವಿಶ್ವಾಮಿತ್ರ
ಭರದ್ವಾಜಾಃ ಸಪ್ತರ್ಷಯೋ ಭವಂತಿ ॥ ೧೬ ॥

ಭವಿಷ್ಯಾಣಿ ಮನ್ವಂತರಾಣಿ ಕಥ್ಯತೇ । ತದ್ಯಥಾ ಆದಿತ್ಯಾತ್ಸಂಜ್ಞಾಯಾಂ
ಜಾತೋ ಯೋ ಮನುಃ ಪೂರ್ವೋಕ್ತಶ್ಛಾಯಾಯಾಮುತ್ಪನ್ನೋ
ಮನುರ್ದ್ವಿತೀಯಃ, ಸ ತು ಪೂರ್ವಜಸ್ಯ ಸಾವರ್ಣಸ್ಯ ಮನ್ವಂತರಂ
ಸಾವರ್ಣಿಕಮಷ್ಟಮಂ ಶೃಣು ॥ ೧೭ ॥

ಮನುಸ್ಸಾವರ್ಣೋಽಷ್ಟಮೋ ಭವಿತಾ । ತತ್ರ ಸುತಪಾದ್ಯಾ
ದೇವಗಣಾಸ್ತೇಷಾಂ ಬಲಿರಿಂದ್ರೋ ಭವಿತಾ ॥ ೧೮ ॥

---

೧೫. ಆದಿತ್ಯ, ರುದ್ರ, ವಸು ಇವರೇ ಮೊದಲಾದವರು ದೇವತೆಗಳು. ಇಲ್ಲಿ ಪುರಂದರನೆಂಬವನು ದೇವೇಂದ್ರನು.

೧೬. ವಸಿಷ್ಠ, ಅತ್ರಿ, ಕಶ್ಯಪ, ಜಮದಗ್ನಿ, ಗೌತಮ, ವಿಶ್ವಾಮಿತ್ರ, ಭರದ್ವಾಜರೆಂಬವರು ಸಪ್ತರ್ಷಿಗಳಾಗಿರುತ್ತಾರೆ.

೧೭. ಮುಂದೆ ಬರುವ ಮನ್ವಂತರಗಳನ್ನು ಇನ್ನು ಹೇಳುತ್ತೇನೆ. ಅದೆಂತೆನೆ :- ಆದಿತ್ಯನಿಂದ ಸಂಜ್ಞೆಯೆಂಬವಳಲ್ಲಿ ಹುಟ್ಟಿದ ಯಾವ ಮನುವೋ, ಅವನೇ ಹಿಂದೆ ನಿರೂಪಿತನಾದವನು. ಛಾಯೆಯೆಂಬವಳಲ್ಲಿ ಹುಟ್ಟಿದ ಮನುವು ಎರಡನೆಯವನು. ಆ ಸಂಜ್ಞಾಪುತ್ರನಾದವನು ಸೂರ್ಯನ ಮೊದಲ ಮಗನಾಗಿ ಸಾವರ್ಣನೆಂಬ ಮನ್ವಂತರಾಧಿಪತಿಯು. ಎಂಟನೆಯ ಸಾವರ್ಣಿಕ ಮನ್ವಂತರವನ್ನು ಈಗ ನಿರೂಪಿಸುವೆನು ; ಕೇಳು.

೧೮. ಸಾವರ್ಣನೆಂಬ ಮನುವು ಎಂಟನೆಯ ಮನ್ವಂತರಾಧಿಪತಿಯಾಗುವನು. ಆ ಮನ್ವಂತರದಲ್ಲಿ ಸುತಪರೇ ಮೊದಲಾದವು ದೇವಗಣಗಳು. ಆ ದೇವತೆಗಳಿಗೆ ಬಲಿಯು ಇಂದ್ರನಾಗುವನು.

ದೀಪ್ತಿಮಾನ್ ಗಾಲವೋ ನಾಮಾ ಕೃಪ ದ್ರೌಣಿ ವ್ಯಾಸ
ಋಷ್ಯಶೃಂಗಾಶ್ಚ ಸಪ್ತರ್ಷಯೋ ಭವಿತಾರಃ । ವಿರಾಜೋರ್ವರೀಯ
ನಿರ್ಮೋಕಾದ್ಯಾಃ ಸಾವರ್ಣಸ್ಯ ಮನೋಃ ಸುತಾ ರಾಜಾನೋ
ಭವಿಷ್ಯಂತಿ ॥ ೧೯ ॥

ನವಮೋ ದಕ್ಷಸಾವರ್ಣಿರ್ಮನುರ್ಭವಿತಾ, ಧೃತಿಃ ಕೀರ್ತಿರ್ದೀಪ್ತಿಃ
ಕೇತುಃ ಪಂಚಹಸ್ತೋ ನಿರಾಮಯಃ ಪೃಥುಶ್ರವಾದ್ಯಾ
ದಕ್ಷಸಾವರ್ಣರಾಜಾನೋಽಸ್ಯ ಮನೋಃ ಪುತ್ರಾಃ ॥ ೨೦ ॥

ಮರೀಚಿಗರ್ಭಾಃ ಸುಧರ್ಮಾಣೋ ಹವಿಷ್ಮಂತಸ್ತತ್ರ
ದೇವತಾಃ ತೇಷಾಮಿಂದ್ರೋಽದ್ಭುತಃ ॥ ೨೧ ॥

ಸವನೋ ಕೃತಿಮಾನ್ ಹವ್ಯೋ ವಸುಮೇಧಾತಿಥಿ
ಜ್ಯೋತಿಷ್ಮಾನಿತ್ಯೇತೇ ಸಪ್ತರ್ಷಯಃ । ದಶಮೋ ಬ್ರಹ್ಮ
ಸಾವರ್ಣಿರ್ಮನುರ್ಭವಿತಾ ॥ ೨೨ ॥

---

೧೯. ದೀಪ್ತಿಮಂತ, ಗಾಲವ, ನಾಮ, ಕೃಪ, ದ್ರೌಣಿ, ವ್ಯಾಸ ಮತ್ತು ಋಷ್ಯಶೃಂಗರು ಸಪ್ತರ್ಷಿಗಳಾಗುವರು. ವಿರಾಜ, ಉರ್ವರೀಯ, ನಿರ್ಮೋಕರೇ ಮೊದಲಾದ ದಕ್ಷಸಾವರ್ಣ ಮನುಪುತ್ರರು ರಾಜರಾಗುವರು.

೨೦. ದಕ್ಷಸಾವರ್ಣಿಯು ಒಂಬತ್ತನೆಯ ಮನುವಾಗುವನು. ಧೃತಿ, ಕೀರ್ತಿ, ದೀಪ್ತಿ, ಕೇತು, ಪಂಚಹಸ್ತ, ನಿರಾಮಯ, ಪೃಥುಶ್ರವ-ಇವರೇ ಮೊದಲಾದ ದಕ್ಷ ಸಾವರ್ಣರಾಜರು ಈ ಮನುವಿನ ಪುತ್ರರು.

೨೧. ಮರೀಚಿಗರ್ಭರು, ಸುಧರ್ಮರು, ಹವಿಷ್ಮಂತರೆಂಬವರು ಆ ಮನ್ವಂತರದಲ್ಲಿ ದೇವತೆಗಳು. ಆ ದೇವತೆಗಳೊಡೆಯನಾದ ಇಂದ್ರನು ಅದ್ಭುತನೆಂಬವನು.

೨೨. ಸವನ, ಕೃತಿಮಂತ, ಹವ್ಯ, ವಸು, ಮೇಧಾತಿಥಿ, ಜ್ಯೋತಿಷ್ಮಂತರೆಂಬವರು ಸಪ್ತರ್ಷಿಗಳಾಗುವರು. ಬ್ರಹ್ಮಸಾವರ್ಣಿಯು ಹತ್ತನೆಯ ಮನುವಾಗುವನು.

ವಿರುದ್ಧಾದಯಸ್ತತ್ರ ದೇವಾಃ । ತೇಷಾಂ ಶಾಂತಿರಿಂದ್ರಃ ॥ ೨೩ ॥

ಹವಿಷ್ಮಾನ್ ಸುಕೃತಿಃ ಸತ್ಯಸ್ತಪೋಮೂರ್ತಿಃ ನಾಭಾಗಃ
ಪ್ರತಿಮೋಕಃ ಸಪ್ತಕೇತುರಿತ್ಯೇತೇ ಸಪ್ತರ್ಷಯಃ ।
ಸುಕ್ಷೇತ್ರ ಉತ್ತಮೋ ಭೂರಿಷೇಣಾದಯೋ
ಬ್ರಹ್ಮಸಾವರ್ಣಿಪುತ್ರಾ ರಾಜಾನೋ ಭವಿಷ್ಯಂತಿ ॥ ೨೪ ॥

ಏಕಾದಶೇ ಮನ್ವಂತರೇ ಧರ್ಮಸಾವರ್ಣಿಕೋ ಮನುಃ ॥ ೨೫ ॥

ಸಿಂಹಸವನಾದಯೋ ದೇವಗಣಾಃ । ತೇಷಾಂ ದಿವಸ್ಪತಿರಿಂದ್ರಃ ॥ ೨೬ ॥

ನಿಮೋಹಿಸ್ತತ್ವದರ್ಶೀ ನಿಕಂಪೋ ನಿರುತ್ಸಾಹೋ ಧೃತಿಮಾನ್
ರುಚ್ಯ ಇತ್ಯೇತೇ ಸಪ್ತರ್ಷಯಃ ॥ ೨೭ ॥

---

೨೩. ವಿರುದ್ಧರೇ ಮೊದಲಾದವರು ಆ ಮನ್ವಂತರದಲ್ಲಿ ದೇವತೆಗಳು. ಅವರಿಗೆ ಶಾಂತಿಯೆಂಬವನು ಇಂದ್ರನು.

೨೪. ಹವಿಷ್ಮಂತ, ಸುಕೃತಿ, ಸತ್ಯ, ತಪೋಮೂರ್ತಿ, ನಾಭಾಗ, ಪ್ರತಿಮೋಕ, ಸಪ್ತಕೇತು ಎಂಬಿವರೇ ಸಪ್ತರ್ಷಿಗಳು. ಸುಕ್ಷೇತ್ರ ಉತ್ತಮ, ಭೂರಿಷೇಣ ಇವರೇ ಮೊದಲಾದ ಬ್ರಹ್ಮಸಾವರ್ಣಿಯ ಪುತ್ರರು ರಾಜರಾಗುವರು.

೨೫. ಹನ್ನೊಂದನೆಯ ಮನ್ವಂತರದಲ್ಲಿ ಧರ್ಮಸಾವರ್ಣಿಕನು ಮನುವು.

೨೬. ಸಿಂಹ, ಸವನರೇ ಮೊದಲಾದವರು ದೇವಗಣಗಳು. ಅವರಿಗೆ ದಿವಸ್ಪತಿಯೆಂಬವನು ಇಂದ್ರನು.

೨೭. ನಿಮೋಹಿ, ತತ್ವದರ್ಶಿ, ನಿಕಂಪ, ನಿರುತ್ಸಾಹ, ಧೃತಿಮಂತ, ರುಚ್ಯ ಇವರು ಸಪ್ತರ್ಷಿಗಳು.

ಚಿತ್ರಸೇನವಿಚಿತ್ರಾದ್ಯಾಃ ಧರ್ಮಸಾವರ್ಣಿಪುತ್ರಾ ಭೂಭೃತೋ
ಭವಿಷ್ಯಂತಿ ರುದ್ರಸಾವರ್ಣಿರ್ಭವಿತಾ ದ್ವಾದಶೋ ಮನುಃ ॥ ೨೮ ॥

ಕೃತಧಾಮಾ ತತ್ರೇಂದ್ರೋ ಹರಿತಾ ರೋಹಿತಾಃ ಸುಮನಸಃ
ಸುಕರ್ಮಾಣಃ ಸುತಪಾಶ್ಚ ದೇವಾಃ ॥ ೨೯ ॥

ತಪಸ್ವೀ ಚಾರುತಪಾಃ ತಪೋಮೂರ್ತಿಃ ತಪೋರತಿಸ್ತಾಪೋ
ಧೃತಿರ್ಜ್ಯೋತಿಸ್ತಪ ಇತ್ಯೇತೇ ಸಪ್ತರ್ಷಯಃ ॥ ೩೦ ॥

ದೇವವಾನ್ ದೇವಶ್ರೇಷ್ಠಾದ್ಯಾಸ್ತಸ್ಯ ಮನೋಃ ಸುತಾಃ
ಭೂಪಾಲಾ ಭವಿಷ್ಯಂತಿ ॥ ೩೧ ॥

ತ್ರಯೋದಶೋ ರುಚಿರ್ನಾಮ ಮನುಃ । ಸ್ರಗ್ವೀ, ಬಾಣಃ
ಸುಧರ್ಮಾಣಪ್ರಭೃತಯೋ ದೇವಗಣಾಃ ।
ತೇಷಾಮಿಂದ್ರ ಋಷಭೋ ನಾಮ ಭವಿತಾ ॥ ೩೨ ॥

---

೨೮. ಚಿತ್ರಸೇನ, ವಿಚಿತ್ರ ಇವರೇ ಮೊದಲಾದ ಧರ್ಮಸಾವರ್ಣಿಯ ಪುತ್ರರು ಭೂಪತಿಗಳಾಗುವರು. ರುದ್ರಸಾವರ್ಣಿಯೆಂಬವನು ಹನ್ನೆರಡನೆಯ ಮನುವಾಗುವನು.

೨೯. ಆ ಮನ್ವಂತರದಲ್ಲಿ ಕೃತಧಾಮನೆಂಬವನು ಇಂದ್ರನು. ಹರಿತರು, ರೋಹಿತರು, ಸುಮನಸರು, ಸುಕರ್ಮರು, ಸುತಪರು— ಇವರು ದೇವತೆಗಳು.

೩೦. ತಪಸ್ವೀ, ಚಾರುತಪ, ತಪೋಮೂರ್ತಿ, ತಪೋರತಿ, ತಾಪೋಧೃತಿ, ಜ್ಯೋತಿ ಮತ್ತು ತಪ ಇವರು ಸಪ್ತರ್ಷಿಗಳು.

೩೧. ದೇವವಂತ, ದೇವಶ್ರೇಷ್ಠ ಇವರೇ ಮೊದಲಾದ ಮನುವಿನ ಸುತರು ರಾಜರಾಗುವರು.

೩೨. ರುಚಿಯೆಂಬವನು ಹದಿಮೂರನೆಯ ಮನುವು. ಸ್ರಗ್ವಿಗಳು, ಬಾಣರು, ಸುಧರ್ಮರು—ಇವರೇ ಮೊದಲಾದುವು ದೇವತೆಗಳ ಗಣಗಳು. ಅವರಿಗೆ ಋಷಭನೆಂಬವನು ಇಂದ್ರನಾಗುವನು.

ನಿಶ್ಚರೋಽಗ್ನಿತೇಜಾ ವಪುಷ್ಮಾನ್ ಧೃಷ್ಟೋ ವಾರುಣಿರ್ಹವಿಷ್ಮಾನ್
ನಹುಷೋ ಭವ್ಯ ಇತಿ ಸಪ್ತರ್ಷಯಃ । ಸುಧರ್ಮಾ ದೇವಾನೀಕಾದಯಃ
ತಸ್ಯ ಮನೋಃ ಪುತ್ರಾಃ ಪೃಥ್ವೀಶ್ವರಾ ಭವಿಷ್ಯಂತಿ ॥ ೩೩ ॥

ಭೌಮಶ್ಚತುರ್ದಶೋ ಮನುರ್ಭವಿತಾ । ಸುರುಚಿಸ್ತತ್ರೇಂದ್ರಃ ।
ಚಕ್ಷುಷ್ಮಂತಃ ಪವಿತ್ರಃ ಕನಿಷ್ಠಾಭಾ ದೇವ ಗಣಾಃ ॥ ೩೪ ॥

ಅವಿಬಾಹು ಶುಚಿಶುಕ್ರ ಮಾಧವ ಶಿವಾಮುಭಿಜಿತಶ್ವಾಸಾ
ಇತ್ಯೇತೇ ಸಪ್ತರ್ಷಯಃ । ಉರುಗಂಭೀರಬ್ರಹ್ಮಾದ್ಯಾಸ್ತಸ್ಯ
ಮನೋಃ ಸುತಾ ರಾಜಾನಃ ॥ ೩೫ ॥

ಏವಂ ತೇ ಚತುರ್ದಶಮನ್ವಂತರಾಣಿ ಕಥಿತಾನಿ
ರಾಜಾನಶ್ಚ ಯೈರಿಯಂ ವಸುಧಾ ಪಾಲ್ಯತೇ ॥ ೩೬ ॥

---

೩೩. ನಿಶ್ಚರ, ಅಗ್ನಿತೇಜ, ವಪುಷ್ಮಂತ, ಧೃಷ್ಟ, ವಾರುಣಿ, ಹವಿಷ್ಮಂತ, ನಹುಷ, ಭವ್ಯರೆಂಬ ಸಪ್ತರ್ಷಿಗಳು. ಸುಧರ್ಮ, ದೇವಾನೀಕ–ಇವರೇ ಮೊದಲಾದ ಆ ಮನುವಿನ ಪುತ್ರರು ಪೊಡವಿಯೊಡೆಯರಾಗುವರು.

೩೪. ಭೌಮನೆಂಬವನು ಹದಿನಾಲ್ಕನೆಯ ಮನುವಾಗುವನು. ಆ ಮನ್ವಂತರದಲ್ಲಿ ಸುರುಚಿಯು, ಇಂದ್ರನು. ಚಕ್ಷುಷ್ಮಂತ, ಪವಿತ್ರ, ಕನಿಷ್ಠಾಭರೆಂಬಿವು ದೇವ ಗಣಗಳು.

೩೫. ಅವಿಬಾಹು, ಶುಚಿ, ಶುಕ್ರ, ಮಾಧವ, ಶಿವ, ಅಮುಭಿ, ಜಿತಶ್ವಾಸ ಎಂಬಿವರು ಸಪ್ತರ್ಷಿಗಳು. ಉರು, ಗಂಭೀರ, ಬ್ರಹ್ಮ ಇವರೇ ಮೊದಲಾದ ಆ ಮನುವಿನ ಮಕ್ಕಳು ರಾಜರು.

೩೬. ಎಲೈ ಭಾರದ್ವಾಜನೇ! ಇಂತು ನಿನಗೆ ಹದಿನಾಲ್ಕು ಮನ್ವಂತರಗಳನ್ನು ಹೇಳಿದುದಾಯಿತು. ಅಂತೆಯೇ ಯಾವ ರಾಯರಿಂದ ಈ ಭೂಮಿಯು ರಕ್ಷಿತವಾಗುತ್ತದೆಯೆಂಬುದನ್ನು ಹೇಳಿದುದಾಯಿತು.

ಮನುಸ್ಸಪ್ತರ್ಷಯೋ ದೇವಾ ಭೂಪಾಲಾಶ್ಚ ಮನೋಃ ಸುತಾಃ ।
ಮನ್ವಂತರೇ ಭವಂತ್ಯೇಕೇ ಶಕ್ರಾಶ್ಚೈವಾಧಿಕಾರಿಣಃ ॥ ೩೭ ॥

ಚತುರ್ದಶಭಿರೇತೈಸ್ತು ಗತೈರ್ಮನ್ವಂತರೈರ್ದ್ವಿಜ ।
ಸಹಸ್ರಯುಗಪರ್ಯಂತಃ ಕಾಲೋ ಗಚ್ಛತಿ ವಾಸರಃ ॥ ೩೮ ॥

ತಾವತ್ಪ್ರಮಾಣಾ ಚ ನಿಶಾ ತತೋ ಭವತಿ ಸತ್ತಮ ।
ಬ್ರಹ್ಮರೂಪಧರಃ ಶೇತೇ ಸರ್ವಾತ್ಮಾ ನೃಹರಿಃ ಸ್ವಯಮ್ ॥ ೩೯ ॥

ತ್ರೈಲೋಕ್ಯಮಖಿಲಂ ಗ್ರಸ್ತ್ವಾ ಭಗವಾನಾದಿಕೃದ್ವಿಭುಃ ।
ಸ್ವಮಾಯಾಮಾಸ್ಥಿತೋ ವಿಪ್ರ ಸರ್ವರೂಪೀ ಜನಾರ್ದನಃ ॥ ೪೦ ॥

---

೩೭. ಒಂದು ಮನ್ವಂತರದಲ್ಲಿ ಒಬ್ಬ ಮನು, ಸಪ್ತರ್ಷಿಗಳು, ದೇವತೆಗಳು, ಮನುವಿನ ಮಕ್ಕಳಾದ ರಾಜರು ಮತ್ತು ದೇತೆಗಳೊಡೆಯನಾದ ಇಂದ್ರನು-ಇವರು ಇರುತ್ತಾರೆ.

೩೮. ಎಲೈ ದ್ವಿಜನೇ ! ಕೇಳು ;. ಈ ಹದಿನಾಲ್ಕು ಮನ್ವಂತರಗಳು ಒಮ್ಮೆ ಕಳೆಯಲು ಸಾವಿರಯುಗಪರ್ಯಂತವಾದ ಹಗಲಿನ ಕಾಲವಾಗುತ್ತದೆ.

೩೯. ಎಲೈ ಸತ್ತಮನೇ ! ಅಷ್ಟೇ ಪರಿಮಾಣದ ಇರುಳು ಆಗುವುದು. ಬ್ರಹ್ಮರೂಪವನ್ನು ತಾಳಿದ ಸರ್ವಾಂತರ್ಯಾಮಿಯಾದ ಶ್ರೀ ನರಸಿಂಹನು ಆಗ ತಾನೇ ಯೋಗನಿದ್ರಾಸಕ್ತನಾಗಿ ಮಲಗುತ್ತಾನೆ.

೪೦. ಎಲೈ ವಿಪ್ರನೇ ! ಕೇಳು ; ಈ ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಲೋಕಗಳನ್ನು ಲಯಮಾಡಿ ಸೂಕ್ಷ್ಮರೂಪದಿಂದ ತನ್ನ ಉದರದಲ್ಲಿ ಧರಿಸುವವನೂ, ಭಗವಂತನೂ, ಈ ಜಗತ್ತಿಗೆ ಸೃಷ್ಟಿಯನ್ನೆಸಗುವವನೂ, ವ್ಯಾಪ್ತನೂ, ಸರ್ವವಸ್ತುಗಳಲ್ಲಿ ಅಂತರ್ಯಾಮಿಯಾಗಿರುವುದರಿಂದಲೂ, ಸರ್ವವಸ್ತುಗಳ ಸ್ವರೂಪ ಪ್ರಮಿತಿ ಪ್ರವೃತ್ತಿಗಳನ್ನು ಕೊಡುವವನಾದುದರಿಂದಲೂ, ಸರ್ವರೂಪಿಯೆನಿಸುವ ಜನಾರ್ದನನು ಸ್ವಾಧೀನವಾದ ಪ್ರಕೃತಿಯನ್ನೂ, ಇಚ್ಛೆಯನ್ನೂ ಆಶ್ರಯಿಸುತ್ತಾನೆ.

ಅಥ ಪ್ರಬುದ್ಧೋ ಭಗವಾನ್ ಯಥಾಪೂರ್ವಂ ತಥಾ ಪುನಃ ।
ಯುಗವ್ಯವಸ್ಥಾಂ ಕುರುತೇ ಸೃಷ್ಟಿಂ ಚ ಪುರುಷೋತ್ತಮ ॥ ೪೧ ॥

ಏತೇ ತವೋಕ್ತಾ ಮನವೋಽಮರಾಶ್ಚ
ಪುತ್ರಾಶ್ಚ ಭೂಪಾ ಮುನಯಶ್ಚ ಸರ್ವೇ ।
ವಿಭೂತಯಸ್ತಸ್ಯ ಸ್ಥಿತೌ ಸ್ಥಿತಸ್ಯ
ತಸ್ಯೈವ ಸರ್ವಂ ತ್ವಮವೈಹಿ ವಿಪ್ರ ॥ ೪೨ ॥

ಇತಿ ಶ್ರೀ ನರಸಿಂಹಪುರಾಣೇ ಚತುರ್ದಶಮನ್ವಂತರ ನಿರೂಪಣಂ
ನಾಮ ಚತುರ್ವಿಂಶತಿತಮೋಽಧ್ಯಾಯಃ

---

೪೧. ಪುರುಷೋತ್ತಮನಾದ ಭಗವಂತನು ಅನಂತರದಲ್ಲಿ ತನ್ನ ಯೋಗನಿದ್ರೆಯಿಂದೆಚ್ಚೆತ್ತವನಾಗಿ, ಮೊದಲಿನಂತೆಯೇ ಪುನಃ ಯುಗವ್ಯವಸ್ಥೆಯುಳ್ಳ ಸೃಷ್ಟಿಯನ್ನೆಸಗುತ್ತಾನೆ.

೪೨. ಎಲೈ ವಿಪ್ರನೇ! ನಿನಗೆ ಹೇಳಿದ ಆ ಮನುಗಳು, ಆ ದೇವತೆಗಳು, ಆ ಮನುಪುತ್ರರಾದ ರಾಯರುಗಳು, ಆ ಸಪ್ತರ್ಷಿಗಳು ಎಲ್ಲರೂ ಲೋಕರಕ್ಷಣೆಯಲ್ಲಿ ತೊಡಗಿರುವ ಆ ಶ್ರೀ ಮಹಾವಿಷ್ಣುವಿನ ವಿಶೇಷ ಸನ್ನಿಧಾನವುಳ್ಳವರೆಂದೂ, ಇವೆಲ್ಲವೂ ಆ ಭಗವಂತನ ಅಧೀನವಾಗಿರುವುವೆಂದೂ ನೀನು ತಿಳಿಯುವವನಾಗು.'

ಎಂದು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹ ಪುರಾಣದಲ್ಲಿ ಹದಿನಾಲ್ಕು ಮನ್ವಂತರಗಳ ನಿರೂಪಣೆಯೆಂಬ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಇಪ್ಪತ್ತನಾಲ್ಕನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ, ಸೂತರು ಭರದ್ವಾಜನಿಗೆ ಸ್ವಾಯಂಭುವ ಮನ್ವಂತರಗಳಲ್ಲಿಯ ಮನು, ಮನುಪುತ್ರರಾದ ರಾಜರು, ದೇವತೆಗಳು, ಇಂದ್ರ ಮತ್ತು ಸಪ್ತರ್ಷಿಗಳು– ಇವರುಗಳಾರೆಂಬುದನ್ನು ವಿವರವಾಗಿ ಹೇಳಿ, ಆ ಹದಿನಾಲ್ಕು ಮನ್ವಂತರಗಳಲ್ಲಿ ಬ್ರಹ್ಮನಿಗೆ ಒಂದು ಹಗಲು: ಅದರಲ್ಲಿ ಚತುರ್ಯುಗಗಳು, ಒಂದು ಸಾವಿರಗಳಾಗಿ ಹೋಗುವುವು. ಅನಂತರದಲ್ಲಿ ಬ್ರಹ್ಮನಲ್ಲಿ ಬ್ರಹ್ಮರೂಪದಿಂದಿರುವ ಮಹಾವಿಷ್ಣುವು ಮೂರು ಲೋಕಗಳಿಗೂ ಅಳಿವನ್ನೆಸಗಿ, ಎಲ್ಲವನ್ನೂ ತನ್ನಲ್ಲಿ ಸೂಕ್ಷ್ಮರೂಪದಿಂದಿರುವದನ್ನು ಧರಿಸಿ, ಯೋಗನಿದ್ರಾಸಕ್ತನಾಗಿರುವನು. ಅಷ್ಟೇ ಕಾಲವು ರಾತ್ರಿಯಾಗಿರುವುದು. ಆ ರಾತ್ರಿ ಕಾಲ ಕಳೆದಮೇಲೆ ಅವನು ಯೋಗನಿದ್ರೆಯಿಂದೆಚ್ಚೆತ್ತು ಪುನಃ ಮೊದಲಿನಂತೆಯೇ ಯುಗವ್ಯವಸ್ಥೆಯುಳ್ಳ ಸೃಷ್ಟಿಯನ್ನೆಸಗುವನು. ಇದು ದೈನಂದಿನ ಸೃಷ್ಟಿಯೆನಿಸುವುದು. ಈ ಮನ್ವಾದಿಗಳೆಲ್ಲರೂ ಸ್ಥಿತಿಕಾರ್ಯದಲ್ಲಿ ತೊಡಗಿದ ಶ್ರೀ ನರಸಿಂಹನ * ವಿಭೂತಿಗಳಾಗಿರುತ್ತಾರೆ. ಇವರೆಲ್ಲರೂ ಆ ಪರಮಾತ್ಮನ ಅಧೀನರು ಎಂದು ನಿರೂಪಿಸಿರುತ್ತಾರೆ.

ಇಂತು ಇಪ್ಪತ್ತನಾಲ್ಕನೆಯ ಅಧ್ಯಾಯದ ವಿಷಯ ಸಂಗ್ರಹವು.

* ವಿಭೂತಿ :— " ಸನ್ನಿಧಾನಂ ತು ತತ್ಪ್ರೋಕ್ತಂ ಸಾಮರ್ಥ್ಯವ್ಯಂಜನಂ ವಿಭೋಃ ॥
ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾಗಚ್ಛ ತ್ವಂ ಮಮ ತೇಜೋಂಶಸಂಭವಮ್ ॥"
(ಶ್ರೀಮದ್ಭಗವದ್ಗೀತಾ)

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವಂಶಾನುಚರಿತಮ್ ; ಪಂಚವಿಂಶತಿತಮೋಽಧ್ಯಾಯಃ

ಇಕ್ಷ್ವಾಕು ಚರಿತಮ್.

॥ ಶ್ರೀ ಸೂತ ಉವಾಚ ॥

ಅತಃ ಪರಂ ಪ್ರವಕ್ಷ್ಯಾಮಿ ವಂಶಾನುಚರಿತಂ ಶುಭಮ್ ।
ಶೃಣ್ವತಾಮಪಿ ಪಾಪಘ್ನಂ ಸೂರ್ಯಸೋಮನೃಪಾತ್ಮಕಮ್ ॥ ೧ ॥

ಸೂರ್ಯವಂಶೋದ್ಭವೋ ಯೋ ವೈ ಮನುಪುತ್ರಃ ಪುರೋದಿತಃ ।
ಇಕ್ಷ್ವಾಕುರ್ನಾಮ ಭೂಪಾಲಶ್ಚರಿತಂ ತಸ್ಯ ಮೇ ಶೃಣು ॥ ೨ ॥

ಇಪ್ಪತ್ತೈದನೆಯ ಅಧ್ಯಾಯವು

ಇಕ್ಷ್ವಾಕು ಚರಿತವು

ಶ್ರೀ ಸೂತರು ಭರದ್ವಾಜನಿಗೆ ಇಂತು ಹೇಳುತ್ತಾರೆ : —

೧. "ಎಲೈ ಭರದ್ವಾಜನೇ ! ಕೇಳು ; ಇನ್ನು ಮುಂದೆ ಸೂರ್ಯ ಮತ್ತು ಚಂದ್ರ ಈ ವಂಶಗಳ ರಾಜರುಗಳ ರೂಪವಾದ ವಂಶಾನುಚರಿತವನ್ನು ಹೇಳುವೆನು. ಈ ವಂಶಾನುಚರಿತೆಯಾದುದು ಮಂಗಳಕರವೂ, ಕೇಳುವವರ ಪಾಪಗಳಗಳನ್ನು ಎಸಗುವುದೂ, ಆಗಿರುವುದು.

೨. ಸೂರ್ಯವಂಶದಲ್ಲಿ ಹುಟ್ಟಿದ ಮನುಪುತ್ರನಾದವನು ಇಕ್ಷ್ವಾಕುವೆಂದು ನಾನು ಯಾವನನ್ನು ನಿನಗೆ ಹಿಂದೆ ಹೇಳಿದೆನೋ, ಆ ಇಕ್ಷ್ವಾಕುರಾಯನ ಚರಿತ್ರೆಯನ್ನು ಹೇಳುವೆನು; ಅದನ್ನು ಕೇಳು.

ಆಸೀದ್ದ್ವಿಜ ಮಹಾಭಾಗ ಪುರೀ ದಿವ್ಯಾ ಸುಶೋಭನಾ ।
ಸರಯೂತೀರಮಾಸಾದ್ಯ ಅಯೋಧ್ಯಾ ನಾಮ ನಾಮತಃ ॥ ೩ ॥

ಅಮರಾವತ್ಯತಿಶಯಾ ತ್ರಿಂಶದ್ಯೋಜನ ಚಾಲಿನೀ ।
ಹಸ್ತ್ಯಶ್ವರಥಪತ್ತ್ಯೌಘೈರ್ದ್ರುಮೈಃ ಕಲ್ಪದ್ರುಮಪ್ರಭೈಃ ॥ ೪ ॥

ಪ್ರಾಕಾರಾಟ್ಟಪ್ರತೋಲೀಭಿಸ್ತೋರಣೈಃ ಕಾಂಚನಪ್ರಭೈಃ ।
ವಿರಾಜಮಾನಾ ಸರ್ವತ್ರ ಸುವಿಭಕ್ತಚತುಷ್ಪಥಾ ॥ ೫ ॥

ಅನೇಕಭೂಮಿಪ್ರಾಸಾದಾ ಬಹುಭಾಂಡಸುವಿಕ್ರಯಾ ।
ಪದ್ಮೋತ್ಪಲಶುಭೈಃ ಸ್ತೋಯೈರ್ವಾಪೀಭಿರುಪಶೋಭಿತಾ ॥ ೬ ॥

ದೇವತಾಯತನೈರ್ದಿವ್ಯೈರ್ವೇದಘೋಷೈಶ್ಚ ಶೋಭಿತಾ ।
ವೀಣಾವೇಣುಮೃದಂಗೈಶ್ಚ ಶಬ್ದೈರುತ್ಕೃಷ್ಟಕೈರ್ಯುತಾ ॥ ೭ ॥

---

೩. ಎಲೈ ಪುಣ್ಯಶಾಲಿಯಾದ ಭರದ್ವಾಜನೇ ! ಕೇಳು ; ಈ ಪೊಡವಿಯಲ್ಲಿ ಸರಯೂನದಿಯ ದಡದಲ್ಲಿ ಹೆಸರಿನಿಂದ ಅಯೋಧ್ಯೆಯೆಂಬ ಪ್ರಸಿದ್ಧವಾದ ಉತ್ತಮವೂ, ಸುಂದರವೂ ಆದ ಪಟ್ಟಣವಿದ್ದಿತು.

೪-೧೪. ಆ ಅಯೋಧ್ಯೆಯು ಅಮರಾವತಿಯನ್ನು ಮೀರಿದುದಾಗಿಯೂ ಮೂವತ್ತು ಗಾವುದ ಚತುರಸ್ರವಾಗಿಯೂ, ಆನೆ, ಕುದುರೆ, ರಥ, ಕಾಲಾಳುಗಳೆಂಬ ಚತುರಂಗ ಸೈನ್ಯಗಳಿಂದಲೂ, ಕಲ್ಪವೃಕ್ಷಗಳಿಗೆಣೆಯಾದ ಮರಗಳಿಂದಲೂ, ಪೌಳಿಯ ಗೋಡೆಗಳು, ಅಂಗಡಿಗಳು, ದೊಡ್ಡರಸ್ತೆಗಳು, ಇವುಗಳಿಂದಲೂ, ಸುವರ್ಣಕಾಂತಿಯುಳ್ಳ ಪುರದ್ವಾರಗಳಿಂದಲೂ ಪ್ರಕಾಶಿಸುವುದಾಗಿಯೂ, ಎಲ್ಲೆಡೆಗಳಲ್ಲಿಯೂ ಚೆನ್ನಾಗಿ ವಿಭಾಗಿಸಿದ ಚೌಪಥವುಳ್ಳದ್ದಾಗಿಯೂ, ಅನೇಕಗಳಾದ ಉಪ್ಪರಿಗೆಯ ಮನೆಗಳುಳ್ಳದ್ದಾಗಿಯೂ, ಅನೇಕ ಪಾತ್ರೆಗಳ ಅಂಗಡಿಗಳುಳ್ಳದ್ದಾಗಿಯೂ, ಕೆಂದಾವರೆ, ಕನ್ನೈದಿಲೆಗಳಿಂದಲಂಕೃತಗಳಾದ ಅನೇಕ ಕೊಳ ಭಾವಿಗಳಿಂದ ಮನೋಹರವಾಗಿಯೂ, ವೀಣಾವೇಣು, ಮೃದಂಗಗಳ ಮನೋಹರಗಳಾದ ಶಬ್ದಗಳಿಂದ ಕೂಡಿಯೂ,

ಶಾಲೈಸ್ತಾಲೈರ್ನಾರಿಕೇರೈಃ ಪನಸಾಮಲಜಂಬುಕೈಃ ।
ಶಥೈವಾಮ್ರಕಪಿತ್ಥಾದ್ಯೈರಶೋಕೈರುಪಶೋಭಿತಾ ॥ ೮ ॥

ಆರಾಮ್ಯೈರ್ವಿವಿಧೈರ್ಯುಕ್ತಾ ಸರ್ವತ್ರ ಫಲಪಾದಪೈಃ ।
ಮಲ್ಲಿಕಾಮಾಲತೀಜಾತಿಪಾಟಲಾನಾಗಚಂಪಕೈಃ ॥ ೯ ॥

ಕರವೀರೈಃ ಕರ್ಣಿಕಾರೈಃ ಕೇತಕೀಭಿರಲಂಕೃತಾ ।
ಕದಲೀ ಜಾತಿಕದಲೀ (ಲವಲೀ ಜಾತಿ) ಮಾತುಲಂಗ ಮಹಾಫಲೈಃ ॥೧೦॥

ಕ್ವಚಿಚ್ಚಂದನ ಗಂಧಾದ್ಯೈರ್ನಾರಂಗೈಶ್ಚ ಸುಶೋಭಿತಾ ।
ನಿತ್ಯೋತ್ಸವಪ್ರಮುದಿತಾ ಗೀತವಾದ್ಯವಿಚಕ್ಷಣೈಃ ।
ನರನಾರೀಭಿರಾಢ್ಯಾಭೀ ರೂಪದ್ರವಿಣಪ್ರೇಕ್ಷಣೈಃ ॥ ೧೧ ॥

ನಾನಾಜನಪದಾಕೀರ್ಣಾ ಪತಾಕಾಧ್ವಜಶೋಭಿತಾ ।
ದೇವತುಲ್ಯಪ್ರಭಾಯುಕ್ತೈರ್ನೃಪಪುತ್ರೈಶ್ಚ ಸಂಯುತಾ ॥ ೧೨ ॥

ಸರ್ಜ, ತಾಳೆ, ತೆಂಗು, ಹಲಸು, ನೆಲ್ಲಿ, ನೇರಳೆ, ಮಾವು, ಬೇವು ಮತ್ತು ಅಸುಗೆ ಇವೇ ಮೊದಲಾದ ಮರಗಳಿಂದ ಅಲಂಕೃತವಾದುದಾಗಿಯೂ, ಎಲ್ಲೆಡೆಗಳಲ್ಲಿಯೂ ಹಣ್ಣಿನಮರಗಳಿಂದಲೂ, ಮಲ್ಲಿಗೆ, ಇರವಂತಿಗೆ, ಜಾಜಿ, ಪಾದರಿ, ನಾಗಸಂಪಿಗೆ, ಕಣಿಗಲೆ, ಕರ್ಣಿಕಾರ, ಕೇದಗೆಗಳಿಂದಲೂ, ಬಾಳೆ, ಲವಲೀ, ಜಾತಿ, ಮೊದಲ ಈ ಮಹಾಫಲಗಳುಳ್ಳ ಗಿಡಮರಗಳಿಂದಲೂ ಕೂಡಿ ರಮ್ಯವಾದ ಅನೇಕ ತೆರನಾದ ಆರವೆಗಳುಳ್ಳದ್ದಾಗಿಯೂ, ಕೆಲವೆಡೆಗಳಲ್ಲಿ ಶ್ರೀಗಂಧದ ಮರಗಳಿಂದಲೂ ಕಿತ್ತಳೆಮರಗಳಿಂದಲೂ, ಮನೋಹರವಾಗಿಯೂ, ಹಾಡುಗಾರಿಕೆ, ವಾದ್ಯಗಳ ಬಾಜನ–ಇವುಗಳಲ್ಲಿ ಕುಶಲರಾದವರಿಂದ ನಿತ್ಯೋತ್ಸವ ಸಂತೋಷಗಳುಳ್ಳುದಾಗಿಯೂ, ಶ್ರೀಮಂತರಾದ, ರೂಪದಿಂದ ಮತ್ತು ಐಶ್ವರ್ಯಗಳಿಂದ ಅಂದಗಾಣುವ ಸ್ತ್ರೀ ಪುರುಷರಿಂದ ಕೂಡಿದುದಾಗಿಯೂ, ಅನೇಕ ಕೋಮುವಾರು ಪ್ರಜೆಗಳಿಂದ ತುಂಬಿದುದಾಗಿಯೂ, ಪಳದಿಗೆ

ಸುರೂಪಾಭಿರ್ವರಸ್ತ್ರೀಭಿರ್ದೇವಸ್ತ್ರೀಭಿರಿವಾವೃತಾ ।
ವಿಪ್ರೈಃ ಸತ್ಕವಿಭಿರ್ಯುಕ್ತಾ ಬೃಹಸ್ಪತಿಸಮಪ್ರಭೈಃ ॥ ೧೩ ॥

ವಣಿಗ್ಜನೈಸ್ತಥಾ ಪೌರೈಃ ಕಲ್ಪವೃಕ್ಷವರೈರ್ಯುತಾ ।
ಅಶ್ವೈರುಚ್ಚೈಃಶ್ರವಸ್ತುಲ್ಯೈರ್ದಂತಿಭಿರ್ದಿಗ್ಗಜೈರಿವ ॥ ೧೪ ॥

ಇತಿ ನಾನಾವಿಧೈರ್ಭಾವೈರಯೋಧ್ಯೇಂದ್ರಪುರೀಸಮಾ ।
ತಾಂ ದೃಷ್ಟ್ವಾ ನಾರದಃ ಶ್ಲೋಕಂ ಸಭಾಮಧ್ಯೇ ಪುರೋಕ್ತವಾನ್ ॥ ೧೫ ॥

ಸ್ವರ್ಗಂ ವೈ ಸೃಜ್ಯಮಾನಸ್ಯ ವ್ಯರ್ಥಂ ಸ್ಯಾತ್ಪದ್ಮಜನ್ಮನಃ ।
ಜಾತಾಽಯೋಧ್ಯಾಧಿಕಾ ಸ್ವರ್ಗಾತ್ಕಾಮಭೋಗಸಮನ್ವಿತಾ ॥ ೧೬ ॥

ಮತ್ತು ಕುರುಹುಗಳಿಂದ ಅಂದಗಾಣುವುದೂ, ದೇವತೆಗಳಿಗೆಣೆಯಾದ ಕಾಂತಿಯುಳ್ಳ ರಾಯಕುವರರಿಂದ ಕೂಡಿದುದೂ, ದೇವತಾಸ್ತ್ರೀಯರಂತೆ (ಒಳ್ಳೆಯ ರೂಪಿನ) ಸುರೂಪವುಳ್ಳ ಉತ್ತಮಪೆಂಡಿರಿಂದ ಕೂಡಿದುದೂ, ಬೃಹಸ್ಪತಿಗೆ ಸಮವಾದತೇಜಸ್ಸುಳ್ಳ ಬ್ರಾಹ್ಮಣರಿಂದಲೂ, ಒಳ್ಳೆಯ ಕಬ್ಬಿಗರಿಂದಲೂ ಕೂಡಿರುವುದೂ, ಪರದರಿಂದಲೂ, ಹಾಗೆಯೇ ಕಲ್ಪವೃಕ್ಷಗಳಂತೆ ಶ್ರೇಷ್ಠರಾದ ಪಟ್ಟಣಿಗರಿಂದಲೂ ಕೂಡಿಯೂ, ದೇವೇಂದ್ರನ ಕುದುರೆಯಾದ ಉಚ್ಚೈಶ್ರವಸ್ಸಿಗೆ ದೊರೆಯಾದ ಕುದುರೆಗಳಿಂದಲೂ, ದೆಸೆಯಾನೆಗಳಿಗೆಣೆಯಾದ ದಂತಿಗಳಿಂದಲೂ ಕೂಡಿದುದಾಗಿಯೂ, ಬಹು ಮನೋಹರವಾಗಿರುವುದು.

೧೫. ಅಯೋಧ್ಯೆಯು ನಾನಾವಿಧಗಳಾದ ಪರಿಸ್ಥಿತಿಗಳಿಂದ ಇಂದ್ರನ ಅಮರಾವತಿಯನ್ನು ಹೋಲುವುದಾಗಿದ್ದಿತು. ಪೂರ್ವದಲ್ಲಿ ಅಂತಹ ಅಯೋಧ್ಯೆಯನ್ನು ಕಂಡು, ನಾರದ ಮುನಿಯು ಅಲ್ಲಿಯ ರಾಜಸಭೆಯ ನಡುವೆ ಈ ಶ್ಲೋಕವನ್ನು ಹೇಳಿದನು.

೧೬. ಸ್ವರ್ಗಲೋಕವನ್ನು ಸೃಷ್ಟಿಸುತ್ತಲಿದ್ದ ಬ್ರಹ್ಮನ ಪ್ರಯತ್ನವು ನಿಷ್ಪ್ರಯೋಜನವಾದುದಾಯಿತು. ಸಕಲ ಇಷ್ಟಾರ್ಥಗಳು ಮತ್ತು ಸುಖಗಳು ಇವುಗಳಿಂದ ಕೂಡಿ ಅಯೋಧ್ಯೆಯು ಸ್ವರ್ಗಕ್ಕಿಂತಲೂ ಉತ್ತಮವಾಯಿತು.

ತಾಮಾವಸದಯೋಧ್ಯಾಂ ತು ಸ್ವಭಿಷಿಕ್ತೋ ಮಹೀಪತಿಃ ।
ಜಿತವಾನ್ ಸರ್ವಭೂಪಾಲಾನ್ ಧರ್ಮೇಣ ಸ ಮಹಾಬಲಃ ॥ ೧೭ ॥

ಮಾಣಿಕ್ಯಮುಕುಟೈರ್ಯುಕ್ತೈ ರಾಜಭಿರ್ಮಂಡಲಾಧಿಪೈಃ ।
ನಮದ್ಭಿರ್ಭಕ್ತಿಭೀತಿಭ್ಯಾಂ ಪಾದೌ ತಸ್ಯ ಕಿಣೀಕೃತಾ ॥ ೧೮ ॥

ಇಕ್ಷ್ವಾಕುರಕ್ಷತಬಲಃ ಸರ್ವಶಾಸ್ತ್ರವಿಶಾರದಃ ।
ತೇಜಸೇಂದ್ರೇಣ ಸದೃಶೋ ಮನೋಃ ಸೂನುಃ ಪ್ರತಾಪವಾನ್ ॥ ೧೯ ॥

ಧರ್ಮತೋ ನ್ಯಾಯತಶ್ಚೈವ ವೇದಜ್ಞೈರ್ಬ್ರಾಹ್ಮಣೈರ್ಯುತಃ ।
ಪಾಲಯಾಮಾಸ ಧರ್ಮಾತ್ಮಾ ಆಸಮುದ್ರಾಂ ಮಹೀಮಿಮಾಮ್ ॥ ೨೦ ॥

---

೧೭. ಆ ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾದ ಮಹೀಪತಿಯು ವಾಸಿಸುತ್ತಿದ್ದನು. ಮಹಾಪರಾಕ್ರಮಶಾಲಿಯಾದ ಆ ಅರಸನು ಧರ್ಮದಿಂದಲೇ ರಾಜರನ್ನೆಲ್ಲಾ ಗೆದ್ದನು.

೧೮. ಮಂಡಲಾಧಿಪತಿಗಳಾದ ರಾಜರು ಭಕ್ತಿ ಭೀತಿಗಳಿಂದ ರತ್ನಖಚಿತಗಳಾದ ಕಿರೀಟಗಳಿಂದ ಕೂಡಿ ನಮಸ್ಕರಿಸುತ್ತಿದ್ದುದರಿಂದ, ಆ ಚಕ್ರವರ್ತಿಯ ಕಾಲ್ಗಳೆರಡೂ ಜಡ್ಡುಕಟ್ಟಿದ್ದುವು.

೧೯. ಆ ರಾಯನ ಹೆಸರು ಇಕ್ಷ್ವಾಕು ಎಂದು. ಅವನು ಕುಂದಿಲ್ಲದ ಪರಾಕ್ರಮಶಾಲಿಯೂ, ಸಕಲಶಾಸ್ತ್ರಗಳಲ್ಲಿ ಕುಶಲನೂ, ತೇಜಸ್ಸಿನಿಂದ ಇಂದ್ರನಿಗೆ ಹೋಲುವವನೂ, ಪ್ರತಾಪಶಾಲಿಯೂ, ಸೂರ್ಯಕುಮಾರನಾದ ಮನುಚಕ್ರವರ್ತಿಯ ಮಗನೂ ಆಗಿದ್ದನು.

೨೦. ಧರ್ಮಾತ್ಮನಾದ ಆ ಇಕ್ಷ್ವಾಕುವು ವೇದಗಳನ್ನರಿತ ಬ್ರಾಹ್ಮಣರಿಂದ ಕೂಡಿದವನಾಗಿ ಸಮುದ್ರಗಳವರೆಗಿನ ಈ ಭೂಮಂಡಲವನ್ನು ಧರ್ಮದಿಂದಲೂ, ನ್ಯಾಯದಿಂದಲೂ ಪರಿಪಾಲಿಸಿದನು.

ಅಸ್ತ್ರೈರ್ಜಿಗಾಯ ಸಕಲಾನ್ ಸಂಯುಗೇ ಭೂಪತೀನ್ ಬಲೀ ।
ಅಪಜಿತ್ಯ ಸುತೀಕ್ಷ್ಣೈಸ್ತು ತನ್ಮಂಡಲಮಥಾಹರತ್ ॥
ಜಿತವಾನ್ ಪರಲೋಕಾಂಶ್ಚ ಕ್ರತುಭಿರ್ಭೂರಿದಕ್ಷಿಣೈಃ ।
ದಾನೈಶ್ಚ ವಿವಿಧೈರ್ಬ್ರಹ್ಮನ್ ರಾಜೇಕ್ಷ್ವಾಕುಃ ಪ್ರತಾಪವಾನ್ ॥ ೨೧ ॥

ಬಾಹುದ್ವಯೇನ ವಸುಧಾಂ ಜಿಹ್ವಾಗ್ರೇಣ ಸರಸ್ವತೀಮ್ ।
ಬಭಾರ ಪದ್ಮಾಮುರಸಾ ಭಕ್ತಿಂ ಚಿತ್ತೇನ ಮಾಧವೇ ॥ ೨೨ ॥

ಸಂತಿಷ್ಠಂತಂ ಹರೇ ರೂಪಂ ಉಪವಿಷ್ಟಂ ಚ ಮಾಧವಮ್ ।
ಶಯಾನಮುಷ್ಮನಂತಂ ತು ಕಾರಯಿತ್ವಾ ಪಟೇಽಮಲಮ್ ॥ ೨೩ ॥

ತ್ರಿಕಾಲಂ ತ್ರಯಮಾರಾಧ್ಯ ರೂಪಂ ವಿಷ್ಣೋರ್ಮಹಾತ್ಮನಃ ।
ಗಂಧಪುಷ್ಪಾದಿಭಿರ್ನಿತ್ಯಂ ರೇಮೇ ದೃಷ್ಟ್ವಾ ಪಟೇ ಹರಿಮ್ ॥ ೨೪ ॥

---

೨೧. ಬಳಿಕ ಶೂರನಾದ ಆ ರಾಜನು ದುಷ್ಟರಾದ ಮಂಡಲಾಧಿಪತಿಗಳಾದ ರಾಜರೆಲ್ಲರನ್ನೂ ಯುದ್ಧದಲ್ಲಿ ಅತ್ಯಂತ ತೀಕ್ಷ್ಣಗಳಾದ ಬಾಣಗಳನ್ನು ಪ್ರಯೋಗಿಸಿ ನಾಶಮಾಡಿ ಗೆದ್ದು, ಅವರ ರಾಜ್ಯಗಳನ್ನೂ ಕಿತ್ತುಕೊಂಡನು. ಎಲೈ ಬ್ರಾಹ್ಮಣನೇ ಆ ಪ್ರತಾಪಶಾಲಿಯಾದ ಇಕ್ಷ್ವಾಕುರಾಯನು ಬಹುದಕ್ಷಿಣೆಗಳುಳ್ಳಜನ್ನಗಳನ್ನು ಬೇಳ್ದು ಅನೇಕ ತೆರನಾದ ದಾನಗಳನ್ನಿತ್ತು, ಪರಲೋಕವನ್ನು (ಗೆದ್ದನು) ವಶಪಡಿಸಿ ಕೊಂಡನು.

೨೨. ಆ ರಾಜನು ಎರಡು ತೋಳುಗಳಿಂದ ಪೊಡವಿಯನ್ನೂ, ನಾಲಿಗೆಯ ತುದಿಯಿಂದ ಸರಸ್ವತಿಯನ್ನೂ, ಎದೆಯಿಂದ (ಪದುಮಳನ್ನೂ) ಲಕುಮಿಯನ್ನೂ, ಮನದಿಂದ ಲಕುಮಿಯರಸನಾದ ನಾರಾಯಣನಲ್ಲಿ ಬಕುತಿಯನ್ನೂ ತಾಳಿದನು.

೨೩–೨೪. ಪಟದಲ್ಲಿ ನಿಂತುಕೊಂಡಿರುವ ಶ್ರೀ ಹರಿಯ ಚಿತ್ರವನ್ನೂ, ಕುಳಿತಿರುವಂತಹ ಮಾಧವಾಕೃತಿಯನ್ನೂ, ಮಲಗಿರುವಂತಹ ಅನಂತನ ಚಿತ್ರವನ್ನೂ ದೋಷರಹಿತವಾಗಿರುವಂತೆ ಬರೆಯಿಸಿ, ಹೊತ್ತಾರೆ, ನಡುಹಗಲು, ಬೈಗು ಈ ಮೂರು ಹೊತ್ತುಗಳಲ್ಲಿಯೂ, ನಿತ್ಯವೂ ಪರಮನಿತ್ಯವಾದ ಶ್ರೀ ವಿಷ್ಣುವಿನ ರೂಪವನ್ನು ಗಂಧ ಪುಷ್ಪಾದಿಗಳಿಂದ ಪೂಜಿಸಿ, ಪಟದಲ್ಲಿ ಸನ್ನಿಹಿತನಾದ ಶ್ರೀ ಹರಿಯನ್ನು ನೋಡಿ ಸುಖಿಸಿದನು.

ಕೃಷ್ಣಂ ತಂ ಕೃಷ್ಣಮೇಘಾಭಂ ಭುಜಗೇಂದ್ರನಿವಾಸಿನಮ್ ।
ಪದ್ಮಾಕ್ಷಂ ಪೀತವಾಸಂ ಚ ಸ್ವಪ್ನೇಽಪ್ಯಪಿ ಸ ದೃಷ್ಟವಾನ್ ॥ ೨೫ ॥

ಚಕಾರ ಮೇಘೇ ತದ್ವರ್ಣೇ ಬಹುಮಾನಮತಿಂ ನೃಪಃ ।
ಪಕ್ಷಪಾತಂ ಚ ತನ್ನಾಸ್ತಿ ಮೃಗೇ ಪದ್ಮೇ ಚ ತಾದೃಶೇ ।
ದಿವ್ಯಾಕೃತಿಂ ಹರೇಃ ಸಾಕ್ಷಾದ್ದ್ರಷ್ಟುಂ ತಸ್ಯ ಮಹೀಭೃತಃ ॥ ೨೬ ॥

ಅತೀವ ತೃಷ್ಣಾ ಸಂಜಾತಾ ಅಪೂರ್ವೈವ ಹಿ ಸತ್ತಮ ।
ತೃಷ್ಣಾಯಾಂ ತು ಪ್ರವೃದ್ಧಾಯಾಂ ಮನಸ್ಯೇವ ಹಿ ಪಾರ್ಥಿವಃ ॥ ೨೭ ॥

ಚಿಂತಯಾಮಾಸ ಮತಿಮಾನ್ ರಾಜ್ಯಭೋಗಮಸಾರವತ್ ।
ವೇಶ್ಮದಾರಸುತಕ್ಷೇತ್ರಂ ಸಂನ್ಯಸ್ತಂ ಯೇನ ದುಃಖದಮ್ ॥ ೨೮ ॥

---

೨೫. ಇಂತು ಸೇವಿಸುತ್ತಲಿದ್ದ ಆ ರಾಜನು ಕನಸುಗಳಲ್ಲಿಯೂ ಕಾರ್ಮುಗಿಲಿಗೆಣೆಯಾದ, ಆದಿಶೇಷನ ಮೇಲೆ ಪವಡಿಸಿರುವ, ತಾವರೆಗಣ್ಣನಾದ, ಪೀತಾಂಬರವನ್ನು ಉಟ್ಟಿರುವ ಆ ಶ್ರೀ ಕೃಷ್ಣನನ್ನು ಕಂಡನು.

೨೬-೨೮. ಆ ನೃಪನು ಶ್ರೀ ಕೃಷ್ಣನ ಬಣ್ಣದ ಮೋಡದಲ್ಲಿಯೂ ಗೌರವ ಬುದ್ಧಿಯನ್ನು ಮಾಡಿದನು. ಅಂತಹ ವರ್ಣವುಳ್ಳ ಮೃಗದಲ್ಲಿಯೂ, ನೈದಿಲೆಯಲ್ಲಿಯೂ ಪಕ್ಷಪಾತವೆಂಬುದೇ ಇಲ್ಲವು. ಎಲೈ ಸತ್ತಮನಾದ ಭರದ್ವಾಜನೇ! ಆ ರಾಜನಿಗೆ ಶ್ರೀ ಹರಿಯ ಉತ್ತಮವಾದ ಆಕೃತಿಯನ್ನು ಕಣ್ಣಾರೆ ಕಾಣಲು ಹಿಂದೆಂದೂ ಇಲ್ಲದ ಹೆಚ್ಚಾದ ಆಸೆಯುಂಟಾಯಿತು. ಇಂತು ಆಸೆಯು ಹೆಚ್ಚಲು, ಶಾಸ್ತ್ರಜನ್ಯವಾದ ವಿವೇಕವುಳ್ಳ ಆ ರಾಜನು ಮನಸ್ಸಿನಿಂದಲೇ ರಾಜ್ಯಭೋಗವು ಸಾರವಿಲ್ಲದುದೆಂದೂ, ಯಾವ ಈ ಕಾರಣದಿಂದ ಮನೆ, ಹೆಂಡಿರು, ಮಕ್ಕಳು, ಭೂಮಿ ಇವು ದುಃಖವನ್ನುಂಟುಮಾಡುವುವೆಂದು ಅವುಗಳನ್ನು ಬಿಡತಕ್ಕುದೆಂದೂ ಆಲೋಚಿಸಿದನು.

ವೈರಾಗ್ಯ ಜ್ಞಾನಮಾರ್ಗೇಣ ಲೋಕೇsಸ್ಮಿನ್ನಾಸ್ತಿ ತತ್ಸಮಃ ।
ಇತ್ಯೇವಂ ಚಿಂತಯಿತ್ವಾ ತು ತಪಸ್ಯಾಸಕ್ತಚೇತನಃ ॥ ೨೯ ॥

ವಸಿಷ್ಠಂ ಪರಿಪಪ್ರಚ್ಛ ತತ್ರೋಪಾಯಂ ಪುರೋಹಿತಮ್ ।
ತಪೋಬಲೇನ ದೇವೇಶಂ ನಾರಾಯಣಮಜಂ ಮುನೇ ॥ ೩೦ ॥

ದ್ರಷ್ಟುಮಿಚ್ಛಾಮ್ಯಹಂ ತತ್ರ ಉಪಾಯಂ ತಂ ವದಸ್ವ ಮೇ ।
ಇತ್ಯುಕ್ತಃ ಪ್ರಾಹ ರಾಜಾನಂ ತಪಸ್ಯಾಸಕ್ತಮಾನಸಮ್ ॥ ೩೧ ॥

ವಸಿಷ್ಠಃ ಸರ್ವಧರ್ಮಜ್ಞಃ ಸದಾ ತಸ್ಯ ಹಿತೇ ರತಃ ।
ಯದೀಚ್ಛಸಿ ಮಹಾರಾಜ ದ್ರಷ್ಟುಂ ನಾರಾಯಣಂ ಪರಮ್ ॥ ೩೨ ॥

ತಪಸಾ ಸುಕೃತೇನೇಹ ಆರಾಧಯ ಜನಾರ್ದನಮ್ ।
ಕೇನಾಪ್ಯತಪ್ತತಪಸಾ ದೇವದೇವೋ ಜನಾರ್ದನಃ ॥ ೩೩ ॥

೨೯-೩೪. ಈ ಪ್ರಪಂಚದಲ್ಲಿ ವೈರಾಗ್ಯ ಮತ್ತು ಜ್ಞಾನ ಈ ಮಾರ್ಗಗಳಿಂದ ಸದೃಶವಾದುದು ಯಾವುದೂ ಇಲ್ಲವು. ಇಂತು ಯೋಚಿಸಿ, ತಪದಲ್ಲಿ ತೊಡಗಿದ ಮನವುಳ್ಳವನಾಗಿ ಆ ವಿಷಯದಲ್ಲಿ ಉಪಾಯವೇನೆಂಬುದನ್ನು ತನ್ನ ಪುರೋಹಿತರಾದ ವಸಿಷ್ಠರನ್ನು ಕೇಳಿದನು. "ಎಲೈ ಮುನಿಗಳಾದ ವಸಿಷ್ಠರೇ! ನಾನು ತಪಸ್ಸಾಮರ್ಥ್ಯದಿಂದ ದೇವತೆಗಳಿಗೆಲ್ಲಾ ಒಡೆಯನೂ, ಹುಟ್ಟಿಲ್ಲದವನೂ, ಗುಣಪರಿಪೂರ್ಣನೂ ಆದ ಶ್ರೀಮನ್ನಾರಾಯಣನನ್ನು ಕಣ್ಣಾರೆ ನೋಡಲೆಳಸುವೆನು. ಅದರಲ್ಲಿ ಸಾಧನವಾವುದೋ ಅದನ್ನು ನನಗೆ ತಿಳಿಸಿ; ಇಂತು ರಾಜನು ಕೇಳಲು, ಸಕಲಧರ್ಮಗಳ ತತ್ವಗಳನ್ನರಿತವನೂ, ಯಾವಾಗಲೂ ಆ ರಾಜನ ಹಿತವಲ್ಲಿ ತೊಡಗಿದವನೂ ಆದ ವಸಿಷ್ಠಮುನಿಯು ತಪದಲ್ಲಿ ತೊಡಗಿದ ಮನವುಳ್ಳ ರಾಜನನ್ನು ಕುರಿತು ಇಂತು ಹೇಳಿದನು. "ಎಲೈ ಮಹಾರಾಜನೇ! ಸರ್ವೋತ್ತಮನಾದ ಶ್ರೀಮನ್ನಾರಾಯಣನನ್ನು ಕಣ್ಣಾರೆ ನೋಡಬೇಕೆಂದೆಳಸುವೆಯಾದರೆ, ಪುಣ್ಯಸಂಪಾದಕವಾದ ತಪಸ್ಸಿನಿಂದ ಜನಾರ್ದನಸ್ವಾಮಿ

ದ್ರಷ್ಟುಂ ನ ಶಕ್ಯತೇ ಜಾತು ತಸ್ಮಾತ್ತಂ ತಪಸಾಽರ್ಚಯ ।
ಪೂರ್ವದಕ್ಷಿಣದಿಗ್ಭಾಗೇ ಸರಯೂತೀರಗೋ ನೃಪ ॥ ೩೪ ॥

ಗಾಲವಪ್ರಮುಖಾನಾಂ ಚ ಋಷೀಣಾಮಸ್ತಿ ಚಾಶ್ರಮಃ ।
ಪಂಚಯೋಜನಮಧ್ಯಾನಂ ಸ್ಥಾನಮಸ್ಮಾತ್ತು ಪಾವನಮ್ ॥ ೩೫ ॥

ನಾನಾದ್ರುಮಲತಾಕೀರ್ಣಂ ನಾನಾಪುಷ್ಪಸಮಾಕುಲಮ್ ।
ಸ್ವಮಂತ್ರಿಣಿ ಮಹಾಪ್ರಾಜ್ಞೇ ನೀತಿಮತ್ಯರ್ಜುನೇ ನೃಪ ॥ ೩೬ ॥

ಸ್ವರಾಜ್ಯಭಾರಂ ವಿನ್ಯಸ್ಯ ಕರ್ಮಕಾಂಡಮಪಿ ದ್ವಿಜ ।
ಸ್ತುತ್ವಾಽರಾಧ್ಯ ಗಣಾಧ್ಯಕ್ಷಂ ಇತೋ ವ್ರಜ ವಿನಾಯಕಮ್ ॥ ೩೭ ॥

ತಪಸ್ಸಿದ್ಧ್ಯರ್ಥಮನ್ವಿಚ್ಛಂಸ್ತಸ್ಮಾತ್ತತ್ರ ತಪಃ ಕುರು ।
ತಾಪಸಂ ವೇಷಮಾಸ್ಥಾಯ ಶಾಕಮೂಲಫಲಾಶನಃ ॥ ೩೮ ॥

ಯನ್ನು ಪೂಜಿಸು. ಯಾವನಾದರೂ ತಪವನ್ನೆಸಗದೇ ದೇವೋತ್ತಮನಾದ, ಮುಕ್ತಿಯನ್ನೀಯುವ ಜನಾರ್ದನನನ್ನು ಕಾಣಲಾಗುವುದಿಲ್ಲ. ಆದುದರಿಂದ ಅವನನ್ನು ತಪಸ್ಸಿನಿಂದ ಆಗ್ನೇಯದಿಕ್ಕಿನಲ್ಲಿ ಸರಯೂ ನದಿಯ ತಡಿಯಲ್ಲಿ ಆರಾಧಿಸು.

೩೬-೩೭. ಎಲೈರಾಜನೇ! ಆ ಪ್ರದೇಶವು ಅನೇಕ ತೆರನಾದ ಮರಬಳ್ಳಿಗಳಿಂದ ವ್ಯಾಪ್ತವಾದುದಾಗಿಯೂ, ಅನೇಕ ಹೂಗಳಿಂದ ತುಂಬಿಯೂ ಇರುವುದು. ಮಹಾಕುಶಲನೂ, ನೀತಿಜ್ಞನೂ ಆದ ನಿನ್ನ ಮಂತ್ರಿ ಅರ್ಜುನನಲ್ಲಿ ನಿನ್ನ ರಾಜ್ಯಭಾರವನ್ನೂ, ಇತರ ಕರ್ಮಭಾಗ ವನ್ನೂ ಇರಿಸಿ ಪ್ರಮಥಗಳಿಗೆ ನಿಯಾಮಕನೂ, ದುಷ್ಟರನ್ನೂ, ವಿಘ್ನಗಳನ್ನೂ ವಿನಯವುಳ್ಳವರನ್ನಾಗಿ ಶಿಕ್ಷಿಸುವನೂ ಆದ ಗಜಾನನನನ್ನು ತುಳಿಸ್ಗೈದು ಪೂಜಿಸಿ, ತಪಃಫಲವನ್ನು ಅಪೇಕ್ಷಿಸಿ ಹೋಗು.

೩೮. ಆದುದರಿಂದ ಆ ಸರಯೂತೀರದ ಋಷ್ಯಾಶ್ರಮ ಪ್ರದೇಶದಲ್ಲಿ ತಾಪಸವೇಷಧಾರಿಯಾಗಿ ಸೊಪ್ಪು, ಗೆಣಸುಗಳನ್ನೇ ಆಹಾರವಾಗಿ ತೆಗೆದುಕೊಂಡು ತಪವನ್ನಾಚರಿಸು

ಧ್ಯಾಯನ್ನಾರಾಯಣಂ ದೇವಮಿಮಂ ಮಂತ್ರಂ ಸದಾ ಜಪ ।
'ಓಂ ನಮೋ ಭಗವತೇ ವಾಸುದೇವಾಯ ।'
ಏಷ ಸಿದ್ಧಿಕರೋ ಮಂತ್ರೋ ದ್ವಾದಶಾಕ್ಷರ ಸಂಜ್ಞಿತಃ ॥ ೩೯ ॥

ಜಪ್ತ್ವೈನಂ ಮುನಯಃ ಸಿದ್ಧಿಂ ಪರಾಂ ಪ್ರಾಪ್ತಾಃ ಪುರಾತನಾಃ ।
ಗತ್ವಾಗತ್ವಾ ನಿವರ್ತಂತೇ ಚಂದ್ರಸೂರ್ಯಾದಯೋ ಗ್ರಹಾಃ ॥ ೪೦ ॥

ಅದ್ಯಾಪಿ ನ ನಿವರ್ತಂತೇ ದ್ವಾದಶಾಕ್ಷರಚಿಂತಕಾಃ ।
ಬಾಹ್ಯೇಂದ್ರಿಯಂ ಹೃದಿ ಸ್ಥಾಪ್ಯ ಮನಸ್ಸೂಕ್ಷ್ಮೇ ಪರಾತ್ಮನಿ ॥ ೪೧ ॥

---

೩೯. ಸರ್ವಗುಣಸಂಪೂರ್ಣನಾದ ಶ್ರೀಮನ್ನಾರಾಯಣ ದೇವರನ್ನು ಚಿಂತಿಸುತ್ತಾ "ಓಂ ನಮೋ ಭಗವತೇ ವಾಸುದೇವಾಯ" (ಗುಣಪರಿಪೂರ್ಣನೂ, ಅವ್ಯಾಹತ ಷಡ್ಗುಣೈಶ್ವರ್ಯಗಳಿಂದ ತುಂಬಿದವನೂ, ಎಲ್ಲೆಡೆಗಳಲ್ಲಿಯೂ ವಾಸಮಾಡುವವನೂ, ಕ್ರೀಡಾದಿಗುಣವಿಶಿಷ್ಟನೂ ಆದ ಶ್ರೀನರಸಿಂಹನಿಗೆ ನಮಸ್ಕಾರವು) ಎಂಬೀಮಂತ್ರವನ್ನು ಯಾವಾಗಲೂ ಜಪಿಸು. ದ್ವಾದಶಾಕ್ಷರ ಮಂತ್ರವೆಂಬ ಹೆಸರಿನ ಈ ಮಂತ್ರವು ಸಕಲ ಪುರುಷಾರ್ಥವನ್ನೂ ಕೈಕೂಡಿಸುವುದು.

೪೦. ಪೂರ್ವಿಕರಾದ ಜ್ಞಾನಿಗಳು ಈ ಮಂತ್ರವನ್ನು ಜಪಿಸಿ ಪರಮಫಲವಾದ ಮುಕ್ತಿಯನ್ನೈದಿದರು. ಚಂದ್ರ ಸೂರ್ಯಾದಿಗ್ರಹಗಳು (ಉತ್ತಮ ಲೋಕಗಳಿಗೆ) ಹೋಗಿ ಹೋಗಿ, ಮತ್ತೂ ಹಿಂದಿರುಗುತ್ತಾರೆ.

೪೧-೪೩ ದ್ವಾದಶಾಕ್ಷರ ಮಂತ್ರವನ್ನು ಜಪಿಸುವವರು ಈಗಲೂ ಹಿಂತಿರುಗುತ್ತಿಲ್ಲ. (ಪುನರಾವೃತ್ತಿಶೂನ್ಯವಾದ ಮುಕ್ತಿಯನ್ನೈದುವರು) ಎಲೈ ರಾಯನೇ! ಕೇಳು; ಮಧುವೆಂಬ ದೈತ್ಯನನ್ನು ಸಂಹರಿಸಿದ ಶ್ರೀಹರಿಯನ್ನು ಕಣ್ಣಾರ ಕಾಣಬೇಕೆಂದಿದ್ದರೆ, ಕಣ್ಣೇ ಮುಂತಾದ ಬಾಹ್ಯೇಂದ್ರಿಯವನ್ನೂ, ಅಂತಃಕರಣವನ್ನೂ ಹೃದಯ ಪುಂಡರೀಕದಲ್ಲಿರುವ ಅತ್ಯಂತ ಸೂಕ್ಷ್ಮನಾಗಿರುವ ಪರಮಾತ್ಮನಾದ ಶ್ರೀಹರಿಯಲ್ಲಿ ದೃಢವಾಗಿ ನಿರಿಸಿ

ನೃಪ ! ಸಂಜಪ ತನ್ಮಂತ್ರಂ ದ್ರಷ್ಟವ್ಯೋ ಮಧುಸೂದನಃ ।
ಇತಿ ತೇ ಕಥಿತೋಪಾಯೋ ಹರಿಪ್ರಾಪ್ತೇಸ್ತಪಃಕೃತೌ ॥ ४३ ॥

ಪೃಚ್ಛತಃ ಸಾಂಪ್ರತಂ ಭೂಯೋ ಯದೀಚ್ಛಸಿ ಕುರುಷ್ವ ತತ್ ।
ಇತ್ಯೇವಮುಕ್ತೋ ಮುನಿನಾ ಸ ರಾಜಾ
ರಾಜ್ಯಂ ಭುವೋ ಮಂತ್ರಿವರೇ ಸಮರ್ಪ್ಯ ।
ಸ್ತುತ್ವಾ ಗಣೇಶಂ ಸುಮನೋಭಿರರ್ಚ್ಯ
ಗತಃ ಪುರಾತ್ಸ್ವತ್ತಪಸೇ ಧೃತಾತ್ಮಾ ॥ ४४ ॥

ಇತಿ ಶ್ರೀ ನರಸಿಂಹಪುರಾಣೇ ಇಕ್ಷ್ವಾಕುಚರಿತ್ರೇ
ಪಂಚವಿಂಶತಿತಮೋಽಧ್ಯಾಯಃ

ಆ ದ್ವಾದಶಾಕ್ಷರ ಮಂತ್ರವನ್ನು ಜಪಿಸು. ಶ್ರೀಹರಿಯನ್ನು ಹೊಂದುವುದಕ್ಕೆ ಸಾಧನವಾದ ತಪವನ್ನೆಸಗುವುದರಲ್ಲಿ ಉಪಾಯವನ್ನು ಕೇಳಿದ ನಿನಗೆ ಈಗ ಇಂತು ತಿಳಿಸಿದೆನು.

४४. ಇನ್ನು ಮುಂದೆ ಯಾವುದನ್ನೆಳಸುವೆಯೋ ಅದನ್ನು ಮಾಡು." ಇಂತು ಮುನಿಯಾದ ವಸಿಷ್ಠರು ಶ್ರೀಹರಿಯ ಸಾಕ್ಷಾತ್ಕಾರ ಸಾಧನನನ್ನರುಹಲು, ಇಕ್ಷ್ವಾಕುರಾಯನು ಅಂತೆಯೇ ತನ್ನ ರಾಜ್ಯವನ್ನೂ, ಪೊಡವಿಯನ್ನೂ ಮಂತ್ರಿಶ್ರೇಷ್ಠರಲ್ಲಿ ಒಪ್ಪಿಸಿ, ಪ್ರಮಥಗಣಗಳಿಗೊಡೆಯನಾದ ಗಜಾನನನನ್ನು ತುಳಿಲ್ಗೈದು, ಹೂವುಗಳಿಂದ ಪೂಜಿಸಿ, ಮನಸ್ಸನ್ನು ನಿಗ್ರಹಿಸಿ, ತನ್ನ ರಾಜಧಾನಿಯಾದ ಅಯೋಧ್ಯೆಯಿಂದ ತಪಸ್ಸಿಗೆ ತೆರಳಿದನು;' ಎಂದು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀನರಸಿಂಹಪುರಾಣದಲ್ಲಿ ಇಕ್ಷ್ವಾಕು ಚರಿತ್ರೆಯಲ್ಲಿ
ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೈದನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ, 'ಸೂತರು ಭರದ್ವಾಜನಿಗೆ ಮಂಗಳಕರವಾದ ರಾಜರ ವಂಶಾನುಚರಿತೆಯನ್ನು ಹೇಳಲುಪಕ್ರಮಿಸಿ, ಸೂರ್ಯಪುತ್ರನಾದ ಮನುವಿನ ಮಗನಾದ ಇಕ್ಷ್ವಾಕು ರಾಯನ ಚರಿತ್ರೆಯನ್ನು ನಿರೂಪಿಸತೊಡಗಿ, "ಇಕ್ಷ್ವಾಕುರಾಯನು ಶ್ರೀ ಹರಿಯು ನಿಂತಿರುವ, ಕುಳಿತಿರುವ ಮತ್ತು ಮಲಗಿರುವ ರೂಪಗಳನ್ನು ಪಟದಲ್ಲಿ ಬರೆಯಿಸಿ, ಅವನನ್ನು ತ್ರಿಕಾಲದಲ್ಲಿಯೂ ಧ್ಯಾನಿಸಿ, ಪೂಜಿಸುತ್ತಿದ್ದನು. ಕನಸಿನಲ್ಲಿಯೂ ಅವನು ಭಗವಂತನನ್ನು ಕಾಣುತ್ತಿದ್ದನು. ಇಂತಿರಲು ಒಮ್ಮೆ ಇಕ್ಷ್ವಾಕು ರಾಯನು ತನ್ನ ಗುರುಗಳಾದ ವಸಿಷ್ಠರನ್ನು ಶ್ರೀ ಹರಿಯನ್ನು ಕಣ್ಣಾರೆ ಕಾಣಲು ಉಪಾಯವಾವುದೆಂದು ಕೇಳಲು, ಅವರು ರಾಜ್ಯಭಾರವನ್ನು ಮಂತ್ರಿಯಲ್ಲಿರಿಸಿ, ಸರಯೂ ತೀರದ ಪುಣ್ಯಾಶ್ರಮಕ್ಕೆ ಹೋಗಿ, "ಓಂ ನಮೋ ಭಗವತೇ ವಾಸುದೇವಾಯ" ಎಂಬೀ ದ್ವಾದಶಾಕ್ಷರ ಮಂತ್ರವನ್ನುಚ್ಚರಿಸಿ, ಶ್ರೀ ಹರಿಯನ್ನು ಧ್ಯಾನಿಸಿ ಜಪಿಸು, ಎಂದು ಹೇಳಲು ಅಂತೆಯೇ ಆ ಇಕ್ಷ್ವಾಕುವು ರಾಜ್ಯವನ್ನು ತನ್ನ ಮಂತ್ರಿಗೊಪ್ಪಿಸಿ, ಜಿತೇಂದ್ರಿಯನಾಗಿ ತಪವನ್ನೆಸಗಲು ತನ್ನ ರಾಜಧಾನಿಯಾದ ಅಯೋಧ್ಯೆಯಿಂದ ತಪೋವನಕ್ಕೆ ತೆರಳಿದನು," ಎಂದು ನಿರೂಪಿಸಿದುದು ವರ್ಣಿತವಾಗಿದೆ.

ಇಂತು ಇಪ್ಪತ್ತೈದನೆಯ ಅಧ್ಯಾಯದ ವಿಷಯಸಂಗ್ರಹವು

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವಂಶಾನುಚರಿತಮ್ ; ಷಡ್ವಿಂಶತಿತಮೋಽಧ್ಯಾಯಃ

ಇಕ್ಷ್ವಾಕುಚರಿತಮ್ (ಪೂರ್ವತೋಽನುವೃತ್ತಮ್)

॥ ಭರದ್ವಾಜ ಉವಾಚ ॥

ಕಥಂ ಸ್ತುತೋ ಗಣಾಧ್ಯಕ್ಷಸ್ತೇನ ರಾಜ್ಞಾ ಮಹಾತ್ಮನಾ ।
ಯಥಾ ತೇನ ತಪಸ್ತಪ್ತಂ ತನ್ಮೇ ವದ ಮಹಾಮತೇ ॥ ೧ ॥

ವಂಶಾನುಚರಿತವು ; ಇಪ್ಪತ್ತಾರನೆಯ ಅಧ್ಯಾಯವು

ಇಕ್ಷ್ವಾಕು ಚರಿತೆಯು (ಹಿಂದಿನಿಂದ ಮುಂದುವರಿದುದು)

ಭರದ್ವಾಜ ಮುನಿಯು ಸೂತರನ್ನು ಕುರಿತು ಇಂತು ಹೇಳುತ್ತಾನೆ :—

೧. "ಎಲೈ ಮಹಾಮುನಿಗಳಾದ ಸೂತರೇ ! ಆ ಮಹಾತ್ಮನಾದ ಇಕ್ಷ್ವಾಕು ರಾಯನು ಗಣಪತಿಯನ್ನು ನುತಿಸಿದ ಬಗೆಯೆಂತು ? ತಪವನ್ನೆಂತೆಸಗಿದನು ಅವನ್ನು ನನಗೆ ದಯಮಾಡಿ ಹೇಳಿರಿ," ಎಂದು ಭರದ್ವಾಜನು ಸೂತರನ್ನು ಕೇಳಿದನು.

॥ ಸೂತ ಉವಾಚ ॥

ಚತುರ್ಥೀದಿವಸೇ ರಾಜಾ ಸ್ನಾತ್ವಾ ತ್ರಿಷವಣಂ ದ್ವಿಜ ।
ರಕ್ತಾಂಬರಧರೋ ಭೂತ್ವಾ ರಕ್ತಗಂಧಾನುಲೇಪನಃ ॥ ೨ ॥

ಸುರಕ್ತಕುಸುಮೈರ್ಹೃದ್ಯೈರ್ವಿನಾಯಕಮಥಾರ್ಚಯತ್ ।
ರಕ್ತಚಂದನತೋಯೇನ ಸ್ನಾನಪೂರ್ವಂ ಯಥಾವಿಧಿ ॥ ೩ ॥

ವಿಲಿಪ್ಯ ರಕ್ತಗಂಧೇನ ರಕ್ತಪುಷ್ಪೈಃ ಪ್ರಪೂಜ್ಯ ಚ ।
ತತೋಽಸೌ ದತ್ತವಾನ್ ಧೂಪಮಾಜ್ಯಯುಕ್ತಂ ಸಚಂದನಮ್ ।
ನೈವೇದ್ಯಂ ಚೈವ ಹಾರಿದ್ರಂ ಗುಡಖಂಡಘೃತಪ್ಲುತಮ್ ॥ ೪ ॥

ಏವಂ ಸುವಿಧಿನಾ ಪೂಜ್ಯ ವಿನಾಯಕಮಥಾಸ್ತುವೀತ್ ।

॥ ಇಕ್ಷ್ವಾಕುರುವಾಚ ॥

ನಮಸ್ಕೃತ್ಯ ಮಹಾದೇವಂ ಸ್ತೋಷ್ಯೇಽಹಂ ತಂ ವಿನಾಯಕಮ್ ॥ ೫ ॥

ಸೂತರು ಹೇಳುತ್ತಾರೆ.

೨-೫. 'ಎಲೈ ಬ್ರಾಹ್ಮಣನಾದ ಭರದ್ವಾಜನೇ! ಕೇಳು; ಆ ಇಕ್ಷ್ವಾಕು ರಾಯನು ಚತುರ್ಥೀದಿನದಲ್ಲಿ ತ್ರಿಕಾಲದಲ್ಲಿಯೂ ಸ್ನಾನಮಾಡಿ, ಕೆಂಪುಬಣ್ಣದ ಬಟ್ಟೆಯನ್ನುಟ್ಟು, ಕೆಂಪುಬಣ್ಣದ ಗಂಧವನ್ನು ಹಚ್ಚಿಕೊಂಡು, ಮನೋಹರಗಳಾದ ಕೆಂಪು ಹೂಗಳಿಂದ ವಿನಾಯಕನನ್ನು ಪೂಜಿಸಿದನು. ಕೆಂಪುಬಣ್ಣದ ನೀರಿನಿಂದ ಶಾಸ್ತ್ರೋಕ್ತಕ್ರಮದಲ್ಲಿ ವಿನಾಯಕನಿಗೆ ಅಭಿಷೇಕವನ್ನು ಮಾಡಿ, ರಕ್ತಗಂಧದಿಂದ ಲೇಪಮಾಡಿ, ರಕ್ತಪುಷ್ಪಗಳಿಂದ ಅರ್ಚಿಸಿ, ಅನಂತರದಲ್ಲಿ ಆ ರಾಯನು ವಿಘ್ನೇಶ್ವರನಿಗೆ ಧೂಪವನ್ನು ಹಾಕಿ, ಸುಗಂಧ ದ್ರವ್ಯಗಳನ್ನು ಪೂಸಿ, ತುಪ್ಪದಿಂದ ಕೂಡಿದ, ತುಪ್ಪದಲ್ಲಿಯೇ ಪಕ್ವವಾದ ಸಿಹಿಕಡುಬುಗಳನ್ನು ನಿವೇದಿಸಿ, ಅರಿಸಿಣ ಮುಂತಾದ ಮಂಗಳದ್ರವ್ಯಗಳಿಂದ ಶಾಸ್ತ್ರೋಕ್ತಗಳಾದ ವಿಧಿಗಳಿಗೆ ಅನುಸಾರವಾಗಿ ವಿನಾಯಕನನ್ನು ಸೇವಿಸಿ, ಬಳಿಕ ನುತಿಸಿದನು.

ಮಹಾಗಣಪತಿಂ ಶೂರಮಜಿತಂ ಜ್ಞಾನವರ್ಧನಮ್ ।
ಏಕದಂತಂ ದ್ವಿದಂತಂ ಚ ಚತುರ್ದಂತಂ ಚತುರ್ಭುಜಮ್ ॥ ೬ ॥

ತ್ರ್ಯಕ್ಷಂ ತ್ರಿಶೂಲಹಸ್ತಂ ಚ ರಕ್ತನೇತ್ರಂ ವರಪ್ರದಮ್ ।
ಆಂಬಿಕೇಯಂ ಶಂಕುಕರ್ಣಂ ಪ್ರಚಂಡಂ ಚ ವಿನಾಯಕಮ್ ॥ ೭ ॥

ಆರಕ್ತಂ ದಂಡಿನಂ ಚೈವ ವಹ್ನಿವಕ್ತ್ರಂ ಹುತಪ್ರಿಯಮ್ ।
ಅನರ್ಚಿತೋ ವಿಘ್ನಕರಃ ಸರ್ವಕಾರ್ಯೇಷು ಯೋ ನೃಣಾಮ್ ॥ ೮ ॥

ತಂ ನಮಾಮಿ ಗಣಾಧ್ಯಕ್ಷಂ ಭೀಮಮುಗ್ರಮುಮಾಸುತಮ್ ।
ಮದಮತ್ತಂ ವಿರೂಪಾಕ್ಷಂ ಭಕ್ತವಿಘ್ನನಿವಾರಕಮ್ ॥ ೯ ॥

ಇಕ್ಷ್ವಾಕುವು ಹೇಳುತ್ತಾನೆ:—

" ಮಹಾದೇವನಿಗೆ ಪೊಡಮಟ್ಟು, ನಾನು ಆ ವಿನಾಯಕನನ್ನು ತುಳಿಲ್ಗೈಯು ವೆನು.

೬–೧೦ ಪ್ರಮಥಾದಿಗಣಗಳಿಗೆ ಒಡೆಯನಾದ ಹಿರಿಯ ಗಣಪತಿಯೂ, ಶೂರನೂ, ಯಾರಿಂದಲೂ ಗೆಲ್ಲಲಾಗದವನೂ, ಸೇವಿಸುವವರಿಗೆ ತತ್ವಜ್ಞಾನವನ್ನು ವೃದ್ಧಿಪಡಿಸುವವನೂ, ಒಂದು ಕೋರೆಹಲ್ಲುಳ್ಳವನೂ, ಎರಡು ಕೋರೆಹಲ್ಲುಗಳುಳ್ಳವನೂ, ನಾಲ್ಕು ಕೋರೆಹಲ್ಲುಗಳುಳ್ಳವನೂ, ನಾಲ್ಕು ತೋಳುಗಳುಳ್ಳವನೂ, ಮೂರು ಕಣ್ಣುಗಳುಳ್ಳವನೂ, ತಿಸುಳನ್ನು ಕೈಯಲ್ಲಿ ತಾಳಿರುವವನೂ, ಕೆಂಗಣ್ಣುಳ್ಳವನೂ, ಭಕ್ತರ ಇಷ್ಟಾರ್ಥಗಳನ್ನು ಸಲ್ಲಿಸುವವನೂ, ಪಾರ್ವತೀಪುತ್ರನೂ, ಕಿವಿಯಲ್ಲಿ ಅಂಕುಶವುಳ್ಳವನೂ, ಬಹುತೀಕ್ಷ್ಣನಾದವನೂ, ಸಕಲ ವಿಘ್ನಗಳನ್ನು ಪರಿಹರಿಸುವ ಪ್ರಭುವೂ, ಸ್ವಲ್ಪ ಕೆಂಪುಬಣ್ಣವುಳ್ಳವನೂ, ದಂಡವನ್ನು ಹಿಡಿದಿರುವವನೂ, ಅಗ್ನಿಮುಖನಾದವನೂ, ಹೋಮಮಾಡಿದ ವಸ್ತುವಿನಲ್ಲಿ ಪ್ರೀತಿಯುಳ್ಳವನೂ, ತನ್ನನ್ನು ಸೇವಿಸದಿದ್ದ ಮಾನವರಿಗೆ ಎಲ್ಲಕಾರ್ಯಗಳಲ್ಲಿಯೂ ಅಡ್ಡಿಯನ್ನೆಸಗು

ಸೂರ್ಯಕೋಟಿಪ್ರತೀಕಾಶಂ ಭಿನ್ನಾಂಜನಸಮಪ್ರಭಮ್ ।
ಬುದ್ಧಂ ಸುನಿರ್ಮಲಂ ಶಾಂತಂ ನಮಸ್ಯಾಮಿ ವಿನಾಯಕಮ್ ॥ ೧೦ ॥

ನಮೋಽಸ್ತು ಗಜವಕ್ತ್ರಾಯ ಗಣಾನಾಂ ಪತಯೇ ನಮಃ ।
ಮೇರುಮಂದರ ರೂಪಾಯ ನಮಃ ಕೈಲಾಸವಾಸಿನೇ ॥ ೧೧ ॥

ವಿರೂಪಾಯ ನಮಸ್ತೇಽಸ್ತು ನಮಸ್ತೇ ಬ್ರಹ್ಮಚಾರಿಣೇ ।
ಭಕ್ತಸ್ತುತಾಯ ದೇವಾಯ ನಮಸ್ತುಭ್ಯಂ ವಿನಾಯಕ ॥ ೧೨ ॥

ತ್ವಯಾ ಪುರಾಣ ಪೂರ್ವೇಷಾಂ ದೇವಾನಾಂ ಕಾರ್ಯಸಿದ್ಧಯೇ ।
ಗಜರೂಪಂ ಸಮಾಸ್ಥಾಯ ತ್ರಾಸಿತಾಃ ಸರ್ವದಾನವಾಃ ॥ ೧೩ ॥

ವವನೂ, ಭಯಂಕರನಾದವನೂ, ಉಗ್ರರೂಪನೂ, ಉಮಾಪುತ್ರನೂ, ಆದ ಆ ಗಣಪತಿಯನ್ನು ನಮಸ್ಕರಿಸುತ್ತೇನೆ. ಮದದಿಂದ ಕೊಬ್ಬಿದವನೂ, ವಿರೂಪಗಳಾದ ಕಣ್ಗಳುಳ್ಳವನೂ, ತನ್ನನ್ನು ಸೇವಿಸುವವರ ವಿಘ್ನನಿವಾರಕನೂ, ಕೋಟಿ ಸೂರ್ಯಸಮಾನಪ್ರಕಾಶನೂ, ಇಬ್ಭಾಗಮಾಡಿದ ಕಾಡಿಗೆ ಪರ್ವತಕ್ಕೆ ಸಮಾನವಾದ ಕಾಂತಿಯುಳ್ಳವನೂ, ಜ್ಞಾನಿಯೂ, ಪರಿಶುದ್ಧನೂ, ಶಾಂತನೂ ಆದ ವಿನಾಯಕನನ್ನು ನಮಸ್ಕರಿಸುತ್ತೇನೆ.

೧೧ ಗಜಾನನನಿಗೆ ನಮಸ್ಕಾರವು; ಪ್ರಮಥಾದಿಗಣಗಳಿಗೊಡೆಯನಾದವನಿಗೆರಗುವೆನು; ಮೇರು ಮಂದರ ಪರ್ವತಗಳಂತೆ ತೋರವಾದ ರೂಪವುಳ್ಳವನಿಗೆ ನಮಸ್ಕಾರವು; ಕೈಲಾಸಪರ್ವತದಲ್ಲಿ ವಾಸಮಾಡುವ ಗಣಪತಿಗೆ ನಮಸ್ಕಾರವು.

೧೨ ಲೋಕವಿಲಕ್ಷಣವಾದ ರೂಪವುಳ್ಳ ವಿಘ್ನೇಶನಾದ ನಿನಗೆ ನಮಸ್ಕಾರವು ಬ್ರಹ್ಮಚಾರಿಯಾದ ನಿನಗೆ ನಮಸ್ಕಾರವು. ಎಲೈ ವಿನಾಯಕನೇ! ಬಕುತರಿಂದ ಸ್ತುತಿಗೊಂಡವನೂ, ಕಾಂತಿಯುಕ್ತನಾದವನೂ ಆದ ನಿನಗೆ ನಮಸ್ಕಾರವು.

೧೩ ಪುರಾತನನಾದ ಗಣಪತಿಯೇ! ಹಿಂದಣ ದೇವತೆಗಳ ಕಜ್ಜವು ನೆರವೇರುವುದಕ್ಕೆ ನೀನು ಗಜರೂಪವನ್ನು ತಾಳಿ, ದಾನವರೆಲ್ಲರನ್ನೂ ಭಯಪಡಿಸಿದೆ.

ಋಷೀಣಾಂ ದೇವತಾನಾಂ ಚ ನಾಯಕತ್ವಂ ಪ್ರಕಾಶಿತಮ್ ।
ಇತಸ್ತತಃ ಸುರೈರುಗ್ರೈಃ ಪೂಜ್ಯಸೇ ತ್ವಂ ಭವಾತ್ಮಜ ॥ ೧೪ ॥

ತ್ವಾಮಾರಾಧ್ಯಂ ಗಣಾಧ್ಯಕ್ಷಂ ಸರ್ವಜ್ಞಂ ಕಾಮರೂಪಿಣಮ್ ।
ಕಾರ್ಯಾರ್ಥಂ ರಕ್ತಕುಸುಮೈ ರಕ್ತಚಂದನವಾರಿಭಿಃ ॥ ೧೫ ॥

ರಕ್ತಾಂಬರಧರೋ ಭೂತ್ವಾ ಚತುರ್ಥ್ಯಾಮರ್ಚಯೇಜ್ಜಪೇತ್ ।
ತ್ರಿಕಾಲಮೇಕಕಾಲಂ ವಾ ಪೂಜಯೇನ್ನಿಯತಾಶನಃ ॥ ೧೬ ॥

ರಾಜಾನಂ ರಾಜಪುತ್ರಂ ವಾ ರಾಜಮಂತ್ರಿಣಮೇವ ವಾ ।
ರಾಜ್ಯಂ ಚ ಸರ್ವವಿಘ್ನೇಶ ವಶಂ ಕುರ್ಯಾತ್ಸರಾಷ್ಟ್ರಕಮ್ ॥ ೧೭ ॥

ಅವಿಘ್ನಂ ತಪಸೋ ಮಹ್ಯಂ ಕುರು ನೌಮಿ ವಿನಾಯಕ ।
ಮಯೇತ್ಥಂ ಸಂಸ್ತುತೋ ಭಕ್ತ್ಯಾ ಪೂಜಿತಶ್ಚ ವಿಶೇಷತಃ ॥ ೧೮ ॥

---

೧೪. ಎಲೈ ಶಿವಪುತ್ರನೆ! ಋಷಿಗಳಿಗೂ, ದೇವತೆಗಳಿಗೂ ನಾಯಕತ್ವವನ್ನೂ ಪ್ರಕಾಶಪಡಿಸಿದೆ. ಇಲ್ಲಿ ಅಲ್ಲಿ ಸರ್ವತ್ರ ದೇವಶ್ರೇಷ್ಠರಿಂದ ಸೇವಿಸಲ್ಪಡುತ್ತೀಯೆ.

೧೫-೧೬. ಸರ್ವಜ್ಞನೂ, ಕಾಮರೂಪಿಯೂ ಆದ ಗಣಪತಿಯಾದ ನಿನ್ನನ್ನು ಕಾರ್ಯದ ಸಲುವಾಗಿ ಕೆಂಪಾದ ಹೂಗಳಿಂದಲೂ, ಕೆಂಪಾದ ಗಂಧೋದಕಗಳಿಂದಲೂ ಪೂಜಿಸಿ, ಭಕ್ತನಾದವನು ಕೆಂಪು ಬಟ್ಟೆಯನ್ನುಟ್ಟು, ಚತುರ್ಥಿಯ ದಿವಸದಲ್ಲಿ ಅರ್ಚನಮಾಡುವುದು ಮತ್ತು ಜಪಿಸುವುದು; ಆಹಾರ ನಿಯಮವುಳ್ಳವನಾಗಿ ಮೂರು ಕಾಲಗಳಲ್ಲಿಯಾಗಲೀ, ಒಂದು ಕಾಲದಲ್ಲಿಯಾಗಲೀ ಪೂಜಿಸುವುದು.

೧೭. ದೊರೆಯನ್ನೂ, ಅರಸುವರನನ್ನೂ ರಾಜಾಮಾತ್ಯನನ್ನೂ ರಾಜ್ಯವನ್ನೂ ಮಂಡಲವನ್ನೂ–ಈ ಎಲ್ಲವನ್ನೂ ವಿಘ್ನೇಶ್ವರನಿಗೆ ಅರ್ಪಿಸಿ ವಶವನ್ನಾಗಿ ಮಾಡಿ ಕೊಳ್ಳುವುದು.

೧೮. ದುಷ್ಟರನ್ನು ಶಿಕ್ಷಿಸುವ, ವಿಘ್ನಗಳನ್ನು ಕಳೆಯುವ ಎಲೈ ವಿನಾಯಕನೆ! ನನಗೆ ತಪಕ್ಕೆ ವಿಘ್ನವಿಲ್ಲದಂತೆಸಗು; ಇಂತು ಗಣಪತಿಯು ನನ್ನಿಂದ ವಿಶೇಷವಾಗಿ ಭಕ್ತಿಯಿಂದ ಸ್ತುತನೂ ಪೂಜಿತನೂ ಆದನು.

ಯತ್ಫಲಂ ಸರ್ವತೀರ್ಥೇಷು ಸರ್ವಯಜ್ಞೇಷು ಯತ್ಫಲಮ್ ।
ತತ್ಫಲಂ ಪೂರ್ಣಮಾಪ್ನೋತಿ ಸ್ತುತ್ವಾ ದೇವಂ ವಿನಾಯಕಮ್ ॥ ೧೯ ॥

ವಿಷಮಂ ನ ಭವೇತ್ತಸ್ಯ ನ ಚ ಗಚ್ಛೇತ್ಪರಾಭವಮ್
ನ ಚ ವಿಘ್ನೋ ಭವೇತ್ತಸ್ಯ ಜಾತೋ ಜಾತಿಸ್ಮರೋ ಭವೇತ್ ।
ಯ ಇದಂ ಪಠತೇ ಸ್ತೋತ್ರಂ ಷಡ್ಭಿರ್ಮಾಸೈರ್ವರಂ ಲಭೇತ್
ಸಂವತ್ಸರೇಣ ಸಿದ್ಧಿಂ ಚ ಲಭತೇ ನಾತ್ರ ಸಂಶಯಃ ॥ ೨೦ ॥

॥ ಸೂತ ಉವಾಚ ॥

ಏವಂ ಸ್ತುತ್ವಾ ಪುರಾ ರಾಜಾ ಗಣಾಧ್ಯಕ್ಷಂ ದ್ವಿಜೋತ್ತಮ ।
ತಾಪಸಂ ವೇಷಮಾಸ್ಥಾಯ ತಪಶ್ಚರ್ತುಂ ಗತೋ ವನಮ್ ॥ ೨೧ ॥

---

೧೯. ಭಕ್ತನು ಎಲ್ಲತೀರ್ಥಗಳಲ್ಲಿ ಮಿಂಯುವುದರಿಂದಲೂ ಯಾವ ಫಲವೋ, ಯಜ್ಞಗಳನ್ನೆಲ್ಲಾ ಆಚರಿಸುವುದರಿಂದ ಯಾವ ಫಲವುಂಟಾಗುವುದೊ, ಆ ಫಲವನ್ನೆಲ್ಲಾ ವಿನಾಯಕ ಸ್ವಾಮಿಯನ್ನು ಸ್ತುತಿಸಿ ಸಂಪೂರ್ಣವಾಗಿ ಹೊಂದುತ್ತಾನೆ.

೨೦. ಇಂತು ಗಣಪತಿಯನ್ನು ಪೂಜಿಸಿದವನಿಗೆ ಯಾವುದೂ ವ್ಯತ್ಯಾಸವಾಗುದಿಲ್ಲ; ಯಾರಿಂದಲೂ ತಿರಸ್ಕಾರವುಂಟಾಗುವುದಿಲ್ಲವು ; ಯಾವ ಕೆಲಸದಲ್ಲಿಯೂ ಅಡ್ಡಿಯುಂಟಾಗುವುದಿಲ್ಲವು ; ಹುಟ್ಟಿದವನು ಜಾತಿಸ್ಮರನಾಗುವನು ; ಯಾವಾತನು ಈ ಸ್ತೋತ್ರವನ್ನು ಪಠಿಸುವನೋ, ಅವನು ಆರುತಿಂಗಳಿಂದ ಇಷ್ಟಾರ್ಥವನ್ನು ಹೊಂದುವನು ; ಸಂವತ್ಸರದಿಂದ ಸಿದ್ಧಿಯನ್ನು ಹೊಂದುವನು ; ಈ ವಿಷಯದಲ್ಲಿ ಸಂಶಯವಿಲ್ಲವು.

ಸೂತರು ಹೇಳುತ್ತಾರೆ :—

೨೧. ಎಲೈ ಭಾರದ್ವಾಜನೇ ! ಪೂರ್ವದಲ್ಲಿ ದೊರೆಯಾದ ಇಕ್ಷ್ವಾಕುವು ಗಣಪತಿಯನ್ನು ಇಂತು ಸ್ತುತಿಸಿ, ತಾಪಸವೇಷವನ್ನು ತಾಳಿ, ತಪವನ್ನಾಚರಿಸಲು ಹಳುವಕ್ಕೆ ಹೋದನು.

ಉತ್ಸೃಜ್ಯ ವಸ್ತ್ರಂ ನಾಗತ್ವಕ್ಸದೃಶಂ ಬಹುಮೂಲ್ಯಕಮ್ ।
ಕಠಿನಾಂ ತು ತ್ವಚಂ ವಾರ್ಕ್ಷೀಂ ಕಟ್ಯಾಂ ಧತ್ತೇ ನೃಪೋತ್ತಮಃ ॥ ೨೨ ॥

ತಥಾ ರಕ್ತಾನಿ ದಿವ್ಯಾನಿ ವಲಯಾನಿ ನಿರಸ್ಯ ತು ।
ಅಕ್ಷಸೂತ್ರಮಲಂಕಾರಂ ಫಲೈಃ ಪದ್ಮಸ್ಯ ಶೋಭನಮ್ ॥ ೨೩ ॥

ತಥೋತ್ತಮಾಂಗೇ ಮುಕುಟಂ ರತ್ನಹಾಟಕ ಶೋಭಿತಮ್ ।
ತ್ಯಕ್ತ್ವಾ ಜಟಾಕಲಾಪಂ ತು ತಪೋಽರ್ಥೇ ಬಿಭೃಯಾನ್ನೃಪಃ ॥ ೨೪ ॥

ಕೃತ್ವೇತ್ಥಂ ಸ ತಪೋವೇಷಂ ವಸಿಷ್ಠೋಕ್ತಂ ತಪೋವನಮ್ ।
ಪ್ರವಿಶ್ಯ ಚ ತಪಸ್ತೇಪೇ ಶಾಕಮೂಲಫಲಾಶನಃ ॥ ೨೫ ॥

ಗ್ರೀಷ್ಮೇ ಪಂಚಾಗ್ನಿಮಧ್ಯಸ್ಥೋಽತಪತ್ಕಾಲಂ ಮಹಾತಪಾಃ ।
ವರ್ಷಾಕಾಲೇ ನಿರಾಲಂಬೋ ಹೇಮಂತೇ ಚ ಸರೋಜಲೇ ॥ ೨೬ ॥

---

೨೨. ಆ ಶ್ರೇಷ್ಠನಾದ ರಾಜನು ಹಾವಿನಪೊರೆಗೆ ಸಮನಾದ ಬಹುಬೆಲೆಯುಳ್ಳ ಬಟ್ಟೆಯನ್ನು ತ್ಯಜಿಸಿ, ಒರಟಾದ ಮರದ ತೊಗಟೆಯ ವಸ್ತ್ರವನ್ನು ಸೊಂಟದಲ್ಲಿ ಧರಿಸಿದನು.

೨೩-೨೪. ಹಾಗೆಯೇ, ಕೆಂಪಿನ ಉತ್ತಮವಾದ ಕೈ ಕಡಗವನ್ನು ತೆಗೆದು ಹಾಕಿ, ಪದ್ಮಫಲ (ಪದ್ಮಾಕ್ಷ) ಗಳಿಂದ ಮನೋಹರವಾದ ಅಕ್ಷಸೂತ್ರವೆಂಬ ಅಲಂಕಾರವನ್ನೂ ಹಾಗೆಯೇ, ತಲೆಯಲ್ಲಿ ರನ್ನ ಮಿಸುನಿಗಳಿಂದ ಅಂದವಾದ ಕಿರೀಟವನ್ನು ತ್ಯಜಿಸಿ, ಆ ರಾಯನು ತಪಸ್ಸಿನ ಸಲುವಾಗಿ ಜಟೆಯ ಸಮುದಾಯವನ್ನೂ ಧರಿಸಿದನು.

೨೫. ಆ ರಾಜನು ಇಂತು ತಪೋವೇಷವನ್ನು ತಾಳಿ, ವಸಿಷ್ಠರು ಹೇಳಿದ ತಪೋವನವನ್ನು ಹೊಕ್ಕು, ಸೊಪ್ಪು, ಗೆಣಸು, ಹಣ್ಣುಗಳೇ ಆಹಾರವುಳ್ಳವನಾಗಿ, ತಪವನ್ನೆಸಗಿದನು.

೨೬. ಬೇಸಿಗೆಯಲ್ಲಿ ಮಾತಪಸಿಯಾದ ಆ ರಾಯನು ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ, ಸಭ್ಯ ಮತ್ತು ಆವಸಥ್ಯ ಈ ಐದು ಅಗ್ನಿಗಳ ನಡುವೆಯಿದ್ದೂ, ಕಾರ್ಗಾಲದಲ್ಲಿ ಯಾವ ಆಸರೆಯಿಲ್ಲದೆಯೂ, (ಕುಳಿರ್ಗಾಲದೊಳ್) ಹೇಮಂತದಲ್ಲಿ ಕೊಳನ ನೀರಿನಲ್ಲಿಯೂ ಇದ್ದೂ ತಪವನ್ನನುಷ್ಠಿಸಿದನು.

ಇಂದ್ರಿಯಾಣಿ ಸಮಸ್ತಾನಿ ನಿಯಮ್ಯ ಹೃದಯೇ ಪುನಃ ।
ಮನೋ ವಿಷ್ಣೌ ಸಮಾವಿಶ್ಯ ಮಂತ್ರಂ ವೈ ದ್ವಾದಶಾಕ್ಷರಮ್ ॥ ೨೭ ॥

ಜಪತೋ ವಾಯುಭಕ್ಷಸ್ಯ ತಸ್ಯ ರಾಜ್ಞೋ ಮಹಾತ್ಮನಃ ।
ಆವಿರ್ಬಭೂವ ಭಗವಾನ್ ಬ್ರಹ್ಮಾ ಲೋಕಪಿತಾಮಹಃ ॥ ೨೮ ॥

ತಮಾಗತಮಥಾಲೋಕ್ಯ ಪದ್ಮಯೋನಿಂ ಚತುರ್ಮುಖಮ್ ।
ಪ್ರಣಮ್ಯ ಭಕ್ತಿಭಾವೇನ ಸ್ತುತ್ವಾ ಚ ಪರ್ಯತೋಷಯತ್ ॥ ೨೯ ॥

ನಮೋ ಹಿರಣ್ಯಗರ್ಭಾಯ ಜಗತ್ಸ್ರಷ್ಟ್ರೇ ಮಹಾತ್ಮನೇ ।
ವೇದಶಾಸ್ತ್ರಾರ್ಥವಿದುಷೇ ಚತುರ್ವಕ್ತ್ರಾಯ ತೇ ನಮಃ ॥ ೩೦ ॥

೨೭–೨೮. ಆ ರಾಯನು ತನ್ನ ಬಾಹ್ಯಗಳಾದ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆಲ್ಲವನ್ನೂ ಮತ್ತೂ ಹೃದಯದಲ್ಲಿ ನಿಯಮನ ಮಾಡಿ, ಮನ ಇಂದ್ರಿಯವನ್ನು ಶ್ರೀ ಮಹಾವಿಷ್ಣುವಿನಲ್ಲಿ ದೃಢವಾಗಿ ಸ್ಥಾಪಿಸಿ, 'ಓಂ ನಮೋ ಭಗವತೇ ವಾಸುದೇವಾಯ' ವೆಂಬ ಹನ್ನೆರಡಕ್ಷರಗಳ ಮಂತ್ರವನ್ನು ಜಪಿಸುತ್ತಾ, ವಾಯುವೇ ಆಹಾರವಾಗಿದ್ದ ಮಹಾತ್ಮನಾದ ಆ ಇಕ್ಷ್ವಾಕುರಾಯನಿದಿರಿನಲ್ಲಿ ಹದಿನಾಲ್ಕು ಲೋಕಗಳಿಗೂ ಪಿತಾಮಹನಾದ ಭಗವಂತನಾದ ಚತುರ್ಮುಖಬ್ರಹ್ಮನು ಪ್ರತ್ಯಕ್ಷನಾದನು.

೨೯. ಅನಂತರದಲ್ಲಿ ಆ ರಾಯನು ಬಂದ, ಕಮಲದಲ್ಲಿ ಹುಟ್ಟಿದ, ನಾಲ್ಮೊಗನಾದ, ಆ ಹಿರಣ್ಯಗರ್ಭನನ್ನು ನಮಸ್ಕರಿಸಿ, ಭಕ್ತಿಭಾವದಿಂದ ಕೂಡಿದ ಸ್ತೋತ್ರಗಳನ್ನು ಹಾಡಿ, ಸಂತಸಗೊಳಿಸಿದನು.

೩೦. 'ಹದಿನಾಲ್ಕು ಭುವನಗಳನ್ನೂ ಸೃಷ್ಟಿಸಿದ, ಮಹಾತ್ಮನಾದ, ಹಿರಣ್ಯಗರ್ಭನಿಗೆ ನಮಸ್ಕಾರ. ವೇದಶಾಸ್ತ್ರಗಳನ್ನು ಸಂಪೂರ್ಣವಾಗಿ ತಿಳಿದಿರುವ ನಾಲ್ಮೊಗನಾದ ನಿನಗೆ ನಮಸ್ಕಾರ.'

ಇತಿ ಸ್ತುತೋ ಜಗತ್ಸ್ರಷ್ಟಾ ಬ್ರಹ್ಮಾ ಪ್ರಾಹ ನೃಪೋತ್ತಮಮ್ ।
ತಪಸ್ಯಭಿರತಂ ಶಾಂತಂ ತ್ಯಕ್ತರಾಜ್ಯಂ ಮಹಾಸುಖಮ್ ॥ ೩೧ ॥

॥ ಬ್ರಹ್ಮೋವಾಚ ॥

ಲೋಕಪ್ರಕಾಶಕೋ ರಾಜನ್ ಸೂರ್ಯಸ್ತವ ಪಿತಾಮಹಃ ।
ಮುನೀನಾಮಪಿ ಸರ್ವೇಷಾಂ ಸದಾ ಮಾನ್ಯೋ ಮನುಃ ಪಿತಾ ॥ ೩೨ ॥

ಕೃತವಂತೌ ತಪಃ ಪೂರ್ವಂ ತೀವ್ರಂ ಪಿತೃಪಿತಾಮಹೌ ।
ತಾವತ್ತೀವ್ರಂ ತಪಸ್ತೇಽದ್ಯ ವರ್ತತೋ ನಿಸ್ಪೃಹಸ್ಯ ವೈ ॥ ೩೩ ॥

ಕಿಮರ್ಥಂ ರಾಜ್ಯಭೋಗಂ ತು ತ್ಯಕ್ತ್ವಾ ಸರ್ವಂ ನೃಪೋತ್ತಮ ।
ತಪಃ ಕರೋಷಿ ಘೋರಂ ತ್ವಂ ಸಮಾಚಕ್ಷ್ವ ಮಹಾಮತೇ ॥ ೩೪ ॥

---

೩೧. ಇಂತು ಸ್ತುತಿಸಲ್ಪಟ್ಟ ಜಗತ್ಸ್ರಷ್ಟೃವಾದ ಬ್ರಹ್ಮನು ತಪದಲ್ಲಿ ಬಹುವಾಗಿ ಆಸಕ್ತನಾದವನೂ, ಶಾಂತನೂ, ರಾಜ್ಯವನ್ನು ತ್ಯಜಿಸಿದವನೂ, ಮಹಾ ಸುಖವುಳ್ಳವನೂ ಆದ ಆ ರಾಜಶ್ರೇಷ್ಠನಿಗೆ ಇಂತು ಹೇಳಿದನು.

ಬ್ರಹ್ಮನು ಹೇಳುತ್ತಾನೆ:—

೩೨. 'ಎಲೌ ಇಕ್ಷ್ವಾಕುರಾಯನೇ, ಜಗತ್ತನ್ನು ಬೆಳಗುವ ಸೂರ್ಯನು ನಿನ್ನ ಪಿತಾಮಹನು (ತಂದೆಯ ತಂದೆ). ಎಲ್ಲಾ ಜ್ಞಾನಿಗಳಾದ ಮುನಿಗಳಿಗೂ ಯಾವಾಗಲೂ ಮಾನ್ಯನಾದ ಮನುವು ನಿನ್ನ ತಂದೆಯು.

೩೩–೩೪. ಪೂರ್ವದಲ್ಲಿ ನಿನ್ನ ಪಿತೃಪಿತಾಮಹಂದಿರು ಕಠಿನವಾದ ತಪವನ್ನೆಸಗಿದರು. ಮಹಾಮತಿಯಾದ, ಎಲೈ ಮಹಾರಾಯನೇ! ರಾಜ್ಯಸುಖಗಳೆಲ್ಲವನ್ನೂ ತೊರೆದು ಯಾವ ಫಲಕ್ಕಾಗಿ ನೀನು ಘೋರವಾದ ಈ ತಪಸ್ಸನ್ನು ಮಾಡುತ್ತಲಿರುವೆ? ಅದನ್ನು ಹೇಳು.'

ಇತ್ಯುಕ್ತೋ ಬ್ರಹ್ಮಣಾ ರಾಜಾ ತಂ ಪ್ರಣಮ್ಯಾಬ್ರವೀದ್ವಚಃ ।
ದ್ರಷ್ಟುಮಿಚ್ಛಂಸ್ತಪಶ್ಚರ್ಯಾಬಲೇನ ಮಧುಸೂದನಮ್ ॥ ೩೫ ॥

ಕರೋಮ್ಯೇವ ತಪೋ ಬ್ರಹ್ಮನ್ ಶಂಖಚಕ್ರಗದಾಧರಮ್ ।
ಇತ್ಯುಕ್ತಃ ಪ್ರಾಹ ರಾಜಾನಂ ಪದ್ಮಜನ್ಮಾ ಹಸನ್ನಿವ ॥ ೩೬ ॥

ನ ಶಕ್ಯಸ್ತಪಸಾ ದ್ರಷ್ಟುಂ ತ್ವಯಾ ನಾರಾಯಣೋ ವಿಭುಃ ।
ಮಾದೃಶೈರಪಿ ನೋ ದೃಶ್ಯಃ ಕೇಶವಃ ಕ್ಲೇಶನಾಶನಃ ॥ ೩೭ ॥

ಪುರಾತನೀಂ ಪುಣ್ಯಕಥಾಂ ಕಥಯಾಮಿ ನಿಬೋಧ ಮೇ ।
ನಿಶಾಂತೇ ಪ್ರಲಯೇ ಲೋಕಾನ್ ನಿನಾಯ ಕಮಲೇಕ್ಷಣಃ ॥ ೩೮ ॥

ಅನಂತಭೋಗಶಯನೇ ಯೋಗನಿದ್ರಾಂ ಗತೋ ಹರಿಃ ।
ಸನಂದನಾದ್ಯೈರ್ಮುನಿಭಿಸ್ತೂಯಮಾನೋ ಮಹಾಮತೇ ॥ ೩೯ ॥

೩೫-೩೬. ಚತುರ್ಮುಖನಿಂದ ಇಂತು ಹೇಳಿಸಿಕೊಂಡ ರಾಯನು ಅವನಿಗೆರಗಿ ಇಂತು ನುಡಿದನು; "ಎಲೈ ಬ್ರಹ್ಮದೇವನೇ! ತಪೋನುಷ್ಠಾನಸಾಮರ್ಥ್ಯದಿಂದ ಶಂಖಚಕ್ರಗದಾಪದ್ಮಧರನಾದ, ಮಧುರಿಪುವಾದ, ಶ್ರೀಮನ್ನಾರಾಯಣನನ್ನು ಕಣ್ಣಾರೆ ಕಾಣಲೆಳಸಿಯೇ ತಪವನ್ನನುಷ್ಠಿಸುತ್ತಿರುವೆನು;" ಎಂದು ರಾಯನು ಹೇಳಲು, ತಾವರೆಯಲ್ಲಿ ಪುಟ್ಟಿದ ಬ್ರಹ್ಮನು ರಾಯನನ್ನು ಕುರಿತು ನಗುವವನಂತೆ ಇಂತು ಹೇಳಿದನು.

೩೭. "ಎಲೈ ರಾಯನೇ! ವಿಭುವಾದ ನಾರಾಯಣನನ್ನು ನೀನು ತಪೋಬಲದಿಂದ ನೋಡಲಾರೆ. ಭಕ್ತರ ಕ್ಲೇಶವನ್ನಳಿಸುವ, ಕೇಶವನನ್ನು ನಮ್ಮಂತಹವರೂ ಕಾಣಲಾರರು.

೩೮. ಪುರಾತನವಾದ ಪುಣ್ಯಕಥೆಯನ್ನು ಹೇಳುವೆನು ಕೇಳು" ಮಹಾಪ್ರಲಯದಲ್ಲಿ ಪುಂಡರೀಕಾಕ್ಷನಾದ ನಾರಾಯಣನು ಸಕಲ ಪ್ರಪಂಚವನ್ನೂ ತನ್ನಲ್ಲಿ ಅಡಗಿಸಿಕೊಂಡನು.

೩೯. ಎಲೈ ಮಹಾಮತಿಯೇ! ಆಗ ಸನಂದನಾದಿ ಮುನಿಗಳು ಹೊಗಳುತ್ತಿರಲು, ಆದಿಶೇಷನ ಭೋಗಶಯನದಲ್ಲಿ ಯೋಗನಿದ್ರಾಸಕ್ತನಾದನು.

ತಸ್ಯ ಸುಪ್ತಸ್ಯ ನಾಭೌ ತು ಮಹತ್ಪದ್ಮಮಜಾಯತ ।
ತಸ್ಮಿನ್ ಪದ್ಮೇ ಶುಭೇ ರಾಜನ್ ಜಾತೋಽಹಂ ವೇದವಿತ್ಪುರಾ ॥ ೪೦ ॥

ತತೋ ಭೂತ್ವಾ ತ್ವಧೋದೃಷ್ಟಿರ್ದೃಷ್ಟವಾನ್ ಕಮಲೇಕ್ಷಣಮ್ ।
ಅನಂತಭೋಗಪರ್ಯಂಕೇ ಭಿನ್ನಾಂಜನನಿಭಂ ಹರಿಮ್ ॥ ೪೧ ॥

ಅತಸೀಕುಸುಮಾಭಾಸಂ ಶಯಾನಂ ಪೀತವಾಸಸಮ್ ।
ದಿವ್ಯರತ್ನ ವಿಚಿತ್ರಾಂಗಂ ಮುಕುಟೇನ ವಿರಾಜಿತಮ್ ॥ ೪೨ ॥

ಕುಂದೇಂದುಸದೃಶಾಕಾರಂ ಅನಂತಂ ಚ ಮಹಾಮತೇ ।
ಸಹಸ್ರಫಣಮಧ್ಯಸ್ಥೈರ್ಮಣಿಭಿರ್ದೀಪ್ತಮಂತತಃ ॥ ೪೩ ॥

ಕ್ಷಣಮಾತ್ರಂ ತು ತಂ ದೃಷ್ಟ್ವಾ ಪುನಸ್ತತ್ರ ನ ದೃಷ್ಟವಾನ್ ।
ದುಃಖೇನ ಮಹತಾವಿಷ್ಟೋ ಬಭೂವಾಹಂ ನೃಪೋತ್ತಮ ॥ ೪೪ ॥

---

೪೦. ಇಂತು ಮಲಗಿದ ಅವನ ಹೊಕ್ಕುಳಲ್ಲಿ ಪೆದ್ಮಾವರೆಯು ಹುಟ್ಟಿತು. ಎಲೈ ರಾಯನೇ! ಪೂರ್ವದಲ್ಲಿ ವೇದಜ್ಞನಾದ ನಾನು ಆ ಮಂಗಳಕರವಾದ ಪದ್ಮದಲ್ಲಿ ಹುಟ್ಟಿದೆನು.

೪೧. ಅನಂತರ ಆದಿಶೇಷನ ಒಡಲ್ಮಂಚದಲ್ಲಿ ಇಬ್ಬಾಗಗೆಯ್ದು, ಕಾಡಿಗೆಯ ಪರ್ವತಕ್ಕೆಣೆಯಾದ ಪುಂಡರೀಕಾಕ್ಷನಾದ ಶ್ರೀ ಹರಿಯನ್ನು ಕೀಳ್ದಿಟ್ಟಿಯುಳ್ಳವನಾಗಿ ನೋಡಿದೆನು.

೪೨–೪೪. ಆ ಶ್ರೀಹರಿಯು ಅಗಸೆಯ ಹೂವಿಗೆ ಸಮಾನವಾಗಿ ಕಾಂತಿಯುಳ್ಳವನೂ, ಮಲಗಿರುವವನೂ, ಪೀತಾಂಬರನೂ, ಅನರ್ಘವಾದ ರತ್ನಗಳಿಂದ ಮನೋಹರವಾದೊಡಲುಳ್ಳವನೂ, ಕಿರೀಟದಿಂದ ಪ್ರಕಾಶಿಸುವವನೂ, ಮಲ್ಲಿಗೆ ಮತ್ತು ಚಂದ್ರ ಇವರಿಗೆ ದೊರೆಯಾದ ಆಕಾರವುಳ್ಳವನೂ, ನಾಶಶೂನ್ಯನಾದ್ದರಿಂದ ಅನಂತನೂ ಆಗಿದ್ದನು. ಎಲೈ ಮಹಾಮತಿಯೇ! ಆದಿಶೇಷನ ಸಾಸಿರಹೆಡೆಗಳ ನಡುವೆಯಿದ್ದ ಕೆಂಪುಗಳಿಂದ ಪ್ರಕಾಶಮಾನನಾದ ಆ ಶ್ರೀಹರಿಯನ್ನು ಕ್ಷಣಕಾಲ ಮಾತ್ರ ನೋಡಿ, ಪುನಃ ಅಲ್ಲಿ ಕಾಣಲಿಲ್ಲವು. ಎಲೈ ನೃಪಶ್ರೇಷ್ಠನೇ! ಆಗ ನಾನು ಅತಿಶಯವಾದ ದುಃಖದಿಂದ ಕೂಡಿದವನಾದೆನು.

ತತೋಽವರತರಸ್ತಸ್ಮಾತ್ ಪದ್ಮನಾಲಂ ಸಮಾಶ್ರಿತಃ ।
ಕೌತೂಹಲೇನ ತಂ ದ್ರಷ್ಟುಂ ನಾರಾಯಣಮನಾಮಯಮ್ ॥ ೪೫ ॥

ತತಸ್ತ್ವನ್ವಿಷ್ಯ ರಾಜೇಂದ್ರ ಸಲಿಲಾಂತಂ ನ ದೃಷ್ಟವಾನ್ ।
ಶ್ರೀಶಂ ಪುನಸ್ತಮೇವಾಹಂ ಪದ್ಮಮಾಶ್ರಿತ್ಯ ಚಿಂತಯನ್ ।
ತದ್ರೂಪಂ ವಾಸುದೇವಸ್ಯ ದ್ರಷ್ಟುಂ ತೇಪೇ ಮಹತ್ತಪಃ ।
ತತೋ ಮಾಮಂತರಿಕ್ಷಸ್ಥಾ ವಾಗುವಾಚಾಶರೀರಿಣೀ ॥ ೪೬ ॥

ವೃಥಾ ಕಿಂ ಕ್ಲಿಶ್ಯತೇ ಬ್ರಹ್ಮನ್ ಸಾಂಪ್ರತಂ ಕುರು ಮೇ ವಚಃ ।
ನ ದೃಶ್ಯೋ ಭಗವಾನ್ ವಿಷ್ಣುಸ್ತಪಸಾ ಮಹತಾಽಪಿ ತೇ ।
ಸೃಷ್ಟಿಂ ಕುರು ತದಾಜ್ಞಪ್ತೋ ಯದಿ ದ್ರಷ್ಟುಮಿಹೇಚ್ಛಸಿ ।
ಶುದ್ಧಸ್ಫಟಿಕಸಂಕಾಶಂ ನಾಗಪರ್ಯಂಕಶಾಯಿನಮ್ ॥ ೪೭ ॥

---

೪೫. ಅನಂತರದಲ್ಲಿ ರೋಗಾದಿಗಳಿಂದ ಯಾವ ಬಾಧೆಯೂ ಇಲ್ಲದವನಾದ ಆ ಶ್ರೀಮನ್ನಾರಾಯಣನನ್ನು ನೋಡುವ ಕುತೂಹಲದಿಂದ ಆ ಕಮಲದಿಂದಿಳಿದು ಅದರ ದಂಟನ್ನು ಹೊಂದಿದೆನು.

೪೬. ಎಲೈ ರಾಜೇಂದ್ರನೇ! ಅನಂತರದಲ್ಲಿ ಆ ಶ್ರೀಪತಿಯಾದ ನಾರಾಯಣನನ್ನು ನೀರಿನ ಕರೆಯುವರೆಗೂ ಹುಡುಕಿಯೂ ಕಾಣಲಿಲ್ಲ. ಮತ್ತೆ ನಾನು ಆ ಕಮಲವನ್ನೇ ಆಶ್ರಯಿಸಿ ಆ ವಾಸುದೇವನ ಆ ರೂಪವನ್ನು ನೋಡಲು, ಧ್ಯಾನಮಾಡುತ್ತಾ, ಬಹು ಕಠಿನವಾದ ತಪಸ್ಸನ್ನನುಷ್ಠಿಸಿದೆನು. ಅನಂತರದಲ್ಲಿ ಅಂತರಿಕ್ಷದಲ್ಲಿದ್ದ ಅಶರೀರ ವಾಣಿಯು ನನಗೆ ಇಂತು ಹೇಳಿತು.

೪೭. ' ಎಲೈ ಬ್ರಹ್ಮನೇ! ಸುಮ್ಮನೆ ಏಕೆ ಕಷ್ಟಪಡುತ್ತೀಯೆ? ಈಗ ನಾನು ಹೇಳುವ ಮಾತನ್ನು ನಡೆಸು ; ನೀನು ಬಹು ತಪಸ್ಸಿನಿಂದಲೂ ಭಗವಂತನಾದ ಮಹಾವಿಷ್ಣುವನ್ನು ಕಾಣಲಾರೆ. ಶುದ್ಧಪಳಿಕಿಗೆ ಸಮನಾದ, ಶೇಷಪರ್ಯಂಕದಲ್ಲಿ ಮಲಗಿರುವ ಶ್ರೀ ವಾಸುದೇವನನ್ನು ನೋಡಬಯಸುವೆಯಾದರೆ, ಅವನ ಅಪ್ಪಣೆ ಪಡೆದು ಜಗತ್ಸೃಷ್ಟಿಯನ್ನು ಮಾಡು.

ಯದ್ದೃಷ್ಟಂ ಶಾರ್ಙ್ಗಿಣೋ ರೂಪಂ ಭಿನ್ನಾಂಜನಸಮಪ್ರಭಮ್ ।
ಪ್ರತಿಭಾನಿಯತಂ ರೂಪಂ ವಿಮಾನಸ್ಥಂ ಮಹಾಮತೇ ॥ ೪೮ ॥

ಭಜ ನಿತ್ಯಮನಾಲಸ್ಯಸ್ತತೋ ದ್ರಕ್ಷ್ಯಸಿ ಮಾಧವಮ್ ।
ತಯೇತ್ಥಂ ಚೋದಿತೋ ರಾಜನ್ ತ್ಯಕ್ತ್ವಾ ತಪ್ತಮನುತ್ತಮಮ್ ॥ ೪೯ ॥

ಸೃಷ್ಟವಾನ್ ಲೋಕಭೂತಾನಾಂ ಸೃಷ್ಟಿಂ ಸೃಷ್ಟ್ವಾ ಸ್ಥಿತಸ್ಯ ಚ ।
ಆವಿರ್ಬಭೂವ ಮನಸಿ ವಿಶ್ವಕರ್ಮಾ ಪ್ರಜಾಪತಿಃ ॥ ೫೦ ॥

ಅನಂತಕೃಷ್ಣಯೋಸ್ತೇನ ದ್ವೇ ರೂಪೇ ನಿರ್ಮಿತೇ ಶುಭೇ ।
ವಿಮಾನಸ್ಥೋ ಯಥಾಪೂರ್ವಂ ಮಯಾ ದೃಷ್ಟೋ ಜಲೇ ನೃಪ ॥ ೫೧ ॥

೪೮-೫೦. ಎಲೈ ಮಹಾಮತಿಯಾದ ಚತುರ್ಮುಖನೇ! ಕತ್ತರಿಸಿದ ಕಾಡಿಗೆಯ ಪರ್ವತಕ್ಕೆ ಸಮಾನವಾದ ಕಾಂತಿಯುಳ್ಳ ನಿನ್ನ ಪ್ರತಿಭೆಯಲ್ಲಿ ಗೊತ್ತಾಗಿರುವ, ಶಾರ್ಙ್ಗವೆಂಬ ಬಿಲ್ಲನ್ನು ಹಿಡಿದಿರುವ ಶ್ರೀಮನ್ನಾರಾಯಣನ ಯಾವ ರೂಪವನ್ನು ಕಂಡೆಯೋ, ಆ ರೂಪದ, ಲಕ್ಷ್ಮೀಪತಿಯಾದ ಶ್ರೀಹರಿಯನ್ನು ನಿತ್ಯದಲ್ಲೂ ಆಲಸ್ಯವಿಲ್ಲದೇ ಸೇವಿಸು; ಅದರಿಂದ ನೀನು ಕಾಣುವೆ;' ಎಂದು ಅಶರೀರವಾಣಿಯು ಹೇಳಿ, ನನ್ನನ್ನು ಪ್ರೇರಿಸಲು, ನಾನು ಆ ಕೂಡಲೇ ತಪವನ್ನು ತ್ಯಜಿಸಿ, ಲೋಕಗಳನ್ನೂ, ಪ್ರಾಣಿಗಳನ್ನೂ ಸೃಷ್ಟಿಸಿದೆನು. ಇಂತು ಸೃಷ್ಟಿಯನ್ನು ಮಾಡಿದ ನನ್ನ ಮನಸ್ಸಿನಲ್ಲಿ ಸಕಲ ಪ್ರಜೆಗಳಿಗೂ ಸ್ವಾಮಿಯಾದ ವಿಶ್ವಕರ್ಮನಾದ ಭಗವಂತನು ಆವಿರ್ಭವಿಸಿದನು.

೫೧. ಎಲೈ ಇಕ್ಷ್ವಾಕುರಾಯನೇ! ಹಿಂದೆ ನಾನು ಜಲದಲ್ಲಿ ವಿಮಾನದಲ್ಲಿದ್ದ ಶ್ರೀಹರಿಯನ್ನು ಹೇಗೆ ನೋಡಿದ್ದೆನೋ, ಹಾಗೆಯೇ ಆ ವಿಶ್ವಕರ್ಮನಾದ ಶ್ರೀಹರಿಯಿಂದ ಅನಂತ ಕೃಷ್ಣರ ಶುಭವಾದೆರಡು ರೂಪಗಳು ನಿರ್ಮಿತವಾದುವು.

ತಥೈವ ತಂ ತತೋ ಭಕ್ತ್ಯಾ ಸಂಪೂಜ್ಯಾಹಂ ಹರಿಂ ಸ್ಥಿತಃ ।
ತತ್ಪ್ರಸಾದಾತ್ತಪಃ ಶ್ರೇಷ್ಠಂ ಮಯಾ ಜ್ಞಾನಮನುತ್ತಮಮ್ ॥ ೫೨ ॥

ಲಬ್ಧ್ವಾ ಮುಕ್ತಿಂ ಚ ಪಶ್ಯಾಮಿ ಅವಿಕಾರಕ್ರಿಯಾ ಸುಖಮ್ ।
ತದಹಂ ತೇ ಪ್ರವಕ್ಷ್ಯಾಮಿ ಹಿತಂ ನೃಪವರೇಶ್ವರ ॥ ೫೩ ॥

ವಿಸೃಜ್ಯ ತತ್ತಪೋ ಘೋರಂ ಪುರೀಂ ವ್ರಜ ನಿಜಾಂ ನೃಪ ।
ಪ್ರಜಾನಾಂ ಪಾಲನಂ ಧರ್ಮಸ್ತಪಶ್ಚೈವ ಮಹೀಭೃತಾಮ್ ॥ ೫೪ ॥

ವಿಮಾನಂ ಪ್ರೇಷಯಿಷ್ಯಾಮಿ ಸಿದ್ಧದ್ವಿಜ ಗಣಾನ್ವಿತಮ್ ।
ತತ್ರಾರಾಧಯ ದೇವೇಶಂ ಬಾಹ್ಯಾರ್ಥೈರಖಿಲೈಃ ಶುಭೈಃ ॥ ೫೫ ॥

೫೨–೫೩. ಅನಂತರದಲ್ಲಿ ನಾನು ಹಾಗೆಯೇ ಭಕ್ತಿಯಿಂದ ಶ್ರೀಹರಿಯನ್ನು ಪೂಜಿಸಿದ್ದವನು ಆ ಭಗವಂತನ ಅನುಗ್ರಹದಿಂದ ಶ್ರೇಷ್ಠವಾದ ತಪವನ್ನೂ, ಅತ್ಯುತ್ತಮವಾದ ತತ್ವಜ್ಞಾನವನ್ನೂ ಹೊಂದಿ, ಬಂಧಕವಾದ ಕರ್ಮಸುಖಗಳಿಲ್ಲದ, ಕೇವಲ ಸುಖರೂಪವಾದ ಮೋಕ್ಷವನ್ನು ಕಾಣುತ್ತೇನೆ; ಎಲೈ ಅತ್ಯಂತ ಶ್ರೇಷ್ಠನಾದ ನೃಪನೇ! ಅಂತು ಭಗವಂತನನ್ನು ಕಂಡ ನಾನು ನಿನಗೆ ಹಿತವನ್ನು ಹೇಳುವೆನು ; ಆಲಿಸು.

೫೪. ಎಲೈ ನೃಪನೇ! ಆ ಕಠಿನವಾದ ತಪಸ್ಸನ್ನುಳಿದು ನಿನ್ನ ಪಟ್ಟಣಕ್ಕೆ ಹೋಗು ; ಭೂಪತಿಗಳಿಗೆ ಪ್ರಜೆಗಳನ್ನು ಸಲಹುವುದೇ ಧರ್ಮ ಮತ್ತು ತಪಸ್ಸು ಆಗಿರುವುದು.

೫೫. ಎಲೈ ರಾಯನೇ! ಸಿದ್ಧರು ಬ್ರಾಹ್ಮಣರು ಇವರ ಗಣಗಳಿಂದ ಕೂಡಿದ ವಿಮಾನವನ್ನು ಕಳುಹಿಸಿಕೊಡುವೆನು. ಅಲ್ಲಿ ಸಕಲ ದೇವರಿಗೂ ನಿಯಾಮಕನಾದ ಶ್ರೀಹರಿಯನ್ನು ಎಲ್ಲಾ ಮಂಗಳ ದ್ರವ್ಯಗಳಿಂದ ಪೂಜಿಸು.

ನಾರಾಯಣಮನಂತಾಖ್ಯಂ ಶಯಾನಂ ಕ್ರತುಭಿರ್ಯಜನ್ ।
ನಿಷ್ಕಾಮೋ ನೃಪಶಾರ್ದೂಲ ಪ್ರಜಾ ಧರ್ಮೇಣ ಪಾಲಯ ॥ ೫೬ ॥

ಪ್ರಸಾದಾದ್ವಾಸುದೇವಸ್ಯ ಮುಕ್ತಿಸ್ತೇ ಭವಿತಾ ನೃಪ ।
ಇತ್ಯುಕ್ತ್ವಾ ತಂ ಜಗಾಮಾಥ ಬ್ರಹ್ಮಲೋಕಂ ಪಿತಾಮಹಃ ॥ ೫೭ ॥

ಇಕ್ಷ್ವಾಕುಶ್ಚಿಂತಯಾಮಾಸ ಪದ್ಮಯೋನಿವಚೋ ದ್ವಿಜ ।
ಆವಿರ್ಬಭೂವ ಪುರತೋ ವಿಮಾನಂ ತನ್ಮಹೀಭೃತಃ ॥ ೫೮ ॥

ಬ್ರಹ್ಮದತ್ತಂ ದ್ವಿಜಯುತಂ ಮಾಧವಾನಂತಯೋಃ ಶುಭಮ್ ।
ತಂ ದೃಷ್ಟ್ವಾ ಪರಯಾ ಭಕ್ತ್ಯಾ ನತ್ವಾ ಚ ಪುರುಷೋತ್ತಮಮ್ ॥ ೫೯ ॥

ಋಷೀನ್ ಪ್ರಣಮ್ಯ ವಿಪ್ರಾಂಶ್ಚ ತದಾದಾಯ ಯಯೌ ಪುರೀಮ್ ।
ಪೌರೈರ್ಜನೈಶ್ಚ ನಾರೀಭಿರ್ದೃಷ್ಟತೋಭಾಸಮನ್ವಿತೈಃ ॥ ೬೦ ॥

---

೫೬. ಎಲೈ ರಾಜಶ್ರೇಷ್ಠನೇ! ಕೇಳು; ಶೇಷಶಾಯಿಯಾದ ಅನಂತನೆಂಬ ಹೆಸರಿನ ಶ್ರೀಮನ್ನಾರಾಯಣನನ್ನು ಯಜ್ಞಗಳಿಂದ ಪೂಜಿಸುತ್ತಾ, ಫಲಾಪೇಕ್ಷೆಯಿಲ್ಲದೆ ಪ್ರಜೆಗಳನ್ನು ಧರ್ಮದಿಂದ ರಕ್ಷಿಸು.

೫೭. ಎಲೈ ಜನರಕ್ಷಕನೇ! ಕೇಳು; ಶ್ರೀ ವಾಸುದೇವನ ಅನುಗ್ರಹದಿಂದ ನಿನಗೆ ಮೋಕ್ಷವುಂಟಾಗುತ್ತದೆ;' ಎಂದು ಚತುರ್ಮುಖನಾದ ಪಿತಾಮಹನು ಹೇಳಿ, ಅನಂತರದಲ್ಲಿ ಸತ್ಯಲೋಕಕ್ಕೆ ಹೋದನು.

೫೮. ಎಲೈ ದ್ವಿಜನಾದ ಮೈತ್ರೇಯನೇ! ಕೇಳು. ಕಮಲದಲ್ಲಿ ಜನಿಸಿದ ಬ್ರಹ್ಮನ ಮಾತನ್ನು ಆ ರಾಯನು ಚಿಂತಿಸುತ್ತಿದ್ದನು. ಆ ವೇಳೆಗೆ ದೊರೆಯ ಇದುರಿನಲ್ಲಿ ವಿಮಾನವು ಆವಿರ್ಭವಿಸಿತು.

೫೯–೬೦. ಬ್ರಹ್ಮನು ಕೊಟ್ಟ, ಬ್ರಾಹ್ಮಣರಿಂದ ಕೂಡಿದ, ಮಾಧವಾನಂತರ ಶುಭವಾದ ಆ ವಿಮಾನವನ್ನು ಇಕ್ಷ್ವಾಕುರಾಯನು ಕಂಡು, ಪುರುಷೋತ್ತಮನಾದ ಶ್ರೀಹರಿಯನ್ನು ನಿರತಿಶಯವಾದ ಭಕ್ತಿಯಿಂದ ನಮಸ್ಕರಿಸಿ; ಅದನ್ನು ತೆಗೆದುಕೊಂಡು

ಲಾಜಾ ವಿನಿಕ್ಷಿಪದ್ಭಿಶ್ಚ ನೀತೋ ರಾಜಾ ಸ್ವಕಂ ಗೃಹಮ್ ।
ಸ್ವಮಂದಿರೇ ವಿಶಾಲೇ ತು ವಿಮಾನಂ ವೈಷ್ಣವಂ ಶುಭಮ್ ॥ ೬೧ ॥

ಸಂಸ್ಥಾಪ್ಯಾರಾಧಯಾಮಾಸ ತ್ರೈವಿದ್ಯೈರ್ಜ್ಯೈರರ್ಚಿತಂ ಹರಿಮ್ ।
ಮಹಿಷ್ಯಾಃ ಶೋಭನಾಯಾಸ್ತು ಪಿಷ್ಟ್ವಾ ತು ಹರಿಚಂದನಮ್ । ೬೨ ॥

ಮಾಲಾಂ ಕೃತ್ವಾ ಸುಗಂಧಾಢ್ಯಾಂ ಪ್ರೀತಿಸ್ತಸ್ಯ ವವರ್ಧ ಹ ।
ಪೌರಾಃ ಕರ್ಪೂರಶ್ರೀಖಂಡಂ ಕುಂಕುಮಾದ್ಯಾಗುರುಂ ತಥಾ ॥ ೬೩ ॥

ಕೃತ್ಸ್ನಂ ವಿಶೇಷತೋ ವಸ್ತ್ರಂ ಮಹಿಷಾಖ್ಯಂ ಚ ಗುಗ್ಗುಲಮ್ ।
ಪುಷ್ಪಾಣಿ ವಿಷ್ಣುಯೋಗ್ಯಾನಿ ದದುರಾನೀಯ ಭೂಪತೇಃ ॥ ೬೪ ॥

ತನ್ನ ಅಯೋಧ್ಯಾಪುರಿಗೆ ಹೋದನು. ಲೌಕಿಕವಾದ ಸೊಬಗಿನಿಂದ ವಿರಾಜಿಸುವ, ಅರಳನ್ನು ಎಸೆಯುತ್ತಿರುವ ಪುರಜನರಿಂದಲೂ, ವನಿತೆಯರಿಂದಲೂ ರಾಯನು ತನ್ನ ಅರಮನೆಗೆ ಕರೆದೊಯ್ಯಲ್ಪಟ್ಟನು. ವಿಸ್ತಾರವಾದ ತನ್ನ ಪ್ರಾಸಾದದಲ್ಲಿ ರಾಜನು ಆ ಮಂಗಳವಾದ ವೈಷ್ಣವ ವಿಮಾನವನ್ನು ಇಟ್ಟು, ಬ್ರಾಹ್ಮಣರಿಂದ ಪೂಜಿತನಾದ ಶ್ರೀಹರಿಯನ್ನು ಪೂಜಿಸಿದನು. ಆ ರಾಯನ ಪಟ್ಟದರಸಿಗಾದರೋ ಶ್ರೀಗಂಧವನ್ನು ತೇದುಕೊಟ್ಟು, ಒಳ್ಳೆಯ ವಾಸನೆಯಿಂದ ಕೂಡಿದ ಹೂವಿನದಂಡೆಯನ್ನು ಕಟ್ಟಿ ಪೂಜೆಗೆ ಕೊಟ್ಟು, ದೈವಭಕ್ತಿಯು ಹೆಚ್ಚಿತು. ಪೌರರು ಪಚ್ಚಕರ್ಪೂರದಿಂದ ಕೂಡಿದ ಶ್ರೀಗಂಧವನ್ನೂ ಹಾಗೆಯೆ ಕುಂಕುಮಕೇಸರವೇ ಮೊದಲಾದ, ಅಗರು ಸಂಬಂಧವಾದ ಸುವಾಸನೆಯ ಪದಾರ್ಥವನ್ನೂ, ವಿಶೇಷವಾಗಿ ಎಲ್ಲ ತೆರನಾದ ವಸ್ತುಗಳನ್ನೂ, ಮಹಿಷವೆಂಬ ಗುಗ್ಗುಲವನ್ನೂ, ಶ್ರೀಮಹಾವಿಷ್ಣುವಿನ ಅರ್ಚನೆಗೆ ಯೋಗ್ಯಗಳಾದ ಹೂಗಳನ್ನೂ ತಂದು ಭೂಪತಿಯಾದ ಇಕ್ಷ್ವಾಕುರಾಯನಿಗೆ ಕೊಟ್ಟರು.

ವಿಮಾನಸ್ಥಂ ಹರಿಂ ಪೂಜ್ಯ ಗಂಧಪುಷ್ಪಾದಿಭಿಃ ಕ್ರಮಾತ್ ।
ತ್ರಿಸಂಧ್ಯಂ ಪರಯಾ ಭಕ್ತ್ಯಾ ಜಪ್ಯೈಃ ಸ್ತೋತ್ರೈಶ್ಚ ವೈಷ್ಣವೈಃ ॥ ೬೫ ॥

ಗೀತೈಃ ಕೋಲಾಹಲೈಃ ಶಬ್ದೈಃ ಶಂಖವಾದಿತ್ರನಾದಿತೈಃ ।
ಪ್ರೇಕ್ಷಣೈರಪಿ ಶಾಸ್ತ್ರೋಕ್ತೈಃ ಪ್ರೀತೈಶ್ಚ ನಿಶಿ ಜಾಗರೈಃ ॥ ೬೬ ॥

ಕಾರಯಾಮಾಸ ಸುಚಿರಮುತ್ಸವಂ ಪರಮಂ ಹರೇಃ ।
ಯಾಗೈಶ್ಚ ತೋಷಯಿತ್ವಾ ತಂ ಸರ್ವದೇವಮಯಂ ಹರಿಮ್ ॥ ೬೭ ॥

ನಿಷ್ಕಾಮೋ ದಾನಧರ್ಮೈಶ್ಚ ಪರಂ ಜ್ಞಾನಮವಾಪ್ತವಾನ್ ।
ಯಜನ್ ಯಜ್ಞಂ ಮಹೀಂ ರಕ್ಷನ್ ಸ ಕುರ್ವನ್ ಕೇಶವಾರ್ಚನಮ್॥ ೬೮ ॥

ಉತ್ಪಾದ್ಯ ಪುತ್ರಾನ್ ಪಿತ್ರರ್ಥಂ ಧ್ಯಾನಾತ್ತ್ಯಕ್ತ್ವಾ ಕಲೇಬರಮ್ ।
ಧ್ಯಾಯನ್ ವೈ ಕೇವಲಂ ಬ್ರಹ್ಮ ಪ್ರಾಪ್ತವಾನ್ ವೈಷ್ಣವಂ ಪದಮ್ ॥ ೬೯ ॥

೬೫-೬೯. ಆ ಇಕ್ಷ್ವಾಕುವು ವಿಮಾನಗತನಾದ ಶ್ರೀಹರಿಯನ್ನು ಕ್ರಮವಾಗಿ ಶ್ರೀಗಂಧ ಪುಷ್ಪಗಳೇ ಮೊದಲಾದವುಗಳಿಂದ ಪೂಜಿಸಿ, ಮೂರು ಸಂಜೆಯ ಹೊತ್ತುಗಳಲ್ಲಿಯೂ ನಿರತಿಶಯಭಕ್ತಿಗಳಿಂದಕೂಡಿ, ಜಪಗಳಿಂದಲೂ, ವೈಷ್ಣವಸ್ತೋತ್ರಗಳಿಂದಲೂ ಹಾಡುಗಳಿಂದಲೂ, ಕೋಲಾಹಲಶಬ್ದಗಳಿಂದಲೂ, ಶಂಖ, ವಾದಿತ್ರವೇ ಮೊದಲಾದ ಸಂಗೀತವಾದ್ಯಗಳ ಧ್ವನಿಗಳಿಂದಲೂ, ಶಾಸ್ತ್ರಗಳಲ್ಲಿ ಹೇಳಿರುವ ಪೇಕ್ಷಣಗಳಿಂದಲೂ ರಾತ್ರಿಯಲ್ಲಿ ಸಂತಸದೊಡಗೂಡಿದ ಜಾಗರದಿಂದಲೂ, ಮನೋಹರವಾಗಿ ಶ್ರೀಹರಿಯ ಮಹೋತ್ಸವಗಳನ್ನು ಮಾಡಿಸಿದನು. ಸರ್ವ ದೇವರಲ್ಲಿಯೂ ನಿಯಾಮಕನಾಗಿರುವುದರಿಂದ ಸರ್ವದೇವಮಯನಾದ ಆ ಶ್ರೀಹರಿಯನ್ನು ಯಾಗಗಳಿಂದ ಸಂತೋಷಪಡಿಸಿ, ಫಲದ ಆಸೆಯಿಲ್ಲದೆ ಎಸಗಿದ ದಾನ ಧರ್ಮಗಳಿಂದ ಉತ್ತಮವಾದ ತತ್ವಜ್ಞಾನವನ್ನು ಪಡೆದನು. ಇಂತು ಆ ರಾಜನು ಜನ್ನಗಳನ್ನು ಬೇಳುತ್ತಲೂ, ಪೊಡವಿಯನ್ನು ಸಲಹುತ್ತಲೂ, ಕೇಶವನನ್ನು ಪೂಜೆಗೈಯುತ್ತಲೂ, ಪಿತೃಗಳ ಸಲುವಾಗಿ ಪುತ್ರಸಂತಾನವನ್ನು ಪಡೆದು, ಧ್ಯಾನಯೋಗದಿಂದ ಒಡಲನ್ನು ನೀಗಿ, ಸರ್ವಗುಣ ಪೂರ್ಣನಾದ ಶ್ರೀಹರಿಯೊಬ್ಬನನ್ನೇ ಧ್ಯಾನಮಾಡುತ್ತಾ ವಿಷ್ಣುಲೋಕವನ್ನೊಂದಿದನು.

ಅಜಂ ವಿಶೋಕಂ ವಿಮಲಂ ವಿಶುದ್ಧಂ
ಶಾಂತಂ ಸದಾನಂದಚಿದಾತ್ಮಕಂ ತತಃ ।
ವಿಹಾಯ ಸಂಸಾರಮನಂತದುಃಖಂ
ಜಗಾಮ ತದ್ವಿಷ್ಣುಪದಂ ಹಿ ರಾಜಾ ॥ ೭೦ ॥

ಇತಿ ಶ್ರೀ ನರಸಿಂಹಪುರಾಣೇ ಇಕ್ಷ್ವಾಕುಚರಿತೇ
ಷಡ್ವಿಂಶತಿತಮೋಽಧ್ಯಾಯಃ

---

೭೦. ಅನಂತರದಲ್ಲಿ ಆ ಇಕ್ಷ್ವಾಕುರಾಜನು ಅಪಾರವಾದ, ದುಃಖಮಯವಾದ ಈ ಜನನ ಮರಣ ಪ್ರವಾಹರೂಪವಾದ ಸಂಸಾರವನ್ನು ತ್ಯಜಿಸಿ, ಜನ್ಮರಹಿತವೂ, ಶೋಕವಿಲ್ಲದುದೂ, ದೋಷರಹಿತವೂ, ಪರಮಪವಿತ್ರವೂ, ಶಾಂತವೂ, ಯಾವಾಗಲೂ ಪೂರ್ಣಸುಖ ಜ್ಞಾನಸ್ವರೂಪವೂ ಆದ ಆ ಮಹಾವಿಷ್ಣುವಿನ ರೂಪವನ್ನು (ಲೋಕವನ್ನು) ಹೊಂದಿದನು (ಮುಕ್ತನಾದನು).

ಇಂತು ಶ್ರೀನರಸಿಂಹ ಪುರಾಣದಲ್ಲಿ ಇಕ್ಷ್ವಾಕುರಾಯನ ಚರಿತ್ರೆಯಲ್ಲಿ
ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

ಇಪ್ಪತ್ತಾರನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ, ಸೂತರು ಭರದ್ವಾಜನ ಇಚ್ಛೆಯಂತೆ ಇಕ್ಷ್ವಾಕುರಾಯನು ತಾನೆಸಗುವ ತಪವು ಅಡ್ಡಿಯಿಲ್ಲದೆ ನೆರವೇರಲು, ಶ್ರೀಮಹಾಗಣಪತಿಯನ್ನು ಪೂಜಿಸಿ, ಸಕಲ ರಾಜ ಭೋಗಗಳನ್ನೂ ತ್ಯಜಿಸಿ, ಒರಟಾದ ಬಟ್ಟೆಗಳನ್ನೂ, ಜಟೆಯನ್ನೂ ಧರಿಸಿ, ಅನ್ನಾದಿಗಳನ್ನು ಬಿಟ್ಟು, ವಾಯ್ವಾಹಾರನಾಗಿ 'ಓಂನಮೋ ಭಗವತೇ ವಾಸುದೇವಾಯ' ಎಂಬ ದ್ವಾದಶಾಕ್ಷರಮಹಾಮಂತ್ರವನ್ನು ಜಪಿಸುತ್ತಾ, ಕಠಿನವಾದ ತಪವನ್ನೆಸಗಲು, ಚತುರ್ಮುಖನು ಪ್ರತ್ಯಕ್ಷನಾಗಿ, ತಾನು ಮಹಾವಿಷ್ಣುವಿನ ನಾಭಿಕಮಲದಲ್ಲಿ ಹುಟ್ಟಿದಾಗ ಶ್ರೀಹರಿಯು ಯಾವ ರೂಪವನ್ನು ಕಂಡನೋ, ಅದೇ ರೂಪವನ್ನು ಮತ್ತೆ ಕಾಣಲು ಯತ್ನಿಸಲು, ಅದು ಕಾಣದಿರಲು, ಆ ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಕಠಿನ ತಪವನ್ನೆಸಗುತ್ತಿರಲು, ಅಶರೀರವಾಣಿಯು ತನಗೆ ತಪಕ್ಕೆ ಶ್ರೀಹರಿಯು ಪ್ರತ್ಯಕ್ಷನಾಗುವುದಿಲ್ಲ; ಅವನ ಆಜ್ಞಾನುಸಾರ ಸೃಷ್ಟಿಕಾರ್ಯವನ್ನು ಮಾಡಿದರೆ, ಆ ನಿಷ್ಕಾಮಕರ್ಮಕ್ಕೆ ಭಗವಂತನ ಸಾಕ್ಷಾತ್ಕಾರವಾಗುವುದು, ಎಂದು ಹೇಳಲು, ತಾನು ಹಾಗೆಯೇ ಅನುಷ್ಠಿಸಿ, ಭಗವಂತನನ್ನು ಕಂಡ ಬಗೆಯನ್ನರುಹಿ, ಆ ರಾಯನು ಕಠಿನವಾದ ತಪಸ್ಸನ್ನು ಬಿಟ್ಟು, ತನ್ನ ರಾಜಧಾನಿಗೆ ಮರಳಿ, ಪ್ರಜಾರಕ್ಷಣ ಕಾರ್ಯವನ್ನು ನಿಷ್ಕಾಮದಿಂದಾಚರಿಸಿ, ಅಂತೆಯೇ ತಾನು ಕಳುಹಿಸುವ ವಿಮಾನದಲ್ಲಿ ಶ್ರೀಹರಿಯನ್ನು ಸೇವಿಸಿದರೆ, ಆತನಿಗೆ ತತ್ವಜ್ಞಾನವುಂಟಾಗಿ ಮುಕ್ತಿಯು ದೊರೆಕೊಳ್ಳುವುದು, ಎನಲು, ಅಂತೆಯೇ ಆ ರಾಜನು ತನ್ನ ಬಳಿಗೆ ಬ್ರಹ್ಮನು ಕಳುಹಿಸಿದ ಸಿದ್ಧದ್ವಿಜರಿಂದ ಸೇವಿತವಾದ ಮಾಧವಾನಂತರುಳ್ಳ ವಿಮಾನವು ಬರಲು, ಅದನ್ನು ತೆಗೆದುಕೊಂಡು, ತನ್ನ ಪುರಕ್ಕೆ ಸಂಭ್ರಮದಿಂದ ಬಂದು, ತನ್ನ ವರಮನೆಯಲ್ಲಿ ಶ್ರೀಹರಿಯನ್ನು ನಿರಂತರದಲ್ಲಿಯೂ ಸೇವಿಸುತ್ತಾ ಪ್ರಜೆಗಳನ್ನು ಧರ್ಮದಿಂದ ಸಲಹಿ, ಸತ್ಸಂತಾನವನ್ನು ಪಡೆದು, ಶ್ರೀಹರಿಯ ಧ್ಯಾನಯೋಗದಿಂದ ಈ ಪಾರ್ಥಿವ ಕಳೇಬರವನ್ನು ತ್ಯಜಿಸಿ, ಶ್ರೀಪರಮಾತ್ಮನ ಸಾಲೋಕ್ಯ ಮುಕ್ತಿಯನ್ನು ಪಡೆದನೆಂದು ನಿರೂಪಿಸಿರುತ್ತಾರೆ.

ಇಂತು ಇಪ್ಪತ್ತಾರನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವಂಶಾನುಚರಿತಮ್ ; ವಿಂಶೋಽಧ್ಯಾಯಃ

ಸೂರ್ಯವಂಶಾನುಚರಿತಮ್

॥ ಸೂತ ಉವಾಚ ॥

ಇಕ್ಷ್ವಾಕೋರ್ವಿಕುಕ್ಷಿರ್ನಾಮ ಪುತ್ರಃ ಸ ತು ಸಿದ್ಧೇ ಪಿತರಿ ಮಹರ್ಷಿಭಿರಭಿಷಿಕ್ತೋ ಧರ್ಮೇಣ ಪೃಥಿವೀಂ ಪಾಲಯನ್ ವಿಮಾನಸ್ಥಮನಂತಭೋಗಶಾಯಿನಮಚ್ಯುತಮಾರಾಧ್ಯ ಯಾಗೈರಪಿ ದೇವಾನಿಷ್ಟ್ವಾ ಸ್ವಪುತ್ರಂ ರಾಜ್ಯೇ ಸುಬಾಹುಮಭಿಷಿಚ್ಯ ದಿವಮಾರುರೋಹ ।

ವಂಶಾನುಚರಿತವು ; ಇಪ್ಪತ್ತನೇಯ ಅಧ್ಯಾಯವು

ಸೂರ್ಯವಂಶಾನುಚರಿತೆಯು

' ಸೂತರು ಭಾರದ್ವಾಜಮುನಿಗೆ ಇಂತು ನಿರೂಪಿಸಿರುತ್ತಾರೆ :—

೧. " ಕೇಳು, ಭರದ್ವಾಜ! ಇಕ್ಷ್ವಾಕು ಮಹಾರಾಜನಿಗೆ ವಿಕುಕ್ಷಿಯೆಂಬ ಹೆಸರಿನ ಮಗನು ಹುಟ್ಟಿದನು. ಅವನಾದರೋ ತಂದೆಯು ನಿರ್ವಾಣವನ್ನೈದಿದ ಅನಂತರದಲ್ಲಿ ವಸಿಷ್ಠಾದಿ ಮಹರ್ಷಿಗಳಿಂದ ಪಟ್ಟಾಭಿಷಿಕ್ತನಾಗಿ ಧರ್ಮದಿಂದ ಪೊಡವಿಯನ್ನು ಸಲಹುತ್ತಾ, ವಿಮಾನದಲ್ಲಿದ್ದ ಅನಂತನ ಶರೀರದ ಮೇಲೆ ಮಲಗಿದ ಅಚ್ಯುತನಾದ ಶ್ರೀಹರಿಯನ್ನು ಪೂಜಿಸಿ, ಯಜ್ಞಗಳಿಂದ ದೇವತೆಗಳನ್ನಾರಾಧಿಸಿ., ತನ್ನ ಮಗನಾದ ಸುಬಾಹುವನ್ನು ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ ನಿಲ್ಲಿಸಿ, ತಾನು ಸಗ್ಗಕೆ ಹೋದನು.

ಸುಬಾಹೋರ್ಧ್ರಾಜಮಾನಾದುದ್ಯೋತೋಭಿಗೀಯತೇ ।
ಯತೇ । ಸ ತು ಸಪ್ತದ್ವೀಪಾಂ ಪೃಥ್ವೀಂ ಧರ್ಮೇಣ ಪಾಲಯಿತ್ವಾ
ಭಕ್ತಿಂ ಪರಾಂ ನಾರಾಯಣೇ ಪಿತಾಮಹವತ್ ಕೃತ್ವಾ
ಕ್ರತುಭಿರ್ಭೂರಿದಕ್ಷಿಣೈಃ ಯಜ್ಞೇಶ್ವರಂ ನಿಷ್ಕಾಮೇನ ಮನಸೇಷ್ಟ್ವಾ
ನಿತ್ಯಂ ನಿರಂಜನಂ ನಿರ್ವಿಕಲ್ಪಂ ಧ್ಯಾತ್ವಾ ಹರಿಮನಂತಂ ಚ
ಪರಮಾರಾಧ್ಯ ಸ್ವರ್ಗಲೋಕಂ ಗತಃ ॥ ೧ ॥

ಅಸಂಹತಾಶ್ವಸ್ಯ ಮಾಂಧಾತಾ ಪುತ್ರೋಽಭವತ್ ।
ಸಚಾಭಿಷಿಕ್ತೋ ಮಹರ್ಷಿಭಿಃ ನಿಸರ್ಗಾದೇವ ವಿಷ್ಣುಭಕ್ತಃ

ಪ್ರತಾಪಶಾಲಿಯಾದ ಸುಬಾಹುವಿನಿಂದ ಉದ್ಯೋತನು ಜನಿಸಿದನೆಂದು ಹೇಳಲ್ಪಟ್ಟಿರುತ್ತಾನೆ. ಅವನೂ ಏಳು ದ್ವೀಪಗಳ ಪರ್ಯಂತವಾದ ಪೊಡವಿಯನ್ನು ಧರ್ಮದಿಂದ ಪಾಲಿಸಿ, ತನ್ನ ಪಿತಾಮಹನಂತೆ ಶ್ರೀಮನ್ನಾರಾಯಣನಲ್ಲಿ ಅತಿಶಯವಾದ ಬಕುತಿಯನ್ನು ಮಾಡಿ, ಬಹುದಕ್ಷಿಣೆಗಳ ಯಾಗಗಳಿಂದ ಯಜ್ಞೇಶ್ವರನಾದ ಶ್ರೀಹರಿಯನ್ನು ಫಲದ ಬಯಕೆಯಿಲ್ಲದ ಮನದಿಂದ ಸೇವಿಸಿ, ಸದಾತನನೂ, ದೋಷರಹಿತನೂ, ವಿಕಾರಶೂನ್ಯನೂ, ನಿರತಿಶಯತೇಜಃಸ್ವರೂಪನೂ, ನಾಶರಹಿತನೂ, ಉತ್ತಮಾಕ್ಷರನೂ, ಪರಮಾತ್ಮಸ್ವರೂಪನೂ, ಕೊನೆಯಿಲ್ಲದವನೂ, ಭಕ್ತರ ಪಾಪ ಪರಿಹಾರಕನೂ, ಸರ್ವೋತ್ತಮನೂ ಆದ ಶ್ರೀಹರಿಯನ್ನು ಆರಾಧಿಸಿ ಸ್ವರ್ಗಲೋಕಕ್ಕೆ ಹೋದನು.

೨. ಈ ವಂಶದಲ್ಲಿ ಹುಟ್ಟಿದ, ತಡೆಯಿಲ್ಲದ ಅಶ್ವಗತಿಯುಳ್ಳ ಯುವನಾಶ್ವನಿಗೆ ಮಾಂಧಾತನು ಮಗನಾಗಿ ಜನಿಸಿದನು. ಅವನು ಮಹರ್ಷಿಗಳಿಂದ ಪಟ್ಟಾಭಿಷಿಕ್ತನಾಗಿ ಸ್ವಭಾವದಿಂದಲೇ ಶ್ರೀ ಮಹಾವಿಷ್ಣುವಿನಲ್ಲಿ ಭಕ್ತಿಯುಳ್ಳವನೂ,

ಅನಂತಶಯನಮಚ್ಯುತಂ
ಭಕ್ತ್ಯಾರಾಧಯನ್, ಯಾಗೈಶ್ಚ ವಿವಿಧೈರಿಷ್ಟ್ವಾ ಸಪ್ತದ್ವೀಪವತೀಂ
ಪೃಥಿವೀಂ ಪರಿಪಾಲ್ಯ ದಿವಂ ಗತಃ ॥ ೨ ॥

ಯಸ್ಯೈಷ ಶ್ಲೋಕೋ ಗೀಯತೇ
ಯಾವತ್ಸೂರ್ಯ ಉದೇತ್ಯಸ್ತಂ ಯಾವಚ್ಚ ಪ್ರತಿತಿಷ್ಠತಿ ।
ಸರ್ವಂ ತದ್ಯೌವನಾಶ್ವಸ್ಯ ಮಾಂಧಾತುಃ ಕ್ಷೇತ್ರಮುಚ್ಯತೇ ॥ ೩ ॥

ತಸ್ಯ ಪುರುಕುತ್ಸೋಽಭವತ್ ಯೇನ ದೇವಾ ಬ್ರಾಹ್ಮಣಾಶ್ಚ
ಯಾಗದಾನೈಃ ಸಂತುಷ್ಟಾಃ ॥ ೪ ॥

ಪುರುಕುತ್ಸಾತ್ ದೃಷದೋ ದೃಷದಾದಭಿಶಂಭುಃ ।
ಅಭಿಶಂಭೋರ್ದಾರುಣಃ ದಾರುಣಾತ್ಸಗರಃ ॥ ೫ ॥

ಅನಂತಶಯನನಾದ ಅಚ್ಯುತನನ್ನು ಭಕ್ತಿಯಿಂದ ಪೂಜಿಸುತ್ತಾ, ಅನೇಕ ತೆರನಾದ ಜನ್ನಗಳಿಂದ ಬೇಳ್ದು, ಜಂಬೂ, ಪ್ಲಕ್ಷ, ಕುಶ, ಕ್ರೌಂಚ, ಶಾಕ, ಶಾಲ್ಮಲಿ ಮತ್ತು ಪುಷ್ಕರ ಈ ಏಳು ದೀವಿಗಳುಳ್ಳ ಪೊಡವಿಯನ್ನು ಸಲಹಿ ಸ್ವರ್ಗಕ್ಕೆ ಹೋದನು.

೩. ಯಾವ ಈ ಮಾಂಧಾತನ ವಿಷಯದಲ್ಲಿ ಈ ಶ್ಲೋಕವು ಹಾಡಲ್ಪಡುತ್ತಲಿದೆ. ಮೇರುಪರ್ವತದ ಸುತ್ತಲೂ ಸೂರ್ಯನ ಉದಯಾಸ್ತಗಳಿಂದ ಕೂಡಿದ ಎಲ್ಲ ಪ್ರದೇಶವೂ ಯುವನಾಶ್ವನ ಮಗನಾದ ಮಾಂಧಾತರಾಯನ ರಾಜ್ಯವು ವ್ಯಾಪಿಸಿದ್ದಿತೆಂದು ಹೇಳಿದೆ.

೪. ಆ ಮಾಂಧಾತನಿಗೆ ಪುರುಕುತ್ಸನು ಹುಟ್ಟಿದನು. ಯಾವ ಈ ಪುರುಕುತ್ಸನಿಂದ ದೇವತೆಗಳೂ, ಬ್ರಾಹ್ಮಣರೂ, ಯಾಗದಾನಗಳಿಂದ ಸಂತಸಗೊಂಡರು.

೫ ಪುರುಕುತ್ಸನಿಂದ ದೃಷದನೂ, ದೃಷದನಿಂದ ಅಭಿಶಂಭುವೂ, ಅಭಿಶಂಭುವಿನಿಂದ ದಾರುಣನೂ, ದಾರುಣನಿಂದ ಸಗರನೂ ಹುಟ್ಟಿದರು.

ಸಗರಾದ್ಧರ್ಯಶ್ವಃ ಹರ್ಯಶ್ವಾದ್ಧಾರೀತೋ ಹಾರೀತಾ-
ದ್ರೋಹಿತಾಶ್ವಃ । ರೋಹಿತಾಶ್ವಾದಂಶುಮಾನ್ ॥ ೬ ॥

ಅಂಶುಮತೋ ಭಗೀರಥಃ । ಯೇನ ಮಹತಾ ತಪಸಾ
ಪುರಾ ದಿವ್ಯೋ ಗಂಗಾ ಅಶೇಷಕಲ್ಮಷನಾಶನೀ
ಚತುರ್ವಿಧಪುರುಷಾರ್ಥದಾಯಿನೀ ಭುವನಮಾನೀತಾ ।
' ಅಸ್ಥಿಶರ್ಕರಾಭೂತಾಃ ಕಪಿಲಮಹರ್ಷಿನಿರ್ದಗ್ಧಾಶ್ಚ ಗುರವಃ
ಸಗರಾಖ್ಯಾ ಗಂಗಾತೋಯಸಂಸ್ಪೃಷ್ಟಾ ದಿವಮಾರೋಪಿತಾಃ ' ಭಗೀ
ರಥಾತ್ಸೌದಾಸಃ ಸೌದಾಸಾತ್ಸತ್ರಸವಃ ॥ ೭ ॥

---

೬. ಸಗರನಿಂದ ಹರ್ಯಶ್ವನೂ, ಹರ್ಯಶ್ವನಿಂದ ಹಾರೀತನೂ, ಹಾರೀತನಿಂದ ರೋಹಿತಾಶ್ವನೂ, ರೋಹಿತಾಶ್ವನಿಂದ ಅಂಶುಮಂತನೂ ಜನಿಸಿದರು.

೭. ಅಂಶುಮಂತನಿಂದ ಭಗೀರಥನು ಹುಟ್ಟಿದನು ; ಯಾವ ಭಗೀರಥನ ಹಿರಿದಾದ ತಪಸ್ಸಿನಿಂದ ಪೂರ್ವದಲ್ಲಿ ಸಕಲ ಕಲ್ಮಷಗಳನ್ನೂ ನಾಶಗೊಳಿಸುವ ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೀವ ಗಂಗೆಯನ್ನು ಭೂಲೋಕಕ್ಕೆ ಸ್ವರ್ಗಲೋಕದಿಂದ ಕರೆತಂದನು.

ತನ್ನ ಪಿತೃಗಳಾದ ಸಗರರೆಂಬ ಹೆಸರುಳ್ಳವರು ಕಪಿಲ ಮಹರ್ಷಿಯಿಂದ ಸುಡಲ್ಪಟ್ಟವರಾಗಿ ಮೂಳೆಯ ಹುಡಿಯಾಗಿದ್ದವರು ಈ ಗಂಗಾನದಿಯ ನೀರಿನಿಂದ ಸಂಚಯನವನ್ನು ಹೊಂದಿದವರಾಗಿ, ಈ ಗಂಗೋದಕದ ಸಂಬಂಧದಿಂದ ಸ್ವರ್ಗಕ್ಕೆ ಒಯ್ಯಲ್ಪಟ್ಟರು. ಆ ಭಗೀರಥನಿಂದ ಸೌದಾಸನೂ, ಸೌದಾಸನಿಂದ ಸತ್ರಸವನೂ ಹುಟ್ಟಿದರು.

ಸತ್ರಸವಾದನರಣ್ಯೋಽನರಣ್ಯಾದ್ದೀರ್ಘಬಾಹುಃ ॥ ೮ ॥

ದೀರ್ಘಬಾಹೋರಜಃ, ಅಜಾದ್ದಶರಥಃ । ತಸ್ಯ ಗೃಹೇ ರಾವಣ
ವಿನಾಶಾರ್ಥಂ ಸಾಕ್ಷಾನ್ನಾರಾಯಣೋಽವತೀರ್ಣೋ ರಾಮಃ ॥ ೯ ॥

ಸ ತು ಪಿತೃವಚನಾದ್ಭ್ರಾತೃಭಾರ್ಯಾಸಹಿತೋ ದಂಡಕಾರಣ್ಯಂ
ಪ್ರಾಪ್ಯ, 'ತಪಶ್ಚಚಾರ' ವನೇ ರಾವಣಾಪಹೃತಭಾರ್ಯೋ
ಭ್ರಾತ್ರಾ ಸಹ ದುಃಖಿತೋಽನೇಕ ಕೋಟಿವಾನರನಾಯಕಸುಗ್ರೀವ
ಸಹಾಯೋ ಮಹೋದಧೌ ಸೇತುಂ ನಿಬಧ್ಯ, ತೈರ್ಗತ್ವಾ ಲಂಕಾಂ
ರಾವಣಂ ದೇವಕಂಟಕಂ ಸಬಾಂಧವಂ ಹತ್ವಾ, ಸೀತಾಮಾದಾಯ
ಪುನರಯೋಧ್ಯಾಂ ಪ್ರಾಪ್ಯ, ಭರತಾಭಿಷಿಕ್ತೋ ವಿಭೀಷಣಾಯ
ಲಂಕಾರಾಜ್ಯಂ ವಿಮಾನಂ ವಾ ದತ್ವಾ, ತಂ ಪ್ರೇಷಯಾಮಾಸ ।

---

೮. ಆ ಸತ್ರಸವನಿಂದ ಅನರಣ್ಯನೂ, ಅನರಣ್ಯನಿಂದ ದೀರ್ಘಬಾಹುವೂ ಜನಿಸಿದರು.

೯. ದೀರ್ಘಬಾಹುವಿನಿಂದ ಅಜನೂ, ಅಜನಿಂದ ದಶರಥನೂ ಜನಿಸಿದರು. ಆ ದಶರಥರಾಯನ ಮನೆಯಲ್ಲಿ ಸಾಕ್ಷಾತ್ತಾದ ನಾರಾಯಣನು ರಾಮನಾಗಿ ಅವತರಿಸಿದನು.

೧೦. ಆ ಶ್ರೀರಾಮನು ತಂದೆಯ ಮಾತಿನಿಂದ ತಮ್ಮನಾದ ಲಕ್ಷ್ಮಣನಿಂದಲೂ, ಮಡದಿಯಾದ ಸೀತಾದೇವಿಯಿಂದಲೂ ಕೂಡಿ ದಂಡಕೆಯೆಂಬ ಕಾಡಿಗೆ ಹೋಗಿ, ತಪವನ್ನೆಸಗಿದನು. ಆ ಕಾಡಿನಲ್ಲಿದ್ದಾಗ ರಾವಣನು ತನ್ನ ಮಡದಿಯಾದ ಸೀತೆಯನ್ನು ಕದ್ದೊಯ್ಯಲು, ತಮ್ಮನೊಡನೆ ದುಃಖಗೊಂಡು, ಅನೇಕ ಕೋಟಿ ಸಂಖ್ಯೆಯ ಸೈನ್ಯವುಳ್ಳ ಸುಗ್ರೀವನೆಂಬ ಕಪಿರಾಜನ ಸಹಾಯವನ್ನು ಹೊಂದಿ, ದಕ್ಷಿಣ ಮಹಾಸಮುದ್ರದಲ್ಲಿ ಸೇತುವೆಯನ್ನು ಕಟ್ಟಿ, ಆ ಸುಗ್ರೀವಾದಿಗಳೊಡನೆ ಲಂಕೆಗೆ ಹೋಗಿ, ದೇವತೆಗಳಿಗೆ ಬಾಧಕನಾಗಿದ್ದ ರಾವಣನನ್ನು ಅವನ ಬಂಧುಗಳೊಡನೆ ಸಂಹರಿಸಿ, ತನ್ನ ಮಡದಿಯಾದ ಸೀತಾದೇವಿಯನ್ನು ಕರೆದುಕೊಂಡು ಪುನಃ ಅಯೋಧ್ಯಾ ಪಟ್ಟಣಕ್ಕೆ ಬಂದು, ಭರತನಿಂದ ಪಟ್ಟಾಭಿಷಿಕ್ತನಾಗಿ, ವಿಭೀಷಣನೆಂಬ ರಾವಣನ ತಮ್ಮನಿಗೆ ಲಂಕಾರಾಜ್ಯವನ್ನೂ, ತನ್ನ ಮೂರ್ತಿಯುಳ್ಳ ವಿಮಾನವನ್ನೂ ಕೊಟ್ಟು ಅವನನ್ನು ಲಂಕೆಗೆ ಕಳುಹಿಸಿದನು.

ಸ ತು ಪರಮೇಶ್ವರೋ ವಿಮಾನಸ್ಥೋ ವಿಭೀಷಣೇನ
ನೀಯಮಾನೋ ಲಂಕಾಯಾಮಪಿ ರಾಕ್ಷಸಪುರ್ಯಾಂ
ವಸ್ತುಮನಿಚ್ಛನ್ ಪುಣ್ಯಾರಣ್ಯಂ ತತ್ರ ಸ್ಥಾಪಿತವಾನ್ ॥ ೧೦ ॥

ತನ್ನಿರೀಕ್ಷ್ಯ ತತ್ರೈವ ಮಹಾಹಿಭೋಗಶಯನೇ ಭಗವಾನ್
ಶೇತೇ । ಸೋಽಪಿ ವಿಭೀಷಣಸ್ತದ್ವಿಮಾನಂ ನೇತುಮಸಮರ್ಥಃ
ತದ್ವಚನಾತ್ಸ್ವಾಂ ಪುರೀಂ ಜಗಾಮ ॥ ೧೧ ॥

ನಾರಾಯಣಸನ್ನಿಧಾನಾನ್ಮಹದ್ವೈಷ್ಣವಂ ಕ್ಷೇತ್ರಮಭವದದ್ಯಾಪಿ
ದೃಶ್ಯತೇ । ರಾಮಾಲ್ಲವೋ ಲವಾತ್ಪದ್ಮಃ ಪದ್ಮಾದೃತುಪರ್ಣಃ
ಋತುಪರ್ಣಾದಸ್ತ್ರಪಾಣಿಃ । ಅಸ್ತ್ರಪಾಣೇಃ ಶುದ್ಧೋದನಃ
ಶುದ್ಧೋದನಾದ್ಬುಧಃ । ಬುಧಾದ್ವಂಶೋ ನಿವರ್ತತೇ ॥ ೧೨ ॥

ವಿಭೀಷಣನಿಂದ ಒಯ್ಯಲ್ಪಡುತ್ತಿದ್ದ ವಿಮಾನದಲ್ಲಿದ್ದ ಆ ಪರಮೇಶ್ವರನಾದ ಶ್ರೀ ಹರಿಯು ರಾಕ್ಷಸರ ಪಟ್ಟಣವಾದ ಲಂಕೆಯಲ್ಲಿರಲು ಇಚ್ಛೆಯಿಲ್ಲದೆ, ಆ ಪುಣ್ಯಾರಣ್ಯದಲ್ಲಿರಿಸಲ್ಪಟ್ಟನು.

೧೧. ಅದನ್ನು ನೋಡಿ, ಆ ಪುಣ್ಯಾರಣ್ಯಪ್ರದೇಶದಲ್ಲಿಯೇ ಸರ್ವಶ್ರೇಷ್ಠನಾದ ಅನಂತನ ಒಡಲ ಹಾಸಿಗೆಯಲ್ಲಿ ಭಗವಂತನಾದ ಶ್ರೀ ಪದ್ಮನಾಭಸ್ವಾಮಿಯು ಮಲಗಿರುತ್ತಾನೆ. ಆ ವಿಭೀಷಣನೂ ಆ ವಿಮಾನವನ್ನು ಲಂಕೆಗೆ ತೆಗೆದುಕೊಂಡು ಹೋಗಲು ಸಾಮರ್ಥ್ಯವಿಲ್ಲದೆ ಆ ಶ್ರೀ ಹರಿಯ ಅಪ್ಪಣೆಯಿಂದ ತನ್ನ ಲಂಕಾಪುರಿಗೆ ಹೋದನು.

೧೨. ಆ ಪ್ರದೇಶವು ಶ್ರೀಮನ್ನಾರಾಯಣನ ಸನ್ನಿಧಿ ವಿಶೇಷದಿಂದ ಅತ್ಯಂತ ಶ್ರೇಷ್ಠವಾದ ವೈಷ್ಣವ ಕ್ಷೇತ್ರವಾಯಿತು. ಅದು ಈಗಲೂ ಕಾಣಬರುತ್ತಿದೆ. ಆ ರಾಮನಿಂದ ಲವನೂ, ಲವನಿಂದ ಪದ್ಮನೂ, ಪದ್ಮನಿಂದ ಋತುಪರ್ಣನೂ, ಋತುಪರ್ಣನಿಂದ ಅಸ್ತ್ರಪಾಣಿಯೂ, ಅಸ್ತ್ರಪಾಣಿಯಿಂದ ಶುದ್ಧೋದನನೂ, ಶುದ್ಧೋದನನಿಂದ ಬುಧನೂ ಜನಿಸಿದರು. ಈ ಬುಧನಿಂದ ಸೂರ್ಯವಂಶವು ಕೊನೆಯಾಗುತ್ತದೆ.

ಏತೇ ಮಹೀಶಾ ರವಿವಂಶಜಾಸ್ತವ
ಪ್ರಾಧಾನ್ಯತಸ್ತೇ ಕಥಿತಾ ಮಹಾಬಲಾಃ ।
ಪುರಾತನೈರ್ಯೈರ್ವಸುಧಾ ಪ್ರಪಾಲಿತಾ
ಯಜ್ಞಕ್ರಿಯಾಭಿಶ್ಚ ದಿವೌಕಸೈರ್ನೃಪೈಃ ॥ ೧೩ ॥

ಇತಿ ಶ್ರೀ ನರಸಿಂಹಪುರಾಣೇ ಸೂರ್ಯವಂಶಾನುಚರಿತಂ
ನಾಮ ಸಪ್ತವಿಂಶತಿತಮೋಽಧ್ಯಾಯಃ

---

೧೩. ಎಲೈ ಭರದ್ವಾಜನೇ! ಸೂರ್ಯಕುಲದಲ್ಲಿ ಹುಟ್ಟಿದ ಮಹಾಪರಾಕ್ರಮಿಗಳಾದ, ಮುಖ್ಯರಾದ ಈ ರಾಯರುಗಳನ್ನು ನಿನಗೆ ಹೇಳಿದೆನು. ಪುರಾತನರಾದ ಈ ರಾಯರು ಯಜ್ಞಗಳನ್ನು ಆಚರಿಸಿ ದೇವತೆಗಳನ್ನು ರಕ್ಷಿಸಿದರು. ದೇವತೆಗಳೂ, ತುಷ್ಟರಾಗಿ ಮಳೆಗಳನ್ನು ಕರೆದು, ಭೂಲೋಕವನ್ನು ರಕ್ಷಿಸಿದರು;' ಎಂದು ಸೂತರು ಭರದ್ವಾಜನಿಗೆ ಹೇಳಿದರು.

ಇಂತು ಶ್ರೀನರಸಿಂಹಪುರಾಣದಲ್ಲಿ ಸೂರ್ಯವಂಶಾನುಚರಿತವೆಂಬ
ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೇಳನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ ಸೂತರು ಭರದ್ವಾಜನಿಗೆ ಸೂರ್ಯವಂಶಾನುಚರಿತವನ್ನು ನಿರೂಪಿಸುವವರಾಗಿ ಇಕ್ಷ್ವಾಕುವಿನ ಮಗ ವಿಕುಕ್ಷಿ; ಇವನಿಗೆ ವಸಿಷ್ಠಾದಿಗಳು ಪಟ್ಟಗಟ್ಟಿದರು ಇವನು ವಿಮಾನದಲ್ಲಿದ್ದ ಅನಂತಶಯನನಾದ ಶ್ರೀಪದ್ಮನಾಭನನ್ನು ಪೂಜಿಸುತ್ತಾ, ಪೊಡವಿಯನ್ನು ಧರ್ಮದಿಂದ ರಕ್ಷಿಸಿದನು. ಈ ವಂಶದಲ್ಲಿ ಸುಬಾಹು ಹುಟ್ಟಿ ಸಪ್ತದ್ವೀಪಪರ್ಯಂತವಾದ ಭೂಮಂಡಲವನ್ನು ಧರ್ಮದಿಂದ ರಕ್ಷಿಸಿ, ಉತ್ತಮವಾದ ಯಜ್ಞಾದಿಗಳನ್ನನುಷ್ಠಿಸಿ, ಶ್ರೀಮನ್ನಾರಾಯಣನನ್ನಾರಾಧಿಸಿ ಸದ್ಗತಿ ಪಡೆದನು. ತರುವಾಯ ಯುವನಾಶ್ವನೆಂಬವನು ಜನಿಸಿದನು. ಅವನ ಮಗ ಮಂಧಾತನು. ಇವನು ಭಗವದ್ಭಕ್ತ. ಈತನು ಸಪ್ತದ್ವೀಪಾಧಿಪತಿಯಾಗಿದ್ದನು. ಈ ವಂಶಪರಂಪರೆಯಲ್ಲಿ ಸಗರನು ಜನಿಸಿ ತೊಂಬತ್ತೊಂಬತ್ತು ಅಶ್ವಮೇಧವನ್ನು ಮಾಡಿ, ನೂರನೆಯ ಯಾಗದ ಪಶುವನ್ನು ಬಿಟ್ಟಿರಲು, ಅದನ್ನು ಇಂದ್ರನು ಕದ್ದೊಯ್ದು ಕಪಿಲಮುನಿಯ ಹಿಂದೆ ಕಟ್ಟಿದನು. ಅಶ್ವದ ಬೆಂಗಾವಲಿನ ಅರುವತ್ತುಸಾವಿರ ಸಗರ ಪುತ್ರರು ಆ ಅಶ್ವವನ್ನು ಕದ್ದವನು ಕಪಿಲನೆಂದು ಅವನನ್ನು ಬಾಧೆಗೊಳಿಸತೊಡಗಲು, ಆ ಮುನಿಯು ಸಮಾಧಿಯಿಂದೆದ್ದು, ಇವರು ಸುಟ್ಟುಹೋಗುವಂತೆ ನೋಡಿದನು. ತರುವಾಯ ಈ ವಂಶದ ಭಗೀರಥನು ಗಂಗೆಯನ್ನು ದೇವಲೋಕದಿಂದ ಬಹು ಕಷ್ಟವಾದ ತಪವನ್ನು ಮಾಡಿ ತಂದು, ಅವರೆಲ್ಲರಿಗೂ ಸದ್ಗತಿಯನ್ನುಂಟುಮಾಡಿದನು. ಈ ವಂಶದಲ್ಲಿ ದಶರಥನು ಜನಿಸಿದನು. ಶ್ರೀಮನ್ನಾರಾಯಣನು ತ್ರಿಲೋಕ ಕಂಟಕನಾದ ರಾವಣನ ವಧಾರ್ಥವಾಗಿ ಅವನ ಮಗ ಶ್ರೀರಾಮನಾಗಿ ಅವತರಿಸಿ, ಪಿತೃವಾಕ್ಯ ಪರಿಪಾಲನೆಯಿಂದ ಪತ್ನೀ ಭ್ರಾತೃಗಳೊಡನೆ ಕಾಡಿಗೆ ಹೋಗಿ, ರಾವಣನು ತನ್ನ ಮಡದಿಯನ್ನೇ ಕದ್ದೊಯ್ಯಲು, ಸುಗ್ರೀವನೆಂಬ ಕಪಿ ರಾಜನ ಸಹಾಯದಿಂದ ಸಮುದ್ರಕ್ಕೆ ಸೇತುವೆ ಕಟ್ಟಿ, ಲಂಕೆಗೆ ಹೋಗಿ, ರಾವಣನನ್ನು ಬಾಂಧವರೊಡನೆ ಸಂಹರಿಸಿ, ಮಡದಿಯೊಡನೆ ಅಯೋಧ್ಯೆಗೆ ಬಂದು, ಪಟ್ಟಾಭಿಷಿಕ್ತನಾಗಿ ವಿಭೀಷಣನಿಗೆ ತನ್ನ ಮನೆಯಲ್ಲಿದ್ದ ವಿಮಾನದ ಅನಂತಪದ್ಮನಾಭನನ್ನೂ, ಲಂಕಾರಾಜ್ಯವನ್ನೂ ಕೊಟ್ಟು ಕಳುಹಿಸಿದನು. ಆ ವಿಭೀಷಣನು ಮಧ್ಯಮಾರ್ಗದಲ್ಲಿ ಕಾಡಿನಲ್ಲಿ ಅವನ್ನು ಇಟ್ಟವನು ಪುನಃ ತೆಗೆದುಕೊಂಡು ಹೋಗಲಾಗಲಿಲ್ಲ. ಇದು ದೇವರಿಚ್ಛೆಯು. ಈ ವಂಶಪರಂಪರೆಯಲ್ಲಿ ಲವಾದಿ ಕೆಲವರು ಜನಿಸಿದರು. ಈ ವಂಶವು ಬುಧನೆಂಬವನಿಂದ ಕೊನೆಗೊಂಡಿತೆಂದು ನಿರೂಪಿಸಿರುತ್ತಾರೆ.

ಇಂತು ಇಪ್ಪತ್ತೇಳನೆಯ ಅಧ್ಯಾಯದ ವಿಷಯ ಸಂಗ್ರಹವು

॥ ಶ್ರೀಃ ॥

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವಂಶಾನುಚರಿತಮ್ ; ಅಷ್ಟಾವಿಂಶೋಽಧ್ಯಾಯಃ

ಸೋಮವಂಶಚರಿತೇ ಶಂತನುಚರಿತಮ್

॥ ಸೂತ ಉವಾಚ ॥

**ಅಥ ಸೋಮವಂಶೋದ್ಭವಾನಾಂ ಭೂಭುಜಾಂ ಸಂಕ್ಷೇಪೇಣ
ಚರಿತಮುಚ್ಯತೇ ॥ ೧ ॥**

**ಆದೌ ತಾವತ್ ಸಮಸ್ತಂ ತ್ರೈಲೋಕ್ಯಂ ಕುಕ್ಷೌಕೃತ್ವಾ
ಏಕಾರ್ಣವೇ ಮಹಾಂಭಸಿ ನಾಗಭೋಗಶಯನೇ ಋಙ್ಮಯೋ
ಯಜುರ್ಮಯಃ ಸಾಮಮಯೋಽಥರ್ವಮಯೋ
ಭಗವಾನ್ನಾರಾಯಣೋ ಯೋಗನಿದ್ರಾಂ ಸಮಾರೇಭೇ ॥ ೨ ॥**

ವಂಶಾನುಚರಿತವು ; ಇಪ್ಪತ್ತೆಂಟನೆಯ ಅಧ್ಯಾಯವು

ಸೋಮವಂಶಚರಿತೆಯಲ್ಲಿ ಶಂತನುಚರಿತೆಯು

ಶ್ರೀ ಸೂತರು ಭರದ್ವಾಜನಿಗೆ ಇಂತು ನಿರೂಪಿಸುತ್ತಾರೆ :—

೧. "ಕೇಳು ಭರದ್ವಾಜ ! ಇನ್ನು ಮುಂದೆ ಚಂದ್ರವಂಶದಲ್ಲಿ ಹುಟ್ಟಿದ ರಾಜರುಗಳ ಚರಿತೆಯನ್ನು ಸಂಗ್ರಹದಿಂದ ಹೇಳಲಾಗುವುದು.

೨. ಜಗತ್ಸೃಷ್ಟಿಗೆ ಮೊದಲಲ್ಲಿ ಮೂರು ಲೋಕವನ್ನೆಲ್ಲ ತನ್ನ ಹೊಟ್ಟೆಯಲ್ಲಿ ಅಡಗಿಸಿಟ್ಟುಕೊಂಡು, ಒಂದೇ ಸಮುದ್ರವಾಗಿದ್ದ ಮಹಾಜಲದಲ್ಲಿ, ಆದಿಶೇಷನ ಶರೀರದ ಮೇಲೆ, ಋಗ್ಯಜುಸ್ಸಾಮಾಥರ್ವಗಳಿಂದ ಮುಖ್ಯವಾಚ್ಯನಾದ ಅವ್ಯಾಹತ ಷಡ್ಗುಣೈಶ್ವರ್ಯಪೂರ್ಣನಾದ ಶ್ರೀಮನ್ನಾರಾಯಣನು ತನ್ನ ವಿಲಾಸರೂಪವಾದ ನಿದ್ರೆಯನ್ನು ಮಾಡುತ್ತಿದ್ದನು.

ತಸ್ಯ ಸುಪ್ತಸ್ಯ ನಾಭೌ ಮಹಾಪದ್ಮಮಜಾಯತ ।
ತಸ್ಮಿನ್ ಪದ್ಮೇ ಚತುರ್ಮುಖೋ ಬ್ರಹ್ಮಾಽಭವತ್ ॥ ೩ ॥

ತಸ್ಯ ಬ್ರಹ್ಮಣೋ ಮಾನಸಃ ಪುತ್ರೋಽತ್ರಿರಭವತ್ ।
ಅತ್ರೇರನಸೂಯಾಯಾಂ ಸೋಮಃ, ಸ ತು ಪ್ರಜಾಪತೇರ್ದಕ್ಷಸ್ಯ
ತ್ರಯಸ್ತ್ರಿಂಶತ್ಕನ್ಯಾ ರೋಹಿಣ್ಯಾದ್ಯಾ ಭಾರ್ಯಾರ್ಥಂ ಗೃಹೀತ್ವಾ
ಪ್ರಿಯಾಯಾಂ ಜ್ಯೇಷ್ಠಾಯಾಂ ವಿಶೇಷಾತ್ಪ್ರಸನ್ನ ಮನಾಃ
ರೋಹಿಣ್ಯಾಂ ಬುಧಂ ಪುತ್ರಮುತ್ಪಾದಯಾಮಾಸ ॥ ೪ ॥

ಬುಧೋಽಪಿ ಸರ್ವಶಾಸ್ತ್ರಜ್ಞಃ ಪ್ರತಿಷ್ಠಾನೇ ಪುರೇಽವಸತ್ ।
ಇಲಾಯಾಂ ಪುರೂರವಸಂ ಪುತ್ರಮುತ್ಪಾದಯಾಮಾಸ ।
ತಸ್ಯಾತಿಶಯರೂಪಾನ್ವಿತಸ್ಯ ಸ್ವರ್ಗಭೋಗಾನ್ ವಿಹಾಯ
ಉರ್ವಶೀ ಬಹುಕಾಲಂ ಭಾರ್ಯಾ ಬಭೂವ ॥ ೫ ॥

---

೩. ಮಲಗಿದ್ದ ಆ ನಾರಾಯಣನ ಹೊಕ್ಕುಳಲ್ಲಿ ಒಂದು ದೊಡ್ಡ ತಾವರೆಯಲ್ಲಿ ನಾಲ್ಮೊಗನಾದ ಬ್ರಹ್ಮನು ಹುಟ್ಟಿದನು.

೪. ಆ ಬ್ರಹ್ಮನಿಗೆ ಅತ್ರಿಯು ಮನಸ್ಸಿನಿಂದ ಹುಟ್ಟಿದ ಮಗನು. ಆ ಅತ್ರಿಯಿಂದ ಅನಸೂಯೆಯಲ್ಲಿ ಸೋಮನು ಜನಿಸಿದನು. ಅವನು ದಕ್ಷಪ್ರಜಾಪತಿಯ ಹೆಣ್ಣುಮಕ್ಕಳಾದ, ರೋಹಿಣಿಯೇ ಮೊದಲಾದ ಮೂವತ್ತಮೂರು ಕನ್ನೆಯರನ್ನು ಮದುವೆಮಾಡಿಕೊಂಡು ತನ್ನ ಹಿರಿಯ ಹೆಂಡತಿಯಾದ ರೋಹಿಣಿಯಲ್ಲಿ ಅತಿಶಯವಾದ ಪ್ರೀತಿಯುಕ್ತವಾದ ಮನಸ್ಸುಳ್ಳವನಾಗಿ, ಬುಧನೆಂಬ ಮಗನನ್ನು ಪಡೆದನು.

೫. ಸಕಲಶಾಸ್ತ್ರಗಳನ್ನರಿತ ಬುಧನು ಪ್ರತಿಷ್ಠಾನವೆಂಬ ಪುರದಲ್ಲಿ ವಾಸಮಾಡಿದನು. ಅವನು ಇಲಾದೇವಿಯಲ್ಲಿ ಪುರೂರವನೆಂಬ ಮಗನನ್ನು ಪಡೆದನು. ಲೋಕಾತಿಶಯ ರೂಪವಂತನಾದ ಆ ಪುರೂರವನಿಗೆ ಉರ್ವಶಿಯೆಂಬ ಅಪ್ಸರಸೆಯು ಸಗ್ಗದ ಸೊಗಗಳನ್ನು ಬಿಟ್ಟು, ಅನೇಕ ವರ್ಷಗಳವರೆಗೆ ಹೆಂಡತಿಯಾಗಿದ್ದಳು

ಪುರೂರವಸಃ ಉರ್ವಶ್ಯಾಮಾಯುಃ ಪುತ್ರೋ ಜಜ್ಞೇ ।
ಸ ತು ರಾಜ್ಯಂ ಧರ್ಮತಃ ಕೃತ್ವಾ ದಿವಮಾರುರೋಹ ॥ ೬ ॥

ಆಯೋಃ ರೂಪವತ್ಯಾಂ ನಹುಷಃ ಪುತ್ರೋಽಭವತ್ ।
ಯೇನೇಂದ್ರತ್ವಂ ಪ್ರಾಪ್ತಮ್ । ನಹುಷಸ್ಯಾಪಿ
ಪಿತೃಮತ್ಯಾಂ ಯಯಾತಿಃ ॥ ೭ ॥

ಯಸ್ಯ ವಂಶಜಾ ವೃಷ್ಣಯಃ । ಯಯಾತೇಃ ಶರ್ಮಿಷ್ಠಾಯಾಂ
ಪೂರುರಭವತ್ ॥ ೮ ॥

ಪೂರೋರ್ವಂಶದಾಯಾಂ ಸಂಯಾತಿಃ ಪುತ್ರೋಽಭವತ್ ।
ಯಸ್ಯ ಪೃಥಿವ್ಯಾಂ ಸಂಪನ್ನಾಃ ಸರ್ವೇ ಕಾಮಾಃ ॥ ೯ ॥

---

೬. ಆ ಪುರೂರವನಿಗೆ ಉರ್ವಶಿಯಲ್ಲಿ ಆಯುವೆಂಬ ಮಗನು ಜನಿಸಿದನು. ಅವನು ರಾಜ್ಯವನ್ನು ಧರ್ಮದಿಂದ ಪಾಲಿಸಿ ಸ್ವರ್ಗಸ್ಥನಾದನು.

೭. ಆಯುವಿಗೆ ರೂಪವತಿಯೆಂಬವಳಲ್ಲಿ ನಹುಷನೆಂಬ ಮಗನು ಹುಟ್ಟಿದನು. ಅವನು ಇಂದ್ರಪದವಿಯನ್ನು ಪಡೆದನು. ಆ ನಹುಷನಿಗೆ ಪಿತೃಮತಿಯಲ್ಲಿ ಯಯಾತಿಯು ಜನಿಸಿದನು.

೮. ಯಾವ ಈ ಯಯಾತಿಯ ವಂಶದಲ್ಲಿ ಹುಟ್ಟಿದವರೇ ವೃಷ್ಣಿಗಳು; ಆ ಯಯಾತಿರಾಯನಿಗೆ ಶರ್ಮಿಷ್ಠಾದೇವಿಯಲ್ಲಿ ಪೂರುವೆಂಬವನು ಹುಟ್ಟಿದನು

೯. ಪೂರುವಿನಿಂದ ವಂಶದೆಯೆಂಬವಳಲ್ಲಿ ಸಂಯಾತಿಯೆಂಬ ಮಗನು ಹುಟ್ಟಿದನು. ಯಾವ ಸಂಯಾತಿಗೆ ಈ ಪೊಡವಿಯಲ್ಲಿ ಎಲ್ಲ ಆಸೆಗಳೂ ಸಂದವು.

ಸಂಯಾತೇರ್ಭಾನುದತ್ತಾಯಾಂ ಸಾರ್ವಭೌಮಃ ಸ ತು ಸರ್ವಾಂ
ಪೃಥಿವೀಂ ಧರ್ಮೇಣ ಪರಿಪಾಲಯನ್ನರಸಿಂಹಂ
ಭಗವಂತಮಾರಾಧ್ಯ ಯಾಗದಾನೈಃ ಸಿದ್ಧಿಮಾಪ ॥ ೧೦ ॥

ತಸ್ಯ ಸಾರ್ವಭೌಮಸ್ಯ ವೈದೇಹ್ಯಾಂ ಭೋಜಃ ।
ಯಸ್ಯ ವಂಶೇ ಪುರಾ ದೇವಾಸುರಸಂಗ್ರಾಮೇ ವಿಷ್ಣುಚಕ್ರ-
ಹತಃ ಕಾಲನೇಮಿಃ ಕಂಸೋ ಭೂತ್ವಾ ವೃಷ್ಣಿವಂಶಜೇನ
ವಾಸುದೇವೇನ ಘಾತಿತೋ ನಿಧನಂ ಗತಃ ॥ ೧೧ ॥

ತಸ್ಯ ಭೋಜಸ್ಯ ಕಲಿಂಗಾಯಾಂ ದುಷ್ಯಂತಃ । ಸ ತು
ನರಸಿಂಹಂ ಭಗವಂತಮಾರಾಧ್ಯ ತತ್ಪ್ರಸಾದಾನ್ನಿಷ್ಕಂಟಕಂ
ರಾಜ್ಯಂ ಧರ್ಮೇಣ ಕೃತ್ವಾ ದಿವಂ ಪ್ರಾಪ್ತವಾನ್
ದುಷ್ಯಂತಸ್ಯ ಶಕುಂತಲಾಯಾಂ ಭರತಃ

---

೧೦. ಸಂಯಾತಿಗೆ ಭಾನುದತ್ತೆಯೆಂಬವಳಲ್ಲಿ ಸಾರ್ವಭೌಮನು ಜನಿಸಿದನು. ಅವನು ಪೊಡವಿಯೆಲ್ಲವನ್ನೂ ಧರ್ಮದಿಂದ ರಕ್ಷಿಸುತ್ತಾ ಯಾಗದಾನಗಳಿಂದ ಭಗವಂತನಾದ ಶ್ರೀ ನರಸಿಂಹನನ್ನಾರಾಧಿಸಿ ಸಿದ್ಧಿಪಡೆದನು.

೧೧. ಆ ಸಾರ್ವಭೌಮನಿಗೆ ವೈದೇಹಿಯೆಂಬವಳಲ್ಲಿ ಭೋಜನು ಜನಿಸಿದನು. ಯಾವ ಈ ಭೋಜನ ವಂಶದಲ್ಲಿ, ಪೂರ್ವದಲ್ಲಿ ದೇವಾಸುರರ ಯುದ್ಧದಲ್ಲಿ ಶ್ರೀ ಮಹಾವಿಷ್ಣುವಿನ ಚಕ್ರದಿಂದ ಕೊಲ್ಲಲ್ಪಟ್ಟ ಕಾಲನೇಮಿಯೆಂಬ ಅಸುರನು ಕಂಸನಾಗಿ ಹುಟ್ಟಿ, ವೃಷ್ಣಿಯ ವಂಶದಲ್ಲಿ ಅವತರಿಸಿದ, ವಸುದೇವನ ಮಗನಾದ ಶ್ರೀಕೃಷ್ಣನಿಂದ (ಹೊಡೆಯಲ್ಪಟ್ಟು) ಹಿಂಸಿಸಲ್ಪಟ್ಟು ಮೃತನಾದನು.

೧೨. ಆ ಭೋಜನಿಗೆ ಕಲಿಂಗೆಯೆಂಬವಳಲ್ಲಿ ದುಷ್ಯಂತನು ಹುಟ್ಟಿದನು. ಅವನಾದರೋ ಭಗವಂತನಾದ ಶ್ರೀ ನರಸಿಂಹನನ್ನು ಪೂಜಿಸಿ, ಅವನ ಅನುಗ್ರಹದಿಂದ ಕಂಟಕಶೂನ್ಯವಾದ ರಾಜ್ಯವನ್ನು ಧರ್ಮದಿಂದ ರಕ್ಷಿಸಿ, ಸ್ವರ್ಗವನ್ನೈದಿದನು. ದುಷ್ಯಂತನಿಗೆ ಶಕುಂತಲೆಯೆಂಬವಳಲ್ಲಿ ಭರತನು ಹುಟ್ಟಿದನು.

ಸ ತು ಧರ್ಮೇಣ ರಾಜ್ಯಂ ಕುರ್ವನ್ ಕ್ರತುಭಿರ್ಭೂರಿ ದಕ್ಷಿಣೈಃ
ಸರ್ವದೇವತಾಮಯಂ ಭಗವಂತಮಾರಾಧ್ಯ ನಿವೃತ್ತಾಧಿಕಾರೋ
ಬ್ರಹ್ಮಧ್ಯಾನಪರೋ ವೈಷ್ಣವೇ ಪರೇ ಜ್ಯೋತಿಷಿ ಲಯಮವಾಪ ॥ ೧೨ ॥

ಭರತಸ್ಯ ಆನಂದಾಯಾಮಜಮೀಢಃ । ಸ ಚ ಪರಮ ವೈಷ್ಣವೋ
ನರಸಿಂಹಮಾರಾಧ್ಯ ಜಾತಪುತ್ರೋ ಧರ್ಮೇಣ ಕೃತರಾಜ್ಯೋ
ವಿಷ್ಣುಪುರಮಾರುರೋಹ ॥ ೧೩ ॥

ಅಜಮೀಢಸ್ಯ ಸುದೇವ್ಯಾಂ ವೃಷ್ಣಿಃ ಪುತ್ರೋಽಭವತ್ । ಸೋಽಪಿ
ಬಹುವರ್ಷಂ ಧರ್ಮೇಣ ರಾಜ್ಯಂ ಕುರ್ವನ್ ದುಷ್ಟನಿಗ್ರಹಂ
ಶಿಷ್ಟಪರಿಪಾಲನಂ ಸಪ್ತದ್ವೀಪಾಂ ವಶೇ ಚಕ್ರೇ । ವೃಷ್ಣೇ-
ರುಗ್ರಸೇನಾಯಾಂ ಪ್ರತ್ಯಙ್ಞ ಪುತ್ರೋ ಬಭೂವ ॥ ೧೪ ॥

---

೧೨. ಆ ಭರತನು ಧರ್ಮದಿಂದ ರಾಜ್ಯವನ್ನು ಕಾಪಿಡುತ್ತಾ, ಬಹುದಕ್ಷಿಣೆಗಳ ಯಾಗಗಳಿಂದ ದೇವತೆಗಳಿಗೆಲ್ಲಾ ನಿಯಾಮಕನೂ, ಅಂತರ್ಯಾಮಿಯೂ ಆದ, ಶ್ರೀ ಭಗವಂತನಾದ ಶ್ರೀ ನರಸಿಂಹನನ್ನು ಪೂಜಿಸಿ, ರಾಜ್ಯಾಧಿಕಾರವನ್ನು ತೊರೆದು, ಪರಬ್ರಹ್ಮಧ್ಯಾನದಲ್ಲಿ ತೊಡಗಿ, ಸರ್ವೋತ್ತಮವಾದ ವೈಷ್ಣವತೇಜಸ್ಸಿನಲ್ಲಿ ಲಯವನ್ನೈದಿದನು.

೧೩. ಭರತನಿಗೆ ಆನಂದೆಯೆಂಬವಳಲ್ಲಿ ಅಜಮೀಢನು ಹುಟ್ಟಿದನು. ಅವನು ಪರಮವೈಷ್ಣವನಾಗಿದ್ದು, ಶ್ರೀ ನರಸಿಂಹಸ್ವಾಮಿಯನ್ನು ಸೇವಿಸಿ ಪುತ್ರಸಂತಾನ ಪಡೆದು, ಧರ್ಮದಿಂದ ರಾಜ್ಯವಾಳಿ, ವಿಷ್ಣುಲೋಕಕ್ಕೆ ಹೋದನು. (ಉತ್ತಮ ಗತಿಯನ್ನು ಪಡೆದನು)

೧೪. ಅಜಮೀಢನಿಗೆ ಸುದೇವಿಯಲ್ಲಿ ವೃಷ್ಣಿಯು ಮಗನಾದನು. ಅವನೂ ಅನೇಕ ವರ್ಷಗಳ ಕಾಲ ರಾಜ್ಯವಾಳಿ, ದುಷ್ಟರ ನಿಗ್ರಹವನ್ನೂ, ಶಿಷ್ಟರ ರಕ್ಷಣೆಯನ್ನೂ ಮಾಡಿ, ಏಳುದ್ವೀಪಗಳುಳ್ಳ ಪೊಡವಿಯನ್ನು ಸ್ವಾಧೀನವನ್ನಾಗಿ ಮಾಡಿಕೊಂಡನು. ವೃಷ್ಣಿಗೆ ಉಗ್ರಸೇನೆಯೆಂಬವಳಲ್ಲಿ ಪ್ರತ್ಯಂಚನೆಂಬ ಮಗನು ಜನಿಸಿದನು.

ಸೋಽಪಿ ಧರ್ಮೇಣ ಮೇದಿನೀಂ ಪಾಲಯನ್ ಪ್ರತಿಸಂವತ್ಸರಂ
ಜ್ಯೋತಿಷ್ಟೋಮಂ ಚಕಾರ ನಿರ್ವಾಣಮಪಿ ಲಬ್ಧವಾನ್ ।
ಪ್ರತ್ಯಜ್ಞಸ್ಯ ಬಹುರೂಪಾಯಾಂ ಶಾಂತನುಃ ॥ ೧೫ ॥

ಯಸ್ಯ ದೇವದತ್ತಸ್ಯಂದನಾರೋಹಣಮಶಕ್ಯಂ
ಬಭೂವ ಪುರತಃ ಶಕ್ಯಂ ಚ ॥ ೧೬ ॥

॥ ಭರದ್ವಾಜ ಉವಾಚ ॥

ಸ್ಯಂದನಾರೋಹಣೇ ಪೂರ್ವಮಶಕ್ತಿಃ ಶಂತನೋಃ ಕಥಮ್ ।
ಪಶ್ಚಾಚ್ಛಕ್ತಿಃ ಕಥಂ ಚಾಸೀತ್ ತಸ್ಯ ವೈ ತದ್ವದಸ್ವ ನಃ ॥ ೧೭ ॥

---

೧೫. ಅವನೂ ಧರ್ಮದಿಂದ ಭೂಮಿಯನ್ನು ರಕ್ಷಿಸುತ್ತಾ, ಪ್ರತಿವರ್ಷ ದಲ್ಲಿಯೂ ಜ್ಯೋತಿಷ್ಟೋಮಯಾಗವನ್ನು ಅನುಷ್ಠಿಸಿ, ಮೋಕ್ಷವನ್ನು ಪಡೆದನು. ಪ್ರತ್ಯಂಚನಿಗೆ ಬಹುರೂಪೆಯಲ್ಲಿ ಶಾಂತನುವು ಹುಟ್ಟಿದನು.

೧೬. ಯಾವ ಶಂತನುವಿಗೆ ದೇವತೆಗಳು ಕೊಟ್ಟ ರಥವನ್ನು ಏರುವುದು ಮೊದಲು ಸಾಧ್ಯವಾಗಲಿಲ್ಲ ; ಮುಂದೆ ಸಾಧ್ಯವಾಯಿತು. '

ಭರದ್ವಾಜನು ಕೇಳುತ್ತಾನೆ.

೧೭. 'ಶಂತನುವಿಗೆ ಪೂರ್ವದಲ್ಲಿ ದೇವದತ್ತವಾದ ರಥವನ್ನು ಏರಲು ಸಾಮರ್ಥ್ಯವು ಎಕೆ ಉಂಟಾಗಲಿಲ್ಲ? ಅನಂತರ ಹೇಗೆ ಉಂಟಾಯಿತು?' ಅದನ್ನು ದಯಮಾಡಿ ನಮಗೆ ಹೇಳಿರಿ, ' ಎಂದು ಸೂತರನ್ನು ಕೇಳಿದನು.

॥ ಸೂತ ಉವಾಚ ॥

ಭರದ್ವಾಜ ಶೃಣುಷ್ವೈತತ್ಪುರಾವೃತ್ತಂ ವದಾಮಿ ತೇ ।
ಸರ್ವಪಾಪಹರಂ ತದ್ಧಿ ಚರಿತಂ ಶಂತನೋರ್ನೃಣಾಮ್ ॥ ೧೮ ॥

ಬಭೂವ ಶಂತನುರ್ಭಕ್ತೋ ನರಸಿಂಹತನೌ ಪುರಾ ।
ನಾರದೋಕ್ತವಿಧಾನೇನ ಪೂಜಯಾಮಾಸ ಮಾಧವಮ್ ॥ ೧೯ ॥

ನಾರಸಿಂಹಸ್ಯ ದೇವಸ್ಯ ನಿರ್ಮಾಲ್ಯಂ ತೇನ ಲಂಘಿತಮ್ ।
ರಾಜ್ಞಾ ಶಂತನುನಾ ವಿಪ್ರ ತಸ್ಮಾತ್ಸ್ಯಂದನಮುತ್ತಮಮ್ ॥ ೨೦ ॥

ದೇವದತ್ತಂ ತದಾರೋಢುಮಶಕ್ತಸ್ತತ್ಕ್ಷಣಾದಭೂತ್ ।
ಕಿಮಿಯಂ ಮೇ ಗತಿರ್ಭಗ್ನಾ ಸಹಸಾ ವೈ ರಥಾತ್ತತಃ ॥ ೨೧ ॥

ಸೂತರು ಹೇಳುತ್ತಾರೆ.

೧೮. 'ಎಲೈ ಭರದ್ವಾಜನೇ! ಕೇಳು; ಹಿಂದ ನಡೆದ ಈ ಶಂತನುಚಕ್ರವರ್ತಿಯ ಚರಿತ್ರೆಯನ್ನು ನಿನಗೆ ಅರುಹುವೆನು. ಆ ಚರಿತ್ರೆಯಾದರೋ ಕೇಳುವ ಮಾನವರ ಪಾಪವನ್ನೆಲ್ಲಾ ನಾಶಗೊಳಿಸುವ ಹಿರಿಮೆಯುಳ್ಳದ್ದು.

೧೯. ಪೂರ್ವದಲ್ಲಿ ಶಂತನು ಚಕ್ರವರ್ತಿಯು ಶ್ರೀ ನರಸಿಂಹಮೂರ್ತಿಯಲ್ಲಿ ವಿಶೇಷ ಭಕ್ತಿಯುಳ್ಳವನಾಗಿದ್ದನು ಅವನು ನಾರದಮುನಿಯುಪದೇಶಿಸಿದ ಕ್ರಮದಿಂದ ಲಕ್ಷ್ಮೀಪತಿಯಾದ ನರಸಿಂಹನನ್ನು ಪೂಜಿಸಿದನು.

೨೦-೨೨. ಎಲೈ ವಿಪ್ರನಾದ ಭರದ್ವಾಜನೇ! ಕೇಳು; ಶಂತನುರಾಯನು ಶ್ರೀನರಸಿಂಹದೇವನ ನಿರ್ಮಾಲ್ಯವನ್ನು (ಪೂಜೆಮಾಡಿದಮೇಲೆ ದೇವರ ವಿಗ್ರಹದಿಂದ ತೆಗೆದು ಹಾಕಿದ ಹೂವೇ ಮುಂತಾದವನ್ನು) ದಾಟಿಹೋದನು. ಆದುದರಿಂದ ದೇವದತ್ತವಾದ, ಉತ್ತಮವಾದ ರಥವನ್ನು ಏರಲು, ಕೂಡಲೇ ಅಸಮರ್ಥನಾದನು. 'ಇದೇನು? ಇದ್ದಕ್ಕಿದ್ದಂತೆಯೇ ಆ ತೇರಿನಿಂದ ನನ್ನ ಸಂಚಾರವು ತಡೆದುದೇಕೆ?'

ದುಃಖಿಂ ಚಿಂತಯತಸ್ತಸ್ಯ ಸಂಪ್ರಾಪ್ತೋ ನಾರದಃ ಕಿಲ ।
ಕಿಂ ವಿಷಣ್ಣಃ ಸ್ಥಿತೋ ರಾಜನ್ನಿತಿ ಪೃಷ್ಟಃ ಸ ಶಂತನುಃ ॥ ೨೨ ॥

ನಾರದೈತನ್ನ ಜಾನಾಮಿ ಗತಿಭಂಗಸ್ಯ ಕಾರಣಮ್ ।
ಇತ್ಯುಕ್ತೋ ನಾರದೋ ಧ್ಯಾತ್ವಾ ಜ್ಞಾತ್ವಾ ತತ್ಕಾರಣಂ ತತಃ ॥ ೨೩ ॥

ಶಂತನುಂ ಪ್ರಾಹ ರಾಜಾನಂ ವಿನಯೇನ ಯುತಃ ಸ್ಥಿತಃ ।
ಯತ್ರ ಕ್ವಾಪಿ ತ್ವಯಾ ರಾಜನ್ನರಸಿಂಹಸ್ಯ ವೈ ಧ್ರುವಮ್ ॥
ನಿರ್ಮಾಲ್ಯೋ ಲಂಘಿತಸ್ತಸ್ಮಾದ್ರಥಾರೋಹಣಕರ್ಮಣಿ ।
ಗತಿರ್ಭಗ್ನಾ ಮಹಾರಾಜ ಶ್ರೂಯತಾಮತ್ರಕಾರಣಮ್ ।
ಅಂತರ್ವೇದ್ಯಾಂ ಪುರಾ ರಾಜನ್ ಆಸೀತ್ಕಶ್ಚಿನ್ಮಹಾಮತಿಃ ॥ ೨೪ ॥

ಮಾಲಾಕಾರೋ ರವಿರ್ನಾಮ್ನಾ ತೇನ ವೃಂದಾವನಂ ಕೃತಮ್ ।
ವಿವಿಧಾನಿ ಚ ಪುಷ್ಪಾರ್ಥಂ ವನಾನಿ ಸುಕೃತಾನಿ ವೈ ॥ ೨೫ ॥

ಎಂದು ದುಃಖದಿಂದ ಕೂಡಿದವನಾಗಿ, ಆತನು ಆಲೋಚಿಸುತ್ತಿದ್ದಾಗ, ಅಲ್ಲಿಗೆ ನಾರದ ಮುನಿಯು ಬಂದು, ಆ ಶಂತನುವನ್ನು ' ಏನಯ್ಯಾ ರಾಯನೇ ! ಏತಕ್ಕೆ ದುಮ್ಮಾನ ಗೊಂಡಿರುವೆ ?' ಎಂದು ಕೇಳಿದನು.

೨೩. ' ಎಲೈ ನಾರದಮುನಿಯೇ ! ನನ್ನ ರಥಗಮನಕ್ಕೆ ಅಡ್ಡಿಯೇಕೆ ಉಂಟಾಯಿತೆಂಬುದನ್ನರಿಯೆನು ; ಎಂದು ಶಂತನು ಹೇಳಲು, ಬಳಿಕ ನಾರದನು ತಾನು ತನ್ನ ಜ್ಞಾನದೃಷ್ಟಿಯಿಂದ ಆಲೋಚಿಸಿ ತಿಳಿಸಿದನು.

೨೪-೨೭. ನಮ್ರತೆಯುಳ್ಳವನಾಗಿದ್ದುದರಿಂದ, ನಾರದಮುನಿಯು ಶಂತನು ರಾಯನನ್ನು ಕುರಿತು ಇಂತು ಹೇಳಿದನು. "ಎಲೈ ದೊರೆಯೇ! ನೀನು ಎಲ್ಲಿ ಯಾದರೂ ಶ್ರೀನರಸಿಂಹಸ್ವಾಮಿಯ ನಿರ್ಮಾಲ್ಯವನ್ನು ದಾಟಿಹೋಗಿಯೇ ಇರಬೇಕು. ಆದುದರಿಂದ ರಥವನ್ನು ಹತ್ತಲಾಗದಂತೆ ಗಮನವು ತಡೆದಿದೆ. ಎಲೈ ಮಹಾ ರಾಯನೇ ! ಈ ವಿಷಯದಲ್ಲಿ ಕಾರಣವನ್ನು ಹೇಳುತ್ತೇನೆ; ಕೇಳು:–' ಪೂರ್ವದಲ್ಲಿ ಅಂತರ್ವೇದಿಯೆಂಬ ಪ್ರದೇಶದಲ್ಲಿ ಅತ್ಯಂತ ವಿವೇಕಿಯಾದ ರವಿಯೆಂಬ ಹೆಸರಿನ

ಮಲ್ಲಿಕಾಮಾಲತೀಜಾತಿ ಬಕುಲಾದೀನಿ ಸರ್ವಶಃ ।
ಪ್ರಾಕಾರಮುಚ್ಛ್ರಿತಂ ತಸ್ಯ ಸ್ವಭೂಮೌ ಚಾಪಿ ವಿಸ್ತೃತಮ್ ॥ ೨೬ ॥

ಅಲಂಘ್ಯಮಪ್ರವೇಶ್ಯಂ ಚ ಕೃತ್ವಾ ಚಕ್ರೇ ಸ್ವಕಂ ಗೃಹಮ್ ।
ಗೃಹಂ ಪ್ರವಿಶ್ಯ ತದ್ವಾರಂ ಭವೇದನ್ಯತ್ರ ಸತ್ತಮ ॥ ೨೭ ॥

ಏವಂ ಕೃತ್ವಾ ನು ವಸತೋ ಮಾಲಾಕಾರಸ್ಯ ಧೀಮತಃ ।
ಪುಷ್ಪಿತಂ ತದ್ವನಂ ತ್ವಾಸೀದ್ಗಂಧಾಮೋದಿತದಿಙ್ಮುಖಮ್ ॥ ೨೮ ॥

ಭಾರ್ಯಯಾ ಸಹ ಪುಷ್ಪಾಣಿ ಸಮಾಹೃತ್ಯ ದಿನೇದಿನೇ ।
ಕೃತ್ವಾ ಮಾಲಾ ಯಥಾನ್ಯಾಯಂ ನರಸಿಂಹಸ್ಯ ನಿತ್ಯಶಃ ॥ ೨೯ ॥

ಮಾಲಾಕಾರನಿದ್ದನು. ಅವನು ವೃಂದಾವನವನ್ನು ಮಾಡಿಸಿದನು. ಆ ವನದಲ್ಲಿ ಹೂವಿಗಾಗಿ ಅನೇಕ ತೆರನಾದ ಉತ್ತಮವಾದ ಮಲ್ಲಿಗೆ, ಜಾಜಿ, ಬಕುಲ ಇವೇ ಮೊದಲಾದ ಹೂಬಳ್ಳಿಗಳನ್ನೂ, ವೃಕ್ಷಗಳನ್ನೂ, ಎಲ್ಲೆಡೆಗಳಲ್ಲಿಯೂ ಬೆಳೆಸಿ, ಆ ವನಕ್ಕೆ ಬಹು ಎತ್ತರವೂ ಯಾರಿಂದಲೂ, ದಾಟಲಾಗದುದೂ, ಹೋಗಲಶಕ್ಯವಾದದೂ ಆದ ಪಾಗಾರವನ್ನು ತನ್ನ ಭೂಮಿಯಲ್ಲಿ ಅತ್ಯಂತ ವಿಸ್ತಾರವಾಗಿ ಕಟ್ಟಿಸಿ, ಸ್ವಂತವಾದ ಮನೆಯನ್ನು ಕಟ್ಟಿಸಿದನು. ಎಲೈ ರಾಯನೇ! ಮನಗೆ ಪ್ರವೇಶಿಸಲು ಬಾಗಿಲು ಆ ವೃಂದಾವನದಿಂದ ಬೇರೆಯೆಡೆಯಲ್ಲಿದ್ದಿತು.

೨೮. ಇಂತು ವೃಂದಾವನವನ್ನೂ, ಮನೆಯನ್ನೂ ಕಟ್ಟಿಸಿ, ವಾಸಮಾಡುತ್ತಲಿದ್ದ, ಬುದ್ಧಿವಂತನಾದ ಆ ಮಾಲಾಕಾರನ ಬೃಂದಾವನವು ಹೂಬಿಟ್ಟು, ಸೌಗಂಧ್ಯದಿಂದ ವಾಸಿತವಾದ ದಿಙ್ಮುಖವುಳ್ಳದಾಯಿತು.

೨೯–೩೦. ಆ (ಮಾಲಾಕಾರನು) ಹೂವಡಿಗನು, ಪ್ರತಿದಿನದಲ್ಲಿಯೂ, ಹೆಂಡತಿಯೊಡನೆ ಹೂವನ್ನು ತಂದು, ಮಾಲೆಗಳನ್ನು ಕಟ್ಟಿ, ನಿತ್ಯದಲ್ಲಿ ಶ್ರೀನರಸಿಂಹಸ್ವಾಮಿಗೆ ಕೆಲವು ಮಾಲೆಗಳನ್ನು ನಿಯಮಾನುಸಾರವಾಗಿ ಅರ್ಪಿಸಿದನು. ಮತ್ತೆ

ದದೌ ಕಾಶ್ಚಿದ್ದ್ವಿಜೇಭ್ಯಶ್ಚ ಕಾಶ್ಚಿದ್ವಿಕ್ರೀಯ ಪೋಷಣಮ್ ।
ಚಕ್ರೇ ಸಮಾಪ್ತಜೀವೀ ಚ ಭಾರ್ಯಾದೇರಾತ್ಮನಸ್ತಥಾ ॥ ೩೦ ॥

ಅಥ ಸ್ವರ್ಗಾದುಪಾಗಮ್ಯ ಇಂದ್ರಪುತ್ರೋ ರಥೇನ ವೈ ।
ಅಪ್ಸರೋಗಣ ಸಂಯುಕ್ತೋ ನಿಶಿ ಪುಷ್ಪಾಣಿ ಸಂಹರೇತ್ ॥ ೩೧ ॥

ತದ್ಗಂಧಲಿಪ್ಸುಃ ಸರ್ವಾಣಿ ವಿಚಿತ್ಯಾಹೃತ್ಯ ಗಚ್ಛತಿ ।
ದಿನೇ ದಿನೇ ಹೃತೇ ಪುಷ್ಪೇ ಮಾಲಾಕಾರೋಽಪ್ಯಚಿಂತಯತ್ ॥ ೩೨ ॥

ನಾನ್ಯದ್ದ್ವಾರಂ ವನಸ್ಯಾಸ್ಯಾಲಂಘ್ಯಪ್ರಾಕಾರಮುನ್ನತಮ್ ।
ಸಮಸ್ತಪುಷ್ಪಜಾತಸ್ಯ ಹರಣೇ ನಿಶಿ ವೈ ನೃಣಾಮ್ ॥ ೩೩ ॥

ಅಹಂ ಶಕ್ತಿಂ ನ ಪಶ್ಯಾಮಿ ಕಿಮಿದಂ ನು ಪರೀಕ್ಷಯೇ ।
ಇತಿ ಸಂಚಿಂತ್ಯ ಮೇಧಾವೀ ಜಾಗ್ರದ್ರಾತ್ರೌ ವನೇ ಸ್ಥಿತಃ ॥ ೩೪ ॥

ಕೆಲವನ್ನು ಬ್ರಾಹ್ಮಣರಿಗೆ ಕೊಟ್ಟನು. ಇನ್ನೂ ಉಳಿದ ಮಾಲೆಗಳನ್ನು ಕ್ರಯಕ್ಕೆ ಕೊಟ್ಟು, ಮಡದಿಯೇ ಮೊದಲಾದವರ ಮತ್ತು ತನ್ನ ಪೋಷಣೆಯನ್ನು ಉತ್ತಮ ರೀತಿಯಲ್ಲಿ ಮಾಡಿಕೊಂಡನು.

೩೧. ಅನಂತರದಲ್ಲಿ ಇಂದ್ರನ ಮಗನಾದ ಜಯಂತನು ಸ್ವರ್ಗಲೋಕದ ದೆಸೆಯಿಂದ ರಥದಿಂದ ಅಪ್ಸರೆಯರ ತಂಡದಿಂದೊಡಗೂಡಿ ಬಂದು, ರಾತ್ರಿಯಲ್ಲಿ ಹೂಗಳನ್ನು ಒಟ್ಟುಗೂಡಿಸುತ್ತಿದ್ದನು.

೩೨ ಆ ಹೂಗಳ ಸುವಾಸನೆಯಲ್ಲಿ ಆಸೆಯುಳ್ಳವನಾಗಿ ಜಯಂತನು ಎಲ್ಲವನ್ನೂ ಬಿಡಿಸಿ, ಅಪಹರಿಸಿಕೊಂಡು ಹೋಗಲಾರಂಭಿಸಿದನು. ಇಂತು ಪ್ರತಿದಿನವೂ ಹೂವು ಕಳುವಾಗಲು, ಹೂವಡಿಗನು ಇಂತು ಯೋಚಿಸಿದನು.

೩೩–೩೪. 'ಈ ವೃಂದಾವನಕ್ಕೆ ಬೇರೆಯಾದ ಬಾಗಿಲಿಲ್ಲ ; ಪ್ರಾಗಾರವಾದರೋ ಹಾರಲಾರದಷ್ಟು ಎತ್ತರವಾಗಿದೆ. ಒಂದು ರಾತ್ರಿಯಲ್ಲಿ ಮಾನವರಿಗೆ ಇಲ್ಲಿ ಬಿಡುವ ಹೂವನ್ನೆಲ್ಲಾ ಕದ್ದೊಯ್ಯುವ ಸಾಮರ್ಥ್ಯವನ್ನು ನಾನು ಕಾಣುವುದಿಲ್ಲ. ಹಾಗಾದರೆ ಇದೇನಿರಬಹುದು? ಆಗಲಿ; ಇದನ್ನು ಪರೀಕ್ಷಿಸುತ್ತೇನೆ ' ಎಂದು ಯೋಚಿಸಿ, ಆ ಮೇಧಾವಿಯಾದ ಮಾಲಾಕಾರನು ರಾತ್ರಿಯಲ್ಲಿ ಎಚ್ಚೆತ್ತು, ವನದಲ್ಲಿ ಕಾದಿದ್ದನು.

ತಥೈವಾಗತ್ಯ ಪುಷ್ಪಾಣಿ ಸಂಗೃಹೀತ್ವಾ ಗತಃ ಪುಮಾನ್ ।
ತಂ ದೃಷ್ಟ್ವಾ ದುಃಖಿತೋಽತೀವ ಮಾಲ್ಯಜೀವೀ ವನೇಽಭವತ್ ॥ ೩೫ ॥

ತತೋ ನಿದ್ರಾಂ ಗತೇ ಸ್ವಪ್ನೇ ದೃಷ್ಟವಾಂಸ್ತಂ ನೃಕೇಸರಿಮ್ ।
ತದ್ವಾಕ್ಯಂ ಶ್ರುತವಾಂಶ್ಚೈವಂ ನಿರ್ಮಾಲ್ಯಂ ಮಮ ಪುತ್ರಕ ॥ ೩೬ ॥

ಆನೀಯ ಕ್ಷಿಪ್ಯತಾಂ ಕ್ಷಿಪ್ರಂ ಪುಷ್ಪಾರಾಮಸಮೀಪತಃ ।
ಇಂದ್ರಪುತ್ರಸ್ಯ ದುಷ್ಟಸ್ಯ ನಾನ್ಯದಸ್ತಿ ನಿವಾರಣಮ್ ॥ ೩೭ ॥

ಇತಿ ಶ್ರುತ್ವಾ ಹರೇರ್ವಾಕ್ಯಂ ನರಸಿಂಹಸ್ಯ ಧೀಮತಃ ।
ಬುದ್ಧ್ವಾಽಽನೀಯ ತು ನಿರ್ಮಾಲ್ಯಂ ತಥಾ ಚಕ್ರೇ ಯಥೋದಿತಮ್ ॥ ೩೮॥

---

೩೫. ಆ ಇಂದ್ರಪುತ್ರನು ಎಂದಿನಂತೆಯೇ, ಆ ದಿನವೂ ಬಂದು ಹೂವನ್ನು ಸಂಗ್ರಹಿಸಿಕೊಂಡು ಹೋದನು. ಆ ಹೂವಡಿಗನು ವನದಲ್ಲಿ ಅದನ್ನು ಕಂಡು, ಕಡುದುಮ್ಮಾನದಿಂದಿದ್ದನು.

೩೬-೩೭. ಅನಂತರದಲ್ಲಿ ಅವನು ನಿದ್ರೆಯನ್ನು ಹೊಂದಲು, ಸ್ವಪ್ನದಲ್ಲಿಯೇ ಶ್ರೀ ನರಸಿಂಹಸ್ವಾಮಿಯನ್ನು ಕಂಡನು ; ಮತ್ತು ಆ ದೇವರ ಈ ವಾಕ್ಯವನ್ನು ಕೇಳಿದನು ; "ಎಲೈ ನನ್ನ ಮಗುವೇ ! ಹೂವಿನ ತೋಟದ ಬಳಿಯಲ್ಲಿ ಬೇಗನೆ ನನ್ನ ನಿರ್ಮಾಲ್ಯವನ್ನು ತಂದು ಹಾಕು ; ಈ ದುಷ್ಟನಾದ ಇಂದ್ರನ ಮಗನನ್ನು ತಡೆಯಲು ಬೇರೆ ಯಾವ ಮಾರ್ಗವೂ ಇಲ್ಲವು."

೩೮. ಎಂದು ಸರ್ವಜ್ಞನಾದ ಶ್ರೀ ನರಸಿಂಹರೂಪಿಯಾದ ಶ್ರೀ ಹರಿಯು ಹೇಳಿದ ವಾಕ್ಯವನ್ನು ಕೇಳಿ, ಅವನ್ನು ತಿಳಿದು ನಿರ್ಮಾಲ್ಯವನ್ನು ತಂದು, ಮಾಲಾಕಾರನು ದೇವರು ಹೇಳಿದಂತೆಯೇ ಮಾಡಿದನು.

ಸೋಽಪ್ಯಾಗತ್ಯ ಯಥಾಪೂರ್ವಂ ರಥೇನಾಲಕ್ಷಿತೇನ ತು ।
ರಥಾದುತ್ತೀರ್ಯ ಪುಷ್ಪಾಣಿ ವಿಚಿನ್ವಂಸ್ತದ್ಭುವಿ ಸ್ಥಿತಮ್ ॥ ೩೯ ॥

ನಿರ್ಮಾಲ್ಯಂ ಲಂಘಯಾಮಾಸ ಇಂದ್ರಸೂನುರನಿಷ್ಟಕೃತ್ ।
ತತಸ್ತಸ್ಯ ನ ಶಕ್ತಿಃ ಸ್ಯಾದ್ರಥಾರೋಹಣಕರ್ಮಣಿ ॥ ೪೦ ॥

ಉಕ್ತಃ ಸಾರಥಿನಾ ಚೈವ ರಥಸ್ಯಾರೋಹಣೇ ತವ ।
ನರಸಿಂಹಸ್ಯ ನಿರ್ಮಾಲ್ಯಂ ಲಂಘನೇ ನಾಸ್ತಿ ಯೋಗ್ಯತಾ ॥ ೪೧ ॥

ಗಚ್ಛಾಮಿ ದಿವಮೇವಾಹಂ ತ್ವಂ ಭೂಮ್ಯಾಂ ವಸ ಮಾರುಹ ।
ತೇನೈವಮುಕ್ತೋ ಮತಿಮಾಂಸ್ತಮಾಹ ಹರಿನಂದನಃ ॥ ೪೨ ॥

ಪಾಪಸ್ಯ ನೋದನಂ ತ್ವತ್ರ ಕರ್ಮಣಾ ಯೇನ ಮೇ ಭವೇತ್ ।
ತದುಕ್ತ್ವಾ ಗಚ್ಛನಾಕಂ ತ್ವಂ ಕರ್ಮಾಸ್ಮಾನ್ಸಾರಥೇ ದ್ರುತಮ್ ॥ ೪೩ ॥

೩೯-೪೦. ಆ ಇಂದ್ರಪುತ್ರನೂ ಎಂದಿನಂತೆಯೇ ಯಾರಿಗೂ ಕಾಣಿಸದಂತೆ ರಥದಿಂದ ಬಂದು, ಅದರಿಂದಿಳಿದು, ಹೂಗಳನ್ನು ಬಿಡಿಸುತ್ತಾ, ಆ ವನಭೂಮಿಯಲ್ಲಿದ್ದ ಶ್ರೀ ನರಸಿಂಹನ ನಿರ್ಮಾಲ್ಯವನ್ನು ಹೂವಡಿಗನಿಗೆ ಅನಿಷ್ಟವನ್ನೆಸಗುತ್ತಲಿದ್ದ ಆ ಇಂದ್ರಸೂನುವು ದಾಟಿದನು. ಅನಂತರದಲ್ಲಿ ತನ್ನ ರಥವನ್ನು ಏರಲು ಶಕ್ತಿಯುಂಟಾಗಲಿಲ್ಲ.

೪೧-೪೩. ಸಾರಥಿಯೂ ಅವನಿಗೆ ಇಂತು ಹೇಳಿದನು. "ಎಲೈ ಇಂದ್ರಸೂನುವೇ! ಕೇಳು, ನೀನು ಶ್ರೀ ನರಸಿಂಹಸ್ವಾಮಿಯ ನಿರ್ಮಾಲ್ಯವನ್ನು ದಾಟಲು, ನಿನಗೆ ರಥವನ್ನೇರಲು ಯೋಗ್ಯತೆಯು ಹೋಯಿತು. ನಾನು ಸ್ವರ್ಗಕ್ಕೆ ಹೋಗುತ್ತೇನೆ; ನೀನು ಭೂಮಿಯಲ್ಲಿ ವಾಸಮಾಡು; ರಥವನ್ನು ಹತ್ತಬೇಡ;" ಎಂದು ಸಾರಥಿಯು ಹೇಳಲು, ಬುದ್ಧಿವಂತನಾದ ಇಂದ್ರ ಪುತ್ರನು ಅವನಿಗೆ ಇಂತು ಹೇಳಿದನು; 'ಎಲೈ ಸಾರಥಿಯೇ ಈ ಭೂಲೋಕದಲ್ಲಿ ಯಾವ ಕರ್ಮಾನುಷ್ಠಾನದಿಂದ ಈ ಪಾಪವು ನಾಶವನ್ನೈದುವುದೋ, ಆ ಕರ್ಮವನ್ನು ನನಗೆ ಹೇಳಿ, ನೀನು ಬೇಗನೆ ಸ್ವರ್ಗಲೋಕಕ್ಕೆ ಹೋಗು;' ಎಂದು ಇಂದ್ರ ಪುತ್ರನು ಹೇಳಿದನು.

॥ ಸಾರಥಿರುವಾಚ ॥

ರಾಮಸತ್ರೇ ಕುರುಕ್ಷೇತ್ರೇ ದ್ವಾದಶಾಬ್ದೇ ತು ನಿತ್ಯಶಃ ।
ದ್ವಿಜೋಚ್ಛಿಷ್ಟಾಪನಯನಂ ಕೃತ್ವಾ ತ್ವಂ ಶುದ್ಧಿಮೇಷ್ಯಸಿ ॥ ೪೪ ॥

ಇತ್ಯುಕ್ತ್ವಾಽಸೌ ಗತಃ ಸ್ವರ್ಗಂ ಸಾರಥಿರ್ದೇವ ಸೇವಿತಮ್ ।
ಇಂದ್ರಸೂನುಃ ಕುರುಕ್ಷೇತ್ರಂ ಪ್ರಾಪ್ತಃ ಸಾರಸ್ವತಂ ಚ ತಮ್ ॥ ೪೫ ॥

ರಾಮಸತ್ರೇ ತಥಾ ಚಕ್ರೇ ದ್ವಿಜೋಚ್ಛಿಷ್ಟಸ್ಯ ಮಾರ್ಜನಮ್ ।
ಪೂರ್ಣೇ ದ್ವಾದಶಮೇ ವರ್ಷೇ ತಮೂಚುಃ ಶಂಕಿತಾ ದ್ವಿಜಾಃ ॥ ೪೬ ॥

ಕಸ್ತ್ವಂ ಬ್ರೂಹಿ ಮಹಾಭಾಗ ನಿತ್ಯಮುಚ್ಛಿಷ್ಟಮಾರ್ಜಕಃ ।
ನ ಭುಂಜಸೇ ಚ ನಃ ಸತ್ರೇ ಶಂಕಾ ನೋ ಮಹತೀ ಭವೇತ್ ॥ ೪೭ ॥

ಸಾರಥಿಯು ಹೇಳುತ್ತಾನೆ:--

೪೪-೪೫. 'ಎಲೈ ಇಂದ್ರ ಪುತ್ರನೇ! ಕೇಳು; ನೀನು ಕುರುಕ್ಷೇತ್ರದಲ್ಲಿ ಶ್ರೀ ರಾಮನು ಅನುಷ್ಠಿಸುವ ಸತ್ರಯಾಗದಲ್ಲಿ ಹನ್ನೆರಡು ವರ್ಷಗಳಲ್ಲಿ ನಿತ್ಯವೂ ಬ್ರಾಹ್ಮಣರು ಊಟಮಾಡಿದಮೇಲೆ, ಅವರೆಂಜಲನ್ನು ಬಳಿದು, ಈ ಪಾಪದಿಂದ ಶುದ್ಧನಾಗುವೆ;' ಎಂದು ಈ ಸಾರಥಿಯು ಹೇಳಿ, ದೇವತೆಗಳಿಂದ ಸೇವಿತವಾದ ಸ್ವರ್ಗ ಲೋಕಕ್ಕೆ ಹೋದನು. ಇತ್ತಲು ಇಂದ್ರಸೂನು ಸರಸ್ವತೀ ನದಿಯ ತಡಿಯಾದ ಕುರು ಕ್ಷೇತ್ರಕ್ಕೆ ಹೋದನು.

೪೬. ಶ್ರೀರಾಮ ಸತ್ರದಲ್ಲಿ ಬ್ರಾಹ್ಮಣರ ಉಚ್ಛಿಷ್ಟದ (ಸಂಮಾರ್ಜನವನ್ನು) ಶುದ್ಧಿಯನ್ನು ಮಾಡಿದನು. ಹನ್ನೆರಡು ವರ್ಷಗಳು ಪೂರೈಸುತ್ತಿರಲು, ಅವನನ್ನು ಕಂಡು ಸಂದೇಹಗೊಂಡ ಬ್ರಾಹ್ಮಣರು ಇಂತು ಹೇಳಿದರು.

೪೭. 'ಎಲೈ ಪುಣ್ಯಶಾಲಿಯೇ! ನೀನು ಯಾರು? ನಿರಂತರವಲ್ಲಿಯೂ ಬಾಹ್ಮಣರ ಉಚ್ಛಿಷ್ಟವನ್ನು ತೆಗೆದು, ಶುದ್ಧಿಮಾಡುತ್ತಲಿದ್ದೀಯೆ; ನಮ್ಮ ಸತ್ರದಲ್ಲಿ ಊಟ ಮಾಡುವುದಿಲ್ಲ; ನಮಗೆ ಬಹುವಾಗಿ ಸಂದೇಹವುಂಟಾಗುವುದು;' ಎಂದು.

ಇತ್ಯುಕ್ತಃ ಕಥಯಿತ್ವಾ ತು ಯಥಾವೃತ್ತಮನುಕ್ರಮಾತ್ ।
ಜಗಾಮ ತ್ರಿದಿವಂ ವಿಪ್ರ ರಥೇನ ತನಯೋ ಹರೇಃ ॥ ೪೮ ॥

ತಸ್ಮಾತ್ತ್ವಮಪಿ ಭೂಪಾಲ ಬ್ರಾಹ್ಮಣೋಚ್ಛಿಷ್ಟಮಾದರಾತ್ ।
ಮಾರ್ಜನಂ ಕುರು ರಾಮಸ್ಯ ಸತ್ರೇ ದ್ವಾದಶವಾರ್ಷಿಕೇ ॥
ಬ್ರಾಹ್ಮಣೇಭ್ಯಃ ಪರಂ ನಾಸ್ತಿ ಸರ್ವಪಾಪಹರಂ ಪರಮ್ ।
ಏವಂ ಕೃತೇ ದೇವದತ್ತಸ್ಯಂದನಾರೋಹಣೇ ಗತಿಃ ॥ ೪೯ ॥

ಭವಿಷ್ಯತಿ ಮಹೀಪಾಲ ಪ್ರಾಯಶ್ಚಿತ್ತೇ ಕೃತೇ ತವ ।
ಅತ ಊರ್ಧ್ವಂ ಚ ನಿರ್ಮಾಲ್ಯಂ ಮಾ ಲಂಘಯ ಮಹಾಮತೇ ॥ ೫೦ ॥

ನರಸಿಂಹಸ್ಯ ದೇವಸ್ಯ ತಥಾಽನ್ಯೇಷಾಂ ದಿವೌಕಸಾಮ್ ।
ಇತ್ಯುಕ್ತಶ್ಶಂತನುಸ್ತೇನ ಬ್ರಾಹ್ಮಣೋಚ್ಛಿಷ್ಟಮಾರ್ಜನಮ್ ॥ ೫೧ ॥

---

೪೮. ಎಲೈ ಬ್ರಾಹ್ಮಣನಾದ ಭರದ್ವಾಜನೇ ! ಇಂದ್ರತನಯನು ಇಂತು ಆ ಬ್ರಾಹ್ಮಣರಿಂದ ಪ್ರಶ್ನೆ ಮಾಡಿಸಿಕೊಂಡವನು ನಡೆದ ಸಂಗತಿಯನ್ನೆಲ್ಲಾ ಕ್ರಮದಿಂದ ಹೇಳಿ, ರಥದಿಂದ ದೇವಲೋಕಕ್ಕೆ ಹೋದನು.'

೪೯-೫೧. ಎಲೈ ಭೂಪತಿಯಾದ ಶಂತನುವೇ ! ಆದುದರಿಂದ ನೀನೂ ಹನ್ನೆರಡು ವರ್ಷಗಳ ಕಾಲ ನಡೆಯತಕ್ಕ ಶ್ರೀರಾಮ ಸತ್ರದಲ್ಲಿ ಆದರದಿಂದ ಬ್ರಾಹ್ಮಣರ ಉಚ್ಛಿಷ್ಟದ ಮಾರ್ಜನವನ್ನೆಸಗು; ಪಾಪಗಳನ್ನೆಲ್ಲಾ ನಾಶಮಾಡತಕ್ಕುದು ಬ್ರಾಹ್ಮಣರ ಸೇವೆಗಿಂತ ಉತ್ತಮವಾದುದು ಬೇರೆ ಯಾವುದೂ ಇಲ್ಲವು. ಎಲೈ ಮಹೀಪಾಲನೇ ! ಇಂತು ಮಾಡಲು, ದೇವದತ್ತವಾದ ತೇರನ್ನು ಹತ್ತುವುದರಲ್ಲಿ ಗಮನಸಾಮರ್ಥ್ಯವು ಈ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು, ನಿನಗೆ ಉಂಟಾಗುವುದು. ಎಲೈ ಮಹಾಮತಿಯೇ ಇನ್ನು ಮುಂದೆ ಶ್ರೀ ನರಸಿಂಹಸ್ವಾಮಿಯ ಮತ್ತು ಹಾಗೆಯೇ ಇತರ ದೇವತೆಗಳ ನಿರ್ಮಾಲ್ಯವನ್ನು (ಪೂಜೆಮಾಡಿ ತೆಗೆದ ಹೂ, ತುಳಸಿ ಮುಂತಾದುವನ್ನು) ದಾಟಬೇಡ ;' ಇಂತು ನಾರದನು ಹೇಳಲು,

ಕೃತವಾನ್ ದ್ವಾದಶಾಬ್ದಂ ತು ಆರುರೋಹ ರಥಂ ಚ ತಮ್ ।
ಏವಂ ಪೂರ್ವಮಶಕ್ತಿಃ ಸ್ಯಾದ್ರಥಾರೋಹೇ ಮಹೀಕ್ಷಿತಃ ॥ ೫೨ ॥

ಪಶ್ಚಾತ್ತಸ್ಯೈವ ವಿಪ್ರೇಂದ್ರ ಶಕ್ತಿರೇವಮಜಾಯತ ॥ ೫೩ ॥

ಏವಂ ತೇ ಕಥಿತೋ ವಿಪ್ರ ದೋಷೋ ನಿರ್ಮಾಲ್ಯ ಲಂಘನೇ ।
ಪುಣ್ಯಂ ತಥಾ ದ್ವಿಜಾನಾಂ ನು ಪ್ರೋಕ್ತಮುಚ್ಛಿಷ್ಟಮಾರ್ಜನೇ ॥ ೫೪ ॥

ಭಕ್ತ್ಯಾ ದ್ವಿಜೋಚ್ಛಿಷ್ಟಮಿಹಾಪಮಾರ್ಜಯೇ
ಚ್ಛುಚಿರ್ನರೋ ಯಃ ಸುಸಮಾಹಿತಾತ್ಮಾ ।

ಶಂತನುವು ಹನ್ನೆರಡು ವರ್ಷಗಳ ಕಾಲ ಬ್ರಾಹ್ಮಣೋಚ್ಛಿಷ್ಟಮಾರ್ಜನವನ್ನು ಮಾಡಿದನು; ಬಳಿಕ ಆ ದೇವದತ್ತವಾದ ರಥವನ್ನು ಹತ್ತಿದನು. ಆ ಭೂಪತಿಗೆ ಪೂರ್ವದಲ್ಲಿ ಇಂತು ತೇರನ್ನು ಹತ್ತಲು ಶಕ್ತಿಯಿದ್ದಿತು. ಎಲೈ ಬ್ರಾಹ್ಮಣಶ್ರೇಷ್ಠನೇ! ಅನಂತರದಲ್ಲಿ ಅವನಿಗೆ ಇಂತು ಸಾಮರ್ಥ್ಯವುಂಟಾಯಿತು.

೫೪. ಎಲೈ ಭರದ್ವಾಜನೇ! ನಿರ್ಮಾಲ್ಯವನ್ನು ದಾಟುವುದರಿಂದ ಪ್ರಾಪ್ತವಾಗುವ ಈ ಪಾಪವನ್ನೂ, ಹಾಗೆಯೇ ಬ್ರಾಹ್ಮಣರ ಉಚ್ಛಿಷ್ಟವನ್ನು ಬಳಿದು ಶುದ್ಧಿಯನ್ನುಂಟುಮಾಡುವುದರಿಂದ ಉಂಟಾಗುವ ಪುಣ್ಯವನ್ನೂ ನಿನಗೆ ಹೇಳಿದೆನು.

೫೫. ಯಾವ ಮಾನವನು ಶುಚಿಯೂ, ಸಮಾಧಾನಗೊಂಡ ಮನಸ್ಸುಳ್ಳವನೂ ಆಗಿ ಇಹಲೋಕದಲ್ಲಿ ಭಕ್ತಿಯಿಂದ ಬ್ರಾಹ್ಮಣರ ಉಚ್ಛಿಷ್ಟವನ್ನು ಮಾರ್ಜನಮಾಡು-

ಸ ಪಾಪಬಂಧಂ ಪ್ರವಿಹಾಯ ಭುಂಕ್ತೇ
ಗವಾಂ ಪ್ರದಾನಸ್ಯ ಫಲಂ ದಿವಿ ಸ್ಥಿತಃ ॥ ೫೫ ॥

ಇತಿ ಶ್ರೀ ನರಸಿಂಹಪುರಾಣೇ ಶಂತನುಚರಿತಂ
ನಾಮಾಷ್ಟಾವಿಂಶತಿತಮೋಽಧ್ಯಾಯಃ

ತ್ತಾನೆಯೋ, ಅವನು ಪಾಪಸಂಬಂಧವನ್ನು ಕಳೆದುಕೊಂಡು, ದೇವಲೋಕದಲ್ಲಿದ್ದು, ಗೋದಾನದ ಫಲವನ್ನು ಅನುಭವಿಸುತ್ತಾನೆ.'

ಎಂದು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಶಂತನುಚರಿತೆಯೆಂಬ
ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೆಂಟನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ಸೂತರು ಭರದ್ವಾಜನಿಗೆ ಚಂದ್ರವಂಶವನ್ನರುಹಲು ಉಪಕ್ರಮಿಸಿ, ಕ್ಷೀರಸಾಗರಶಾಯಿಯಾದ ಶ್ರೀಮನ್ನಾರಾಯಣನ ನಾಭಿಕಮಲದಲ್ಲಿ ಚತುರ್ಮುಖನು ; ಅವನ ಮನಸ್ಸಿನಿಂದ ಅತ್ರಿಮುನಿಯು ; ಅವನಿಂದ ಅನಸೂಯೆಯಲ್ಲಿ ಚಂದ್ರನು ; ಇಂತು ಜನಿಸಿದರು. ಈ ಚಂದ್ರನೇ ಚಂದ್ರವಂಶಕ್ಕೆ ಆದ್ಯನು. ಬುಧನು ಚಂದ್ರನ ಮಗ. ಈ ವಂಶದಲ್ಲಿ ನಹುಷನು ಹುಟ್ಟಿದನು. ಅವನ ಸಂತತಿಯವರು ವೃಷ್ಣಿಗಳು. ಯಯಾತಿಗೆ ಶರ್ಮಿಷ್ಠೆಯಲ್ಲಿ ಪೂರುವು ಜನಿಸಿದನು. ಈ ವಂಶದಲ್ಲಿ ಭೋಜನು ಹುಟ್ಟಿದನು ; ಇವನ ಸಂತತಿಯಲ್ಲಿ ದೇವಾಸುರ ಯುದ್ಧದಲ್ಲಿ ಮಡಿದ ಕಾಲನೇಮಿಯು ಕಂಸನಾಗಿ ಹುಟ್ಟಿದವನು, ವಸುದೇವನ ತನಯನಾದ ಶ್ರೀಕೃಷ್ಣನಿಂದ ಹತನಾದನು. ಆ ಭೋಜನಿಗೆ ದುಷ್ಯಂತನು ಹುಟ್ಟಿದನು ; ಇವನ ಮಗನೇ ಭರತನು. ಈ ಕುಲದ ಪರಂಪರೆಯಲ್ಲಿ ಅಜಮೀಢನು ಜನಿಸಿ, ಸಪ್ತದ್ವೀಪಾಧಿಪತ್ಯವನ್ನು ಮಾಡಿದನು. ಇವನ ಮಗ ವೃಷ್ಣಿ, ಇವನಿಂದ ಉಗ್ರಸೇನೆಯಲ್ಲಿ ಪ್ರತ್ಯಂಚನು ಜನಿಸಿದನು. ಈ ಪ್ರತ್ಯಂಚನಿಗೆ ಬಹುರೂಪೆಯಲ್ಲಿ ಶಂತನುವು ಹುಟ್ಟಿದನು. ಇವನ ಹಿಂದೆ ದೇವದತ್ತವಾದ ತೀರನ್ನು ಹತ್ತುಲ ಶಕ್ತನಾಗಿದ್ದು, ಆ ಮೇಲೆ ಆ ಸಾಮರ್ಥ್ಯವನ್ನು ದೇವಮುನಿಗಳಾದ ನಾರದರು ಹೇಳಿದ ಇಂದ್ರಪುತ್ರನ ವೃತ್ತಾಂತದಿಂದ ತಿಳಿದು, ತಾನೂ ಹಿಂದೆ ಶ್ರೀ ನರಸಿಂಹನ ನಿರ್ಮಾಲ್ಯವನ್ನು ದಾಟಿದುದಕ್ಕೆ ಪಾಪವುಂಟಾಗಿ, ಸಾಮರ್ಥ್ಯವು ಹೋಯಿತೆಂದೂ, ಶ್ರೀ ರಾಮಸತ್ರದಲ್ಲಿ ಹನ್ನೆರಡು ವರ್ಷಗಳಕಾಲ ಬ್ರಾಹ್ಮಣೋಚ್ಛಿಷ್ಟಮಾರ್ಜನದಿಂದ ಪಾಪವನ್ನು ಕಳೆದುಕೊಂಡು, ಪುನಃ ಆ ಸಾಮರ್ಥ್ಯ ಪಡೆದನೆಂದೂ ನಿರೂಪಿಸಿ, ದೇವನಿರ್ಮಾಲ್ಯದ ಲಂಘನದಿಂದ ಪಾಪಬರುವುದನ್ನೂ, ಬ್ರಾಹ್ಮಣೋಚ್ಛಿಷ್ಟಮಾರ್ಜನದಿಂದ ಪುಣ್ಯವನ್ನು ಪಡೆಯುವ ಮಹಿಮೆಯನ್ನೂ ನಿರೂಪಿಸಿರುತ್ತಾರೆ.

ಇಂತು ಇಪ್ಪತ್ತೆಂಟನೆಯ ಅಧ್ಯಾಯದ ವಿಷಯ ಸಂಗ್ರಹವು

॥ ಶ್ರೀಃ ॥

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ವಂಶಾನುಚರಿತಮ್ ; ಏಕೋನತ್ರಿಂಶೋಽಧ್ಯಾಯಃ

ಶಂತನು ವಂಶ ಚರಿತಮ್

॥ ಶ್ರೀ ಸೂತ ಉವಾಚ ॥

ಶಂತನೋರ್ಯೋಜನಗಂಧಾಯಾಂ ವಿಚಿತ್ರವೀರ್ಯಃ
ಸ ತು ಹಸ್ತಿನಾಪುರೇ ಸ್ಥಿತ್ವಾ ಪ್ರಜಾಃ ಸ್ವಧರ್ಮೇಣ ಪಾಲಯನ್
ದೇವಾಂಶ್ಚ ಯಾಗೈಃ ಪಿತೄಂಶ್ಚ ಶ್ರಾದ್ಧೈಃ ಸಂತರ್ಪ್ಯ
ಸಂಜಾತ ಪುತ್ರೋ ದಿವಮಾರುರೋಹ ॥ ೧ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು

ಶಂತನುವಂಶದ ಚರಿತೆಯು.

ಶ್ರೀ ಸೂತರು ಭರದ್ವಾಜನಿಗೆ ಇಂತು ನಿರೂಪಿಸುತ್ತಾರೆ.

೧. "ಭರದ್ವಾಜ! ಕೇಳು; ಶಂತನುವಿಗೆ ಯೋಜನಗಂಧೆಯಲ್ಲಿ ವಿಚಿತ್ರವೀರ್ಯನು ಜನಿಸಿದನು. ಅವನು ಹಸ್ತಿನಾಪುರದಲ್ಲಿದ್ದು, ಪ್ರಜೆಗಳನ್ನು ಸ್ವಧರ್ಮದಿಂದ ರಕ್ಷಿಸುತ್ತಾ, ಯಾಗಗಳಿಂದ ದೇವತೆಗಳನ್ನೂ, ಶ್ರಾದ್ಧಗಳಿಂದ ಪಿತೃಗಳನ್ನೂ ತೃಪ್ತಿಪಡಿಸಿ, ಪುತ್ರಸಂತಾನಪಡೆದು ಸ್ವರ್ಗವನ್ನೈದಿದನು.

ವಿಚಿತ್ರವೀರ್ಯಸ್ಯಾಂಬಾಲಿಕಾಯಾಂ ಪಾಂಡುಃ ಪುತ್ರೋ ಜಜ್ಞೇ ;
ಸೋಽಪಿ ರಾಜ್ಯಂ ಧರ್ಮತಃ ಕೃತ್ವಾ ಮೃಗಶಾಪಾಚ್ಛರೀರಂ
ವಿಹಾಯ ದೇವಲೋಕಮಾಪ । ತಸ್ಯ ಪಾಂಡೋಃ
ಕುಂತೀ ದೇವ್ಯಾಮರ್ಜುನಃ ॥ ೨ ॥

ಸ ತು ಮಹತಾ ತಪಸಾ ಶಂಕರಂ ತೋಷಯಿತ್ವಾ,
ಪಾಶುಪತಮಸ್ತ್ರಮವಾಪ್ಯ, ತ್ರಿವಿಷ್ಟಪಾಧಿಪತೇಃ ಶತ್ರೂನ್ ನಿವಾತ-
ಕವಚಾನ್ ದಾನವಾನ್ ಹತ್ವಾ, ಖಾಂಡವವನಮಗ್ನೇರ್ಯಥಾರುಚಿ
ನಿವೇದ್ಯ, ತೃಪ್ತಾಗ್ನಿತೋ ದಿವ್ಯಾನ್ವರಾನವಾಪ್ಯ, ಸುಯೋಧನೇನ
ಹೃತರಾಜ್ಯೋ ಧರ್ಮ ಭೀಮ ನಕುಲ ಸಹದೇವ ದ್ರೌಪದೀ ಸಹಿತೋ
ವಿರಾಟನಗರೇಽಜ್ಞಾತವಾಸಂ ಚರಿತ್ವಾ, ಗೋಗ್ರಹೇ ಚ
ಭೀಷ್ಮ ದ್ರೋಣ ಕೃಪ ದುರ್ಯೋಧನ ಕರ್ಣಾದೀನ್ ಜಿತ್ವಾ,

---

೨. ವಿಚಿತ್ರವೀರ್ಯನಿಗೆ ಅಂಬಾಲಿಕೆಯಲ್ಲಿ ಪಾಂಡುವೆಂಬ ಮಗನು ಹುಟ್ಟಿದನು. ಅವನೂ ರಾಜ್ಯವನ್ನು ಧರ್ಮದಿಂದ ಪಾಲಿಸಿ, ಮೃಗತನುವಿನಲ್ಲಿದ್ದ ಮುನಿಯ ಶಾಪದಿಂದ ಒಡಲನ್ನುಳಿದು, ದೇವಲೋಕಕ್ಕೆ ತೆರಳಿದನು. ಆ ಪಾಂಡುವಿಗೆ ಕುಂತಿ ದೇವಿಯಲ್ಲಿ ಅರ್ಜುನನು (ಇಂದ್ರನ ಅನುಗ್ರಹದಿಂದ) ಜನಿಸಿದನು.

೩. ಅವನಾದರೋ ಬಹು ಕಷ್ಟಸಾಧ್ಯವಾದ ತಪದಿಂದ ಶಂಕರನಾದ ಮಹಾದೇವನನ್ನು ಸಂತೋಷಗೊಳಿಸಿ, "ಪಾಶುಪತ"ವೆಂಬ ಅಸ್ತ್ರವನ್ನು ಪಡೆದು, ದೇವೇಂದ್ರನಿಗೆ ಹಗೆಗಳಾದ ನಿವಾತಕವಚರೆಂಬ ದಾನವರನ್ನು ಕೊಂದು, ಖಾಂಡವವನವನ್ನು ಯಜ್ಞೇಶ್ವರನಿಗೆ ರುಚಿಯಾಗುವಷ್ಟು ಅರ್ಪಿಸಿ, ಸಂತುಷ್ಟನಾದ ಯಜ್ಞೇಶ್ವರನಿಂದ ಉತ್ತಮಗಳಾದ ವರಗಳನ್ನು ಪಡೆದು, ದುರ್ಯೋಧನನಿಂದ ಕಿಗೆದುಕೊಳ್ಳಲ್ಪಟ್ಟ ರಾಜ್ಯವುಳ್ಳವನಾಗಿ ಧರ್ಮ, ಭೀಮ, ನಕುಲ, ಸಹದೇವ, ದ್ರೌಪದಿ ಇವರೊಡನೆ ಕೂಡಿ, ವಿರಾಟರಾಯನ ಪಟ್ಟಣದಲ್ಲಿ ಅಜ್ಞಾತವಾಸವನ್ನಾಚರಿಸಿ, ಉತ್ತರಗೋಗ್ರಹಣದಲ್ಲಿ ಭೀಷ್ಮ, ದ್ರೋಣ, ಕೃಪ, ದುರ್ಯೋಧನ, ಕರ್ಣರೇ ಮೊದಲಾದವರನ್ನುಗೆದ್ದು,

ಸಮಸ್ತ ಗೋಮಂಡಲಂ ನಿವರ್ತಯಿತ್ವಾ, ಭ್ರಾತೃಭಿಃ ಸಹ
ವಿರಾಟರಾಜಕೃತಪೂಜೋ ವಾಸುದೇವಸಹಿತಃ ಕುರುಕ್ಷೇತ್ರೇ
ಧಾರ್ತರಾಷ್ಟ್ರೈಃ ಬಹುಬಲೈರ್ಯುದ್ಧಂ ಕುರ್ವನ್,
ಭೀಷ್ಮ ದ್ರೋಣ ಕೃಪಶಲ್ಯಕರ್ಣಾದಿಭಿರ್ಭೂರಿಪರಾಕ್ರಮೈಃ
ಕ್ಷತ್ರಿಯೈಃ ನಾನಾದೇಶಾದಾಗತೈರನೇಕೈರಪಿ ರಾಜಪುತ್ರೈಃ ಸಹ
ದುರ್ಯೋಧನಾದೀನ್ ಧಾರ್ತರಾಷ್ಟ್ರಾನ್ ಹತ್ವಾ, ಸ್ವರಾಜ್ಯಂ
ಪ್ರಾಪ್ಯ ಧರ್ಮೇಣ ರಾಜ್ಯಂ ಪರಿಪಾಲ್ಯ ಭ್ರಾತೃಭಿಸ್ಸಹ ಮುದಿತೋ
ದಿವಮಾರುರೋಹ ॥ ೩ ॥

ಅರ್ಜುನಸ್ಯ ಸುಭದ್ರಾಯಾಮಭಿಮನ್ಯುಃ, ಯೇನ ಭಾರತಯುದ್ಧೇ
ಚಕ್ರವ್ಯೂಹಂ ಪ್ರವಿಶ್ಯಾನೇಕಭೂಭುಜೋ ನಿಧನಂ ಪ್ರಾಪಿತಾಃ ॥ ೪ ॥

ಗೋಮಂಡಲವನ್ನೆಲ್ಲಾ ಹಿಂದಿರುಗಿಸಿ, ಭ್ರಾತೃಗಳಿಂದ ಕೂಡಿ, ವಿರಾಟರಾಯನಿಂದ ಗೌರವಿಸಲ್ಪಟ್ಟು, ಶ್ರೀಕೃಷ್ಣನು ಬೆರಸು ಕುರುಕ್ಷೇತ್ರದಲ್ಲಿ ಬಹುಲರಾದ ಧೃತರಾಷ್ಟ್ರನ ಮಕ್ಕಳಿಂದಹೋರಾಡುತ್ತಾ, ಭೀಷ್ಮ, ದ್ರೋಣ, ಕೃಪ, ಶಲ್ಯ, ಕರ್ಣರೇ ಮೊದಲಾದ ವರಿಂದಲೂ, ಅತಿಶಯವಾದ ಪರಾಕ್ರಮವುಳ್ಳ ಬೇರೆ ಬೇರೆ ದೇಶಗಳಿಂದ ಬಂದಿದ್ದ ಕ್ಷತ್ರಿಯರಿಂದಲೂ, ಅನೇಕ ರಾಜ ಪುತ್ರರಿಂದಲೂ ಕೂಡಿದ ದುರ್ಯೋಧನನೇ ಮೊದಲಾದ ಧೃತರಾಷ್ಟ್ರನ ಮಕ್ಕಳನ್ನು ಕೊಂದು, ತನ್ನ ರಾಜ್ಯವನ್ನು ಮರಳಿಪಡೆದು, ಧರ್ಮದಿಂದ ರಾಜ್ಯವನ್ನು ಪರಿಪಾಲಿಸಿ, ಭ್ರಾತೃಗಳೊಡನೆ ಸಂತಸದಿಂದಿದ್ದು, ಸ್ವರ್ಗಕ್ಕಡರಿದನು.

೪. ಯಾವಾತನಿಂದ ಭಾರತಯುದ್ಧದಲ್ಲಿ ಚಕ್ರವ್ಯೂಹವು ಹೊಕ್ಕು, ಅನೇಕ ರಾದ ರಾಯರು ಸಂಹರಿಸಲ್ಪಟ್ಟರೋ, ಆ ಅಭಿಮನ್ಯುವು ಅರ್ಜುನನಿಗೆ ಸುಭದ್ರೆ ಯಲ್ಲಿ ಜನಿಸಿದನು.

ಅಭಿಮನ್ಯೋರುತ್ತರಾಯಾಂ ಪರೀಕ್ಷಿತಃ ಸೋಽಪ್ಯಭಿಷಿಕ್ತೋ
ವನಂ ಗಚ್ಛತಾ ಧರ್ಮಪುತ್ರೇಣ ರಾಜ್ಯಂ ಕೃತ್ವಾ ರಾಜಪುತ್ರೋ-
ನಾಕಂ ಸಂಪ್ರಾಪ್ಯ ರೇಮೇ ॥ ೫ ॥

ಪರೀಕ್ಷಿತಾನ್ಮಾತೃವತ್ಯಾಂ ಜನಮೇಜಯಃ ।
ಯೇನ ಬ್ರಹ್ಮಹತ್ಯಾವಾರಣಾರ್ಥಂ ಮಹಾಭಾರತಂ
ವ್ಯಾಸಶಿಷ್ಯಾದ್ವೈಶಂಪಾಯನಾತ್ ಸಾದ್ಯಂತಂ ಶ್ರುತಮ್ ॥ ೬ ॥

ರಾಜ್ಯಂ ಚ ಧರ್ಮತಃ ಕೃತ್ವಾ ದಿವಮಾರುರೋಹ ।
ಜನಮೇಜಯಸ್ಯ ಪುಷ್ಪವತ್ಯಾಂ ಶತಾನೀಕಃ ॥ ೭ ॥

---

೫. ಅಭಿಮನ್ಯುವಿನಿಂದ ಉತ್ತರಾದೇವಿಯಲ್ಲಿ ಪರೀಕ್ಷಿತರಾಯನು ಜನಿಸಿದನು. ಅವನೂ ಅರಣ್ಯಕ್ಕೆ ತೆರಳುತ್ತಿದ್ದ ಧರ್ಮನ ಮಗನಾದ ಯುಧಿಷ್ಠಿರನಿಂದ ಪಟ್ಟಾಭಿಷಿಕ್ತನಾಗಿ, ರಾಜ್ಯವನ್ನು ಪರಿಪಾಲಿಸಿ, ಆ ರಾಜಪುತ್ರನೂ ಸ್ವರ್ಗವನ್ನು ಹೊಂದಿ ವಿಹರಿಸಿದನು.

೬. ಪರೀಕ್ಷಿತರಾಯನಿಂದ ಮಾತೃವತಿಯಲ್ಲಿ ಜನಮೇಜಯನು ಹುಟ್ಟಿದನು. ಯಾವ ಈ ಜನಮೇಜಯನಿಂದ ಬ್ರಹ್ಮಹತ್ಯೆಯಿಂದುಂಟಾದ ಪಾಪವನ್ನು ಕಳೆದುಕೊಳ್ಳಲೋಸುಗ ಶ್ರೀ ವೇದವ್ಯಾಸರ ಶಿಷ್ಯನಾದ ವೈಶಂಪಾಯನ ಮುನಿಯಿಂದ ಶ್ರೀಮನ್ಮಹಾಭಾರತವು ಮೊದಲಿಂದ ಕೊನೆಯವರೆಗೂ ಶ್ರವಣ ಮಾಡಲ್ಪಟ್ಟಿತು.

೭. ಈ ಜನಮೇಜಯನೂ ರಾಜ್ಯವನ್ನು ಧರ್ಮದಿಂದಾಳಿ ಸ್ವರ್ಗಕ್ಕೆ ಹತ್ತಿದನು. ಜನಮೇಜಯನಿಗೆ ಪುಷ್ಪವತಿಯಲ್ಲಿ ಶತಾನೀಕನು ಹುಟ್ಟಿದನು.

ಸ ತು ಧರ್ಮೇಣ ರಾಜ್ಯಂ ಕುರ್ವನ್, ಸಂಸಾರದುಃಖಾದ್ವಿರಕ್ತಃ
ಶೌನಕೋಪದೇಶೇನ ಕ್ರಿಯಾಯೋಗೇನ ಸಕಲಲೋಕನಾಥಂ
ವಿಷ್ಣುಮಾರಾಧ್ಯ, ನಿಷ್ಕಾಮೋ ವೈಷ್ಣವಂ ಪದಮವಾಪ । ತಸ್ಯ
ಶತಾನೀಕಸ್ಯ ಫಲವತ್ಯಾಂ ಸಹಸ್ರಾನೀಕಃ ॥ ೮ ॥

ಸ ತು ಬಾಲ ಏವಾಭಿಷಿಕ್ತೋ ನರಸಿಂಹೇऽತ್ಯಂತಂ
ಭಕ್ತಿಮಾನಭವತ್ । ತಸ್ಯ ಚರಿತಮುಪರಿಷ್ಟಾದ್ಭವಿಷ್ಯತಿ ॥ ೯ ॥

ಸಹಸ್ರಾನೀಕಸ್ಯ ಮೃಗವತ್ಯಾಂ ಉದಯನಃ । ಸೋऽಪಿ ರಾಜ್ಯಂ
ಕೃತ್ವಾ ಧರ್ಮತೋ ನಾರಾಯಣ ಮಾರಾಧ್ಯ ತತ್ಪರಮವಾಪ ॥ ೧೦ ॥

---

೮. ಆ ಶತಾನೀಕನೂ ಧರ್ಮದಿಂದ ರಾಜ್ಯವನ್ನು ಪಾಲಿಸುತ್ತಾ, ಸಂಸಾರ ದುಃಖದಿಂದ ವೈರಾಗ್ಯವನ್ನು ಹೊಂದಿ, ಶೌನಕಮುನಿಯ ಉಪದೇಶದಿಂದ ಕರ್ಮ ಯೋಗದಿಂದ ಸಕಲ ಲೋಕಗಳಿಗೂ ಒಡೆಯನಾದ ಶ್ರೀ ಮಹಾವಿಷ್ಣುವನ್ನು ಪೂಜಿಸಿ, ಫಲಾಪೇಕ್ಷೆಯಿಲ್ಲದವನಾಗಿ, ಶ್ರೀ ಮಹಾವಿಷ್ಣುವಿನ ಲೋಕವನ್ನೈದಿದನು; ಆ ಶತಾನೀಕನಿಗೆ ಫಲವತಿಯಲ್ಲಿ ಸಹಸ್ರಾನೀಕನು ಹುಟ್ಟಿದನು.

೯. ಅವನೂ ಬಾಲನೇ ಪಟ್ಟಾಭಿಷಿಕ್ತನಾಗಿ ಶ್ರೀ ನರಸಿಂಹದೇವರಲ್ಲಿ ವಿಶೇಷ ವಾದ ಭಕ್ತಿಯುಳ್ಳವನಾದನು. ಅವನ ಚರಿತೆಯು ಮುಂದೆ ನಿರೂಪಿತವಾಗುವುದು.

೧೦. ಆ ಸಹಸ್ರಾನೀಕನಿಗೆ ಮೃಗವತಿಯಲ್ಲಿ ಉದಯನನು ಜನಿಸಿದನು. ಅವನೂ ಧರ್ಮದಿಂದ ರಾಜ್ಯದೊಡೆತನ ಮಾಡಿ, ಶ್ರೀಮನ್ನಾರಾಯಣನನ್ನು ಪೂಜಿಸಿ, ವಿಷ್ಣುಪದವನ್ನು ಹೊಂದಿದನು.

ಉದಯನಸ್ಯ ವಾಸವದತ್ತಾಯಾಂ ನರವಾಹನಃ ।
ಸ ತು ಯಥಾನ್ಯಾಯಂ ರಾಜ್ಯಂ ಕೃತ್ವಾ ದಿವಮವಾಪ ।
ನರವಾಹನಸ್ಯಾಶ್ವಪ್ರೇಧದತ್ತಾಯಾಂ ಕ್ಷೇಮಕಃ ॥ ೧೧ ॥

ಸ ಚ ರಾಜ್ಯಸ್ಥಃ ಪ್ರಜಾಃ ಪರಿಪಾಲ್ಯ ಮ್ಲೇಚ್ಛಾಭಿಭೂತೇ
ಜಗತಿ ಜ್ಞಾನಬಲಾತ್ ಕಲಾಪಗ್ರಾಮಮಾಶ್ರಿತಃ ॥ ೧೨ ॥

ಯಃ ಶ್ರದ್ದಧಾನಃ ಪಠತೇ ಶೃಣೋತಿ ವಾ
ಹರೌ ಚ ಭಕ್ತಿಶ್ಚರಿತಂ ಮಹೀಭೃತಾಮ್ ।

---

೧೧. ಉದಯನನಿಗೆ ವಾಸವದತ್ತೆಯಲ್ಲಿ ನರವಾಹನನು ಹುಟ್ಟಿದನು. ಅವನೂ ನ್ಯಾಯಾನುಸಾರವಾಗಿ ರಾಜ್ಯವನ್ನಾಳಿ, ಸ್ವರ್ಗಸ್ಥನಾದನು. ನರವಾಹನನಿಗೆ ಅಶ್ವಪ್ರೇಧದತ್ತೆಯೆಂಬವಳಲ್ಲಿ ಕ್ಷೇಮಕನೆಂಬವನು ಹುಟ್ಟಿದನು.

೧೨. ಅವನೂ ರಾಜ್ಯದಲ್ಲಿ ಅಭಿಷಿಕ್ತನಾಗಿ, ಪ್ರಜೆಗಳನ್ನು ಪರಿಪಾಲಿಸಿ, ಮ್ಲೇಚ್ಛರಿಂದ ಜಗತ್ತು ವ್ಯಾಪಿಸಲು, ಜ್ಞಾನಬಲದಿಂದ ಅದನ್ನರಿತು, ಕಲಾಪವೆಂಬ ಗ್ರಾಮವನ್ನು ಹೊಂದಿದನು.

೧೩. ಯಾವ ಅಧಿಕಾರಿಯು ಶಾಸ್ತ್ರಗಳಲ್ಲಿ ನಂಬುಗೆಯುಳ್ಳವನೂ, ಶ್ರೀಹರಿಯಲ್ಲಿ ಭಕ್ತಿಯುಳ್ಳವನೂ ಆಗಿ, ಈ ರಾಜರುಗಳ ಚರಿತೆಯನ್ನು ಪಠಿಸುತ್ತಾನೆಯೋ, ಅಥವಾ ಕೇಳುತ್ತಾನೆಯೋ, ಅವನು ಸಂತತಿಪಡೆದು, ಪವಿತ್ರವಾದ ಶುದ್ಧಕರ್ಮವ

ಸ ಸಂತತಿಂ ಪ್ರಾಪ್ಯ ವಿಶುದ್ಧ ಕರ್ಮ-
ಕೃದ್ದಿವಂ ಸಮಾಸಾದ್ಯ ವಸೇಚ್ಚಿರಂ ಸುಖೀ ॥ ೧೩ ॥

ಇತಿ ಶ್ರೀ ನರಸಿಂಹಪುರಾಣೇ ಏಕೋನತ್ರಿಂಶೋಽಧ್ಯಾಯಃ
ವಂಶಾನುಚರಿತಂ ಸಮಾಪ್ತಮ್

ನ್ನೆಸಗುವವನಾಗಿ, ಸ್ವರ್ಗಕ್ಕೆ ಹೋಗಿ, ಅಲ್ಲಿ ಬಹುಕಾಲ ಸುಖವುಳ್ಳವನಾಗಿ, ವಾಸ ಮಾಡುವನು ;' ಎಂದು ಶ್ರೀ ಸೂತರು ಭರದ್ವಾಜ ಮುನಿಗೆ ನಿರೂಪಿಸಿದರು,

ಇಂತು ಶ್ರೀ ನರಸಿಂಹಪುರಾಣದಲ್ಲಿ ಇಪ್ಪತ್ತೊಂಭತ್ತನೆಯ ಅಧ್ಯಾಯವು
ಮುಗಿದುದು.

ಇಪ್ಪತ್ತೊಂಬತ್ತನೆಯ ಅಧ್ಯಾಯದ ವಿಷಯ ಸಂಗ್ರಹವು.

ಈ ಅಧ್ಯಾಯದಲ್ಲಿ ಚಂದ್ರವಂಶದ ಅರಸರ ಪೀಳಿಗೆಯನ್ನು ಹೇಳತೊಡಗಿ ಶಂತನು ಚಕ್ರವರ್ತಿ ಮೊದಲು ಕ್ಷೇಮುಕನೆಂಬ ರಾಯನು ಕೊನೆ. ಅವರ ಜನನ, ಒಡೆತನ, ಒಳ್ಳೆಯ ನಡವಳಿಕೆ, ಅವರಿಗಾದ ಸದ್ಗತಿ, ಇವೆಲ್ಲವೂ ಆದಷ್ಟು ಬಿತ್ತರದಲ್ಲಿ ನಿರೂಪಿತವಾಗಿವೆ.

ಇಂತು ಇಪ್ಪತ್ತೊಂಬತ್ತನೆಯ ಅಧ್ಯಾಯದ ವಿಷಯ ಸಂಗ್ರಹವು

ಇಲ್ಲಿಗೆ ವಂಶಾನುಚರಿತವು ಮುಗಿದುದು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಭೂಗೋಲಕಥನಮ್ ; ತ್ರಿಂಶೋಽಧ್ಯಾಯಃ

ನದೀಪರ್ವತವಿಶಿಷ್ಟ ಭೂಗೋಲಃ

॥ ಶ್ರೀ ಸೂತ ಉವಾಚ ॥

ಅತಃ ಪರಂ ಪ್ರವಕ್ಷ್ಯಾಮಿ ಭೂಗೋಲಂ ದ್ವಿಜಸತ್ತಮಾಃ ।
ಸಂಕ್ಷೇಪಾತ್ಪರ್ವತಾಕೀರ್ಣಂ ನದೀಭಿಶ್ಚ ಸಮಂತತಃ
ಜಂಬುಪ್ಲಕ್ಷಶಾಲ್ಮಲಕುಶಕ್ರೌಞ್ಚಶಾಕಪುಷ್ಕರಸಂಜ್ಞಾಃ ಸಪ್ತದ್ವೀಪಾಃ ।
ಲಕ್ಷಯೋಜನಪ್ರಮಾಣಾಜ್ಜಂಬುದ್ವೀಪಾದುತ್ತರೋತ್ತರದ್ವಿಗುಣಾಃ ॥ ೧ ॥

ಭೂಗೋಲಕಥನವು ; ಮೂವತ್ತನೆಯ ಅಧ್ಯಾಯವು

ನದೀಪರ್ವತಗಳಿಂದ ಕೂಡಿದ ಭೂಗೋಲವು

ಶ್ರೀ ಸೂತರು ಭರದ್ವಾಜಾದಿ ಮುನಿಗಳಿಗೆ ಇಂತು ಹೇಳುತ್ತಾರೆ :—

೧. ಎಲೈ ಬ್ರಾಹ್ಮಣೋತ್ತಮರೇ ! ಕೇಳಿರಿ ; ಇನ್ನು ಮುಂದೆ ಪರ್ವತಗಳಿಂದ ವ್ಯಾಪ್ತವೂ, ಎಲ್ಲೆಡೆಯಲ್ಲಿಯೂ ನದಿಗಳಿಂದ ಕೂಡಿದುದೂ ಆದ ಭೂಗೋಲವನ್ನು ಸಂಗ್ರಹದಿಂದ ನಿರೂಪಿಸುವೆನು.

ಜಂಬು, ಪ್ಲಕ್ಷ, ಶಾಲ್ಮಲ, ಕುಶ, ಕ್ರೌಂಚ, ಶಾಕ, ಪುಷ್ಕರಗಳೆಂಬ ಹೆಸರಿನ ಏಳುದ್ವೀಪಗಳಿರುವುವು ಇವುಗಳಲ್ಲಿ ಜಂಬುದ್ವೀಪವು ಒಂದು ಲಕ್ಷಗಾವುದ ಪ್ರಮಾಣ ವುಳ್ಳದ್ದು. ಇತರ ದ್ವೀಪಗಳು ಮುಂದೆ ಮುಂದೆ ಇದರ ಪ್ರಮಾಣಕ್ಕೆ ಎರಡರಷ್ಟು ಅಧಿಕ ಪ್ರಮಾಣವುಳ್ಳವುಗಳಾಗಿವೆ.

ಲವಣಸುರಾಸರ್ಪಿರ್ದಧಿದುಗ್ಧಸ್ವಚ್ಛೋದಕ ಸಂಜ್ಞೈಃ
ಪರಸ್ಪರದ್ವಿಗುಣೈಃ ಸಪ್ತಸಮುದ್ರೈರ್ವಲಯಾಕಾರೈಸ್ತೇ
ದ್ವೀಪಾಃ ಪರಿಧಿಷ್ಠಿತಾಃ ॥ ೨ ॥

ಯೋಽಸೌ ಮನುಪುತ್ರಃ ಪ್ರಿಯವ್ರತೋ ನಾಮ
ಸಪ್ತದ್ವೀಪಾಧಿಪತಿರ್ಬಭೂವ । ತಸ್ಯ ಅಗ್ನೀಧ್ರಾದಯೋ
ದಶಪುತ್ರಾ ಬಭೂವುಃ ॥ ೩ ॥

ತ್ರಯಃ ಪ್ರವ್ರಜಿತಾಃ । ಶಿಷ್ಟಾನಾಂ ಸಪ್ತಾನಾಂ ಸಪ್ತ
ದ್ವೀಪಾಃ ಪಿತ್ರಾ ದತ್ತಾಃ । ತತ್ರ ಜಂಬುದ್ವೀಪಾಧಿಪತೇ-
ರಾಗ್ನೀಧ್ರಸ್ಯ ನವ ಪುತ್ರಾ ಜಾತಾಃ ॥ ೪ ॥

---

೨. ಆ ದ್ವೀಪಗಳು, ಲವಣ (ಉಪ್ಪು) ಸುರ (ಮದ್ಯ) ಸರ್ಪಿ (ತುಪ್ಪ) ದಧಿ (ಮೊಸರು) ದುಗ್ಧ (ಹಾಲು) ಸ್ವಚ್ಛೋದಕ (ನಿರ್ಮಲವಾದ ನೀರು) ಈ ಹೆಸರಿನ ಪರಸ್ಪರ ಎರಡರಷ್ಟು ಪ್ರಮಾಣವುಳ್ಳ ಏಳು ಸಮುದ್ರಗಳಿಂದ ಬಳೆಯಂತೆ ಸುತ್ತುವರಿಯಲ್ಪಟ್ಟಿವೆ.

೩. ಯಾವ ಈ ಮನುವಿನ ಮಗನು ಪ್ರಿಯವ್ರತನೆಂದು ಪ್ರಸಿದ್ಧನಾದನೋ ಅವನು ಸಪ್ತದ್ವೀಪಗಳಿಗೆ ಒಡೆಯನಾಗಿದ್ದನು. ಅವನಿಗೆ ಅಗ್ನೀಧ್ರನೇ ಮೊದಲಾದ ಹತ್ತು ಮಂದಿ ಮಕ್ಕಳು ಹುಟ್ಟಿದರು

೪. ಅವರಲ್ಲಿ ಮೂವರು ಸಂನ್ಯಾಸಿಗಳಾದರು. (ಎಲ್ಲವನ್ನೂ ಬಿಟ್ಟು ತಪಕ್ಕೆ ತೆರಳಿದರು.) ಉಳಿದ ಏಳ್ವರಿಗೆ ತಂದೆಯಾದ ಪ್ರಿಯವ್ರತನು ಏಳು ದ್ವೀಪಗಳನ್ನು ಹಂಚಿಕೊಟ್ಟನು. ಅವರಲ್ಲಿ ಜಂಬುದ್ವೀಪದೊಡೆಯನಾದ ಅಗ್ನೀಧ್ರನಿಗೆ ಒಂಬತ್ತು ಮಂದಿ ಪುತ್ರರು ಹುಟ್ಟಿದರು.

ನಾಭಿಃ ಕಿಂಪುರುಷಶ್ಚೈವ ಹರಿವರ್ಷ ಇಲಾವೃತಃ ।
ರಮ್ಯೋ ಹಿರಣ್ಮಯಶ್ಚೈವ ಕುರುರ್ಭದ್ರಶ್ಚ ಕೇತುಮಾನ್ ॥ ೫ ॥

ನವ ವರ್ಷಾಣಿ ವಿಭಜ್ಯ ಪುತ್ರೇಭ್ಯಃ ಪಿತಾ ದತ್ವಾ ವನಂ ಪ್ರವಿಶತಾ ।
ಆಗ್ನೀಧ್ರೀಯಂ ಹಿಮಾಹ್ವಯಾತ್ । ಯಸ್ಯಾಧಿಪತಿಃ ನಾಭೇಃ
ಋಷಭಃ ಪುತ್ರೋ ಬಭೂವ ॥ ೬ ॥

ಋಷಭಾದ್ಭರತೋ, ಭರತೇನ ಚಿರಕಾಲಂ ಧರ್ಮೇಣ
ಪಾಲಿತತ್ವಾದಿದಂ ಭಾರತಂ ವರ್ಷಮಭೂತ್ । ಇಲಾವೃತಸ್ಯ
ಮಧ್ಯೇ ಮೇರುಃ ಸುವರ್ಣಮಯಶ್ಚತುರಶೀತಿಸಹಸ್ರಾಣಿ
ಯೋಜನಾನಿ ತಸ್ಯೋಚ್ಛ್ರಾಯಃ । ಷೋಡಶಸಹಸ್ರ-
ಮಪ್ಯಧಸ್ತಾದವಗಾಢಃ ತದ್ದ್ವಿಗುಣೋ ಮೂಲವಿಸ್ತಾರಃ ॥ ೭ ॥

---

೫. ಅವರು ಯಾರೆಂದರೆ:— ನಾಭಿಯು, ಕಿಂಪುರುಷನು, ಹರಿವರ್ಷನು, ಇಲಾವೃತನು, ರಮ್ಯನು, ಹಿರಣ್ಮಯನು, ಕುರುವು, ಭದ್ರನು ಮತ್ತು ಕೇತುಮಂತನು –ಇವರು.

೬. ವಾನಪ್ರಸ್ಥಾಶ್ರಮಿಯಾಗಿ ವನಕ್ಕೆ ಹೋಗುವ ಆಗ್ನೀಧ್ರನು ಈ ಒಂಬತ್ತುಮಂದಿ ಮಕ್ಕಳಿಗೆ ಒಂಬತ್ತು ವರ್ಷಗಳನ್ನು ಹಂಚಿಕೊಟ್ಟನು. ಆಗ್ನೀಧ್ರನು ಇತ್ತುದು ಹಿಮವೆಂಬ ಹೆಸರಿನ ವರ್ಷವು. ಯಾವ ಈ ವರ್ಷಕ್ಕೆ ನಾಭಿಯೆಂಬವನು ಒಡೆಯನೋ, ಅವನಿಗೆ ಋಷಭನು ಮಗನಾದನು.

೭. ಋಷಭನಿಂದ ಭರತನು ಹುಟ್ಟಿದನು. ಈ ವರ್ಷವನ್ನು ಭರತನು ಬಹುಕಾಲ ರಕ್ಷಿಸಿದುದರಿಂದ ಇದು ಭಾರತವರ್ಷವೆಂದು ಹೆಸರುಗೊಂಡಿತು. ಇಲಾವೃತವರ್ಷದ ನಡುವೆ ಸುವರ್ಣಮಯವಾದ ಮೇರುಪರ್ವತವಿರುವುದು. ಅದರ ಎತ್ತರವು ಎಂಬತ್ತುನಾಲ್ಕುಸಾವಿರ ಯೋಜನಗಳು. ಭೂಮಿಯೊಳಗೆ ಕೆಳಭಾಗದಲ್ಲಿ ಹದಿನಾರುಸಾವಿರ ಯೋಜನಗಳು ಮುಳುಗಿದೆ. ಆದರ ಮೂಲಭಾಗವು ಇದಕ್ಕೆರಡರಷ್ಟು, ಎಂದರೆ ಮೂವತ್ತೆರಡು ಯೋಜನಗಳ ಅಗಲವುಳ್ಳದ್ದಾಗಿದೆ.

ತನ್ಮಧ್ಯೇ ಬ್ರಹ್ಮಣಃ ಪುರೀ । ಐಂದ್ರ್ಯಾಮಿಂದ್ರಸ್ಯ
ಚಾಮರಾವತೀ । ಆಗ್ನೇಯ್ಯಾಮಗ್ನೇಸ್ತೇಜೋವತೀ ।
ಯಾಮ್ಯಾಂ ಯಮಸ್ಯ ಸಂಯಮನೀ । ನೈಋರ್ತ್ಯಾಂ
ನಿಋರ್ತೇರ್ಭಯಂಕರೀ । ವಾರುಣ್ಯಾಂ ವರುಣಸ್ಯ
ವಿಶ್ವಾವತೀ । ವಾಯವ್ಯಾಂ ವಾಯೋರ್ಗಂಧವತೀ ।
ಉದೀಚ್ಯಾಂ ಸೋಮಸ್ಯ ವಿಭಾವರೀತಿ ನವವರ್ಷಾನ್ವಿತಂ
ಜಂಬೂದ್ವೀಪಂ ಪುಣ್ಯಪರ್ವತೈಃ ಪುಣ್ಯನದೀಭಿರನ್ವಿತಮ್ ॥ ೮ ॥

ಕಿಂಪುರುಷಾದೀನ್ಯಷ್ಟವರ್ಷಾಣಿ ಪುಣ್ಯವತಾಂ ಭೋಗಸ್ಥಾನಾನಿ
ಸಾಕ್ಷಾದ್ಭಾರತವರ್ಷಮೇಕಂ ಕರ್ಮಭೂಮಿಶ್ಚಾತುರ್ವರ್ಣ್ಯಯುತಂ ॥೯॥

---

೮. ಆ ಕನಕಮಯಮೇರುಪರ್ವತದ ನಡುವೆ ಚತುರ್ಮುಖ ಬ್ರಹ್ಮದೇವನ ಪಟ್ಟಣವಿರುವುದು. ಇದಕ್ಕೆ ಪೂರ್ವದಿಕ್ಕಿನಲ್ಲಿ ದೇವೇಂದ್ರನ ಅಮರಾವತಿಯೂ, ದಕ್ಷಿಣದಿಕ್ಕಿನಲ್ಲಿ ಯಮನ ಸಂಯಮನಿಯೂ, ನೈರುತ್ಯದಿಕ್ಕಿನಲ್ಲಿ ನಿಋತಿಯ ಭಯಂಕರಿಯೆಂಬ ಪಟ್ಟಣವೂ, ಪಶ್ಚಿಮದಿಕ್ಕಿನಲ್ಲಿ ವರುಣದೇವನ ವಿಶ್ವಾವತಿಯೆಂಬ ಪಟ್ಟಣವೂ, ವಾಯುವ್ಯದಿಕ್ಕಿನಲ್ಲಿ ವಾಯುದೇವನ ಗಂಧವತಿಯೆಂಬ ಪುರಿಯೂ, ಉತ್ತರದಿಕ್ಕಿನಲ್ಲಿ ಚಂದ್ರನ ವಿಭಾವರಿಯೆಂಬ ಪಟ್ಟಣವೂ ಇರುವುವು. ಈ ನಡುವೆ ಒಂಬತ್ತು ಭೂವರ್ಷಗಳಿಂದ ಕೂಡಿದ, ಪುಣ್ಯಪರ್ವತಗಳಿಂದಲೂ, ಪುಣ್ಯನದಿಗಳಿಂದಲೂ ಯುಕ್ತವಾದ ಜಂಬೂದ್ವೀಪವು ಇರುವುದು.

೯. ಕಿಂಪುರುಷವೇ ಮೊದಲಾದ ಎಂಟು ಭೂವರ್ಷಗಳು ಪುಣ್ಯವೆಸಗಿದವರಿಗೆ ಪುಣ್ಯಫಲವಾದ ಸೊಗವನುಣ್ಣುವೆಡೆಗಳು. ಭಾರತವರ್ಷವೊಂದೇ ಬ್ರಾಹ್ಮಣಾದಿ ಚತುರ್ವರ್ಣದವರಿಂದೊಡಗೂಡಿ ಸಾಕ್ಷಾತ್ಕರ್ಮಭೂಮಿಯಾಗಿರುವುದು.

ತತ್ರೈವ ಕರ್ಮಭಿಃ ಸ್ವರ್ಗಂ ಕೃತ್ಯೈಃ ಪ್ರಾಪ್ಸ್ಯಂತಿ ಮಾನವಾಃ ।
ಮುಕ್ತಿಶ್ಚಾತ್ರೈವ ನಿಷ್ಕಾಮ್ಯೈಃ ಪ್ರಾಪ್ಯತೇ ಜ್ಞಾನಕರ್ಮಭಿಃ ॥ ೧೦ ॥

ಅಧೋಗತಿಮಿತೋ ವಿಪ್ರ ಯಾಂತಿ ವೈ ಪಾಪಕಾರಿಣಃ ।
ಯೇ ಪಾಪಕಾರಿಣಸ್ತಾನ್ ವಿದ್ಧಿ ಪಾತಾಲತಲೇ ನರಕೇ
ಕೋಟಿಸಮನ್ವಿತಾನ್ ॥ ೧೧ ॥

ಅಥ ಸಪ್ತ ಕುಲಪರ್ವತಾಃ ಕಥ್ಯಂತೇ । ಮಾಹೇಂದ್ರಃ,
ಮಲಯಃ, ಶುಕ್ತಿಮಾನ್, ಋಶ್ಯಮೂಕಃ, ಸಹ್ಯಪರ್ವತಃ,
ವಿಂಧ್ಯಃ, ಪಾರಿಯಾತ್ರಃ । ಇತ್ಯೇತೇ ಭಾರತೇ ಕುಲಪರ್ವತಾಃ ॥ ೧೨ ॥

---

೧೦. ಆ ಭಾರತವರ್ಷದಲ್ಲಿಯೇ ಮಾನವರು ತಾವು ಅನುಷ್ಠಿಸಿದ ಕರ್ಮಗಳಿಂದ ಸ್ವರ್ಗವನ್ನು ಹೊಂದುವರು. ಅಲ್ಲದೆ ಅಲ್ಲಿಯೇ ಅನುಷ್ಠಿಸಿದ ಫಲಾಪೇಕ್ಷಾರಹಿತವಾದ ಜ್ಞಾನಪೂರ್ವಕವಾದ ಕರ್ಮಗಳಿಂದ ಮುಕ್ತಿಯು ಹೊಂದಲ್ಪಡುತ್ತದೆ.

೧೧. ಎಲೈ ಬ್ರಾಹ್ಮಣನಾದ ಭರದ್ವಾಜನೇ ! ಕೇಳು; ಪಾಪಕರ್ಮವನ್ನೆಸಗಿದವರು ಇಲ್ಲಿಂದಲೇ ನರಕಾದಿಯಾದ ಅಧೋಗತಿಯನ್ನು ಹೊಂದುತ್ತಾರೆ. ಯಾರು ಪಾಪಕರ್ಮವನ್ನಾಚರಿಸುತ್ತಾರೋ, ಅವರನ್ನು ಕೋಟಿ ಸಂಖ್ಯೆಯಿಂದ ಕೂಡಿ ಪಾತಾಳಲೋಕದ ತಳಗಿರುವ ನರಕದಲ್ಲಿರುವವರನ್ನಾಗಿ ತಿಳಿ.

೧೨. ಇನ್ನು ಏಳು ಕುಲಪರ್ವತಗಳು ಹೇಳಲ್ಪಡುತ್ತವೆ. ಮಾಹೇಂದ್ರ, ಮಲಯ, ಶುಕ್ತಿಮಂತ, ಋಶ್ಯಮೂಕ, ಸಹ್ಯ, ವಿಂಧ್ಯ, ಪಾರಿಯಾತ್ರ–ಇಂತಿವು ಭಾರತವರ್ಷದಲ್ಲಿ ಕುಲಪರ್ವತಗಳು.

ನರ್ಮದಾ, ಸುರಸಾ, ಋಷಿಕುಲ್ಯಾ, ಭೀಮರಥೀ, ಕೃಷ್ಣವೇಣೀ,
ಚಂದ್ರಭಾಗಾ, ತಾಮ್ರಪರ್ಣೀ ಇತ್ಯೇತಾಃ ಸಪ್ತ ನದ್ಯಃ
ಗಂಗಾಯಮುನಾ ಗೋದಾವರೀ ತುಂಗಭದ್ರಾ ಕಾವೇರೀ
ಸರಯೂರಿತ್ಯೇತಾ ಮಹಾನದ್ಯಃ ಪಾಪಘ್ನ್ಯಃ ॥ ೧೩ ॥

ಜಂಬುನಾಮ್ನಾ ಚ ವಿಖ್ಯಾತಂ ಜಂಬುದ್ವೀಪಮಿದಂ ಶುಭಮ್ ।
ಲಕ್ಷಯೋಜನವಿಸ್ತೀರ್ಣಮಿದಂ ಶ್ರೇಷ್ಠಂ ತು ಭಾರತಮ್ ॥ ೧೪ ॥

ಅಕ್ಷದ್ವೀಪಾದಿ ಪುಣ್ಯಾ ಜನಪದಾಃ ನಿಷ್ಕಾಮಾ ಯೇ
ಸ್ವಧರ್ಮೇಣ ನರಸಿಂಹಂ ಯಜಂತಿ ತೇ ತತ್ರ ನಿವಸಂತಿ
ಅಧಿಕಾರಕ್ಷಯಾತ್ ಮುಕ್ತಿಂ ಚ ಪ್ರಾಪ್ನುವಂತಿ ॥ ೧೫ ॥

---

೧೩. ನರ್ಮದೆ, ಸುರಸ, ಋಷಿಕುಲ್ಯೆ, ಭೀಮರಥೀ, ಕೃಷ್ಣವೇಣೀ, ಚಂದ್ರಭಾಗಾ, ತಾಮ್ರಪರ್ಣೀ,-ಇಂತೀ ಏಳು ನದಿಗಳೂ, ಗಂಗೆ, ಯಮುನೆ, ಗೋದಾವರೀ, ತುಂಗಭದ್ರೆ, ಕಾವೇರಿ, ಸರಯೂ ಇಂತೀ ಮಹಾನದಿಗಳೂ ತನ್ನಲ್ಲಿ ಮಿಂದವರ ಪಾಪಗಳನ್ನು ನಾಶಮಾಡತಕ್ಕುವು.

೧೪. ಜಂಬುವೆಂಬ ಹೆಸರಿನಿಂದ ಪ್ರಸಿದ್ಧವಾದ ಈ ಜಂಬೂದ್ವೀಪವು ಮಂಗಳಮಯವಾದುದು. ಒಂದು ಲಕ್ಷಗಾವುದ ವಿಸ್ತೀರ್ಣವುಳ್ಳದ್ದು. ಅದರಲ್ಲಿ ಈ ಭಾರತ ವರ್ಷವು ಶ್ರೇಷ್ಠವಾದುದು.

೧೫. ಅಕ್ಷದ್ವೀಪವೇ ಮೊದಲಾದ ಪುಣ್ಯ ದೇಶಗಳು ಇರುವುವು. ಯಾರು ಕರ್ಮಫಲಾಪೇಕ್ಷೆಯಿಲ್ಲದೆ ಸ್ವಧರ್ಮದಿಂದ ಶ್ರೀನರಸಿಂಹಸ್ವಾಮಿಯನ್ನು ಪೂಜಿಸುತ್ತಾರೆಯೋ, ಅವರು ಅಲ್ಲಿ ವಾಸಿಸುತ್ತಾರೆ. ಆವರು ಪ್ರಾರಬ್ಧಭೋಗರೂಪವಾದ ಅಧಿಕಾರವು ಸವೆದಮೇಲೆ ಮುಕ್ತಿಯನ್ನೂ ಹೊಂದುವರು.

ಜಂಬ್ವಾದ್ಯಾ ಸ್ವಾದೂದಕಾಂತಾಃ ಸಪ್ತ ಪಯೋಧಯಃ ।
ತತಃ ಪರಾ ಹಿರಣ್ಮಯಾ ಭೂಮಿಃ । ತತೋ
ಲೋಕಾಲೋಕಪರ್ವತಃ । ಏಷ ಭೂರ್ಲೋಕಃ
ಅಸ್ಯೋಪರಿ ಅಂತರಿಕ್ಷಲೋಕಃ । ಖೇಚರಾಣಾಂ
ರಮ್ಯಸ್ತದೂರ್ಧ್ವಂ ಸ್ವರ್ಗಲೋಕಃ ॥ ೧೬ ॥

ಸ್ವರ್ಗಸ್ಥಾನಂ ಮಹಾಪುಣ್ಯಂ ಪ್ರೋಚ್ಯಮಾನಂ ನಿಬೋಧ ಮೇ ।
ಭಾರತೇ ಕೃತಪುಣ್ಯಾನಾಂ ದೇವಾನಾಮಪಿ ಚಾಲಯಮ್ ॥ ೧೭ ॥

ಮಧ್ಯೇ ಪೃಥಿವ್ಯಾಮದ್ರೀಂದ್ರೋ ಭಾಸ್ವಾನ್ಮೇರುರ್ಹಿರಣ್ಮಯಃ ।
ಯೋಜನಾನಾಂ ಸಹಸ್ರಾಣಿ ಚತುರಾಶೀತಿಮುಚ್ಛ್ರಿತಃ ॥ ೧೮ ॥

---

೧೬. ಜಂಬುವೇ ಮೊದಲಾಗಿ ಸ್ವಾದೂದಕವೇ ಕೊನೆಯಾದ ಏಳು ಸಮುದ್ರಗಳಿವೆ. ಅಲ್ಲಿಂದ ಆಚೆ ಸುವರ್ಣಮಯವಾದ ಭೂಮಿಯು ; ಅಲ್ಲಿಂದಾಚೆಗೆ ಲೋಕಾಲೋಕ ಪರ್ವತವಿರುವುದು. ಇದು ಭೂಲೋಕವು. ಇದರಮೇಲೆ ಅಂತರಿಕ್ಷ ಲೋಕವೂ, ಅದರಿಂದ ಮೇಲೆ ಖೇಚರರ ಮನೋಹರವಾದ ಸ್ವರ್ಗಲೋಕವೂ ಇರುವುವು.

೧೭. ಭರದ್ವಾಜನೇ! ಸ್ವರ್ಗಸ್ಥಾನವು ಅತ್ಯಂತ ಪುಣ್ಯಮಯವಾದುದೆಂದು ನಾನು ಹೇಳುವುದನ್ನು ಅರಿಯುವವನಾಗು. ಇದು ಭಾರತವರ್ಷದಲ್ಲಿ ಪುಣ್ಯಕರ್ಮ ವನ್ನೆಸಗಿದವರಿಗೂ, ದೇವತೆಗಳಿಗೂ ವಾಸಸ್ಥಾನವು.

೧೮. ಪೊಡವಿಯ ನಡುವೆ ಕಾಂತಿಯುಕ್ತವಾದ, ಚಿನ್ನದಿಂದಾದ ಮೇರು ಪರ್ವತೋತ್ತಮವಿರುವುದು, ಇದು ಎಂಭತ್ತುನಾಲ್ಕುಸಾವಿರ ಯೋಜನಗಳಷ್ಟು ಎತ್ತರವಾಗಿರುವುದು.

ಪ್ರವಿಷ್ಟಃ ಷೋಡಶಾಧಸ್ತಾದ್ಧರಣ್ಯಾಂ ಧರಣೀಧರಃ ।
ತಾವತ್ಪ್ರಮಾಣಾ ಪೃಥಿವೀ ಪೂರ್ವತಶ್ಚ ಸಮಂತತಃ ॥ ೧೯ ॥

ತಸ್ಯ ಶೃಂಗತ್ರಯಂ ಮೂರ್ಧ್ನಿ ಸ್ವರ್ಗೋ ಯತ್ರ ಪ್ರತಿಷ್ಠಿತಃ ।
ನಾನಾದ್ರುಮಲತಾಕೀರ್ಣಂ ನಾನಾಪುಷ್ಪೋಪಶೋಭಿತಮ್ ॥ ೨೦ ॥

ಮಧ್ಯಮಂ ಪಶ್ಚಿಮಂ ಪೂರ್ವಂ ಮೇರೋಃ ಶೃಂಗಾಣಿ ತ್ರೀಣಿ ವೈ ।
ಮಧ್ಯಮಂ ಸ್ಫಾಟಿಕಂ ಶೃಂಗಂ ವೈಡೂರ್ಯಂ ಮಣಿಕಾಮಯಮ್ ॥ ೨೧ ॥

ಇಂದ್ರನೀಲಮಯಂ ಪೂರ್ವಂ ಮಾಣಿಕ್ಯಂ ಪಶ್ಚಿಮಂ ಸ್ಮೃತಮ್ ।
ಯೋಜನಾನಾಂ ಸಹಸ್ರಾಣಿ ನಿಯುತಾನಿ ಚತುರ್ದಶ ॥ ೨೨ ॥

ಉಚ್ಛ್ರಿತಂ ಮಧ್ಯಮಂ ಶೃಂಗಂ ಸ್ವರ್ಗೋ ಯತ್ರ ತ್ರಿವಿಷ್ಟಪಃ ॥ ೨೩ ॥

---

೧೯. ಈ ಭೂಧರವು ಭೂಮಿಯೊಳಗೆ ಹದಿನಾರುಸಾವಿರ ಯೋಜನಗಳಷ್ಟು ಹೋಗಿರುವುದು. ಅಷ್ಟೇ ಪ್ರಮಾಣದ ಪೊಡವಿಯು ಪೂರ್ವದಿಕ್ಕಿನಲ್ಲಿಯೂ ಸುತ್ತಲೂ ಇರುವುದು.

೨೦. ಆ ಮೇರುವಿನ ಮೇಲೆ ಅನೇಕತೆರನಾದ ಮರಬಳ್ಳಿಗಳಿಂದ ಹರಡಿದ, ಅನೇಕ ಬಗೆಯಾದ ಹೂಗಳಿಂದ ಅಂದಗಳಾದ ಮೂರು ಶಿಖರಗಳಿವೆ ಯಾವ ಈ ಶಿಖರಗಳ ಮೇಲೆ ಸ್ವರ್ಗವು ಸ್ಥಾಪಿತವಾಗಿದೆ.

೨೧. ಈ ಮೂರು ಶಿಖರಗಳೂ ಮಧ್ಯದಲ್ಲಿ ಒಂದು, ಪಶ್ಚಿಮದಿಕ್ಕಿನಲ್ಲಿ ಒಂದು ಪೂರ್ವದಿಕ್ಕಿನಲ್ಲಿ ಒಂದು—ಈ ರೀತಿಯಾಗಿರುತ್ತವೆ ಇವುಗಳಲ್ಲಿ ನಡುವಣ ಶಿಖರವು ಸ್ಫಟಿಕ ಮತ್ತು ವೈಡೂರ್ಯ ಈ ರತ್ನಮಯವಾಗಿರುತ್ತದೆ.

೨೨-೨೩. ಪೂರ್ವದ ಶಿಖರವು ಇಂದ್ರನೀಲರತ್ನಮಯವಾಗಿಯೂ, ಪಶ್ಚಿಮದ ಶಿಖರವು ಮಾಣಿಕ್ಯಮಯವಾಗಿಯೂ ಇರುವುದೆಂದು ಪ್ರಸಿದ್ಧವಾಗಿದೆ. ನಡುವಣ ಶಿಖರವು ಹದಿನಾಲ್ಕುಸಾವಿರ ಯೋಜನಗಳ ಎತ್ತರವುಳ್ಳದ್ದು. ಯಾವ ಈ ಶಿಖರದಲ್ಲಿ ಮೂರನೆಯ ಲೋಕವಾದ ಸ್ವರ್ಗವಿರುವುದು.

ಅಪ್ರಭಾಂತರಿತಂ ಶೃಂಗಂ ಮೂರ್ಧ್ನಿ ಛತ್ರಾಕೃತಿ ಸ್ಥಿತಮ್ ।
ಪೂರ್ವಮುತ್ತರ ಶೃಂಗಾಣಾಂ ಅಂತರಂ ಮಧ್ಯಮಸ್ಯ ಚ ।
ತ್ರಿವಿಷ್ಟಪೋ ನಾಕಪೃಷ್ಠೇ ಹ್ಯಪ್ಸರಾಃ ಸಂತಿ ನಿರ್ವೃತಾಃ ॥ ೨೪ ॥

ಆನಂದೋಽಥ ಪ್ರಮೋದಶ್ಚ ಸ್ವರ್ಗಶೃಂಗೇ ತು ಮಧ್ಯಮೇ ।
ಶ್ವೇತಶ್ಚ ಪೌಷ್ಟಿಕಶ್ಚೈವ ಉಪಶೋಭನಮನ್ಮಥೌ ॥ ೨೫ ॥

ಆಹ್ಲಾದಃ ಸ್ವರ್ಗರಾಜಾ ವೈ ಸ್ವರ್ಗಶೃಂಗೇ ತು ಪಶ್ಚಿಮೇ ।
ನಿರ್ಮಮೋ ನಿರಹಂಕಾರಃ ಸೌಭಾಗ್ಯಶ್ಚಾತಿನಿರ್ಮಲಃ ॥ ೨೬ ॥

ಸ್ವರ್ಗಾಶ್ಚೈವ ದ್ವಿಜಶ್ರೇಷ್ಠ ಪೂರ್ವಶೃಂಗೇ ಸಮಾಸ್ಥಿತಾಃ ।
ಏಕವಿಂಶತಿ ಸ್ವರ್ಗಾ ವೈ ನಿವಿಷ್ಟಾ ಮೇರುಮೂರ್ಧನಿ ॥ ೨೭ ॥

---

೨೪. ಪೂರ್ವದ ಶಿಖರವು ಕತ್ತಲೆಯಿಂದ ಮರೆಮಾಡಲ್ಪಟ್ಟಿದೆ. ಮೇಲು ಭಾಗದಲ್ಲಿ ಸತ್ತಿಗೆಯ ಆಕಾರದಿಂದಿರುವುದು. ಪೂರ್ವೋತ್ತರ ಮಧ್ಯಮ ಶೃಂಗಗಳ ನಡುವೆ ಮೂರನೆಯ ಲೋಕವಾದ ಸ್ವರ್ಗವಿರುವುದು. ಈ ಸ್ವರ್ಗದ ಹಿಂಭಾಗದಲ್ಲಿ ಅಪ್ಸರಸರು ಸುಖದಿಂದ ವಾಸಮಾಡುತ್ತಾರೆ.

೨೫. ಮಧ್ಯದ ಸ್ವರ್ಗಶೃಂಗದಲ್ಲಿ ಆನಂದ, ಪ್ರಮೋದ,. ಶ್ವೇತ, ಪೌಷ್ಟಿಕ ಉಪಶೋಭನ, ಮನ್ಮಥಗಳು ಇರುವುವು.

೨೬. ಪಶ್ಚಿಮದ ಸ್ವರ್ಗಶೃಂಗದಲ್ಲಿ ಆಹ್ಲಾದ ಸ್ವರ್ಗರಾಜಗಳಲ್ಲದೆ ಇಲ್ಲಿಯೇ ನಿರ್ಮಲ, ನಿರಹಂಕಾರ, ಸೌಭಾಗ್ಯ ಮತ್ತು ನಿರ್ಮಲಗಳೆಂಬ ಸ್ವರ್ಗಭಾಗಗಳೂ ಇವೆ.

೨೭. ಎಲೈ ಬ್ರಾಹ್ಮಣೋತ್ತಮನಾದ ಭರದ್ವಾಜನೇ! ಕೇಳು; ಪೂರ್ವ ದಿಕ್ಕಿನ ಶಿಖರದಲ್ಲಿಯೂ ಅನೇಕ ಸ್ವರ್ಗಭಾಗಗಳಿರುವುವು. ಇಂತು ಮೇರುಪರ್ವತದ ಶಿಖರಗಳಲ್ಲಿ ಇಪ್ಪತ್ತೊಂದು ಸ್ವರ್ಗಗಳಿವೆ.

ಅಹಿಂಸಾದಾನಕರ್ತಾರೋ ಯಜ್ಞಾನಾಂ ತಪಸಾಂ ತಥಾ ।
ತತ್ರೇಷು ನಿವಸಂತಿ ಸ್ಮ ಜನಾಃ ಕ್ರೋಧವಿವರ್ಜಿತಾಃ ॥ ೨೮ ॥

ಜಲಪ್ರವೇಶೇ ಚಾನಂದಂ ಪ್ರಮೋದಂ ವಹ್ನಿಸಾಹಸೇ ।
ಭೃಗುಪ್ರಪಾತೇ ಸೌಖ್ಯಂ ಚ ರಣಂ ಚೈವಾಸ್ಯ ನಿರ್ಮಲಮ್ ॥ ೨೯ ॥

ಅನಾಶಕೇ ತು ಸಂನ್ಯಾಸೇ ಮೃತೋ ಗಚ್ಛೇತ್ರಿವಿಷ್ಟಪಮ್ ।
ಕ್ರತುಯಾಜೀ ನಾಕಪೃಷ್ಟಂ ಅಗ್ನಿಹೋತ್ರೀ ಚ ನಿರ್ವೃತಿಮ್ ॥ ೩೦ ॥

ತಟಾಕಕೂಪಕರ್ತಾ ಚ ಲಭತೇ ಪೌಷ್ಟಿಕಂ ದ್ವಿಜ ।
ಸವರ್ಣದಾಯೀ ಸೌಭಾಗ್ಯಂ ಲಭನ್ ಸ್ವರ್ಗಂ ತಪಃಫಲಮ್ ॥ ೩೧ ॥

---

೨೮. ಅಹಿಂಸಾದಾನಗಳನ್ನೆಸಗತಕ್ಕವರೂ, ಹಾಗೆಯೇ ಜನ್ನತಪಗಳನ್ನು ಅನುಷ್ಠಿಸುವವರೂ ಆದ ಜನರು ಮುಳಿಸಿಲ್ಲದವರಾಗಿ ಆಯಾ ಸ್ವರ್ಗಲೋಕಗಳಲ್ಲಿ ವಾಸಿಸುವರು.

೨೯-೩೦. ಜಲಪ್ರವೇಶದಲ್ಲಿ ಆನಂದವಿರುವಂತೆಯೂ, ಭೃಗುಪತನದಲ್ಲಿ ಸೌಖ್ಯವಿರುವಂತೆಯೂ, ಪವಿತ್ರವಾದ, ಸ್ವಧರ್ಮವಾದ, ದುಷ್ಟನಿಗ್ರಹರೂಪವಾದ ಯುದ್ಧದಲ್ಲಿಯೂ, ನಾಶಕವಲ್ಲದ ಸಂನ್ಯಾಸದಲ್ಲಿಯೂ ಮರಣವನ್ನು ಹೊಂದಿದವರು ಮೂರನೆಯ ಲೋಕವಾದ ಈ ಸ್ವರ್ಗಕ್ಕೆ ಹೋಗುವರು. ಯಜ್ಞವನ್ನನುಷ್ಠಿಸಿದವನೂ, ಅಗ್ನಿಹೋತ್ರಿಯೂ ಸುಖಮಯವಾದ ಸ್ವರ್ಗದ ಹಿಂಬಾಗವನ್ನೂ ಹೊಂದುವರು.

೩೧. ಎಲೈ ಬ್ರಾಹ್ಮಣನೇ! ಕೆರೆ ಬಾವಿಗಳನ್ನು ತೋಡಿಸಿದವನು ಪೌಷ್ಟಿಕ ಸ್ವರ್ಗವನ್ನೈದುವವನು. ಮಿಸುನಿಯನ್ನು ದಾನಮಾಡಿದವನು ತನ್ನ ತಪಸ್ಸಿಗೆ ಫಲವಾಗಿ ಸೌಭಾಗ್ಯವೆಂಬ ಸ್ವರ್ಗವನ್ನು ಹೊಂದುವನು.

ಶೀತಕಾಲೇ ಮಹಾವಹ್ನಿಂ ಪ್ರಜ್ವಾಲಯತಿ ಯೋ ನರಃ ।
ಸರ್ವಸತ್ತ್ವಹಿತಾರ್ಥಾಯ ಸ್ವರ್ಗಂ ಸೋಽಪ್ಸರಸಂ ಲಭೇತ್ ॥ ೩೨ ॥

ಹಿರಣ್ಯಗೋಪ್ರದಾನೇ ಹಿ ನಿರಹಂಕಾರಮಾಪ್ನುಯಾತ್ ।
ಭೂಮಿದಾನೇನ ಶುದ್ಧೇನ ಲಭತೇ ಶಾಂತಿಕಂ ಪದಮ್ ॥ ೩೩ ॥

ರೌಪ್ಯದಾನೇನ ಸ್ವರ್ಗಂ ತು ನಿರ್ಮಲಂ ಲಭತೇ ನರಃ ।
ಅಶ್ವದಾನೇನ ಪುಣ್ಯಾಹಂ ಕನ್ಯಾದಾನೇನ ಮಂಗಲಮ್ ॥ ೩೪ ॥

ದ್ವಿಜೇಭ್ಯಸ್ತರ್ಪಣಂ ಕೃತ್ವಾ ದತ್ತ್ವಾ ವಸ್ತ್ರಾಣಿ ಭಕ್ತಿತಃ ।
ಶ್ವೇತಂ ತು ಲಭತೇ ಸ್ವರ್ಗಂ ಯತ್ರ ಗತ್ವಾ ನ ಶೋಚತೇ ॥ ೩೫ ॥

---

೩೨. ಯಾವ ಮಾನವನು ಶೀತಕಾಲದಲ್ಲಿ ಸರ್ವಪ್ರಾಣಿಗಳಿಗೂ ಹಿತವನ್ನು ಉಂಟುಮಾಡುವ ಸಲುವಾಗಿ ಮಹಾವಹ್ನಿಯನ್ನುರಿಸುವನೋ, ಅವನು ಅಪ್ಸರವೆಂಬ ಸ್ವರ್ಗವನ್ನು ಹೊಂದುವನು.

೩೩. ಹಿರಣ್ಯದಾನಗೋದಾನಗಳನ್ನೆಸಗಿದಲ್ಲಿ ನಿರಹಂಕಾರವೆಂಬ ಸ್ವರ್ಗವನ್ನು ಹೊಂದುವನು. ಶುದ್ಧವಾದ ಮನದಿಂದ ಭೂಮಿಯನ್ನು ದಾನಮಾಡುವುದರಿಂದ ಶಾಂತಿಕವೆಂಬ ಸ್ವರ್ಗಸ್ಥಾನವನ್ನು ಹೊಂದುವನು.

೩೪. ಮಾನವನು ಬೆಳ್ಳಿಯನ್ನು ದಾನಮಾಡುವುದರಿಂದ ನಿರ್ಮಲವೆಂಬ ಸ್ವರ್ಗವನ್ನು ಹೊಂದುತ್ತಾನೆ; ಕುದುರೆಯನ್ನು ದಾನಮಾಡುವುದರಿಂದ ಪುಣ್ಯಾಹ ಸ್ವರ್ಗವನ್ನೂ, ಕನ್ನೆಯರನ್ನು ದಾನಮಾಡುವುದರಿಂದ ಮಂಗಲವೆಂಬ ಸ್ವರ್ಗವನ್ನೂ ಹೊಂದುತ್ತಾನೆ.

೩೫. ಬ್ರಾಹ್ಮಣರಿಗೆ ಭಕ್ತಿಯಿಂದ ತರ್ಪಣವನ್ನಿತ್ತು, ವಸ್ತ್ರದಾನ ಮಾಡುವುದರಿಂದ ಶ್ವೇತವೆಂಬ ಸ್ವರ್ಗವನ್ನು ಹೊಂದುತ್ತಾನೆ. ಯಾವ ಈ ಶ್ವೇತಸ್ವರ್ಗವನ್ನು ಹೊಂದಿ ದುಃಖಪಡುವುದಿಲ್ಲ.

ಕಪಿಲಾಗೋಪ್ರದಾನೇನ ಪರಮಾರ್ಥೇ ಮಹೀಯತೇ ।
ಗೋವೃಷಸ್ಯ ಪ್ರದಾನೇನ ಸ್ವರ್ಗಂ ಮನ್ಮಥಮಾಪ್ನುಯಾತ್ ॥ ೩೬ ॥

ಮಾಘಮಾಸೇ ಸರಿತ್ಸ್ನಾಯೀ ತಿಲಧೇನುಪ್ರದಸ್ತಥಾ ।
ಛತ್ರೋಪಾನಹ ದಾತಾ ಚ ಸ್ವರ್ಗಂ ಯಾತ್ಯುಪಶೋಭನಮ್ ॥ ೩೭ ॥

ದೇವತಾಯತನಂ ಕೃತ್ವಾ ದ್ವಿಜ ಶುಶ್ರೂಷಕಸ್ತಥಾ ।
ತೀರ್ಥಯಾತ್ರಾಪರಶ್ಚೈವ ಸ್ವರ್ಗರಾಜೇ ಮಹೀಯತೇ ॥ ೩೮ ॥

ಏಕಾನ್ನಭೋಜೀ ಯೋ ಮರ್ತ್ಯೋ ನಕ್ತಭೋಜೀ ಚ ನಿತ್ಯಶಃ ।
ಉಪವಾಸೀ ತ್ರಿರಾತ್ರಾದ್ಯೈಃ ಶಾಂತಃ ಸ್ವರ್ಗಂ ಶುಭಂ ಲಭೇತ್ ॥ ೩೯ ॥

---

೩೬. ಕಪಿಲವರ್ಣದ ಹಸುವನ್ನು ದಾನಮಾಡುವುದರಿಂದ ಪರಮಾರ್ಥವೆಂಬ ಸ್ವರ್ಗದಲ್ಲಿ ಪೂಜಿತನಾಗುತ್ತಾನೆ. ಗೋವೃಷವನ್ನು (ಗೂಳಿಯನ್ನು) ದಾನಮಾಡುವುದರಿಂದ ಮನ್ಮಥವೆಂಬ ಸ್ವರ್ಗವನ್ನು ಹೊಂದುವನು.

೩೭. ಮಾಘಮಾಸದಲ್ಲಿ ನದಿಯಲ್ಲಿ ಸ್ನಾನಮಾಡುವವನು, ಎಳ್ಳು, ಹಸುಗಳನ್ನು ದಾನಮಾಡುವವನು—ಹಾಗೆಯೇ ಸತ್ತಿಗೆ, ಕಾಲ್ಮರಿ-ಇವುಗಳನ್ನು ದಾನಮಾಡುವುವನು—ಇವರು ಉಪಶೋಭನನೆಂಬ ಸ್ವರ್ಗವನ್ನೈದವರು.

೩೮. ದೇವಾಲಯವನ್ನು ಕಟ್ಟಿಸಿ ಬ್ರಾಹ್ಮಣರ ಸೇವೆಯನ್ನೆಸಗುವವನೂ, ತೀರ್ಥಯಾತ್ರೆಮಾಡುವವನೂ, ಸ್ವರ್ಗರಾಜವೆಂಬ ಸ್ವರ್ಗ ಭಾಗದಲ್ಲಿ ಮಾನ್ಯನಾಗುತ್ತಾನೆ.

೩೯. ಒಪ್ಪತ್ತು ಮಾತ್ರ ಊಟಮಾಡುವವನಾವ ಮಾನವನೋ, ಅವನೂ, ನಿತ್ಯದಲ್ಲಿಯೂ ರಾತ್ರಿ ಮಾತ್ರ ಊಟಮಾಡುವವನೂ, ತ್ರಿರಾತ್ರವೇ ಮೊದಲಾದ ಉಪವಾಸವ್ರತವನ್ನು ಮಾಡುವವನೂ ಶುಭವಾದ ಶಾಂತವೆಂಬ ಸ್ವರ್ಗವನ್ನು ಹೊಂದುವನು.

ಸನಿತ್ಸ್ನಾಯಿನಾ ಜಿತಕ್ರೋಧೋ ಬ್ರಹ್ಮಚಾರೀ ದೃಢವ್ರತಃ ।
ನಿರ್ಮಲಂ ಸ್ವರ್ಗಮಾಪ್ನೋತಿ ಯಥಾ ಭೂತಹಿತೇ ರತಃ ॥ ೪೦ ॥

ವಿದ್ಯಾದಾನೇನ ಮೇಧಾವೀ ನಿರಹಂಕಾರಮಾಪ್ನುಯಾತ್ ।
ಯೇನ ಯೇನ ಹಿ ಭಾವೇನ ಯದ್ಯದ್ದಾನಂ ಪ್ರಯಚ್ಛತಿ ॥ ೪೧ ॥

ತತ್ತತ್ಸ್ವರ್ಗಮವಾಪ್ನೋತಿ ಯದ್ಯದಿಚ್ಛತಿ ಮಾನವಃ ।
ಚತ್ವಾರಿ ಅತಿದಾನಾನಿ ಕನ್ಯಾ ಗೌರ್ಭೂಃ ಸರಸ್ವತೀ ॥ ೪೨ ॥

ನರಕಾದುದ್ಧರಂತ್ಯೇತೇ ಜಪವಾಹನದೋಹನಾತ್ ।
ಯಸ್ತು ಸರ್ವಾಣಿ ದಾನಾನಿ ಬ್ರಾಹ್ಮಣೇಭ್ಯಃ ಪ್ರಯಚ್ಛತಿ ॥ ೪೩ ॥

ಸಂಪ್ರಾಪ್ಯ ನ ನಿವರ್ತೇತ ಸ್ವರ್ಗಂ ಶಾಂತಮನಾಮಯಮ್ ।
ಶೃಂಗೇ ತು ಪಶ್ಚಿಮೇ ಯತ್ರ ಬ್ರಹ್ಮಾ ತತ್ರ ಸ್ಥಿತಃ ಸ್ವಯಮ್ ॥ ೪೪ ॥

---

೪೦. ನಿತ್ಯವೂ ನದಿಯಲ್ಲಿ ಮೀಯುವವನೂ, ಮುಳಿಸನ್ನು ಗೆದ್ದವನೂ, ದೃಢವಾದ ನಿಯಮವುಳ್ಳ ಬ್ರಹ್ಮಚಾರಿಯೂ, ಪ್ರಾಣಿಗಳಿಗೆ ಹಿತವಾಗುವುದರಲ್ಲಿ ತೊಡಗಿದವನೂ ನಿರ್ಮಲವೆಂಬ ಸ್ವರ್ಗಭಾಗವನ್ನು ಹೊಂದುವನು.

೪೧-೪೨ ಮೇಧಾವಿಯಾದವನು ವಿದ್ಯೆಯನ್ನು ದಾನಮಾಡುವುದರಿಂದ ನಿರಹಂಕಾರವೆಂಬ ಸ್ವರ್ಗವನ್ನು ಹೊಂದುವನು. ಮಾನವನು ಯಾವ ಯಾವ ಅಭಿಪ್ರಾಯದಿಂದ ಯಾವ ಯಾವ ದಾನವನ್ನು ಕೊಡುತ್ತಾನೆಯೋ ಮತ್ತು ಯಾವ [illegible]ವುದನ್ನೇ [illegible]ಸುತ್ತಾನೆಯೋ ಆಯಾ ಸ್ವರ್ಗವನ್ನು ಹೊಂದುತ್ತಾನೆ. ಕನ್ಯೆ, ಗೋ, ಭೂ, ವಿದ್ಯಾ ಇವುಗಳ ದಾನಗಳು ನಾಲ್ಕು ಮಹಾದಾನಗಳೆಂದು ಪ್ರಸಿದ್ಧವಾಗಿವೆ

೪೩-೪೪. ಇವು ಜಪವಾಹನದೋಹನವೆಂಬ ನರಕದಿಂದ ಉದ್ಧರಿಸುತ್ತವೆ. ಯಾವ ಮಾನವನು ಎಲ್ಲ ದಾನಗಳನ್ನೂ ಬ್ರಾಹ್ಮಣರಿಗೆ ಕೊಡುತ್ತಾನೆಯೋ, ಅವನು ರೋಗಾದ್ಯುಪದ್ರವವಿಲ್ಲದ, ಶಾಂತವೆಂಬ ಸ್ವರ್ಗವನ್ನು ಹೊಂದಿ, ಅಲ್ಲಿಂದ ಹಿಂದಿರುಗುವುದಿಲ್ಲವು. ಪಶ್ಚಿಮದ ಶಿಖರದಲ್ಲಿ ಬ್ರಹ್ಮನು ತಾನೇ ಅಲ್ಲಿರುತ್ತಾನೆ.

ಪೂರ್ವಶೃಂಗೇ ಸ್ವಯಂ ವಿಷ್ಣುಃ ಮಧ್ಯೇ ಚೈವ ಶಿವಃ ಸ್ಥಿತಃ ।
ಅತಃ ಪರಂ ತು ವಿಪ್ರೇಂದ್ರ ಸ್ವರ್ಗಾಧ್ವಾನಮಿಮಂ ಶೃಣು ॥ ೪೫ ॥

ವಿಮಲಂ ವಿಪುಲಂ ಶುದ್ಧಮುಪರ್ಯುಪರಿ ಸಂಸ್ಥಿತಃ ।
ಪ್ರಥಮೇ ತು ಕುಮಾರಸ್ತು ದ್ವಿತೀಯೇ ಮಾತರಃ ಸ್ಥಿತಾಃ ॥ ೪೬ ॥

ತೃತೀಯೇ ಸಿದ್ಧಗಂಧರ್ವಾಃ ತುರ್ಯೇ ವಿದ್ಯಾಧರಾ ದ್ವಿಜ ।
ಪಂಚಮೇ ನಾಗರಾಜಶ್ಚ ಷಷ್ಠೇ ತು ವಿನತಾಸುತಃ ॥ ೪೭ ॥

ಸಪ್ತಮೇ ದಿವ್ಯಪಿತರೋ ಧರ್ಮರಾಜಸ್ತಥಾಷ್ಟಮೇ ।
ನವಮೇ ತು ತಥಾ ದಕ್ಷ ಆದಿತ್ಯೋ ದಶಮೇ ಪಥಿ ॥ ೪೮ ॥

---

೪೫. ಪೂರ್ವದ ಶಿಖರದಲ್ಲಿ ವಿಷ್ಣುವು ತಾನೇ ಇರುತ್ತಾನೆ. ಮಧ್ಯದ ಶಿಖರದಲ್ಲಿ ಶಿವನು ಇರುತ್ತಾನೆ. ಇನ್ನು ಮುಂದೆ ಎಲೈ ಬ್ರಾಹ್ಮಣ ಶ್ರೇಷ್ಠನೇ! ಸ್ವರ್ಗದ ಮಾರ್ಗವನ್ನು ಅರುಹುವೆನು; ಕೇಳು.

೪೬. ವಿಮಲವು, ವಿಪುಲವು, ಶುದ್ಧವು ಈ ಸ್ವರ್ಗಗಳು ಮೇಲೆ ಮೇಲಿರುವುವು. ಮೊದಲನೆಯುದರಲ್ಲಿ ಕುಮಾರನೂ, ಎರಡನೆಯುದರಲ್ಲಿ ಚಾಮುಂಡಾದಿ ಮಾತೃಗಳೂ ಇರುತ್ತಾರೆ.

೪೭. ಮೂರನೆಯುದರಲ್ಲಿ ಸಿದ್ಧರೂ, ಗಂಧರ್ವರೂ, ನಾಲ್ಕನೆಯುದರಲ್ಲಿ ವಿದ್ಯಾಧರರೂ, ಐದನೆಯುದರಲ್ಲಿ ನಾಗರಾಜನೂ, ಆರನೆಯುದರಲ್ಲಿ ವಿನತಾಪುತ್ರನಾದ ಗರುಡನೂ ಇರುವರು.

೪೮. ಏಳನೆಯುದರಲ್ಲಿ ಪಿತೃದೇವತೆಗಳೂ, ಹಾಗೆಯೇ ಎಂಟನೆಯುದರಲ್ಲಿ ದಕ್ಷಪ್ರಜೇಶ್ವರನೂ, ಹತ್ತನೆಯ ಮಾರ್ಗದಲ್ಲಿ ಆದಿತ್ಯನೂ ಇರುತ್ತಾರೆ.

ಭೂಲೋಕಾಚ್ಛತಸಾಹಸ್ರಾದೂರ್ಧ್ವಂ ಚರತಿ ಭಾಸ್ಕರಃ ।
ಯೋಜನಾನಾಂ ಸಹಸ್ರೇ ದ್ವೇ ವಿಷ್ಕಂಭೇನ ಸಮನ್ವಿತಮ್ ॥ ೪೯ ॥

ತ್ರಿಗುಣಂ ಪರಿಣಾಹೇನ ಸೂರ್ಯಬಿಂಬಂ ಪ್ರಮಾಣತಃ ।
ಸೋಮಪುರ್ಯಾಂ ವಿಭಾವರ್ಯಾಂ ಮಧ್ಯಾಹ್ನೇ ಚಾರ್ಯಮಾ ಯಥಾ ॥೫೦॥

ಮಧ್ಯಾಹ್ನೇತ್ವಮರಾವತ್ಯಾಂ ಯದಾ ಭವತಿ ಭಾಸ್ಕರಃ ।
ತದಾ ಸಂಯಮನೇ ಯಾಮ್ಯೇ ತತ್ರೋದ್ಯಂಸ್ತು ಪ್ರದೃಶ್ಯತೇ ॥ ೫೧ ॥

---

೪೯. ಭೂಲೋಕದಿಂದ ನೂರುಸಾಸಿರ ಗಾವುದದ ಮೇಲೆ ಸೂರ್ಯನು, ಸಂಚರಿಸುತ್ತಾನೆ: ಸೂರ್ಯಬಿಂಬದ ಸುತ್ತಲೂ ಎರಡು ಸಾಸಿರ ಯೋಜನಗಳಷ್ಟು ವಿಷ್ಕಂಭದಿಂದ (ಪರಿವೇಷದಿಂದ) ಕೂಡಿರುವುದು.

೫೦. ಸೂರ್ಯಬಿಂಬವು ಅಳತೆಯಿಂದ, ಅಗಲದಿಂದ ತ್ರಿಗುಣಿತವಾಗಿರುವುದು. ಯಾವಾಗ ಅರ್ಯಮನೆಂಬ ಆದಿತ್ಯನು ಸೋಮನ ವಿಭಾವರೀ ಪುರಿಯಲ್ಲಿ ಹಗಲ ಮಧ್ಯಕಾಲದಲ್ಲಿ ಇರುವನೋ, ಆಗ ಭಾಸ್ಕರನು ದೇವೇಂದ್ರನ ಅಮರಾವತಿಯಲ್ಲಿ ಉದಿತನಾಗುತ್ತಿರುತ್ತಾನೆ.

೫೧. ಅರ್ಯಮನು ಮಧ್ಯಾಹ್ನದ ವೇಳೆಯಲ್ಲಿ ಅಮರಾವತಿಯಲ್ಲಿ ಯಾವಾಗ ಇರುತ್ತಾನೆಯೋ, ಆಗ ಭಾಸ್ಕರನು ಯಮನ ಸಂಯಮನಪುರಿಯಲ್ಲಿ ಉದಿತ ನಾಗುತ್ತಿರುವಂತೆ ಕಾಣಿಸುತ್ತಾನೆ.

ಮೇರುಂ ಪ್ರದಕ್ಷಿಣಂ ಕುರ್ವನ್ ಭಾತ್ಯೇವ ಸವಿತಾ ಸದಾ ।
ಧ್ರುವಾಧಾರಸ್ತಥೋಽತ್ರಿಷ್ಯನ್ ವಾಲಖಿಲ್ಯಾದಿಭಿಃ ಸ್ತುತಃ ॥ ೫೨ ॥

ಇತಿ ಶ್ರೀ ನರಸಿಂಹಪುರಾಣೇ ಭೂಗೋಲಕಥನೇ
ತ್ರಿಂಶೋಽಧ್ಯಾಯಃ

೫೨. ಸವಿತಾರನು ಯಾವಾಗಲೂ ಧ್ರುವಾಧಾರನಾಗಿದ್ದು, ಹಾಗೆಯೇ ವಾಲಖಿಲ್ಯಾದಿ ಮುನಿಗಳಿಂದ ಹೊಗಳಿಸಿಕೊಳ್ಳುತ್ತಾ, ಮೇರುವನ್ನು ಬಲಗೊಳ್ಳುತ್ತಾ, ಪ್ರಕಾಶಿಸುತ್ತಲೇ ಇರುವನು ;'

ಎಂದು ಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀ ನರಸಿಂಹಪುರಾಣದಲ್ಲಿ ಭೂಗೋಲದ ವಿವರಣೆಯುಳ್ಳ
ಮೂವತ್ತನೆಯ ಅಧ್ಯಾಯವು ಮುಗಿದುದು.

ಮೂವತ್ತನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ ಸೂತರು ಭರದ್ವಾಜನಿಗೆ ಭೂಗೋಲವನ್ನು ನಿರೂಪಿಸುವು ದಾಗಿ ಹೇಳಿ, ಮೊದಲು ಜಂಬುದ್ವೀಪವೇ ಮೊದಲಾದ ದ್ವೀಪಗಳನ್ನೂ, ಅವುಗಳ ಪ್ರಮಾಣಾದಿಗಳನ್ನೂ ನಿರೂಪಿಸಿ, ಆ ದ್ವೀಪಗಳಿಗೆ ಮನುಪುತ್ರನಾದ ಪ್ರಿಯವ್ರತನು ಅಧಿಪತಿಯು; ಅವನ ಮಕ್ಕಳು ಹತ್ತುಮಂದಿ; ಅವರಲ್ಲಿ ಏಳ್ವರು ಮಾತ್ರ ರಾಜ್ಯಾಧಿ ಪತ್ಯವನ್ನು ಕೈಕೊಂಡರು. ಮೂವರು ಸಂನ್ಯಾಸಿಗಳು, ಜಂಬೂದ್ವೀಪದ ಒಡೆಯನು ಆಗ್ನೀಧ್ರನು. ಅವನೂ ಜಂಬೂದ್ವೀಪದ ಒಂಬತ್ತು ವರ್ಷಗಳನ್ನೂ ಒಂಬತ್ತು ಮಕ್ಕ ಳಿಗೆ ಹಂಚಿಕೊಟ್ಟನು. ಅವನ ಸಂತತಿಯಲ್ಲಿ ಋಷಭದೇವನ ಮಗನಾಗಿ ಭರತನು ಹುಟ್ಟಿ, ಅವನಿಂದ ಭಾರತವರ್ಷವು ಪ್ರಸಿದ್ಧವಾಯಿತು. ಇಲಾವೃತವರ್ಷದ ನಡುವೆ ಮೇರುಪರ್ವತವಿರುವುದು. ಇದರ ದಶದಿಕ್ಕುಗಳಲ್ಲಿ ದಿಕ್ಪತಿಗಳ ಪುರಿಗಳೂ, ನಡುವೆ ಚತುರ್ಮುಖನ ಪಟ್ಟಣವೂ, ಅದರ ಮೂರು ಶಿಖರಗಳಮೇಲೆ ತ್ರಿವಿಷ್ಟಪವೂ ಇರು ವುದಾಗಿ ನಿರೂಪಿಸಿ, ಇಪ್ಪತ್ತೊಂದು ಸ್ವರ್ಗಗಳು, ಅವುಗಳನ್ನು ಹೊಂದುವವರು, ಇವೆಲ್ಲವನ್ನೂ ಹೇಳಿ, ಮೂರು ಶಿಖರಗಳಲ್ಲಿ ಒಂದೊಂದರಲ್ಲಿ ಒಬ್ಬೊಬ್ಬರು ಬ್ರಹ್ಮ ವಿಷ್ಣು ಶಿವರು ಇರುವರು. ಈ ಸ್ವರ್ಗಗಳ ಮಾರ್ಗ ಮತ್ತು ಮಾರ್ಗಸ್ಥರು ಇವರನ್ನು ನಿರೂಪಿಸಿ, ಭೂಲೋಕದಿಂದ ಮೇಲೆ ಈ ಸ್ವರ್ಗದ ಹತ್ತನೆಯ ಮಾರ್ಗದ ಆದಿತ್ಯ ಗತಿಯನ್ನೂ ಸಂಕ್ಷೇಪವಾಗಿ ನಿರೂಪಿಸಿರುತ್ತಾರೆ.

ಇಂತು ಮೂವತ್ತನೆಯ ಅಧ್ಯಾಯದ ವಿಷಯ ಸಂಗ್ರಹವು.

ಶ್ರೀಃ

ಶ್ರೀ ಲಕ್ಷ್ಮೀನರಸಿಂಹಾಯ ನಮಃ

ಶ್ರೀ ನರಸಿಂಹ ಪುರಾಣಮ್

ಭೂಗೋಲಕಥನಮ್ ; ಏಕತ್ರಿಂಶೋಽಧ್ಯಾಯಃ

ಭೂಗೋಲಕಥನೇ ಧ್ರುವಚರಿತಮ್

॥ ಭರದ್ವಾಜ ಉವಾಚ ॥

ಕೋಽಸೌ ಧ್ರುವಃ ಕಸ್ಯ ಸುತಃ ಸೂರ್ಯಾಧಾರೋಽಭವತ್ಕಥಮ್ ।
ವಿಚಿಂತ್ಯ ಕಥಯಾಶು ತ್ವಂ ಸೂತ ಜೀವ ಸಮಾಃ ಶತಮ್ ॥ ೧ ॥

ಮೂವತ್ತೊಂದನೆಯ ಅಧ್ಯಾಯವು

ಭೂಗೋಲಕಥನದಲ್ಲಿ ಧ್ರುವಚರಿತೆಯು

ಭಾರದ್ವಾಜಮುನಿಯು ಸೂತರನ್ನು ಕುರಿತು ಇಂತು ಹೇಳುತ್ತಾನೆ :—

೧. ' ಈ ಧ್ರುವನೆಂಬವನಾರು ? ಯಾವನ ಮಗನು ? ಅವನು ಸೂರ್ಯನಿಗೆ ಆಧಾರವಾದುದು ಹೇಗೆ ? ಎಲೈ ಸೂತಮಹಾಮುನಿಗಳೇ ! ಇವನ್ನು ಯೋಚಿಸಿ, ನನಗೆ ತಿಳಿಸಿರಿ ; ಈ ಉಪಕಾರದಿಂದ ನೀವು ನೂರುವರ್ಷಗಳ ಕಾಲ ಬಾಳಿರಿ ;' ಎಂದು ಭಾರದ್ವಾಜನು ನುಡಿದನು.

॥ ಸೂತ ಉವಾಚ ॥

ಮನೋಃ ಸ್ವಾಯಂಭುವಸ್ಯಾಸೀದುತ್ತಾನಚರಣಃ ಸುತಃ ।
ತಸ್ಯ ಕ್ಷಿತಿಪತೇರ್ವಿಪ್ರ ದ್ವೌ ಸುತೌ ಸಂಬಭೂವತುಃ ॥ ೨ ॥

ಸುರುಚ್ಯಾಮುತ್ತಮೋ ಜ್ಯೇಷ್ಠಃ ಸುನೀತ್ಯಾಂ ತು ಧ್ರುವೋಽಪರಃ ।
ಮಧ್ಯೇಸಭಂ ನರಪತೇರುಪವಿಷ್ಟಸ್ಯ ಚೈಕದಾ ॥ ೩ ॥

ಸುನೀತ್ಯಾ ರಾಜಸೇವಾಯೈ ನಿಯುಕ್ತೋಽಲಂಕೃತಃ ಸುತಃ ।
ಧ್ರುವೋ ಧಾತ್ರೇಯಿಕಾಪುತ್ರೈಃ ಸಮಂ ವಿನಯತತ್ಪರಃ ॥ ೪ ॥

ಸ ಗತ್ವೋತ್ತಾನಚರಣಂ ಕ್ಷೋಣೀಶಂ ಪ್ರಣನಾಮ ಹ
ದೃಷ್ಟ್ವೋತ್ತಮಂ ತದುತ್ಸಂಗೇ ನಿವಿಷ್ಟಂ ಜನಕಸ್ಯ ವೈ ।
ಪ್ರಾಪ್ಯ ಸಿಂಹಾಸನಸ್ಥಂ ಚ ನೃಪತಿಂ ಬಾಲಚಾಪಲಾತ್
ಆರುರುಕ್ಷುಮವೇಕ್ಷ್ಯಾಮುಂ ಸುರುಚಿರ್ಧ್ರುವಮಬ್ರವೀತ್ ॥ ೫ ॥

ಸೂತರು ಹೇಳುತ್ತಾರೆ :—

೨ 'ಭಾರದ್ವಾಜ! ಸ್ವಾಯಂಭುವನೆಂಬ ಮನುವಿನಿಂದ ಉತ್ತಾನಪಾದ ರಾಜನೆಂಬ ಮಗನು ಜನಿಸಿದನು ಆ ರಾಜನಿಂದ ಉತ್ತಾನಪಾದನಿಗೆ ಈರ್ವರು ಗಂಡುಮಕ್ಕಳು ಹುಟ್ಟಿದರು.

೩-೫. ಸುರುಚಿದೇವಿಯಲ್ಲಿ ಉತ್ತಮನೆಂಬ ಹಿರಿಯನೂ, ಸುನೀತಿದೇವಿಯಲ್ಲಿ ಇನ್ನೊಬ್ಬ ಧ್ರುವನೆಂಬ ಕಿರಿಯವನೂ ಜನಿಸಿದರು. ಒಮ್ಮೆ ಆ ದೊರೆಯು ಓಲಗದ ನಡುವೆ ಕುಳಿತಿರುವಾಗ, ಸುನೀತಿಯು ತನ್ನ ಮಗನಾದ ಧ್ರುವನಿಗೆ ಅಲಂಕಾರವನ್ನೆಸಗಿ ರಾಜಸೇವೆಗಾಗಿ ದಾದಿಯರ ಮಕ್ಕಳೊಡನೆ ಕಳುಹಲು, ಆ ಬಾಲಕನು ನಮ್ರತೆಯೊಡಗೂಡಿ ಹೋಗಿ, ಉತ್ತಾನಪಾದರಾಯನ ಅಡಿಗಳಿಗೆರಗಿದನು. ತಂದೆಯ ತೊಡೆಯ ಮೇಲೆ ತನ್ನ ಪೇರಮ್ಮನ ಮಗನಾದ ಉತ್ತಮನು ಕುಳಿತಿರುವುದನ್ನು ಕಂಡು, ಸಿಂಹಾಸನದ ಮೇಲೆ ಕುಳಿತಿರುವ ದೊರೆಯ ಬಳಿಗೆ ಹೋಗಿ, ಹುಡುಗತನದ ಆಸೆಯಿಂದ ತಾನೂ ಹತ್ತಿ ಕುಳಿತುಕೊಳ್ಳಬೇಕೆಂದೆಳಸುತ್ತಿದ್ದ ಈ ಧ್ರುವನನ್ನು ಕಂಡು ಸುರುಚಿಯು ಇಂತು ನುಡಿದಳು.

ದೌರ್ಭಗೇಯ ಕಿಮಾರೋಢುಮಿಚ್ಛೇರಂಕಂ ಮಹೀಪತೇಃ ।
ಬಾಲ ಬಾಲಿಶಬುದ್ಧಿತ್ವಾದಭಾಗ್ಯಾಜಾಠರೋದ್ಭವಃ ॥ ೬ ॥

ಅಸ್ಮಿನ್ ಸಿಂಹಾಸನೇ ಸ್ಥಾತುಂ ಸುಕೃತಂ ಕಿಂ ತ್ವಯಾ ಕೃತಮ್ ॥ ೭ ॥

ಯದಿ ಸ್ಯಾತ್ಸುಕೃತಂ ತತ್ಕಿಂ ದುರ್ಭಾಗ್ಯೋದರಗೋಽಭವಃ ।
ಅನೇನೈವಾನುಮಾನೇನ ಬುಧ್ಯಸ್ವ ಸ್ವಲ್ಪಬುದ್ಧಿತಾಮ್ ॥ ೮ ॥

ಭೂತ್ವಾ ರಾಜಕುಮಾರೋಽಪಿ ನಾಲಂಕುರ್ಯಾ ಮಮೋದರಮ್ ।
ಸುಕುಕ್ಷಿಜಮಮುಂ ಪಶ್ಯ ತ್ವಮುತ್ತಮಮನುತ್ತಮಮ್ ॥ ೯ ॥

ಅಧಿಜಾನುಧರಾಜಾನೇರ್ಮಾನೇನ ಪರಿಬೃಂಹಿತಮ್ ।

---

೬. "ಎಲೈ ಅಪುಣ್ಯವತಿಯ ಕುಮಾರನಾದ ಬಾಲಕನೇ! ಕೇಳು; ನೀನು ಪಾಪಿಷ್ಠೆಯ ಗರ್ಭದಲ್ಲಿ ಹುಟ್ಟಿದವನು. ವಿವೇಕವಿಲ್ಲದವನಾದುದರಿಂದ ದೊರೆಯ ತೊಡೆಯನ್ನೇರಲು ಏಕೆ ಬಯಸುತ್ತೀಯೆ?

೭. ಈ ಸಿಂಹಾಸನದಲ್ಲಿ ಕುಳಿತುಕೊಳ್ಳುವಂಥ ಪುಣ್ಯವನ್ನು ನೀನೆಸಗಿರುವೆಯೇನು?

೮. ನೀನಂತಹ ಪುಣ್ಯವನ್ನು ಮಾಡಿದ್ದರೆ, ಈ ಪಾಪಿಷ್ಠೆಯ ಗರ್ಭವನ್ನು ಹೊಂದಿದವನಾಗಿ ಏಕೆಯಿರುತ್ತಿದ್ದೆ? ಈಯನುಮಾನದಿಂದಲೇ, ನಿನ್ನ ಅವಿವೇಕವನ್ನು ತಿಳಿಯುವನಾಗು.

೯–೧೧. ಎಲೈ ಧ್ರುವನೇ! ನೀನು ರಾಜಕುಮಾರನಾದರೂ, ನನ್ನ ಉದರವನ್ನು ಅಲಂಕರಿಸಲಿಲ್ಲವು. ಭೂಪತಿಯ ಸನ್ಮಾನದಿಂದ ಉತ್ಕರ್ಷ ಪಡೆದಿರುವ (ನನ್ನ) ಉತ್ತಮ ಗರ್ಭದಿಂದ ಹುಟ್ಟಿದ, ತನಗಿಂತಲೂ ಶ್ರೇಷ್ಠನಿಲ್ಲದ, ಈ ಉತ್ತಮನೆಂಬ ಕುವರನನ್ನು ನೋಡು."

ಎಂದು ಸುರುಚಿಯು ಧ್ರುವನಿಗೆ ಹೇಳಿದಳು.

॥ ಸೂತ ಉವಾಚ ॥

ಮಧ್ಯೇ ರಾಜಸಭಂ ಬಾಲಸ್ತಯೇತಿ ಪರಿಭರ್ತ್ಸಿತಃ ॥ ೧೦ ॥

ನಿಪತನ್ನೇತ್ರಬಾಷ್ಪಾಂಬು ಧೈರ್ಯಾತ್ಕಿಂಚಿನ್ನ ಚೋಕ್ತವಾನ್ ।
ಉಚಿತಂ ನೋಚಿತಂ ಕಿಂಚಿತ್ ನೋಚಿವಾನ್ ಸೋಽಪಿ ಪಾರ್ಥಿವಃ ॥ ೧೧ ॥

ನಿಯಂತ್ರಿತೋ ಮಹಿಷ್ಯಾಶ್ಚ ತಸ್ಯಾಃ ಸೌಭಾಗ್ಯಗೌರವಾತ್ ।
ವಿಸರ್ಜಿತ ಸಭಾಲೋಕಂ ಶೋಕಂ ಸಂಹೃತ್ಯ ಚೇಷ್ಟಿತೈಃ ॥ ೧೨ ॥

ಶೈಶವೈಃ ಸ ಶಿಶುರ್ನತ್ವಾ ನೃಪಂ ಸ್ವಸದನಂ ಯಯೌ ।
ಸುನೀತಿರ್ನೀತಿನಿಲಯಮವಲೋಕ್ಯಾಥ ಬಾಲಕಮ್ ॥ ೧೩ ॥

ಮುಖಲಕ್ಷ್ಮ್ಯೈವ ಚಾಜ್ಞಾಸೀತ್ ಧ್ರುವಂ ರಾಜ್ಞಾಽಪಮಾನಿತಮ್ ।
ಅಥ ದೃಷ್ಟ್ವಾ ಸುನೀತಿಂ ತು ರಹೋಽಂತಃ ಪುರವಾಸಿನೀಮ್ ॥ ೧೪ ॥

೧೦-೧೬. ಸೂತಮುನಿಯು ಹೇಳುತ್ತಾರೆ:—

"ರಾಜಸಭೆಯ ನಡುವೆ ಇಂತು ಸುರುಚಿಯು ಧ್ರುವನನ್ನು ಗಜರಿಸಲು, ಅದರಿಂದ ದುಃಖಗೊಂಡ ಧ್ರುವನು ಕಣ್ಣೀರನ್ನು ಸುರಿಸುತ್ತಾ ಏನನ್ನೂ ಹೇಳಲಿಲ್ಲವು. ಪೃಥಿವೀಶ್ವರನಾದ ಆ ಉತ್ತಾನಪಾದರಾಯನೂ ಉಚಿತವಾದುದಾಗಲೀ, ಅನುಚಿತವಾದುದಾಗಲೀ ಯಾವುದನ್ನೂ ಹೇಳಲಿಲ್ಲವು.

ಆ ಬಾಲಕನನ್ನು ಆ ಸುರುಚಿಯು ತನ್ನ ಪುಣ್ಯಾತಿಶಯದಿಂದ ತಡೆಯಲು, ಆ ಬಾಲಕನು ಆ ಒಡ್ಡೋಲಗವನ್ನು ನೋಡಲಾಗದಂತೆಸಗಿದ ಶೋಕವನ್ನು ತನ್ನ ಕಿರಿಯತನಕ್ಕೆ ಸಹಜವಾದ ಚೇಷ್ಟೆಗಳಿಂದ ತಡೆದುಕೊಂಡು, ಆ ಉತ್ತಾನಪಾದರಾಯನಿಗೆರಗಿ, ತನ್ನ ವಾಸಸ್ಥಾನಕ್ಕೆ ಹೋದನು. ಅವನ ತಾಯಿಯಾದ ಸುನೀತಿಯು ನಯಕ್ಕೆಡೆಯಾದ ಧ್ರುವನನ್ನು ನೋಡಿ, ಅನಂತರದಲ್ಲಿ ಮುಖದ ಕಾಂತಿಯಿಂದಲೇ ಆ ಎಳೆಯನನ್ನು ದೊರೆಯಿಂದ ಅಪಮಾನಗೊಂಡವನೆಂದು ತಿಳಿದಳು. ತರುವಾಯ ಆ ಬಾಲಕನು ಏಕಾಂತದಲ್ಲಿ, ರಾಣಿವಾಸದಲ್ಲಿ ವಾಸಿಸುತ್ತಿದ್ದ ಸುನೀತಿಯನ್ನು ಕಂಡು,

ಆಲಿಂಗ್ಯ ದೀರ್ಘಂ ನಿಃಶ್ವಸ್ಯ ಮುಕ್ತಕಂಠಂ ರುರೋದ ಹ ।
ಸಾಂತ್ವಯಿತ್ವಾ ಸುನೀತಿಸ್ತಂ ವದನಂ ಪರಿಮಾರ್ಜ್ಯ ಚ ॥
ದುಕೂಲಾಂಚಲಸಂಪರ್ಕೈರ್ವೀಜ್ಯ ತಂ ಮೃದುಪಾಣಿನಾ
ಪಪ್ರಚ್ಛ ತನಯಂ ಮಾತಾ ವದ ರೋದನಕಾರಣಮ್ ॥ ೧೫ ॥

ವಿದ್ಯಮಾನೇ ನರಪತೌ ಶಿಶೋ ಕೇನಾಪಮಾನಿತಃ ।

॥ ಧ್ರುವ ಉವಾಚ ॥

ಸಂಪೃಚ್ಛೇ ಜನನಿ ತ್ವಾಽಹಂ ಸಮ್ಯಕ್ ಶಂಸ ಮಮಾಗ್ರತಃ ॥ ೧೬ ॥

ಭಾರ್ಯಾತ್ವೇಽಪಿ ಚ ಸಾಮಾನ್ಯೇ ಕಥಂ ಸಾ ಸುರುಚಿಃ ಪ್ರಿಯಾ ।
ಕಥಂ ನ ಭವತೀ ಮಾತಃ ಪ್ರಿಯಾ ಕ್ಷಿತಿಪತೇರಸಿ ॥ ೧೭ ॥

ಕಥಮುತ್ತಮತಾಂ ಪ್ರಾಪ್ತ ಉತ್ತಮಃ ಸುರುಚೇಃ ಸುತಃ ।
ಕುಮಾರತ್ವೇಽಪಿ ಸಾಮಾನ್ಯೇ ಕಥಂ ಚಾಹಮನುತ್ತಮಃ ॥ ೧೮ ॥

ತಬ್ಬಿಕೊಂಡು, ನಿಟ್ಟುಸಿರನ್ನು ಬಿಟ್ಟು, ಗಟ್ಟಿಯಾಗಿ ಅತ್ತನು. ಸುನೀತಿಯಾದರೋ ಅವನನ್ನು ಒಳ್ಳೆಯ ಪ್ರಿಯೋಕ್ತಿಗಳಿಂದ ಸಮಾಧಾನಗೊಳಿಸಿ, ಆ ಮುಖವನ್ನು ನೀರಿನಿಂದ ಒರಿಸಿ ತೊಳೆದು, ತನ್ನ ಮೃದುವಾದ ಪಾಣಿಯಿಂದ ಪಟ್ಟೆವಸ್ತ್ರದ ಸೆರಗಿನ ಸಂಪರ್ಕದಿಂದ ಬೀಸಿ, ಆ ತಾಯಿಯು "ಮಗುವೇ! ಅಳುವಿಗೆ ಕಾರಣವೇನು? ರಾಯನು ಇರುವಾಗಲೇ ಯಾರಿಂದ ಅವಮಾನಗೊಂಡೆ? ಹೇಳು," ಎಂದು ಮಗನನ್ನು ಕೇಳಿದಳು. ಆಗ ಧ್ರುವನು ಹೇಳುತ್ತಾನೆ " ಎಲೌ ತಾಯೇ! ನಿನ್ನನ್ನು ಈಗ ನಾನು ಕೇಳುತ್ತೇನೆ. ನನ್ನ ಇದಿರಿನಲ್ಲಿ ಸರಿಯಾಗಿ ಹೇಳು.

೧೭. ಎಲೌ ತಾಯೇ! ಮಡದಿತನವು ನಿಮ್ಮಿಬ್ಬರಿಗೂ ಸಾಮಾನವಾದುದಾಗಿರಲು, ಆ ಸುರಚಿಯು ರಾಯನಿಗೆ ಇಷ್ಟಳಾದವಳಾದುದೇಕೆ? ನೀನೇಕೆ ರಾಯನಿಗೆ ಪ್ರಿಯೆಯಾಗಿಲ್ಲವು?

೧೮. ಸುರಚಿಯ ಮಗನಾದ ಉತ್ತಮನು ಹೇಗೆ ಉತ್ತಮತ್ವವನ್ನೈದಿದನು. ಕುಮಾರತ್ವವು ನಮಿಬ್ಬರಿಗೂ ಸಮಾನವಾಗಿರಲು ನಾನು ಏಕೆ ಉತ್ತಮನಲ್ಲವು?

ಕಥಂ ತ್ವಂ ಮಂದಭಾಗ್ಯಾಽಸಿ ಸುಕುಕ್ಷಿಃ ಸುರುಚಿಃ ಕಥಮ್ ।
ಕಥಂ ನೃಪಾಸನಂ ಯೋಗ್ಯಮುತ್ತಮಸ್ಯ ಕಥಂ ನ ಮೇ ॥ ೧೯ ॥

ಕಥಂ ಮೇ ಸುಕೃತಂ ತುಚ್ಛಮುತ್ತಮಸ್ಯೋತ್ತಮಂ ಕಥಮ್ ।
ಇತಿ ಶ್ರುತ್ವಾ ವಚಸ್ತಸ್ಯ ಸುನೀತಿರ್ನೀತಿಮಚ್ಛಿಶೋಃ ॥ ೨೦ ॥

ಕಿಂಚಿದುಚ್ಛ್ವಸ್ಯ ಶನಕೈಃ ಶಿಶುಶೋಕೋಪಶಾಂತಯೇ ।
ಸ್ವಭಾವ ಮಧುರಾಂ ವಾಣೀಂ ವಕ್ತುಂ ಸಮುಪಚಕ್ರಮೇ ॥ ೨೧ ॥

ಸುನೀತಿರುವಾಚ ॥

ಅಯಿ ತಾತ ಮಹಾಬುದ್ಧೇ ವಿಶುದ್ಧೇನಾಂತರಾತ್ಮನಾ ।
ನಿವೇದಯಾಮಿ ತೇ ಸರ್ವಂ ಮಾಽಪಮಾನೇ ಮತಿಂ ಕೃಥಾಃ ॥ ೨೨ ॥

---

೧೯. ನೀನೇಕೆ ಪುಣ್ಯಹೀನೆಯಾದೆ? ಸುರಚಿಯು ಪುಣ್ಯಗರ್ಭಳಾದುದು ಹೇಗೆ? ಉತ್ತಮನಿಗೆ ರಾಜಾಸನವು ಹೇಗೆ ಯೋಗ್ಯವು? ನನಗೆ ಏಕೆ ಯೋಗ್ಯವಲ್ಲವು?

೨೦–೨೧. ನನ್ನ ಪುಣ್ಯವು ತುಚ್ಛವಾದುದೂ, ಉತ್ತಮನದು ಉತ್ತಮವಾದುದೂ ಹೇಗೆ?"

ಎಂದು ಧ್ರುವನು ಹೇಳಲು, ಸುನೀತಿಯು ನೀತಿವಂತನಾದ ಆ ಮಗುವಿನ ಮಾತನ್ನು ಇಂತು ಕೇಳಿ, ಸ್ವಲ್ಪ ಮೆಲ್ಲನೆ ನಿಟ್ಟುಸಿರು ಬಿಟ್ಟು, ಆ ಮಗುವಿನ ದುಃಖವನ್ನು ಕಳೆಯಲು ಸ್ವಭಾವದಿಂದ ಇನಿದಾದ ನುಡಿಯನ್ನಾಡಲು ಮೊದಲು ಮಾಡಿದಳು.

ಸುನೀತಿಯು ಇಂತು ಹೇಳುತ್ತಾಳೆ:—

೨೨. "ಅತ್ಯಂತ ವಿವೇಕಿಯಾದ ಎಲೈ ಮಗುವೇ! ಶುದ್ಧವಾದ ಮನಸ್ಸಿನಿಂದ ಎಲ್ಲವನ್ನೂ ನಿನಗೆ ಹೇಳುತ್ತೇನೆ; ಅವಮಾನ ವಿಷಯದಲ್ಲಿ ಬುದ್ಧಿಯನ್ನು ಮಾಡಬೇಡ. (ಎಂದರೆ, ಅವಮಾನವಾಗಿದೆಯೆಂದು ತಿಳಿಯಬೇಡ.)

ತಯಾ ಯದುಕ್ತಂ ತತ್ಸರ್ವಂ ತಥ್ಯಮೇವ ನ ಚಾನ್ಯಥಾ ।
ಯದಿ ಸಾ ಮಹಿಷೀ ರಾಜ್ಞೋ ರಾಜ್ಞೀನಾಮತಿವಲ್ಲಭಾ ॥ ೨೩ ॥

ಮಹಾ ಸುಕೃತ ಸಂಭಾರೈರುತ್ತಮಶ್ಚೋತ್ತಮೋದರೇ ।
ಉವಾಚ ತಸ್ಯಾಃ ಪುಣ್ಯಾಯಾಃ ನೃಪಸಿಂಹಾಸನೋಚಿತಃ ॥ ೨೪ ॥

ಆತಪತ್ರಂ ಚ ಚಂದ್ರಾಭಂ ಶುಭೇ ಚಾಪಿ ಹಿ ಚಾಮರೇ ।
ಭದ್ರಾಸನಂ ತಥೋಚ್ಚಂ ಚ ಸಿಂಧುರಾಶ್ಚ ಮದೋತ್ಕಟಾಃ ॥ ೨೫ ॥

ತುರಂಗಮಾಶ್ಚ ತುರಗಾ ಅನಾಧಿವ್ಯಾಧಿಜೀವಿತಮ್ ।
ನಿಃಸಪತ್ನಂ ಶುಭಂ ರಾಜ್ಯಂ ಪ್ರಾಪ್ಯಂ ವಿಷ್ಣುಪ್ರಸಾದತಃ ॥ ೨೬ ॥

೨೩-೨೬. ಆ ಸುರುಚಿಯು ಹೇಳಿದುದೆಲ್ಲವೂ ಸತ್ಯವಾದುದೇ ಸರಿ; ಬೇರೆಯೆಂದು ಭಾವಿಸಬೇಡ; ರಾಣಿಯರಲ್ಲಿ ಅತ್ಯಂತ ಪ್ರೇಯಸಿಯಾದ ಅವಳು ರಾಯನಿಗೆ ಮಹಿಷಿಯಾದ ಪಕ್ಷದಲ್ಲಿ, ರಾಯನ ಸಿಂಹಾಸನಕ್ಕೆ ಯೋಗ್ಯನಾದ ಉತ್ತಮನು ಪುಣ್ಯವಂತಳಾದ ಅವಳ ಹಿರಿದಾದ ಬಸುರಿನಲ್ಲಿ ಹೆಚ್ಚಾದ ಪುಣ್ಯಸಾಮಗ್ರಿಗಳಿಂದ ಕೂಡಿ ವಾಸಿಸಿದನು. ಚಂದ್ರನಿಗೆ ಸಮಾನವಾದ ಬೆಳ್ಗೊಡೆಯು, ಮಂಗಳಕರವಾದ ಎರಡು ಚಾಮರಗಳು, ಹಾಗೆಯೇ ಎತ್ತರವಾದ ಭದ್ರಾಸನವು, ಮದದಿಂದ ಶ್ರೇಷ್ಠಗಳಾದ ಪೇರಾನೆಗಳು, ಬಹುವೇಗವಾಗಿ ಹೋಗತಕ್ಕ ಕುದುರೆಗಳು ಮತ್ತು ಆಧಿವ್ಯಾಧಿ ರಹಿತವಾದ ಬಾಳಿನ, ಹಗೆಗಳಿಲ್ಲದ ಮಂಗಳ ರಾಜ್ಯವು, ಇವೆಲ್ಲವೂ ಶ್ರೀ ಮಹಾವಿಷ್ಣುವಿನ ಅನುಗ್ರಹದಿಂದ ಅವನಿಂದ ಹೊಂದತಕ್ಕವು."

ಎಂದು ಸುನೀತಿಯು ಹೇಳಿದಳು.

॥ ಸೂತ ಉವಾಚ ॥

ಇತ್ಯಾಕರ್ಣ್ಯ ಸುನೀತ್ಯಾಸ್ತನ್ಮಾತುರ್ವಾಕ್ಯಮನಿಂದಿತಮ್ ।
ಸೌನೀತೇಯೋ ಧ್ರುವೋ ವಾಚಮಾದದೇ ವಕ್ತುಮುತ್ತರಮ್ ॥ ೨೭ ॥

॥ ಧ್ರುವ ಉವಾಚ ॥

ಜನಯಿತ್ರಿ ಸುನೀತೇ ಮೇ ಶೃಣು ವಾಕ್ಯಮನಾಕುಲಮ್ ।
ಉತ್ತಾನಚರಣಾದನ್ಯನ್ನಾಸ್ತೀತಿ ಮೇ ಮತಿಃ ಶುಭೇ ॥ ೨೮ ॥

ಸಿದ್ಧಾರ್ಥೋಽಸ್ಮ್ಯಂಬ ಯದ್ಯಸ್ತಿ ಕಶ್ಚಿದಾಶ್ರಿತಕಾಮಧುಕ್ ।
ಅದ್ಯೈವ ಸಕಲಾರಾಧ್ಯಂ ತಮಾರಾಧ್ಯ ಜಗತ್ಪತಿಮ್ ॥ ೨೯ ॥

ಸೂತರು ಹೇಳುತ್ತಾರೆ :—

೨೭. "ಸುನೀತಿದೇವಿಯ ಮಗನಾದ ಧ್ರುವಕುಮಾರನು ಮಾತೆಯಾದ ಸುನೀತಿಯ ನಿರ್ದುಷ್ಟಗಳಾದ ನುಡಿಗಳನ್ನು ಇಂತು ಕೇಳಿ, ಉತ್ತರವನ್ನು ಹೇಳಲ ತೊಡಗಿದನು."

ಧ್ರುವನು ಹೇಳುತಾನೆ :—

೨೮. "ನನ್ನನ್ನು ಹಡೆದ ಎಲೈ ಸುನೀತಿಯೇ! ಸಮಾಧಾನವಾದ ಮನದಿಂದ ನನ್ನ ಈ ನುಡಿಯನ್ನು ಕೇಳು; ಎಲೌ ಮಂಗಳಕರಳೇ! ಉತ್ತಾನಪಾದರಾಯನನ್ನು ಹೊರತು, ಬೇರೆ ಯಾವ ಉತ್ತಮ ವಸ್ತುವೂ ಇಲ್ಲವೆಂದು ಇದುವರೆಗೂ ನಾನು ತಿಳಿದಿದ್ದೆನು.

೨೯-೩೦. ಎಲೌ ತಾಯೇ! ಆಶ್ರಯಿಸಿದವರ ಇಷ್ಟಾರ್ಥವನ್ನೆಲ್ಲಾ (ಬಯಕೆಗಳನ್ನೆಲ್ಲಾ) ಕರೆಯತಕ್ಕ ಕಾಮಧೇನುವಾದುದೊಂದು ಇರುವ ಪಕ್ಷದಲ್ಲಿ, ನಾನು ಕೃತಕೃತ್ಯನಾಗಿದ್ದೇನೆ. ಇಂದೇ ಸರ್ವರಿಂದಲೂ ಸೇವಿಸತಕ್ಕ, ಜಗನ್ನಾಯಕನಾದ ಅವನನ್ನು ಸೇವಿಸಿ, ಮತ್ತಾರಿಂದಲೂ ಹೊಂದಲಾಗದ, ಆಸ್ಥಾನವು ಹೊಂದಿದುದಾಯಿ

ತತ್ತ್ರದಾಸಾದಿತಂ ವಿದ್ಧಿ ಪದಮನ್ಯೈರ್ದುರಾಸದಮ್ ।
ಏಕಮೇವ ಹಿ ಸಾಹಾಯ್ಯಂ ಮಾತರ್ಮೇ ಕರ್ತುಮರ್ಹಸಿ ॥ ೩೦ ॥

ಅನುಜ್ಞಾಂ ದೇಹಿ ಮೇ ವಿಷ್ಣುಂ ಯಥಾ ಚಾರಾಧಯಾಮ್ಯಹಂ ।

॥ ಸುನೀತಿರುವಾಚ ॥

ಅನುಜ್ಞಾತುಂ ನ ಶಕ್ನೋಮಿ ತ್ವಾ ಮುತ್ತಾನಶಯಾಂಗಜ ॥ ೩೧ ॥

ಸಪ್ತಾಷ್ಟವರ್ಷದೇಶೀಯ ಕ್ರೀಡಾಯೋಗ್ಯೋಽಸಿ ಪುತ್ರಕ ।
ತ್ವದೇಕತನಯಾ ತಾತ ತ್ವದಾಧಾರೈಕ ಜೀವಿತಾ ॥ ೩೨ ॥

ತೆಂದು ತಿಳಿ; ಎಲೌ ತಾಯೇ! ನನಗೆ ಒಂದೇ ಒಂದು ನೆರವನ್ನುಂಟುಮಾಡಲು, ನೀನು ಯೋಗ್ಯಳಾಗಿದ್ದೀಯೆ. ಶ್ರೀ ಮಹಾವಿಷ್ಣುವನ್ನು ಪೂಜಿಸಲು, ನನಗೆ ಅಣತಿಯನ್ನು ಕೊಡು;" ಎಂದು ಬೇಡಿದನು.

ಸುನೀತಿಯು ಹೇಳುತ್ತಾಳೆ.

೩೧. "ಎಲೈ ಶಿಶುವಾದ ಮಗನೇ! ನಿನಗೆ ತಪಕ್ಕೆ ಅಣತಿಯನ್ನು ಕೊಡಲಾರೆನು.

೩೨. ಎಲೈ ಮಗುವೇ! ಏಳೆಂಟು ವರ್ಷಗಳೂ ತುಂಬದವನೇ! ನೀನು ಮಕ್ಕಳಾಟಕ್ಕೆ ಅರ್ಹನಾಗಿರುತ್ತೀಯೆ; ಅಪ್ಪಾ! ನನಗೆ ನೀನೊಬ್ಬನೇ ಮಗನು; ನಾನು ನಿನ್ನನ್ನೇ ಆಶ್ರಯಿಸಿ ಬದುಕಿರುತ್ತೇನೆ.

ಲಬ್ಧೋಽಸಿ ಕತಿಭಿಃ ಕಷ್ಟೈಷ್ಟ್ವಾಃ ಸಂಪ್ರಾರ್ಥ್ಯ ದೇವತಾಃ ।
ಯದಾ ಯದಾ ಬಹಿರ್ಯಾಸಿ ರಂತುಂ ತ್ರಿಚತುರಂ ಪದಮ್ ॥ ೩೩ ॥

ತದಾ ತದಾ ಮಮ ಪ್ರಾಣಾಸ್ತಾತ ತ್ವಾಮುಪಗಚ್ಛತಿ ।

॥ ಧ್ರುವ ಉವಾಚ ॥

ಅದ್ಯ ಯಾವತ್ಪಿತಾ ಮಾತಾ ತ್ವಂ ಚೋತ್ತಾನಪದೋ ವಿಭುಃ ।
ಅದ್ಯಪ್ರಭೃತಿ ಮೇ ಮಾತಾ ಪಿತಾ ವಿಷ್ಣುರ್ನ ಸಂಶಯಃ ॥ ೩೪ ॥

॥ ಸುನೀತಿರುವಾಚ ॥

ವಿಷ್ಣೋರಾರಾಧನೇನಾಹಂ ವಾರಯೇ ತ್ವಾಂ ಸುಪುತ್ರಕ ।
ಜಿಹ್ವಾ ಮೇ ಶತಧಾ ಯಾತಿ ಯದಿ ತ್ವಾಂ ವಾರಯಾಮಿ ಭೋಃ ॥ ೩೫ ॥

೩೩-೩೪. ಅನೇಕ ಕಷ್ಟಗಳಿಂದ ಬೇಕಾದಷ್ಟು ದೇವತೆಗಳನ್ನು ಬೇಡಿ, ನಿನ್ನನ ಡೆದೆನು. ಯಾವಾಗ ಯಾವಾಗ ಆಡಲು ಮೂರು ನಾಲ್ಕು ಹೆಜ್ಜೆಗಳಷ್ಟು ದೂರ ನೀನು ಹೋಗುತ್ತೀಯೋ, ಆವಾಗಲೆಲ್ಲಾ ನನ್ನ ಪ್ರಾಣಗಳು ಅಪ್ಪಾ! ನಿನ್ನನ್ನೇ (ಹೊಂದಿರುತ್ತವೆ) ಒಡಗೂಡಿರುತ್ತವೆ;"

ಎಂದು ಸುನೀತಿಯು ಹೇಳಿದಳು.

ಧ್ರುವನು ಹೇಳುತ್ತಾನೆ.

"ಇಲ್ಲಿಯವರೆಗೆ ನೀನು ಮತ್ತು ರಾಯನಾದ ಉತ್ತಾನಪಾದನು ತಾಯಿತಂದೆಗಳಾಗಿರುವಿರಿ; ಇನ್ನು ಮುಂದೆ ಇವತ್ತು ಮೊದಲು ನನಗೆ ತಾಯಿಯೂ, ತಂದೆಯೂ ಶ್ರೀವಿಷ್ಣುವೇ ಸರಿ, ಈ ವಿಷಯದಲ್ಲಿ ಸಂದೇಹವಿಲ್ಲವು;"

ಎಂದು ಸುನೀತಿಗೆ ಧ್ರುವನು ಹೇಳಿದನು.

ಸುನೀತಿಯು ಹೇಳುತ್ತಾಳೆ:—

೩೫. "ಎಲೈ ಸುಪುತ್ರನೇ! ನಾನು ಶ್ರೀ ಮಹಾವಿಷ್ಣುವಿನ ಪೂಜೆಯ ವಿಷಯದಲ್ಲಿ ನಿನ್ನನ್ನು ತಡೆಯುವುದಿಲ್ಲವು; ಎಲೈ! ನಾನು ನಿನ್ನನ್ನು ತಡೆದಲ್ಲಿ, ನನ್ನ ನಾಲಗೆಯು ನೂರುಭಾಗವಾಗಿ ಸೀಳಿ ಹೋಗುತ್ತದೆ."

ಇತ್ಯನುಜ್ಞಾಮಿವ ಪ್ರಾಪ್ಯ ಜನನೀಚರಣಾಂಬುಜೈಃ ।
ಪರಿಕ್ರಮ್ಯ ಪ್ರಣಮ್ಯಾಥ ತಪಸೇ ಚ ಧ್ರುವೋ ಯಯೌ ॥ ೩೬ ॥

ತಯಾಪಿ ಧೈರ್ಯಸೂತ್ರೇಣ ಸುನೀತ್ಯಾ ಪರಿಗುಂಫ್ಯ ಚ ।
ನೇತ್ರೇಂದೀವರಜಾ ಮಾಲಾ ಧ್ರುವಸ್ಯೋಪಾಯನೀ ಕೃತಾ ॥ ೩೭ ॥

ಮಾತ್ರಾ ತನ್ಮಾರ್ಗರಕ್ಷಾರ್ಥಂ ತದಾ ತದನುಗೀಕೃತಾಃ ।
ಪರ್ಕೃರಾಚಾರ್ಯಪ್ರಸರಾಃ ಸ್ವಾಶೀರ್ವಾದಾಃ ಪರಂ ಶತಮ್ ॥ ೩೮ ॥

ಸರ್ವತ್ರಾವತು ಸತ್ಪುತ್ರ ಶಂಖಚಕ್ರಗದಾಧರಃ ।
ನಾರಾಯಣೋ ಜಗದ್ವ್ಯಾಪೀ ಪ್ರಭುಃ ಕಾರುಣ್ಯವಾರಿಧಿಃ ॥ ೩೯ ॥

---

೩೬. ಇಂತು ಹೇಳಲು, ತಾಯಿಯ ಚರಣಾಂಬುಜಗಳಿಂದ ಅಪ್ಪಣೆಯನ್ನು ಪಡೆದವನಂತೆ, ಧ್ರುವನು ಬಳಿಕ ತಾಯಿಗೆರಗಿ ಹೊರಟು, ತಪಸ್ಸಿಗೆ ತೆರಳಿದನು.

೩೭. ಆ ಸುನೀತಿಯೂ ತನ್ನ ನಿರ್ವಿಕಾರತೆಯೆಂಬ ದಾರದಿಂದ ಕಟ್ಟಿದ ಕಣ್ಣೆಂಬ ಕನ್ನೈದಿಲೆಯ ಮಾಲೆಯನ್ನು ಧ್ರುವನಿಗೆ ಕಾಣಿಕೆಯಾಗಿ ಕೊಟ್ಟಳು. (ಸುನೀತಿಯೂ ಧೈರ್ಯದಿಂದ ಮಗನನ್ನೇ ದಿಟ್ಟಿಸಿದಳು.)

೩೮. ಆಗ ಆ ತಾಯಿಯು ಆ ಮಗುವಿಗೆ (ಧ್ರುವನಿಗೆ) ಹಾದಿಯಲ್ಲಿ ರಕ್ಷೆಯಾಗಿರಲು, ಇತರರಿಂದ ಸಂಪ್ರದಾಯದಿಂದ ಹೊರಡತಕ್ಕಂತಹ ನೂರಾರು ಆಶೀರ್ವಾದದ ನುಡಿಗಳನ್ನು ಹೇಳಿ, ಅವು ಅವನನ್ನು ಹಿಂಬಾಲಿಸುವಂತೆ ಮಾಡಿದಳು.

೩೯. "ಎಲೈ ಸುಪುತ್ರನೇ! ಶಂಖ ಚಕ್ರ ಗದೆಗಳನ್ನು ಧರಿಸಿರುವವನೂ ಪ್ರಪಂಚದಲ್ಲೆಲ್ಲಾ ವ್ಯಾಪ್ತನೂ, ನಿಗ್ರಹಾನುಗ್ರಹಸಮರ್ಥನೂ, ದಯಾಸಮುದ್ರನೂ, ಸರ್ವಗುಣಪೂರ್ಣನೂ ಆದ ಶ್ರೀಮನ್ನಾರಾಯಣನು ಎಲ್ಲೆಡೆಯಲ್ಲಿಯೂ ನಿನ್ನನ್ನು ರಕ್ಷಿಸಲಿ," ಎಂದು ಸುನೀತಿಯು ಆಶೀರ್ವದಿಸಿದಳು.

॥ ಸೂತ ಉವಾಚ ॥

ಸ್ವಸೌಧಾತ್ಸ ವಿನಿರ್ಗತ್ಯ ಬಾಲೋ ಬಾಲ ಪರಾಕ್ರಮಃ ।
ಅನುಕೂಲೇನ ಮರುತಾ ದರ್ಶಿತಾಧ್ವಾಽವಿಶದ್ವನಮ್ ॥ ೪೦ ॥

ಸ ಮಾತೃದೈವತೋಽಭಿಜ್ಞಃ ಕೇವಲಂ ರಾಜವರ್ತ್ಮನಿ ।
ನ ವೇದ ಕಾನನಾಧ್ವಾನಂ ಕ್ಷಣಂ ದಧ್ಯೌ ನೃಪಾತ್ಮಜಃ ॥ ೪೧ ॥

ಪುರೋಪವನಮಾಸಾದ್ಯ ಚಿಂತಯಾಮಾಸ ಸೋಽರ್ಭಕಃ ।
ಕಿಂ ಕರೋಮಿ ಕ್ವ ಗಚ್ಛಾಮಿ ಕೋ ಮೇ ಸಾಹಾಯ್ಯದೋ ಭವೇತ್ ॥೪೨॥

ಏವಮುನ್ಮೀಲ್ಯ ನಯನೇ ಯಾವತ್ಪಶ್ಯತಿ ಸ ಧ್ರುವಃ ।
ತಾವದ್ದದರ್ಶ ಸಪ್ತರ್ಷೀನ್ ಅತರ್ಕಿತ ಗತೀನ್ ವನೇ । ॥ ೪೩ ॥

ಸೂತರು ಹೇಳುತ್ತಾರೆ :—

೪೦. 'ಏನೂ ತಿಳಿಯದ, ಸಾಹಸಿಯಾದ, ಆ ಧ್ರುವಕುಮಾರನು ತನ್ನ ಸೌಧದಿಂದ ಹೊರಹೊರಟು, ಅನುಕೂಲವಾಗಿ ಗಾಳಿಯು ಬೀಸಿ, ಮಾರ್ಗವನ್ನು ತೋರುತ್ತಿರುವವನಾಗಿರಲು, ವನವನ್ನು ಹೊಕ್ಕನು.

೪೧. ತಾಯಿಯೇ ದೇವತೆಯೆಂದು ತಿಳಿದಿದ್ದ, ಕೇವಲ ರಾಜಮಾರ್ಗವನ್ನರಿತ ಆ ರಾಜಕುಮಾರನು ಕಾಡಿನಲ್ಲಿ ದಾರಿಯರಿಯದವನಾಗಿ ಚಣಕಾಲ ಧ್ಯಾನಮಾಡುತ್ತಲಿದ್ದನು.

೪೨. ಆ ಬಾಲಕನು ಪಟ್ಟಣದ ಸಮೀಪದ ಉದ್ಯಾನವನ್ನು ಹೊಂದಿ, "ಏನು ಮಾಡಲಿ ? ಎಲ್ಲಿಗೆ ಹೋಗಲಿ ? ನನಗೆ ನೆರವನ್ನು ನೀಡುವವನಾರು ?" ಎಂದು ಚಿಂತಿಸಿದನು.

೪೩. ಇಂತು ಚಿಂತಿಸಿ, ಆ ಧ್ರುವನು ಕಣ್ತೆರೆದು ನೋಡುವ ಹೊತ್ತಿಗೆ, ಆ ವನದಲ್ಲಿ ಊಹಿಸಲಾಗದ ಗಮನವುಳ್ಳ ಸಪ್ತರ್ಷಿಗಳನ್ನು ಕಂಡನು.

ಅಥ ದೃಷ್ಟ್ವಾ ಸ ಸಪ್ತರ್ಷೀನ್ ಸಪ್ತಸಪ್ತಿ ತೇಜಸಃ
ಭಾಗ್ಯಸೂತ್ರೈರಿವಾಕೃಷ್ಟ್ಯೋಪನೀತಾನ್ ಪ್ರಮುಮೋದ ಹ ॥ ೪೪ ॥

ತಿಲಕಾಂಕಿತಸತ್ಫಾಲಾನ್ ಕುಶೋಪಗ್ರಹಿತಾಂಗುಲೀನ್ ।
ಕೃಷ್ಣಾಜಿನೋಪವಿಷ್ಟಾಂಶ್ಚ ಬ್ರಹ್ಮಸೂತ್ರೈರಲಂಕೃತಾನ್ ॥ ೪೫ ॥

ಉಪಗಮ್ಯ ವಿನಮ್ರಾಂಸಃ ಪ್ರಬದ್ಧಕರಸಂಪುಟಃ ।
ಧ್ರುವೋ ವಿಜ್ಞಾಪಯಾಂಚಕ್ರೇ ಪ್ರಣಮ್ಯ ಲಲಿತಂ ವಚಃ ॥ ೪೬ ॥

॥ ಧ್ರುವ ಉವಾಚ ॥

ಅವೈತ ಮಾಂ ಮುನಿವರಾಃ ಸುನೀತ್ಯುದರಸಂಭವಮ್ ।
ಉತ್ತಾನಪಾದತನಯಂ ಧ್ರುವಂ ನಿರ್ವಿಣ್ಣಮಾನಸಮ್ ॥ ೪೭ ॥

---

೪೪. ಬಳಿಕ ಅವನು ಸೂರ್ಯನಂತೆ ತೇಜಸ್ವಿಗಳಾದ, ತನ್ನ ಪುಣ್ಯವೆಂಬ ಹಗ್ಗದಿಂದ ಸೆಳೆದು ತನ್ನ ಹತ್ತಿರಕ್ಕೆ ಕರೆತಂದವರಂತಿರುವ, ಸಪ್ತರ್ಷಿಗಳನ್ನು ನೋಡಿ, ಸಂತಸಗೊಂಡನು.

೪೫. ಅವರು ಹಣೆಯಲ್ಲಿ ತಿಲಕವನ್ನು ಧರಿಸಿದ್ದರು ; ಕೈಬೆರಳಲ್ಲಿ ದರ್ಭೆಗಳನ್ನು ಹಿಡಿದಿದ್ದರು; ಕೃಷ್ಣಾಜಿನದ ಮೇಲೆ ಕುಳಿತಿದ್ದರು ; ಮತ್ತು ಜನ್ನವಿರಗಳಿಂದ ಅಲಂಕೃತರಾಗಿದ್ದರು.

೪೬. ಧ್ರುವನು ಕೈಜೋಡಿಸಿ, ವಿನಯದಿಂದ ಬಾಗಿದವನಾಗಿ, ಹತ್ತಿರಕ್ಕೆ ಹೋಗಿ, ಅವರಿಗೆರಗಿ, ಇಂತು ಮೆಲ್ನುಡಿಗಳನ್ನು ಬಿನ್ನವಿಸಿದನು.

ಧ್ರುವನು ನುಡಿಯುತ್ತಾನೆ.

೪೭ "ಹೇ ಮಹರ್ಷಿಗಳಿರಾ ! ನಾನು ಉತ್ತಾನಪಾದರಾಯನಿಂದ ಸುನೀತಿಯ ಬಸುರಿನಲ್ಲಿ ಹುಟ್ಟಿದ ಮಗನು. ನನ್ನನ್ನು ಧ್ರುವನೆಂಬ ಹೆಸರಿನಿಂದ ಕರೆಯುತ್ತಾರೆ. ನಾನು ಬಹಳ ಖಿನ್ನವಾದ ಮನಸ್ಸಿನಿಂದ ನಿಮ್ಮ ಸಮಾಪಕ್ಕೆ ಬಂದಿರುತ್ತೇನೆ;"

ಎಂದು ಹೇಳಿದನು.

॥ ಸೂತ ಉವಾಚ ॥

ತಂ ದೃಷ್ಟ್ವೋರ್ಜಸ್ವಲಂ ಬಾಲಂ ಸ್ವಭಾವ ಮಧುರಾಕೃತಿಮ್ ।
ಅನರ್ಘ್ಯನಯನೇಪಥ್ಯಂ ಮೃದುಗಂಭೀರಭಾಷಿಣಮ್ ॥ ೪೮ ॥

ಉಪೋಪವೇಶ್ಯ ಶಿಶುಕಂ ಪ್ರೋಚುಸ್ತೇ ವಿಸ್ಮಿತಾ ಭೃಶಮ್ ।
ತವಾದ್ಯಾಪಿ ನ ಜಾನೀಮೋ ವತ್ಸ ನಿರ್ವೇದಕಾರಣಮ್ ॥ ೪೯ ॥

ಅನವಾಪ್ತಾಭಿಲಾಷಾಣಾಂ ವೈರಾಗ್ಯಂ ಜಾಯತೇ ನೃಣಾಮ್ ।
ಸಪ್ತದ್ವೀಪಪತೇ ರಾಜ್ಞಃ ಕುಮಾರಸ್ತ್ವಂ ತಥಾ ಕಥಮ್ ॥ ೫೦ ॥

ಕಿಮಸ್ಮಾಭಿರಹೋ ಕಾರ್ಯಂ ಕಸ್ತವಾಸ್ತಿ ಮನೋರಥಃ ।

ಸೂತರು ಹೇಳುತ್ತಾರೆ.

೪೮-೪೯. "ಆ ಮುನಿಗಳು ಹುಟ್ಟಿನಿಂದ ಮಧುರವಾದ ಆಕೃತಿಯುಳ್ಳವನೂ, ಧೀರನೂ, ಅಪಾರವಾದ ನಯವೆಂಬ ತೊಡವುಳ್ಳವನೂ, ಮೃದುವಾಗಿಯೂ, ಗಂಭೀರವಾಗಿಯೂ ಇರುವ ಆ ಬಾಲಕನನ್ನು ಹತ್ತಿರದಲ್ಲಿ ಕೂರಿಸಿಕೊಂಡು, "ಎಲೈ ಬಾಲಕನೇ ನಾವು ಇನ್ನೂ ನಿನಗೆ ವೈರಾಗ್ಯವುಂಟಾಗಲು ನಿಮಿತ್ತವೇನು ? ಎಂಬುದನ್ನು ಅರಿಯೆವು.

೫೦-೫೧. ತಮ್ಮ ಬಯಕೆಯನ್ನು ಹೊಂದದ ಮಾನವರಿಗೆ ಲೋಕದಲ್ಲಿ ವೈರಾಗ್ಯವುಂಟಾಗುತ್ತದೆ. ಏಳು ದ್ವೀಪಗಳಿಗೊಡೆಯನಾದ ಚಕ್ರವರ್ತಿಯ ಮಗನಾದ ನಿನಗೆ ಹಾಗೆ ವೈರಾಗ್ಯವುಂಟಾಗಲು ಕಾರಣವೇನು ? ಅಯ್ಯಾ ! ನಮ್ಮಿಂದಾಗಬೇಕಾದ ಕೆಲಸವೇನು ? ನಿನ್ನ ಮನೋರಥವಾದರೂ ಯಾವುದು ? ಹೇಳು;"

ಎಂದು ಸಪ್ತಋಷಿಗಳು ಹೇಳಿದರು

॥ ಧ್ರುವ ಉವಾಚ ॥

ಮುನಯೋ ಮಮ ಯೋ ಬಂಧುರುತ್ತಮಶ್ಲೋತ್ತಮೋತ್ತಮಃ ॥ ೫೧ ॥

ಪಿತ್ರಾ ಪ್ರದತ್ತಂ ತಸ್ಯಾಸ್ತು ಸದ್ಭದ್ರಾಸನಮುತ್ತಮಮ್ ।
ಭವತ್ಸ್ಯತಂ ಹಿ ಸಾಹಾಯ್ಯಂ ಏತದಿಚ್ಛಾಮಿ ಸುವ್ರತಾಃ ॥ ೫೨ ॥

ಅನನ್ಯನೃಪಭುಕ್ತಂ ಯತ್ ಯದನ್ಯೇಭ್ಯಃ ಸಮುಚ್ಛ್ರಿತಮ್ ।
ಇಂದ್ರಾದಿದುರವಾಪಂ ಯತ್ ಕಥಂ ಲಭ್ಯೇತ ತತ್ಪದಮ್ ॥ ೫೩ ॥

ಇತಿ ಶ್ರುತ್ವಾ ವಚಸ್ತಸ್ಯ ಮುನಯೋ ಬಾಲಕಸ್ಯ ತು ।
ಯಥಾರ್ಥಮೋವ ಪ್ರತ್ಯೂಚುರ್ಮರೀಚ್ಯಾದ್ಯಾಸ್ತದಾ ಧ್ರುವಮ್ ॥ ೫೪ ॥

ಅದಕ್ಕೆ ಧ್ರುವನು ಹೇಳುತ್ತಾನೆ ;—

"ಎಲೈ ಮುನಿಗಳಿರಾ ! ನನ್ನ ಬಂಧುವಾದ ಉತ್ತಮನು ಉತ್ತಮರಲ್ಲಿ ಉತ್ತಮನಾಗಿರುತ್ತಾನೆ. ತಂದೆಯಿಂದ ಕೊಡಲ್ಪಟ್ಟ, ಉತ್ತಮವಾದ ಭದ್ರಾಸನವು ಅವನಿಗಾಗಲಿ ; ಎಲೈ ಸುವ್ರತರೇ ! ನಾನು ನಿಮ್ಮಿಂದ ಈ ಸಹಾಯವನ್ನಪೇಕ್ಷಿಸುತ್ತೇನೆ ; ಇತರ ರಾಯರಾರಿಂದಲೂ ಸೇವಿಸದ, ಇತರ ಪದಗಳಿಂದಲೂ ಉತ್ತಮವಾದ, ಇಂದ್ರನೇ ಮೊದಲಾದವರಿಂಲೂ ಹೊಂದಲಾಗದ ಯಾವ ಸ್ಥಾನವೋ, ಅದನ್ನು ಹೇಗೆ ಹೊಂದುವುದು ? ಅದನ್ನು ನನಗೆ ಹೇಳಿರಿ," ಎಂದು ಬಿನ್ನವಿಸಿದನು.

೫೪. ಆ ಮರೀಚಿಯೇ ಮೊದಲಾದ ಮುನಿಗಳು ಆ ಧ್ರುವಕುಮಾರನ ನುಡಿಗಳನ್ನು ಕೇಳಿ, ಆಗ ಅವನಿಗೆ ಯಥಾರ್ಥವಾದುದನ್ನೇ ಹೇಳಿದರು.

॥ ಮರೀಚಿರುವಾಚ ॥

ಅನಾಸ್ವಾದಿತಗೋವಿಂದಪದಾಂಬುರಜೋ ರಸಃ ।
ಮನೋರಥಪಥಾತೀತಸ್ಫೀತಂ ನಾಕಲಯೇತ್ಫಲಮ್ ॥ ೫೫ ॥

॥ ಅತ್ರಿರುವಾಚ ॥

ಅನರ್ಚಿತಾಚ್ಯುತಪದಃ ಪದಮಾಸಾದ್ಯತೇ ಕಥಮ್ ।
ಇಂದ್ರಾದಿದುರವಾಪಂ ಯನ್ಮಾನವೈಃ ಸುದುರಾಸದಮ್ ॥ ೫೬ ॥

॥ ಅಂಗಿರಾ ಉವಾಚ ॥

ನ ಹಿ ದೂರೇ ಪದಂ ತಸ್ಯ ಸರ್ವಾಸಾಂ ಸಂಪದಾಮಿಹ ।
ಕಮಲಾಕಾಂತಕಾಂತಾಂಘ್ರಿಕಮಲಂ ಯಃ ಸುಶೀಲಯೇತ್ ॥ ೫೭ ॥

ಮರೀಚಿ ಮುನಿಯು ಹೇಳುತ್ತಾನೆ:—

೫೫. ವೇದಪ್ರತಿಪಾದ್ಯನಾದ ಶ್ರೀ ಹರಿಯ ಪಾದಕಮಲದ ಧೂಳಿಯ ರಸವನ್ನು ಸವಿನೋಡದವನು ಮನೋರಥದ ಮಾರ್ಗವನ್ನು ಮೀರಿದ ಉತ್ತಮವಾದ ಫಲವನ್ನು ಹೊಂದುವನೆಂದು ನಾನು ತಿಳಿಯುವುದಿಲ್ಲ. (ಎಂದರೆ ಶ್ರೀಹರಿಯ ಪಾದಪದ್ಮಾರಾಧಕನಿಗೇನೆ ಉತ್ತಮವಾದ ಫಲವುಂಟಾಗುವುದು.)

ಅತ್ರಿಮುನಿಯು ಹೇಳುತ್ತಾನೆ :—

೫೬. "ನಾಶರಹಿತನಾದ ಶ್ರೀಮದಚ್ಯುತನ ಪಾದವನ್ನು ಪೂಜಿಸದವನು ಇಂದ್ರಾದಿ ದೇವತೆಗಳಿಂದಲೂ ಹೊಂದಲಶಕ್ಯವಾದ, ಮಾನವರಿಂದಲೂ ಹೊಂದಲಾಗದ ಯಾವಸ್ಥಾನವಿರುವುದೋ, ಅದನ್ನು ಹೊಂದಲು ಹೇಗೆ ಶಕ್ಯವಾಗುವುದು ? (ಅಶಕ್ಯವು)."

ಅಂಗಿರಸಮುನಿಯು ಹೇಳುತ್ತಾನೆ :—

೫೭. "ಯಾವ ಮಾನವನು ರಮಾವಲ್ಲಭನಾದ ಶ್ರೀಪತಿಯ ಸುಂದರವಾದ ಚರಣನಳಿನವನ್ನು ಆಶ್ರಯಿಸುತ್ತಾನೆಯೋ, ಅವನಿಗೆ ಈ ಪ್ರಪಂಚದಲ್ಲಿ ಸಕಲೈಶ್ವರ್ಯಗಳಿಗಾಶ್ರಯುವಾದ ಸ್ಥಾನವು ದೂರದಲ್ಲಿಲ್ಲವು. (ಎಂದರೆ ಆತನಿಗೆ ದೊರಕುವುದು ಎಂದಭಿಪ್ರಾಯವು.)

॥ ಪುಲಸ್ತ್ಯ ಉವಾಚ ॥

ಯಸ್ಯ ಸ್ಮರಣಮಾತ್ರೇಣ ಮಹಾಪಾತಕಸಂತತಿಃ ।
ಪರಮಾಂತಕಮಾಪ್ನೋತಿ ಸ ವಿಷ್ಣುಃ ಸರ್ವದೋ ಧ್ರುವ ॥ ೫೮ ॥

॥ ಪುಲಹ ಉವಾಚ ॥

ಯದಾಹುಃ ಪರಮಂ ಬ್ರಹ್ಮ ಪ್ರಧಾನಪುರುಷಾತ್ಪರಮ್ ।
ಯನ್ಮಾಯಯಾ ಕೃತಂ ಸರ್ವಂ ಸ ವಿಷ್ಣುಃ ಕೀರ್ತಿತೋಽರ್ಥದಃ ॥ ೫೯ ॥

॥ ಕ್ರತುರುವಾಚ ॥

ಯೋ ಯಜ್ಞಪುರುಷೋ ವಿಷ್ಣುರ್ವೇದವೇದ್ಯೋ ಜನಾರ್ದನಃ ।
ಅಂತರಾತ್ಮಾಽಸ್ಯ ಜಗತಃ ಸ ತುಷ್ಟಃ ಕಿಂ ನ ಯಚ್ಛತಿ ॥ ೬೦ ॥

ಪುಲಸ್ತ್ಯಮುನಿಯು ಹೇಳುತ್ತಾನೆ :—

೫೮. "ಎಲೈ ಧ್ರುವನೇ ! ಯಾವಾತನ ನಾಮವನ್ನು ಸ್ಮರಿಸುವುದರಿಂದಲೇ, ಮಹಾಪಾತಕಗಳ ಪರಂಪರೆಯು ಸಂಪೂರ್ಣವಾಗಿ ಅಳಿವನ್ನೈಯ್ದುವುದೋ, ಆ ಶ್ರೀ ಮಹಾವಿಷ್ಣುವೇ ಎಲ್ಲವನ್ನೂ ಕೊಡತಕ್ಕವನು."

ಪುಲಹಮುನಿಯು ಹೇಳುತ್ತಾನೆ :—

೫೯. "ಜ್ಞಾನಿಗಳು ಯಾವಾತನನ್ನು ಪ್ರಕೃತಿಪುರುಷರಿಂದ ಉತ್ತಮನಾದ, ಸರ್ವೋತ್ತಮನಾದ, ಗುಣಪೂರ್ಣನಾದ ಬ್ರಹ್ಮನನ್ನಾಗಿ ಹೇಳುತ್ತಾರೆಯೋ, ಯಾವಾತನ ಇಚ್ಛೆಯಿಂದ ಸಕಲವೂ ಸೃಷ್ಟಿಸಲ್ಪಟ್ಟಿತೋ, ಆ ಶ್ರೀ ಮಹಾವಿಷ್ಣುವು ಸಕಲವಸ್ತುವನ್ನೂ ಕೊಡತಕ್ಕವನೆಂದು ಹೇಳಲ್ಪಟ್ಟಿರುತ್ತಾನೆ."

ಕ್ರತುಮುನಿಯು ಹೇಳುತ್ತಾನೆ :—

೬೦. "ಯಾವನು ಜನ್ನಗಳಲ್ಲಿ ಮುಖ್ಯವಾಗಿ ಪೂಜಿಸತಕ್ಕ ಪೂರ್ಣಸುಖಾತ್ಮಕನೋ, ಸರ್ವತ್ರ ವ್ಯಾಪ್ತನಾದ ವಿಷ್ಣುವೋ, ಸಕಲಾಗಮಗಳಿಂದ ಮುಖ್ಯವಾಗಿ ತಿಳಿಯತಕ್ಕವನೋ, ದುಷ್ಟಜನ ನಾಶಕನಾದ ಜನಾರ್ದನನೋ, ಈ ಚರಾಚರಾತ್ಮಕವಾದ ಜಗತ್ತಿನಲ್ಲಿ ಅಂತರ್ಯಾಮಿಯಾಗಿರುವವನೋ, ಅವನು ಪ್ರಸನ್ನನಾದರೆ ಏನನ್ನು ತಾನೇ ಕೊಡುವುದಿಲ್ಲ ? (ಸಕಲ ವಸ್ತುವನ್ನೂ ಈಯುವನು)"

॥ ವಸಿಷ್ಠ ಉವಾಚ ॥

ಯದ್ಭ್ರೂನರ್ತನ ವರ್ತಿನ್ಯಃ ಸಿದ್ಧಯೋಽಷ್ಟೌ ನೃಪಾತ್ಮಜ ।
ತಮಾರಾಧ್ಯ ಹೃಷೀಕೇಶಂ ಚತುರ್ವರ್ಗೋ ನ ದೂರತಃ ॥ ೬೧ ॥

॥ ಧ್ರುವ ಉವಾಚ ॥

ಸತ್ಯಮುಕ್ತಂ ದ್ವಿಜೇಂದ್ರಾ ವೋ ವಿಷ್ಣೋರಾರಾಧನಂ ಪ್ರತಿ ।
ಕಥಂ ಸ ಭಗವಾನಿಜ್ಯಃ ಸ ವಿಧಿಶ್ಚೋಪದಿಶ್ಯತಾಮ್ ॥ ೬೨ ॥

ಪ್ರಭೂತದೋ ಭವೇದ್ಯೋ ವೈ ದುರಾರಾಧ್ಯತಮೋ ಭವೇತ್ ।
ಬಾಲೋಽಹಂ ರಾಜಪುತ್ರೋಽಹಂ ದುಃಖಂ ನೈವ ಮಯಾ ಕ್ಷಮಮ್

ವಸಿಷ್ಠಮುನಿಯು ಹೇಳುತ್ತಾನೆ:—

೬೧. "ಎಲೈ ರಾಯಕುವರನೇ! ಜಗತ್ತಿನಲ್ಲಿ ಅಣಿಮಾದ್ಯಷ್ಟಸಿದ್ಧಿಗಳು ಯಾವ ಭಗವಂತನ ಹುಬ್ಬಿನ ಕುಣಿತಕ್ಕೆ ಅಧೀನವಾಗಿರುವುವೋ, ಅಂತಹ ಸರ್ವೇಂದ್ರಿಯಗಳಿಗೆ ನಿಯಾಮಕನಾದುದರಿಂದ ಹೃಷೀಕೇಶನೆನಿಸುವ ಶ್ರೀ ಹರಿಯನ್ನು ಪೂಜಿಸಿ ಯಾವನಿರುತ್ತಾನೆಯೋ, ಅವನಿಗೆ ಧರ್ಮಾರ್ಥಕಾಮಮೋಕ್ಷಗಳು ದೂರದಲ್ಲಿರುವುದಿಲ್ಲವು. (ಅವು ಕೈಕೂಡುವುವು.)"

ಧ್ರುವನು ಆ ಮುನಿಗಳಿಗೆ ಇಂತು ಹೇಳುತ್ತಾನೆ:—

೬೨. "ಎಲೈ ಬ್ರಾಹ್ಮಣ ಶ್ರೇಷ್ಠರಾದ ಮುನಿಗಳೇ! ಶ್ರೀಮಹಾವಿಷ್ಣುವಿನ ಪೂಜೆಯ ವಿಷಯದಲ್ಲಿ ನೀವು ಯಥಾರ್ಥವಾದ ವಿಷಯವನ್ನು ಹೇಳಿದಿರಿ; ಆ ಭಗವಂತನು ಹೇಗೆ ಸೇವಿಸಲ್ಪಡತಕ್ಕವನು ? ಆ ನಿಯಮವನ್ನುಪದೇಶಿಸಿರಿ.

೬೩. ಯಾವನು ವಿಪುಲವಾಗಿ ಫಲವನ್ನು ಕೊಡುವನೋ, ಅವನು ಕ್ಲೇಶದಿಂದ ಸೇವಿಸಲ್ಪಡತಕ್ಕವನಾಗುವನು. ನಾನಾದರೋ ಬಾಲಕನು; ರಾಜಕುಮಾರನು; ಕಷ್ಟವನ್ನು ಸಹಿಸಲಾರೆನು."

ಎಂದು ಧ್ರುವನು ಹೇಳಿದನು.

॥ ಮುನಯ ಊಚುಃ ॥

ತಿಷ್ಠತಾ ಗಚ್ಛತಾ ವಾಪಿ ಸ್ವಪತಾ ಜಾಗ್ರತಾ ತಥಾ ।
ಶಯಾನೇನೋಪವಿಷ್ಟೇನ ಧ್ಯೇಯೋ ನಾರಾಯಣಃ ಸದಾ ॥ ೬೪ ॥

ಪುತ್ರಾನ್ ಕಲತ್ರಂ ಮಿತ್ರಾಣಿ ರಾಜ್ಯಂ ಸ್ವರ್ಗಾಪವರ್ಗಕಮ್ ।
ವಾಸುದೇವಂ ಜಪನ್ ಮರ್ತ್ಯಃ ಸರ್ವಂ ಪ್ರಾಪ್ನೋತ್ಯಸಂಶಯಮ್ ॥ ೬೫ ॥

ದ್ವಾದಶಾಕ್ಷರಮಂತ್ರೇಣ ವಾಸುದೇವಾತ್ಮಕೇನ ಚ ।
ಧ್ಯಾಯಂಶ್ಚತುರ್ಭುಜಂ ವಿಷ್ಣುಂ ಜಪ್ತ್ವಾ ಸಿದ್ಧಿಂ ನ ಕೋ ಗತಃ ॥ ೬೬ ॥

ಮುನಿಗಳು ಇಂತು ಹೇಳುತ್ತಾರೆ.

೬೪. "ನಿಂತವನು, ಓಡಾಡುವವನು, ಮಲಗಿರುವವನು, ಎಚ್ಚರವಾಗಿರುವವನು ಹಾಗೆಯೇ ಕುಳಿತವನು, ಇವರೆಲ್ಲರೂ ಯಾವಾಗಲೂ ಶ್ರೀಮನ್ನಾರಾಯಣನನ್ನು ಚಿಂತಿಸಬಹುದು. (ಧ್ಯಾನಮಾಡಬಹುದು.)

೬೫. ಸರ್ವತ್ರ ವಸನಶೀಲನಾದುದರಿಂದ ವಾಸುದೇವನಾದ ಶ್ರೀಹರಿಯನ್ನು ಜಪಮಾಡುವ ನರನು ಮಕ್ಕಳನ್ನೂ, ಮಡದಿಯರನ್ನೂ, ಕೆಳೆಯರನ್ನೂ, ರಾಜ್ಯವನ್ನೂ, ಸ್ವರ್ಗ ಮೋಕ್ಷಗಳನ್ನೂ, ಇಷ್ಟೇಕೆ ? ಏನನ್ನು ಬಯಸುತ್ತಾನೋ, ಅವೆಲ್ಲವನ್ನೂ ಹೊಂದುತ್ತಾನೆ. ಈ ವಿಷಯದಲ್ಲಿ ಸಂದೇಹವಿಲ್ಲವು.

೬೬. ಶ್ರೀವಾಸುದೇವನನ್ನು ಪ್ರತಿಪಾದಿಸತಕ್ಕ 'ಓಂ ನಮೋ ಭಗವತೇ ನಾರಾಯಣಾಯ,' ಈ ಹನ್ನೆರಡಕ್ಷರಗಳ ಮಂತ್ರದಿಂದ ಚತುರ್ಭುಜನಾದ ಶ್ರೀಮಹಾವಿಷ್ಣುವನ್ನು ಜಪಮಾಡಿ, ಯಾವನು ತಾನೇ ಸಿದ್ಧಿಯನ್ನು (ಮುಕ್ತಿರೂಪ ಫಲವನ್ನು) ಹೊಂದಲಿಲ್ಲ. ? (ಎಲ್ಲರೂ ಹೊಂದಿಯೇ ಇರುತ್ತಾರೆ.)

ಪಿತಾಮಹೇನ ಚಾಸ್ಯೇಷ ಮಹಾಮಂತ್ರ ಉಪಾಸಿತಃ ।
ಮನುನಾ ರಾಜ್ಯಕಾಮೇನ ವೈಷ್ಣವೇನ ನೃಪಾತ್ಮಜ ॥ ೬೭ ॥

ತ್ವಮಪ್ಯೇತೇನ ಮಂತ್ರೇಣ ವಾಸುದೇವಪರೋ ಭವ ।
ಯಥಾಭಿಲಷಿತಾಮೃದ್ಧಿಂ ಕ್ಷಿಪ್ರಂ ಪ್ರಾಪ್ಸ್ಯಸಿ ಸತ್ತಮ ॥ ೬೮ ॥

ಇತ್ಯುಕ್ತ್ವಾಂತರ್ಹಿತಾಃ ಸರ್ವೇ ಮಹಾತ್ಮಾನೋ ಮುನೀಶ್ವರಾಃ ।
ವಾಸುದೇವಮನಾ ಭೂತ್ವಾ ಧ್ರುವೋಽಪಿ ತಪಸೇ ಯಯೌ ॥ ೬೯ ॥

॥ ಸೂತ ಉವಾಚ ॥

ಧ್ರುವಃ ಸರ್ವಾರ್ಥದಂ ಮಂತ್ರಂ ಜಪನ್ ಮಧುವನೇ ತಪಃ ।
ಸ ಚಕ್ರೇ ಯಮುನಾತೀರೇ ಮುನಿದಿಷ್ಟೇನ ವರ್ತ್ಮನಾ ॥ ೭೦ ॥

---

೬೭. ಎಲೈ ರಾಜಕುಮಾರನೇ! ನಿನ್ನ ಪಿತಾಮಹನೂ, ರಾಜ್ಯಾಪೇಕ್ಷಿಯೂ, ವಿಷ್ಣುಭಕ್ತನೂ ಆದ ಮನುವು ಈ ಮಂತ್ರವನ್ನೇ ಉಪಾಸನೆ ಮಾಡಿದನು.

೬೮. ಎಲೈ ಶ್ರೇಷ್ಠನಾದ ಕುಮಾರನೇ! ನೀನೂ ಈ "ಓಂ ನಮೋ ಭಗವತೇ ನಾರಾಯಣಾಯ," ಎಂಬ ಮಂತ್ರದಿಂದ ಶ್ರೀವಾಸುದೇವನನ್ನು ಚಿಂತಿಸುವ ಮನವುಳ್ಳವನಾಗು ; ನೀನು ಕೋರಿದಂತಹ (ಅಭಿವೃದ್ಧಿಯನ್ನು, ಏಳಿಗೆಯನ್ನು) ಸಂಪತ್ತನ್ನು ಬೇಗನೆ ಹೊಂದುವವನಾಗುವೆ."

೬೯. ಮಹಾತ್ಮರಾದ ಆ ಮುನೀಶ್ವರರೆಲ್ಲರೂ ಇಂತು ಹೇಳಿ, ಕಣ್ಮರೆಯಾದರು. ಇತ್ತ ಧ್ರುವನು ಶ್ರೀವಾಸುದೇವನನ್ನೇ ಧ್ಯಾನಿಸುತ್ತಾ, ತಪಸ್ಸಿಗೆ ತೆರಳಿದನು.

ಸೂತರು ಹೇಳುತ್ತಾರೆ :—

೭೦. "ಯಮುನಾನದಿಯ ತಡಿಯಲ್ಲಿ ಮಧುವನದಲ್ಲಿ ಧ್ರುವನು ಅಪೇಕ್ಷಿಸುವುದೆಲ್ಲವನ್ನೂ ಕೊಡುವ "ಓಂ ನಮೋ ಭಗವತೇ ನಾರಾಯಣಾಯ," ಎಂಬ ದ್ವಾದಶಾಕ್ಷರ ಮಂತ್ರವನ್ನು ಆ ಮುನೀಶ್ವರರು ತೋರುಗೊಟ್ಟ ಮಾರ್ಗದಿಂದ ಜಪಿಸುತ್ತಾ, ತಪಸ್ಸನ್ನೆಸಗಿದನು.

ಶ್ರದ್ಧಾನ್ವಿತೇನ ಜಪತಾ ಚ ತಪಃ ಪ್ರಭಾವಾತ್ ।
ಸಾಕ್ಷಾದಿವಾಬ್ಜನಯನಂ ದದೃಶೇ ಹೃದೀಶಮ್ ।
ದಿವ್ಯಾಕೃತಿಂ ಸಪದಿ ತೇನ ತತಃ ಸ ಏವ
ಹರ್ಷಾತ್ಪುನಃ ಪ್ರಜಜಾಪ ನೃಪಾತ್ಮಜಾತಃ ॥ ೭೧ ॥

ಕ್ಷುತ್ತೃಷ್ಣವರ್ಷ ಘನವಾತ ಮಹೋಷ್ಣತಾದಿ
ಶಾರೀರದುಃಖಕುಲಮಸ್ಯ ನ ಕಿಂಚನಾಭೂತ್ ।
ಮಗ್ನೇ ಮನಸ್ಯನುಪಮೇಯಸುಖಾಂಬುರಾಶೌ
ರಾಜ್ಞಃ ಶಿಶುರ್ನ ಚ ವಿವೇದ ಶರೀರ ವಾರ್ತಾಮ್ ॥ ೭೨ ॥

ವಿಘ್ನಾಕ್ಷ ತಸ್ಯ ಕಿಲ ದೇವ ವಿಶೇಷ ಸೃಷ್ಟಾಃ ।
ಬಾಲಸ್ಯ ತೀವ್ರ ತಪಸೋ ವಿಫಲಾ ಬಭೂವುಃ ॥ ೭೩ ॥

---

೭೧. ಶ್ರದ್ಧೆಯಿಂದ ಕೂಡಿದವನಾಗಿ ಜಪಿಸುತ್ತಲಿದ್ದ ಆ ಧ್ರುವ ಬಾಲನು ತಪದ ಮಹಿಮೆಯಿಂದ ಸಾಕ್ಷಾತ್ಪುಂಡರೀಕಾಕ್ಷನಂತೆ ಸುಂದರವಾದ ಆಕೃತಿಯು, ತನ್ನ ಹೃದಯದಲ್ಲಿ ಬಿಂಬಭೂತನಾಗಿ ಒಡೆಯನಾಗಿರುವ, ಶ್ರೀ ಹರಿಯನ್ನು ತತ್ಕ್ಷಣದಲ್ಲಿ ಕಂಡನು. ಆ ಬಳಿಕ ಅವನೇ ಮತ್ತೆ ಸಂತಸದಿಂದ ರಾಜಕುಮಾರನಾಗಿಯೇ ಜಪ ಮಾಡಿದನು.

೭೨. ಇಂತು ತಪವೆಸಗುತ್ತಲಿದ್ದ ಆ ಬಾಲಕನಿಗೆ ಹಸಿವು, ಬಾಯಾರಿಕೆ, ಮಳೆ, ಮೋಡ, ಗಾಳಿ, ಬಿಸಿಲು— ಇವೇ ಮೊದಲಾದುವುಗಳ ಒಡಲ ಕ್ಲೇಶ ಸಮುದಾಯವು (ಸ್ವಲ್ಪವೂ) ಯಾವುದೂ ಉಂಟಾಗಲಿಲ್ಲ. ಹೋಲಿಕೆಯಿಲ್ಲದ, ಸುಖದ ಕಡಲಾದ ಮನದಲ್ಲಿ ಮುಳುಗಿದ ಆ ರಾಜಕುಮಾರನು ತನ್ನ ಒಡಲ ಸುದ್ದಿಯನ್ನೇ ಅರಿಯದವನಾದನು.

೭೩. ಇಂತಹ ಕಠಿನವಾದ ತಪವನ್ನೆಸಗುತ್ತಲಿದ್ದ ಆ ಹುಡುಗನಿಗೆ ದೇವತೆಗಳು ಮಾಡಿದ ಅಡ್ಡಿ ಎಲ್ಲವೂ ನಿಷ್ಫಲಗಳಾದುವು.

ಶೀತಾತಪಾದಿರಿವ ವಿಷ್ಣುಮಯಂ ಮುನಿಂ ಹಿ
ಸ್ವಾಪ್ರದೇಶಿಕಾ ನ ಖಲು ಧರ್ಷಯಿತುಂ ಕ್ಷಮಂತೇ ।
ಅಥ ಭಕ್ತಜನಪ್ರಿಯಃ ಪ್ರಭುಃ
ಶಿಶುನಾ ಧ್ಯಾನ ಬಲೇನ ತೋಷಿತಃ ॥ ೭೪ ॥

ವರದಃ ಪತಗೇಂದ್ರ ವಾಹನೋ
ಹರಿರಾಗಾತ್ಸ್ವಜನಂ ತಮೀಕ್ಷಿತುಮ್ ।
ಮಣಿಪಿಂಡಾರಕ ಮೌಲಿರಾಜಿತೋ
ವಿಲಸದ್ರತ್ನ ಮಹಾಘನಚ್ಛವಿಃ ॥ ೭೫ ॥

---

೭೪. ವಿಷ್ಣುವೇ ತನಗೆ ಸ್ವಾಮಿಯೆಂದು, ಸದಾ ಶ್ರೀ ಮಹಾವಿಷ್ಣುವನ್ನೇ ಧ್ಯಾನಗೆಯ್ಯುತ್ತಾ, ವಿಷ್ಣ್ವಾತ್ಮಕನಾದ, ಜ್ಞಾನಿಯಾದ ತಪಸ್ವಿಯನ್ನು ತಣ್ಪು ಬಿಸುಪುಗಳಂತೆಯೇ, ಆ ಸ್ಥಳದ ಸಂಬಂಧವಾದ ಯಾವ ಬಾಧೆಯೂ ಬಾಧಿಸಲು ಸಮರ್ಥಗಳಾಗಲಿಲ್ಲವು; ತರುವಾಯ ಭಕ್ತಜನರಿಗೆ ಬೇಕಾದವನಾದ, ಸರ್ವಸಮರ್ಥನಾದ ಶ್ರೀ ಮಹಾವಿಷ್ಣುವು ಈ ಬಾಲಕನಿಂದ ನಿರತಿಶಯಧ್ಯಾನದಿಂದ ಸಂತೋಷಗೊಳಿಸಲ್ಪಟ್ಟನು.

೭೫. ಭಕ್ತರ ಇಷ್ಟಾರ್ಥವನ್ನು ಕೊಡುವವನೂ, ಪಕ್ಷಿರಾಜನಾದ ಗರುಡನೇ ವಾಹನನಾಗಿಯುಳ್ಳವನೂ ಆದ ಶ್ರೀ ಹರಿಯು ರತ್ನಸಮುದಾಯದ ಮುಕುಟದಿಂದ ಪ್ರಕಾಶಿಸುವವನಾಗಿಯೂ, ಪ್ರಕಾಶಿಸುವ ರತ್ನಗಳ ಮತ್ತು ನೀಲಮೇಘದ ಕಾಂತಿಯುಳ್ಳವನೂ ಆಗಿ, ತನ್ನ ಭಕ್ತಜನನಾದ ಧ್ರುವಕುಮಾರನನ್ನು ನೋಡಲು ತನ್ನ ಪೂರ್ಣರೂಪಿನಿಂದಲೇ ಬಂದನು.

ಸ ಬಭಾವುದಯಾದ್ರಿ ಮತ್ಸರಾ
ದ್ಧೃತಬಾಲಾರ್ಕ ಇವಾಸಿತಾಚಲಃ ।
ಸ ರಾಜಸೂನುಂ ತಪಸಿ ಸ್ಥಿತಂ ತಂ
ಧ್ರುವಂ ಧ್ರುವಸ್ನಿಗ್ಧದೃಗಿತ್ಯುವಾಚ
ದಂತಾಂಶುಸಂಘೈರಮಿತಪ್ರವಾಹೈಃ
ಪ್ರಕ್ಷಾಲಯನ್ ರೇಣುಮಿವಾಸ್ಯ ಗಾತ್ರೇ ।
ವರಂ ವರಂ ವತ್ಸ ವೃಣೀಷ್ವ ಯಸ್ತೇ
ಮನೋಗತಸ್ತ್ವತ್ತಪಸಾಽಸ್ಮಿ ತುಷ್ಟಃ ॥ ೭೬ ॥

ಧ್ಯಾನೇನ ತೇ ಚೇಂದ್ರಿಯನಿಗ್ರಹೇಣ
ಮನೋ ನಿರೋಧೇನ ಚ ದುಷ್ಕರೇಣ ।
ಶೃಣ್ವನ್ ವಚಸ್ತತ್ಸಕಲಂ ಗಭೀರ
ಮುನ್ಮೀಲಿತಾಕ್ಷಃ ಸಹಸಾ ದದರ್ಶ ॥ ೭೭ ॥

---

೭೬. ಆ ಶ್ರೀಹರಿಯು ಉದಯಪರ್ವತದ ಮೇಲೆ ತನಗಿರುವ ಹೊಟ್ಟೆಯ ಕಿಚ್ಚಿನಿಂದ ಬಾಲಸೂರ್ಯನನ್ನು ತಾಳಿದ ಕಾಡಿಗೆಯ ಪರ್ವತದಂತೆ (ಅಂಜನಾಚಲದಂತೆ) ಪ್ರಕಾಶಿಸಿದನು. ಅವನು ತನ್ನ ತಪಸ್ಸಿನಲ್ಲಿ ನಿಂದ ಆ ಧ್ರುವಬಾಲಕನನ್ನು ಕುರಿತು, ಸ್ಥಿರವಾದ, ಸ್ನೇಹಪೂರ್ಣವಾದ ದೃಷ್ಟಿಯುಳ್ಳವನಾಗಿ ಆ ಶ್ರೀಹರಿಯು ಈ ಬಾಲಕನ ಒಡಲಲ್ಲಿರುವ ಧೂಳಿಯನ್ನು ಹಲ್ಲುಗಳ ಕದಿರ್ಗಳೆಂಬ ಹೆಸರಿನ ಅಪಾರವಾದ ಹೊನಲಿಂದ ತೊಳೆಯುವನಂತೆ, ಇಂತು ಹೇಳಿದನು :—

"ಅಯ್ಯಾ ಮಗುವೇ ! ನಿನ್ನ ಮನದಲ್ಲಿರುವ, ಉತ್ತಮವಾದ ಯಾವ ಬಯಕೆ ಇರುವುದೋ, ಅದನ್ನು ಕೇಳು; ನಿನ್ನ ತಪಸ್ಸಿನಿಂದ ಸಂತಸಗೊಂಡಿರುತ್ತೇನೆ."

೭೭. ಆ ಪರಮಾತ್ಮನ ಚಿಂತನದಿಂದಲೂ, ಸಕಲೇಂದ್ರಿಯಗಳ ಜಯದಿಂದಲೂ, ಮಾಡಲಶಕ್ಯವಾದ ಮನಸ್ಸಿನ ಇತರ ವಿಷಯಗಳ ತಡೆಯಿಂದಲೂ, ಆ ಬಾಲಕನು ಶ್ರೀಹರಿಯ, ಗಂಭೀರವಾದ ಆ ಮಾತುಗಳೆಲ್ಲವನ್ನೂ ಕೇಳುತ್ತಾ, ಕಣ್ಣುಗಳನ್ನು ತೆರೆದವನಾಗಿ, ಇದ್ದಕ್ಕಿದ್ದಹಾಗೆಯೇ, ಶ್ರೀಹರಿಯ ರೂಪವನ್ನು ಕಂಡನು.

ಸ್ವೇ ಚಿಂತ್ಯಮಾನಂ ತ್ರಿದಶೇಶ ಮೂರ್ತಿಂ
ಪುರಃ ಸ್ಥಿತಂ ಬ್ರಹ್ಮ ಚತುರ್ಭುಜಂ ಸಃ ।
ದೃಷ್ಟ್ವಾ ಕ್ಷಣಂ ರಾಜಸುತಃ ಸುಪೂಜ್ಯಂ
ಪುತ್ರಸ್ತ್ರಯೀಶಂ ಕಿಮಿಹ ಬ್ರವೀಮಿ ॥ ೭೮ ॥

ಕಿಂ ವಾ ಕರೋಮೀತಿ ಸಸಂಭ್ರಮಃ ಸ ತು
ನ ಚಾಬ್ರವೀತ್ ಕಿಂಚನ ನೋ ಚಕಾರ ।
ಹರ್ಷಾಶ್ರುಪೂರ್ಣಃ ಪುಲಕಾಚಿತಾಂಗ-
ಸ್ತ್ರಿಲೋಕನಾಥೇತಿ ವದನ್ನಥೋಚ್ಚೈಃ ॥ ೭೯ ॥

ದಂಡಪ್ರಣಾಮೋಽಥ ಪಪಾತ ಭೂಮೌ
ಪ್ರವೇಪಮಾನಭ್ರೂ ಹರೇಃ ಪುರಃ ಸ ಹಿ ।
ದಂಡವತ್ಪ್ರಣಿಪತ್ಯಾಥ
ಪರಿತಃ ಪರಿಲುಂಠ್ಯ ಚ ॥ ೮೦ ॥

೭೮-೮೧. ತನ್ನಲ್ಲಿ ಧ್ಯಾನಮಾಡುತ್ತಲಿದ್ದ ಆಕಾರವನ್ನು ತಾಳಿ, ಇದಿರಿನಲ್ಲಿ ನಿಂತಿದ್ದ, ನಾಲ್ಕು ತೋಳುಗಳುಳ್ಳ, ಪೂರ್ಣಗುಣನಾದ, ಅತ್ಯಂತ ಪೂಜ್ಯವಾದ, ವೇದಗಳೊಡೆಯನಾದ ಪರಬ್ರಹ್ಮನನ್ನು ರಾಜಕುಮಾರನು ಒಂದು ಚಣಕಾಲ ನೋಡಿ, "ಬಾಲಕನಾದ ನಾನು ಇಲ್ಲಿ ಏನನ್ನು ಹೇಳಲಿ ? ಏನನ್ನು ಮಾಡಲಿ ?" ಎಂದು ಸಂಭ್ರಮದೊಡಗೂಡಿದವನಾಗಿ, ಏನನ್ನೂ ಹೇಳಲಿಲ್ಲ; ಮತ್ತು ಮಾಡಲಿಲ್ಲ. ಆನಂದಬಾಷ್ಪಗಳಿಂದ ತುಂಬಿದ ಕಣ್ಣುಳ್ಳವನೂ, ರೋಮಾಂಚಿತಗಾತ್ರನೂ ಆಗಿ ತರುವಾಯ 'ಮೂರು ಲೋಕಗಳೊಡೆಯನೇ !' ಎಂದು ಗಟ್ಟಿಯಾಗಿ ಹೇಳುತ್ತಾ, ಆ ಶ್ರೀಹರಿಯ ಮುಂಭಾಗದಲ್ಲಿ ದಂಡಪ್ರಣಾಮ ಮಾಡುತ್ತಾ, ಕಂಪಿಸುತ್ತಲಿರುವ ಹುಬ್ಬುಗಳುಳ್ಳವನಾಗಿ, ನೆಲದಲ್ಲಿ ಬಿದ್ದನು. ದಂಡದಂತೆ ನಮಸ್ಕರಿಸಿ, ಅನಂತರವಲ್ಲಿ ಸುತ್ತಲೂ ಹೊರಳಾಡಿ, ಆ ಜಗದ್ಗುರುವಾದ ಶ್ರೀಹರಿಯನ್ನು ಬಹು ಹೊತ್ತು ನೋಡಿ,

ರುರೋದ ಹರ್ಷೇಣ ಚಿರಂ ದೃಷ್ಟ್ವಾ ತಂ ಜಗತೋ ಗುರು ।
ನಾರದೇನ ಸನಂದೇನ ಸನಕೇನ ಚ ಸಂಸ್ತುತಮ್ ।
ಅನ್ಯೈಃ ಸನತ್ಕುಮಾರಾದ್ಯೈರ್ಯೋಗಿಭಿರ್ಯೋಗಿನಾಂ ವರಮ್ ॥ ೮೧ ॥

ಕಾರುಣ್ಯ ಬಾಷ್ಪ ನೀರಾದ್ರ್ರಂ ಪುಂಡರೀಕವಿಲೋಚನಮ್ ।
ಧ್ರುವಮುತ್ಥಾಪಯಾಂ ಚಕ್ರೇ ಚಕ್ರೀ ಧೃತ್ವಾ ಕರೇಣ ತಮ್ ॥ ೮೨ ॥

ಹರಿಸ್ತು ಪರಿಪಸ್ಪರ್ಶ ತದಂಗಂ ಧೂಲಿಧೂಸರಮ್ ।
ಕರಾಭ್ಯಾಂ ಕೋಮಲಾಭ್ಯಾಂ ಸ ಪರಿಷ್ವಜ್ಯಾಹ ತಂ ಹರಿಃ ॥ ೮೩ ॥

ವರಂ ವರಯ ಭೋ ಬಾಲ ಯತ್ತೇ ಮನಸಿ ವರ್ತತೇ ।
ತದ್ದದಾಮಿ ನ ಸಂದೇಹೋ ನಾದೇಯಂ ವಿದ್ಯತೇ ತವ ॥ ೮೪ ॥

ಸಂತಸದಿಂದ ಕಣ್ಣೀರಿಕ್ಕಿದನು. ಆ ಶ್ರೀಹರಿಯಾದರೋ ನಾರದರು, ಸನಂದರು, ಸನಕರು ಮತ್ತು ಇತರರಾದ ಸನತ್ಕುಮಾರರು ಇವರೇ ಮೊದಲಾದ ಯೋಗಿಗಳಿಂದ ಕೇಳಲ್ಪಟ್ಟವನೂ, ಯೋಗಿಶ್ರೇಷ್ಠನೂ ಆದವನು.

೮೨. ಸುದರ್ಶನ ಚಕ್ರಧರನಾದ ಶ್ರೀ ಹರಿಯು ದಯೆಯ ಕಣ್ಣೀರಿನಿಂದ ನೆನೆದ ತಾವರೆಗಣ್ಣುಳ್ಳ ಆ ಧ್ರುವಕುಮಾರನನ್ನು ಕೈಯಿಂದ ಹಿಡಿದು ಮೇಲಕ್ಕೆ ಎತ್ತಿದನು.

೮೩. ಶ್ರೀ ಹರಿಯಾದರೋ ತನ್ನ ಕೋಮಲಗಳಾದ ಕೈಗಳಿಂದ ಹುಡಿಯಿಂದ ಧೂಸರವಾದ ಅವನೊಡಲನ್ನು ಎಲ್ಲೆಡೆಗಳಲ್ಲಿ ಸವರಿದನು. ಬಳಿಕ ಅವನನ್ನು ಹರಿಯು ಆಲಿಂಗಿಸಿ, ಇಂತು ನುಡಿದನು.

೮೪. "ಎಲೈ ಬಾಲಕನೇ! ನಿನ್ನ ಮನದಲ್ಲಿ ಯಾವುದನ್ನೆಳಸಿರುವೆಯೋ, ಆ ವರವನ್ನು ಕೇಳಿಕೋ; ಅದನ್ನು ನೀಡುವೆನು; ಈ ವಿಷಯದಲ್ಲಿ ಸಂಶಯವಿಲ್ಲವು, ನಿನಗೆ ಕೊಡಲಾಗದುದು ಯಾವುದೂ ಇಲ್ಲವು ಎಂದು."

ತತೋ ವರಂ ರಾಜಶಿಶುರ್ಯಯಾಚೇ
ವಿಷ್ಣುಂ ವರಂ ತೇ ಸ್ತವಶಕ್ತಿಮೇವ ।
ತಂ ಮೂರ್ತಿವಿಜ್ಞಾನನಿಭೇನ ದೇವಃ
ಪಸ್ಪರ್ಶ ಶಂಖೇನ ಮುಖೇsಮಲೇನ ॥ ೮೫ ॥

ಅಥ ಸುರಮುನಿದತ್ತ ಜ್ಞಾನ ಚಂದ್ರೇಣ ಸಮ್ಯಗ್-
ವಿಮಲಿತಮಿವ ಚಿತ್ತಂ ಪೂರ್ಣಮೇವ ಧ್ರುವಸ್ಯ ।
ತ್ರಿಭುವನಗುರುಶಂಖಸ್ಪರ್ಶಜಜ್ಞಾನಭಾನಾ-
ವುದಯತಿ ಹೃದಯಾಂತಃ ಸಾಧು ತುಷ್ಟಾವ ಹೃಷ್ಟಃ ॥ ೮೬ ॥

---

೮೫. ಅನಂತರದಲ್ಲಿ ರಾಜಕುಮಾರನು ಶ್ರೀಮಹಾವಿಷ್ಣುವನ್ನು, “ದೇವ! ನಿನ್ನನ್ನು ಸ್ತುತಿಸುವ ಸಾಮರ್ಥ್ಯವನ್ನು ಕೊಡು,” ಎಂಬೀವರವನ್ನು ಬೇಡಿದನು. ಆಗ ಕ್ರೀಡಾದಿಗುಣವಿಶಿಷ್ಟನಾದ ಶ್ರೀ ಹರಿಯು ಆಕಾರ ತಾಳಿದ ವಿಜ್ಞಾನದಂತಿರುವ ನಿರ್ಮಲವಾದ ಶಂಖದಿಂದ ಈ ಬಾಲಕನನ್ನು ಮೊಗದಲ್ಲಿ ಮುಟ್ಟಿದನು.

೮೬. ಅನಂತರದಲ್ಲಿ ದೇವರ್ಷಿಗಳಾದ ಸಪ್ತರ್ಷಿಗಳಿಂದುಪದಿಷ್ಟವಾದ ಜ್ಞಾನ ಚಂದ್ರನಿಂದ ಪರಿಶುದ್ಧವಾದಂತಿದ್ದ ಧ್ರುವನ ಚಿತ್ತವು ಮೊದಲೇ ಪೂರ್ಣವಾಗಿದ್ದಾಗಿಯೂ, ಮೂಲೋಕಕ್ಕೇ ಗುರುವಾದ ಶ್ರೀಮಹಾವಿಷ್ಣುವಿನ ಶಂಖಪ್ರಾಂತದ ಎಂದರೆ ವಿದ್ಯಾಕೋಶದ ಸ್ಪರ್ಶದಿಂದುಂಟಾದ ಜ್ಞಾನವೆಂಬ ಭಾಸ್ಕರನು ಹೃದಯದೊಳಭಾಗದಲ್ಲಿ ಉದಯಿಸಲು, ಕಡುಸಂತಸದಿಂದ ಚೆನ್ನಾಗಿ ಸ್ತುತಿಸಿದನು.

॥ ಧ್ರುವ ಉವಾಚ ॥

ಅಖಿಲಮುನಿಜನ ನಿವಹ ನಮಿತ ಚರಣಃ । ಖರಕದನಕರಃ । ಸಬಲಚರಿತಃ । ದೇವಾರಾಧಿತಪಾದಜಲಃ । ಸಜಲ ಜಲಧರ-ಶ್ಯಾಮಶಮಿತಃ । ಸೌಭಪತಿಮಾಲ್ಯಧಾಮಾ । ಅಭಿರಾಮರಾಮಾತಿ-ವಿನಯ ಕೃತನವರಸರಸಾಪಹೃತೇಂದ್ರಿಯಃ ಸುರರಮಣೀ ವಿಹಿತಾಂತಃ-ಕರಣಾನಂದಃ । ಅನಾದಿ ನಿಧನಃ ಅಧನ ನಿಜಾಧಿಜ ಮಿತ್ರೋ-ದ್ಧರಣಧೀರಃ । ಅವಧೀರಿತ ಸುರನಾಥ ನಾಥಿತ ವಿಪಕ್ಷ ಪಕ್ಷಃ । ಯಕ್ಷರಾಜ ಬಿಲಪ್ರವೇಶಾಪಹೃತಸ್ಯಮಂತಕಾಪಮಾರ್ಜಿತ-ನಿಜಾಪವಾದಃ ದೂರೀಕೃತ ತ್ರೈಲೋಕ್ಯಭಾರಃ । ದ್ವಾರಕಾವಾಸ-ನಿರತಃ । ಸ್ವರಿತ ವೇಣುವಾದನಶ್ರವಣಾಮೃತಪ್ರಕಟಿತಾತೀಂದ್ರಿಯ-

---

ಧ್ರುವನು ಹೇಳುತ್ತಾನೆ.

'ಸಕಲರಾದ ಜ್ಞಾನಿಜನರ ತಂಡದಿಂದೆರಗಿದವನು, ಖರನೆಂಬ ಅಸುರನೊಡನೆ ಹೋರಾಡಿದ ಕೈಗಳುಳ್ಳವನು, ಸತ್ತ್ವಯುತವಾದ ನಡತೆಯುಳ್ಳವನು, ದೇವತೆಗಳಿಂದ ಸೇವಿತವಾದ ಪಾದೋದಕವುಳ್ಳವನು, ನೀರಿನಿಂದ ಕೂಡಿದ ಮೇಘದ ಶ್ಯಾಮವರ್ಣದಂತೆ ಶಾಂತವಾದವನು, ಸೌಭ ನಗರಾಧಿಪತಿಯಾದ ಸಾಲ್ವನಿತ್ತ ಮಾಲೆಗೆ ಆಶ್ರಯನಾದವನು, ಮನೋಹರವಾದ ಸುಂದರಿಯರ ಅತಿಯಾದ ನಮ್ರತೆಯಿಂದುಂಟಾದ ಶೃಂಗಾರಾದಿ ನವರಸಗಳಿಂದ ಸೆಳೆಯಲ್ಪಟ್ಟ ಇಂದ್ರಿಯಗಳುಳ್ಳವನಾಗಿ, ದೇವತಾಸ್ತ್ರೀಯರಿಂದುಂಟುಮಾಡಲ್ಪಟ್ಟ ಮಾನಸಾನಂದವುಳ್ಳವನು, ಉತ್ಪತ್ತಿ ನಾಶರಹಿತನು, ನಿರ್ಧನನಾದ, ಮನೋವ್ಯಥೆಯಿಂದ ಕೂಡಿದ ಕುಚೇಲನೆಂಬ ಕೆಳೆಯನನ್ನುದ್ಧರಿಸಿದ ಧೀರನು, ದೇವೇಂದ್ರನ ಪ್ರಾರ್ಥನೆಯಂತೆ ಶತ್ರುಗಳ ಗುಂಪಾದ, ಅಸುರರ ತಂಡವನ್ನು ತಿರಸ್ಕರಿಸಿದವನು, ಕರಡಿಗಳೊಡೆಯನಾದ ಜಾಂಬವಂತನ ಗುಹೆಯನ್ನು ಹೊಕ್ಕು ತಂದ ಸ್ಯಮಂತಕಮಣಿಯಿಂದ ತನಗೆ ಬಂದಿದ್ದ ಕೆಟ್ಟಹೆಸರನ್ನು ಹೋಗಲಾಡಿಸಿಕೊಂಡವನು, ಮೂರು ಲೋಕದ ಹೊರೆಯನ್ನು ದುಷ್ಟನಿಗ್ರಹದಿಂದಿಳುಹಿದವನು, ದ್ವಾರಕೆಯ ವಾಸಸ್ಥಾನದಲ್ಲಿ ಆಸಕ್ತನು, ಸ್ವರಯುಕ್ತವಾದ ಕೊಳಲನ್ನೂದುವುದರಿಂದ ಕೇಳುವವರ ಕಿವಿಗಳಿಗೆ ಆನಂದವನ್ನುಂಟುಮಾಡುವುದರಿಂದ, ಪ್ರಕಟಿಸಿದ

ಜ್ಞಾನಃ । ಯಮುನಾತಟಚರಃ । ದ್ವಿಜಧೇನು ಮೃಗಗಣೈಸ್ತ್ಯಕ್ತ-
ನಿಜ ನಿಜಾಹಾರಃ । ಸಂಸಾರದುಸ್ತರಪಾರಾವಾರ ಸಮುತ್ತರಣಾಂಘ್ರಿ-
ಪೋತಃ ಸ್ವಪ್ರತಾಪಾನಲ ಹುತ ಕಾಲಯುವನಃ । ವನಮಾಲಾಧರ-
ವರ ಮಣಿ ಕುಂಡಲಾಲಂಕೃತ ಶ್ರವಣಃ । ನಾನಾಪ್ರಸಿದ್ಧಾಭಿಧಾನಃ ॥
ನಿಗಮ ವಿಬುಧ ಮುನಿಜನ ವಚನ ಮನೋ ಚರಃ ।
ಕನಕ ವಿಶಂಗ ಕೌಶೇಯವಾಸೋ ಭಗವಾನ್ ಭೃಗುಪದ ಕೌಸ್ತುಭ-
ವಿಭೂಷಿತೋರಃ ಸ್ಥಲಃ ॥ ಸ್ವದಯಿತಾಕ್ರೂರ ನಿಜ ಜನನೀ—

ಇಂದ್ರಿಯಗಳಿಗೆ ಗೋಚರವಾದ ಜ್ಞಾನವುಳ್ಳವನು, ಜಮುನೆಯ ತಡಿಯಲ್ಲಿ ಸಂಚರಿಸುವವನು, ಬ್ರಾಹ್ಮಣರು, ಹಕ್ಕಿಗಳು, ಹಸುಗಳು, ಮೃಗಗಳು–ಇವುಗಳ ತಂಡದಿಂದ ಬಿಡಲ್ಪಟ್ಟ ತಮ್ಮ ತಮ್ಮ ಆಹಾರವುಳ್ಳವನು, ದಾಟಲಾಗದ ಸಂಸಾರವೆಂಬ ಸಮುದ್ರವನ್ನು ದಾಟಲು ನಾವೆಯಾದವನು, ತನ್ನ ಪ್ರತಾಪಾಗ್ನಿಯಲ್ಲಿ ಹೋಮ ಮಾಡಿದ ಕಾಲಯವನನುಳ್ಳವನು (ಕಾಲಯವನನನ್ನು ಸಂಹರಿಸಿದವನು), ವನಮಾಲೆಯನ್ನು ಕತ್ತಿನಲ್ಲಿ ಧರಿಸಿದವನು, ರನ್ನದೋಲೆಯಿಂದಲಂಕರಿಸಿದ ಕಿವಿಗಳುಳ್ಳವನು, ಅನೇಕವಾದ ನಾರಾಯಣನೇ ಮೊದಲಾದ, ಲೋಕಶಾಸ್ತ್ರಗಳಲ್ಲಿ ಪ್ರಸಿದ್ಧವಾದ ಹೆಸರುಳ್ಳವನು, ವೇದಾದಿಶಾಸ್ತ್ರಗಳು, ದೇವತೆಗಳು, ಜ್ಞಾನಿಗಳಾದ ತಾಪಸರು–ಇವರ ನುಡಿಗಳಲ್ಲಿ ಚರಿಸುವವನು, ಸುವರ್ಣದಂತೆ ಹೊಂಬಣ್ಣದ ಪಟ್ಟೆವಸ್ತ್ರವುಳ್ಳವನು, ಅವ್ಯಾಹತ ಷಡ್ಗುಣೈಶ್ವರ್ಯಪೂರ್ಣನು, ಭೃಗುಮುನಿಯ ಅಡಿಯ ಗುರುತಿನಿಂದಲೂ, ಕೌಸ್ತುಭವೆಂಬ ರನ್ನದಿಂದಲೂ ಅಲಂಕರಿಸಿದ ಎದೆಯುಳ್ಳವನು, ತನಗೆ ಪ್ರಿಯನಾದ ಅಕ್ರೂರನು, ತನ್ನ ತಾಯಿಯಾದ ದೇವಕಿಯು ಮತ್ತು ಗೋಕುಲವು–ಇವನ್ನು

**ಗೋಕುಲ ಪಾಲಕ ಚತುರ್ಭುಜ ಶಂಖ ಚಕ್ರ ಗದಾಪದ್ಮ-
ತುಲಸೀ ನವದಲ ದಾಮಹಾರಕೇಯೂರ ಕಟಕ ಮುಕುಟಾಲಂ-
ಕೃತಃ । ಸನಂದನಾದಿ ಭಾಗವತೋಪಾಸಿತ ವಿಶ್ವರೂಪಃ ।
ಪುರಾಣಪುರುಷೋತ್ತಮಃ ಉತ್ತಮಶ್ಲೋಕಃ ಲೋಕಾವಾಸೋ-
ವಾಸುದೇವಃ । ಶ್ರೀ ದೇವಕೀ ಜಠರ ಸಂಭೂತಃ । ಭೂತಪತಿ
ವಿರಂಚಿ ನತ ಚರಣಾರವಿಂದಃ ವೃಂದಾವನ ಕೃತಕೇಲಿ ಗೋಪಿಕಾಜನ-
ಶ್ರಮಾಪಹಃ ॥ ಸತತಂ ಸಂಪಾದಿತ ಸುಜನ ಕಾಮಃ । ಕುಂದನಿಭ-
ಶಂಖಧರಮಿಂದುನಿಭವಕ್ತ್ರಂ ಸುಂದರ ಸುದರ್ಶನ-
ಮುದಾರತರಹಾಸಂ ವಿದ್ವಜ್ಜನವಂದಿತಮಿದಂ ತೇ
ರೂಪಮತಿಹೃದ್ಯಮಖಿಲೇಶ್ವರ ನತೋಽಸ್ಮಿ ॥**

ರಕ್ಷಿಸಿದ ನಾಲ್ಕು ತೋಳುಗಳು, ಶಂಖ, ಚಕ್ರ, ಗದಾ, ಪದ್ಮಗಳು, ತುಳಸಿಯ ಹೊಸ ದಳಗಳ ದಂಡೆಹಾರ, ಅಂಗದ, ಕಡಗ, ಕಿರೀಟ ಇವುಗಳಿಂದ ಅಲಂಕೃತನು, ಸನಂದನನೇ ಮೊದಲಾದ ಭಗವದ್ಭಕ್ತರಿಂದ ಧ್ಯಾನಮಾಡಲ್ಪಟ್ಟ ವಿಶ್ವರೂಪವುಳ್ಳವನು, ಅನಾದಿಯು, ಸರ್ವದೇಹಾಂತರ್ವರ್ತಿಯು, ಕ್ಷರಾಕ್ಷರರಿಂದ ಉತ್ತಮನಾದುದರಿಂದ ಪುರುಷೋತ್ತಮನು, ಲೋಕೋತ್ತರವಾದ ಕೀರ್ತಿಯುಳ್ಳವನು, ಚತುರ್ದಶ ಭುವನಗಳೂ ವಾಸಸ್ಥಾನವಾಗಿಯುಳ್ಳವನು, ಆದುದರಿಂದ ವಾಸುದೇವನೆಂಬ ಹೆಸರುಳ್ಳವನು, ಶ್ರೀದೇವಕೀದೇವಿಯ ಗರ್ಭದಿಂದ ಜನಿಸಿದವನು, (ಎಂದರೆ ಅಜ್ಞರಿಗೆ ಅಂತು ಕಂಡವನು), ಸಕಲ ಪ್ರಾಣಿಗಳಿಗೂ ಒಡೆಯನಾದವನು, ಚತುರ್ಮುಖನಿಂದ ನಮಸ್ಕರಿಸಲ್ಪಟ್ಟ ಪಾದಕಮಲವುಳ್ಳವನು, ವೃಂದಾವನ ಪ್ರಾಂತದಲ್ಲಿ ಆಡಿದ ಆಟದಿಂದ ಗೋಪಿಕಾಸ್ತ್ರೀಯರ ಆಯಾಸವನ್ನು ಕಳೆದವನು, ಯಾವಾಗಲೂ ಸತ್ಪುರುಷರ ಇಷ್ಟಾರ್ಥವನ್ನು ಸಲ್ಲಿಸಿದವನು, ಮಲ್ಲೇಹೂವಿಗೆ ಸಮವಾದ ಶಂಖವನ್ನು ಧರಿಸಿದುದು, ಚಂದ್ರನನ್ನು ಹೋಲುವ ಮುಖವುಳ್ಳುದು, ಬಹೂದಾರವಾದ ನಗೆಯುಳ್ಳುದು, ಜ್ಞಾನಿಗಳ ತಂಡದಿಂದೆರಗಲ್ಪಟ್ಟುದು ಆದ ಈ ನಿನ್ನ ರೂಪವು ಬಹು ಮನೋಹರವಾಗಿರುತ್ತದೆ ; ಎಲೈ ಸರ್ವನಿಯಾಮಕನಾದ ಶ್ರೀಮಹಾವಿಷ್ಣುವೇ ! ನಿನಗೆ ಪೊಡಮಡುತ್ತೇನೆ.

ಸ್ಥಾನಾಭಿಕಾಮೀ ತಪಸಿ ಸ್ಥಿತೋಽಹಂ
ತ್ವಾಂ ದೃಷ್ಟವಾನ್ ಸಾಧುಮುನೀಂದ್ರ ಗುಹ್ಯಮ್ ।
ಕಾಚಂ ವಿಚಿನ್ವನ್ನಿವ ದಿವ್ಯರತ್ನಂ
ಸ್ವಾಮಿನ್ ಕೃತಾರ್ಥೋಽಸ್ಮಿ ವರಾನ್ನ ಯಾಚೇ ॥ ೮೭ ॥

ಅಪೂರ್ವದೃಷ್ಟೇ ತವ ಪಾದಪದ್ಮೇ
ದೃಷ್ಟ್ವಾ ದೃಢಂ ನಾಥ ನ ಹಿ ತ್ಯಜಾಮಿ ।
ಕಾಮಾನ್ನ ಯಾಚೇ ಸ ಹಿ ಕೋಽಪಿ ಮೂಢೋ
ಯಃ ಕಲ್ಪವೃಕ್ಷಾತ್ತುಷಮಾತ್ರಮಿಚ್ಛೇತ್ ॥ ೮೮ ॥

ತ್ವಾಂ ಮೋಕ್ಷಬೀಜಂ ಶರಣಂ ಪ್ರಪನ್ನಃ
ಶಕ್ನೋಮಿ ಭೋಕ್ತುಂ ನ ಬಹಿಃ ಸುಖಾನಿ ।
ರತ್ನಾಕರೇ ದೇವ ಸತಿ ಸ್ವನಾಥೇ
ವಿಭೂಷಣಂ ಸ್ವರ್ಣಮಯಂ ನ ಯುಕ್ತಮ್ ॥ ೮೯ ॥

---

೮೭. ಎಲೈ ಸ್ವಾಮಿಯೇ! ಉತ್ತಮಸ್ಥಾನವನ್ನು ಅಪೇಕ್ಷಿಸಿ ತಪದಲ್ಲಿ ನಿಂದ ನಾನು ಸತ್ಪುರುಷರಾದ ಜ್ಞಾನಿಗಳಿಗೆ ಮಾತ್ರ ಗೂಢವಾಗಿ ಕಾಣಿಸುವ ನಿನ್ನನ್ನು, ಗಾಜನ್ನು ಅರಸುವವನು ಅನರ್ಘವಾದ ರತ್ನವನ್ನು ಕಂಡಂತೆ, ಕಂಡೆನು; ಕೃತಾರ್ಥನಾಗಿದ್ದೇನೆ; ಯಾವ ವರವನ್ನೂ ಕೇಳುವುದಿಲ್ಲವು.

೮೮. ಎಲೈ ನಾಥನೇ! ಹಿಂದೆ ಎಂದೂ ನೋಡದ ನಿನ್ನ ಈ ಚರಣಕಮಲಗಳನ್ನು ಕಂಡು, ನಾನು ಇವನ್ನು ಖಂಡಿತವಾಗಿಯೂ ಬಿಡುವುದಿಲ್ಲವು; ಯಾವ ಬಯಕೆಯನ್ನೂ ಬೇಡುವುದಿಲ್ಲವು. ಯಾವನು ಕಲ್ಪವೃಕ್ಷದಿಂದ ಕೇವಲ ಹೊಟ್ಟನ್ನು ಅಪೇಕ್ಷಿಸುತ್ತಾನೆಯೋ, ಅವನೊಬ್ಬ ಅವಿವೇಕಿಯು.

೮೯. ಮುಕ್ತಿಕಾರಣನಾದ ನಿನ್ನನ್ನು ಮರೆಹೊಕ್ಕಿರುವ ನಾನು ಹೊರಗಣ ಸುಖಸಾಧನಗಳನ್ನನುಭವಿಸಲೂ (ಸಮರ್ಥನಲ್ಲ) ಅಪೇಕ್ಷಿಸುವನಾಗುವುದಿಲ್ಲವು. ಎಲೈ ಸ್ವಾಮಿಯೇ! ರನ್ನಗಳ ಗಣಿಯು ತನ್ನ ಒಡೆಯನಾಗಿರಲು, ಮಿಸುನಿಯ ಒಡವೆಯು ಯೋಗ್ಯವಲ್ಲವು.

ಅತೋ ನ ಯಾಚೇ ವರಮೀಶ ಯುಷ್ಮ-
ತ್ಪಾದಾಬ್ಜಭಕ್ತಿಃ ಸತತಂ ಮಮಾಸ್ತು ।
ಇಮಂ ವರಂ ದೇವವರ ಪ್ರಯಚ್ಛ
ಪುನಃ ಪುನಸ್ತ್ವಾಮಿದಮೇವ ಯಾಚೇ ॥ ೯೦ ॥

॥ ಸೂತ ಉವಾಚ ॥

ಇತ್ಯಾತ್ಮ ಸಂದರ್ಶನ ಲಬ್ಧ ದಿವ್ಯ
ಜ್ಞಾನಂ ಗದನ್ತಂ ಭಗವಾನ್ ಜಗಾದ ॥ ೯೧ ॥

॥ ಶ್ರೀ ಭಗವಾನುವಾಚ ॥

ಆರಾಧ್ಯ ವಿಷ್ಣುಂ ಕಿಮನೇನ ಲಬ್ಧಂ
ಮಾಭೂಜ್ಜನೇಷ್ವೀತ್ಥಮಸಾಧುವಾದಃ ।

---

೯೦. ಎಲೈ ಈಶನೇ! ಆದುದರಿಂದ ನಾನು ವರವನ್ನು ಬೇಡುವುದಿಲ್ಲವು. ನನಗೆ ಯಾವಾಗಲೂ ನಿನ್ನ ಚರಣಕಮಲಗಳಲ್ಲಿ ಭಕ್ತಿಯುಂಟಾಗಲಿ; ಎಲೈ ದೇವೋತ್ತಮನೇ! ನನಗೆ ಈ ವರವನ್ನು ನೀಡು; ನಾನು ನಿನ್ನನ್ನು ಅಡಿಗಡಿಗೆ ಈ ವರವನ್ನೇ ಬೇಡುತ್ತೇನೆ." ಎಂದು ಧ್ರುವನು ಶ್ರೀ ಹರಿಗೆ ಬಿನ್ನವಿಸಿದನು.

ಸೂತರು ಹೇಳುತ್ತಾರೆ:—

೯೧. "ಇಂತು ಸರ್ವತ್ರವ್ಯಾಪ್ತನಾದ, ಪರಮಾತ್ಮನಾದ ಶ್ರೀಮಹಾವಿಷ್ಣುವಿನ ಸಂದರ್ಶನದಿಂದ ಹುಟ್ಟಿದ ದಿವ್ಯಜ್ಞಾನವುಳ್ಳವನಾಗಿ, ಬಿನ್ನವಿಸುತ್ತಿದ್ದ ಆ ಧ್ರುವನನ್ನು ಕುರಿತು ಅವ್ಯಾಹತಷಡ್ಗುಣೈಶ್ವರ್ಯಪೂರ್ಣನಾದ ಶ್ರೀ ಹರಿಯು ಇಂತು ಹೇಳಿದನು."

ಶ್ರೀ ಭಗವಂತನು ಹೇಳುತ್ತಾನೆ:—

೯೨. "ಅಯ್ಯಾ ಧ್ರುವನೇ! ಧ್ರುವನು ಶ್ರೀ ಮಹಾವಿಷ್ಣುವನ್ನು ಪೂಜಿಸಿ ಸೇವಿಸಿದನು. ಇವನಿಂದ ಹೊಂದಲ್ಪಟ್ಟುದೇನು? (ಏನೂ ಇಲ್ಲವು). ಇಂತು ಅಯೋಗ್ಯವಾದ ಹೇಳಿಕೆಯು ಜನರಲ್ಲಿ ಉಂಟಾಗಬಾರದು. ನಿನಗೆ ಯಾವ ಸ್ಥಾನವು ಇಷ್ಟ

ಸ್ಥಾನಂ ಪರಂ ಪ್ರಾಪ್ಸ್ಯಸಿ ಯನ್ಮತಂ ತೇ
ಕಾಲೇನ ಮಾಂ ಪ್ರಾಪ್ಸ್ಯಸಿ ಶುದ್ಧಭಾವಃ ॥ ೯೨ ॥

ಆಧಾರಭೂತಃ ಸಕಲಗ್ರಹಾಣಾಂ
ಕಲ್ಪದ್ರುಮಃ ಸರ್ವಜನೈಶ್ಚ ವಂದ್ಯಃ ।
ಮಮ ಪ್ರಸಾದಾತ್ತವ ಸಾ ಚ ಮಾತಾ
ತವಾಂತಿಕೇ ಯಾ ಚ ಸುನೀತಿರಾರ್ಯಾ ॥ ೯೩ ॥

॥ ಶ್ರೀ ಸೂತ ಉವಾಚ ॥

ತಂ ಸಾಧಯಿತ್ವೇತಿ ವರೈರ್ಮುಕುಂದಃ
ಸ್ವಮಾಲಯಂ ದೃಶ್ಯವಪುರ್ಜಗಾಮ ।
ತ್ಯಕ್ತ್ವಾ ಶನೈರ್ದಿವ್ಯವಪುಃ ಸ್ವಭಕ್ತಂ
ಮುಹುಃ ಪರಾವೃತ್ಯ ಸಮೀಕ್ಷಮಾಣಃ ॥ ೯೪ ॥

ವಾದುದೋ, ಉತ್ತಮವಾದ ಆ ಪದವಿಯನ್ನು ಹೊಂದು ; ತರುವಾಯ ಶುದ್ಧವಾದ ಅಂತಃಕರಣ ವೃತ್ತಿಯುಳ್ಳವನಾಗಿ ನನ್ನ ಧ್ಯಾನದಿಂದ ನನ್ನನ್ನು ಹೊಂದುವೆ.

೯೩. ಎಲೈ ಧ್ರುವನೇ! ನೀನು ಸೂರ್ಯಾದಿ ಸರ್ವಗ್ರಹಗಳಿಗೂ ಆಶ್ರಯನಾಗಿಯೂ, ಸರ್ವಜನರಿಂದಲೂ ಸೇವ್ಯವಾದ ಕಲ್ಪವೃಕ್ಷದಂತೆ ಸರ್ವಾಭೀಷ್ಟಪ್ರದನಾಗಿಯೂ (ಕಲ್ಪಾಂತದವರೆಗೂ) ಆ ಸ್ಥಾನದಲ್ಲಿರುವೆ; ಯಾವ ಮಾನ್ಯಳಾದ ಸುನೀತಿದೇವಿಯೋ, ಆ ನಿನ್ನ ತಾಯಿಯೂ ನನ್ನ ಅನುಗ್ರಹದಿಂದ ನಿನ್ನ ಸಮೀಪದಲ್ಲಿಯೇ (ನಿರ್ಮಲನಕ್ಷತ್ರವಾಗಿ) ಇರುತ್ತಾಳೆ;"

ಎಂದು ಭಗವಂತನು ಅನುಗ್ರಹಿಸಿದನು.

ಶ್ರೀಸೂತರು ಹೇಳುತ್ತಾರೆ.

೯೪. "ಕೇಳು ಭರದ್ವಾಜ! ಸುಂದರವೂ, ಶ್ರೇಷ್ಠವೂ, ಅಪ್ರಾಕೃತವೂ ಆದ ಶರೀರವುಳ್ಳ ಶ್ರೀಮಹಾವಿಷ್ಣುವು ಆ ಬಾಲಕನನ್ನು ವರಗಳಿಂದ ಸಂತಸಗೊಳಿಸಿ, ಮನೆಗೆ ಬೀಳ್ಕೊಟ್ಟು, ಆ ಆತ್ಮಭಕ್ತನನ್ನು ಮೆಲ್ಲನೆ ಬಿಟ್ಟು, ಅಡಿಗಡಿಗೆ ಹಿಂದಿರುಗಿ ನೋಡುತ್ತಾ, ತನ್ನ ವೈಕುಂಠಕ್ಕೆ ಹೊರಟುಹೋದನು.

ತಾವಚ್ಚ ಸದ್ಯಃ ಸುರಸಿದ್ಧ ಸಂಘಃ
ಶ್ರೀ ವಿಷ್ಣು ತದ್ಭಕ್ತ ಸಮಾಗಮಂ ತಮ್ ।
ದೃಷ್ಟ್ವಾಽಥ ವರ್ಷನ್ ಸುರಪುಷ್ಪವೃಷ್ಟಿಂ
ತುಷ್ಟಾವ ಹರ್ಷಾದ್ಧ್ರುವಮವ್ಯಯಂ ಚ ॥ ೯೫ ॥

ಶ್ರಿಯಾಽಭಿಮುಕ್ತ್ಯಾ ಚ ಸುನೀತಿಸೂನು-
ರ್ವಿಭಾತಿ ದೇವೈರಪಿ ವಂದ್ಯಮಾನಃ ।
ಯೋಽಯಂ ನೃಣಾಂ ಕೀರ್ತನದರ್ಶನಾಭ್ಯಾ-
ಮಾಯುರ್ಯಶೋ ವರ್ಧಯತಿ ಶ್ರಿಯಂ ಚ ॥ ೯೬ ॥

ಇತ್ಥಂ ಧ್ರುವಃ ಪ್ರಾಪ ಪದಂ ದುರಾಪಂ
ಹರೇಃ ಪ್ರಸಾದಾನ್ನ ಚ ಚಿತ್ರಮೇತತ್ ।
ತಸ್ಮಿನ್ ಪ್ರಸನ್ನೇ ದ್ವಿಜರಾಜಪತ್ರೌ
ನ ದುರ್ಲಭಂ ಭಕ್ತಜನೇಷು ಕಿಂಚಿತ್ ॥ ೯೭ ॥

---

೯೫ ಅಲ್ಲಿಯವರೆಗೂ ಆಗ ದೇವತೆಗಳ ಮತ್ತು ಸಿದ್ಧರ ತಂಡವು ಶ್ರೀಮಹಾವಿಷ್ಣು ಮತ್ತು ಅವನ ಭಕ್ತನಾದ ಧ್ರುವ–ಇವರ ಆ ಸಮಾಗಮವನ್ನು ನೋಡಿ, ದೇವಲೋಕದ ಕಲ್ಪವೃಕ್ಷದ ಹೂವಿನ ಮಳೆಯನ್ನು ಕರೆಯುತ್ತಾ, ಸಂತಸದಿಂದ ಧ್ರುವನನ್ನೂ, ನಾಶರಹಿತನಾದ ಶ್ರೀಹರಿಯನ್ನೂ ಸ್ತುತಿಸಿತು.

೯೬. ಯಾವ ಧ್ರುವನು ತನ್ನ ಕೀರ್ತಿಯನ್ನು ಹೇಳುವುದರಿಂದಲೂ, ಸಮಸ್ಮರಿಸುವುದರಿಂದಲೂ ಮಾನವರ ಆಯುಸ್ಸು, ಯಶಸ್ಸು ಮತ್ತು ಸಂಪತ್ತು-ಇವನ್ನು ಹೆಚ್ಚಿಸುತ್ತಾನೆಯೋ, ಆ ಸುನೀತಿದೇವಿಯ ಕುಮಾರನು ದೇವತೆಗಳಿಂದಲೂ ನಮಸ್ಕರಿಸಲ್ಪಡುವವನಾಗಿ, ತನಗೆ ಇಷ್ಟವಾದ ಸಂಪತ್ತಿನಿಂದ ಪ್ರಕಾಶಿಸುತ್ತಿದ್ದಾನೆ.

೯೭. ಇಂತು ಧ್ರುವನು ಹೊಂದಲಶಕ್ಯವಾದ ಸ್ಥಾನವನ್ನು ಶ್ರೀಹರಿಯ ಅನುಗ್ರಹದಿಂದ ಹೊಂದಿದನು. ಇದೇನೂ ಆಶ್ಚರ್ಯವಾದ ವಿಷಯವಲ್ಲವು. ಪಕ್ಷಿರಾಜನಾದ ಗರುಡನು ವಾಹನನಾದ ಶ್ರೀಮಹಾವಿಷ್ಣುವು ಭಕ್ತಜನರಲ್ಲಿ ಅನುಗ್ರಹ ಮಾಡಲು, ಹೊಂದಲಸಾಧ್ಯವಾದ ವಿಷಯವು ಯಾವುದೂ ಇಲ್ಲವು.

ಸೂರ್ಯಮಂಡಲ ಮಾನಾತ್ತು ದ್ವಿಗುಣಂ ಸೋಮಮಂಡಲಮ್ ।
ಪೂರ್ಣೇ ಶತಸಹಸ್ರೇ ದ್ವೇ ತಸ್ಮಾನ್ನಕ್ಷತ್ರಮಂಡಲಮ್ ॥ ೯೮ ॥

ತಾವತ್ಪ್ರಮಾಣಭಾಗೇ ತು ಬುಧಸ್ಯಾಪ್ಯುಶನಾಃ ಸ್ಥಿತಃ ।
ಅಂಗಾರಕೋಽಪಿ ಶುಕ್ರಸ್ಯ ತಾವನ್ಮಾನೇ ವ್ಯವಸ್ಥಿತಃ ॥ ೯೯ ॥

ಲಕ್ಷದ್ವಯೇ ತು ಭೌಮಸ್ಯ ಸ್ಥಿತೋ ದೇವ ಪುರೋಹಿತಃ ।
ಸೌರಿರ್ಬೃಹಸ್ಪತೇಶ್ಚೋರ್ಧ್ವೇ ದ್ವಿಲಕ್ಷೇ ತು ವ್ಯವಸ್ಥಿತಃ ॥ ೧೦೦ ॥

ತಸ್ಮಾಚ್ಛನೈಶ್ಚರಾದೂರ್ಧ್ವಂ ಲಕ್ಷೇ ಸಪ್ತರ್ಷಿಮಂಡಲಮ್ ।
ಸಪ್ತರ್ಷಿಮಂಡಲಾದೂರ್ಧ್ವಮೇಕಂ ಲಕ್ಷಂ ಧ್ರುವಃ ಸ್ಥಿತಃ ।
ಮೇಢೀಭೂತಸ್ಸಮಸ್ತಸ್ಯ ಜ್ಯೋತಿಶ್ಚಕ್ರಸ್ಯ ಸತ್ತಮಃ ॥ ೧೦೧ ॥

---

೯೮. ಭೂಮಂಡಲಕ್ಕೆ ಸೂರ್ಯಮಂಡಲವಿರುವ ದೂರಕ್ಕೆ ಎರಡರಷ್ಟು ದೂರದಲ್ಲಿ ಚಂದ್ರಮಂಡಲವಿರುವುದು. ಅದಕ್ಕೆ ಎರಡು ಲಕ್ಷ ಯೋಜನದ ಮೇಲೆ ನಕ್ಷತ್ರಮಂಡಲವಿರುವುದು.

೯೯. ನಕ್ಷತ್ರಮಂಡಲದಿಂದ ಎರಡು ಲಕ್ಷಯೋಜನದ ಮೇಲೆ ಬುಧಗ್ರಹದ ಸ್ಥಾನವಿರುವುದು. ಆ ಬುಧಗ್ರಹಕ್ಕೆ ಎರಡು ಲಕ್ಷ ಯೋಜನದ ಮೇಲೆ ಶುಕ್ರಗ್ರಹವಿರುವುದು. ಅಂಗಾರಕಗ್ರಹವು ಶುಕ್ರಗ್ರಹದಿಂದ ಮೇಲೆ ಅಷ್ಟೇ ಪ್ರಮಾಣದಲ್ಲಿರುವುದು

೧೦೦. ಈ ಭೂಪುತ್ರನಾದ ಅಂಗಾರಕ ಗ್ರಹಕ್ಕೆ ಎರಡುಲಕ್ಷದ ಎತ್ತರದಲ್ಲಿ ದೇವಪುರೋಹಿತನಾದ ಬೃಹಸ್ಪತಿಗ್ರಹವಿರುವುದು. ಸೂರ್ಯಪುತ್ರನಾದ ಶನೈಶ್ಚರನು ಬೃಹಸ್ಪತಿಗೆ ಮೇಲೆ ಎರಡು ಲಕ್ಷಗಳ ಯೋಜನಗಳಲ್ಲಿ ಇರುವನು.

೧೦೧. ಆ ಶನೈಶ್ಚರಗ್ರಹದ ಮೇಲೆ, ಲಕ್ಷಯೋಜನದಲ್ಲಿ ಸಪ್ತರ್ಷಿಗಳ ಮಂಡಲವಿರುವುದು. ಸಪ್ತರ್ಷಿಮಂಡಲದ ಮೇಲೆ ಒಂದು ಲಕ್ಷಯೋಜನದಲ್ಲಿ ಧ್ರುವನಿರುವನು. ಶ್ರೇಷ್ಠನಾದ ಧ್ರುವನು ಜ್ಯೋತಿರ್ಮಂಡಲಕ್ಕೆಲ್ಲಾ ಮೇಟೀಕಂಭವಾಗಿರುವನು.

ಸ್ವಭಾವಾತ್ತಪತಿ ಬ್ರಹ್ಮನ್ ಅಧಶ್ಚೋರ್ಧ್ವಂ ಚ ರಶ್ಮಿಭಿಃ ।
ಕಾಲಸಂಖ್ಯಾಂ ತ್ರಿಲೋಕಸ್ಯ ಸ ಕರೋತಿ ಯುಗೇಯುಗೇ ॥ ೧೦೨ ॥

ಜನಸ್ತಪಸ್ತಥಾ ಸತ್ಯ ಏತಾನ್ ಲೋಕಾನ್ ದ್ವಿಜೋತ್ತಮ ।
ಬ್ರಹ್ಮಣಾ ಮುನಿಶಾರ್ದೂಲ ವಿಷ್ಣುಭಕ್ತಿ ವಿವರ್ಧಿತಃ ॥
ಊರ್ಧ್ವಂ ಗತೈರ್ದ್ವಿಜಶ್ರೇಷ್ಠ ರಶ್ಮಿಭಿಸ್ತಪತೇ ರವಿಃ ।
ಅಧೋಗತೈಶ್ಚ ಭೂಲೋಕಂ ದ್ಯೋತತೇ ದೀರ್ಘದೀಧಿತಿಃ ॥ ೧೦೩ ॥

ಸರ್ವಪಾಪಹರಃ ಸೂರ್ಯಃ ಕರ್ತಾ ತ್ರಿಭುವನಸ್ಯ ಚ ।
ಛತ್ರವತ್ಪ್ರತಿಪಶ್ಯೇತ ಮಂಡಲಾನ್ಮಂಡಲಂ ಪರಮ್ ॥ ೧೦೪ ॥

---

೧೦೨. ಎಲೈ ಬ್ರಾಹ್ಮಣಶ್ರೇಷ್ಠನಾದ ಭಾರದ್ವಾಜನೇ! ಕೇಳು ; ಸೂರ್ಯನು ಕೆಳಗೂ, ಮೇಲೂ ತನ್ನ ಕಿರಣಗಳಿಂದ ಸುಡುತ್ತಾನೆ; ಪ್ರತಿಯುಗವಲ್ಲಿ ಸ್ವರ್ಗ ಮರ್ತ್ಯ ಮತ್ತು ಪಾತಾಲ— ಈ ಮೂರು ಲೋಕಗಳಿಗೆ ಕಾಲಪರಿಗಣನವನ್ನುಂಟು ಮಾಡುತ್ತಾನೆ.

೧೦೩. ಎಲೈ ದ್ವಿಜೋತ್ತಮನಾದ ಮುನಿಶಾರ್ದೂಲನೇ! ಕೇಳು; ಸರ್ವ ಗುಣಪೂರ್ಣನಾದ ಪರಬ್ರಹ್ಮನ ಅನುಗ್ರಹದಿಂದ ಅಧಿಕವಾದ ವಿಷ್ಣುಭಕ್ತಿಯುಳ್ಳ ಸೂರ್ಯನು ಮೇಲ್ಮೊಗನಾಗಿ ಹೊರಟ ಕಿರಣಗಳಿಂದ ಜನೋಲೋಕ, ತಪೋ ಲೋಕ ಮತ್ತು ಸತ್ಯಲೋಕ– ಈ ಲೋಕಗಳನ್ನು ತಪಿಸುತ್ತಾನೆ ದೀರ್ಘಗಳಾದ ಕಿರಣಗಳುಳ್ಳ ಸೂರ್ಯನು ಕೀಳ್ಮೊಗಗಳಾದ ಕಿರಣಗಳಿಂದ ಭೂಲೋಕವನ್ನು ಬೆಳಗು ತ್ತಾನೆ.

೧೦೪ ಸೂರ್ಯನು ತನ್ನನ್ನು ಸೇವಿಸುವವರ ಸಕಲ ಪಾಪಗಳನ್ನೂ ನಾಶ ಮಾಡುವನು. ತನ್ನ ಪ್ರಕಾಶದಿಂದ ತ್ರಿಭುವನಗಳನ್ನು ಪುನರುಜ್ಜೀವನಗೊಳಿಸುವ ಮಾರ್ತಾಂಡನಾದುದರಿಂದ, ಮೂರುಲೋಕದ ಕರ್ತೃವೆನಿಸುವನು. ಈ ಜ್ಯೋತಿ ರ್ಮಂಡಲಗಳು ಒಂದು ಮಂಡಲವು, ಮೇಲೆ ಮತ್ತೊಂದು ಮಂಡಲವು, ಈ ರೀತಿ ಸತ್ತಿಗೆಯಂತೆ ಕಾಣಿಸುತ್ತವೆ.

ಆದಿತ್ಯಮಂಡಲಾಧಸ್ತಾತ್ ಭುವರ್ಲೋಕಂ ಪ್ರತಿಷ್ಠಿತಮ್ ।
ತ್ರೈಲೋಕ್ಯಸ್ಯೇಶ್ವರತ್ವಂ ಚ ವಿಷ್ಣುದತ್ತಂ ಶತಕ್ರತೋಃ ॥ ೧೦೫ ॥

ಲೋಕಪಾಲೈಃ ಸ ಸಹಿತೋ ಲೋಕಾನ್ ರಕ್ಷತಿ ಧರ್ಮತಃ ।
ವಸೇತ್ಸ್ವರ್ಗೇ ಮಹಾಭಾಗ ದೇವೇಂದ್ರಃ ಸ ತು ಕೀರ್ತಿಮಾನ್ ॥ ೧೦೬ ॥

ತತೋಽಧಸ್ತಾನ್ಮುನೇ ಚೇದಂ ಪಾತಾಲಂ ವಿದ್ಧಿ ಸಪ್ರಭಮ್ ।
ನ ತತ್ರ ತಪತೇ ಸೂರ್ಯೋ ನ ರಾತ್ರಿರ್ನ ನಿಶಾಕರಃ ।
ದಿವ್ಯಸ್ವರೂಪಮಾಸ್ಥಾಯ ತಪಂತಿ ಸತತಂ ಜನಾಃ ॥ ೧೦೭ ॥

---

೧೦೫. ಆದಿತ್ಯಮಂಡಲದ ಕೆಳಗೆ ಭುವರ್ಲೋಕ ಸ್ಥಾಪಿತವಾಗಿರುವುದು. ನೂರು ಅಶ್ವಮೇಧ ಯಾಗವನ್ನನುಷ್ಠಿಸಿ, ಮಹೇಂದ್ರ ಪದವಿಯನ್ನೈದ್ದಿರುವ ದೇವೇಂದ್ರನಿಗೆ ತ್ರೈಲೋಕ್ಯಗಳ ಒಡೆತನವು ಶ್ರೀ ಮ ಹಾ ವಿ ಷ್ಣು ವಿ ನಿಂ ದ ಕೊಡಲ್ಪಟ್ಟಿದ್ದು.

೧೦೬. ಎಲೈ ಪುಣ್ಯಶಾಲಿಯೇ ! ಕೇಳು; ಯಶಸ್ವಿಯಾದ ದೇವೇಂದ್ರನಾದ ಶಚೀಪತಿಯು ಅಗ್ನಿಯೇ ಮೊದಲಾದ ಲೋಕಪಾಲಕರಿಂದ ಕೂಡಿ, ಲೋಕಗಳನ್ನೆಲ್ಲಾ ಧರ್ಮದಿಂದ ರಕ್ಷಿಸುವನು; ತಾನು ಸಗ್ಗದಲ್ಲಿ ವಾಸಮಾಡಿಕೊಂಡಿರುವನು.

೧೦೭. ಎಲೈ ಭರದ್ವಾಜ ಮುನಿಯೇ ! ಅದರ ಕೆಳಭಾಗದಲ್ಲಿ ದಿವ್ಯಪ್ರಭೆಯಿಂದ ಕೂಡಿದ ಈ ಪಾತಾಳಲೋಕವಿರುವುದು. ಅಲ್ಲಿ ಸೂರ್ಯನು ಬೆಳಗುವುದಿಲ್ಲ; ರಾತ್ರಿಯಾಗುವುದಿಲ್ಲ; ನಿಶಾಕರನಾದ ಚಂದ್ರನೂ ಇಲ್ಲವು. ಅಲ್ಲಿಯ ಜನರೇ ದಿವ್ಯಸ್ವರೂಪವನ್ನು ತಾಳಿ, ಯಾವಾಗಲೂ ತಪಿಸುತ್ತಿರುತ್ತಾರೆ.

ಪಾತಾಲಸ್ಥಾ ದ್ವಿಜಶ್ರೇಷ್ಠ ದೀಪ್ಯಮಾನಾಃ ಸ್ವತೇಜಸಾ ।
ಸ್ವರ್ಲೋಕಾತ್ತು ಮಹರ್ಲೋಕಃ ಕೋಟಿಮಾತ್ರೇ ವ್ಯವಸ್ಥಿತಃ ॥ ೧೦೮ ॥

ತತೋ ಯೋಜನಮಾತ್ರೇಣ ದ್ವಿಗುಣೋ ಮಂಡಲೇನ ತು ।
ಜನಲೋಕಃ ಸ್ಥಿತೋ ವಿಪ್ರ ಪಂಚಮೋ ಮುನಿಸೇವಿತಃ ॥ ೧೦೯ ॥

ತತ್ರೋಪರಿ ತಪೋಲೋಕಶ್ಚತುರ್ಭಿಃ ಕೋಟಿಭಿಃ ಸ್ಥಿತಃ ।
ಸತ್ಯಲೋಕೋಽಷ್ಟಕೋಟೀಭಿಃ ಸ್ವರ್ಲೋಕಾದುಪರಿ ಸ್ಥಿತಃ ॥
ಸರ್ವೇ ಛತ್ರಾಕೃತಿ ಜ್ಞೇಯಾ ಭುವನೋಪರಿ ಸಂಸ್ಥಿತಾಃ ।
ಬ್ರಹ್ಮಲೋಕಾದ್ವಿಷ್ಣುಲೋಕೋ ದ್ವಿಗುಣೇ ಚ ವ್ಯವಸ್ಥಿತಃ ॥ ೧೧೦ ॥

---

೧೦೮. ಎಲೈ ಬ್ರಾಹ್ಮಣಶ್ರೇಷ್ಠನೇ! ಪಾತಾಲದವರು ತಮ್ಮ ತೇಜಸ್ಸಿನಿಂದಲೇ ಪ್ರಕಾಶಿಸುತ್ತಾರೆ. ಸ್ವರ್ಗಲೋಕಕ್ಕೆ ಕೋಟಿ ಯೋಜನದ ಮೇಲ್ಗೆ ಮಹರ್ಲೋಕವಿರುವುದು.

೧೦೯. ಎಲೈ ವಿಪ್ರನೇ! ಕೇಳು; ಅಲ್ಲಿಂದ ಮಹರ್ಲೋಕಕ್ಕೆ ಒಂದು ಯೋಜನದಿಂದಾಚೆ ಈ ಮಂಡಲದಿಂದೆರಡರಷ್ಟಾದ, ಐದನೆಯದಾದ ಜನಲೋಕವಿರುವುದು. ಅದರಲ್ಲಿ ಜ್ಞಾನಿಗಳು ವಾಸಿಸುವರು.

೧೧೦. ಅದರ ಮೇಲೆ ತಪೋಲೋಕವು ನಾಲ್ಕು ಕೋಟಿ ಯೋಜನಗಳಷ್ಟು ದೂರದಲ್ಲಿರುವುದು. ಸತ್ಯಲೋಕವು ಸ್ವರ್ಗಲೋಕಕ್ಕೆ ಎಂಟು ಕೋಟಿ ಯೋಜನಗಳ ಮೇಲೆ ಇರುವುದು. ಭೂಲೋಕದ ಮೇಲೆ ಇರುವ ಲೋಕಗಳೆಲ್ಲವೂ ಸತ್ತಿಗೆಯ ಆಕಾರದಂತಿರುವುದೆಂದು ತಿಳಿಯತಕ್ಕುದು. ವಿಷ್ಣುಲೋಕವು ಬ್ರಹ್ಮಲೋಕದಿಂದ ಎರಡರಷ್ಟು ಮೇಲೆ ಇರುವುದು.

ವರಾಹೇ ತಸ್ಯ ಮಾಹಾತ್ಮ್ಯಂ ಕಥಿತಂ ಲೋಕಚಿಂತಕೈಃ ।
ತತಃ ಪರಂ ದ್ವಿಜಶ್ರೇಷ್ಠ ಸ್ಥಿತಃ ಪರಮ ಪೂರುಷಃ ॥ ೧೧೧ ॥

ಇತಿ ತೇ ಸಂಸ್ಥಿತಿಃ ಪ್ರೋಕ್ತಾ ಭೂಗೋಲಸ್ಯ ಮಯಾನಘ ।
ಯಸ್ತು ಸಮ್ಯಗಿಮಾಂ ವೇತ್ತಿ ಸ ಯಾತಿ ಪರಮಾಂ ಗತಿಮ್ ॥ ೧೧೨ ॥

ಲೋಕಸ್ಯ ಸಂಸ್ಥಾನಕರೋಽಪ್ರಮೇಯೋ
ವಿಷ್ಣುರ್ನೃಸಿಂಹೋ ನರದೇವಪೂಜಿತಃ ।

---

೧೧೧. ಎಲೈ ಬ್ರಾಹ್ಮಣೋತ್ತಮನೇ ! ಕೇಳು; ಲೋಕವಿಚಾರ ಮಾಡತಕ್ಕ ಜ್ಞಾನಿಗಳಿಂದ ವರಾಹ ಪುರಾಣದಲ್ಲಿ ಆ ಶ್ರೀವಿಷ್ಣುಲೋಕದ ಹಿರಿಮೆಯು ಹೇಳಲ್ಪಟ್ಟಿರುತ್ತದೆ. ಅಲ್ಲಿಂದ ಮುಂದೆ ಪರಮಪುರುಷನಾದ (ಪೂರ್ಣಾನಂದ ಸ್ವರೂಪನಾದ) ಶ್ರೀಹರಿಯು ಇರುತ್ತಾನೆ.

೧೧೨. ಸರ್ವೋತ್ತಮನಾದ ಪೂರ್ಣಸುಖನಾದ ಶ್ರೀಮಹಾವಿಷ್ಣುವು ಚತುರ್ದಶಭುವನಗಳನ್ನೊಳಗೊಂಡ ಬ್ರಹ್ಮಾಂಡದಿಂದ ಹೊರಗೆ, ಪ್ರಕೃತಿಸಂಬಂಧರಹಿತನಾಗಿ, ಪರಮಶುದ್ಧನಾಗಿರುತ್ತಾನೆ. ಈ ಭಗವಂತನ ಚಿಂತನೆ ಮತ್ತು ತತ್ತ್ವಜ್ಞಾನ ಇವುಗಳಿಂದ ಯುಕ್ತನಾದವನು ಅಜ್ಞಾನಬಂಧದಿಂದ ಮುಕ್ತನಾಗುವನು. ಎಲೈ ಪುಣ್ಯಶಾಲಿಯಾದ ಭಾರದ್ವಾಜನೇ! ಕೇಳು ; ಇಂತು ನಿನಗೆ ಭೂಗೋಲದ ಸ್ವರೂಪಾದಿಗಳನ್ನು ನಿರೂಪಿಸಿದೆನು. ಯಾವನು ಇದನ್ನು ಚೆನ್ನಾಗಿ ಅರಿಯುತ್ತಾನೆಯೋ ಅವನು ಉತ್ತಮಗತಿಯನ್ನೈಯ್ದುವನು.

೧೧೩. ಸಾಕಲ್ಯವಾಗಿ ರಮಾದಿಗಳಿಂದಲೂ ತಿಳಿಯಲಾಗದ ಮಹಿಮೆಯುಳ್ಳ, ಬ್ರಾಹ್ಮಣರಿಂದ ಸೇವಿಸಲ್ಪಡುವ, ನೃಸಿಂಹರೂಪಿಯಾದ ಶ್ರೀಮಹಾವಿಷ್ಣುವು ಲೋಕಗಳ ಸ್ಥಿತಿಯನ್ನು ಎಂದರೆ ರಕ್ಷಣೆಯನ್ನೆಸಗುವನು; ದುಷ್ಟ ಸಂಹಾರವನ್ನು ಮಾಡುವ,

ಯುಗೇ ಯುಗೇ ವಿಷ್ಣುರನಾದಿಮೂರ್ತಿರ್ಮಾ

ಆಸ್ಥಾಯ ವಿಶ್ವಂ ಪರಿಪಾತಿ ದುಷ್ಟಹಾ ॥ ೧೦೩ ॥

ಇತಿ ಶ್ರೀ ನೃಸಿಂಹಪುರಾಣೇ ಭೂಗೋಲಾದಿಕಥನೇ

ಧ್ರುವಚರಿತಂ ನಾಮೈಕತ್ರಿಂಶೋಽಧ್ಯಾಯಃ

ಭೂಗೋಲಕಃ ಸಮಾಪ್ತಃ

ನಿತ್ಯಸ್ವರೂಪನಾದ ಶ್ರೀಮಹಾವಿಷ್ಣುವು ಪ್ರತಿಯೊಂದು ಯುಗದಲ್ಲಿಯೂ ಸಮಸ್ತ ವಾದ ವಿಶ್ವವನ್ನು ಹೊಂದಿ ರಕ್ಷಿಸುತ್ತಾನೆ; ” ಎಂದು ಶ್ರೀಸೂತರು ಭರದ್ವಾಜನಿಗೆ ನಿರೂಪಿಸಿದರು.

ಇಂತು ಶ್ರೀನರಸಿಂಹ ಪುರಾಣದಲ್ಲಿ ಭೂಗೋಲಾದಿಕಥನದಲ್ಲಿ ಧ್ರುವಚರಿತೆಯೆಂಬ ಮೂವತ್ತೊಂದನೆಯ ಅಧ್ಯಾಯವು ಮುಗಿದುದು.

ಇಂತು ಭೂಗೋಲದ ನಿರೂಪಣೆಯು.

ಮೂವತ್ತೊಂದನೆಯ ಅಧ್ಯಾಯದ ವಿಷಯ ಸಂಗ್ರಹವು

ಈ ಅಧ್ಯಾಯದಲ್ಲಿ ಸೂತರು ಭರದ್ವಾಜನ ಪ್ರಶ್ನೆಯಂತೆ ಧ್ರುವನು ಸ್ವಾಯಂಭುವನ ಮಗನಾದ ಉತ್ತಾನಪಾದರಾಯನ ಇಬ್ಬರು ಮಕ್ಕಳಲ್ಲಿ ಒಬ್ಬನು. ಉತ್ತಾನಪಾದ ರಾಯನಿಗೆ ಇಬ್ಬರು ಮಡದಿಯರು. ಅವರಲ್ಲಿ ಸುನೀತಿಯ ಮಗ ಧ್ರುವ; ಸುರುಚಿಯ ಮಗ ಉತ್ತಮ. ಆ ರಾಯನಿಗೆ ಅತ್ಯಂತ ಪ್ರಿಯಳಾದವಳು ಸುರುಚಿ. ಅವಳ ಚಿತ್ತವನ್ನನುಸರಿಸಿ ಅವಳ ಮಗನಲ್ಲಿಯೂ ರಾಯನು ಪ್ರೀತಿಯನ್ನು ವಿಶೇಷವಾಗಿ ಮಾಡುತ್ತಿದ್ದನು.

ಒಮ್ಮೆ ಸುರುಚಿಯ ಸಮಕ್ಷದಲ್ಲಿ, ಉತ್ತಾನಪಾದರಾಯನ ತೊಡೆಯಮೇಲೆ ಧ್ರುವನು ಕುಳಿತುಕೊಳ್ಳಲು ತೊಡಗಲು, ಸುರುಚಿಯು ಆ ರಾಯನ ತೊಡೆಯ ಮೇಲೆಯೂ, ಸಿಂಹಾಸನದಮೇಲೆಯೂ ಕುಳಿತುಕೊಳ್ಳಲು ತನ್ನ ಮಗನೇ ಅರ್ಹನೆಂತಲೂ, ಧ್ರುವನು ಆ ಸ್ಥಾನವನ್ನು ಪಡೆಯಬೇಕಾದರೆ ತನ್ನ ಗರ್ಭದಿಂದ ಜನಿಸಬೇಕೆಂತಲೂ ಹೇಳಿ, ಹೀಯಾಳಿಸಿ ತಿರಸ್ಕರಿಸಿದಳು.

ಆಗ ಆ ಬಾಲನು ತನ್ನ ತಾಯಿಯ ಬಳಿಗೆ ದುಃಖದಿಂದ ಬಂದು, ಆ ಸಂಗತಿಯನ್ನೆಲ್ಲಾ ಅರುಹಿ, ತನಗೆ ಯಾರಿಂದಲೂ ಹೊಂದಲಾಗದ ಉತ್ತಮ ಸ್ಥಾನ ಪ್ರಾಪ್ತಿಯಾಗಲು ಏನು ಮಾಡಬೇಕೆನ್ನಲು, ಸುನೀತಿಯು ಶ್ರೀಮಹಾವಿಷ್ಣುವಿನ ಪ್ರಸಾದವಿಲ್ಲದೆ, ಅದು ಲಭಿಸುವುದಿಲ್ಲವೆನ್ನಲು, ಶ್ರೀಮಹಾವಿಷ್ಣುವಿನ ಅನುಗ್ರಹವನ್ನು ಪಡೆಯಲು, ತಪವನ್ನೆಸಗಲು ಧ್ರುವನು ಅರಣ್ಯಕ್ಕೆ ಬರಲು, ಅಲ್ಲಿ ಅವನು ಸಪ್ತರ್ಷಿಗಳನ್ನು ಕಂಡನು. ಅವರು ಅವನಿಗೆ ಶ್ರೀವಿಷ್ಣುವನ್ನು ಕುರಿತು ತಪಸ್ಸುಮಾಡುವುದಕ್ಕೆ ಅನುಕೂಲಿಸುವ ದ್ವಾದಶಾಕ್ಷರ ಮಂತ್ರವನ್ನುಪದೇಶಿಸಲು, ಆ ಬಾಲಕನು ಅಂತೆಯೇ ತಪವನ್ನನುಷ್ಠಿಸಿದನು. ಶ್ರೀಮಹಾವಿಷ್ಣುವು ಆ ಬಾಲಕನ ದೃಢಭಕ್ತಿಗೆ ಮೆಚ್ಚಿ ಕಾಣಿಸಿಕೊಂಡು, ವರವನ್ನು ಬೇಡು ; ಎನಲು, ಅವನು ಯಾವುದನ್ನೂ

ಅಪೇಕ್ಷಿಸದೆ, ಶ್ರೀ ಹರಿಯನ್ನು ಸ್ತುತಿಸುವಂತೆ ಜ್ಞಾನೋದಯ-ವಾಗಬೇಕೆನಲು, ಶ್ರೀಹರಿಯು ಅವನ ಕೆನ್ನೆಗೆ ತನ್ನ ಪಾಂಚಜನ್ಯವನ್ನು ಸೋಕಿಸಲು, ಅವನಿಗೆ ವಿಶೇಷವಾಗಿ ಶ್ರೀಹರಿಯ ಮಹಿಮೆ ಗೋಚರಿಸಲು, ಶ್ರೀಹರಿಯನ್ನು ಸ್ತುತಿಸುವನು.

ಶ್ರೀಹರಿಯು, ಅವನ ಹೃದಯವನ್ನರಿತು ಅವನು ರಾಜ್ಯಾಧಿಪತ್ಯವನ್ನು ಮಾಡಿ, ಉತ್ತಮವಾದ ಧ್ರುವ ಪದವಿಯನ್ನು ಒಂದು ಬ್ರಹ್ಮಕಲ್ಪಪರ್ಯಂತವನು ಭವಿಸಿ, ಸಕಲ ಜ್ಯೋತಿರ್ಮಂಡಲದ ಮೇಲೆ ಎಲ್ಲಾ ಗ್ರಹ ಸಂಚಾರಕ್ಕೂ ಆಶ್ರಯವಾದ ಮೇಟಿಯ ಕಂಬದಂತೆ ಇದ್ದು, ಅನಂತರ ತನ್ನ ಲೋಕಕ್ಕೆ ಬರುವೆಯೆಂದನುಗ್ರಹಿಸಿ, ಅದೃಶ್ಯನಾದನು. ಹಾಗೆ ಧ್ರುವನು ಉತ್ತಮ ಪದವನ್ನು ಪಡೆದನು.

ಕೊನೆಯಲ್ಲಿ ಭೂಗೋಲವೇ ಮೊದಲಾದ ಲೋಕಸಂಸ್ಥಾನವನ್ನು ಸಂಗ್ರಹವಾಗಿ ನಿರೂಪಿಸಿ, ಇದನ್ನರಿತವರಿಗೆ ಸದ್ಗತಿಯುಂಟಾಗುವುದೆಂಬ ಫಲವನ್ನೂ ನಿರೂಪಿಸಿರುತ್ತಾರೆ.

ಇಂತು ಮೂವತ್ತೊಂದನೆಯ ಅಧ್ಯಾಯದ ವಿಷಯ ಸಂಗ್ರಹವು.

ಇಂತು ಭೂಗೋಲದ ನಿರೂಪಣೆಯು ಮುಗಿದುದು.